1933

ಮಾತು ಮಾತ್ರದ ಶಿಶುವಿದು ಜಗಕೊಂದು ರೀತಿಯಾಗಿ ತೋರಿತಲ್ಲಾ।
ಪುನೀತ ಸೋಮೆಕಟ್ಟೆ ಕರಿವೃಷಭಲಿಂಗೇಂದ್ರ ನೇತಿಗಳೆದಿಹ ಜಗವನು ॥೫॥

---

೪. ದೂರಿ ದೂರಿಯ ದುರಿತನಾಶಾಯ।
ಬಾಲೇಂದುಧರ ಈಶ ಭವ ವಿನಾಶಾಯ ॥೪॥

ಎತ್ತಣ ಶಿಶುವಿದು ಎತ್ತಣೋಗುತಲಿದೆ
ಹೆತ್ತವಳ ಹೆಸರೇನು ವತ್ತೆ ತಾತನದಾರು
ಗೊತ್ತಿಲ್ಲ ಶಿಶುವಿದು ಉರ್ಧಿಯಿಂದಾಡುತಿದೆ ॥೧॥

ಆದು ಹುಲಿಯನುಂಗಿ ಆರೆರಡಾನೆಯು ಪಿಂಗಿ
ಮೂರು ಗ್ರಾಮವ ಸುಟ್ಟು ಮೂಲಿಗನಾಗಿದೆ।
ಪಂಚಕೈವರ ಕೊಂದು ಸಂಚಿತ ಪೂರಾ ಮೀರಿ
ಪಂಚಮುಖ ಧ್ಯಾನ ನಿರಂತರದೊಳಗಿದೆ ॥೨॥

ದಕ್ಷಿಣ ಕಾಶಿಯೆಂಬ ಮೋಕ್ಷದ ಪುರಿಯೊಳು
ಈಕ್ಷಿಸಿ ಭಕ್ತರಿಗೆ ಇಷ್ಟಾರ್ಥ ಮೋಕ್ಷವಿತ್ತು
ಶ್ರೇಷ್ಠ ಸೋಮೇಕಟ್ಟೆ ಕರಿವೃಷಭೇಂದ್ರ ಶಿಶು
ದೃಷ್ಟಿ ಅಂತರವಿಟ್ಟು ನಲಿನಲಿದಾಡುತ ॥೩॥

---

೫. ನಿದ್ರೆಯ ಮಾಡು ನೀ ಭದ್ರಮಂಟಪದೊಳು
ಕ್ಷುದ್ರ ಗುಣಗಳೇನು ತೋರದಂತೆ ॥೫॥

ಸ್ಥೂಲ ತನುವಿನ ಜಾಲವ ಕಳೆದು ನೀ
ಆಲಿಗಳೆರಡೆಪೆ ಅಳಚದಂತೆ
ಮೂಲಸ್ಥಾನದ ತುದಿಯೊಳು ತೋರುತಿಹ
ಕಳೆ ಭೇದಿಸಿ ನೋಡಿ ನೀ ಬೆರಗಾಗುತ ॥೧॥

ನಾಸಿಕಾಗ್ರದ ದೃಷ್ಟಿ ಸೂಸಲೀಯದೆ ಮನ
ವಾಸನೆಗಳು ಏನೂ ತೋರದಂತೆ

The Vijay College
LIBRARY,
VIJAY COLLEGE,
BIJAPUR.

ಸಾಸಿರ ದಳಪೀಠ ವಾಸವಾಗಿರುತಿಹ
ಭಾಸುರ ಕಳೆಯೊಳು ಲೇಸಿನಿಂದ

ತಳ ಮೇಲು ಚಕ್ರದಿಂದೊಳಹೊರಗಾದ್ಯಂತ
ಥಳಥಳಿಸುವ ಕಳೆ ಬೆಳಗಿನೊಳು
ಹೊಳೆವ ಸೋಮೇಕಟ್ಟಿ ತಿಳಿಸೆ ಕರಿವೃಷಭನೆಂಬ
ಉಳುಮೆಯ ನೊಳಗೊಂಡ ಇರವಿನೊಳು ॥೬॥

ಉದಯರಾಗ.

೧. ಏಳು ಕರಿವೃಷಭೇಂದ್ರ ಏಳು ಯತಿಕುಲಚಂದ್ರ
ಭಾಳಾಕ್ಷ ಶಿವಶರಣರೋಲೈಸಿ ನಿಂದಿಹರು ॥ಪ॥

ದಳನಾಲ್ಕು ದಳವಾರು ದಳಹತ್ತು ಹನ್ನೆರಡು
ದಳ ಹದಿನಾರು ದ್ವಿದಳದೊಳಗಾಡುತ ॥೧॥

ಸಾಸಿರ ದಳ ಪೀಠವಾಸ ತೊಟ್ಟಿಲೊಳು
ಭಾಸುರ ಬೆಳಕನು ಲೇಸಿನಿಂ ನೋಡುತ ॥೨॥

ಮೂರು ದಳದ ಪೀಠ ಮೀರಿ ಪಶ್ಚಿಮದೊಳು
ಸಾರತರದ ಸುಖವ ಸೂರೆಗೊಂಡಾಡುತ ॥೩॥

ನವಚಕ್ರ ನವಲಿಂಗ ನವಶಕ್ತಿ ನವಭಕ್ತಿ
ನವವಿಧ ಕಳೆಯೊಳು ಸಲಿಸಲಿದಾಡುತ ॥೪॥

ಆದಿಮಧ್ಯಾವಸಾನ ಭೇದರಹಿತನು ನೀ
ನಾದ ಸೋಮೇಕಟ್ಟಿ ಅನಾದಿ ಕರಿವೃಷಭೇಂದ್ರ ॥೫॥

---

೨. ಲಹರಿಗೊಂಡಿದೆ ಮನವು ಏಕೋಗನ ಧ್ಯಾನದೊಳು
ಸಹಿ ಸಹಿ ಸಹಿ ಎಂಬ ಸಹಜಾನಂದದೊಳು ॥ಪ॥

ಎಷ್ಟು ಜನ್ಮದ ಜಾಡ್ಯ ಕಷ್ಟ ಹರಿಯಿತು ಇಲ್ಲಿ
ಇನ್ನೆಷ್ಟು ಜನ್ಮದ ಸುಕೃತ ಗಟ್ಟಿಯೊ ಶಿವನೆ
ಸತಿಯ ಮರೆದಿಹ ಪುರುಷನತಿಬೇಗ ಬಂದಂತೆ
ಗತಿಯು ತಪ್ಪಿದ ನರನು ಪಥವ ಕಂಡಂತೆ ॥೧॥

ಅರಿವು ಮರವೆಗೆ ಸಾಕ್ಷಿ ಇರುವ ವಸ್ತುವಿನೊಳಗೆ
ಪರವಶಾನಂದಪರನಾಗಿ ನಿಂದು
ಪಿರಿತರಾನಂದ ಸುಖರಸದೊಳಗೆ ಮುಳುಗುತ್ತ
ಪರಮಾನಂದ ಪೂರ್ಣನಾಗಿ ॥೨॥

ಅರಿವು ಮರವೆಗೆ ಆದಿ ಇರವು ತಾನೆ ತನ್ನ
ಕುರುಹನರಿಯದೆ ಪರನ ಮರೆದು
ಇರುವ ಸೋಮೇಕಟ್ಟಿ ಕರಿವೃಷಭಲಿಂಗ
ದಿರವೆ ತಾನಾಗಿ ಈ ಪರಿಯೊಳಿರುತ ॥೩॥

ಆ ಯಾಕೆ ಮರೆದಿಹೆ ಮನವೆ ನೀನಾರು ಪೆಸರೇನು
ರೂಪಿಸಿದ ಠಾವೆಲ್ಲಿ ನೀ ಲಯಪುದೆಲ್ಲಿ ॥ಪ॥

ಪಿತ್ತ ಹತ್ತಿದ ನರನು ಮತ್ತೆ ಈ ಮನೆಯೆಲ್ಲ
ಸುತ್ತ ತಿರುಗುತಿದೆ ಎಂತೆಂಬೋಲು
ಗೊತ್ತು ತಿಳಿಯದೆ ನೀನು ಮರ್ತ್ಯಲೋಕವು ಎಂಬ
ಕತ್ತಲೆಯೆ ನಾನೆಂಬೆ ನಿರರ್ಥ ಮನವೆ ॥೧॥

ತೃಷೆಯಾದ ಮನುಜ ತಾ ಹಸಿದು ಬಿಸಿಲೊಳು ಬಂದು
ಎಸೆವ ಜಾಳು ಭೂಮಿಯೊಳು ಜಲವಿರ್ದುದೆಂದು
ದೆಸೆದೆಸೆಯ ತಿರುಗಿ ತಾ ಬಸವಳಿದು ಬಿದ್ದಂತೆ
ಹಸನಾಯಿತಲ್ಲ ನೀ ಪುಸಿಯ ಪಿಡಿದಿಹುದು ॥೨॥

ಎಲ್ಲ ಮರವೆಯ ಬಿಟ್ಟು ನಿನ್ನ ನಿಜವಳವಟ್ಟು
ಘುಲ್ಲ ಶರನನು ಸುಟ್ಟು ಭಸಿತವಿಟ್ಟು

ಬಲ್ಲ ಸೋಮೇಕಟ್ಟೆ ಕರಿವೃಷಭಲಿಂಗೇಂದ್ರ
ನಲ್ಲದೇ ನಿಲ್ಲವೆನೆ ಮನ ಮುಕ್ತಿವಟ್ಟು ॥೩॥

---

೯. ಸುಖವುಗೊಂಡಿದೆ ಮನವು ನಿಖಿಳ ಕೃತಿಗಳ ಮರೆದು
ಅಕಳಂಕ ಪರಬ್ರಹ್ಮದರಿವಿನೊಳಗೆ ॥ಪ॥

ಹಸಿದ ಪಶು ತಾ ಪೋಗಿ ಎಸೆವ ಗರುಕೆಯ ಮೇದು
ಹೊಸ ಪರಿಯ ಸುಖದಲ್ಲಿ ಮುಳುಗಿ ಮಲಗಿ
ಪಸರಿಸುತ ಮೆಲುಕಿಡುತ ಮುಂದೆಸೆಯ ಕಾಣದೆ ಇರುವ
ಪಶುವಿನಂದದೊಳು ಮನ ನಸಿದು ಸುಖದೊಳಗೆ ॥೧॥

ನಿದ್ರೆಯೊಳಗಿಹ ಮನುಜ ಎದ್ದು ಉಪಾಧಿಯೊಳು ತನ್ನನುವ
ತಿದ್ದಿಕೊಳ್ಳದಲೆ ತಾನಿರುವೆಡೆಯೊಳು
ಅದ್ದಿತೋರುವ ಸುಖವ ಮುದ್ದೆಯಾಗಿರುವಂತೆ
ಬದ್ಧವಾಗಿ ಮನವು ಬ್ರಹ್ಮಸುಖದಿ ॥೨॥

ಇಷ್ಟವಾಗಿಹ ವಸ್ತು ನೆಟ್ಟಗೆಯು ತಾನಿರ್ದ
ಬಟ್ಟೆಯನೆ ಪಿಡಿದು ತನ್ನಲ್ಲಿ ಗೈದಿದೊಲು
ನೆಟ್ಟಗೆಯು ಈ ಮನವು ದೃಷ್ಟಿಯನು ಚದರಿಸದೆ
ಮುಟ್ಟಿ ಸೋಮೆಕಟ್ಟೆ ಕರಿವೃಷಭಲಿಂಗದೊಳು ॥೩॥

---

೧೦. ನೋಡಿ ತಿಳಿವುದು ನೀನೆ ನಿಜವೆಂದು ತತ್ವಗೂಢದಿ ನಿಂದ
ಸಾಕ್ಷಿಕನೆಂದು ।
ಪಂಚವಿಂಶತಿ ತತ್ವಗಳಿವು ಎಲ್ಲ ನನ್ನ ಅಂಶದಿ ಆದುವು ಅವು ಎಲ್ಲ ॥ಪ॥

ತ್ರಿಂಶತಿ ಕೋಟಿದೇವತೆಯೆಲ್ಲ ಪರಾಂಶದಿ ಆದುವು ತಾವೆಲ್ಲ।
ಹಂಸೋ ಹಂಸೋ ಹಂಸೆಂದು ಜೀವಾಂಶೆಯ ವಿೀರಿದ ನಿಜವೆಂದು ॥೧॥

ತೋರುವ ಜಗವದು ಮೃಷೆ ಯೆಂದು ಈ ಭಾರಕತ್ವವು ತನಗೆ ಪುಸಿ
ಯೆಂದು।
ತೋರುವ ಕಲ್ಪಿತ ಇದು ಎಂದು ನಾ ಮೀರಿದ ವಸ್ತುವು ದಿಟವೆಂದು ॥೨॥

ಸೋಮೆಕಟ್ಟೆಯ ಕರಿವೃಷಭನೆಂದು। ಭೂಮಿಯೊಳವತಾರದಂತೆ
ಕಂಡು।
ಸಾಮಿಪ್ಯ ಫಲಗಳ ಮೀರಿ ನಿಂದು ಪ್ರೇಮಾಸ್ತಿ ಭಾತಿಗತೀತವೆಂದು ॥೩॥

---

೧೧. ನೋಡೋಣ ಬಾರೆ ಸಖಿ ಪ್ರಾಣಕಾಂತನ। ಕೂಡೋಣ ಬಾರೆ
ಕರಿವೃಷಭೇಂದ್ರನ। ಮುಕ್ತಿಸಾಂದ್ರನ ಯತಿ ಕುಲಚಂದ್ರನ ॥ಪ॥

ಆಗಮಾತೀತನಭೇದ್ಯನ ನಿಗಮಾಗಮಂಗಳಿಗೆ ಸಿಲುಕದಾತನ।
ಭೋಗರಹಿತಸ್ವಪ್ರಕಾಶನ ಜನನದಾಗುಹೋಗುಗಳಿಲ್ಲದಾತನ ॥೧॥

ಮೂರು ಮೂರ್ತಿಗೆ ಮೂಲದಾತನ ಮೂರಾರು ಲಿಂಗದಿ ಬೆರೆದಾತನ।
ವಾರಿಜಭವತಾತ ಪ್ರೀತನ ಗುರು ಈರೇಳು ಲೋಕಕತೀತನ ॥೨॥

ನಾಮರೂಪಗಳಿಲ್ಲದಾತನ ಪ್ರೇಮಾಸ್ತಿ ಭಾತಿಗತೀತನ
ಸಾಮಗಾನ ಸಂಪ್ರೀತನ ಶ್ರೀಮತ್ಸೋಮೆಕಟ್ಟೆ ಕರಿವೃಷಭೇಂದ್ರನ ॥೩॥

---

೧೨. ಕಾಣದಿರಲಾರೆನೆ, ಶ್ರೀಗುರುವನು ಕಾಣದಿರಲಾರೆನೆ
ಕಾಣದೆ ನಿಲಲಾರೆ ಪ್ರಾಣಕಾಂತನ ನೀರೆ
ಜಾಣತನದಿ ಫಣಿವೇಣಿ ನೀಕರೆತಾರೆ ॥ಪ॥

ಮಾಯ ಸಂಸಾರವೆಂಬ ಮೋಹಕೆ ಸಿಲ್ಕಿ ಆಯಾಸಪಡುತಲಿರೆ
ಕಾಯಜನನು ಸುಟ್ಟು ಬೂದಿಯ ಫಣಿಗಿಟ್ಟ
ಮಾಯರಹಿತ ಗುರುರಾಯನ ಪಾದವ ॥೧॥

ಅಂತರಂಗದಿ ಕರೆದು ಯನ್ನೊಳಗಿರ್ದ ಚಿಂತೆ ಯೆಲ್ಲವ ಪರಿವು।
ಸಂತೋಷದಿಂದೆನ್ನ ತನುಮನದೊಳು
ನಿಂತು ಸೂರೆಯಗೊಂಡ ಕಾಂತನ ಪಾದವ ॥೨॥

ಕರುಣಾವೃತ ಹಸ್ತವ ಶಿರದೊಳಿಟ್ಟು ಪರಮಪಂಚಾಕ್ಷರಿಯ।
ಒರೆದೆನ್ನ ಕರ್ಣದಿ ಪರಮ ಲಿಂಗವ ಯನ್ನ
ಕರದೊಳಗಿಂಬಿಟ್ಟ ಗುರುವಿನ ಪಾದವ ॥೩॥

ಹರುಷವೆಂಬ ತೊಡೆಯ ಮೇಲೆ ಕೂಡ್ರಿಸಿ ಸರಸವಾಡುತಲೆನ್ನಯ
ವರ ಜಿಹ್ವೆ ತುದಿಯೊಳಗದರ ಪಾನವ ಹೂಡಿ
ನೆರದೇಕ ಮಯನಾವ ಗುರುವಿನ ಪಾದವ ॥೪॥

ವರನಾದವೆಂಬ ಹಾಲು ಅದಕೆ ತಕ್ಕ ಪರಮ ಚಿತ್ಕಳೆ ಶರ್ಕರೆ
ವರಬಿಂದು ರುಚಿ ಎಂಬ ಪಣ್ಣುಗಳನು ಹೂಡಿ
ಎರೆದೆನ್ನ ಜಿಹ್ವೆಗೆ ಕರೆಮು ನೆರೆಮು ಪೋನ ॥೫॥

ಮರವೆ ಎಂಬುವ ಸೀರೆಯ ಸೆಳೆದು ನಿಜವರಿವೆಂಬ ಅಂಬರವ
ಸರಸದಿಂದುಡಿಸಿ ಪೈದಡಹಿ ಕರೆದು ಯೆನ್ನ
ಉರವನಪ್ಪಿದ ಗುರುವರನ ಬೇಗದಿ ನೀರೆ ॥೬॥

ಭಾವಾಭಾವವ ನೆಲ್ಲವ ತೀವಿದ ಗುರುದೇವ ಸೋಮೆಕಟ್ಟೆಯ
ರಾಯ ಕರಿಬಸವಗುಪಾಯಗಳನು ಹೇಳಿ
ಭಾವಜ ವೈರಿಯ ನೀರೆ ನೀ ಕರತಾರೆ ॥೭॥

---

೧೩. ಧ್ಯಾನವಾಡುನೀನು। ಮಾನಸ ಧ್ಯಾನವಾಡು ನೀನು
ಸ್ವಾನುಭವ ಸುಜ್ಞಾನ ನಿರಂತರ ಭಾನುಪ್ರಕಾಶನ ॥ಪ॥

ಅಂಗದ ಗುಣ ಹಿಂಗಿ। ಲಿಂಗದ ಸಂಗದಿ ಮನ ನುಂಗಿ
ಕಂಗಳು ಮೂರುಳ್ಳ ವುಂಗಳ ಮಹಿಮನ
ಗಂಗೆಯ ಧರಿಸಿದ ಘನ ಮುನಿ ವಂದ್ಯನ ॥೧॥

ಅಂತರಂಗದೊಳಗೆ। ಅನುದಿನ ಸಂತತ ನಿನ್ನೊಳಗೆ
ಚಿಂತೆಯು ನೀಗಿ ನಿರಂತರ ಬ್ರಹ್ಮ
ಚಿಂತೆಯೊಳನುದಿನ ಸಂತತವಿರುತಿರು ॥೨॥

ನಾಚಿಕಿಲ್ಲವೇನೋ। ಜನ್ಮದ ರೋಸಿಕಿಲ್ಲವೇನೋ
ಈಶನ ಧ್ಯಾನಕೆ ಬೇಸರ ಮಾಡದೆ
ಭಾಸುರ ಲಿಂಗವ ವಾಸವ ಮಾಡುತ ॥೩॥

ಇನ್ನಾದರು ನಿನ್ನ। ನಾನಾರೆನ್ನುತ ಸಂಪನ್ನ
ಜಿನ್ನಾಗಿ ಗುರುಮುಖದಿಂದ ತಿಳಿದು
ನೀ ನಿನ್ನನೆ ನಿಜವೆಂದೆನ್ನುತ ಮನದೊಳು ॥೪॥

ಧರೆಯೊಳಧಿಕವಾದ। ಮೂರುಸಾವಿರದೊಳಗಾವ
ಪರಮ ಸೋಮೆಕಟ್ಟಿ ಕರಿವೃಷಭಾರ್ಯನ
ಚರಣಕಮಲವನ್ನು ಮರೆಯದೆ ನಿನ್ನೊಳು ॥೫॥

ಪುಷ್ಪಾಂಜಲಿ.

೧೪. ಪುಷ್ಪದ ವೃಷ್ಟಿಕರೆವೆನೋ ಭಾವನಿಷ್ಠೆಯೊಳಿರುವಂಥ
ಶ್ರೇಷ್ಠರ ಪಾದಕ್ಕೆ ಪುಷ್ಪದ ವೃಷ್ಟಿ ಕರೆವೆನೋ ॥ಪ॥

ನಾಲ್ಕುದಳದ ಚೌಕ ಮಧ್ಯನಕಾರದಿ। ಭೇದಿಸಿ ಇರುವಂಥ ಭಕ್ತನೊಳು
ಪೀತವರ್ಣದ ಪುಷ್ಪವ ಬ್ರಹ್ಮ ಪಿಡಿದು ಬೇಕಾಗಿ ಚೆಲ್ಲಿದ
ಆಧಾರದೊಳು ನಿಂದು ॥೧॥

ಆರೆಸಳಿನ ಮುಧ್ಯ ಮುಕಾರದಿ। ಜೋಕೆಯೊಳಿರುವ ಮಹೇಶನೊಳು
ಶ್ವೇತ ವರ್ಣದ ಪುಷ್ಪ ವಿಷ್ಣು ಪಿಡಿದು ಪ್ರೀತಿಯಿಂ ಚೆಲ್ಲಿದ
ಸ್ವಾಧಿಷ್ಠದೊಳು ನಿಂದು ॥೨॥

ದಶದಳಕಮಲದವಶದಶಿಕಾರದಿ। ವಿಸುನಿಯಂತಿರುವ ಪ್ರಸಾದಿಯೊಳು
ಹರೀತ ಪುಷ್ಪದ ರುದ್ರ ಪಿಡಿದು ಶೀಘ್ರದಿ ಚೆಲ್ಲಿದ
ಮಣಿಪೂರಕದಿ ನಿಂದು ॥೩॥

ಹತ್ತಿರಡೆಸಳೊಳು ಒತ್ತಿ ಪಕಾರವ ಅರ್ಥಿಯಿಂ ಪ್ರಾಣಲಿಂಗಿಯೊಳು
ಈಶ್ವರ ಕರದೊಳು ಮೂಂಜಿಷ್ಪವ ಪಿಡಿದು
ಅನಾಹತ ಚಕ್ರದ ಚರಲಿಂಗಮೂರ್ತಿಗೆ ॥೪॥

ಹದಿನಾರುದಳಮಧ್ಯ ವಿಧಿಸಿ ಯಕಾರವ ಪರಮಶ್ರೀಶರಣಸಹಿತ ನಿಂದು
ಕಪೋತ ಪುಷ್ಪವ ಸದಾಶಿವನು ಜೀಕಾಗಿ ಕಳೆದನು
ವಿಶುದ್ಧಿಯೊಳು ನಿಂದು ॥೫॥

ದ್ವಿದಳಕಮಲಮಧ್ಯ ಹ್ಸೌಂಕಾರವ ಹರುಷದಿಂದೈಕ್ಯಸಹಿತನಿಂದು
ಷಡ್ವಿಧ ಪುಷ್ಪವ ಮಹಾಲಿಂಗಕ್ಕೆ
ಆಜ್ಞಾಚಕ್ರದಿ ನಿಂದು ॥೬॥

ಆರು ಲಿಂಗಂಗಳ ಮೂರು ಪಾಲನೆ ಮಾಡಿ
ಗುರುಲಿಂಗಜಂಗಮದೊಳು ತಿಳಿದು
ಪರಮ ಸೋಮೇಶ್ವಕಟ್ಟೆ ರುದ್ರರಾಜಯ್ಯಗೆ
ಅರ್ಥಿಯಿಂ ಭಕ್ತರೆಲ್ಲರು ನಿಂದು ॥೭॥

---

೧೫. ಕಾಂತೆ ಪೋಗಿ ಕರೆದು ತಾರೆ ಕಾಂತ ಕರಿವೃಷಭೇಂದ್ರನ
ಮನ ಚಿಂತಾ ಮುಕ್ತೆ ಕಾಂತನ ಏಕಾಂತ ಕರಿವೃಷಭೇಂದ್ರನ ॥೧॥

ರಿಪುಗಳೆಲ್ಲರ ಗೆದ್ದು ತಪದೊಳಪರಿಮಿತ ಸ್ವರೂಪನ
ಗುಪಿತ ಮುಕ್ತಾಂಗನೆಯ ಕೂಡಿ ಸಫಲ ಬ್ರಹ್ಮಸ್ವರೂಪನ ॥೨॥

ಹೃದಯ ಮಣಿ ಮಂಚದೊಳು ಕುಳಿತು ಚದುರೆ ಬಾರೆಂದು ಕರೆದನ
ಒದಗಿ ಬಂದು ಕುಚವ ಪಿಡಿದು ಅಧರಾಮೃತವನು ಸವಿದನ ॥೩॥

ಷಣ್ಮುಖಿಯು ಶಾಂಭವಿಯು ಖೇಚರಿ ಸನ್ನುತದಿ ಗುರು ತೋರಿದ
ಚಿನ್ಮಯಾತ್ಮಕ ಸನ್ನೆವರಸುತ ಉನ್ಮನೆಯೊಳೋಲಾಡಿದ ॥೪॥

ಭೇದಿಸೆನ್ನವಗುಣಗಳಳಿದು ಬಾಧೆಯೆಲ್ಲವ ಬಿಡಿಸಿದ
ಓದು ಶಿವನ ನಾಮವೆಂದು ಬೋಧರೂಪನು ಪೇಳಿದ ॥೫॥

ವ್ರವಿಸುವಂಥ ಮನಕೆ ಬುದ್ಧಿಯ ಧರ್ಮರೂಪನು ಪೇಳಿದ
ಚಿನುಮಯಾತ್ಮಕ ಚಿತ್ತು ಆಗಿ ಘನವ ಎನ್ನೊಳು ತೋರಿದ ॥೫॥

ಸ್ವಾನುಭವದ ಸುಖವ ತೋರೆನ್ನ ಸ್ವರೂಪಳ ಮಾಡಿದ
ತಾನು ತಾನು ತಾನೆಯಾಗೆ ನೀನೆ ನಾನೆಂದರುಪಿದ ॥೬॥

ವೀರಿದಾನಂದಾಬ್ಧಿ ಸುಧೆಯೊಳು ನೀರೆ ಮುಳುಗೆಂದರುಹಿದ
ಕಾರಣಿಕದ ಗುರುವು ತನ್ನಯ ಕರುಣ ರಸದೊಳು ಕೂಡಿದ ॥೭॥

ನಷ್ಟ ಮಾಡಿದ ಅಷ್ಟ ಮದಗಳ ದುಷ್ಟರೆದೆಯನು ಮೆಟ್ಟಿದ
ಸೃಷ್ಟಿಗಧಿಕ ಸೋಮೆಕಟ್ಟೆ ಪಟ್ಟದ ಕರಿವೃಷಭನ ॥೮॥

---

೧೬. ಮಂಗಳಂ ಮಂಗಳಂ ಮದ್ಗುರು ಮೂರ್ತಿ ಮಂಗಳಂ ಮಂಗಳಂ
ಮಂಗಳಂ ಮಹಿಮಾತ್ಮ ಲಿಂಗ ಸನ್ಮುನಿ ಸಂಗ
ಶೃಂಗ ರಂಗ ವಿರಹಿತ ಆನಂದ ॥೧॥

ಶಿವರೂಪ ಶಿವಲೇಪ ಶಿವಪೂಜ ನಿಷ್ಪಂತೆ
ಪ್ರವಿಮಲ ರೂಪ ಪ್ರಕಾಶತೆ ಲಸತೆ
ಅವಿರಳ ಜ್ಯೋತಿ ನಿರಾಕಾರಮಯ ಶಿವ
ಭವರಹಿತಾಂಶು ಸುಧಾಂಶುತೆ ಸುಮನಂ ॥೨॥

ಚಾರು ನಿರಾಕಾರ ನಾಕರ ವಂದಿತ
ಸಾರಸದಾರ ಸಮುದಾರ ಧೀರಂ
ಪಾರಾವಾರ ಗಂಭೀರ ಸನ್ಮುನಿಗಣ
ಕಾರಣ ಪುರುಷ ನಿದಾನ ಸಂಧಾನಂ ॥೩॥

ಶರಣು ಜಂಗಮ ಲಿಂಗ ಶರಣು ಸದ್ಭಾವಾಂಗ
ಶರಣು ವಿಷಕಂಠ ಕವಿಮನಾಬ್ಜಭೃಂಗ
ಶರಣು ಕರಿವೃಷಭಾರ್ಯ ಷಟ್ಸ್ಥಲದೀಶ್ವರ
ಪರಮ ಸೋಮೆಕಟ್ಟೆ ವರದಗ್ರಗಣ್ಯಂ ॥೪॥

---

೧೭ ಮುನ್ನ ನಾನೇನು ಸುಕೃತವ ಮಾಡಿದ್ದೆನು
ಚನ್ನಕರಿಬಸವ ದೇಶಿಕ ಬಂದ ಮನೆಗೆ ॥ಪ॥

ಈಡ ಪಿಂಗಳವೆಂಬ ಜೋಡು ನಾವುಗೆ ಮೆಟ್ಟಿ
ನಾಡೊಳಗೆಲ್ಲಾ ಸಂಚಾರ ಮಾಡುತಲಿ
ಬೇಡಿದ ಭಕ್ತರ್ಗೆ ನೀಡುತ ಕರುಣವ
ರೂಢಿಗಧಿಕವಾದ ಗುರು ಬಂದ ಮನೆಗೆ ॥೧॥

ಜ್ಞಾನವೆಂಬುವ ದಂಡ ನೇಮವೆಂಬುವ ಪಾತ್ರೆ
ಸ್ವಾನುಭವದ ಕಾವಿಯಂಬರವ ಪೊದೆದು
ತಾನು ತನ್ನೊಳಗೆ ವಿನೋದದಿಂದಾಡುತ
ಭಾವ ಭಜಕರ ಬಾಂಧವ ಬಂದ ಮನೆಗೆ ॥೨॥

ತನುಲಿಂಗವಳಿದು ತಾ ಘನಲಿಂಗ ಕಳೆಯಸೆ
ವಿನಯದಿಂ ತೋಳಿಗಾಧಾರ ಮಾಡಿ ಧರಿಸಿ
ಅಂಗಪೆ ಗುರುವಿಷ್ಟಲಿಂಗವಧರಿಸಿ
ಜಂಗಮ ರೂಪಿನ ಲಿಂಗ ಬಂದ ಮನೆಗೆ ॥೩॥

ಅನುಪಮ ಚಿತ್ತ ಚಿನುಮಯ ಭೂತಿಯ
ವಿನಯದಿಂದಂಗದೊಳನುದಿನ ಧರಿಸಿ
ಪರತತ್ವಮಯನಾದ ಪರಲೋಕದರಸಾಗಿ
ಸ್ಥಿರ ಮುಕ್ತಿ ನೆಲೆಯಾಗಿ ಪರವೇ ತಾನಾಗಿ ॥೪॥

ಬಿಂದುವೆ ರೂಪಾದ ಆನಂದ ರುದ್ರಾಕ್ಷಿಯ
ಚಂದದಿಂದಂಗ ಮುಖಂಗಳೋಳ್ ಧರಿಸಿ
ಇಂದು ಈ ಜಗದೊಳು ನಿಂದು ಚರಿಸಾಡುತ
ಬಂದ ಎಮ್ಮಯ ಗುರು ತಂದೆ ನಮ್ಮ ಮನೆಗೆ ॥೫॥

ಕರುಣಾರಸವೇ ತೀರ್ಥ ಪರವೆಂಬ ಪ್ರಸಾದ
ನಿರುತ ಪಂಚಾಕ್ಷರಿ ಯಿರವೆ ತಾನಾಗಿ
ಧರಣಿಯೊಳಿರುವಂಥ ಶರಣ ಜನಂಗಳ
ಪೊರೆದು ರಕ್ಷಿಸ ಶ್ರೀ ಗುರು ಬಂದ ಮನೆಗೆ ॥೬॥

ಪರಿಪೂರ್ಣಮಯನಾಗಿ ಪರಬ್ರಹ್ಮದಿರವಾಗಿ
ಸ್ಥಿರ ಮುಕ್ತಿ ನೆಲೆಯಾಗಿ ಪರವೇ ತಾನಾಗಿ
ಪರಮ ಸೋಮೇಕಟ್ಟಿ ಕರಿವೃಷಭಾರ್ಯ
ತಾ ಪೊರೆದು ರಕ್ಷಿಸುವ ಶ್ರೀ ಗುರು ಬಂದ ಮನೆಗೆ ॥೭॥

---

೧೮. ಸಚ್ಚಿದಾನಂದದೊಳ್ ಸದಾ ಬೆರೆಯುವ ವಿಧವ ತಿಳಿಯದೊಡೆ
ಒದವಿದ ಯೌವನ ವಿಧವೆಗೆ ಆದರೆ ಅದರಂತಿಹುದು ॥ಪ॥

ಎಷ್ಟು ಓದಿದರೇನು ಶಾಸ್ತ್ರದ ಗುಟ್ಟು ತಿಳಿಯದಿರೆ
ಕಷ್ಟವಲ್ಲದೆ ಪರಿಭವ ಕೆಡಿಸುವ ಎಷ್ಟು ಮಾತ್ರವಿಲ್ಲ ॥೧॥

ಮುದ್ರೆ ಮೂರನು ಪಿಡಿದು ನವದ್ವಾರವ ಭದ್ರಮಾಡಿದರಿಲ್ಲ
ಸಿದ್ಧಿ ಯಮು ಮೊದಲಾದಷ್ಟಾಂಗಯೋಗ ನಿದ್ರೆ ಮಾಡಿದರಿಲ್ಲ ॥೨॥

ದೇಶ ದೇಶವ ತಿರುಗಿ ಕಾಶೀವಾಸ ಮಾಡಿದರಿಲ್ಲ
ಬೇಸರವಿಲ್ಲದೆ ನೆಲ ಬಿಲಸಮಾಧಿಯೊಳುಪವಾಸ ಮಾಡಿದರಿಲ್ಲ ॥೩॥

ಇಂದೇ ಸುಜನ್ಮದ ಸುಕೃತದ ಬೆಳಸು ರಾಶಿಯಾಗಬೇಕು
ಭಾಸುರ ಗುರುವಿನ ಕರುಣ ಕಟಾಕ್ಷವು ಈಸು ಮಾಡಬೇಕು ॥೪॥

ದಿಟ್ಟ ಸೋಮೇಕಟ್ಟಿ ಕರಿವೃಷಭಾರ್ಯನ
ದೃಷ್ಟಿ ಪಡೆಯಬೇಕು ॥೫॥

---

೧೯. ಜ್ಯೋತಿ ಬೆಳಗುತಿದೆ ಜ್ಯೋತಿ । ಅತ್ಯತಿಷ್ಠತಿದ್ದಾದಶಾಂಗುಲದಿಸ ಭಾತಿ । ಜ್ಯೋತಿ ಬೆಳಗುತಿದೆ ॥ಪ॥

ತಾಲು ಮೂಲ ಘಣೆಯಲ್ಲಿ । ತತುನೀಲ ತೋಯದ ಮಧ್ಯದಲ್ಲಿ
ಬಾಲಾರ್ಕಕಳೆ ಬೆಳಕಲ್ಲಿ । ತ್ವಂ ಮೂಲ ಜ್ಯೋತಿಯೋಳ್ ನೀ ಬೆರೆದಲ್ಲಿ ॥೧॥

ಇಂದ್ರಿಯ ಪ್ರದೇಶದಲ್ಲಿ ಅಸಿ ಚಂದ್ರನ ಕಳೆ ಕಪ್ಪಿನಲ್ಲಿ
ರಂಧ್ರಮಾಡಿಕ ಮುತ್ತಿನಲ್ಲಿ ಸವರಂಧ್ರ ಜ್ಯೋತಿ ಮುದಿದಿಲ್ಲಿ ॥೨॥
ಕುಂಡಲಿಯ ನಾಳವಲಿ ತುದಿ ಮುಂಡರಿಕದ ಪತ್ರವಲ್ಲಿ
ದಂಡಿಕೋರಿನ ನಾಳವಲ್ಲಿ ಕರಿವೃಷಭದಾನು ಜಲಜ್ಯೋತಿಯಲ್ಲಿ ॥೩॥

---

೨೦. ಮರೆಯ ಬೇಡವೆ ರಮಣ ಗುರುವಿನರಿವನು
ಮರೆಯಬೇಡ ಗುರುವಿನರಿವ
ಕರಿವೃಷಭರಾಜನೆನಗೆ ವರ ಕುರುಹ ತಿಳುಹಿದ ನೀನು
ಸರಿಯಾಗು ಸುಗುಣೆ ಎಂದ ॥ಪ॥

ಸ್ವಾಮಿ ಕಂಡೆನು ಎನ್ನ ಸಲಹು ಎಂದೆನು
ಸ್ವಾನುಭವದ ಸುಖವ ತೋರಿ ಸನ್ನೆವೇಸಿ ಪೋದ ಸಖಿಯೆ ॥೧॥

ಹಂಸರೂಪನು ಎನ್ನ ಸಂಶಯವಳಿದನು
ವಂಶ ವಂಶ ಎತ್ತಿ ಬಂದ ಸಂಸಾರವನು ಕೆಡಿಸಿದವನ ॥೨॥

ಸತ್ತು ಚಿತ್ತು ನಿತ್ಯಾನಂದವು ಗೊತ್ತ ತೋರಿಯನ್ನತನ್ನ
ಭೃತ್ಯಕನ್ನು ಮಾಡಿಕೊಂಡ ಕರ್ತೃ ಸೋಮೆಕಟ್ಟಿಗುರುವ
ನಿತ್ಯದಲ್ಲಿ ಪಾಡು ಕಂಡೆಯ ॥೩॥

---

೨೧. ನಮೋ ನಮೋಯೆನುತಲಿ ನಮಿಸುತಲಿರ್ಪೆನು ಶಿವಶರಣ
ಪಾದಾಂಬುಜಕೆ ॥ಪ॥

ಕುರುವಿನುಪಾಧಿಯ ಪರಿದೆನ್ನ ಸಲಹಿದ, ಗುರುಶಾಂತವೀರ ನಡಿಗಳಿಗೆ
ಗುರುವಿನಗುರು ಪರಮಗುರುವು ತಾನುರುತರ ಗುರುಶಾಂತವೀರನಿಗೆ
ಮರೆವೆ ಒಲ್ಲರಿ ಮೂಲ ಕುರುಹು ಇಲ್ಲವೆ ಕಿತ್ತೂರು ಬೆತ್ತಲೆ ಆದಿವಾಳ
ರೂಢರಿಗೆ ॥೧॥

ಹೂಸವೆಂಟಿಸಳನ ಬಿಸರುಹದೊಳು ತಾ
ನೊಸೆದು ರಾಜಿಪ ಕರಿಯಾಖ್ಯನಿಗೆ
ಹಸುಳೆಯ ಶಿರದೊಳು ವಸುಧೆ ಭಾರವನಿಟ್ಟ ಸಮತಪೋರಾಜೇಂದ್ರನಿಗೆ
ಪಶುಪತಿಯವತಾರ ವಿಸುನಿವರ್ಣಾಡಹಾಂಗೆ ಸವೊತಸೋಭಿಧಾನನಿಗೆ ॥೨॥

ಗೊಲ್ಲರ ಹಳ್ಳಿಯೊಳುದಿಸಿದೆ ಶಿವಶರಣರ
ಮೆಲ್ಲಡಿಗಳಿಗೆಯೆ ನಮಿಸುವೆನು
ಕನ್ನಡವಲ್ಲದೆ ಇನ್ನೇನರಿಯೆನು ಸೊಲ್ಲಿಸಿದೆನು ತೊದಳ್ನುಡಿಯೊಳಗೆ
ಒಲ್ಲ ಮಹಾತ್ಮರು ಇನ್ನೊಂದೆಣಿಸದೆ ಎಲ್ಲಾ ಸೋಮೆಕಟ್ಟಿ ಸ್ತುತಿಯೆ
ನುತ ॥೩॥

---

೨೨. ಸಾರಿ ಶಪಿಸುವೆ ನಿನ್ನನು ।ತಪೋರಾಜ। ದೂರಮಾಡಿದೆಯ
ನ್ನನು ॥ಪ॥

ಪೊಡವಿಯೊಳಗೆ ನಾನು ಬಡವರ ಹುಡುಗನಂತೆ
ಗೊಡವೆಯಲ್ಲಡಗಿರೆ ಅಡವಿಗಿಕ್ಕಿದೆಯಾಗಿ ॥೧॥

ಮನವು ಮಹದೊಳಗಾಗಿ ತನುವು ಸೂರೋಗಲಿ
ಕುಲಛಲಮುಳುಗಲಿ ಕುತ್ಸಿತ ಹಾಳಾಗಲಿ ॥೨॥

ಮದಗಳು ಮುಳುಗಲಿ ಅರಿಗಳು ಹಾರಲಿ ಕರಣೇಂದ್ರಿಯಗಳು ಎಲ್ಲಾ
ಕಾಡಸೇರಲಿ ಗುರುವೆ ಆಳಲುತೀರದು ಎನ್ನಬಾಯವಾತಿಂದೇನು ॥೩॥

ಹೋದ ಬಟ್ಟೆಯು ಬಳಿಕ ಬಾರದಂತಾಗಲಿ ನಾಮರೂಪಗಳಳಿದು
ಸೀಮೆ ಬಿಟ್ಹೋಗಲಿ
ಸೀಮೆ ಭೂಮಿಯ ಬಿಟ್ಟು ನಿಸ್ಸೀಮನಾಗಲಿ ಎಂದು ಸಾರಿ ಶಪಿಸುವೇ ॥೪॥

ಧೂಪವಗ್ನಿಯ ಕೂಡಿ ರೂಪಳಿದು ಹೋದಂತೆ ವಿರೂಪಸೋಮೆಕಟ್ಟಿ
ಪಾಪನಾಶನಪಾಡು ದೀಪಿಸಿರಲಿ ನಿನಗೆಂದೀಪರಿ ಶಪಿಸುವೆ ॥೫॥

---

೨೫. ಶಂಕರೆನ್ನನುಭವದ ಶಂಕೆ ಹರಿಸುವೆನೆಂದು।
ಕಿಂಕರನ ಮೇಲೆ ದಯೆ ಬಂದೀಗಳು॥
ಝೇಂಕರಿಸಿ ಮುಸುಕಿರ್ದ ತನುಮನಂಗಳ ಗುಣದ।
ಬಿಂಕಗಳ ಬಿಡಿಸಿದನು ವಚನ ಮಾತ್ರದಲಿ ॥೫॥

ತಪವಿದ್ಯೆ ವಿರತಿಸುಖ ಅಪರೋಕ್ಷಜ್ಞಾನ ಬಲು ಗು।
ಪಿತ ರಹಸ್ಯಗಳ ನರುಪಲೆಂದು॥
ಜಪಮೂರ್ತಿ ಜಗದೊಡೆಯನಾಕಾರದಲಿ
ತಪಸ್ಸಿದ್ಧಿಯಾಂತ ಶಿಷ್ಯರ ಮೇಳದಿ ॥೬॥

ವಿಘ್ನಂಗಳೇನಿರದೆ ಭಗ್ನವಾಗಲಿ ಮನವು।
ಮಗ್ನವಾಗಿರಲಿ ಮನ ತನ್ನೊಳೊಂದಿ॥
ಸುಜ್ಞಾನವಿಂತಿರಲಿ ಎಂಬ ಕರುಣದ ಪದ್ಯ।
ಪ್ರಜ್ಞೆಸೊಳಿಸಿತು ಯೆನಗೆ ಕರ್ತನಹುದೆಂದು ॥೭॥

ರಮ್ಯತರವಾದ ನಿಗಮಾಂತ್ಯ ಮಾರ್ಗಂಗಳೊಳು।
ಸೌಮ್ಯ ಸದ್ಗುಣ ಗಣ ಶಿವಾನುಭವದ॥
ಪೇರ್ಮೆಯಿಂತೆಂದೆನ್ನ ನಿರ್ಮಲನ ಮಾಡಿದರು।
ನಿಮ್ಮ ಬರವ ಹಾರೈಪ ತವಕವೆಡೆಬಿಡದು ॥೮॥

ದೇವ ನೀ ಕೃಪೆಯಿಂದ ಪಾವನನ ಮಾಡಿದರೂ।
ಯಾವಾಗ ದರುಶನವು ಎಂತೆಲ್ಲಿ ತನಕ ॥
ಭೂವಳಯ ಜಂಜಡದ ದೇಹ ಬೇರಿರಲೆನಗೆ ।
ಧಾವತಿಯು ತೋರುತಿದೆ ಪಾವನಾತ್ಮಕನೆ ॥೯॥

ಸಿಲುಕಿಹೆನು ತಪ್ಪದದ ತ್ವಂಪದದ ಸಾಧ್ಯದಲಿ।
ಬಲು ಸುಖದ ಸುಗ್ಗಿ ಚಿತ್ಸುಖವರಿಯದೆ ॥
ಸೆಲೆಯಾದ ಧಾವಥೊಳು ಬೆರಸಿ ಬೇರಾಗದ।
ಉಳುಮೆ ಲೀನಂಗೊಳಿಸಿ ಪೊರೆವನೆಂದು ॥೧೦॥

ಕೇಳಿ ನೋಡುವ ತನಕ ಮೀರಿ ಗೀಳಿನೊಳಿರ್ಪ।
ದೇಳಿಗೆಯದೆಂತುಟೈ ನಿಮ್ಮ ಕರುಣ॥

ಮೇಳನದ ಮೇಲೆ ಮತ್ತೇನುಂಟು ತಿಳಿವನದ ಅದ।
ರೊಳಗವದೇನಿಹುದೊ ಕೇಳುವೆನು ನಾನು ॥೬॥

ದ್ರವಿಡ ಮುಂಡೂಕ ನ್ಯಾಯದಂತಿರ್ದ।
ಕಾಲಗತಿಗಳಿಗೆನ್ನ ಬೇರಿರಿಸಿ ಕವಿವ ಕರ್ಮಗಳ॥
ಭವಣೆಯೊಳು ಸಿಲ್ಕಿಸದೆ ಸವೆಯದಾನಂದ ಸುಧೆಯ।
ಸವಿದೆನಗೊಲಿದಿತ್ತೆ ವಚನಾನುಭವದಿ ॥೭॥

ಸ್ವಾನುಭವ ಸುಜ್ಞಾನ ಮೌನ ಮುದ್ರೆಲಿ ನಿಂದು।
ತಾನು ನೀನೆಂಬ ಭಾವವು ತೋರದೆ॥
ಭಾನುಕೋಟಿಯ ತೇಜ ಪೂರ್ಣದೊಡವೆರಸುವೊಡೆ।
ನೀನಲ್ಲದಾರುಂಟು ಸೂನುಮೋಹದಲಿ ॥೮॥

ಮಿಕ್ಕ ಬಹುಸಾಧನದ ವೆಕ್ಕಸಗಳಲಬಿರಲಿ
ತಕ್ಕ ಈ ಪದ್ಯದ ಮೊದಲಾಗುವ
ಅಕ್ಕರದ ಮೂರುತಿಯೊಳಕ್ಕಿ ತನುಮನವೆಲ್ಲ
ಗಕ್ಕನೊಡೆವೆರೆಯುವುದು ಕಕ್ಕುಲಿಂದೆನಗೆ ॥೯॥

ನಂಬಿಹೆನು ಸತತ ನಿನ್ನ ಹಂಬಲೆಡೆಬಿಡದೆನಗೆ
ಕುಂಭಿನಿಯೊಳು ಸೋಮೆಕಟ್ಟೆಚರದ
ಸಂಭ್ರಮವದಂತಿರಲಿ ಶಂಭುರೂಪನೆ ತವ
ಪದಾಂಬುಜವ ಎನ್ನ ಹೃದಯಾಂಬುಜದಿ ನಿಲಿಸೈ

---

೨೪. ನುತಿಸುವೆನನುದಿನ ಶಶಿಕಂಠನ ಸಮುವೆಸೆವ ಜ್ವಲಕಂಠಾಗ್ರಣಿಯ
ಅತಿಶಯ ಪಾದದ ಬಿಸರುಹಕ್ಕೊಂದಿಸೆ ಗತಿಗೊಡುವಗಣಿತನಾದವನ ॥ಪ॥
ಸತ್ತು ಚಿತ್ತು ಆನಂದದ ಬೋಧವು ನಿತ್ಯವಾಗಿ ಶಾಂತಿಯನ್ಯೈದಿ
ವೃತ್ಯುಮಾಯೆ ಜಗವೆಲ್ಲವ ಗೆಲಿದುರೆ ನಿತ್ಯವಾದ ವೀರತ್ವದಲ್ಲಿ
ಅರ್ತರಾದ ಸದ್ಭಕ್ತರ ಪಾಲಿಸುತಿತ್ತುವವರ ತಾನರ್ಥಿಯಲಿ
ಕರ್ತನಾದವೀ ಪೃಥ್ವಿಯಲ್ಲಿ ಒಪ್ಪಿತ್ತು ಮತ್ತೆಯು ಶಾಂತವೀರಾಖ್ಯನಲ್ಲಿ ।೧।

ಕೋಪರಹಿತ ತಪಸ್ಸಿದ್ಧಿಯೊಳಗೆ ಜಗಪಾಪಗಳ್ದರಿಸುವ ಶಕ್ತಿಯಲಿ
ಓಪ ಗುರುವಿನಾಜ್ಞೆಯನೆಡಬಿಡದಲಿ ಈ ತಪೋರಾಜಭಿಧಾನದಲಿ
ಈಪರಿಯಿಂದಲಿ ರೂಪು ದಳೆದು ಜಗದೀಪಕನೆನಿಸಿವ ಭೂವಳಯದಲಿ
ಪಾಪವ ಹರಿಸುವ ತುಂಗಭದ್ರ ತಟದಾಪುರಹರಿ ಹರನಾಮದಲಿ ॥೨॥

ಬಸವನ ಭಕ್ತಿಯ ಬಿಸರುಹ ಜಾಂಡದಿ ಹೊಸದಾಗಿಯೆ ತೋರಲಿಕ್ಕೆಂದು
ಪರುಪತಿ ರೂಪಿನ ಪರಸೇವೆಯೊಳಗೆ ಬಹು ಕುಶಲತ್ವವ ತಾ ಕೈಕೊಂಡು
ಮುಸುಳಿಸಿದಂಥ ಸುಖವು ಸಾಧ್ಯವಿರೆ ಘಸಣಿಜಗ ಕರೆಕರೆ ಯೆಂದು
ಅಸಮವಾಗಿಯೆ ಭಕ್ತರೊಳಗೆ ಬಹು ಜಸವೆತ್ತಿಸೆವ ಕರಿವರನೆಂದು ॥೩॥

ಈ ಮಹಾಗುರುಶಿಷ್ಯರ ಈ ಪದ್ಯದಿ ಪ್ರೇಮದಿ ಪೊಗಳಿದೆವಾವಿಂದು
ತಾಮಸ ಗುಣಗಣವಳಿದುರೆ ಸತ್ವನಿರಾಮಯನೊಳು ಬೆರಸುವರೆಂದು
ಸೋಮೇಕಟ್ಟಿ ಚರವರನಿಗೆ ನಿಸ್ಸೀಮ ಭಕ್ತಿ ಇದು ಬೇಕೆಂದು
ಕಾಮಿಸಿ ನಿಮ್ಮನು ಬೇಡುವೆ ಭವವ ವಿರಾಮವ ಮಾಡಿರಿ ನಮಗೆಂದು ॥೪॥

---

೨೫. ಸೋಮೆಕಟ್ಟಿ ಈಶ ತಾಮಸದ ಮನ ನಾಶ
ಸ್ವಾಮಿ ಭಜಿಸುವ ಶರಣ ಹೃದಯವಾಸ ॥ಪ॥

ಕಾಮಕಾಲರ ಪುರವ ಕಾಯಿಸಿದೆ ಕಾಯವನು
ಪ್ಯೋಮ ಅಂತರದಲ್ಲಿ ಇರ್ಪಯಲ್ಲಾ
ಆ ಮಹಾ ಸೋಮಸೂರ್ಯಂ ಮನ್ಮನೆಯೊಳಿರುತಿರ್ದ ಕಾರಣದಿ
ಸೋಮೆಕಟ್ಟಿಯ ಈಶನಾದೆ ॥೧॥

ಅಷ್ಟತನು ಪಟ್ಟಣದಿ ಅಷ್ಟ ಚಕ್ರವ ಮಾಡಿ।
ಅಷ್ಟ ಮೂರ್ತಿಯು ನೀನೆ ಆಗಿ ಇರ್ದು॥
ಶಿಷ್ಯ ಭಕ್ತರ ನೋಡಿ ಭ್ರಷ್ಟ ಮನವನು ಕೆಡಿಸಿ।
ಇಷ್ಟಾರ್ಥಗಳನಿತ್ತೆ ಶ್ರೇಷ್ಠ ಗುರುವರನೆ ॥೨॥

ನವವಿಧದ ಭಕ್ತಿಯನು ಸವಿಸವಿದು ನೋಡುತ್ತ
ಭವವ ಕೆಡಿಸುನೆನೆಂದು ತವೆ ಹರುಷದಿ॥
ನವಿಲಗರಿ ತೆರದೊಳಿಹ ತ್ರಿವಿಧ ಮಂಡಲದಲ್ಲಿ
ಭುವಿಗೆ ಸಾಕ್ಷಿಗನಾದ ಪರಮಹಂಸ ॥೩॥

---

೨೬. ಶರಣು ಸೋಮೆಕಟ್ಟಿಯೀಶ ಅನು ಪರಿಭವಯುತನೆಲೆ
ಕರಿವೃಷಭೇಶ ಶರಣು ಸೋಮೇಕಟ್ಟಿಯೀಶ ॥ಪ॥

ಬರಲಾರೆ ಸರ್ವಯೋನಿಯೊಳು ಬಂದು ತಿರುಗಲಾರೆನು
ಯಮಪುರದ ದಾರಿಯೊಳು।
ಕೊರಗಲಾರೆನು ಸಂಸೃತಿಯೊಳು ಮೂರು ತೆರನಾದ ಮಲ
ದೊಳಗೆ ಇರಲಾರೆ ನಿನ್ನು ॥೧॥

ಆರು ಮೂರರೊಳಾಡಲಾರೆ ಮತ್ತೀರೈದು ಇಂದ್ರಿಯದೋ
ಳ್ತಿನಿಸಿಕೊಳಲಾರೆ॥
ಮೂರು ತಾಪದೋಳ್ ಬೇಯಲಾರೆ ತೋರುವೆರಡು ಕರಿಯೊ
ಳು ಮುರಿಸಿಕೊಳಲಾರೆ ॥೨॥

ಮೂರಾರು ಭಕ್ತಿಯ ಮಾಡಿ ಆದ ಮೀರಿ ಮೂರರೊಳಿನ್ನು।
ಪೋಲಕ್ಕೆ ಹಾರಿ।
ಸಾರಿ ಉನ್ಮನೆಯೊಳು ತೂರಿ ನಿನ್ನ ಸೇರಿ ಪೂಜೆಯ ಮಾಳ್ಪ ಧೀರತ್ವತೋರಿ॥೩॥

---

೨೭ ಆವ ವೃಗವೋ ಕಾಣೆ ಹಾರಿತು ಗಗನಕ್ಕೆ ಮೀರಿದ ಶಬ್ದವಲಾ
ಗುತಿದೆ
ಸಾರಿನೋಡಲು ಸರ್ವ ಜಗವೆಲ್ಲವೊಳಕೊಂಡ ಧೀರತ್ವವನು ತಾನೆ ಬೀರು
ತಿದೆ ॥ಪ॥

ಎಂಟು ಆನೆಯ ನುಂಗಿ ಬಂಟರೈವರ ಕೊಂದು
ಕುಂಟರ ಮೂವರ ಮುರಿಯುತಿದೆ ಟಂಟಣಿಸಿಯೆ ನಾ
ನೀಂಟಿಸಿ ನೋಡಲು ಉಂಟಾದ ಗವಿಯೊಳಗಿರುತಲಿದೆ ॥೧॥

ಮೂರು ಕಾಲುಗಳುಂಟು ಆರು ಬಣ್ಣದ ವೃಗ ಹಾರಿ ನಿಂದಿತು
ಆರು ಚಕ್ರವನ್ನು ಬೇರೆ ಈರೈದು ತೆರದ ಧ್ವನಿಯನ್ನು ಮಾಡಿ
ಸಾರಿ ಪ್ರಣವ ನಾದವ ತೋರುತ ॥೨॥

ತ್ರಿಪುಟಿ ಸ್ಥಾನಕೆ ಹಾರು ತಾಪಹರ ಅಂಶನ ಜಪವ ಮಾಡೆಂದು
ತಾ ಶೃಂಕರಿಸಿ ಗುಪಿತ ಸೋಮೆಕಟ್ಟಿ ಕರಿವೃಷಭಾರ್ಯನು
ಸಫಲ ಮಾಡುವೆನೆಂದು ಸಾರುತಲಿ ॥೩॥

೨ಕ. ಎಂಥ ಯಂತ್ರವ ಮಾಡಿದ ಶ್ರೀಗುರುರಾಯ ಎಂಥ ಯಂತ್ರವ ಮಾಡಿದ
ಎಂಥ ಯಂತ್ರವ ಮಾಡಿ ಭ್ರಾಂತು ಬಿಡಿಸಿದನೆ
ಚಿಂತಾಯತಾಕ್ಷಿ ನೀ ಚಿತ್ತದಿ ಲಾಲಿಸು ॥ಪ॥

ಮರೆಯೆಂಬ ಸೆಜ್ಜೆ ಮನೆಯ ಕಿರಿಯ ಬಾಗಿಲೊಳಿರಗಿ ನಾನಿರುತಲಿದೆ
ಕರೆದು ಕುಳ್ಳಿರು ಎಂದು ಕರವನೆತ್ತಿಯೊಳಿಟ್ಟು
ಅರುಹಿದ ಕರ್ಣದಿ ಒರಲಿದೋ ತನುಗುಣ ॥೧॥

ಆರುಮೂರಳಿದ್ಹೋದವೆ ಧಾರಣದಿಂದ ಮೂರು ತಾಪವು ಬೆಂದವೆ
ಅರಿವಿಕೆದೋರಲು ಕರಣಾದಿಗಳು ಎಲ್ಲಾ
ಕರನಿಧಾತ್ರಿಯೊಳಿನ್ನು ಒರೆದವಲ್ಲ ॥೨॥

ಸಂಸೃತಿ ಪರಿದ್ಹೋಗಲು ಹಸುಳೆ ಯೆಂದು ಹಂಸನ ತೋರಿದನು
ಸಂಶಯಗೊಳ್ಳದೆ ಹಂಸನ ಹಾರಿಸೆ
ವಂಶಬೀಜದ ನಾದ ವಶವಾಯಿತಲ್ಲಾ ॥೩॥

ಆಸನ ಬಲಿಯುತಲಿ ಸೂಸುವ ವಾಯು ಲೇಸಿನಿಂದ ನಿಲಿಸುತಲಿ
ಈಶೆ ಷಣ್ಮುಖಿಯೊಳು ಬೇಸರಿಸದೆ ಕೂಡೆ
ಭಾಸುರ ಪ್ರಭೆ ಬಂದು ಬಲಗೊಂಡಿತಲ್ಲಾ ॥೪॥

ಮಿಸುನಿಯ ಪಟ್ಟಣದ ಹಸುಳೆ ಯೆಂದು ಕುಶಲದಿಂ ಬೋಳೈಸುತ
ಪಶುಪನ ಭಕ್ತಿಯು ವಶವಾಗಲಿ ಎಂದು
ಬೆಸನ ಕೊಟ್ಟವ ಕರಿವೃಷಭನು ಕಾಣೆ ॥೫॥

---

೨೯. ಸದ್ಗುರು ಬೋಧೆಯನು ನಿರ್ಧರಿಸಿ ಪಡೆದವಗೆ
ಬದ್ಧ ಸಂಸಾರವಳಿದು ಸಿದ್ಧ ಮುಕ್ತಿ ॥ಪ॥

ಆರ ಜರಿಯಲು ಬೇಡ ಆರರೊಳು ನಿಲಬೇಡ।
ಆರು ಮೂರರೊಳಾಡಿ ಕೆಡಲುಬೇಡ॥
ಜೇರೆ ದಾರಿಯ ನೋಡಿ ಮೂರರೊಳು ಹಾರುತ್ತ।
ಈರೈದು ನಾದವನು ಕೇಳು ಎಂಬ ॥೧॥

ಮೂರು ಮಲಗಳ ಬಿಟ್ಟು ಮೂರು ತಾಪವ ಸುಟ್ಟು।
ಮೂರಾರು ಭಕ್ತಿಯೊಳು ಮನವು ನೆಟ್ಟು।
ಮೂರು ಸಾವಿರದ ವಸನ ಸೇರಿ ಪೂಜೆಯ ಮಾಡಿ।
ಮೂರು ಮೂರು ಮುದ್ರೆಯ ಪಿಡಿದು ಧೀರನಾಗೆಂಬ ॥೨॥

ಅಷ್ಟ ಮದಗಳ ಮೆಟ್ಟಿ ಭ್ರಷ್ಟರೈವರ ಕೊಂದು
ಶ್ರೇಷ್ಠ ಸೋಮೆಕಟ್ಟಿ ಗುರುವರೇಣ್ಯ
ಅಷ್ಟದಳಕಮಲದೊಳು ದೃಷ್ಟಿಗೆಯು ಕಾಣಿಸುವ
ನಿಷ್ಠೆಯಿಂದಲಿ ಪೂಜಿಸಿ ಸುಖಿಯಾಗು ಎಂಬ ॥೩॥

---

೩೦. ಕೂಡಿದೆನು ನಿಮ್ಮ ಕರುಣಾಮೃತದ ಪಾತ್ರದೊಳು।
ಮಾಡುವೆನು ತವ ಚರಣ ಸ್ಮರಣೆ ಭಜನೆಯನು ॥ಪ॥

ಮಲ ಮೂರರೊಳು ಸಿಲ್ಕಿ ಹಲವು ಜನ್ಮಂಗಳೊಳು।
ತೊಳಲಿ ಬಳಲಿದೆನೆಂದು ಕರವ ಪಿಡಿದು॥

ಮಲವ ಸಂಕೋಚವನು ಕಳೆದು ಲಿಂಗತ್ರಯ.ವ ।
ನೆಲೆಗೊಳಿಸಿ ನಿರ್ಮಲನ ಮಾಡಿದುದರಿಂದ ॥೧॥

ಪಶುವಿನಂಗದ ಘೃತವು ಪಶುವಿನಿಂ ಪೊರಮಟ್ಟ ।
ಪಶುವಿನಂಗದ ರುಜೆಯ ಕೆಡಿಸುವಂತೆ ॥
ದಶವಿಧದ ಕಲೆಬಿಂದುನಾದ ವೊಂದಾಗಿರ್ದ ।
ಅಸಮ ಪ್ರಸಾದನೆಂತೆಂಬ ಮುಖದಿಂದ ॥೨॥

ಧರೆಯ ಪಾವನವ ಮಾಡುವರೆ ಸೋಮೆಕಟ್ಟೆ ।
ಕರಿವೃಷಭಯೋಗೀಂದ್ರನವತಾರದಿಂ ॥
ಪರಶಿವನೆ ತಾ ಬಂದು ಶಾಂತವೀರನ ಮೇಲೆ ।
ಪರಿಪೂರ್ಣ ಭಾವದೊಳು ಪಾಲಿಸಿದ್ದರಿಂದ ॥೩॥

---

೩೧. ಹಾದರವ ನಾನರಿಯದಿದ್ದೆ ।
ಸಿದ್ಧಪುರುಷರ ಕಣ್ಣಲ್ಲಿ ನೋಡದಿದ್ದೆ ॥ಪ॥

ಒಡಲೆ ನಾನೆಂತೆಂದು ನಂಬಿಕೊಂಡಿದ್ದೆ ।
ನೋಡಬೆ ಮೂರು ಮುದ್ದೆಯುಂಡುಕೊಂಡಿದ್ದೆ ॥೧॥

ಏಳು ಬಗೆಯ ಅಕ್ಕಿಯನ್ನ ಉಣ್ಣುತಿದ್ದೆ ।
ಏಳೊಂದು ಬಗೆಯೂರಗಾಯ ನಂಬಿದ್ದೆ ॥
ಮೇಲಾದ ದಶಭಕ್ಷ್ಯ ಸವಿಯುತಲಿದ್ದೆ
ಒಳ್ಳೆ ತ್ರಿಬಗೆ ತುಪ್ಪ ಉಂಡುಕೊಂಡಿದ್ದೆ ॥೨॥

ಮಾರಿಯ ತೆರದೊಳು ಮಲೆತುಕೊಂಡಿದ್ದೆ ।
ನಾರಿಯರೊಳಗೆಲ್ಲ ನಲಿಯದೆ ಇದ್ದೆ ॥
ಚಾರು ಪುರುಷರ ಬಳಿಗೆ ಚರಿಸದೆ ಇದ್ದೆ ।
ಧಾರುಣಿಯೊಳು ನಾನೆ ಧೀರಳೆನುತಿದ್ದೆ ॥೩॥

ಗಂಡುಳ್ಳ ಮಹಾದೇವಿ ಸಂಗವ ಮಾಡಿ ।
ಕಂಡಿಯಿಲ್ಲದ ಮಾನಭಂಗವ ಮಾಡಿ ॥

ಚಂಡಪ್ರಕಾಶನ ಮನೆಯನ್ನು ಕೂಡಿ ।
ತಂಡ ವಿಕ್ರಮವಾದ ವ್ರತಭಂಗ ಮಾಡಿ ॥೪॥

ಆರೂ ಇಲ್ಲದ ಮನೆಗೆ ಕರೆದ ।
ಬೇರೆ ಮುಸುಕಿರ್ದ ಕುಪ್ಪಸವ ತಾನಳಿದ ॥
ಗುರು ಕುಚವೆರಡನು ಜಾಗ್ರದಿ ಪಿಡಿದ ।
ಭರದಿಂದ ಕುಚಮಧ್ಯದೊಳು ತಾ ನಲಿದ ॥೫॥

ಆಗ ಮೋಹವು ತನಗೆ ಹೆಚ್ಚಿ ।
ಬೇಗ ತಾ ಬಂದು ಉಟ್ಟಿದ್ದ ಸೀರೆಯ ಬಿಚ್ಚಿ ॥
ಹಿಗ್ಗುತ ಮದದೊಳು ಅಧರವ ಕಚ್ಚಿ ।
ತಗ್ಗದೆನ್ನಯ ರತಿಗೆ ವಿಟನಾಗ ಮೆಚ್ಚಿ ॥೬॥

ಆರು ವರಹದ ಓಲೆ ಕೊಟ್ಟ ಬೇರೆ ।
ಮೂರು ವರಹ ತೂಕದ ಮೂಗುತಿ ಇಟ್ಟ ॥
ಪರಂಜ್ಯೋತಿಯಂಥ ರತ್ನ ಮಡಗೆಂದು ಕೊಟ್ಟ ।
ಗುರು ಸೋಮೆಕಟ್ಟೀಶ ಭಜಿಸೆಂದು ಬಿಟ್ಟ ॥೭॥

---

೩೨ ಯಾಕೆ ನಿನಗಕಟ ವೈರಾಗ್ಯ ಜನಿಸದು ಮುನ್ನ
ಶೋಕ ಜನ್ಮಗಳಿನ್ನು ಸಾಕಿಲ್ಲವೆ ॥ಪ॥

ಹಿಂದೆ ಜನ್ಮಗಳೊಳಗೆ ಹೊಂದಿರ್ದ ಸತಿ ಸುತರು
ಬಂಧು ಬಳಗಗಳು ಏನಾದರು
ತಂದೆ ತಾಯಿಗಳೆಲ್ಲ ಹೊಂದಿ ಕಳುಹಿದರಿಂತು
ಚಂದದಲಿ ನಿನ ಹಿಂದೆ ಬಂದಿರ್ಪರೆ ॥೧॥

ನಾಳೆಗಿರಬೇಕೆಂದು ಮೋಹದಲಿ ಮಡಗುತ್ತ
ಬಾಳುವೆಯ ನೀ ಮಾಡುತಿರ್ಪೆ
ಮೂಳನಂದದಿ ಹಿಂದೆ ಹೂಳಿರ್ದ ಧನ ಕನಕ
ಮೇಳನದಿ ನಿನ ಹಿಂದೆ ಬಂದಿರ್ಪುದೆ ॥೨॥

ಶರೀರ ನಾನೆನ್ನುತಲಿ ಪರಿಪರಿಯೆ ತೊಳೆದು
ಪರಿಮಳಾಂಬರವನ್ನು ಧರಿಸುತ್ತಲಿರುವೆ.
ಮರುಳುತನದಿಂ ಮೊದಲು ಪೋಷಿಸಿದ ದೇಹಗಳು
ತೆರಳಿ ನಿನ್ನ ಹಿಂದೆ ಬಂದಿರ್ಪುವೆ ॥೩॥

ಮತ ದೇವರೆಂದೆಂದು ಪ್ರತಿಮೆಗಳ ಪೂಜಿಸುತ
ಗತಿಯೆ ನೀನೆಂತೆಂದು ನಂಬಿ ಇರುವೆ
ಗತವಾದ ಜನ್ಮಗಳ ತಿಮ್ಮಬೊಮ್ಮಪ್ಪಗಳು
ಪಿತದಿಂದ ನಿನ್ನೊಡನೆ ಬಂದಿರ್ಪುವೆ ॥೪॥

ಜಾತಿಫನನೆಂತೆಂಬ ನೀತಿಯಲಿ ನೀನಿರುತ
ಸೂತಕಾದಿಗಳಿಂಗೆ ಬೆದರುತಿರುವೆ
ಮಾತೆ ರಜದೊಳು ನೀನು ಸೂತಕದಿ ಬೆಳೆವಾಗ
ಜಾತಿಸೂತಕಗಳೆಲ್ಲಿರ್ದುವು ॥೫॥

ಸಂತ ಸಂದಲಿ ಅನಿತು ಸಂಸಾರವ ನೀ ಮಾಡಿ
ಇಂತು ಸುಖ ಕಿಂಚಿತ್ತು ದೊರೆಯಲಿಲ್ಲ
ಮುಂದೆ ಭ್ರಾಂತನು ಬಿಟ್ಟು ಚಿಂತೆಯನು ನೀನರಿದು,
ಅಂತಕಾಂತಕನ ನೀ ಹೊಂದಿ ಸುಖಿಸದಲೆ ॥೬॥

ಸಾಧುಗುಣವನು ಧರಿಸಿ ಕ್ರೋಧವನು ನೀ ಮುರಿದು,
ವೇದಾಂತದರ್ಥವನು ಬೇಗನರಿತು ॥
ಆದಿ ಅಂತ್ಯವ ತಿಳಿದು ಭೇದವನು ನೀ ಮರೆದು,
ದೋಷೆಯನು ಸಮನಿಸಲು ಮೋಕ್ಷವಹುದು ॥೭॥

ಆರು ನಾನೆಂದೆಂಬ ವಿಚಾರವನು ಮಾಡಿ !
ಚಾರು ಸಖರೊಡನೆ ಕೂಡುತಿರಲು ॥
ಮೀರಿದಾ ಗುರುವಿಂದಲನುಭವವ ನೀ ತಿಳಿದು,
ಘೋರೆಂಬ ನಾದದೊಳು ಬೆರೆಯೆ ಸುಖವಹುದು ॥೮॥

ಜಂಗಮಾರ್ಚನೆ ಮಾಡಿ ಲಿಂಗದೊಳು ಒಡಗೂಡಿ
ಮಂಗ ಮನವನು ಬೇಗ ಹಿಡಿದು ನಿಲಿಸಿ ॥

ತುಂಗ ಸೋಮೆಕಟ್ಟಿ ಕರಿವೃಷಭನಡಿವಿಡಿದು ।
ಭಂಗವನು ಕಳೆಯೆ ಸುಖವಹುದು ಮನುಜ ॥೯॥

---

೩೩. ಯಾಕಿನ್ನು ಬಳಲಿಸುವೆ ಭವದ ಶರಧಿಯೊಳೆನ್ನ।
ಸಾಕು ಮಾಡಿನ್ನ ಭವ ನೂಕಲಾರೆ ॥ಪ॥

ನಾನಾ ಜನ್ಮದಿ ಬಂದು ನಾನಾವಸ್ಥೆಯಲಿ ಬೆಂದು।
ನಾನಾ ಆಹಾರಗಳ ನಲಿದುಂಡೆನು॥
ಹೀನ ಕರ್ಮಗಳಿಂದ "ನಾನತ್ವ" ವೆಡೆಗೊಂಡು;
ಶುನಿಯ ತಲೆ ಹುಳಿತಂತೆ ತಿರುಗುತಿರ್ಪೆ ॥೧॥

ಸ್ವರ್ಗ ಸುಖವನು ಪಡೆದು ಭರ್ಗನನು ನಾ ಮರೆದು।
ದುರ್ಗುಣದ ಸಂಕುಳದಿ ಎಡೆಯಾಡುತ॥
ಆಗ ಪಿತ ಮಲದಿಂದ ಬೇಗ ಮಾಯ್ಮಲದೊಳು ಕೂಡಿ।
ಬೇಗೆಯನು ಪಡಲಾರೆನೋ ಶಿವನೆ ॥೨॥

ಮಾತೆ ಸೂತಕ ಬಲಿತು ರೋತೆ ಮಲದೊಳು ಹೊರಳಿ।
ಜಾತಕೀಟಕಗಳಿಂದ ನರಳುತಿರಲು॥
ಖತಿಯಿಂದಲಿ ಸೂತಿ ವಾಯುವುಪಟಳದಿಂದ।
ಮಾತೆ ಭಗದೊಳು ನಾನು ಬರಲಾರೆನೋ ಶಿವನೆ ॥೩॥

ಧರಣಿಯೊಳು ಉದ್ಭವಿಸಿ ಸ್ಮರಣೆ ಯೆಂಬುದು ಸೋಗಿ।
ತರುಣಿಯರು ಸೂಡೆನ್ನ ಹಾಕುತಿಹರು॥
ಮರವೆ ಗಾಳಿಯು ಬೀಸಿ ಭರದಿ ರೋಗಗಳ್ ಬಂದು।
ಶರೀರ ಬಾಧೆಗಳಿಂದ ನರಳಲಾರೆ ॥೪॥

ಬಾಲಾವಸ್ಥೆಯು ಎಂಬ ಹದಿನಾರು ವತ್ಸರವು।
ಕಾಲವನು ಕಳೆಯುತ್ತ ತಿರುಗುತಿರಲು॥
ಮೇಲೆ ಯೌವನ ಬಂದು ಸಲ್ಲೀಲೆ ಸತಿಗೂಡಿ।
ಬಲು ಮೋಹದಲಿ ನಾ ಬಳಲಲಾರೆ ॥೫॥

ವರುಷ ನಾಲ್ವತ್ತರಲಿ ವೈದ್ಯಾಪ್ಯ ಕೋರಿ।
ಸಿರಿ ಪೋಗಿ ಬಡತನವು ಒದಗುತಿರೆ॥
ಕರದಿ ದಂಡವ ಪಿಡಿದು ಜ್ವರ ಕೆವುಳ್ಳುಬ್ಬಸವು।
ಭರವಾದ ರೋಗದಲಿ ಬಳಲಲಾರೆ ॥೬॥

ಈ ಮೇರೆ ಇರುವಾಗ ಯಮ ಭಟರು ತಾ ಬಂದು।
ಧಾಮಿಗೆ ಹೇಳದ ತೆರದಿ ಎಳೆಯುತಿರಲು॥
ಕಾಮಹರ ನಿಮ್ಮಡಿಯ ಪ್ರೇಮ ಮರೆಯಹುದೆಂದು।
ಸೋಮೆಕಟ್ಟಿ ಈಶನ ಮರೆಹೊಕ್ಕೆನು ॥೭॥

---

೩೪. ಎತರ ಭಯವಣ್ಣ ನಮಗಿ।
ಆತ ಶ್ರೀಗುರು ಕರುಣದಿ ಕರೆದು ॥
ನ್ಹೇತರ ಭಯವಣ್ಣ।
ಜ್ಯೋತಿ ಲಿಂಗವ ಕರದೊಳಗಿಟ್ಟನು ॥೪॥

ಕಾಮನ ಸೆದ್ದವ ಕರದೊಳಗಿರುತಿರೆ।
ಕಾಮಿನಿ ಭಯಗಳು ನಮಗೇಕೆ ॥
ಸೋಮಧರನು ಎನ್ನ ಪ್ರೇಮದಿ ನೋಡಲು
ಆ ಮಹಾಕಾಲನ ಭಯವೇಕೆ ॥೧॥

ಧರೆಯ ಜನರು ಎಲ್ಲಾ ಪೂಜಿಪ।
ಪರಿಪರಿ ಕಲ್ಲಲ್ಲ ಗುಮಥದಿಂದಲಿ ॥
ಕರತಳಾಮಲಕದ ಪರಿಯಂತೆ।
ಕರದೊಳು ಕಾಣಿಸಿತಲ್ಲಾ ॥೨॥

ಜಾತಿಧರ್ಮದಿಂದ ಪೂಜಿಪ।
ಪ್ರೀತಿಯ ಲಿಂಗಲ್ಲಾ ॥
ಜ್ಯೋತಿಮಯನು ಜಗದೊಳಹೊರಗಿರುತಿಹ।
ಆತ ಬ್ರಹ್ಮವೇ ತಾನಿರ್ದಬಳಿಕ ॥೩॥

ದೊಡ್ಡ ಗುರುವೆ ಸೇರಿ ಅವಗುಣ।
ಗೊಡ್ಡು ಗುರಿಯ ಮಾಡಿ ॥
ಅಡ್ಡಗುಡ್ಡದ ನಟ್ಟನಡುವೆಯು।
ದೊಡ್ಡ ಗುಹೆಯೊಳು ಸೇರಿದ ಮೇಲೆ ॥೪॥

ದ್ವಾರ ನಾಲ್ಕು ಕೂಡಿ ಇರುತಿಹ।
ದ್ವಾರದ ಮಧ್ಯದೊಳು॥
ಧೀರ ಸೋಮೆಕಟ್ಟಿ ಗುರುಯತಿರಾಜನು।
ಪಾರಮಾರ್ಥನ ಮಾಡಿದ ಮೇಲೆ ॥೫॥

---

೩೫. ಶ್ರೀಗುರು ಪೂಜೆಯ ಮಾಡಿದೆ ತಾಗುವ ಭವವನು ನೀಗಿದೆ।
ಯೋಗವು ಆಗಿ ಭೋಗಲಿಂಗದೊಳ್ ಕೂಡಿದೆ ॥೪॥

ಮೂರಾರು ಭಕ್ತಿಯ ಮಾಡಿದೆ। ಸಾರಿ ಉನ್ಮನೆಯೊಳು ತೂರಿದೆ॥
ಮೂರು ನದಿಯ ಸ್ನಾನ ಮಾಡಿದೆ। ಈರೈದು ನಾದವ ಕೇಳಿದೆ ॥೧॥

ಆರು ಬಾಗಿಲ ಮುಚ್ಚಿ ನೋಡಿದೆ। ತೋರುವ ಕಳೆಯೊಳು ಕೂಡಿವೆ॥
ಮೂರು ಮುದ್ರೆಗಳೊಳಾಡುತ ಬೇಗದಿ।ಮೂರೊಂದು ಯೋಗವ ಮಾಡಿದೆ॥೨॥

ಸಾಸಿರದಳ ಪೀಠವೇರಿದೆ। ನಾಸಿಕ ತುದಿಯನು ಸೇರಿದೆ॥
ಸೂಸುವ ವಾಯು ಮನ ದೃಷ್ಟಿಯು ಕೂಡಿ। ಭಾಸುರ ಲಿಂಗವ ಕೂಡಿದೆ ॥೩॥

ತಳಮೇಲು ಚಕ್ರವ ನೋಡಿದೆ। ದಳಗಳು ಎಂಟನು ಕೂಡಿದೆ॥
ಥಳ ಥಳಿಸುವ ನಾಗ ಸೇರಿದೆ। ಕಳೆಯುಳ್ಳ ಜ್ಯೋತಿಯ ಸೇರಿದೆ ॥೪॥

ನಾಲ್ಕು ಹಾದಿಯ ಮಧ್ಯೆ ತೂರಿದೆ। ನಾಲ್ಕೊಂದು ತತ್ವವ ನೀಗಿದೆ॥
ಸಿಲುಕನಳಿದ ಸೋಮೆಕಟ್ಟಿ ಗುರುವ ಸೇರಿ। ನಾಲ್ಕೊಂದು ಮುಖದೊಳು
ನಲಿದಾಡಿದೆ ॥೫॥

---

೩೬. ಬ್ರಹ್ಮವಾಗುವೆವೆಂದು ಬಳಲುವರು ಜಗವೆಲ್ಲ।
ಬ್ರಹ್ಮವಿಲ್ಲದೆ ಜಗದೊಳನ್ಯವಿಲ್ಲ ॥೪॥

ವಾರಿಯೊಳು ವಾರಿ ತಾ ಕೂಡುವಂತೆ।
ಪರಮನೊಳು ಜೀವ ತಾ ಲಯಿಪನೆನಲು ॥
ವಾರಿ ವಾರಿಗೆ ಭೇದವಿಲ್ಲವಾ ಪರಿಯಂತೆ॥
ಪರಮನಿಗೂ ಜೀವನಿಗೂ ಭೇದ ಮುನ್ನಿಲ್ಲಾ ॥೧॥

ಘಟ ಮಠದ ಬಯಲೆಲ್ಲ ಒಟ್ಟು ಗೂಡುವೆನೆಂದು।
ಘಟ್ಟನೆ ಬಳಿವನು ತಾ ಯೆಂಬೋಲು॥
ಸೃಷ್ಟಿ ಹೊರಗೊಳಗೆಲ್ಲ ಒಟ್ಟಾದ ಬಳಿಕೆನ್ನು।
ದಿಟ್ಟ ಮುಕ್ತಿಯ ಎಡೆಗಳಿಲ್ಲದುಂಟೆ ॥೨॥

ತನ್ನ ತಾನೇ ಪಿಡಿದು ಸುರಲೋಕಕ್ಹಾರೆಂದು।
ಬನ್ನಬಡುತಿರ್ಪ ಮಾನವನಂದದಿ ॥
ಅನ್ಯವಿಲ್ಲದೆ ಪೂರ್ಣದಿರವೆ ನೀನಾಗಿನ್ನು।
ನಿನ್ನ ಬೇರೆಲ್ಲಿ ತರುತಿಹೆ ಇದನು ಪೇಳೈ ॥೩॥

ಜಗಭರಿತ ಬಂದ ಜಾಗ್ರತೆ ಕದವ ತೆಗೆ ಯೆನಲು।
ಜಗಭರಿತ ನಾದವನು ಒಳಗಿಲ್ಲವೆ॥
ಜಗದೇಕ ಬ್ರಹ್ಮವಾಗುವೆನೆನೆನಲು।
ನೀನೀಗ ಜಗದ ಏಕತ್ವದೊಳೆ ಜನಿಸಿರ್ಪೆ ತಿಳಿಯೈ ॥೪॥

ಕಪ್ಪು ಹಚ್ಚಿ ದರ್ಪಣವ ನೋಡಲು ।
ಕಪ್ಪು ಬಿಳುಪದು ಮುಖವು ಕಾಣಲಿಲ್ಲ॥
ಒಪ್ಪದಿಂ ಬೆಳಗಲರಿರ್ಪ ಜೀವನ ಗುಣವು।
ಸೊಪ್ಪಳಿದು ಸೋಮೆಕಟ್ಟಿ ಈಶನಾದೆ ॥೫॥

---

೩೭. ಗುರುಪುತ್ರರನು ಕಂಡು ನರರ ಮಾತುಗಳನು ಆಡಬಾರದು।
ಧರೆಯೊಳಗಿರುತಿಹ ತರು ಗುಲ್ಮ ಕಲ್ಲಿಗೆ ಎರಗಬಾರದು ॥೫॥

ನರನಾಗಿ ಜನಿಸಲು ಗುರುವನು ಸೇರದೆ ಇರಲು ಬಾರದು ॥
ಗುರುಕರುಣವಿಲ್ಲದೆ ಬರಿಯ ತಪಗಳ ಮಾಡಬಾರದು ॥೧॥

ಮೋಕ್ಷದಪೇಕ್ಷೆಯಲಿ ಮರಳುತ್ತ ಹಿಮ್ಮೆಟ್ಟಿ ನಿಲ್ಲಬಾರದು ।
ರಾಕ್ಷಸನಂದದಿ ಧಕ್ಷ್ಯಾದಿಗಳ ನೋಡಿ ಬಯಸಬಾರದು ॥೨॥

ಹೆಣ್ಣು ಹೊನ್ನು ಮಣ್ಣು ಮೂರನ್ನು ಮನದೊಳು ಕಚ್ಚಬಾರದು।
ಹುಣ್ಣಿಮೆ ಚಂದ್ರನ ಹಾಂಗೆ ಹೊಳೆಯುವ ಹೆಣ್ಣನು ನೋಡಬಾರದು ॥೩॥

ಅರಿಷಡ್ವರ್ಗಂಗಳ ಉರುಳಿನೊಳಗೆ ಸಿಕ್ಕಿ ಸಾಯಬಾರದು ।
ದುರುಳ ಪಂಚೇಂದ್ರಿಯದಿರವಿನೊಳಗೆ ಮನ ವಿಕ್ಕಬಾರದು ॥೪॥

ಬೋಧವು ಇಲ್ಲದೆ ವೇದವನೋದಬಾರದು ।
ಪೋದದಿ ದಶನಾದ ಕಿವಿಯೊಳು ಕೇಳದಿರಬಾರದು ॥೫॥

ಸಾಧಿಸಿ ಗುರುವನು ಮನದೊಳು ಸ್ಮರಿಸದೆ ಇರಲು ಬಾರದು ।
ಗಾದೆಯ ಮಾತಿಲಿ ವೇದಾಂತಿಗಳ ಕೂಡೆ ವಾದಿಸಬಾರದು ॥೬॥

ಸಾಧನೆಯಿಲ್ಲದೆ ಬರಿಯ ವೈರಾಗ್ಯವನಾಡಬಾರದು ।
ಓದಿದ ಅರ್ಥವು ತಿಳಿಯದೆ ಬಾಯೊಳು ಬೊಗಳಬಾರದು ॥೭॥

ಬರಿಯ ಸತ್ಕರ್ಮದಿ ಮನವನು ಇಕ್ಕುತ ಸಾಯಬಾರದು ।
ತಿರುಗಿ ತಿರುಗಿ ಯಮಪುರದೊಳು ಕೊರಗುತ ಇರಲಿ ಬಾರದು ॥೮॥

ಸೋಮೆಕಟ್ಟೆ ಈಶ ಸ್ವಾಮಿಯ ಪಾದವ ಮರೆಯಬಾರದು ।
ನಾಮ ವಿದೂರ ನೀನೆಂದು ನಂಬದೆ ಇರಲು ಬಾರದು ॥೯॥

---

೩೮. ಗಾಢ ತಿಳಿಯೊ ನೀನು ಇರುತಿಹ ಗೂಢ ಬ್ರಹ್ಮವನ್ನು
ಕಾಡುವ ಮಾಯೆಯ ಝಾಡಿಸಿ ಒದೆದು। ರೂಢಿ ಸೋಮೇ
ಗುರುವನು ಹಿಡಿದು ॥೫॥

ಆರು ಮೂರು ಮೀರಿ ಇರುತಿಹ ಮೂರು ದಾರಿ ಯೇರಿ ।
ಸಾರಿ ಉನ್ಮನೆಯೊಳು ತೂರುತ ಬೇಗದಿ ಈರೈದು ನಾದವ ಸೇರಿ ॥೧॥

ಆರು ನಾನು ಎಂದು ಬೇಗದಿ ಚಾರು ಗುರುವನಂದು ।
ಸೇರುತ ಷಣ್ಮುಖಿ ತೋರುವ ಕಳೆಯೊಳು ಸಾರಿಯು ಮನವದು ನಿಂದು ॥೨॥

ಅಷ್ಟ ಮದಗಳಟ್ಟಿ ಇರುತಿಹ ಷಷ್ಠಿ ಚಕ್ರ ಮೆಟ್ಟಿ ।
ಭ್ರಷ್ಟ ಇಹ ಪರವೆರಡನು ಬಿಟ್ಟು ಅಷ್ಟ ದಳದ ಮಧ್ಯೆ ಮನವದು ನೆಟ್ಟು॥೩॥

ಪಂಚ ಪಂಚಕವಳದು ಇರುತಿಹ ಪ್ರಪಂಚವೆಲ್ಲವನಳಿದು ।
ಪಂಚತತ್ವವ ಗೊಂಚಲಿನಲ್ಲಿ ಮಿಂಚಿನ ಮನೆಯೊಳು ಕಂಚಿನ ತೆರದಿ ॥೪॥

ತತ್ವವೆಲ್ಲ ಕಳೆದು ಉಳಿಮೆಯ ತತ್ವವಾವುದೆನಲು ।
ಕರ್ತೃ ಸೋಮೆಕಟ್ಟಿ ಕರಿವೃಷಭಾರ್ಯನೆ ತತ್ವಸಾಕ್ಷಿ ತತ್ವವು ತಿಳಿಯೈ ॥೫॥

---

೩೯. ತಿಳಿದು ನೋಡಿರಣ್ಣ ತತ್ವದ ಇರವ ಕೂಡಿರಣ್ಣ ॥ಪ॥

ಕಪ್ಪುರಾಗ್ರದಲ್ಲಿ ಇರುತಿಹ ಮುಪ್ಪುರದೊಡೆಯನನು ॥
ಒಪ್ಪದಿಂದ ಗುರುಕರುಣವ ಪಡೆದು ಇಪ್ಪ ಸ್ನಾನವ ಮಾಡುತ ಬೇಗದಿ ॥೧॥

ಅಷ್ಟದಳದ ಮಧ್ಯೆ ಇರುತಿಹ ಸೃಷ್ಟಿಗೊಡೆಯನನ್ನು ।
ಅಷ್ಟ ತನುವು ಕೂಡಿ ಪಟ್ಟಣವಾಗಿಹ ಅಷ್ಟ ವರ್ಣದ ದ್ವಾರಕಿ ಪುರದಿ ॥೨॥

ಮೂರು ಮುದ್ರೆಯಲ್ಲಿ ತೋರುವ ಸೂರ್ಯಚಂದ್ರರಲ್ಲಿ ।
ನಾರಿಯರಿಬ್ಬರುತೋರುವಸ್ಥಲದೊಳು ಮೀರಿದಜ್ಯೋತಿಯ ಸೇರುತಸೀವು॥೩॥

ನೀರಿನ ಕೊಳದಲ್ಲಿ ಇರುತಿಹ ಪೂರ್ಣ ಜ್ಯೋತಿಯಲ್ಲಿ
ಸೇರುತ ಮನವದು ಓರೆ ಆಗದಿರೆ ನಾರಿ ರತ್ನದ ಹಾಂಗೆ ತೋರುವುದು ॥೪॥

ಮರವೆ ಕಳೆದು ಅರಿವೆ ಆಗುತ ಪರವು ಸೋಮೆಕಟ್ಟಿ ಕರಿವೃಷಭಾರ್ಯನ ।
ಚರಣಕಮಲವ ಬರಿಯ ಬಯಲೊಳು ಬೆರೆಯುತ ನೀವು ॥೫॥

---

೪೦. ಏತಕಿನಿತು ರೋತೆ ಬಾಳು । ಪ್ರೀತಿಯಿಂದ ಆತ ಗುರುವ
ನೀತಿವಿಡಿದು ತಿಳಿದು ನೋಡು ಖ್ಯಾತನಾಗುವೆ ॥ಪ॥

ಕಾಶಿಯಾತ್ರೆ ಮಾಡಬೇಡ ವೇಷವನ್ನು ಧರಿಸಬೇಡ।
ದಾಸಿಯಂದದಿ ಕಾಸಿಗೆಲ್ಲ ದೇಶ ದೇಶ ತಿರುಗಬೇಡ ॥೧॥

ನೀರ ಮುಳುಗಿ ಗಾರು ಆಗಿ ಧಾರುಣಿಯೋಳ್ ಪ್ರತಿಮೆ ಪೂಜೆ।
ಸೇರಿ ಯಮನ ಪುರದಿ ನೀನು ಸಾರಿ ಸಾರಿ ತಿರುಗಬೇಡ ॥೨॥

ಯಜ್ಞ ಕರ್ತೃ ನೀನೆಯಾಗಿ ಭಗ್ನ ಭವದ ಯಾಗ ಮಾಡಿ।
ಸ್ವರ್ಗದಲ್ಲಿ ಸುಖವ ಪಡೆದು ಮಗ್ನವಾಗಿ ಕೆಡುವೆ ಮೂಢ ॥೩॥

ಮೂರು ಮಲಗಳೊಳಗೆ ಬಿಲ್ಕಿ । ನಾರಿಯೊಡನೆ ಕೂಡಿ ಇರ್ದು।
ಧಾರುಣಿಯನೆಲ್ಲ ತಿರುಗಿ । ಧೀರ ರೋಗದಿ ಕೆಡಲುಬೇಡ ॥೪॥

ಮೇಕೆಯಂದದಿ ಗಿಡವ ಹತ್ತಿ ಆಕೆವಾಳ ಪತ್ರೆಯೆತ್ತಿ।
ಏಕೋನಾಥನ ಮರೆದು ನೀನು ಈಕೆ ಮಾಯೆಯೊಡನೆ ಕೂಡಿ ॥೫॥

ಮತ್ತೆ ಮೂರು ವೇಳೆಯುಂಡು ಅಪ್ತಮಯದಿ ಪೂಜೆ ಮಾಡಿ।
ಕತ್ತೆಯಂತೆ ಇಹಕೆ ಪರಕೆ ಸುತ್ತಿ ಸುತ್ತಿ ಕೆಡಲಿಬೇಡ ॥೬॥

ಕರ್ಮವನ್ನು ಕಳೆಯಲಿಲ್ಲ ಮರ್ಮವನ್ನು ತಿಳಿಯಲಿಲ್ಲ।
ಕರ್ಮಿ ನೀನು ಕೂರ್ಮನಂದದಿ ಉರ್ವಿಗಾತ್ರ ಪಡೆದೆ ಗಾಢ ॥೭॥

ನಾಡ ಮಾತನೆಲ್ಲ ಕಲಿತು ಗೂಢ ಬ್ರಹ್ಮವ ಮರತೆ ನೀನು।
ಖೋಡಿ ಭವದಿ ಬರುವೆಯಲ್ಲ ಮಾಡು ಆತ್ಮ ಪೂಜೆ ಗಾಢ ॥೮॥

ವೇದವನ್ನು ಓದಿ ಪಾಡಿ ಬಾಧೆ ಭವವ ನೀಗಿ ನೋಡಿ।
ಆದಿ ಸೋಮೆಕಟ್ಟಿ ಗುರುವ ಬೋಧವನ್ನು ಬೇಡಿ ಬೇಡಿ ॥೯॥

---

೪೧. ಕಂಡೆನು ಗುರುವರನ ।ಎನ್ನಭವ ದಂಡಲೆ ಪರಿಹರನ ॥ಪ॥

ಹರಿಯುಮ ಸುರರೆಲ್ಲರು ಕಾಣದ ಗುರುಪರಮಪಾವನಮೂರ್ತಿಯ।
ಪರಮವೈರಾಗ್ಯವೆನ್ನೊಳು ನೆಲೆಗೊಂಡುಗುರುವರಪಡಿಯನ್ನು ಕಂಡೆಕಂಡೆ॥೧॥

ಭಕ್ತಿಮೂರಾರ ಮೀರಿ ತೋರುವಮಹಾಯುಕ್ತಿ ಮರ್ಮವನು ತೋರಿ।
ಮುಕ್ತಾಮುಕ್ತಿ ಮುಕ್ತನಾದ ವಿರಕ್ತನ ಚರಣವ ಶಕ್ತಿರಹಿತ
ಮುಮುಕ್ಷುತ್ವದಿ ಕಂಡೆ ॥೨॥

ಜ್ಞಾನವಾವುದೆಮೆಟ್ಟಿದ ಸುಜ್ಞಾನವ ತೋರಿದ
ಜ್ಞಾನಾಜ್ಞಾನ ನಾನು ನೀನೆಂಬುವ ಭಾವವು ತೋರದೆ
ತಾನುತಾನು ತಾನಾದ ಗುರುವ ॥೩॥

ಕಂಡೆಕಂಡೆನು ಉದ್ದಂಡಗುರುವನ ಖಂಡ ಬ್ರಹ್ಮನೆ
ನಿಜಗೊಂಡಮೂರುತಿಯ ।
ಮಂಡಲ ಮೂರರ ಮಧ್ಯದಿ ತೋರುವ ಕೆಂಡಗಣ್ಣೊ
ಡೆಯನು ಕಂಡೆ ನಾ ಕಂಡೆ ॥೪॥

ಮನ್ನಿಸಿ ಕರೆದೆನ್ನನು "ನಿನ್ನ ನೀನೆ ಚನ್ನಾಗಿ ತಿಳಿ" ಎಂದನು ।
ಉನ್ನತ ಸೋಮೆಕಟ್ಟೆ ಈಶನ ಎನ್ನೊಳು ಭಿನ್ನವಿಲ್ಲದೆ
ಕಂಡು ನಿಬ್ಬೆರಗಾದೆನು ॥೫॥

---

೪೨. ಹೋಗಿ ನೋಡುವ ಬನ್ನಿರಿ ಶ್ರೀಗುರುವರನ
ಹೋಗಿ ನೋಡುವ ಬನ್ನಿರಿ ॥ಪ॥

ಹೋಗಿ ನೋಡುವ ಬನ್ನಿರಿ ಯೋಗಿಚರಣವ ।
ರಾಗರಹಿತ ಗುರು ನಾಗಭೂಷಣನನ್ನು ॥೧॥

ಪಾದ ಬಾಹ್ಯದಿ ಪವಳ ವೇದಾದಿ ಬ್ರಹ್ಮವು ।
ಬೋಧಮಯನು ಗುರು ಆದಿಯ ರುದ್ರನ ॥೨॥

ಗುರು ಎಂಬ ವಾಕ್ಯವು ಹರನ ಮಂತ್ರದ ಮೂಲ
ಗುರುಪಾದ ಧ್ಯಾನವೆ ಪರಮಪದವಿ ಮೂಲ ॥೩॥

ಗುರುಪಾದವನು ಕಂಡು ಅಂವಿನಿಂ ಕೂಡಲು ।
ಸ್ಥಿರಮುಕ್ತಿ ಪದವಿ ಜೆರೆದು ನೋಡುವ ಬನ್ನಿರಿ ॥೪॥

ಧ್ಯಾನಧಾರಣವೆಂಬ ವಸೌನ ಸೋಮೆಕಟ್ಟೆ ।
ಜ್ಞಾನಿಯ ಕೂಡಲು ನೂನದಿ ಸಾಮದಿ ॥೫॥

---

೪೩. ಕುಶಲ ಕೈಲಾಸ ಈಶನೆ । ಎನ್ನಸುವಿನೊಳು ವಾಸ ॥ಪ॥

ಅಸಮ ಭಕ್ತರ ಮನದ ವಾಸನೆ । ಕುಶಲ ಭಕ್ತಿಯ ತೋರಿ ಎನ್ನನು।
ವಸುಮತಿಯೊಳು ಸುವರ್ಣಪುರದಿ ಜಸವಡೆದಿಹ ಈಶಾಧೀಶ ॥೧॥

ಅಷ್ಟ ತನುವದು ಕೂಡಿದ ಮಹಾ ಪಟ್ಟಣದಿ ನೀನಿರ್ದೆ ದೇವ।
ಅಷ್ಟ ಮದಗಳ ನಷ್ಟ ಮಾಡಿದ ಶ್ರೇಷ್ಠ ಗುರುವರ ಶೇಷ ವಾಸ ॥೨॥

ಅಜಹರಿಯು ಸುರಪ ವಿವಿಜರು ಗಜಮುಖನು ನರನಾಗ ಕಿನ್ನರ॥
ಭಜಿಸಿ ಕಾಪಾಡುತ ವರವ ಬೇಡುತ ಅಜಗಣಾದಿಗಳೆಲ್ಲ ಭಜಿಪರು ॥೩॥

ಮೂರು ಮಂಡಲ ಮಧ್ಯೆ ತೋರುವ ಮೂರು ಕಣ್ಣ ದೇವ ನಿಮ್ಮಯ॥
ಮೂರು ಆತ್ಮರ ಮೂಲ ಕರ್ತನೆ ಮೂರು ರೂಪು ತೋರು ತೋರು ॥೪॥

ಆ ಮಹಾ ಉನ್ಮನೆಯ ವಾಸನೆ ಸೋಮಶೇಖರ ಸಲಹು ಈಶನೆ।
ಸೋಮೆಕಟ್ಟೆ ವಾಸ ವಾಸಪ್ರೇಮ ಸದ್ಗುರು ಸಲಹು ಸಲಹು ॥೫॥

---

೪೪. ಶ್ರೀಗುರು ಬಸವಲಿಂಗ। ಧಾಮ ನುತ ಜನಸಂಗ।
ಸ್ವಾಮಿ ನೀ ಎನ್ನ ವಾಙ್ಮನದಿ ನಿಂದು
ಪ್ರೇರಣೆಯ ಮಾಡಿ ನೀಂ। ಬಾಲಕರ ತೊದಲ್ನುಡಿ।
ಯ ಲಾಲಿಸಿ ಪಾಲಿಪುದು ಶರಣು ಶರಣು ॥ಪ॥

ತಂದೆ ಗುರು ರಾಜಪ್ಪ ಇಂದುಧರ ರುದ್ರೇಶ।
ಹೊಂದಿದಾ ಜಂಗಮವು ಪ್ರಭು ಚನ್ನಬಸವ॥
ಇಂದಿವರ ಬಲವಿರಲು ಮುಂದೆನಗೆ ಜನ್ಮದ।
ದಂದುಗಗಳೇನಿಲ್ಲವೆಂದಿರ್ದೆನು ॥೧॥

ಬಲ್ಲವರು ಬಾಲ್ನುಡಿಗಳಲ್ಲೇ ತಪ್ಪಿರ್ದೊಡಂ।
ತಳ್ಳಿಹಾಕದೆ ಮತ್ತೆ ಒಳ್ಪೆನಿಸಿ।

ಮೆಲ್ಲಡಿಯ ಕರುಣವನು ನಿಲ್ಲದೆ ಪಾಲಿಪುದು।
ಎಂದೆಲ್ಲ ಶಿವಶರಣರಿಗೆ ಎರಗಿ ಬಾಳ್ವೆ ॥೨॥

ಹಿಂದಣ ಭವಗಳು ಸಂದು ಹೋದುವು ಬಹಳ ಮುಂದೆ।
ನಿನ್ಮಯ ಕಂದನೆಂದು ತಿಳಿದು॥
ಇಂದು ಸೋಮೇಕಟ್ಟೆ ಕರಿವೃಷಭ ಲಿಂಗದೋಳ್।
ಹೊಂದಿದ ಪದವಿತ್ತು ಸಲಹುದೆನ್ನ ॥೩॥

---

೪೫. ಆಶ್ಚರ್ಯವಾಯಿತಲ್ಲ। ನಮಗೊಂದು ನಿಶ್ಚಯವು ತೋರಿತಲ್ಲ।
ಸಚ್ಚಿದಾನಂದೈಕರಸವೆ ವಿಗ್ರಹವಾಗಿ ಎಚ್ಚರವ ಕೊಟ್ಟಿತಲ್ಲ ॥ಪ॥

ಯಾಕಿನ್ನು ಮರವೆ ನಿಮಗೆ ವ್ಯವಹಾರ ಲೋಕದಂತಾಯಿತೆಂದು।
ಈ ಶುಕ್ಲವತ್ಸರದ ಪುಷ್ಯೋತ್ತರ ನಾಲ್ಕನೆಯ ಶುಕ್ರವಾರದ ರಾತ್ರಿಲಿ ॥೧॥

ರಾಜೋಟದೇವ ಬಂದು ವಾಚಕ್ಕೆ ಗೋಚರವಾಗಿಸೂಚಿಸಿದಕಥದಿಂದ।
ನಮಗಾಯಿತೀ ಹುಚ್ಚು ಈಚೆ ಜನ ಬಲ್ಲರೇನೊ ॥೨॥

ಪರಮ ಪ್ರಕೃತಿಯ ಸ್ಪರ್ಶದಿ ಅಂಧಕನು ಕುರುಹು ತೋರಿದ ತೆರದಲಿ।
ಅರಿವು ಮರವೆಯ ಸಂಗದಿಂದೊಗೆದ ಶರೀರವಿದನರಿದ ಮಾತ್ರವೆ ನಾಶವು ॥೩॥

ಮರವೆ ಮೋಡಗಳೆಲ್ಲವು ತಾವ್ಹೊಡಿ ಅರಿವು ರವಿ ಕಾಣಗೊಡದಾ
ತೆರನಂತೆ।
ಪರಿಪರಿಯ ವಿಧವಾದ ಸಂಸಾರ ಪರಿಹರವ ಮಾಡೆನುತಲಿ ॥೪॥

ಯಾಕಿನ್ನು ನಾವಕಾಶವು। ಲೌಕಿಕದ ಬಾಕಿ ಇನ್ನೇನು ನಮಗೆ।
ಸ್ವೀಕರಿಸಿ ನೀ ಸೋಮೇಕಟ್ಟೆ ಕರಿವೃಷಭೇಂದ್ರ ಲಿಂಗದೊಳೇಕವಾಗೆಂ
ದೊರೆದನು ॥೫॥

---

೪೬. ಏಕಾಂತ ಸೇರಲಿಬೇಕು ನಾವಿನ್ನು ಮೂಕರಾಗಲಿಬೇಕು।
ಏಕಾತ್ಮ ಧ್ಯಾನದೊಳು ಬಾಲಲೀಲೆಯ ಧರಿಸಿ ಭವಾರಣ್ಯ ದಹಿಸಬೇಕು ॥ಪ॥

ಇಷ್ಟವನು ಪೂರೈಸಿರೋ ಲೌಕಿಕದ ಗೋಷ್ಠಿಯನು ಬಿಡಿಸಿರಯ್ಯ।
ಶ್ರೇಷ್ಠ ಪರಶಿವ ನಿಮಗೆ ಭಕ್ತಿ ಜ್ಞಾನೈಶ್ವರ್ಯ ಎಷ್ಟು ಬೇಡಿದರೀವನು ॥೧॥

ನಿಮ್ಮ ಭಕ್ತಿಯ ಪಾಶವು ಚರಣಗಳ ಚನ್ನಾಗಿ ಬಿಗಿದಿರ್ಪುದು।
ಇನ್ನೆಲ್ಲೂ ಲಕ್ಷಿತ್ತ ಚರಿಸದಂತೆ ನಿಮಗೆ ಸಂಚಿತ ರೂಪಾದವು ॥೨॥

ಮುಕ್ತ ಬಂದಲ್ಲಿ ನಿಮಗೆ ಪೇಳುಪೊಡೆ ವಿರಕ್ತಿ ಮುಂದರಿವುದೆನುಗೆ।
ನೋಡುಪೊಡೆ ಬಾಲ್ಯದಲಿ ಬಹಳ ಭ್ರಮೆಯಿರುವಂತೆ ತೋರದೇಹವು ಕಾ
ಣ್ಬುದು ॥೩॥

ಕಾಯ ವಾಚವು ಮಾನಸ ಮೂರರೊಳು ತಾನೇ ಶಿವನಿರ್ಪನಾಗಿ।
ಬಾಯ ಮನ್ನಣೆಯಲ್ಲ ಲೋಕವ್ಹಂಗಿಗನಲ್ಲ ಪರಶಿವನು ತಾನೆ ಬಲ್ಲ ॥೪॥

ಒಂದು ತಿಂಗಳು ಪಾಯಿದೆ ನಮ್ಮನಿಮಗೆ ಎರಡು ತಿಂಗಳು ಆಗಲು।
ಬಂಧರಹಿತನು ಸೋಮೇಕಟ್ಟೆಕರಿವೃಷಭೇಂದ್ರ ಎಂದಿಗೂದೊರೆಯ
ನೋಡಿ ॥೫॥

---

೪೭. ನಾಪಾದರೂ ಹೋಗುತೇವೆ ನೀವಾದರೀದೇ
ಪವೇನಾದರೂ ಮಾಡಿಕೊಳ್ಳಿ ನಮಗೇತಕೆದರ ಸಂಗ ॥ಪ॥

ದೇಹಬಿಟ್ಟು ಹೋದರೆಂಬ ಭಾವವ ಮಾಡಬೇಡಿ
ದೇಹಗೇಹವು ಬ್ರಹ್ಮಾಂಡದೊಳಹೊರಗೆಲ್ಲ ॥೧॥

ಎಲ್ಲವೂ ನಾವೆಯಾಗಿ ಎಲ್ಲಕ್ಕೂ ಸಾಕ್ಷಿಯಾಗಿ।
ಎಲ್ಲೆಲ್ಲಿ ನೋಡಿದರಲ್ಲಲ್ಲಿ ನಾವೆಯಾಗಿ ॥೨॥

ಸ್ವರ್ಗ ಮರ್ತ್ಯವು ಭರ್ಗ ಲೋಕಾಪೇಕ್ಷಿತರಲ್ಲ
ಭರ್ಗೋದೇವನೆ ಸಾಕ್ಷಿ ನಿರ್ಗುಣಾನಂದದೊಳು ॥೩॥

ಧರೆಯೊಳು ಮುಕ್ತಿಕಪುರಿ ಪರಮ ಸದ್ಭಕ್ತರಿಷ್ಟ।
ಇರುವ ನಿಮಿತ್ತದಿಂದ ಪರಿವ ಸಮಾಧಿಯೊಳು ॥೪॥

---

೪೮. ತಿರುಗಲಾರೆವೋ ನಾವು ನೊರಗಲಾರೆವೊ ॥ಪ॥

ತಿರುಗಿ ತಿರುಗಿ ಪರರ ಬೇಡಿ ಕರಗಿ ಕೊರಗಿ ಸಾಯಲಾರೆ।
ಪರಮ ಗುರುವೆ ನಿಮ್ಮ ಕರುಣದಿರವಿನೊಳಗೆ ಇರಿಸಿ ಸಲಹೊ ॥೧॥

ಎಷ್ಟ ಜನ್ಮವಾಯ್ತೊ ಹುಟ್ಟಿ ಸೃಷ್ಟಿಯೆಲ್ಲವನ್ನು ತಿರುಗಿ।
ಹೊಟ್ಟೆಹೊರೆದುದಲ್ಲದಿಹದೊಳಷ್ಟು ಸುಖವು ಕಾಣಲಿಲ್ಲ ॥೨॥

ಧರೆಯೊಳೀ ಮುಕ್ತಿಕಪುರದಲಿರುವ ಸೋಮೆಕಟ್ಟೆ
ಕರಿವೃಷಭಲಿಂಗದಲ್ಲಿ ಬೆರಸಿ ಹೋಗುತೇವೆ ॥೩॥

---

೪೯. ತಿಳಿದುದನು ಪೇಳ್ವೆ ಬಲ್ಲವರು ಲಾಲಿಸಿ ನೀವು।
ಇಳೆಯೊಳಾದಿಗೆ ಆಧಾರವಾದುದನು ॥ಪ॥

ಸತಿಪತಿಗಳಿಲ್ಲದೆಯೆ ಉತ್ಪತ್ತಿಯೊಂದಾಯ್ತು।
ಮತಿಗಶಕ್ಯವು ಅದರೋಳ್ಮೊಳಕೆ ಮೂರಾಯ್ತು।
ಅತಿಯಾಗಿ ಬೆಳೆದಂಥ ಮೊಳಕೆ ವಿವರವ ಪೇಳ್ವೆ।
ಗತಿಯು ಬಯಸುವರೆಲ್ಲ ಲಾಲಿಸಿ ತಿಳಿದು ನೋಡಿ ॥೧॥

ಮೊದಲ ಮೊಳಕೆಗೆ ಐದು ವಿಧವಾದ ಕೊನೆಯಾಯ್ತು।
ಅದರೊಳಗೆ ಹುಸಿ ಕಾಯಿ ವಿಧಿಸಿದರೆ ದಿಟವಾಯ್ತು ॥

ಮುದವಲರಿ ಮೋಕ್ಷಪಡೆಯುವರೆಲ್ಲ ಇದನರಿತು।
ಒಡೆದು ಕಳೆಯಿರಿ ಭವದ ಬಂಧವನು ॥೪॥

ನಡುವಣ ಮೊಳಕೆಗೆ ಬುಡದಂತೆ ಎಲೆ ನಾಲ್ಕು।
ಕಡೆಯ ಮೊಳಕೆಗೆ ನಾಲ್ಕು ಬುಡವಾಗಿ ಇರುತಿಹುದು ॥
ನಡುವಣ ಮೊಳಕೆಯೆ ಕಡೆದಿಹುದು ಇವು ಮೂರ
ಒಡೆನಾದವ ಸೋಮೆಕಟ್ಟೆ ಕರಿವೃಷಭ ॥೩॥

---

೫೦. ತರಳೆ ಬೇಗದಿ ತಂದು ತೋರೆ। ತಾರಕವ ಬೋಧಿಸಿದನ।
ತಾರಕವ ಬೋಧಿಸಿದನ। ಶ್ರುತಿಸಾರದಮೃತವ ಎರೆದನಾ ॥ಪ॥

"ಪರಮ ಅನುಭವಬೋಧೆ" ಬೋಧಿಸಿ ಕರಣದೊಳಹೊರಗಿರ್ದನ।
ಶರಣ ಜನರ ಹೃದಯಕಮಲದಿ ನಿರುತ ಗೀತವ ಪಾಡುವನ ॥೧॥

"ಅನುಭವದ ಸಾರ" ವನು ಎರೆದು ಮನದ ಮಲಿನವ ತೊಳೆದನಾ।
ಅನವರತ "ವಿವೇಕಚಿಂತಾಮಣಿ" ಯನ್ನೊಳಗಿಟ್ಟನ ॥೨॥

"ಪಾರಮಾರ್ಥ ಪ್ರಕಾಶಿಕೆ" ಯೊಳಿನ್ನ ಪರಮಜೀವರ ಕೂಡಿದನ।
ಧೀರ ಕೈವಲ್ಯವನು ಪಡೆಯುವ ಸಾರ ಪದ್ಧತಿ ಪೇಳ್ದನ ॥೩॥

ಶಂಭುರೂಪವನಿಂಬುಗೊಂಡು ಕುಂಭಿನಿಯೊಳ್ ನಿಂದಿರುವನ।
ಹಂಬಲಿಸುತಿಹ ಯೋಗಿಜನಕೆ ಚಿದಂಬರವೆ ತಾನಾದನ ॥೪॥

ಸೋಮೆಕಟ್ಟೆಯ ನೇಮಸ್ಥಲದೊಳು ಕಾಮಿಸೆ ನಗೆಯು ಒಲಿದನ।
ನಾಮರೂಪು ಕ್ರಿಯೆಗಳಿಲ್ಲದ ನಿಸ್ಸೀಮ "ನಿಜಗುಣ" ಧಾಮನ ॥೫॥

ಪುರಾಣ ಪ್ರವಚನ

(ಲೇಖಕ:— ಸಮಾಜ ಸೇವಕ)

ಭರತಖಂಡದ ಜನಸಾಮಾನ್ಯರನ್ನೆಲ್ಲ ಅಕ್ಷರಜ್ಞರನ್ನಾಗಿ ಮಾಡುವದು ಸುಲಭಸಾಧ್ಯವಾದ ಮಾತಲ್ಲ. ಯುಗಯುಗಾಂತರಗಳಿಂದಲೂ ಇಂಥ ಸಾಹಸದ ಕಾರ್ಯಕ್ಕೆ ಯಾರೂ ಕೈಹಾಕಿಲ್ಲ. ಅಕ್ಷರ ಜ್ಞಾನವು ಯಾವಾಗ್ಯೂ ಅಲ್ಪ ಸಂಖ್ಯಾಕ ಜನರ ಸೊತ್ತಾಗಿರುವದು. ಬಹು ಜನರು ಅಕ್ಷರ ಶತ್ರುಗಳಾಗಿದ್ದರೂ ಧರ್ಮ, ನೀತಿ, ಕಲಾಕೌಶಲ್ಯ, ವ್ಯವಹಾರ ಜ್ಞಾನ, ಉದ್ಯೋಗ, ಸಾಹಿತ್ಯ ಮೊದಲಾದ ವಿಷಯಗಳ ಬಗ್ಗೆ ಅವರಿಗೆ ನಾನಾಮುಖಗಳಿಂದ ಶಿಕ್ಷಣವು ದೊರೆಯುತ್ತಿದ್ದಿತು. ಈಗಿನಂತೆ ಶಾಲೆಗಳಲ್ಲಿಯೇ ಅವುಗಳನ್ನು ಕಲಿಸಬೇಕೆಂಬ ನೇಮವೇನೂ ಇದ್ದಿದ್ದಿಲ್ಲ. ವ್ಯವಹಾರೋದ್ಯೋಗ ಕಲಾಕೌಶಲ್ಯಗಳಂತೂ ಸಂತಾನಪರಂಪರಾಗತವಾಗಿ ನಡೆಯುತ್ತ ಬಂದಂಥವುಗಳಾಗಿರುತ್ತವೆ. ಧರ್ಮ ನೀತಿ ಸಾಹಿತ್ಯ ವಿಷಯಗಳು ಗುಡಿ, ಮಠ, ತೀರ್ಥಕ್ಷೇತ್ರ ಮುಂತಾದ ಪವಿತ್ರ ಸ್ಥಳಗಳಲ್ಲಿ ಪ್ರಚಾರಕರಿಂದ ಪದೇಪದೇ ಸಾಗಿಸಲ್ಪಡುತ್ತಲಿವೆ. ಜನರು ಅಕ್ಷರಜ್ಞರಾಗಿ ಗ್ರಂಥಗಳನ್ನೋದಿ ವಿವಿಧ ವಿಷಯ ಜ್ಞಾನವನ್ನು ಮಾಡಿಕೊಳ್ಳದೆ ಶ್ರವಣ ಮಾತ್ರದಿಂದಲೇ ಅನೇಕ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದರು. ಈ ಮೇರೆಗೆ ಲಾವಣಿ, ಹಾಡಿಕೆ, ದಾಸರ ಪದ, ತತ್ವಪದ (ಏಕದಾರಿ), ಗೊಂದಲಿಗರ ಕಥೆ, ಬೈಲಾಟ, ಪುರಾಣಪುಣ್ಯಕಥೆ, ಕೀರ್ತನಪ್ರವಚನ ಮುಂತಾದವುಗಳು ನಿರಕ್ಷರ ಕುಕ್ಷಿಗಳಾದ ಜನರಿಗೆ ಪ್ರಾಪಂಚಿಕ ಪಾರಮಾರ್ಥದ ಜ್ಞಾನವನ್ನೊದಗಿಸಿಕೊಟ್ಟು ಅವರಿಗೆ ಮನೋರಂಜನೆಯನ್ನುಂಟು ಮಾಡುವದಲ್ಲದೆ ಅವರನ್ನು ಸನ್ಮಾರ್ಗಕ್ಕೆ ಹಚ್ಚುತ್ತಿದ್ದವು. ಕೇವಲ ಶ್ರವಣ ಮಾತ್ರದಿಂದ ಸಾಮಾನ್ಯ ಜನರು ರಾಮಾಯಣ ಮಹಾಭಾರತ ಕಥೆಗಳನ್ನೆಲ್ಲ ಅರಿತುಕೊಂಡಿರುವರು. ಎಷ್ಟೋ ಜನರು ನೆನಸಿನ ಶಕ್ತಿಯಿಂದ ಬಹು ಉದ್ದುದ್ದವಾದ ಹಾಡುಗಳನ್ನು ಕಂಠೋಕ್ತವಾಗಿ ಹಾಡಿ ಜನರನ್ನು ಮನರಂಜಿಸುತ್ತಿರುವರು. ಅದರೆ ಸುಶಿಕ್ಷಿತರ ಜ್ಞಾನವು ಪುಸ್ತಕಗಳಲ್ಲಿರುವದಷ್ಟೇ ಅಲ್ಲದೆ ತಲೆಯಲ್ಲಿಲ್ಲ. ಅಕ್ಷರಜ್ಞರಾಗಿ ಸ್ಮರಣಶಕ್ತಿಯನ್ನೂ, ಶರೀರ ಸಾಮರ್ಥ್ಯವನ್ನೂ, ಆಧ್ಯಾತ್ಮಿಕೋನ್ನತಿಯನ್ನೂ ಪಡೆಯದಿದ್ದರೇನು ಪ್ರಯೋಜನ?

ನಿರಕ್ಷರಿಯಾಗಿ ರಂಥಿಯಂತೆ ಪುರಾಣ ಪ್ರವಚನಾದಿಗಳ ಮೂಲಕ ಇಹಪರ ಸುಖವನ್ನೀವ ವಿಷಯಗಳನ್ನು ತಿಳಿದುಕೊಂಡು ಸುಖಿಸುವದು ಲೇಸಲ್ಲವೇ ?

ಆದರೆ ಕಾಲಗತಿಯು ವಿಚಿತ್ರವಾದುದು! ಪುರಾಣ ಕೀರ್ತನಗಳೇನೋ ಜನ ಸಾಮಾನ್ಯರಲ್ಲಿ ಭಕ್ತಿ ಭಾವನೆಗಳನ್ನುಂಟು ಮಾಡಲಿಕ್ಕೆ ಏರ್ಪಟ್ಟ ಸಾಧಗನಳು ನಿಜ. ಆದರೆ ಈಗಿನ ಕಾಲದಲ್ಲಿ ಅವು ಸ್ವಾರ್ಥಕಲಹ, ವ್ಯಾಜ್ಯ, ಕೋರ್ಟ ಕಚೇರಿ, ಒಡಕು, ಬಣಗಳು ಇವೇ ಮೊದಲಾದ ಕ್ಷುದ್ರ ವೃತ್ತಿಯ ಕೆಲಸಗಳಿಗೆ ಇಂಬುಗೊಟ್ಟಿರುವವು. ನಿಸ್ವಾರ್ಥದಿಂದ ಮಾಡುವ ಕೆಲಸಗಳೆಲ್ಲವೂ ಸುಸೂತ್ರವಾಗಿಯೇ ಸಾಗುವವು. ಆದರೆ ಸ್ವಾರ್ಥದ ಅಂಶವು ಅವುಗಳಲ್ಲಿ ಒಡಮೂಡಿದರೆ ಸರ್ವಸ್ವಿ ಘಾತವಾಯಿತೆಂದೇ ತಿಳಿಯಬೇಕು. ಅರ್ಧಮರ್ಧ ಅರಣ್ಯ ಪಂಡಿತರು ಈಗ ಪುರಾಣ ಹೇಳಿ ತಮ್ಮ ಹೊಟ್ಟೆ ಹೊರಕೊಳ್ಳುತ್ತಿದ್ದಾರೆ. ಹೊಟ್ಟೆಗಾಗಿ ಪುರಾಣ ಹೇಳುವದು ನಿಸ್ವಾರ್ಥ ಬುದ್ಧಿಯ ಕಾರ್ಯವಲ್ಲ. ಹೊಟ್ಟೆಯ ದಶೆಯಿಂದ ಇಂತಿಷ್ಟು ರೂಪಾಯಿಗಳನ್ನು ಕೊಟ್ಟರೆ ಪುರಾಣ ಹೇಳುತ್ತೇವೆಂದು ಮಾತು ಮುಗಿಸುವ ಸ್ವಾರ್ಥಿಗಳು ಬರೇ ರೂಪಾಯಿಗಳ ಮೋರೆಯನ್ನು ನೋಡುವರಲ್ಲದೆ ಜನರ ಅತ್ಯೋನ್ನತಿಯ ಕಡೆಗೆ ಲಕ್ಷಕೊಡುವದಂತೂ ದೂರೇ ಉಳಿಯಿತು. ತಮ್ಮಲ್ಲಿ ಸ್ವಾರ್ಥದ ಮೊಟ್ಟೆಯನ್ನು ತುಂಬಿಕೊಂಡು ಅನ್ಯರಿಗೆ ಉದಾರಿಗ ಳಾಗಿರೆಂದು ಹೇಳುವ ಪುರಾಣಿಕರ ಮಾತುಗಳು ಯಾರ ಮನಸ್ಸಿನ ಮೇಲೆಯೂ ಸ್ವಲ್ಪೂ ಪ್ರೇರಣೆಯನ್ನುಂಟುಮಾಡಲಾರವು.

ಭಿಕ್ಷುಕರನ್ನು ನೋಡಿ ಭಿಕ್ಷುಕರು ಶ್ವಾನಗಳಂತೆ ಬೊಗಳುವ ಹಾಗೆ ಪುರಾಣ ಹೇಳುವವರು ಪರಸ್ಪರ ಅಸೂಯೆಯಿಂದ ಮಾತು ಬೆಳಿಸಿ ಊರಲ್ಲಿ ಪಂಗಡಗಳನ್ನು ಬೆಳಿಸಿ ವ್ಯಾಜ್ಯವಾಡಹಚ್ಚುವರು. ಬೇರೆ ಬೇರೆ ಪಂಗಡದವರು ಪಕ್ಷಾಭಿಮಾನದಿಂದ ಪುರಾಣಕ್ಕಾಗಿ ದುಡ್ಡು ಸೂರೆ ಮಾಡುವರು. ನ್ಯಾಯಕ್ಕೂ ತಮ್ಮ ಶಕ್ತ್ಯಾನುಸಾರ ಸಲ್ಲಿಸುವರು. ಪುರಾಣ ಪುರುಷರ ಸಂಬಂಧವಾಗಿ ಜನರಲ್ಲಿ ಭಕ್ತಿಯುಂಟಾಗದೆ ಪಕ್ಷಪಾತ ವಿರೋಧಗಳು ಬೆಳೆಯಲಾರಂಭಿಸುವವು. ಒತ್ತಟ್ಟಿಗೆ ಶಿವಪುರಾಣ ಮತ್ತೊತ್ತಟ್ಟಿಗೆ ಶಂಕರ ಪುರಾಣ ಹಚ್ಚಿರುವರೆಂದು ಕಲ್ಪಿಸುವಾ. ಶಿವನ ಪಕ್ಷದವರು ಶಂಕರನ ಮೇಲೆ ಹಲ್ಲು ಕಡೆಯುವರು. ಶಂಕರನ ಪಕ್ಷದವರು ಶಿವನ ಮೇಲೆ ವಿಷ ಕಾರುವರು. ಶಿವನೂ ಶಂಕರನೂ ಒಂದೆಂಬ ಅರಿವು ಸಹ ಅವರಿಗಿರುವದಿಲ್ಲ. ಈ ಸಂದರ್ಭದಲ್ಲಿ ಒಂದು ದೃಷ್ಟಾಂತವು ನೆನಪಾಗುತ್ತದೆ. ಒಬ್ಬ

ಗಂಡನಿಗೆ ಇಬ್ಬರು ಹೆಂಡಂದಿರಿದ್ದರಂತೆ. ಒಬ್ಬಳು ಗಂಡನ ಬಲಗಾಲನ್ನೂ ಮತ್ತೊಬ್ಬಳು ಎಡಗಾಲನ್ನೂ ಸೇವೆಮಾಡುತ್ತಿದ್ದರಂತೆ. ಬಲಬರುತ್ತ ಸವತಿ ಮತ್ಸರದಿಂದ ಎಡಗಾಲನ್ನು ಸೇವಿಸುವವಳು ಗಂಡನ ಬಲಗಾಲನ್ನೂ ಬಲಗಾಲಿನ ಒಡತಿಯು ಎಡಗಾಲನ್ನೂ ಮುರಿದಿಟ್ಟು ಗಂಡನನ್ನು ಮೂಲಿಗುಂಪು ಮಾಡಿದರಂತೆ! ಇದೇ ಸ್ಥಿತಿಯು ನಮ್ಮ ಸಮಾಜಕ್ಕೂ ಉಂಟಾಗಿರುವವು. ಸುಶಿಕ್ಷಿತರೆನಿಸಿಕೊಳ್ಳುವವರು ಅಶಿಕ್ಷಿತರಲ್ಲಿ ಅಸೂಯೆ ಹುಟ್ಟಿಸಿ ನಮ್ಮ ಸಮಾಜ ಪುರುಷನ ಕಾಲು ಮುರಿದು ಬಿಟ್ಟಿದ್ದಾರೆ ಪುರಾಣ ಪುಣ್ಯಕಥೆಗಳು ಜನರನ್ನುದ್ಧಾರ ಮಾಡುವದರ ಬದಲು ಅವರನ್ನು ಅಧೋಗತಿಗೆಳೆಸುತ್ತಿರುವವು. ಹೀಗಿರಲು ಜನಗಳು ಪುರಾಣ ಪ್ರವಚನಗಳನ್ನು ಹಚ್ಚಿ ಪರಸ್ಪರ ವಿರೋಧ ಬೆಳಿಸಿ ಮನಸ್ತಾಪ ಮಾಡಿಕೊಳ್ಳುವದಕ್ಕಿಂತಲೂ ಸ್ವಸ್ಥವಾಗಿ ತಮ್ಮ ವ್ಯವಹಾರ ಉದ್ಯೋಗಗಳನ್ನು ಮಾಡಿಕೊಂಡು ಸುಮ್ಮನೆ ಸುಖಿಸದಾರದೇ?

ಪುರಾಣಪ್ರವಚನ ಕೀರ್ತನೆಗಳು ಜನಜಾಗ್ರತೆಗೆ ಅವಶ್ಯವಾಗಿ ಬೇಕು. ಜನರಲ್ಲಿ ಒಡಕನ್ನು ಹೆಚ್ಚಿಸುವ ಸ್ವಾರ್ಥಬುದ್ಧಿಯವರ ಪುರಾಣವು ಸಾಕು. ಹೊಟ್ಟೆ ಹರಿದುಕೊಳ್ಳುವ ಈಗಿನ ಹೋರಾಟದ ದಿನಗಳಲ್ಲಿ ನಿಸ್ವಾರ್ಥ ಬುದ್ಧಿಯಿಂದ ಪುರಾಣ ಹೇಳುವವರು ಸಿಗುವದು ಅಪರೂಪ. ಇಂಥ ಪ್ರಸಂಗದಲ್ಲಿ ಹೇಗೆ ನಡೆಯಬೇಕು? ಜನ ಹಿತಕಾರಿಗಳಾದ ಪುರಾಣ ಕೀರ್ತನ, ವ್ಯಾಖ್ಯಾನ, ಮ್ಯಾಜಿಕ್ ಲ್ಯಾಂಟರ್ನ ಮುಂತಾದ ಕಾರ್ಯಗಳನ್ನು ಸುಸಂಘಟಿತ ರೀತಿಯಿಂದ ಸಾಗಿಸಬೇಕು. ಮುನಿಸಿಪಾಲ್ಟಿ, ಲೋಕಲ್‌ಬೋರ್ಡ, ವಿದ್ಯಾಸಂಸ್ಥೆ, ಆಶ್ರಮ, ತರುಣಸಂಘ, ಮಹಾಸಭೆ ಮುಂತಾದ ಸಂಘಗಳ ಪರವಾಗಿ ಈ ಕೆಲಸಗಳು ಕ್ರಮಬದ್ಧವಾಗಿ ನಡೆಯಬೇಕು. ಯೋಗ್ಯರಾದ ಪುರಾಣಿಕರು, ಕೀರ್ತನಕಾರರು, ವ್ಯಾಖ್ಯಾನಕರ್ತರು ಮೊದಲಾದವರಿಗೆ ಯೋಗ್ಯ ವೇತನ ಕೊಟ್ಟು ಊರೂರಿಗೆ ಕಳುಹಿಸಿ ಅವರಿಂದ ಪ್ರಚಾರಕಾರ್ಯವನ್ನು ಮಾಡಿಸಬೇಕು. ಇದರಿಂದ ಸಮಾಜದಲ್ಲಿ ಇಂಥ ಪವಿತ್ರ ಕಾರ್ಯಗಳು ನಿರಂತರವಾಗಿಯೂ ಕ್ರಮಬದ್ಧವಾಗಿಯೂ ನಡೆಯುವವು. ಕಂಡಕಂಡವರು ಕಂಡಕಂಡಲ್ಲಿ ಕಂಡ ಕಂಡಂತೆ ಪುರಾಣ ಹೇಳಲುಪಕ್ರಮಿಸಿದರೆ ಸಮಾಜದಲ್ಲಿ ಬಂಡಾಟವೇ ಬಂಡಾಟವಾಗುವದು.

ಜನತಾ ಶಿಕ್ಷಣವು ಶಿಕ್ಷಣದ ಮುಖ್ಯಾಂಗವಾಗಿದೆ. ವಿದ್ಯಾರ್ಥಿಗಳಿಗೆ ಕೊಡುವ ಶಿಕ್ಷಣವು ಶಿಕ್ಷಣ ಸಂಸ್ಥೆಗಳಿಂದ ಕ್ರಮಬದ್ಧವಾಗಿರಲು ಜನ

ತಿಗೆ ಕೊಡುವ ಶಿಕ್ಷಣವಾದರೂ ಏಕೆ ಕ್ರಮಬದ್ಧವಾಗಿರಬಾದು? ಅಸಂಬದ್ಧವಾದ ಗೊಳ್ಳು ಮಾತುಗಳನ್ನು ಸರಿಸಿ ಜನರಿಂದ ದುಡ್ಡು ಸೆಳೆಯುವ ಅಶಿಕ್ಷಿತ ಪುರಾಣಕಂಪೇನು ಪ್ರಯೋಜನ? ಸುಶಿಕ್ಷಿತರೂ ಸುಸ್ವಭಾವದವರೂ ಆದ ಸಜ್ಜನರಿಂದ ಪುರಾಣ ಶ್ರವಣವಾದರೆ ನಿಜವಾದ ಹಿತವು ಜನಗಳಿಗೆ ಆಗುವದು. ಕೆಲವೆಡೆಯಲ್ಲಿ ಶೃಂಗಾರ ರಸೋದ್ದೀಪಕವಾದ ವರ್ಣನೆಗಳಿಂದ ಜನರನ್ನು ವಿನೋದಗೊಳಿಸುವದುಂಟು. ಅಂಥ ಪುರಾಣಗಳನ್ನು ಕೇಳಲಿಕ್ಕೆ ಸ್ತ್ರೀಪುರುಷರು ಉತ್ಸುಕರಾಗಿ ಬರುವರು. ಇಂಥ ಪುರಾಣ ಶ್ರವಣದಿಂದ ಹಿತವಾಗುವದರ ಬದಲು ಅಹಿತವೇ ಹೆಚ್ಚಾಗುತ್ತದೆ. ಸಮಾಜ ಹಿತವನ್ನು ಚಿಂತಿಸುವವರು ಆದಷ್ಟು ಅಂಥ ಕೆಡಕು ಪುರಾಣಗಳನ್ನು ಪ್ರತಿಬಂಧಿಸುವದು ವಿಹಿತ.

ನಮ್ಮ ವೀರಶೈವ ಕವಿಗಳು ಕನ್ನಡ ಭಾಷೆಯಲ್ಲಿ ಬಹು ರಮ್ಯವಾದ ಎಷ್ಟೋ ಪುರಾಣಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಉತ್ಕೃಷ್ಟವಾದವುಗಳನ್ನು ಸಮಾಜದ ಮುಂದಾಳುಗಳು ಆರಿಸಿ ವಿದ್ವಾಂಸರಿಂದ ಪರಿಶೋಧಿಸಿ ಅಭ್ಯಾಸಕ್ಕಿಡಬೇಕು. ಅವುಗಳನ್ನು ಚನ್ನಾಗಿ ಅಭ್ಯಾಸ ಮಾಡಿ ಪರೀಕ್ಷೆಯಲ್ಲಿ ಪಾಸಾದವರಿಗೆ ಆಯಾಯ ಸಂಸ್ಥೆಯವರು ನೇಮಿಸಿಕೊಂಡು ಜನಜಾಗ್ರತಿಯ ಕೆಲಸವನ್ನು ಮಾಡಿಸಬೇಕು. ಅಂದರೆ ಒಂದು ವಿಶಿಷ್ಟ ತರದ ಕ್ರಮವು ನೆಲೆಗೊಳ್ಳುವದು. ಈ ಪೇರೆಗೆ ಜನತಾ ಶಿಕ್ಷಣಕ್ಕೆ ಸಾಧನೀಭೂತವಾದ ಪುರಾಣ, ಪ್ರವಚನ, ಕೀರ್ತನ ಮುಂತಾದ ಕಾರ್ಯಗಳು ಅತಂತ್ರವಾಗಿ ನಡೆಯದೆ ಸಂಸ್ಥೆಗಳ ಮುಖಾಂತರವಾಗಿ ಜರಗುವದು ಹೆಚ್ಚು ಶ್ರೇಯಸ್ಕರವು.

ಮಾನಸ ಸಮುದ್ರ.

ಲೇಖಕ:— ಮಾನಸಂರಾಜಹಂಸ.

ಸಮುದ್ರದಮೇಲೆ ತರಂಗಗಳು ಅಲೆದಾಡುವಂತೆಯೂ, ಮೀನುಗಳು ಸಂಚರಿಸುವಂತೆಯೂ, ನೌಕೆಗಳು ವಿಹರಿಸುವಂತೆಯೂ ನಮ್ಮ ಮಾನಸ ಸಮುದ್ರದಲ್ಲಿ ವಿಚಾರ, ಭಾವನೆ, ಅನುಭವ, ಕಲ್ಪನೆ ಮುಂತಾದ ತರಂಗ ಮೀನ ನೌಕಾದಿಗಳು ಸುಳಿದಾಡುತ್ತಿರುತ್ತವೆ. ಅಗಾಧವಾದ ಸಮುದ್ರದ ತಳದಲ್ಲಿ ಅಮೌಲ್ಯವಾದ ಮುತ್ತುರತ್ನಗಳೂ ಜಲಸಮಾಧಿಯನ್ನು ಹೊಂದಿದ ಜೀವಿಗಳೂ ಮತ್ತು ಹಡಗಗಳೂ ನೆಲಿಸಿರುವಂತೆ ನಮ್ಮ ಮನಸ್ಸಿನ ತಳದಲ್ಲಿ ಅನಾದಿಕಾಲದಿಂದ ಬಂದ ವಿಚಾರಗಳೂ, ಸಂಸ್ಕೃತಿಯೂ, ವ್ಯಸನಗಳೂ, ಹುಟ್ಟುಗುಣಗಳೂ ನಾವು ಕಲಿತು ಮರೆತ ಸರ್ವ ವಿಷಯಗಳೂ ಅಂಟಿಕೊಂಡಿರುವವು. ಸಮುದ್ರದಲ್ಲಿ ಅನಾದಿಕಾಲದ ಜಲವೂ ಉಂಟು. ಈಗಿನ ಕಾಲಕ್ಕೆ ವರುನರುಷ ಕೂಡುವ ನದಿಗಳ ಜಲವೂ ಉಂಟು. ಅದರಂತೆಯೇ ನಮ್ಮ ಮನಸ್ಸಿನಲ್ಲಿ ಅನಾದಿಕಾಲದ ವಿಚಾರಗಳೂ ಈಗಿನ ಕಾಲದ ವಿಚಾರಗಳೂ ಇರುತ್ತವೆ. ಸಮುದ್ರದ ತಳದಲ್ಲಿದ್ದ ಮೀನಗಳು ಮೇಲಕ್ಕೇಳುತ್ತೇಳುತ್ತ ಸಮುದ್ರದ ಪಾತಳಿಯ ಮೇಲೆ ಬಂದು ಕೂಡ್ರುವಂತೆ ಜನ್ಮಜನ್ಮಾಂತರದಲ್ಲಿಯೂ, ನಮ್ಮ ಬಾಲ್ಯದಲ್ಲಿಯೂ ಮನಸ್ಸಮುದ್ರದಲ್ಲಿ ಮುಳುಗಿಹೋಗಿದ್ದ ವಿಚಾರಗಳು ಸ್ವಪ್ನಾವಸ್ಥೆಯಲ್ಲಿ ಬಂದು ನಮ್ಮ ಮನಸ್ಸಿನ ಮೇಲ್ಭಾಗದಲ್ಲಿ ತೇಲಾಡುತ್ತವೆ. ನಾವು ಕನಸಿನಲ್ಲಿ ಈಗಿನ ಜನ್ಮದ ಸಂಗತಿಗಳನ್ನಷ್ಟೇ ಕಾಣುವದಿಲ್ಲ. ಹಿಂದಿನ ಜನ್ಮಗಳ ವಿಷಯಗಳೂ ಕನಸ್ಸಿನಲ್ಲಿ ಬಂದು ಹೋಗುತ್ತವೆ. ಸಮುದ್ರದ ಮೀನಗಳು ಮುಂದಿಯ ಸುಳುವನ್ನು ನೋಡಿ ಫಕ್ಕನೆ ಮುಳುಗುವಂತೆ ಆತ್ಮನು ಎಚ್ಚೆತ್ತಕೂಡಲೆ ಸ್ವಪ್ನ ಸೃಷ್ಟಿಯ ವ್ಯವಹಾರಗಳೆಲ್ಲ ಗಕ್ಕನೆ ಮಾನಸ ಸಮುದ್ರದಲ್ಲಿ ಮುಳುಗಿಬಿಡುವವು. ಶೇಷಶಾಯಿಯಾದ ವಿಷ್ಣುವು ಮಹಾಸಾಗರದ ಮೇಲೆ ಮಲಗಿಕೊಂಡು ಸಮುದ್ರನಾಥನ ಮಗಳಾದ ಲಕ್ಷ್ಮಿಯೊಡನೆ ಬೆರೆತು ಮೋದದಿಂದ ವಿಹರಿಸುವಂತೆ ಆತ್ಮನು ಮನಸ್ಸಿನ ಮಗಳಾದ ಮಹಾಮಾಯೆಯನ್ನೊಡಗೂಡಿ ಮನಸ್ಸಿನಲ್ಲಿಯೇ ರಮಿಸುವನು.

ಸಮುದ್ರದ ನೀರು ಹೊಸದಲ್ಲ. ಅದರಂತೆ ನಮ್ಮ ಮನಸ್ಸಿನ ವಿಚಾರಗಳಾದರೂ ಇವತ್ತಿನವಲ್ಲ. ಸಮುದ್ರವು ಎಂದು ಹುಟ್ಟಿತೋ ಯಾರಿಗೂ ಗೊತ್ತಿಲ್ಲ. ಅದರಂತೆ ನಮ್ಮ ಮನಸ್ಸಾದರೂ ಯಾವ ಕಾಲ ದಿಂದ ಬಂದುದೋ ತಿಳಿಯದು. ನಮ್ಮ ಶರೀರವು ಕೇವಲ ನಮ್ಮ ತಾಯಿ ತಂದೆಗಳ ರಜೋರೇತಸ್ಸಿನಿಂದಷ್ಟೇ ಉಂಟಾಗಿಲ್ಲ. ನಮ್ಮ ದೇಹದಲ್ಲಿರುವ ಕಣಗಳು ಎಲವು ರಕ್ತಗಳು ಮೊದಲಾದ ಪಂಚಭೂತಾದಿಗಳು ಅನಾದಿಕಾಲದಿಂದಲೂ ವಂಶಪರಂಪರಾಗತವಾಗಿ ಬಂದಂಥವುಗಳಾಗಿವೆ. ಅದರಂತೆ ಮನಸ್ಸಾದರೂ ಇವತ್ತಿನ ವಿಚಾರಗಳಿಂದೆ ಕೂಡಿಕೊಂಡಿಗುವದಿಲ್ಲ. ಮನಸ್ಸಿನಲ್ಲಿ ಅನಾದಿಕಾಲದ ವಿಚಾರಗಳೂ ಹಿಂದಿನ ಕಾಲದ ವರ ಅನುಭವಗಳೂ ಇರುವವಲ್ಲದೆ ನಮ್ಮ ಚಿಕ್ಕಂದಿನಲ್ಲಿ ಸಂಘಟಿಸಿದ ವಿಚಾರಗಳು ಸಹ ನೆಲಿಸಿರುತ್ತವೆ. ಹಿಂದಿನ ಪ್ರಸಂಗತಿಗಳೆಲ್ಲ ಮರೆತು ನಷ್ಟವಾಗಿ ಹೋಗಿರಬೇಕೆಂದು ನಾವು ತಿಳಿದಿದ್ದೀವೆ. ಆದರೆ ಅವು ನಾಶವಾಗಿಲ್ಲ. ನಮ್ಮ ಮನಸ್ಸಿನಲ್ಲಿಯೇ ಮುಳುಗಿಹೋಗಿರುವವು. ಪ್ರಸಂಗವಶಾತ್ ತೇಲುತ್ತ ಮೇಲಕ್ಕೆ ಬರುವವು. ದೈವಜ್ಞನಾದ ಆತ್ಮನು ಜನ್ಮ ಜನ್ಮಾಂತರಗಳ ಸಂಗತಿಗಳನ್ನು ಸ್ಮರಿಸಿಕೊಳ್ಳುವನು. ದೃಷ್ಟಾ ಎಂದೆನಿಸುವ ಋಷಿವರೇಣ್ಯರು ಯುಗಯುಗಾಂತರದಲ್ಲಿ ಸಂಘಟಿಸಿದ ಮಹಾ ವೇದವಾಕ್ಯಗಳನ್ನು ಸ್ಮರಿಸಿಕೊಂಡರು.

ಜಗತ್ತಿನ ಇತಿಹಾಸವೇ ನಮ್ಮ ಮನದಲ್ಲಿ ಮನೆ ಮಾಡಿಕೊಂಡಿದೆ. ಯಾವ ಕಾಲಕ್ಕೆ ಪರಮಾತ್ಮನು ಲೀಲಾ ಮಾತ್ರದಿಂದ ಈ ಜಗತ್ತನ್ನು ನಿರ್ಮಾಣ ಮಾಡಿದನೋ ಅದೇ ಕಾಲಕ್ಕೆ ನಮ್ಮ ಶರೀರ ಮನಸ್ಸುಗಳ ಅಸ್ತಿತ್ವವುಂಟಾಯಿತು. ಪರವಸ್ತುವಿನ ಅಂಶೀಭೂತರಾದ ಜೀವರುಗಳು ಪರಮಾತ್ಮನ ಬಾಹ್ಯ ಸ್ವರೂಪವಾದ ಸೃಷ್ಟಿಯನ್ನೇನು ಅರಿಯರೇ? ಆದರೆ ನಮ್ಮ ಅರಿವು ಕಿರಿದಾಗಿದ್ದು ಮರವು ಹಿರಿದಾಗಿದ್ದದರಿಂದ ಹಿಂದಿನದನ್ನೆಲ್ಲ ನಾವು ಮರೆತು ಬಿಟ್ಟಿದ್ದೀವೆ. ಜ್ಞಾನಿಗಳು ಅರಿವಿನ ಬೆನ್ನು ಹತ್ತಿ ಹೋಗುವದರಿಂದ ಪರಮಾತ್ಮನ ಅರಿವೂ ಅವರಿಗೆ ಸುಲಭವಾಗಿ ಆಗುವದು. ದುರ್ಬಲಾತ್ಮರುಗಳಾದ ನಾವುಗಳು ಮರವೆಯೆಂಬ ಮಾಯೆಯ ಬಲಿಗೆ ಬಿದ್ದುದರಿಂದ ಪರಮಾತ್ಮನ ಅರಿವು ನಮಗಾಗದು. ನಿನ್ನಿನ ದಿವಸ ನಾವು ಏನನ್ನು ಉಂಡಿರುವೆವೋ ಏನೋ ಎಂಬದು ತಿಳಿಯದಂಥ ನಮ್ಮಗಳಿಗೆ ಜನ್ಮಜನ್ಮಾಂತರಗಳ ನೆನಪೂ ಆ ಪರವಸ್ತುವಿನ ಕುರುಹೂ ಹೇಗೆ ತಿಳಿದಾವು?

ಸಮುದ್ರದಲ್ಲಿ ಒಂದು ಬರ್ಫದ ಬಂಡೆಯು ಪೂರಾ ಮುಳುಗಿ, ಮೇಲೆ ಮಾತ್ರ ಏನೋ ಸ್ವಲ್ಪ ಭಾಗವು ಕಣ್ಣಿಗೆ ಬೀಳುವಂತೆ, ನಮ್ಮ ಮನಸ್ಸಿನಲ್ಲಿ ಅರುವಿನ ಭಾಗವು ೧೦೦ಕ್ಕೆ ೧ ರಂತೆ ಇದ್ದರೆ ಮರವೆಯ ಅಂಶವು ೧೦೦ಕ್ಕೆ ೯೯ ರಂತೆ ಇದೆ. ಅರುವಿನಿಂದ ನಾವು ಉಣ್ಣುತ್ತೇವೆ, ಮಾತನಾಡುತ್ತೇವೆ, ವಸ್ತುಗಳ ಅನುಭವ ಪಡೆಯುತ್ತೇವೆ. ದಿನಕ್ಕೆ ಎಷ್ಟು ಅರುವಿನ ಕೆಲಸಗಳನ್ನು ಮಾಡುತ್ತೇವೆಯೋ ಅವೆಲ್ಲವುಗಳನ್ನು ನಾವು ನೆನಪಿನಲ್ಲಿಟ್ಟಿರುವದಿಲ್ಲ. ಯಾರಾದರೂ ನಮಗೆ ಇವತ್ತಿನ ದಿವಸ ಮಾಡಿದ ವಿಚಾರ ಮತ್ತು ಕೃತಿಗಳನ್ನೆಲ್ಲ ಒಂದೂ ಬಿಡದಂತೆ ಡಾಯರಿಯಲ್ಲಿ ಬರೆಯಿರೆಂದು ಹೇಳಿದರೆ ಮುಖ್ಯವಾದ ಕೆಲವು ಸಂಗತಿಗಳನ್ನು ಮಾತ್ರ ನಾವು ಬರೆಯುವೆವಲ್ಲದೆ ಅನೇಕ ಸಣ್ಣಪುಟ್ಟ ಮಾತುಗಳನ್ನು ನಾವು ಮರೆತು ಬಿಡುತ್ತೇವೆ. ಅದೇ ಡಾಯರಿಯಲ್ಲಿ ಇವತ್ತು ಬರೆದ ಸಂಗತಿಗಳ ನೆನಪು ನಮಗೆ ನಾಳಿಗೆ ಆಗುವದಿಲ್ಲ. ಯಾಕಂದರೆ ಮರವೆಯು ಘನವಾದುದಿರುವದರಿಂದ ಅರಿವು ಮಾಡುವ ಪ್ರಯತ್ನಗಳೆಲ್ಲ ಮರವೆಗೇ ಶರಣು ಹೋಗುತ್ತವೆ.

ಮಹಾಜ್ಞಾನಿಗಳೂ, ತತ್ವವೇತ್ತರೂ, ಮಹಾ ಯೋಗಿಗಳೂ ಅರಿವನ್ನೇ ಜಾಗ್ರತಗೊಳಿಸಿ ಮರವೆಯನ್ನು ಕ್ರಮೇಣ ನಾಶಮಾಡುತ್ತ ಹೋಗುತ್ತಾರೆ. ಮರವೆಯು ಸಹಜ ಸ್ವಭಾವವು. ಅದನ್ನು ಜಯಿಸುವದು ಸಾಮಾನ್ಯರಿಗೆ ಸಾಧ್ಯವಲ್ಲ. ಮಹಾ ತಪಶ್ವಿಗಳು ಅರುವಿನ ಶಕ್ತಿಯನ್ನೆಲ್ಲ ಒತ್ತಟ್ಟಿಗೆ ಏಕಾಗ್ರಗೊಳಿಸಿ ಮರವೆಯೆಂಬ ಮಾಯೆಯನ್ನು ಸದೆಬಡೆಯುತ್ತಾರೆ. ಮರವೆಯೆಂಬ ಅಂಧಕಾರವು ನಾಶವಾಗುತ್ತ ಹೋದಂತೆ ಅರಿವೆಂಬ ಪ್ರಕಾಶವು ಹೆಚ್ಚಿ ಅದರಲ್ಲಿ ಪರಮಾತ್ಮನ ಸ್ವರೂಪವು ವಿರಾಜಮಾನವಾಗಿ ಬೆಳಗುವದು. ಅಂತೆಯೇ ಬಸವಣ್ಣನವರು "ಮರವು ಘನ ನಿಮ್ಮ ನೆನೆವ ಅರಿವು ಕಿರಿದೆನ್ನಬಹುದೇ? ಬಾರದಯ್ಯಾ ಕೂಡಲ ಸಂಗಮದೇವಾ" ಎಂದು ನುಡಿದಿರುವರು.

ಸಮುದ್ರಕ್ಕೆ ಆಕಾರ ಪ್ರಮಾಣಗಳಿರುವಂತೆ ಮನಸ್ಸಿಗೆ ಆಕಾರ ಪ್ರಮಾಣಗಳಿಲ್ಲ. ಮನಸ್ಸೆಂದರೇನೆಂಬುದೇ ಯಾರಿಗೂ ಗೊತ್ತಿಲ್ಲ. ಮನಸ್ಸೆಂದರೇನೋ ಒಂದು ಇದೆಯೆಂಬ ಸಿದ್ಧಾಂತದ ಮೇಲಿಂದಲೇ ನಾವು ಅನೇಕ ವಿಚಾರಗಳ ತಳಹದಿಯನ್ನು ಕಟ್ಟಲಾರಂಭಿಸಿದ್ದೇವೆ. ಇದೇ ಮೇರೆಗೆ ಜೀವವೆಂದರೇನು? ವಿದ್ಯುತ್ ಎಂದರೇನು? ಎಂಬ ವಿಷಯಗಳು ಯಾರಿಗೂ ಹೇಳಲಿಕ್ಕೆ ಬಾರದಂಥವುಗಳು. ಆದರೆ ಇಂಥಲ್ಲಿ ಜೀವ

ವಿದೆ, ಇಂಥಲ್ಲೆಲ್ಲಿ. ವಿದ್ಯುತ್ತು ಇಂತಿಂಥ ಕೆಲಸವಮಾಡುತ್ತದೆ, ಇಂತಿಂಥ ಕೆಲಸವಮಾಡುವದಿಲ್ಲ. ಈ ಮೊದಲಾದ ವಿಷಯಗಳು ಮಾತ್ರ ನಮಗೆ ತಿಳಿಯುತ್ತವೆ. ಅವುಗಳ ಉಪಯೋಗದ ಮೇಲಿಂದ ಅವೇನೋ ಅವೆ ಯೆಂದು ನಾವು ಸಿದ್ಧಾಂತಮಾಡಿಕೊಂಡು ಮುಂದೆ ಸಾಗುತ್ತಿದ್ದೇವೆ. ಅದೇ ಪ್ರಕಾರ ಮನಸ್ಸಿನ ಗುಣಧರ್ಮಗಳ ಮೇಲಿಂದ ಮನಸ್ಸಿನ ಅಸ್ತಿತ್ವ ವನ್ನು ನಾವು ಕಲ್ಪಿಸುತ್ತೇವೆ.

ಮನಸ್ಸಿನ ಗುಣಧರ್ಮಗಳು ಎರಡು ಇರುತ್ತವೆ. ಅವು ಯಾವ ವೆಂದರೆ (೧) ಸಂಗ್ರಹಣಶಕ್ತಿ, (೨) ಉತ್ಪಾದಕಶಕ್ತಿ ನಾವು ಕಲಿತದ್ದನ್ನೂ ಕೇಳಿದ್ದನ್ನೂ ಓದಿದ್ದನ್ನೂ ಅನುಭವಿಸಿದ್ದುದನ್ನೂ ಮನಸ್ಸು ಒತ್ತಟ್ಟಿಗೆ ಸಂಗ್ರಹಿಸಿಟ್ಟಿರುತ್ತದೆ. ಈ ಜನ್ಮದಾರಭ್ಯ ವರ್ತಿಸಿದ ಸಂಗತಿಗಳನ್ನಷ್ಟೇ ನಮ್ಮ ಮನಸ್ಸು ಸಂಗ್ರಹಿಸಿರುವದೆಂತಲ್ಲ. ಅನಾದಿಕಾಲದಿಂದಲೂ ಜನ್ಮ ಜನ್ಮಾಂತರಗಳಲ್ಲಿ ಸಂಭವಿಸಿದ ಸಂಗತಿಗಳನ್ನೂ ಆಚಾರ ವಿಚಾರಗಳನ್ನೂ ಸಹ ಸಂಗ್ರಹಿಸಿಟ್ಟಿರುವದು ಈಗ ನಾವು ನಮ್ಮ ತಾಯಿತಂದೆಗಳ ಗುಣ ಧರ್ಮಗಳನ್ನಷ್ಟೇ ನಮ್ಮ ಮನಸ್ಸಿನಲ್ಲಿಟ್ಟಿರುವದಿಲ್ಲ. ಆದರೆ ನೆರೆಹೊರೆ ಯವರ, ಬಂಧುಬಳಗದವರ, ಸಮಾಜದ ಮತ್ತು ನಾವು ಸುಳಿದಾ ಡುವ ವಾತಾವರಣದ ಎಲ್ಲ ಗುಣಗಳು ನಮ್ಮ ಮನಸ್ಸಿನಲ್ಲಿ ಕೇಂದ್ರೀ ಕೃತವಾಗಿರುತ್ತವೆ. ಇದೇ ಮೇರೆಗೆ ಅತಿ ಪೂರ್ವಕಾಲದಲ್ಲಿ ಅತ್ಯಂತ ಕಾಡಸ್ಥಿತಿಯಲ್ಲಿದ್ದ ನಮ್ಮ ಪೂರ್ವಜರ ಗುಣಗಳೂ ಆಗಿನ ಕಾಲದ ಸಂಸ್ಕೃತಿ ಲೋಕವ್ಯವಹಾರಗಳೂ ಸಹ ನಮ್ಮ ಮನಸ್ಸಿನಲ್ಲಿ ಅಂಟಿಕೊಂ ಡಿರುತ್ತವೆ. ಸಣ್ಣ ಕನ್ನಡಿಯಲ್ಲಿ ದೊಡ್ಡದೊಂದು ಆನೆಯೇ ಪ್ರತಿಬಿಂಬ ರೂಪದಿಂದ ಕಾಣುವಂತೆ ವರ್ತಮಾನ ಭೂತಕಾಲದ ಸಂಗತಿಗಳೆಲ್ಲ ನಮ್ಮ ಅಲ್ಪ ಮನೋದರ್ಪಣದಲ್ಲಿ ತುಂಬಿಕೊಂಡಿರುತ್ತವೆ. ನಮ್ಮೀ ಮನ ಸ್ಸಮುದ್ರದಲ್ಲಿ ಯಾವ ಯಾವ ಕಾಲದಿಂದ ಎಷ್ಟೆಷ್ಟು ಸಂಪತ್ತು ಕೂಡಿ ಬಿದ್ದಿರುವದೋ ನಾವರಿಯೆವು. ಇಷ್ಟೆಲ್ಲ ಸಂಗತಿಗಳನ್ನೊಳಕೊಂಡ ಮನಸ್ಸು ಸಣ್ಣದೆನ್ನಬೇಕೇ? ಬಾರದು. ಅದು ಅಪಾರವಾದದ್ದಿರಲೇಬೇಕು. ಹಾಗಾ ದರೆ ಈ ಮೂರೂವರೆ ಮೊಳದ ಸಣ್ಣ ಶರೀರದಲ್ಲಿ ಅದೆಷ್ಟು ದೊಡ್ಡ ದಾಗಿದೆಯೋ ತಿಳಿಯದು.

ನಮ್ಮ ಅರಿವಿನಲ್ಲಿ ಕೆಲವು ವ್ಯವಹಾರಗಳು ನಡೆಯುವಂತೆ ನಮಗೆ ತಿಳಿಯದಲೇ ಕೆಲವು ಕ್ರಿಯೆಗಳು ನಡೆದಿರುತ್ತವೆ. ಉದಾಹರಣಾರ್ಥ

ವಾಗಿ ಪಚನಕ್ರಿಯೆ, ರಕ್ತಾಭಿಸರಣ, ಕೂದಲುಗಳ ಬೆಳವಣಿಗೆ ಮುಂತಾ ದವುಗಳು ನಮಗೆ ಗೊತ್ತಾಗದೆ ಸಾಗಿರುತ್ತವೆ. ಅದರಂತೆಯೇ ಮರ ವೆಯ ಮರೆಯಲ್ಲಿ ಅಡಗಿರುವ ಜನ್ಮಜನ್ಮಾಂತರದ ಸಂಗತಿಗಳು ನಮಗೆ ಗೊತ್ತಾಗದೆ ಯಂತ್ರಗಳಂತೆ ತಮ್ಮ ಕ್ರಿಯೆಗಳನ್ನು ಸಾಗಿಸುತ್ತಲೇ ಇರು ವವು. ಚಿತ್ರಕಾರನು ಮನಸ್ಸಿನ ಪ್ರೇರಣೆಯಿಂದ ಒಳ್ಳೆ ಚಿತ್ರವನ್ನು ಚಿತ್ರಿಸು ವನು. ಮೂರ್ತಿಕಾರನು ಮನಸ್ಸಿನ ಉತ್ಸುಕತೆಯಿಂದಲೇ ಕಲ್ಲಿನಲ್ಲಿ ಸುಂದ ರವಾದ ಮೂರ್ತಿಯನ್ನು ಕೊರೆಯುವನು. ವ್ಯಾಖ್ಯಾನಕರ್ತನು ಮನ ಸ್ಸಿನ ಆವೇಶದಿಂದ ಸೊಗಸಾದ ವ್ಯಾಖ್ಯಾನವನ್ನು ಕೊಡುವನು. ಕವಿಯು ಪ್ರತಿಭಾ ಶಕ್ತಿಯಿಂದ ಕಾವ್ಯ ಸೃಷ್ಟಿಯನ್ನೇ ನಿರ್ಮಿಸುವನು. ಇಂತಿಂಥ ಕೆಲಸಗಳನ್ನು ಮಾಡಹಚ್ಚಿಸುವಂಥ ಸಂಸ್ಫುರಣ ಶಕ್ತಿಯೊಂದು ನಮ ಲ್ಲುಂಟು. ಅದಕ್ಕೇನೇ ಉತ್ಪಾದಕ ಶಕ್ತಿಯೆಂದೆನ್ನುವರು. ಕೃತ್ರಿಮರೂಪ ದಲ್ಲಿ ತೋರುವ ಜಗತ್ತೂ ಆ ಜಗತ್ತಿನಲ್ಲಿ ತೋರುವ ವಿವಿಧ ಸಂಸ್ಕೃತಿ ಯೂ ಮಾನವನ ಉತ್ಪಾದಕ ಶಕ್ತಿಯ ಹೆಗ್ಗುರುತುಗಳು. ಈಗಿನ ಭೌತಿಕ ಶಾಸ್ತ್ರೋನ್ನತಿಯೂ ಹಿಂದಿನ ಆಧ್ಯಾತ್ಮಿಕ ವಿಕಾಸವೂ ಮನುಷ್ಯ ಪ್ರಾಣಿಯ ಪ್ರಚೋದನ ಶಕ್ತಿಯ ಕಾರ್ಯಗಳು. ಮನಸ್ಸಿನಲ್ಲಿ ಯಾವದಾದರೊಂದು ಹೊಸದಾದ ದೃಶ್ಯಾದೃಶ್ಯ ಸೃಷ್ಟಿಯನ್ನು ಹುಟ್ಟಿಸಬೇಕೆಂದು ವಿಚಾರ ತರಂ ಗಗಳುದ್ಭವಿಸಲು ಅವು ಕೆಲವು ಕಾಲದ ವರೆಗೆ ಕೂಡಿ ಬೀಳುತ್ತ ಹೋಗಿ ಕೊನೆಗೆ ಪರಿಪಕ್ವ ದಿಶೆಯನ್ನು ಹೊಂದುವವು. ಆಗ್ಗೆಯೇ ಆ ವಿಚಾರ ಗಳು ಕಾರ್ಯರೂಪದಲ್ಲಿ ಬಾಹ್ಯ ಸೃಷ್ಟಿಯೊಳಗೆ ಪಸರಿಸುವವು.

ಇಂಥ ಮಾನಸ ಸಮುದ್ರದ ಮೇಲೆ ಆತ್ಮವೆಂಬ ನೌಕೆಯು ಸದಾ ಸಂಚರಿಸುತ್ತ ಸಮುದ್ರದಾಚೆಗಿರುವ ಪರಮಾತ್ಮನ ಸಾನ್ನಿಧ್ಯವನ್ನು ಹೊಂ ದಲು ಪ್ರಯತ್ನಿಸುತ್ತಿರುವದು.

ಪಂಚಾಚಾರ ಮತ್ತು ಸಪ್ತಾಚಾರಗಳು.

ಲೇಖಕ— ರಾ। ಸಾ। ಪ ಗು. ಹಳಕಟ್ಟಿ ವಿಜಾಪುರ.

ವಚನಕಾರರು ವರ್ತನೆಗೆ ಬಹಳ ಮಹತ್ವ ಕೊಟ್ಟಿರುವರು. ಮನುಷ್ಯನು ಜಗತ್ತಿನಲ್ಲಿ ಹ್ಯಾಗೆ ವರ್ತಿಸಬೇಕು, ಮತ್ತು ಆತ್ಮಸುಧಾರಣೆಯನ್ನು ಹ್ಯಾಗೆ ಮಾಡಿಕೊಳ್ಳಬೇಕು ಎಂಬ ವಿಷಯಗಳನ್ನು ಅವರು ಸವಿಸ್ತಾರವಾಗಿ ತಮ್ಮ ಗ್ರಂಥಗಳಲ್ಲಿ ನಿರೂಪಿಸಿರುವರು. ಹಿಂದುಸ್ತಾನದಲ್ಲಿ ಶಂಕರಾಚಾರ್ಯ, ಮಧ್ವಾಚಾರ್ಯ, ಮೊದಲಾದ ಅನೇಕ ತತ್ವವೇತ್ತಿಗಳು ಆಗಿಹೋಗಿದ್ದಾರೆ. ಅವರು ಪ್ರಕಟಿಸಿದ ವಿಚಾರಗಳು ಅತ್ಯಂತ ಗಹನವಾಗಿರಬಹುದು. ಆದರೆ ಜನಸುಧಾರಣೆ, ಸಮಾಜಸುಧಾರಣೆ ಈ ಬಗೆಯ ವಿಷಯಗಳಿಗೆ ಮಾತ್ರ ಅವರು ಮಹತ್ವದ ಸ್ಥಾನವನ್ನು ಕೊಟ್ಟಿಲ್ಲ. ಅವುಗಳನ್ನು ಅವರು ಅತ್ಯಲ್ಪ ರೀತಿಯಿಂದ ವಿವರಿಸಿರುವರು. ಆದರೆ ವೀರಶೈವ ಧರ್ಮವು ಇಂಥ ವಿಷಯಗಳಿಗೆ ಮಹತ್ವದ ಸ್ಥಾನವನ್ನು ಕೊಟ್ಟಿದೆ. ವಚನಕಾರರ ವಚನಗಳಲ್ಲಿಯಂತೂ ಈ ವಿಷಯಗಳೇ ತುಂಬಿಹೋಗಿವೆ. ಯಾಕೆಂದರೆ ವಚನಕಾರರು ಸಮಾಜಸುಧಾರಕರಿದ್ದಾರೆ. ಆದ್ದರಿಂದ ಅವರು ಆಚಾರ, ನೀತಿ, ನಡತೆ, ವರ್ತನೆ ಇವುಗಳನ್ನು ಹೆಚ್ಚಾಗಿ ವಿವರಿಸಿ ಅವುಗಳಂತೆ ನಡೆಯಲು ಬಹು ಬಲವಾಗಿ ಹೇಳುತ್ತ ಬಂದಿದ್ದಾರೆ. ವಚನಕಾರರು ಸಮಾಜದಲ್ಲಿದ್ದುಕೊಂಡು ಸಮಾಜದ ಅಭಿವೃದ್ಧಿಗಾಗಿ ಪ್ರಯತ್ನಿಸಿದವರಾಗಿದ್ದಾರೆ. ಅವರಲ್ಲಿ ಬಹುಜನ ಶಿವಶರಣರೆನಿಸಿಕೊಂಡಿರುವರು. ಆದರೆ ಶಿವಶರಣರೆಂದರೆ ಸಮಾಜವನ್ನು ಬಿಟ್ಟುಕೊಟ್ಟ ಅರಣ್ಯವಾಸಿಗಳಲ್ಲ. ಬಸವೇಶ್ವರನ ಕಾಲದಲ್ಲಿ ಇಂಥ ಅಸಂಖ್ಯ ಶಿವಶರಣರು ಆಗಿಹೋಗಿರುವರು. ಆದರೆ ಅವರ ಚರಿತ್ರೆಗಳನ್ನು ನೋಡಿದರೆ ಅವರು ತಮ್ಮ ಉಪಜೀವನಕ್ಕೋಸ್ಕರ ಒಂದು ಹೋರೆಯನ್ನು ಕಲ್ಪಿಸಿಕೊಂಡು ಲೋಕಸಂಗ್ರಹಕ್ಕಾಗಿ ಪ್ರಯತ್ನಿಸುತ್ತ ಬಂದಿದ್ದು ಕಂಡುಬರುತ್ತದೆ. ಅವರು ಜನಸಮುದಾಯದಲ್ಲಿ ಬೆರೆದುಕೊಂಡು ಅವರಲ್ಲಿರುವ ದುರ್ವರ್ತನೆ ಮತ್ತು ತಪ್ಪು ತಿಳುವಳಿಕೆಗಳನ್ನು ದೂರವಾಡಲು ಯತ್ನಿಸುತ್ತ ಬಂದಿರುವರು. ಈ ಸಂಗತಿಗೆ ಅವರು ರಚಿಸಿದ ವಚನಗಳೇ ಸಾಕ್ಷಿಯಾಗಿವೆ. ಇವುಗಳಲ್ಲಿ ಅವರು ಮನುಷ್ಯನು ಹ್ಯಾಗೆ ನಡೆಯಬೇಕೆಂಬುದನ್ನು ಬಹು ವಿಸ್ತಾರವಾಗಿ ನಿರೂಪಿಸಿದ್ದಾರೆ. ದುರ್ವರ್ತನೆ ದುರಾಚಾರಗಳನ್ನು ಬಹು ಕಟುವಾದ ಶಬ್ದಗಳಿಂದ ಖಂಡಿಸಿರುವರು. ಮಡಿವಾಳ ಮಾಚಿದೇವ, ಅಂಬಿಗರ ಚೌಡಯ್ಯ, ಚನ್ನಬಸವ, ಕಾಡಸಿದ್ಧೇಶ್ವರ ಇವರ ವಚನಗಳನ್ನು ನೋಡಿದರೆ ನಾವು ಹೇಳುವದರ ಸತ್ಯತೆಯು ಕಂಡುಬರುವದು. ಶಿವಶರಣರು ಜಗತ್ತು ಮಾಯಾಮಯವಾದದ್ದು, ಪಾಪಮಯವಾದದ್ದು ಎಂದು ತಿಳಿದು ಅದನ್ನು ತಿರಸ್ಕರಿಸಿಲ್ಲ. ಹಿಂದೂ ಸಾಧುಗಳಲ್ಲಿ ಬಹುಜನರು ಅನೇಕ ಪದ್ಯಗ್ರಂಥಗಳನ್ನು ಕಾವ್ಯಗಳನ್ನೂ ರಚಿಸಿರುವರು. ಅವು ಭಕ್ತಿಯಿಂದ ತುಂಬಿತುಳುಕುತ್ತಿರಬಹುದು. ಆದರೆ ಅವುಗಳಲ್ಲಿ ಅವರು ಸಂಸಾರವನ್ನು ಅಳಿದು ಅದನ್ನು ಬಿಟ್ಟುಕೊಟ್ಟು ಹೋಗಬೇಕೆಂದು ಯಾವಾಗಲೂ ಉಪದೇಶಿಸಿರುವದು ಕಂಡುಬರುತ್ತದೆ. ಆದರೆ ವೀರಶೈವ ವಚನಕಾರರು ಹೀಗೆ ಬೋಧಿಸಿರುವದಿಲ್ಲ. ಅವರು ಸಂಸಾರವನ್ನು ದೂಷಿಸುತ್ತ ಬಂದರೂ ಅವರು ಅದನ್ನು ಬಿಟ್ಟುಕೊಡದೆ ಅದನ್ನು ಉಚ್ಚತರವಾದ ಸ್ಥಿತಿಗೆ ತರಲು ಪ್ರಯತ್ನಿಸುತ್ತ ಬಂದಿರುತ್ತಾರೆ.

ಇಂಥ ಸಮಾಜಸುಧಾರಕರ ಯೋಗ್ಯತೆಯು ಕೇವಲ ಜ್ಞಾನಿಗಳಿಗಿಂತ ಕಡಿಮೆಯಾದದ್ದಲ್ಲ. ಇಷ್ಟೇ ಅಲ್ಲ, ಅವರು ಹೆಚ್ಚಿನ ತರಗತಿಯವರೆಂತಲೇ ನಾವು ಒಪ್ಪಬೇಕು. ಇವರು ತಮ್ಮ ಪ್ರಯತ್ನಗಳಲ್ಲಿ ಸಮಾಜದವರ ರೋಷಕ್ಕೆ ಪಾತ್ರರಾಗಿ ಅತ್ಯಂತ ಕಷ್ಟಗಳಿಗೆ ಗುರಿಯಾಗಬೇಕಾಗುತ್ತದೆ. ಜೀಜಸ್ ಕ್ರೈಸ್ತನು ತನ್ನ ಸಮಾಜಸೇವಾ ಕಾರ್ಯದಲ್ಲಿ ಘಾತಿಸಲ್ಪಡುವ ಪ್ರಸಂಗವು ಬಂದೊದಗಿತು. ಮಹಮ್ಮದ ಪೈಗಂಬರನು ದೇಶತ್ಯಾಗವನ್ನು ಮಾಡಬೇಕಾಯಿತು. ಬಸವೇಶ್ವರನ ಕಾಲದಲ್ಲಿ ಶಿವಶರಣರು ಉಳಿವೆಯ ಭಯಾನಕ ಅರಣ್ಯವನ್ನು ಸೇರಬೇಕಾಯಿತು. ಈ ಬಗೆಯ ಉದಾಹರಣೆಗಳು ಇತಿಹಾಸದಲ್ಲಿ ಆಗಿಂದಾಗ್ಗೆ ದೊರಕುತ್ತವೆ. ಆದರೆ ತತ್ವವೇತ್ತಿಯು ಈ ಬಗೆಯ ಸಮಾಜದ ಹಿಂಸೆಗಳಿಗೆ ಒಳಪಡುವ ಪ್ರಸಂಗಗಳು ಬಹು ಕಡಿಮೆ. ಅವನು ತನ್ನ ವಿಚಾರಗಳನ್ನು ಬರೀ ಬರೆಯುತ್ತ ಸಾಗುವನು. ಆದರೆ ಇಂಥವರಿಂದ ಮಹತ್ವದ ರಾಷ್ಟ್ರೀಯ ಆಂದೋಲನಗಳು ಉದ್ಭವಿಸಲಾರವು.

ವೀರಶೈವರು ತಮ್ಮ ಆಚಾರ ವಿಚಾರಗಳಲ್ಲಿ ಕೆಲವು ಕ್ರಮಗಳನ್ನು ಗೊತ್ತುಪಡಿಸಿರುವರು. ಮತ್ತು ಅವುಗಳಲ್ಲಿ ಕೆಲವು ಭೇದಗಳನ್ನು ಮಾಡಿರುವರು. ಅವುಗಳಲ್ಲಿ ಮುಖ್ಯವಾದವುಗಳು, ಪಂಚಾಚಾರ, ಸಪ್ತಾಚಾರ ಇವುಗಳೇ ಇರುತ್ತವೆ. ಲಿಂಗಾಚಾರ ಸದಾಚಾರ, ಶಿವಾಚಾರ, ಗಣಾಚಾರ, ಮತ್ತು ಭೃತ್ಯಾಚಾರ ಇವು ಪಂಚಾಚಾರಗಳಲ್ಲಿ ಬರುತ್ತವೆ.

ಕ್ರಿಯಾಚಾರ, ಜ್ಞಾನಾಚಾರ, ಭಾವಾಚಾರ, ಸತ್ಯಾಚಾರ, ನಿತ್ಯಾಚಾರ, ಧರ್ಮಾಚಾರ, ಸರ್ವಾಚಾರ ಸಂಪತ್ತು ಇವುಗಳು ಸಪ್ತಾಚಾರಗಳಲ್ಲಿ ಬರುತ್ತವೆ.

ಈ ಆಚಾರಗಳಲ್ಲಿ ಪಂಚಾಚಾರ ಸ್ವರೂಪು ಜನರ ಪರಿಚಯಕ್ಕೆ ಬಹಳವಾಗಿ ಬಂದಿರುತ್ತದೆ. ಈ ಬಗ್ಗೆ ಲೇಖಗಳು ಆಗಿಂದಾಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಶಿವಾನುಭವ ಪತ್ರಿಕೆಯಲ್ಲಿಯೂ ಇವು ಅನೇಕ ಸಾರೆ ವಿವೇಚಿಸಲ್ಪಟ್ಟಿವೆ. ಈ ಆಚಾರಗಳು ಮನುಷ್ಯನು ಜನತೆಯಲ್ಲಿ ಇದ್ದುಕೊಂಡು ಹ್ಯಾಗೆ ವರ್ತಿಸಬೇಕು ಎಂಬದನ್ನು ಮುಖ್ಯವಾಗಿ ವಿವರಿಸುತ್ತವೆ.

ಆದರೆ ಸಪ್ತಾಚಾರಗಳು ಮನುಷ್ಯನು ತನ್ನ ಆತ್ಮವಿಕಾಸವನ್ನು ಹ್ಯಾಗೆ ಮಾಡಬೇಕೆಂಬುದನ್ನು ವಿವರಿಸುತ್ತವೆ.

ಈ ಸಪ್ತಾಚಾರಗಳಲ್ಲಿ ನಾವು ಮೂರು ಭಾಗಗಳನ್ನು ಕಲ್ಪಿಸಬಹುದು. ಕ್ರಿಯಾಚಾರ, ಜ್ಞಾನಾಚಾರ, ಭಾವಾಚಾರ ಇವುಗಳನ್ನು ಮೊದಲನೇ ಭಾಗದಲ್ಲಿ, ಸತ್ಯಾಚಾರ, ನಿತ್ಯಾಚಾರ, ಧರ್ಮಾಚಾರ ಇವುಗಳನ್ನು ಎರಡನೇ, ಭಾಗದಲ್ಲಿ ಮತ್ತು ಸರ್ವಾಚಾರ ಸಂಪತ್ತು ಇದನ್ನು ಮೂರನೇ ಭಾಗದಲ್ಲಿ ಸೇರಿಸಬಹುದು.

ಮನುಷ್ಯನಿಗೆ ಸ್ಥೂಲ, ಸೂಕ್ಷ್ಮ, ಕಾರಣ ಎಂಬ ಮೂರು ಶರೀರಗಳಿದ್ದು ಅವುಗಳ ಮೇಲೆ ಪರಿಣಾಮಗಳಾದಂತೆ ಅನುಕ್ರಮವಾಗಿ ಆಯಾಆಚಾರಗಳಿಗೆ ಕ್ರಿಯಾಚಾರ, ಜ್ಞಾನಾಚಾರ ಮತ್ತು ಭಾವಾಚಾರಗಳೆಂದು ಹೇಳಬಹುದು. ವಚನಕಾರರು ಇವುಗಳ ವ್ಯಾಖ್ಯೆಗಳನ್ನು ಕೆಲವು ಉದಾಹರಣೆಗಳ ಮೂಲಕ ವಿವರಿಸಿದ್ದಾರೆ. ಕ್ರಿಯಾಚಾರವು ಪಾದೋದಕ ಮತ್ತು ಪ್ರಸಾದ ಇವುಗಳ ಸೇವನೆಯನ್ನು ಮಾಡುವದೇ ಇರುತ್ತದೆ. ಇವು ಬಾಹ್ಯ ಆಚಾರಗಳಾಗಿವೆ. ಇವುಗಳ ಜ್ಞಾನವನ್ನು ಉಂಟು ಮಾಡಿಕೊಳ್ಳುವದಕ್ಕೋಸ್ಕರ ವಚನಾನುಭಾವವನ್ನು ಮಾಡಿಕೊಳ್ಳುವದೇ ಜ್ಞಾನಾಚಾರವೆನಿಸಿಕೊಳ್ಳುವದು. ಹೀಗೆ ಜ್ಞಾನಕ್ರಿಯೆಗಳಿಂದ ಸ್ವಾತ್ಮಾನುಭಾವವನ್ನು ಹೊಂದಿ ಸದ್ಗುಣಿಯಾಗಿ ವರ್ತಿಸುವದೇ ಭಾವಾಚಾರವೆನಿಸಿಕೊಳ್ಳುದು. ಇವು ಮೊದಲನೇ ಭಾಗದಲ್ಲಿಯ ಆಚಾರಗಳು.

ಎರಡನೇ ಭಾಗದಲ್ಲಿ ಸತ್ಯಾಚಾರ, ನಿತ್ಯಾಚಾರ, ಧರ್ಮಾಚಾರ, ಇವುಗಳು ಬರುತ್ತವೆ. ಮೊದಲನೇ ಭಾಗದಲ್ಲಿಯ ಆಚಾರಗಳು ದೃಢ

ಪಡಬೇಕಾದರೆ ಈ ಎರಡನೇ ಭಾಗದಲ್ಲಿಯ ಆಚಾರಗಳಂತೆ ವರ್ತಿಸುವದು ಅವಶ್ಯವು

ಸತ್ಯಾಚಾರವು ಕೈಕೊಂಡ ಕಾರ್ಯಗಳಲ್ಲಿ ವಿಶ್ವಾಸವನ್ನಿಟ್ಟುಕೊಂಡು ನುಡಿದಂತೆ ನಡೆಯಬೇಕು. ಹೀಗೆ ನಡೆಯುವದನ್ನು ಸ್ವಲ್ಪಾದರೂ ಬಿಟ್ಟು ಕೊಡದೆ ಗಟ್ಟಿ ಮನಸ್ಸಿನಿಂದ ವರ್ತಿಸಬೇಕು. ಇದು ನಿತ್ಯಾಚಾರವೆನಿಸುವದು. ಈ ಪ್ರಕಾರ ವರ್ತಿಸಿ ಆಯಾ ಆಚಾರಗಳನ್ನು ತನ್ನಲ್ಲಿ ಒಳಪಡಿಸಿಕೊಳ್ಳತಕ್ಕದ್ದು. ಇದು ಧರ್ಮಾಚಾರವೆನಿಸುವದು. ಹೀಗೆಇವು ಎರಡನೇ ಭಾಗದಲ್ಲಿಯ ಆಚಾರಗಳಿವೆ.

ಪಿಂಡಾದಿ ಜ್ಞಾನಶೂನ್ಯಾಂತವಾದ ಏಕೋತ್ತರ ಶತಸ್ಥಲದ ಮಾರ್ಗವನ್ನು ಅನುಸರಿಸುವದು ಸರ್ವಾಚಾರ ಸಂಪತ್ತೆನಿಸಿಕೊಳ್ಳುದು. ಈ ೧೦೧ ಸ್ಥಲಗಳ ವಿಸ್ತಾರವಾದ ನಿರೂಪಣೆಯು ವೀರಶೈವ ಗ್ರಂಥಗಳಲ್ಲಿ ವಿಶೇಷವಾಗಿ ಬಂದಿರುತ್ತದೆ.

ಹೀಗೆ ವೀರಶೈವ ವಚನಕಾರರು ಆಚಾರ ವಿಷಯವನ್ನು ಕುರಿತು ಬಹು ದೀರ್ಘವಾದ ವಿಚಾರವನ್ನು ಹೊರಗೆಡವಿರುವರು. ಅವುಗಳ ಮರ್ಮಗಳನ್ನು ನಾವು ಕಂಡುಹಿಡಿದು ಅವುಗಳನ್ನು ಪ್ರಚಾರಪಡಿಸುವದು ಈ ಕಾಲಕ್ಕೆ ಬಹಳೇ ಅವಶ್ಯವಿದೆ.

ಚನ್ನಬಸವೇಶ್ವರನು ಈ ಪಂಚಾಚಾರ ಮತ್ತು ಸಪ್ತಾಚಾರಗಳ ಸ್ವರೂಪನ್ನು ವಿವರಿಸಿ ಅವುಗಳಲ್ಲಿಯ ಪರಸ್ಪರ ಸಂಬಂಧವನ್ನು ಕೆಳಗೆ ಬರೆದ ಮೇರೆಗೆ ತನ್ನ ಒಂದು ವಚನದಲ್ಲಿ ಹೇಳಿರುವನು.

ಪಂಚಾಚಾರಗಳು.

ವಚನ

ಅಯ್ಯಾ ಶ್ರೀಗುರು ಕರುಣಿಸಿಕೊಟ್ಟ ಲಿಂಗಜಂಗಮವಲ್ಲದೆ ಅನ್ಯ ದೈವಂಗಳ ತ್ರಿಕರಣದಲ್ಲಿ ಅರ್ಚಿಸದಿಪ್ಪುದೇ ಲಿಂಗಾಚಾರವೆಂದೆನಯ್ಯಾ.

ಭಕ್ತನಾದಡೆ ಸತ್ಯ ಶುದ್ಧಕಾಯಕ, ಮಹೇಶನಾದಡೆ ಸತ್ಯಶುದ್ಧ ಭಿಕ್ಷಕವ ಬೇಡಿ ಸಮಸ್ತ ಪ್ರಾಣಿಗಳಲ್ಲಿ ಪಾತ್ರಾಪಾತ್ರವ ತಿಳಿದು ಹಸಿವು ತೃಷೆ ಶೀತಕ್ಕೆ ಪರಹಿತಾರ್ಥಿಯಾಗಿರ್ಪುದೇ ಸದಾಚಾರವೆಂದೆನಯ್ಯ.

ಗುರುಮಾರ್ಗಾಚಾರದಲ್ಲಿ ನಿಂದ ಶಿವಲಾಂಛನಧಾರಿಗಳೆಲ್ಲ ಪರಶಿವ ಲಿಂಗವೆಂದು ಭಾವಿಸಿ ಅರ್ಥಪ್ರಾಣಾಭಿಮಾನವನೊಪ್ಪಿಸುವದೇ ಶಿವಾಚಾರವೆಂದೆನಯ್ಯಾ.

ಅಷ್ಟಾವರಣಂಗಳ ಮೇಲೆ ನಿಂದೆ ಕುಂದುಗಳು ಬಂದು ತಟ್ಟಿದಲ್ಲಿ ಗಣಸಮೂಹವನೊಡಗೂಡಿ ಆ ಸ್ಥಲವ ತ್ಯಜಿಸುವದೇ ಗಣಾಚಾರವೆಂದೆನಯ್ಯ.

ಜಾತ್ಯಾಶ್ರಮ ಕುಲಗೋತ್ರ ನಾಮರೂಪ ಕ್ರಿಯಾರಹಿತವಾಗಿ ಗುರೂಪಾವಸ್ಥೆಯಿಂದ ಗುರುಪ್ರತ್ಯಕ್ಷವ ಮಾಡಿ, ಆ ಗುರುವಿನಿಂದ ಚಿದ್ಘನ ಮಹಾಲಿಂಗವ ಪಡೆದು, ಆ ಲಿಂಗಸಹಿತವಾಗಿ ಭಕ್ತಿ ಜ್ಞಾನ ವೈರಾಗ್ಯ ಪಾದೋದಕ ಪ್ರಸಾದ ವಿಭೂತಿ ರುದ್ರಾಕ್ಷಿ ಮಂತ್ರ ಮೊದಲಾದ ಷಟ್ಸ್ಥಲ ಮಾರ್ಗದಲ್ಲಿ ನಿಂದ ಭಕ್ತಗಣಂಗಳಲ್ಲಿ ಪಂಚಸೂತ್ಮಕಂಗಳ ಕಳ್ಪಿಸದೆ, ಅವರಿದ್ದ ಸ್ಥಲಕ್ಕೆ ಹೋಗಿ ತನು ಮನ ಧನಂಗಳ ಸಮರ್ಪಿಸಿ ಅವರೊಕ್ಕು ಮಿಕ್ಕುದ ಹಾಯಿಸಿ ಹಸ್ತಾಂಜಲಿತರಾಗಿ ಪ್ರತಿ ಉತ್ತರವ ಕೊಡದಿರ್ಪುದೆ ಭೃತ್ಯಾಚಾರವೆಂದೆನಯ್ಯ.

ಸಪ್ತಾಚಾರಗಳು.

ಮಲಮಾಯಾ ಪಾತಕ ಸೂತಕ ರಹಿತನಾದ ದೀಕ್ಷಾಗುರು ಶಿಕ್ಷಾಗುರು ಜ್ಞಾನಗುರುವಿಂದ ವೇಧಾಮಂತ್ರ ಕ್ರಿಯಾದೀಕ್ಷೆಯ ಪಡೆದು ದ್ವಾದಶ ಮಲಪಾಶ ಕರ್ಮವ ತ್ಯಜಿಸಿ ಮನಮಾರತ ಮೊದಲಾದ ದ್ವಾದಶ ಇಂದ್ರಿಯಂಗಳ ಗುರುಪಾದಜಲದಿಂದ ಪ್ರಕ್ಷಾಲಿಸಿ ದಂತ ಪಂಕ್ತಿ ಕ್ರಿಯೆಗಳ ಮಾಡಿ ಕಟಿಸ್ನಾನ ಕಂಠಸ್ನಾನ ಮಂಡೆಸ್ನಾನ ಸರ್ವಾಂಗ ಸ್ನಾನವ ಮಾಡಿ ಕ್ರಿಯಾಭಸಿತದಿಂದ ಸ್ನಾನ ಧೂಳನ ಧಾರಣ ಮರ್ಮಂಗಳ ತಿಳಿದಾಚರಿಸಿ ಸಾಕಾರ ನಿರಾಕಾರ ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಲಿಂಗ ಜಂಗಮರ ನರ್ಚಿಸಿ, ನಿರ್ವಂಚಕತ್ವದಿಂದ ಘನ ಪಾವ ತೀರ್ಥ ಪ್ರಸಾದ ಮಂತ್ರದಲ್ಲಿ ನಿಂದ ನಿಜಾವಸ್ಥೆಯೇ ಕ್ರಿಯಾಚಾರವೆಂದೆನಯ್ಯಾ.

ಅಂತರಂಗದಲ್ಲಿ ಕರಣ ವಿಷ ಕರ್ಕಶದಿಂದಹಂಕರಿಸಿ ಗುರುಹಿರಿಯರಲ್ಲಿ ಸಂಕಲ್ಪ ವಿಕಲ್ಪಂಗಳಿಂದ ಕುಂದು ನಿಂದೆ ಹಾಸ್ಯರೋಷವೆಂಬ ಜ್ಞಾನವ ಒಳಸದೆ ಪರಮಪಾತಕರ ದರ್ಶನ ಸ್ಪರ್ಶನ ಸಂಭಾಷಣೆ ಸಮಪಂಕ್ತಿಪಾಕವ ಕೊಳ್ಳದೆ, ಸತ್ಯ ನಡೆನುಡಿಯುಳ್ಳ ಶಿವಶರಣ ಗಣಂಗಳಲ್ಲಿ ಪಟ್ಟಿಭಕ್ತಿ ಮುಂದುಗೊಂಡು, ಎರಡೆಂಬತ್ತುಕೋಟಿ ವಚನಾನುಭಾವದಲ್ಲಿ ನಿಂದ ನಿಲುಕಡೆಯೇ ಜ್ಞಾನಾಚಾರವೆಂದೆನಯ್ಯ.

ತನುವಿನ ವಿಕಾರದಿಂದ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳ ಬಳಕೆಯ ಮಾಡದೆ ಲೋಕದಂತೆ ನಡೆನುಡಿಗಳ ಬಳಸದೆ ತನ್ನ ಗುಣಾವಗುಣಂಗಳ ಸ್ವಾತ್ಮಾನುಭವದಿಂದ ಅರಿದು ದುರ್ಗುಣವ ತ್ಯಜಿಸಿ ಸದ್ಗುಣವ ಹಿಡಿದು ಬಿಡದಿರ್ಪುದೇ ಭಾವಾಚಾರವೆಂಬೆನಯ್ಯ.

ಕೊಡುವಲ್ಲಿ ಕೊಂಬಲ್ಲಿ ಅತಿ ಆಶೆಯಿಂದ ಹುಸಿ ನುಡಿಯ ನುಡಿಯದೆ ಕೊಟ್ಟ ಭಾಷೆಗಳ ಪ್ರಾಣಾಂತ ಬಂದರೂ ನುಡಿಯಂತೆ ನಡೆವುದೇ ಸತ್ಯಾಚಾರವೆಂಬೆ ನೋಡಾ.

ಕಾಲಕಾಮದ ಬಾಧೆಗೊಳಗಾದ ಹಠಯೋಗದ ಕಟ್ಟು ಮುಟ್ಟು ಸೋಂಕುಗಳಲ್ಲದೆ ಲಿಂಗಾಣತಿಯಿಂ ಬಂದೊದಗಿದ ಪರಿಣಾಮ ಪ್ರಸಾದದಲ್ಲಿ ಲೋಲುಪ್ತನಾಗಿರ್ಪುದೇ ನಿತ್ಯಾಚಾರವೆಂಬೆ ನೋಡಾ.

ಸರ್ವಾವಸ್ಥೆಯಲ್ಲಿ ದಶವಿಧ ಪಾದೋದಕ ಏಕಾದಶ ಪ್ರಸಾದ ಮೂವತ್ತಾರು ಪ್ರಣವ ಮೊದಲಾದ ಮಹಾ ಮಂತ್ರಂಗಳಲ್ಲಿ ಏರಕತ್ವವನುಳ್ಕದೇ ಧರ್ಮಾಚಾರವೆಂಬೆ ನೋಡಾ.

ಇಂತೀ ಮರ್ಮವ ಗುರುಕೃಪೆಯಿಂದರಿದು ಆಚಾರವೇ ಅಂಗವನ ಪ್ರಾಣ ಭಾವಂಗಳಾಗಿ ಇಹಪರಂಗಳ ಮೀರಿ, ಪಿಂಡಾದಿ ಜ್ಞಾನ ಶೂನ್ಯಾಂತವಾದ ಏಕೋತ್ತರ ಮಾರ್ಗದಲ್ಲಿ ನಿಂದು ಬಯಲೊಳಗೆ ಬಚ್ಚಬರಿಯ ನಿರವಯವ ಸಾಧಿಸುವದೇ ಸರ್ವಾಚಾರ ಸಂಪತ್ತಿನಾಚಾರದ ನಿಲುಕಡೆ ನೋಡಾ.

ಇಂತು ಆಚಾರದ ಕುರುಹು ತಿಳಿದು ಪಂಚಾಚಾರವ ಬಹಿಷ್ಕರಿಸಿ ಸಪ್ತಾಚಾರವ ಗೋಪ್ಯವ ಮಾಡಿ ದರಿದ್ರಗೆ ನಿಧಿನಿಧಾನ ದೊರೆತಂತೆ ರೋಗಿಗೆ ವೈದ್ಯಲತೆ ದೊರೆತಂತೆ, ಮೂಕ ಫಲ ಸವಿದಂತೆ ಕಳ್ಳಗೆ ಜೇಳೂರಿದಂತೆ ತಮ್ಮ ಚಿದಂಗಸ್ವರೂಪವಾದ ಶರಣ ಗಣಂಗಳಲ್ಲಿ ಉಸುರಿ ದುರ್ಜನರಲ್ಲಿ ಬಳಸದೆ ನಿಂದ ಪರಮಸುಖಿ ನಿಮ್ಮ ಶರಣರಲ್ಲದೆ ಉಳಿದ ಕಣ್ಣುಗೆಟ್ಟಣ್ಣಗಳಿತ್ತ ಬಲ್ಲರಯ್ಯ ಕೂಡಲ ಚನ್ನಸಂಗಮದೇವಾ.

ಲಿಂಗಾಯತರು ಮತ್ತು ಆರಾಧ್ಯರು

("*Mysore Tribes and Castes*" ಎಂಬ ಪುಸ್ತಕದಲ್ಲಿನ ಪ್ರಕರಣಗಳ ಮೇಲೆ ವಿಚಾರ)

[ಲೇಖಕ:— ಜೀರಗೆ ಬಸವಲಿಂಗಪ್ಪ]

(ಹಿಂದಣಿಂದ ಮುಂದುವರಿದದ್ದು)

ಈಗಿನ ಕಾಲದ ಪದ್ಧತಿಯು ಯಾವ ವಿಷಯವನ್ನಾದರೂ ಬರೆಯ ಬೇಕಾದರೂ ಬರೀ ಕೇಳಿಕೆಗಳ ಮೇಲೆ ಅಥವ ಇತರರ ಉಕ್ತಿಗಳ ಮೇಲೆ ಬರೆಯತಕ್ಕದ್ದಾಗಿರುತ್ತದೆ. ವೀರಶೈವ ಮತದ ವಿಚಾರವಾಗಿ ಸತ್ಯ ವಿಚಾರವನ್ನು ಕಂಡುಹಿಡಿಯಬೇಕಾದರೆ, ದೊರೆಯತಕ್ಕ ಆಗಮ ಗಳನ್ನೂ, ವಿಸ್ತಾರವಾದ ವಚನಗಳನ್ನೂ ಮತ್ತು ಈ ವರೆಗಿನ ಸ್ವತಂತ್ರ ಗ್ರಂಥಗಳನ್ನೂ ಅಧ್ಯಯನ ಮಾಡಬೇಕು. ಬರೀ ಊಹೆಗಳು ಪ್ರಯೋ ಜನವಿಲ್ಲ. ಈಗಿನ ಕಾಲದಲ್ಲಿ ಪುಸ್ತಕಗಳು ತುಡಕಲ್ಪಡುತ್ತವೆ. ನಿರ್ದೋಷ ವಾದ ಅಧ್ಯಯನವನ್ನು ಮಾಡಬೇಕು. ಎರಡು ವಿಧವಾದ ವೀರಶೈವ ಗಳಿಲ್ಲವು. ವೀರಶೈವದ ಅತ್ಯಂತ ಮುಖ್ಯವಾದ ತತ್ವಗಳಲ್ಲೊಂದಾದದ್ದು ಜಾತಿಪದ್ಧತಿಯನ್ನು ದೂರ ಮಾಡತಕ್ಕದ್ದು. ನಾವು ಸ್ಪಷ್ಟವಾಗಿರೋಣ.

ಆರಾಧ್ಯರು ಹತ್ತು ದಿವಸಗಳ ವರೆಗೂ ಮೃತಿ ಸೂತಕವನ್ನು ಆಚರಿಸುತ್ತಾರೆಂತಲೂ, ಏಕೋದಿಷ್ಟ ಮೊದಲಾದ ಸಂಸ್ಕಾರಗಳನ್ನು ನಡೆಸುತ್ತಾರೆಂತಲೂ ಹೇಳಲ್ಪಟ್ಟಿದೆ. ಆಗಮಗಳಲ್ಲೂ, ವಚನಗಳಲ್ಲೂ, ಇತರ ಗ್ರಂಥಗಳಲ್ಲೂ ವೀರಶೈವರಿಗೆ ಪಂಚಸೂತಕಗಳಿಲ್ಲವೆಂದು ಹೇಳ ಲ್ಪಟ್ಟಿಲ್ಲವೆ? ವಿವೇಕ ಚಿಂತಾಮಣಿಯಲ್ಲಿ ವೀರಶೈವ ಲಕ್ಷಣವನ್ನು ಹೇಳುವೆಡೆಯಲ್ಲಿ, ವೀರಶೈವರಿಗೆ ಪಂಚಸೂತಕಗಳಿಲ್ಲವೆಂದು ಹೇಳಿಲ್ಲವೆ? ಮೃತಿಸೂತಕವನ್ನು ಆಚರಿಸತಕ್ಕದ್ದು ಪಂಚಸೂತಕಗಳಲ್ಲೊಂದಾಗಿರು ತ್ತದೆ. ಅದಾವುದೆಂದರೆ—ಪ್ರೇತಸೂತಕವು. ಆರಾಧ್ಯರು ತಾವು ಯಾರ ವಂಶಕ್ಕೆ ಸೇರಿದವರೆಂದು ಹೇಳುತ್ತಾರೋ, ಅಂತಹ ರಾಘವಾಂಕರು ಪ್ರೇತಸೂತಕವನ್ನು ಉಚ್ಚಾಟಿಸಲಿಲ್ಲವೇ? ಆತನು ತನ್ನ ಮರಣ ಸಮಯದಲ್ಲಿ ಗಣಾರಾಧನೆ ಮೊದಲಾದವುಗಳನ್ನು ನಡಿಸಲಿಲ್ಲವೇ? ಪ್ರಸಕ್ತ ಪುರಾಣದಲ್ಲಿ ಆರಾಧ್ಯರು ಹತ್ತು ದಿವಸಗಳ ವರೆಗೂ ಮೃತಿ ಸೂತಕವನ್ನು ಆಚರಿಸುತ್ತಾರೆಂದು ಏತಕ್ಕೆ ಹೇಳಿದೆ?

ಲಿಂಗಾಯತರಿಗೆ ಸಂಬಂಧಪಟ್ಟ ಪ್ರಕರಣದಲ್ಲಿ, ಲಿಂಗಾಯತರಿಗೆ ಪಂಚಾಚಾರ ಷಟ್‌ಸ್ಥಲಗಳು ಹೇಳಲ್ಪಡದೇ ಬಿಟ್ಟಿರುತ್ತದೆ. ಆರಾಧ್ಯ ರಿಗೆ ಸಂಬಂಧಪಟ್ಟ ಪ್ರಕರಣದಲ್ಲಾದರೋ, ಆರಾಧ್ಯರಿಗೆ ಅವು ಜೀವ ಕಳೆಯಿಂದ ವರ್ಣಿಸಲ್ಪಟ್ಟಿರುತ್ತದೆ. ಹೀಗೇಕೆ ಮಾಡಿದೆಯೋ ನನಗೆ ಗೊತ್ತಾಗುವದಿಲ್ಲ. ಸಾಧಾರಣ ಲಿಂಗಾಯತರು ಅವುಗಳಿಗೆ ಬಾಧ್ಯ ರಲ್ಲವೆಂದು ಅರ್ಥ ಮಾಡಬೇಕೆಂದೋ? ವೀರಶೈವದ ಸಾರವೇ ಷಟ್ ಸ್ಥಲ ಪಂಚಾಚಾರಗಳಾಗಿರುತ್ತವೆ. ಅದರ ಬುಡವೇ ಜಾತಿ ಪದ್ಧತಿ ನಿರಾಕರಣೆಯಾಗಿಯೂ ಮತ್ತು ಎಲ್ಲ ಶಿವಭಕ್ತರನ್ನು ಸಮಭಾವದಿಂದ ಕಾಣತಕ್ಕದ್ದಾಗಿಯೂ ಇರುತ್ತದೆ. ಈ ಕ್ರಮದಿಂದ, ಷಟ್‌ಸ್ಥಲ ಪಂಚಾ ಚಾರಗಳು ನಿಜ ವೀರಶೈವರ ಆಸ್ತಿಯಾಗಿರುತ್ತದೆ. ಆರಾಧ್ಯರುಗಳು, ಈ ವರೆಗೂ ವಿಚಾರಿಸಲ್ಪಟ್ಟ ಪ್ರಕರಣದಲ್ಲಿ ಕಾಣುವಂತೆ ತಾವು ಬ್ರಾಹ್ಮ ಣ್ಯಕ್ಕೆ ಹಿಂದಕ್ಕೆ ಹೆಜ್ಜೆ ಇಟ್ಟ ಮೇಲೆ, ಅವುಗಳನ್ನು (ಷಟ್‌ಸ್ಥಲ ಪಂಚಾಚಾರಗಳನ್ನು) ಹೊಂದಿರುವದಕ್ಕೆ ಅರ್ಹರಾಗಿರುತ್ತಾರೆಯೇ?

ಲಿಂಗ ಜನಿವಾರಗಳೆರಡನ್ನೂ ಧರಿಸತಕ್ಕ ಕೆಲವು ವೀರಶೈವ ತತ್ವಗ ಳನ್ನೂ ಕೆಲವು ಬ್ರಾಹ್ಮಣ ತತ್ವಗಳನ್ನೂ ಆಚರಿಸತಕ್ಕ ವಿಧಾನಗಳು ಬ್ರಾಹ್ಮ ಣ್ಯಕ್ಕೂ ವೀರಶೈವಕ್ಕೂ ಮಧ್ಯಸ್ಥವಾದ ಒಂದು ವಿಧಾನವೆಂದು ತಿಳಿಯ ಬೇಕು. ಅಂತಹ ವಿಧಾನವು ಶುದ್ಧ ವೀರಶೈವವೆಂದಾಗಲೀ ಶುದ್ಧ ಬ್ರಾಹ್ಮ ಣ್ಯವೆಂದಾಗಲೀ ಗಣಿಸತಕ್ಕದ್ದಲ್ಲ. ಈ ಕಾರಣದಿಂದ ಮೈಸೂರ ದೇಶದ ಆರಾಧ್ಯರು ಈಗ ನಾವು ವಿಚಾರಿಸುತ್ತಿರುವ ಮೇಲ್ಕಂಡ ಪ್ರಕರಣಗಳಲ್ಲಿ ಹೇಳಿದ ಪ್ರಕಾರ ಲಿಂಗಧಾರಣೆಯ ಜತೆಗೆ ಜನಿವಾರವನ್ನು ಧರಿಸಿಕೊಂಡು ಬ್ರಾಹ್ಮಣ ಕರ್ಮಗಳನ್ನು ಆಚರಿಸುತ್ತಿರುವ ಪಕ್ಷದಲ್ಲಿ ಅವರು ಒಂದು ಮಾಧ್ಯಮಿಕವಾದ ಮತದವರೆಂದು ಊಹಿಸಬೇಕಾಗುತ್ತದೆ. ಆದರೆ ಒಂದು ಪ್ರತ್ಯೇಕ ಮತದವರೆಂದು ಊಹಿಸುವದಕ್ಕಾಗುವದಿಲ್ಲ. ಅದೇ ನಿಜ ಸ್ಥಿತಿ ಎಂದು ನಾನು ಹೇಳಲಾರೆ.

ಈ ಮಧ್ಯಸ್ಥವಾದ ಧರ್ಮವು ತೆಲುಗುದೇಶದ ಆರಾಧ್ಯ ಬ್ರಾಹ್ಮ ಣರಿಂದ ಅವಲಂಬಿಸಲ್ಪಟ್ಟಿದ್ದು. ಮಲ್ಲಿಕಾರ್ಜುನ ಪಂಡಿತಾರಾಧ್ಯನ ಕಾಲ ದಷ್ಟು ದೂರಕಾಲದಲ್ಲಿ ನಡೆದದ್ದಾಗಿ ಕಾಣುತ್ತದೆ. ಆತನು ಬಸವನಿಗೆ ಬಸವನ ವೀರಶೈವವನ್ನು ಅಂಗೀಕರಿಸುವ ವಿಚಾರದಲ್ಲಾಗಲೀ ಅಥವಾ ಅನಂಗೀಕಾರ ಮಾಡುವ ವಿಚಾರದಲ್ಲಾಗಲೀ ತನ್ನ ಅಭಿಪ್ರಾಯವನ್ನು

ಕೊಡುವದರಲ್ಲಿ ತನ್ನ ವಂಸಸ್ಸು ವೀರಶೈವಕ್ಕೂ ಬ್ರಾಹ್ಮಣ್ಯಕ್ಕೂ ಮಧ್ಯೆ ಚಲಿಸುತ್ತದೆ ಎಂದು ಹೇಳಿರುತ್ತಾನೆ. ಇದು ತೆಲುಗಿನಲ್ಲಿರುವ ಪಂಡಿತಾರಾಧ್ಯ ಚರಿತ್ರೆಯ ಒಂದು ಪದ್ಯದಿಂದ ತಿಳಿಯಬರುತ್ತದೆ. ಆ ಪದ್ಯಭಾಗ ವಾವುದೆಂದರೆ—

" ಭಕ್ತಿ ಮೀದಿ ನಲಪು ಬ್ರಾಹ್ಮ್ಯಂಬುತೋ ಬೊತ್ತು ಬಾಯಲೇಸು
ನೇನು ಬಸವಲಿಂಗ "

ಅದರ ಅರ್ಥವೇನೆಂದರೆ:— " ಭಕ್ತಿಯಲ್ಲಿರುವ ಲಾಲಸವನ್ನೂ, ಬ್ರಾಹ್ಮ್ಯದಲ್ಲಿರುವ ಭಾಗವನ್ನೂ ನಾನು ಬಿಡಲಾರೆ "— ಪಂಡಿತಾರಾಧ್ಯನು ವೀರ್ಘಾಲೋಚನೆಯ ಮೇಲೆ ಬಸವನ ವೀರಶೈವವನ್ನು ಕಡೆಯಲ್ಲಿ ಅಂಗೀಕರಿಸಿದಾಗ್ಯೂ ಅವನ ಜತೆಯ ಲಿಂಗವಿಲ್ಲದ ಇತರ ಶಿವಾರಾಧ್ಯಬ್ರಾಹ್ಮಣರು ವೀರಶೈವವನ್ನು ಸಂಪೂರ್ತಿಯಾಗಿ ಅಂಗೀಕರಿಸುವದಕ್ಕೆ ಒಪ್ಪಲಿಲ್ಲ. ಅವರು ಲಿಂಗಧಾರಣವನ್ನು ಅಂಗೀಕರಿಸಿ ಜನಿವಾರವನ್ನು ಉಳಿಸಿಕೊಂಡರು. ಅವರು ಕೆಲವು ವೀರಶೈವ ತತ್ವಗಳನ್ನೂ ಕೆಲವು ಬ್ರಾಹ್ಮಣ ತತ್ವಗಳನ್ನೂ ಆಚರಿಸಿದರು. ತೆಲುಗುದೇಶದಲ್ಲಿನ ಈಗಿನ ತೆಲುಗು ಆರಾಧ್ಯ ಬ್ರಾಹ್ಮಣರು ಮೇಲ್ಕಂಡವರ ವಂಶದವರಾಗಿರುತ್ತಾರೆ. ಮೇಲೆ ಹೇಳಿದ ಕೆಲವು ಶಿವಾರಾಧ್ಯ ಬ್ರಾಹ್ಮಣರು ವೀರಶೈವವನ್ನು ಅಂಗೀಕರಿಸುವದೇನೇ ಉಳಿದುಬಿಟ್ಟರು. ತೆಲುಗು ದೇಶದಲ್ಲಿ ಅವರ ವಂಶದವರೂ ಇರುತ್ತಾರೆ. ಎರಡು ಪ್ರಭೇದದವರಿಗೂ ವಿವಾಹ ಸಂಬಂಧವಿರುತ್ತದೆ.

ಬಸವೇಶನೂ ಕೂಡ ಹಠದ ಕೆಲವು ಬ್ರಾಹ್ಮಣರನ್ನು ದರ್ಶಿಸಿದಂತೆ ಕಾಣುತ್ತದೆ. ಅವರು ಒಂದುಕಡೆ ವೀರಶೈವವನ್ನು ಅಂಗೀಕರಿಸಿ ಮತ್ತೊಂದುಕಡೆ ಬ್ರಾಹ್ಮಣಮತದ ಜನ್ನಿವಾರವನ್ನು ಬಿಡಲಾರದೇ ಹೋದರು. ತನ್ನ ವಚನವೊಂದರಲ್ಲಿ ಹೀಗೆ ವೇಚಾಡಿರುತ್ತಾನೆ.

" ಬಡಹಾರುವನೇಸು ಭಕ್ತನಾದಡೆಯು ನೇಣಿನ
ಹಂಗ ಬಿಡ "

ಕೆಲವು ಶೈವ ಬ್ರಾಹ್ಮಣರು ಬಸವನ ವೀರಶೈವವನ್ನು ಅರ್ಧವಾಗಿ ಅಂಗೀಕಾರ ಮಾಡಿದರೂ ಮತ್ತೆ ಕೆಲವರು ವೀರಶೈವವನ್ನು ಸಂಪೂರ್ತಿಯಾಗಿ ಅಂಗೀಕರಿಸಿ ಬ್ರಾಹ್ಮಣ್ಯವನ್ನು ಮೂರ್ತಿಯಾಗಿ ಬಿಟ್ಟುಬಿಟ್ಟರು.

ಅಂತಹವರೆ ಸೋಮನಾರಾಧ್ಯ ಹಂಪೆ ಹರೀಶ್ವರ ದೇವರು ರಾಘವಾಂಕರು ಕೆರೆಸದ್ಯರಸರು ಮತ್ತು ಇನ್ನೂ ಅನೇಕರು ಅವರ ವಂಶಸ್ಥರು ಈಗಿನ ಕಾಲದವರಿಗೂ ಶುದ್ಧ ವೀರಶೈವರಾಗಿಯೇ ನಡೆದುಬಂದರು. ಮತ್ತು ಆರಾಧ್ಯ ಎಂಬ ಹೆಸರಿನಿಂದ ಕರೆಯಲ್ಪಡುತ್ತ ಲಿಂಗಾಯತ ಸಮಾಜಕ್ಕೆ ಒಂದು ಆಭರಣವಾಗಿದ್ದರು. ಅಂತಹ ಮುಖ್ಯವಾದ ಒಂದು ಪ್ರಭೇದದವರು ನಮ್ಮ ವೀರಶೈವದ ಎಲ್ಲೆಯಿಂದ ಬಿಟ್ಟುಹೋದಂತೆ ಕಾಣುವದು. ಲಿಂಗಾಯತ ಸಮಾಜಕ್ಕೆ ಒಂದು ದೊಡ್ಡ ನಷ್ಟವಾಗಿರುತ್ತದೆ. ಅವರ ವಿಷಯವಾಗಿ ಮೇಲ್ಕಂಡ ಪ್ರಕರಣಗಳಲ್ಲಿ ಹೇಳಿರುವ ಸಂಗತಿಯಿಂದ ಸೂಚಿತವಾಗುತ್ತದೆ.

ಬಸವೇಶನಿಗೆ ಮೊದಲು ಆರಾಧ್ಯ ಎಂಬ ಅಂಕಿತವು ಕಾಳಾಮುಖ ಶೈವ ಪಂಡಿತರಿಗೆ ಗೌರವಾಭಿಧಾನವಾಗಿ ಉಪಯೋಗಿಸಲ್ಪಡುತ್ತಿದ್ದಂತೆ ಕಾಣುತ್ತದೆ. ಇದನ್ನು ಆಗಿನ ಕಾಲದ ಕೆಲವು ಶಿಲಾಲೇಖಗಳಿಂದ ನೋಡಬಹುದು. ಕ್ರಿ. ಶ ೧೦೮೪ ರಲ್ಲಿ ಕರ್ಪರಸನಿಂದ ಬರೆಯಲ್ಪಟ್ಟ ಒಂದು ಶಿಲಾಲೇಖವಿರುತ್ತದೆ. ಅದರಲ್ಲಿ ಚಾಳುಕ್ಯ ವಿಕ್ರಮಾದಿತ್ಯನ ಕಾಲದಲ್ಲಿ ದೇವಶಕ್ತಿ ಶಿವಜ್ಞಾನ ಪಂಡಿತನು ಹದಳಿಯ ಒಳಂಬ್ರಾಹ್ಮಣರ ಮುಂದೆ ಗೌರೇಶ್ವರ ದೇವರಿಗೆ ದತ್ತಿಯನ್ನು ಬಿಟ್ಟಂತೆ ಹೇಳಿದೆ. ಕೆಳಗೆ ಕೊಟ್ಟಿರುವ ಆ ಶಿಲಾಲೇಖದ ಪದ್ಯದಲ್ಲಿ ಗೌರವಾರ್ಥದ ಆರಾಧ್ಯ ಎಂಬ ಹೆಸರು ಕರ್ಪರಸನಿಗೆ ಉಪಯೋಗಿಸಲ್ಪಟ್ಟಿದೆ. ಶಿಲಾಲೇಖದ ಪದ್ಯವು ಈ ರೀತಿಯಾಗಿದೆ—

" ಜನಕಂ ವಿಪ್ರಕುಲಾಂಬರದ್ಯುಮಣಿ ಚಂದ್ರ ಕಾರ್ಯ ಸದಾಚಾರವ ॥
ರ್ತಿನಿ ಜಾವಮಾಂಬಿಕೇರ್ಮಲೋರ್ಜಿತ ಯಶಂ ಶ್ರೀ ಕಾಳಿದಾಸಂ ಧರಾ ॥
ವಿನುತಂ ಮಾವಸುಮಾವರಂ ಸಕಲಲೋಕಕ್ಕಾರಾಧ್ಯನಾರಾಧ್ಯನೆಂ ॥
ದುನಿತಾಂತಕುಧರೆ ಬಣ್ಣಿಸುಂ ಬುಧಸಮೂಹ ಕರ್ಪನಂ ಕರ್ಪನಂ ॥

ಈ ಪದ್ಯದಲ್ಲಿ " ಸಕಲಲೋಕಕ್ಕಾರಾಧ್ಯನಾರಾಧ್ಯ " ಎಂಬ ಶಬ್ದವನ್ನು ನೋಡಬಹುದು.

ಅದೇ ಪ್ರಕರಣದಲ್ಲಿ ಆರಾಧ್ಯರು ಲಿಂಗಾಯತರಿಂದ ನೀರು ಮಿಶ್ರವಾಗಿ ಪಾಕಮಾಡಲ್ಪಟ್ಟ ಅಡಿಗೆಯನ್ನು ಸ್ವೀಕರಿಸುವದಿಲ್ಲವೆಂದು ಬರೆಯಲ್ಪಟ್ಟಿರುತ್ತದೆ. ಐವತ್ತು ವರ್ಷಗಳ ನನ್ನ ಅನುಭವದಿಂದ, ಆರಾಧ್ಯರು

ಲಿಂಗಾಯತ ಸಮಾಜದ ಭಾಗ ಮತ್ತು ಒಂದು ಅಂಗವಾಗಿರುತ್ತದೆಂದು ನಾನು ಹೇಳುತ್ತೇನೆ. ಹಿಂದಣ ಸೆನಸಸ್ಸುಗಳಲ್ಲಿ ಅವರು ಲಿಂಗಾಯತರೊಳಗೆ ಬರೆಯಲ್ಪಟ್ಟಿರುತ್ತದೆ. ಅವರು ಜಂಗಮರಾಗಿ ಎಲ್ಲಾ ಲಿಂಗಾಯತರ ಮನೆಗಳಿಗೆ ಬಂದು ಊಟಮಾಡುತ್ತಾರೆ. ಮತ್ತು ಎಲ್ಲಾ ಲಿಂಗಾಯತರು ಅವರ ಮನೆಗಳಿಗೆ ಹೋಗಿ ಊಟಮಾಡುತ್ತಾರೆ.

ಅವೇ ಆರಾಧ್ಯರಿಗೆ ಸಂಬಂಧಪಟ್ಟ ಪ್ರಕರಣದಲ್ಲಿ ಮತ್ತು ಹೇಳುವದೇನಂದರೆ:— ಪ್ರಕೃತಕಾಲದಲ್ಲಿ ಆರಾಧ್ಯರಿಗೂ ಇತರ ಸಾಧಾರಣ ಲಿಂಗಾಯತರಿಗೂ ಪರಸ್ಪರ ವ್ಯವಹಾರಗಳೇನೂ ಇರುವದಿಲ್ಲವೆಂದು ಹೇಳಿವೆ. ಇದರಿಂದ ಊಹೆಮಾಡಬಹುದಾದುದೇನಂದರೆ— ಆರಾಧ್ಯರು ಬಸವೇಶನ ಕಾಲದಿಂದಲೂ ನಡೆದುಬಂದ ಮಿಕ್ಕ ಲಿಂಗಾಯತರ ಸಂಬಂಧವನ್ನು ತಪ್ಪಿಸಿಬಿಡುವದಕ್ಕೆ ಪ್ರಯತ್ನಮಾಡುತ್ತಿರುವದಾಗಿ ಕಾಣುತ್ತದೆ.

ಆರಾಧ್ಯರ ವಿಷಯವಾಗಿ ನಾನು ಕಡೆ ಮಾತನ್ನು ಆಡಬೇಕಾಗಿರುತ್ತದೆ. ಪದ್ಮರಾಜ ಪುರಾಣಕ್ಕೆ ಮಲ್ಲಾರಾಧ್ಯರು ಬರೆದಿರುವ ಉಪೋದ್ಘಾತದ ಪ್ರಕಾರ ಆರಾಧ್ಯರು ತಾವು ಪ್ರಸಿದ್ಧನಾದ ಕೆರೆಪದ್ಮರಸರ ವಂಶೀಯರೆಂದು ಹೇಳುತ್ತಾರೆ. ಹಂಪೆ ಹರೀಶ್ವರ ರಾಘವಾಂಕ ಕೆರೆಪದ್ಮರಸ ಇವರುಗಳ ಕೃತಿಗಳಿಂದ ಅವರೆಲ್ಲರೂ ವೀರಶೈವರಾಗಿದ್ದರೆಂದೂ ಅವರು ವರ್ಣಭೇದವನ್ನು ಖಂಡಿತವಾಗಿ ನಿರಾಕರಿಸಿದರೆಂದೂ ಅವರು ಜನ್ನಿವಾರವನ್ನು ಹಾಕುತ್ತಿರಲಿಲ್ಲವೆಂದೂ ಅವರು ಬ್ರಾಹ್ಮಣ ಕರ್ಮಗಳನ್ನು ನಡೆಸುತ್ತಿದ್ದಿಲ್ಲವೆಂದೂ ಚನ್ನಾಗಿ ಗೊತ್ತಿದೆ. ಇದರ ನಿದರ್ಶನಕ್ಕೆ ಹಂಪೆ ಹರೀಶ್ವರನ ಬಸವರಾಜ ರಗಳೆಯನ್ನು ನೋಡಬಹುದು. ರಾಘವಾಂಕನ ಸಿದ್ಧರಾಮ ಪುರಾಣವನ್ನು ನೋಡಬಹುದು. ಕೆರೆಪದ್ಮರಸನ ದೀಕ್ಷಾಬೋಧೆಯನ್ನು ನೋಡಬಹುದು. ಈಗ ನಾನು ವಿಚಾರಮಾಡುತ್ತಿರುವ ಆರಾಧ್ಯರಿಗೆ ಸಂಬಂಧಪಟ್ಟ ಪ್ರಕರಣದಲ್ಲಿ ಹೇಳಿರುವ ಮೇರೆಗೆ, ಆರಾಧ್ಯರಿಗೆ ಬಸವಜಯಂತಿಯ ಹಬ್ಬವು ಬರೆಯಲ್ಪಡದೆ ಬಿಟ್ಟಿರುತ್ತದೆ. ಮೇಲೆ ಹೇಳಿದ ಮಹಾಪುರುಷ ಬಸವನ ಕೇವಲ ಹತ್ತಿರದ ಹಿಂಬಾಲಕರಾಗಿರುತ್ತಾರೆ. ಪದ್ಮರಾಜಪುರಾಣದಲ್ಲಿ ಈ ಕೆಳಗಣ ವಿಷಯವನ್ನು ನೋಡಬಹುದು. ಕೆರೆಪದ್ಮರಸನು ನರಸಿಂಹ ಬಲ್ಲಾಳನ ಆಸ್ಥಾನಕ್ಕೆ ತ್ರಿಭುವನತಾತಾಚಾರ್ಯನ ಜತೆಗೆ ವಾದಮಾಡುವದಕ್ಕೆ ಹೊರಟಾಗ ಬಸವೇಶ್ವರನ ಗೀತೆಗಳು (ವಚನಗಳು) ಹಾಡಲ್ಪಟ್ಟವೆ. ಮೊನ್ನೆ ತಾನೆ ಕಾಲವಾದ ಆರಾಧ್ಯರು ಅಧಿಕಾರಿಗಳಲ್ಲಿ ಒಬ್ಬರು ಬಸವಾರಾಧ್ಯ ಎಂಬ ಹೆಸರನ್ನು ಧರಿಸಿದ್ದರು. ಕೆರೆಪದ್ಮರಸರ ವಂಶಸ್ಥರಿಗೆ ಅವರ ವೀರಶೈವವು ಬಸವನ ವೀರಶೈವಕ್ಕೆ ವ್ಯತಿರಿಕ್ತವಾದ ಬೇರೆ ವಿಧದ ವೀರಶೈವವೆಂದು ಹೇಳುವದು ಸತ್ಯಕ್ಕೂ ಚಾರಿತ್ರಕ್ಕೂ ವಿರೋಧವಾದ ಮಾತಾಗಿರುತ್ತದೆ. ಆರಾಧ್ಯರು ತಾವು ಗುರುಸಂಪ್ರದಾಯದ ವೀರಶೈವರೆಂದು ಹೇಳಿದರೂ ಹೇಳಿಕೊಳ್ಳಲಿ, ಬಸವೇಶ್ವರನ ಕಾಲದಿಂದಲೂ ತಾವು ಯಾವ ಮತಕ್ಕೆ ಅಂಟಿಕೊಂಡು ಬಂದಿದ್ದರೋ ಆ ಮತದ ಎಲ್ಲೆಯನ್ನು ಬಿಟ್ಟು ಹೋಗದಿರುವವರಾಗಲಿ. (*Census*) ಜನಪರಿಗಣಿತಿಯಲ್ಲಿ ಲಿಂಗಾಯತರು ಅಥವಾ ವೀರಶೈವರು ಎಂಬ ಪಂಕ್ತಿಯಲ್ಲಿ ಈ ವರೆಗೂ ತಾವು ಬರೆಯಿಸುತ್ತಿದಂತೆ ಬರೆಯಿಸುವವರಾಗಲಿ. (*Census*) ಜನಪರಿಗಣಿತಿಯಲ್ಲಿ ಒಂದು ಪ್ರತ್ಯೇಕ ಪಂಜಿತ್ತಿಗೆ ಅಪೇಕ್ಷೆಪಟ್ಟು ಅದರಿಂದ ಚಾರಿತ್ರಪ್ರಸಿದ್ಧವಾದ ದೊಡ್ಡ ವೀರಶೈವ ಸಮಾಜದಲ್ಲಿ ಒಂದು ಕೊರತೆಯನ್ನು ಉಂಟುಮಾಡದಿರುವವರಾಗಲಿ.

ಲಿಂಗಾಯತರಿಗೆ ಸಂಬಂಧಪಟ್ಟ ಪ್ರಕರಣದಲ್ಲಿ ಲಿಂಗಾಯತರ ಒಳಭೇದಗಳನ್ನು ಇಂಡಿಯಾದಲ್ಲಿರುವ ಕ್ರೈಸ್ತ ಮತಾಂತರದವರಿಗೆ ಹೋಲಿಕೆ ಮಾಡಿ ಬರೆದಿರುತ್ತದೆ. ಈ ಹೋಲಿಕೆಯನ್ನು ಮಾಡುವ ಅವಶ್ಯಕವಿದ್ದಿಲ್ಲ. ಇದನ್ನು ನೋಡಿದರೆ ವಿವೇಕಾನಂದರವರ ಕೆಲವು ವಾಕ್ಯಗಳಿಂದ ಬ್ರಾಹ್ಮಣಮತಕ್ಕೂ ಮತಾಂತರಗಳಾಗಿರುತ್ತವೆಂಬುದನ್ನು ನೋಡಬಹುದು ಮೆ॥ ಕಾಂಸನರವರು ಆರ್ಯರು ದಕ್ಷಿಣದೇಶಕ್ಕೆ ಬಂದಾಗ್ಯೆ ಅನೇಕ ದ್ರಾವಿಡರು ಬ್ರಾಹ್ಮಣರು ಮಾಡಲ್ಪಟ್ಟರೆಂದು ತಮ್ಮ ಇಂಡಿಯಾ ದೇಶದ ಚರಿತ್ರೆಯಲ್ಲಿ ಹೇಳುತ್ತಾರೆ.

ಕಡೇ ಮಾತಾಗಿ ನಾನು ಹೇಳುವದೇನೆಂದರೆ, ಹಿಂದೆ ನಡೆದ (*Census*) ಜನಪರಿಗಣಿತಿಗಳಿಂದ ಸಮಾಜದಲ್ಲಿ ವಿಭಾಗಗಳುಂಟಾಗುವ ಪರಿಣಾಮವು ಅತ್ಯಧಿಕ ಆಗಿರುತ್ತದೆ. (*Census*) ಜನಪರಿಗಣಿತಿಗಳು ಲಿಂಗಾಯತ ಸಮಾಜದ ಅನೇಕ ಒಳಪಂಗಡಗಳಲ್ಲಿ ಒಬ್ಬರಿಗಿಂತ ಒಬ್ಬರು ಹೆಚ್ಚಿನ ಕುಲದವರು ಎನ್ನಿಸಿಕೊಳ್ಳಬೇಕೆಂಬ ಆಶೆಯನ್ನು ಎಬ್ಬಿಸಿರುತ್ತದೆ. ವೀರಶೈವ ಮತತತ್ವದ ಮುಖ್ಯ ತಿರುಳಾದ ಶಿವಭಕ್ತರೆಲ್ಲರೂ ಒಂದೇ ಸಮರೆಂಬ ಸಮತಾಭಾವವು ಕೇವಲ ಹಿಂದಕ್ಕೆ ತಳ್ಳಲ್ಪಟ್ಟಿರುತ್ತದೆ. ಇದರ ಫಲಿತಾಂಶವಾಗಿ ಅಹಂಕಾರಗಳೂ ಅತೃಪ್ತಿಗಳೂ ಬೆಳೆದುಹೋಗಿರುತ್ತದೆ.

ಮತ್ತು ಸಮಾಜವು ಕ್ರಮೇಣ ವಿಘಟನೆಯನ್ನು ಹೊಂದುತ್ತಾ ಹೋಗುತ್ತಿದೆ. ಈ ಸ್ಥಿತಿಯು ಮುಂದೆಯೂ ನಡೆಯುತ್ತಾ ಹೋಗುವದಕ್ಕೆ ಅವಕಾಶಕೊಟ್ಟರೆ ಸಮಾಜವು ಇನ್ನು ಒಂದು ಶತಮಾನದಷ್ಟರಲ್ಲಿ ನಿಶ್ಚಯವಾಗಿಯೂ ಅಂತ್ಯವನ್ನು ಹೊಂದುವದಾಗಿರುತ್ತದೆ. ಸಮಾಜದ ಒಳಪಂಗಡಗಳವರು ಶ್ರೇಷ್ಠತ್ವ ನಿಕೃಷ್ಟತ್ವವೆಂಬ ಸುಳ್ಳು ಭಾವಗಳನ್ನು ಬಿಡಬೇಕು. ಎಲ್ಲರೂ ಸರಿಸಮಾನರೆಂದು ತಿಳಿಯಬೇಕು. ಅವರು ಸಾರ್ವತ್ರಿಕವಾದ ಲಿಂಗಾಯತ ಅಥವಾ ವೀರಶೈವ ಎಂಬ ಹೆಸರಿಗೆ ಪ್ರಾಮುಖ್ಯತೆಯನ್ನು ಕೊಡಬೇಕು. ಮತ್ತು ವಿಭಿನ್ನತಾ ಭಾವೋತ್ಪತ್ತಿಗಳಿಗೆ ಕಾರಣಗಳಾದ ಒಳಪಂಗಡಗಳ ಹೆಸರುಗಳನ್ನು ಅಧೀನವನ್ನಾಗಿ ಮಾಡಬೇಕು. ಅಥವಾ ಬಿಟ್ಟುಬಿಡಬೇಕು. ಲಿಂಗಾಯತರು ತಮ್ಮ ಮತವು ಒಂದು ಸಂಪೂರ್ಣ ಸ್ವತಂತ್ರ ಮತವೆಂಬುದನ್ನು ತಿಳಿಯಬೇಕು. (*Census*) ಜನಪರಿಗಣತಿಯಲ್ಲಿ ಲಿಂಗಾಯತ ಸಮಾಜವನ್ನು ಬ್ರಾಹ್ಮಣರ ನಾಲ್ಕು ಜಾತಿಗಳಲ್ಲಿ ಸೇರಿಸುವದು ತಪ್ಪಾಗಿರುತ್ತದೆ. ಲಿಂಗಾಯತವು ಜಾತಿಪದ್ಧತಿಯನ್ನು ನಿರಾಕರಿಸಿ ಬ್ರಾಹ್ಮಣ ಕರ್ಮಗಳನ್ನು ದೂರಮಾಡಿರುವಷ್ಟರಮಟ್ಟಿಗೂ ಮತ್ತು ಲಿಂಗಾಯತರೆಲ್ಲರೂ ಭಕ್ತರೆಂತಲೂ ಅಲಿಂಗಿಗಳೆಲ್ಲರೂ ಭವಿಗಳೆಂತಲೂ ಭಾವಿಸುವಷ್ಟರ ಮಟ್ಟಿಗೂ ಬ್ರಾಹ್ಮಣ ಮತಕ್ಕೆ ವಿರುದ್ಧವಾದುದಾಗಿರುತ್ತದೆ. ಮದ್ರಾಸಿನ ಟಾಗೋರ್ ಲಾ ಪ್ರೊಫೆಸರ್ ಆದ ಕೆ. ಸುಬ್ರಮಣ್ಯರವರು ಹೀಗೆ ಹೇಳುತ್ತಾರೆ.

"ಈ ಮತವು ಸ್ಮೃತಿಗಳ ಜಾತಿಪದ್ಧತಿಯನ್ನು ಒಪ್ಪುವದಿಲ್ಲ ಇದರಿಂದ ಇದು ಪ್ರತ್ಯೇಕ ನ್ಯಾಯವಿಧಿಗೆ ಅರ್ಹತೆಯುಳ್ಳ ಒಂದು ಸ್ವಾತಂತ್ರ್ಯ ಸಮಾಜಸ್ಥಿತಿಯನ್ನುಂಟಾಗಿರುತ್ತದೆ."

ಪ್ರಸಿದ್ಧನಾದ ಸೋಮನಾರಾಧ್ಯನು ತನ್ನ ಭಾಷಣದಲ್ಲಿ ಯಾವಾಗ್ಯು ವೀರಶೈವರನ್ನು ಬ್ರಾಹ್ಮಣರ ನಾಲ್ಕು ಜಾತಿಗಳಿಂದ ಅಂದರೆ ಬ್ರಾಹ್ಮಣ, ಕ್ಷತ್ರಿಯ ಶೂದ್ರ ಎಂಬ ಜಾತಿಗಳಿಂದ ವಿಭಿನ್ನಿಸಿ ಪ್ರತ್ಯೇಕವಾಗಿ ಬರೆಯುತ್ತಾನೆ. ಶರಣ ಸಿದ್ಧರಾಮನು ತನ್ನ ವಚನದಲ್ಲಿ ಅದೇರೀತಿ ಮಾಡಿರುತ್ತಾನೆ. ಕನ್ನಡ ಮಹಾಭಾರತದಲ್ಲಿ ಸ್ವಯಂವರ ಸಂಧಿಯಲ್ಲಿ ಲಿಂಗಾಯತರನ್ನು ಬೌದ್ಧರಂತೆ ಪ್ರತ್ಯೇಕಿಸಿ ಹೇಳುತ್ತಾನೆ. "ಬುದ್ಧ, ಲಿಂಗಿಗಳು" ಎಂಬ ಶಬ್ದವನ್ನು ಉಪಯೋಗಿಸಿರುತ್ತಾನೆ. ಈಚಿನ (*Census*) ಜನಪರಿಗಣತಿಯಲ್ಲಿ ಹಿಂದೂಗಳಲ್ಲಿ ಮೂರು ಭಾಗಗಳನ್ನು ಮಾಡಿರುವದನ್ನು ನೋಡಿದೆನು. ಬ್ರಾಹ್ಮಣ ಹಿಂದೂಗಳೆಂತಲೂ ಆರ್ಯ ಹಿಂದೂಗಳೆಂತಲೂ ಬ್ರಾಹ್ಮೋ ಹಿಂದೂಗಳೆಂತಲೂ ವಿಭಾಗಮಾಡಿರುವದನ್ನು ನೋಡಿದೆನು. ಲಿಂಗಾಯತರನ್ನು ಬ್ರಾಹ್ಮಣ ಹಿಂದುಗಳಿಂದ ಪ್ರತ್ಯೇಕವಾಗಿ ಲಿಂಗಾಯತ ಹಿಂದೂಗಳೆಂದು ಸೇರಿಸುವುದು ಬಹಳ ಅನುಕೂಲವಾಗಿರುತ್ತದೆ. ಹೆಚ್ಚು ಅನುಭವವುಳ್ಳ ಲಿಂಗಾಯತ ವಿದ್ವಾಂಸರು ಈ ವಿಚಾರವನ್ನು ಆಲೋಚಿಸಬಹುದು. ಮತ್ತು ಯೋಗ್ಯವಾದದ್ದಾಗಿ ಯಾವದು ಕಾಣಿಸುತ್ತದೆಯೋ ಅದನ್ನು ಮಾಡಬಹುದು. ಲಿಂಗಾಯತರು ಐಕ್ಯಮತ್ಯವುಳ್ಳವರಾಗಬೇಕು ಮತ್ತು ಲಿಂಗಧಾರಿಗಳೆಲ್ಲರೂ ಒಂದೇ ವೀರಶೈವದ ಕಟ್ಟಿನ ವಿಧಿಯನ್ನು ನಡೆಸಬೇಕು.

ಶಿವಾಗಮಗಳನ್ನು ಉಚ್ಚರಿಸಿದ ಪರಶಿವನು ಮತ್ತು ವಚನಗಳನ್ನು ಹಾಡಿದ ಬಸವಾದಿ ಪ್ರಮಥರು ವೀರಶೈವ ಸಮಾಜವನ್ನು ರಕ್ಷಿಸಲಿ ಮತ್ತು ಸುತ್ತಲಿನ ಪ್ರಪಂಚವನ್ನು ಉದ್ಧರಿಸಲಿ.

ಸ್ಫುಟವಿಷಯಗಳು.

ಕಾಲಜ್ಞಾನದ ವಚನಗಳು:— ಕರ್ನಾಟಕ ಇತಿಹಾಸವು ಇನ್ನೂ ಅಜ್ಞಾತಾವಸ್ಥೆಯಲ್ಲಿಯೇ ಇರುತ್ತದೆ. ಇಲ್ಲಿ ಅನೇಕ ಪ್ರಸಿದ್ಧ ರಾಜಮನೆತನಗಳು ಆಗಿಹೋಗಿದ್ದರೂ ಅವು ಮಾಡಿದ ಮಹತ್ಕೃತ್ಯಗಳ ವೃತ್ತಾಂತಗಳು ಪ್ರಕಾಶಕ್ಕೆ ಬಂದಿರುವದಿಲ್ಲ. ಅದೇ ಪ್ರಕಾರ ವೀರಶೈವ ಸಮಾಜದ ಸ್ಥಿತಿಯೂ ಇರುತ್ತದೆ. ಇದು ಕರ್ನಾಟಕದ ರಾಜಕೀಯ ಮತ್ತು ವಾಙ್ಮಯಾತ್ಮಕ ಇತಿಹಾಸದಲ್ಲಿ ಮಹತ್ವದ ಸ್ಥಾನವನ್ನಲಂಕರಿಸಿದೆ. ಆದರೆ ಈ ಇತಿಹಾಸದ ಪೂರ್ಣ ಪರಿಚಯವು ಇನ್ನೂ ನಮಗೆ ಆಗಿರುವದಿಲ್ಲ. ಬಸವೇಶ್ವರನ ಕಾಲದಲ್ಲಿ ಉಂಟಾದ ಮಹತ್ಕ್ರಾಂತಿಯು ಹ್ಯಾಗೆ ಉದ್ಭವಿಸಿತು, ಇದಕ್ಕೆ ನಿಜವಾದ ಕಾರಣಗಳು ಯಾವವು ಉಂಟಾದವು, ಮುಂದೆ ವೀರಶೈವ ಸಮಾಜವು ಹ್ಯಾಗೆ ಪ್ರಸಾರವಾಗುತ್ತ ಹೋಯಿತು, ಹೀಗೆ ಪ್ರಸಾರವಾಗಲು ಎಷ್ಟು ಕಾಲವು ಹತ್ತಿತು, ಯಾವುದರ ಮೂಲಕ ಈ ಪ್ರಸಾರವು ಹೆಚ್ಚಲು ಕಾರಣವಾಯಿತು, ಇವಾವೂ ನಮಗೆ ತಿಳಿದಿರುವದಿಲ್ಲ. ಈ ವರೆಗೆ ಪ್ರಕಟವಾದ ಶಿಲಾಶಾಸನಗಳನ್ನು ನೋಡಿದರೆ ಅವುಗಳಲ್ಲಿ ಈ ಸಂಗತಿಗಳ

ಉಲ್ಲೇಖಗಳಿರುವದಿಲ್ಲ. ವೀರಶೈವ ಪುರಾಣಗಳನ್ನು ನೋಡಿದರೆ, ಅವುಗಳಲ್ಲಿ ಈ ವಿಷಯಗಳ ಸಂಬಂಧವಾಗಿ ವಿವರಣೆಗಳು ಅಲ್ಲಲ್ಲಿ ಕಂಡುಬರುತ್ತಿದ್ದರೂ ಅವುಗಳಲ್ಲಿ ನಿಜಾಂಶವು ಎಷ್ಟು ಇದೆ ಎಂಬದನ್ನು ಕಂಡುಹಿಡಿಯಲು ಸಾಧನಗಳಿಲ್ಲ. ಇವುಗಳಲ್ಲಿ ಅತಿಶಯೋಕ್ತಿಯುಳ್ಳ ದಂತಕಥೆಗಳು ವಿಶೇಷವಾಗಿ ತುಂಬಿಹೋಗಿರುವದು ಸ್ಪಷ್ಟವಿದೆ. ವಚನಗ್ರಂಥಗಳನ್ನು ಬರೆದವರಲ್ಲಿ ಅನೇಕರು ವೀರಶೈವ ಧರ್ಮವನ್ನು ಪ್ರಸಾರಪಡಿಸಿದವರು ಇರುವರೆಂಬದು ನಿಜವು. ಆದರೆ ಅವರು ತಮ್ಮ ವಚನಗಳಲ್ಲಿ ಆತ್ಮವೃತ್ತವನ್ನು ಬರೆದುಕೊಂಡಿರುವದಿಲ್ಲ. ಈ ಸ್ಥಿತಿಯ ಮೂಲಕ ವೀರಶೈವರ ರಾಜಕೀಯ ಮತ್ತು ಧಾರ್ಮಿಕ ಇತಿಹಾಸವನ್ನು ಕಂಡುಹಿಡಿಯುವದು ಬಹಳ ದುಸ್ತರವಾಗಿದೆ.

ಆದರೆ ವೀರಶೈವ ಸಮಾಜದ ಇತಿಹಾಸವನ್ನು ತಿಳಿಯಲು ಕೆಲವು ಸಾಧನಗಳಿವೆ. ಅವುಗಳಲ್ಲಿ ಕಾಲಜ್ಞಾನದ ವಚನಗಳು ಮತ್ತು ಶಿವಶರಣರ ಚರಿತ್ರೆಗಳು ಇವುಗಳು ಸಹಾಯಕಾರಿಯಾಗಿವೆ. ಇವುಗಳಲ್ಲಿ ಕಾಲಜ್ಞಾನದ ವಚನಗಳು ಬಹು ಮಹತ್ವದವೆಂದು ನಾವು ತಿಳಿಯಬಹುದಾಗಿದೆ. ಇವುಗಳಲ್ಲಿ ಅನೇಕ ನಂಬಲಾರದಂಥ ವಿಷಯಗಳು ಇರುವದು ತೋರಿಬರುತ್ತಿದ್ದರೂ ಇವುಗಳು ಅದ್ಭುತವಾದಂಥ ಸಂಗತಿಗಳಿಗೆ ವಿಶೇಷ ಮಹತ್ವವನ್ನು ಕೊಡದೆ ನಿಜವಾಗಿ ವರ್ತಿಸಿದ ಸಂಗತಿಗಳಿಗೆ ಮಹತ್ವಕೊಟ್ಟಿರುವದು ವಾಚಕರಿಗೆ ಕೂಡಲೆ ತಿಳಿದುಬರದೆ ಇರಲಾರದು. ಈ ಕಾಲಜ್ಞಾನದ ವಚನಗಳನ್ನು ಅನೇಕ ಜನರು ಬೇರೆ ಬೇರೆ ಕಾಲದಲ್ಲಿ ರಚಿಸಿದಹಾಗೆ ತೋರುತ್ತದೆ. ಇವುಗಳೆಲ್ಲವನ್ನು ನಾವು ಒತ್ತಟ್ಟಿಗೆ ಕ್ರೋಡೀಕರಿಸಿ ಅವುಗಳಲ್ಲಿ ನಿರ್ದಿಷ್ಟವಾದ ಸಂಗತಿಗಳನ್ನು ಪರೀಕ್ಷಿಸಿದಲ್ಲಿ ವೀರಶೈವ ಸಮಾಜದ ಇತಿಹಾಸದ ಮೇಲೆ ಪ್ರಕಾಶವು ಬೀಳದೆ ಇರಲಾರದೆಂದು ನಾವು ಭಾವಿಸಿರುತ್ತೇವೆ. ಈ ಉದ್ದೇಶದಿಂದ ನಾವು ಈ ಕಾಲಜ್ಞಾನದ ವಚನಗಳನ್ನು ಶಿವಾನುಭವದಲ್ಲಿ ಈಚೆಗೆ ಪ್ರಕಟಿಸಹತ್ತಿರುತ್ತೇನೆ. ವಾಚಕರು ಅವುಗಳನ್ನು ಬರೇ ಸ್ಥೂಲದೃಷ್ಟಿಯಿಂದ ನೋಡಿ ಅವುಗಳಲ್ಲಿ ಏನೂ ಮಹತ್ವವಿಲ್ಲೆಂದು ತಿಳಿಯಬಾರದೆಂದು ನಮ್ರ ವಿನಂತಿ ಇದೆ. ಅವುಗಳಲ್ಲಿಯ ವಿಷಯಗಳನ್ನೂ ನಿರೂಪಿಸಿದ ಸಂಗತಿಗಳನ್ನೂ ತುಲನಾತ್ಮಕ ದೃಷ್ಟಿಯಿಂದ ಪರೀಕ್ಷಿಸಿ ಅವುಗಳ ಮೂಲಕ ಈಗ ಹೊರಪಟ್ಟ ಐತಿಹಾಸಿಕ ಸಂಗತಿಗಳಿಗೂ ಇತರ ಸ್ಥಳಿಕ ಕುರುಹುಗಳಿಗೂ ವೃತ್ತಾಂತಗಳಿಗೂ ಹೋಲಿಸಿ ನೋಡಬೇಕು. ಅಂದರೆ ವೀರಶೈವ ಸಮಾಜದ ಇತಿಹಾಸದ

ಮೇಲೆ ವಿಶೇಷ ಪ್ರಕಾಶವು ಬೀಳದೆ ಇರಲಾರದು. ಶಿವಾನುಭವ ಪತ್ರಿಕೆಯ ಉದ್ದೇಶಗಳಲ್ಲಿ ಶೋಧಕರಿಗೆ ವಿಚಾರವಾಡಲು ಸಾಮಗ್ರಿಗಳನ್ನು ಒದಗಿಸಿಕೊಡುವದು ಒಂದಾಗಿರುತ್ತದೆ. ಈ ಉದ್ದೇಶಕ್ಕನುಸರಿಸಿ ನಾವು ಕಾಲಜ್ಞಾನದ ವಚನಗಳನ್ನು ಈ ಪತ್ರಿಕೆಯಲ್ಲಿ ಈಚೆಗೆ ಪ್ರಕಟಿಸುತ್ತಲಿದ್ದೇವೆ. ಈ ದೃಷ್ಟಿಯಿಂದಲೇ ಈ ವಚನಗಳನ್ನು ಪರೀಕ್ಷಿಸಬೇಕೆಂದು ವಾಚಕರಿಗೆನಮ್ರ ಸವಿನಯ ವಿನಂತಿ ಇದೆ.

ವೀರಶೈವ ಮತತತ್ವ ಸಂಶೋಧನಃ— ವೀರಶೈವ ವಚನಗ್ರಂಥಗಳನ್ನು ನಾವು ಹೊರಪಡಿಸಿದಂದಿನಿಂದ ಅನೇಕ ಮಹನೀಯರು ಇವುಗಳನ್ನು ಓದಿ ಅವುಗಳ ಬಗ್ಗೆ ತಮ್ಮ ವಿಚಾರಗಳನ್ನು ಲೇಖ ಮತ್ತು ಗ್ರಂಥ ಮೂಲಕವಾಗಿ ಈಗ ಪ್ರಕಟಿಸಹತ್ತಿರುವದು ಅತ್ಯಂತ ಅಭಿನಂದನೀಯವಾಗಿರುತ್ತದೆ. ಹೀಗೆ ಪ್ರಯತ್ನಿಸುವವರಲ್ಲಿ ಮಿ. ಶ್ರೀನಿವಾಸವರ್ತಿಗಳು, ಮಿ. ಬಿ. ಎಮ್. ಶ್ರೀಕಂಠಯ್ಯನವರು ಮುಖ್ಯರಾಗಿದ್ದು ಈ ವಿಷಯವಾಗಿ ಅವರು ಮಹತ್ವದ ಗ್ರಂಥಗಳನ್ನು ಬರೆದಿರುವರು, ಮತ್ತು ಈಗಲೂ ಬರೆಯುತ್ತಲಿರುವರು. ಇದಕ್ಕೋಸ್ಕರ ವೀರಶೈವ ಸಮಾಜದವರು ಅವರಿಗೆ ಅತ್ಯಂತ ಋಣಿಯಾಗಿರತಕ್ಕದ್ದು. ಅದೇ ಪೇರೆಗೆ ಈಚೆಗೆ ಮಿ॥ ರಂಗರಾವ ದಿವಾಕರ ಇವರು ಜೇಲಿನಲ್ಲಿದ್ದರೂ ಕೂಡ ವಚನಗ್ರಂಥಗಳನ್ನು ಅಭ್ಯಾಸಿಸಿ ತಮಗೆ ಕಂಡುಬಂದ ವಿಚಾರಗಳನ್ನು ಗ್ರಂಥರೂಪಾಗಿ ಬರೆಯಲು ಪ್ರಾರಂಭಿಸಿ ಅದರಲ್ಲಿ ಬಹು ಭಾಗವನ್ನು ಇಷ್ಟರಲ್ಲಿಯೇ ಬರೆದಿರುವದಾಗಿ ತಿಳಿಯುತ್ತಿದೆ. ಹೀಗೆ ಬೇರೆ ಮತದವರು ವೀರಶೈವ ಧರ್ಮತತ್ವಗಳನ್ನು ಪರೀಕ್ಷಿಸಿ ಬರೆದಲ್ಲಿ ಅದಕ್ಕೆ ಒಂದು ವಿಧದ ನಾವೀನ್ಯತ್ವವು ಪ್ರಾಪ್ತವಾಗದೆ ಇರದು. ಇದು ಸಮಾಜಸುಧಾರಣೆಗೆ ಪೋಷಕವೇ ಸರಿ. ಆದ್ದರಿಂದ ವೀರಶೈವ ಸಮಾಜದವರು ಈ ಮಹನೀಯರಿಗೋಸ್ಕರ ವಿಶೇಷ ಮನ್ನಣೆಯನ್ನು ತಾಳಿ ಅವರ ಕಾರ್ಯದಲ್ಲಿ ಸಹಾಯವಾಡುವದು ಕರ್ತವ್ಯವಾಗಿರುವದು. ಆದರೆ ಈ ವರಗೆ ಹೊರಪಟ್ಟ ವಚನವಾಙ್ಮಯದಲ್ಲಿ ಷಟ್‌ಸ್ಥಲಗಳ ಸಾಮಾನ್ಯ ಸ್ವರೂಪವು ಮಾತ್ರ ಹೊರಪಟ್ಟಿರುತ್ತದೆ. ಇವುಗಳಲ್ಲಿರುವ ಅನೇಕ ವಿಧ ಗೂಢ ವಿಷಯಗಳು ಇನ್ನೂ ಪ್ರಕಟವಾಗಿಲ್ಲ. ಅಂದರೆ ಷಟ್‌ಸ್ಥಲದ ಮರ್ಮಗಳು, ಅವುಗಳಲ್ಲಿರುವ ಅನೇಕ ವಿಧ ವಿಶೇಷ ಭಾಗಗಳು, ಈ ಭಾಗಗಳ ಪರಸ್ಪರ ಸಂಬಂಧ, ಅಷ್ಟಾವರಣಗಳ ಮರ್ಮ ಇವಾವೂ ಹೊರಪಟ್ಟಿಲ್ಲ. ಈ ಬಗ್ಗೆ ಮಹತ್ವದ ವಾಙ್ಮ

ಯವಿದ್ದು ಆದು ಪ್ರಸಿದ್ಧವಾದಾಗಲೇ ವೀರಶೈವ ಧರ್ಮದ ವಿಶಿಷ್ಟತೆಯು ಹೊರಪಡುವದು. ಆದರೆ ವೀರಶೈವ ಸಮಾಜದವರು ಅಚ್ಚಾಗದೆ ಇರುವ ತಮ್ಮ ಗ್ರಂಥಗಳನ್ನು ತೀವ್ರವಾಗಿ ಪ್ರಕಟಿಸಿದಾಗಲೇ ಇದನ್ನು ತಿಳಿಯಲು ಶಕ್ಯವಿದೆ.

ಅರ್ಜುನವಾಡದ ಶಿಲಾಶಾಸನಃ— ಬಸವೇಶ್ವರನ ಉಲ್ಲೇಖವಿದ್ದ ಯಾವ ಶಿಲಾಶಾಸನವೂ ಈ ವರೆಗೆ ಪ್ರಕಾಶಿತವಾಗಿರಲಿಲ್ಲ ಬಿಜ್ಜಳನ ಕಾಲದಲ್ಲಿಯ ಅನೇಕ ಶಿಲಾಶಾಸನಗಳು ದೊರೆತಿದ್ದರೂ ಅವುಗಳಲ್ಲಿ ಬಸವೇಶ್ವರನ ಉಲ್ಲೇಖವು ಕಂಡುಬರದೆ ಇದ್ದದ್ದು ಎಲ್ಲರಿಗೂ ಆಶ್ಚರ್ಯವೆನಿಸುವಂತಹ ಸಂಗತಿಯಾಗಿರುತ್ತದೆ. ಆದರೆ ಬೆಳಗಾವ ಜಿಲ್ಲಾ ಹುಕ್ಕೇರಿ ಸಮೀಪದಲ್ಲಿರುವ ಅರ್ಜುನವಾಡ ಎಂಬ ಗ್ರಾಮದಲ್ಲಿ ಒಂದು ಶಿಲಾಲೇಖವು ದೊರೆತಿದ್ದು ಅದರಲ್ಲಿ ಬಸವೇಶ್ವರನ ಉಲ್ಲೇಖವಿರುತ್ತದೆ. ಇದರ ಬಗ್ಗೆ ಒಂದು ಸವಿಸ್ತಾರವಾದ ಲೇಖವು ಶಿವಾನುಭವ ಪತ್ರಿಕೆಯಲ್ಲಿ ಈ ಮೊದಲಿಗೇ ಪ್ರಕಟವಾಗಿದೆ. ಇದು ವಾಚಕರ ಸ್ಮರಣೆಯಲ್ಲಿ ಇರಬಹುದು. ಆದರೆ ಇದನ್ನು ಈಗ ವಿ॥ ಎಸ್. ಶ್ರೀಕಂಠಶಾಸ್ತ್ರಿ ಎಮ್. ಏ. ಮೈಸೂರು ಇವರು ಎಫಿಗ್ರಾಫಿಕಾ ಇಂಡಿಕಾ ಎಂಬ ಪತ್ರಿಕೆಯಲ್ಲಿ ವಾಲ್ಯೂಮು ೨೧ ಸಂಚಿಕೆ ೨ ಇದರಲ್ಲಿ ಪ್ರಸಿದ್ಧಿಸಿರುವರು. ಇದಕ್ಕೋಸ್ಕರ ನಾವು ಅವರಿಗೆ ತುಂಬಾ ಆಭಾರಿಯಾಗಿದ್ದೇವೆ.

ಶಿವಾನುಭವಕ್ಕೆ ಸಹಾಯಃ— ಶಿವಾನುಭವದ ಪತ್ರಿಕೆಯ ಉದ್ದೇಶಗಳಲ್ಲಿ ವೀರಶೈವ ಮತಗ್ರಂಥಗಳ ಪ್ರಕಟನೆ ಮತ್ತು ಸಂಶೋಧನಾತ್ಮಕವಾಗಿ ಬರೆದ ಲೇಖಗಳ ಪ್ರಕಾಶನ ಇವುಗಳೇ ಮುಖ್ಯವಾಗಿರುತ್ತವೆ. ಆದರೆ ಜನಸಾವಾನ್ಯರಲ್ಲಿ ಈಬಗೆಯ ಪತ್ರಿಕೆಯನ್ನು ಗ್ರಹಣ ಮಾಡುವವರು ಅಥವಾ ಓದುವವರು ಸ್ವಾಭಾವಿಕವಾಗಿ ಬಹಳ ಸ್ವಲ್ಪ ಜನರು. ಇಂಥ ಪತ್ರಿಕೆಗಳು ನಡೆಯಬೇಕಾದರೆ ಅಲ್ಲಲ್ಲಿಯ ಪ್ರಮುಖರು ಸಹಾನುಭೂತಿಯುಳ್ಳವರಾಗಿ ಸಹಾಯಮಾಡುವದು ಅವಶ್ಯವು. ಈ ಪ್ರಕಾರ ವಿ॥ ಎಚ್. ಆರ್. ಮಹಾಂತಯ್ಯಾ ಬಿ. ಏ. ಮು. ಹೊನ್ನುಡಿಕೆ ಜಿ॥ ತುಮಕೂರು ಈ ಮಹನೀಯರು ಸಹಾಯ ಮಾಡಿದ್ದಕ್ಕೋಸ್ಕರ ನಾವು ಅವರಿಗೆ ಬಹಳ ಆಭಾರಿಯಾಗಿದ್ದೇವೆ. ಇವರು ಸೋಮೇಶ್ವರ ಕವಿವೃಷಭೇಂದ್ರರು ರಚಿಸಿದ ಪದ್ಯಗಳನ್ನು ವಿಶೇಷ ಪರಿಶ್ರಮದಿಂದ ಸಂಗ್ರಹಿಸಿದ್ದು ಇವುಗಳು ಇದೇ ಸಂಚಿಕೆಯಲ್ಲಿ ಪ್ರಸಿದ್ಧಿಸಲ್ಪಟ್ಟಿವೆ. ಅಲ್ಲದೆ ಅವರು

ತಮ್ಮ ದೃಷ್ಟಿಗೆ ಬಿದ್ದ ಪುರಾತನ ಗ್ರಂಥಗಳನ್ನು ಶೋಧಿಸಿ ಅವುಗಳ ಪಟ್ಟಿಯೊಂದನ್ನು ಸಿದ್ದಪಡಿಸಿ ನಮ್ಮ ಕಡೆಗೆ ಕಳಿಸಿರುವರು. ಇದರಲ್ಲಿ ಅನೇಕ ಮಹತ್ವದ ಕಾವ್ಯಗಳೂ ಗದ್ಯಗ್ರಂಥಗಳೂ ಇದ್ದದ್ದು ಕಂಡುಬರುತ್ತದೆ. ಇಷ್ಟೇ ಅಲ್ಲ, ಅವರು ಶಿವಾನುಭವ ಪತ್ರಿಕೆಯ ಮಹತ್ವವನ್ನು ಜನರಿಗೆ ಬೋಧಿಸಿ ೧೦ ಜನ ವರ್ಗಣೀದಾರರನ್ನು ಗೊತ್ತುಪಡಿಸಿ ಅವರಿಂದ ವರ್ಗಣೀ ಹಣವನ್ನು ಸಹ ಕೂಡಿಸಿ ನಮ್ಮ ಕಡೆಗೆ ಹಣವನ್ನು ರೋಖಾಗಿ ಕಳಿಸಿಕೊಟ್ಟಿರುವರು. ಮತ್ತು ವರ್ಗಣೀದಾರರಾಗಬಹುದಾದ ಇನ್ನು ಬೇರೆ ೧೦ ಜನರ ಹೆಸರುಗಳನ್ನು ತಿಳಿಸಿರುವರು. ಹೀಗೆ ಇವರು ಸಕ್ರಿಯೆ ಸಹಾನುಭೂತಿಯನ್ನು ತೋರಿಸಿದ್ದಕ್ಕೆ ನಾವು ಅವರಿಗೆ ಅತ್ಯಂತ ಋಣಿಯಾಗಿದ್ದೇವೆ.

ಸಮಾಜದಲ್ಲಿಯ ದೋಷಗಳುಃ— ಮಾ॥ ಜೀರಗೆ ಬಸಲಿಂಗಪ್ಪನವರು ಈ ಬಗ್ಗೆ ಬರೆದ ಒಂದು ಲೇಖವು ಇದೇ ಸಂಚಿಕೆಯಲ್ಲಿ ಪ್ರಸಿದ್ಧವಾಗಿರುತ್ತದೆ. ಆಧಾರ ಗ್ರಂಥಗಳೆಂದು ತಿಳಿಯಲ್ಪಡುವ ಸರಕಾರೀ ವರದಿಗಳಲ್ಲಿ ತಪ್ಪು ವೃತ್ತಾಂತಗಳಿಂದಾದು ಸಮಾಜಕ್ಕೆ ಬಾಧಕವಾಗಿರುತ್ತದೆ. ಆದ್ದರಿಂದ ಇವುಗಳನ್ನು ಹೊರಪಡಿಸಿ ನಿಜಸ್ಥಿತಿಯನ್ನು ಅರುಹುವದು ಸಮಾಜದ ಕರ್ತವ್ಯವಾಗಿರುತ್ತದೆ. ಆದರೆ ಮಾ॥ ಬಸಲಿಂಗಪ್ಪನವರು ನಿರ್ದೇಶಿಸುವ ದೋಷಗಳು ಈಜೆಗೆ ಸಮಾಜದಲ್ಲಿ ಅಲ್ಲಲ್ಲಿ ಹೆಚ್ಚಾಗಿ ಕಂಡುಬರುತ್ತಲಿವೆ. ಇವುಗಳನ್ನು ದೂರ ಮಾಡಬೇಕಾದರೆ ಆಯಾ ಸಮಾಜಗಳನ್ನು ದೂರುವದಕ್ಕಿಂತ ವೀರಶೈವ ಮತತತ್ವಗಳನ್ನು ಹೊರಪಡಿಸುವದು ಯೋಗ್ಯ ಉಪಾಯವೆಂದು ನಮಗೆ ತೋರುತ್ತದೆ ಮತತತ್ವಗಳ ಪೂರ್ಣ ಪ್ರಕಾಶವು ಸಮಾಜದಲ್ಲಿ ಇನ್ನೂ ಬಹಿರಂಗಗೊಳಿಸಲ್ಪಟ್ಟಿಲ್ಲ. ಇವು ಚನ್ನಾಗಿ ಚರ್ಚಿಸಲ್ಪಟ್ಟು ಅವುಗಳ ತಿಳುವಳಿಕೆಯು ಸಮಾಜದಲ್ಲಿ ಇನ್ನೂ ಹಬ್ಬಿರುವದಿಲ್ಲ. ಆದ್ದರಿಂದಲೇ ಸಮಾಜದಲ್ಲಿ ಅನೇಕ ಆಕ್ರಮಗಳು ಉಂಟಾಗಲು ಕಾರಣವಾಗಿದೆ. ಸರಕಾರೀ ಅಧಿಕಾರಿಗಳಾದರೋ, ಅವರು ಇತರ ಮತಾನುಯಾಯಿಗಳಿರುವದರಿಂದ ಮತದ ನಿಜಸ್ಥಿತಿಯು ಅವರಿಗೆ ತಿಳಿಯದೆ ಇರುವದು ಆಶ್ಚರ್ಯವಲ್ಲ. ಅವರು ಆಯಾ ಪಂಗಡದವರು ಮತ್ತು ಮತದವರು ತಿಳಿಯಪಡಿಸಿದ ಸಂಗತಿಗಳನ್ನೇ ಯಥಾವತ್ತಾಗಿ ತಮ್ಮ ವರದಿಗಳಲ್ಲಿ ಪ್ರಸಿದ್ಧಿಸುವದು ಅವರ ಕರ್ತವ್ಯವಾಗಿದೆ. ಈ ಸ್ಥಿತಿಯಲ್ಲಿ ಸಮಾಜದವರೇ ಎಚ್ಚತ್ತು ತಮ್ಮ ಮತಗ್ರಂಥಗಳನ್ನು ಪ್ರಸಿದ್ಧಿಸಬೇಕು, ಅವು

ಗಳನ್ನು ಅಭ್ಯಾಸಿಸಿ ಅವುಗಳ ತತ್ವಗಳನ್ನು ಜನತೆಯ ನಿದರ್ಶನಕ್ಕೆ ತರ ಬೇಕು. ಇದೇ ಈ ದೋಷಗಳನ್ನು ನಿವಾರಣೆ ಮಾಡಲು ಉತ್ತಮ ಉಪಾಯವಾಗಿದೆ. ಆವಾಗ ಆಯಾ ಸಮಾಜಗಳನ್ನು ಬರೇ ದೂರುತ್ತಲಿರುವದು ಫಲಪ್ರದವಾಗಲಾರದೆಂದು ನಮಗೆ ತೋರುತ್ತದೆ.

ಕಾರಿಕಾಲಮ್ಮೆಯ ರಗಳೆ.

ಕಂದ— ಸಕಲ ಜನಂ ಕಾಣುತೆ।
ಕೌತುಕಮೆನಲಾ ಕಾರಿಕಾಲೊಳಿಪ್ಪಮ್ಮೆಯರಂ।
ಸುಕರಮೆನೆ ಮೆರೆದನಾನಂ।
ಪಕರಂ ಕರುಣಾಬ್ಧಿ ಹಂಪೆಯ ವಿರೂಪಾಕ್ಷಂ॥

ರಗಳೆ.

ಧರೆಗೆಸೆವ ಚೋಳದೇಶದೊಳೊಂದು ಸುಖಕರಂ
ಕರಮೊಪ್ಪುವುದು ಕಾರಿಕಾಲೆಂಬ ಶಿವಪುರಂ
ಅಲ್ಲಿರ್ಪಳೋರ್ವಳ್ಳಿವಜ್ಞಾನಸಂಪನ್ನೆ
ಸಲ್ಲಲಿತ ಸತ್ಯ ಭಕ್ತ್ಯಾಗಮ ಪ್ರತಿಪನ್ನೆ
ತನ್ನ ನಾಮಂ ಕಾರಿಕಾಲಮ್ಮೆ ಎಂಬುದದು
ಪನ್ನಗಾಭರಣಂಗತಿ ಪ್ರೇಮ ಹರ್ಷವದು
ತನಗೆ ಪತಿಯಾಗಿರ್ಪನಲ್ಲಿ ಮಾಣಕಶಿಟ್ಟಿ
ಧನದಂಗೆ ಪುರುಡಿಪ ಸದರ್ಥತ್ವಮಂ ಮುಟ್ಟಿ
ಆತಂಗೆ ಸತಿಯಾಗಿ ಸಮ ಸುಖದೊಳೊಪ್ಪುತುಂ
ನೂತನ ಶಿವಭಕ್ತಿಯುಂ ಮನದೊಳಪ್ಪುತುಂ
ಗುಪ್ತಮಾಹೇಶ್ವರಿ ಪರಾಧೀನೆ ಪತಿಭಕ್ತೆ
ಆಪ್ತೆ ಶರ್ವಂಗೆ ಭಕ್ತ್ಯಾವಲೋಕನಯುಕ್ತೆ

ಇರ್ಪಳಾರುಂ ಭಕ್ತೆ ಎಂದರಿಯರಾಕೆಯಂ
ಸರ್ಪಭೂಷಣ ಚರಿತ ಭರಿತಾವಲೋಕೆಯಂ
ಅತ್ತೆ ಮಾವಂ ಗಂಡರರಿಯರಾ ಭಕ್ತಿಯಂ
ಮತ್ತೆ ಮನೆಯೊಳಗುಳ್ಳರರಿಯರಾ ಭಕ್ತಿಯಂ
ಬೋನವಂ ಮಾಡುವೆಡೆ ದೇವಾರ್ಚನಾಸ್ಥಳಂ
ಏನೆಂಬೆನಲ್ಲಿ ಸಿಂಹಾಸನಂ ಕರತಳಂ
ನೆನೆವ ಘನ ಚಿಂತೆ ಸಕಲ ಸ್ತೋತ್ರವಭವಂಗೆ

ಮನದ ನಿರ್ಮಳವಗ್ಗವಣಿ ಮಹಾದೇವಂಗೆ
ಕೆಯ್ಯ ಕೀರೆಯೆ ಪರಿಮಳದ ಪುಷ್ಪವಭವಂಗೆ
ಸುಯ್ಯ ಕಂಪೆ ಗುಗ್ಗುಳ ಧೂಪವಾ ಮಹಿಮಂಗೆ
ನೋಟವೇ ಬೆಳಗಿನಾರತಿ ಶಂಕರಂಗಲ್ಲಿ
ಊಟವಲ್ಲಿಯೆ ಸವಿದ ಬೋನದೋಗರವಲ್ಲಿ
ಇಂತಾರುವರಿಯದಂತಿರೆ ಶಿವನನರ್ಚಿಪಳು
ಇಂತು ಶಿವಭಕ್ತಿಯಂ ಮನದೊಳಗೆ ಪೆರ್ಚಿಪಳು
ಓವಿ ಸಾಧಿಸಿ ಬೆಳೆಯಿಸುವಳಲ್ಲಿ ಭಕ್ತಿಯಂ
ತೀವಿ ತುಳ್ಕಾಡಿ ಮುಚ್ಚುವಳಂಜಿ ಭಕ್ತಿಯಂ
ರುದ್ರಲೋಕವೆ ಪುಟ್ಟದೂರೆಂದು ಭಾವಿಪಳು
ರುದ್ರನೇ ತಂದೆಯುಂ ತಾಯೆಂದು ಭಾವಿಪಳು
ಕೈಲಾಸವೇ ತವರ್ಮನೆ ಯೆಂದು ಭಾವಿಪಳು
ಶೂಲಿಯಣುಗರ್ಸಹೋದರರೆಂದು ಭಾವಿಪಳು
ಆಸುರದ ಸಂಸಾರಮಂ ಗಿರಿಜೆಗರಿಪುವಳು
ಆಸರಂ ಬೇಸರಂ ಶಂಕರಂಗರಿಪುವಳು
ಮನದೊಳಗೆ ಮನ್ನಿಸುವಳರ್ಚಿಸುವಳಾಡುವಳ್
ಮನದೊಳಗೆ ನೋಡುವಳ್ ಮನದೊಳಗೆ ಪಾಡುವಳ್
ಮನದೊಳಗೆ ದೇವಂಗೆ ಬಿನ್ನಪಂ ಮಾಡುವಳ್
ಮನದೊಳಗೆ ಸಂಸಾರದಿರವಿಂಗೆ ಪೇಸುವಳ್
ಅನವರತ ಪರಮ ಶಿವಚಿನ್ಮೂರ್ತಿ ಚಿಂತಾವಸ್ಥಾನಿ
ಅನಸೂಯೆ ಭಕ್ತಿಯಭಿಮಾನಿ ಲಿಂಗಧ್ಯಾನಿ
ಮಾಡುವುದು ಕೆಲಸವದು ಪೂಜೆ ಸರ್ವೇಶಂಗೆ
ನೋಡುವುದು ಮನವಾರ್ತೆದರ್ಶನವದೀಶಂಗೆ
ತಾನರಿವಳಿಂದುಧರನರಿವನರಿವವರಿಲ್ಲ
ಏನೆಂಬಿನೀ ಪೂಜೆಯಂ ಶಂಭುವೇ ಬಲ್ಲ

ಇಂತು ಗುಪ್ತಾರಾಧನಾನಂದೆ ಇಪ್ಪುದಂ
ಕಂತುಹರನೆಂತು ಲೆಕ್ಕಿಸಲಾರನಿಂತಿದಂ
ಪ್ರಕಟಿಸುವೆನೆಂಬ ಭರದಿಂ ಚಂದ್ರಶೇಖರಂ
ಸಕಳ ಲೋಕಕ್ಕರುಪಲೆಂದು ಸರ್ವೇಶ್ವರಂ

ಸಾಧು ಭಕ್ತನ ವೇಷಮಂ ತಳೆದನೊಲ್ದಿತ್ತ
ವೇಧೆಯೊಳಗಿರ್ದನಾ ಕಾರಿಕಾಲೆಯೊಳತ್ತ

ಒಂದು ದಿನವಿರುತಲಲ್ಲಿ ಮಾಣಿಕಶೆಟ್ಟಿ
ಗೆಂದಂದು ಕಾಣ್ಕೆಯಂ ತಂದಂ ಮನಂ ಮುಟ್ಟಿ
ಈಳಿಯಿಂದಂ ಕೆಲವು ಕಾಲದ ಫಲಂಗಳಂ
ಬಾಳ ಚೂತವು ಪೂತ ಕಲ್ಪಫಲತತಿಗಳಂ
ಅಮ್ಮೆಗೆ ರಜತಗಿರಿಯ ಪಯಣಮುಂ ತರ್ಪಂತೆ
ಅಮ್ಮೆಗಿದಿರಂ ದೃಷ್ಟಫಲಮುಮುಂ ತೋರ್ಪಂತೆ
ತಂದು ಕಾಣ್ಕೆಯನೀಯೆ ಕಂಡು ನೆರೆ ಕೊಂಡಾಡಿ
ತಂದವರ್ಗುಡಕೊಟ್ಟು ಕಳುಪಿ ಹಣ್ಣಂ ನೋಡಿ
ಹಾರೈಸಿ ಹೊಸ ಫಲವಿದೆಂದು ಹರುಷಂಬಟ್ಟು
ಕಾರಿಕಾಲಮ್ಮೆಯರ ಕೆಯ್ಯಳೊಲವಿಂ ಕೊಟ್ಟು
ಅತಿ ಸುರಕ್ಷಿತದಿಂದ ಬಯ್ತಿಡೆನುತುಂ ಪೇಳ್ದು
ಪತಿಹೋದನತ್ತ ವ್ಯವಹಾರಮುಂ ತಾಳ್ದು

ಹೋಗೆ ಕಂಡಳು ಫಲಂಗಳನಪೂರ್ವಂಗಳಂ
ರಾಗದಿಂ ಕೊಂಡು ಬಂದಳ್ನೂತನಂಗಳಂ
ಆಹಾ ಶಿವಂಗೆ ಶಿವಭಕ್ತರ್ಗೆ ಯೋಗ್ಯವಿವು
ಆಹಾ ಮಹಾದೇವ ಮರ್ತ್ಯರ್ಗಯೋಗ್ಯವಿವು
ಎಂದವಂ ಬೈತಿಟ್ಟು ಕೆಲಸದ ಶಿವಾರ್ಚನೆಗೆ
ಬಂದಳಾ ಗುಪ್ತ ಮಾಹೇಶ್ವರಿಯಡುವ ಮನೆಗೆ
ಎಂದಿನಂದದೆ ನಿತ್ಯ ನೇಮಂಗಳಂ ಮಾಡಿ
ತಂದು ಬೋನಕ್ಕೆ ಮೇಲೋಗರಮುಮುಂ ಕೂಡಿ
ಆರೋಗಿಸಲ್ಕಿಕ್ಕಲನುವಾಗುತಿರಲಲ್ಲಿ

ಹಾರೈಸಿ ಶಂಕರಂ ರೂಪುದೋರಿದನಲ್ಲಿ
ಏಕಮುಖವೆಳೆಯ ಜಡೆ ಪುಲಿದೊವಲ್ವಿಸ್ತರಂ
ಲೋಕದೊಳ್ಸುಳಿವ ತಪಸಿಗಳಂತಿರಲ್ಕರಂ
ಇರ್ದಿರ್ದು ಈ ಎಡೆಗೆ ಬಂದ ಪರಿ ಎಂತಯ್ಯ

ಇರ್ದಿರ್ದುದೇಕೆ ಭವಿಗಳ ಮನೆಗೆ ಬಂದಯ್ಯ
ಏಕೆ ಬಂದೈ ಮನೆಯವರ್ಕ್ಕರಂ ಪೊಲ್ಲೆನಲ್
ಏಕೆ ಬಂದೈ ಭಕ್ತಿ ಇಲ್ಲಿಯುಂಟೇ ಎನಲ್
ಭಕ್ತೆ ಎನಲಮ್ಮೆನರಿದೊಡೆ ಕಂದಿದಪಳೆಂದು
ಯುಕ್ತಿಯಿಂ ಸುಮ್ಮನಿರಲಮ್ಮೆಯನುಚಿತವೆಂದು
ಭಕ್ತರೆಂದರಿಯೆವಾರೆಂದರಿಯೆವೆಲೆಯಮ್ಮೆ
ಭಕ್ತಿಗಟ್ಟೋಗರವನಿಕ್ಕು ಪೋದಪೆವಮ್ಮೆ
ಎನೆ ಗುಪ್ತತನದೊಳಿರಲಾರದುಕ್ಕಲ್ಬಕ್ತಿ
ಮನದೊಳಕ್ಕಾಡಿ ನಾಲಿಗೆಗೆ ಬರುತಿರೆ ಭಕ್ತಿ
ಮನದ ಗರ್ಭಿಣಿ ಜಿಹ್ವೆಯಿಂ ಬೆಸಲೆಯಪ್ಪಂತೆ
ತನುವಿಡಿದ ಭಕ್ತಿಯಿಂ ಕಾಣ್ಬ ತುಸುರುದಳಂತೆ
ಅರುವುಂ ಕಾಣ್ಬದಕೆ ಮುನ್ನವಾರೋಗಿಪುದು
ಅರುವರಿಯದ ತೆರದಿ ತ್ವರಿತದಿಂ ಕರುಣಿಪುದು
ದೇವ ಕಂಡೊಡೆ ಭಕ್ತಿಯಿಂತರುಸಿದಂತಕ್ಕು
ದೇವ ಬಳಿಕಾಂ ಬದುಕೆನರಿದೊಡಿರಿದಂತಕ್ಕು
ಎನುತಲ್ಲಿ ಯಾರೋಗಣೆಗೆ ಕೊಟ್ಟು ಬೇಗದಿಂ
ಘನ ಮಹಿಮ ಹದುಳನಾರೈಸೆಂದು ರಾಗದಿಂ
ಮನೆಯವರ್ಕಳಂಡೊಡಂ ಕೊಲುಗೆನ್ನನೆನುತಲ್ಲಿ
ತನಿವಣ್ಣನೆರಡರೊಳಗೊಂದನಿಕ್ಕಿದಳಲ್ಲಿ
ಇಕ್ಕೆ ನಲಿದಾರೋಗಿಸುತಿರ್ಪ ಸಮಯದೋಳ್

ದಿಕ್ಕನೇ ಮನೆಯ ಸೆಟ್ಟಿ ಬಂದನಾ ಪೊಳ್ತಿನೊಳ್
ಬರಲವಂ ನಸುಗಾಣದಂತೆಯೆ ಭವಂ ಪೋದ
ಉರವಣಿಸುತಾ ಸೆಟ್ಟಿ ಸಂದೇಹಿಸಲ್ಪೋದ
ಇತ್ತಲಾ ಸೆಟ್ಟಿಗೆಡೆವಾಡಿದಳ್ ಶಿವಭಕ್ತೆ
ಚಿತ್ತದೊಳಗಂಜುತ್ತಲಂಜೆನೆನುತುಂ ಭಕ್ತೆ
ಎಡೆ ಮಾಡಿ ಯಗಲಕ್ಕೆ ಹೆರೆ ಸಾರ್ದು ನಿಂದಿರಲು
ಕಡು ಹಸಿದು ಶೆಟ್ಟಿ ಹಣ್ಣೆಲ್ಲಿ ತಾರೆಂದೆನಲು
ಇಕ್ಕಿದಳು ಪಣ್ಣೊಂದು ತಂದು ಎಡೆಯೊತ್ತಿಂಗೆ
ಮಿಕ್ಕ ಸಂದೇಹದಿಂ ಶಂಕಿಸುತೆ ಗಂಡಂಗೆ
ತಂದಿಕ್ಕಲಿನ್ನೊಂದು ಹಣ್ಣೆಲ್ಲಿ ತಾರೆನಲ್

ಬಂದಪ್ಪರಿಚ್ಛೇದಿಸಿದಳಲ್ಲಿ ಭೋಂಕೆನಲ್
ಕೆಯ್ಯೊಡನೆ ಹರಣಮುಂ ಬೆರಸಿ ಕೆಯ್ಯಿಕ್ಕಿದಳ್
ಕೆಯ್ಯ ಮೇಲೇ ತೋರ್ಪೆನೆನ್ನನೆನುತಿರಿಸಿದಳ್
ಇಂದುಧರನಲ್ಲಿಂದೆ ಮುನ್ನವಂದುತ್ತೊಂದು
ತಂದವೃತ ಫಲವನೊಲ್ದಿರಿಸೆ ನೇಹದೊಳಂದು
ಕಂಡಾಗಳಾ ಹಣ್ಣು ಬಸಿರೊಳಗೆ ಬಂದಂತೆ
ಕಂಡು ಪರಮನ ಪದಮು ಹರ್ಷದೊಳಗಿದ್ದಂತೆ
ಭಾವಿಸಲ್ತೆಗೆದಳಾನಂದಮಂ ತೆಗೆವಂತೆ
ದೇವಲೋಕದ ಪರಸ್ಥಾನಮಂ ತೆಗೆವಂತೆ
ತೆಗೆದು ತಂದಿಕ್ಕಿದಳ್ನಲಿದು ಪತಿಯಗಲಲ್ಲಿ

ಭಗೆಯೊಳಂ ಕೌತುಕಂ ಬಟ್ಟು ನೋಡುತ್ತಲ್ಲಿ
ಸೆಟ್ಟ ಕೈಮುಟ್ಟ ಮೈರೋಮಾಂಚವಾಗುತಿರೆ
ದಿಟ್ಟಿಸಲ್ತಣ್ಗಳ್ಗೆ ಸವಿಗಳಂ ಸವಿಸುತಿರೆ
ಎಲ್ಲಿಯದು ಪೇಳೆನಗೆ ಕಾರಣಿಕೆ ಈ ಫಲಂ
ಎಲ್ಲಿಯದು ಪೇಳೆಲೆ ಮಹಾ ಪುರುಷೆ ಈ ಫಲಂ
ಎಂದು ನಡನಡುಗಿ ಯಾತಂ ಮುಟ್ಟಲಂಜುತ್ತೆ
ಇಂದುಮುಖಿ ಯರಿದನೆಂದಿತ್ತ ನಡನಡಗುತ್ತೆ
ಇರೆ ಸುಮ್ಮಸಿರದೆ ಪೇಳೆನಗಿದೆಲ್ಲಿಯ ಫಲಂ
ಹರಕರುಣವಲ್ಲದೀ ನೆಲದೊಳಿಲ್ಲೀ ಫಲಂ
ಎನೆ ಪೇಳಲುಂ ಪೇಳವಿರಬಾರದಿನ್ನೆಂದು
ಮನದೊಳಗೆ ಸಿಡಿಮಿಡಿಗೊಳುತ್ತಲುಸುರ್ದಳು ನಿಂದು
ಹರಭಕ್ತನೋರ್ವನಾನಂದದಿಂದಂ ಬರಲ್
ಹರುಷದಿಂದೊಂದು ಹಣ್ಣಂ ಕೊಟ್ಟಿನಿಂತಿರಲ್
ನೀವೀಗಳಾ ಹಣ್ಣನಾರ್ತದಿಂದ ಬೇಡೆ
ದೇವನಿರಿಸಿದನವೃತಫಲವನೊಂದಂ ನೋಡೆ
ಆ ಹಣ್ಣಿದೆಂದು ಪೇಳ್ದೊಡೆ ಸೆಟ್ಟಿ ನಡುಗಿದಂ

ಆ ಹೊತ್ತೆ ಸತಿ ಯೆಂಬ ಭಾವ ಮುನ್ನುಡುಗಿದಂ
ಮುನ್ನವೇ ಸಂದೇಹಿಸುತ್ತಿರ್ದನೆಲೆ ತಾಯೆ
ಇನ್ನೆನ್ನ ಸತಿ ಯೆಂದು ನುಡಿಯೆಂ ಮಹಾಮಾಯೆ

ಇಂತು ಕರುಣಿಸಿ ಹರಂ ಪ್ರತ್ಯಕ್ಷನಪ್ಪನೇ
ಇಂತಪ್ಪ ಸತಿಯರುಂಟೇ ಶಿವಂ ಬರ್ಪನೇ
ತಾಯೆ ನೀವೇ ಕೊಳ್ವುದೀ ಹಸ್ಗೆಂದೆನಗರಿದು
ತಾಯೆ ನಿಮ್ಮಂ ಮರೆಯಿಸಿರ್ದ ಪರಿ ಧರೆಗರಿದು
ಇನಿತು ದಿವಸಂ ನಿಮ್ಮನಂತಿಂತು ನುಡಿದುದಕೆ
ಇನಿತು ಕಾಲಂ ಉದಾಸೀನವಂ ಮಾಡಿದಕೆ
ಕರುಣಿಪುದು ಕಾವುದೆನ್ನಂ ಕಾರಿಕಾಲಮ್ಮೆ
ಉರವಣಿಪ ಮಾಯೆಯಿಂ ತೆಗೆವುದೆನ್ನಮ್ಮಮ್ಮ
ಇನ್ನೆನಗೆ ನೀವೇ ಗುರುಸ್ಥಾನವೆಲೆ ತಾಯೆ
ಇನ್ನೆನ್ನ ಭವ ಬಂಧನವನುಡುಗಿಸೆಲೆ ತಾಯೆ
ಕರುಣಿಪುದುಪದೇಶವನು ಮಾಳ್ಪುದಿನ್ನೆನಗೆ
ಪರಮಾರ್ಥ ಮೂರ್ತಿ ಕಾರುಣ್ಯದಿಂ ನೀವೆನಗೆ
ಎಂದು ಕಣ್ಣಂ ಕೊಟ್ಟು ಮೆಯ್ಯಿಕ್ಕಿ ಪಟ್ಟಿರಲ್
ಮುಂದಯಿಪ ಪರವಶದ ಬೆಮರಿಂದೆ ಬಿಲ್ದಿರಲ್

ಕಂಡು ಶಿವಭಕ್ತೆಯಭಿಮಾನಿ ನೆರೆ ಕಂದಿದಳ್
ಗಂಡನಿಂತರಿದನಿನ್ನೇನೆಂದು ಕೊರಗಿದಳ್
ದೇವಭಕ್ತಿಯನಿಂತು ಗಾರುವಾಡಿದೆ ತಂದೆ
ದೇವ ಮೀಸಲ ಮೋಹಮಂ ಸೂಸಿದೈ ತಂದೆ
ಭಕ್ತಿ ಬೀಸರವಾಯಿತಿನ್ನೆಂತು ಸೈರಿಪೆಂ
ಭಕ್ತಿ ಹುರಿಹಂಚಾಯ್ತು ಇನ್ನೆಂತು ಜೀವಿಪೆಂ
ಕೆಲರರಿಯೆ ಭಕ್ತಿಯಂ ತೋರಿ ಬೀರಿದರುಂಟಿ
ಪಲರರಿಯೆ ಭಕ್ತಿಯಂ ಸಾರಿ ಮಾಡಿದರುಂಟಿ
ಎಂದಲ್ಲಿ ಬಾಡುತುಂ ಕೋಡುತುಂ ನಡೆ ನೋಡಿ

ಮುಂದಿರ್ದ ಸೆಟ್ಟಿಯರ್ಗುಪದೇಶಮಂ ಮಾಡಿ
ದೇವನಿತ್ತ ಪ್ರಸಾದದ ಫಲಮುಮಂ ಕೊಟ್ಟು
ದೇವ ಭಾವಿನಿ ಮನದ ನಿಷ್ಠೆಗಂದೆಡೆಗೊಟ್ಟು
ತರೆನಿಸ್ನಿರೇ ಜಗಕ್ಕೆನ್ನುಮಂ ತೋರಿದಂ
ಹರಭಕ್ತೆ ಎಂದರುಹಿ ಹುರಿಹಂಚು ಮಾಡಿದಂ

ಇನ್ನಂಜಲೇಕೆಂದು ಭಸಿತಮಂ ಪೂಸಿದಳ್
ಇನ್ನರಿಯನೇಳ್ಕೆಂದು ರುದ್ರಾಕ್ಷಿ ಯಿಕ್ಕಿದಳ್

ನಡೆವೆನಾನಿಲ್ಲಿರೆಂ ಕೈಲಾಸಪುರದತ್ತ
ವೃಷಭನೆ ಶರಣೆಂದೆನುತೆ ಕಲಿಯೇರಿ ಮೀರುತ್ತ
ಪೊರಮಟ್ಟಳಮ್ಮಮ್ಮ ಪುರಜನಂ ನೋಡುತಿರೆ
ಪೊರಮಟ್ಟಳಲ್ಲಲ್ಲಿ ಬಂಧುಜನ ಮರುಗುತಿರೆ
ಪುರಿದ ಪುಣ್ಯವ್ರಜಂ ನೆರೆದು ಪೊರಮಡುವಂತೆ
ಪುರದ ಪರಮಾಯುಷ್ಯವಿರದೆ ಪೊರಮಡುವಂತೆ
ಬಿಸಿಲನರಿಯದ ರಮಣಿ ಬಿಸಿಲಿಂಗೆ ಮೆಯ್ಯಾಂತು
ಮಿಸುಕಲರಿಯದ ಮಾನಿಯಡಿಯ ಮೇಲಡಿಯಾಂತು
ಉತ್ತರ ದಿಶಾಭಿಮುಖಿಯಾದಳಾ ಶಿವಭಕ್ತೆ
ಚಿತ್ತದೊಳ್ ಪುರಹರನನಿರಿಸುತಂ ಶಿವಭಕ್ತೆ
ಬಂದಳ್ಪರಿಚ್ಛೇದದಿಂ ಕಾರಿಕಾಲಮ್ಮೆ
ಬಂದಳಾನಂದಭರದಿಂ ಕಾರಿಕಾಲಮ್ಮೆ
ಸಕಲ ಸುಖಮುಂ ಬಿಸುಡುತುಂ ಕಾರಿಕಾಲಮ್ಮೆ
ಸಕಳಮುಂ ಲೆಕ್ಕಿಸದ ಕಲಿ ಕಾರಿಕಾಲಮ್ಮೆ
ಬರೆ ನಿಂದುದಲ್ಲಿ ಬಾಂಧವ ಜನಂ ಪುರಜನಂ
ಬರೆವರಲ್ಬಂದುದಲ್ಲಲ್ಲಿರ್ದ ಪರಿಜನಂ
ಕಾಣಲ್ಕೆ ಬರುತಿರ್ದರೇನೆಂಬೆನಮ್ಮೆಯಂ
ಜಾಣರರಿವಾ ರೂಪ ಯೌವ್ವನದ ಪೇರ್ಮೆಯಂ

ಪಾಪವುಳ್ಳರ್ಗೆ ಸಿಂಗರದಂತೆ ತೋರುತುಂ
ಪಾಪವಿಲ್ಲದವರ್ಗೆ ತಾಯಂತೆ ತೋರುತುಂ
ಮಲ್ಲಿಕಾಲತೆಗೆ ಶಿವಭಕ್ತಿ ಯೊದವಿದ ತೆರದೆ
ಸಲ್ಲಲಿತ ಶಶಿಕಳೆಗೆ ನಿಷ್ಠೆಯೊದವಿದ ತೆರದೆ
ಭಕ್ತಿಲತೆ ನಡೆವಂತೆ ನಡೆಯುತಿರ್ದಳ್ನೋಡ
ಭಕ್ತಿವನಿತಾಗಮನದಂತೆ ನಡೆದಳ್ ನೋಡ
ಲಂಬಿಸುವ ಪಾವನತೆಯಂ ರೂಪುದೋರುತಿರೆ
ಇಂಬಿನಿಂ ನಡೆತಂದಳೊಡನೆ ಜನವೆಯ್ದುತಿರೆ

ಎಳೆಯಶೋಕೆದಳಿರನುಗುಳ್ವ ಪದತಳದೊಳಗೆ
ಬಳೆದು ಪ್ರದಕ್ಷಿಣಂ ನಳನಳಿಸಿ ತೊಳತೊಳಗೆ
ಕಾಮನೊಡ್ಡಣೆಗೆ ತೊಣೆ ಯೆನಿಪ ಕಿರಿದೊಡೆ ಕರಂ
ಸೋಮಧರನಲ್ಲಿಗೊಯ್ವುದಕೆ ನೆರೆವನೆ ಕರಂ
ಕದಳಿಯಂ ಪಳಿವುತಿರ್ಪಾರು ದಂಡಂ ನೋಡ
ಮದನನೈರಿಯ ನಮಸ್ಕಾರ ವಂಡಂ ನೋಡ
ಮದನ ಕೃತಕಾಚಲ ನಿತಂಬ ಬಿಂಬಂ ನೋಡ
ಒದವಿ ಪದ್ಮಾಸನದ ತಳವೃತ್ತವುಂ ನೋಡ
ಸರಸಿಯಂ ಪಳಿಕೆಯ್ವ ನಾಭಿಮಂಡಲವಲ್ಲಿ
ಹರಭಕ್ತಿ ಸಾರ ಮಡುವಿನ ತೆರದೊಳಿರಲಲ್ಲಿ
ಮುಗಿದ ಸರಸಿಜವನೇಳಿಸುವ ಕುಚ ಒಪ್ಪಿರಲ್
ಮಿಗೆ ಭಕ್ತಿ ರಸದ ಕಳಶದ ಮುಚ್ಚುಳಂತಿರಲ್
ಪಂಚಶರಮಂ ಪಳಿವ ನುಣ್ಪೆರಲ ಬಿತ್ತರಂ
ಪಂಚವುಖ ಪರಿಭಾವಕರ ತೆರವೊಳಿರೆ ಕರಂ
ಪದಕೊರಳ್ಗೇಳಿಸುವ ಕಂಬುವಿನ ತೆರದೊಳಿರೆ
ಕದಪು ಶರ್ವಂ ನೋಳ್ಪ ದರ್ಪಣದ ತೆರದೊಳಿರೆ
ಕಣ್ಣೆರಡು ಜೆಲ್ವಿಂಗೆ ಕಣ್ಮೂಡಿದಂತೆ ಇರೆ
ತಿಣ್ಣವೆನಿಸುವ ಭಕ್ತಿ ಕಣ್ದೆರೆದ ಪರಿಯೊಳಿರೆ
ಅಳಿಕುಲದ ಬಣ್ಣಮಂ ಬರಿಕೆಯ್ವ ಕುಂತಳಂ
ತಲೆಯೂರಿ ನಡೆವಲ್ಲಿಗಾದರದ ವರ್ತುಳಂ
ಇಂತು ಸೌದರ್ಯವಂ ಪಾವನತ್ವವನೀವ
ಸಂತತಂ ಶೃಂಗಾರ ರಸದ ಲಹರಿಯನೀವ

ಕಾರಿಕಾಲಮ್ಮೆಯರ ರೂಪಿಂಗೆ ಬಹು ಜನಂ
ಸಾರುತಂ ಬೆಂಬಿಡದೆ ಬರೆ ಕಷ್ಟತರ ಜನಂ
ಕಂಡಲ್ಲಿ ಕಾರಿಕಾಲಮ್ಮೆ ಮನದೊಳ್ನೊಂದು
ಬಂಡ ದಿಂಡಿಗೆ ಮರುಳ್ಗೊಂಡಿರಯ್ಯೋ ಎಂದು
ಅವಿಚಾರ ಮತಿಯರೇನೆಂದರಿಯರಕ್ಕುಟಾ
ಸುವಿಚಾರವೆಳ್ಳಿನಿತಿಲ್ಲ ನಿಮಗಕ್ಕುಟಾ
ಒಳಗು ಹೊರಗಾಗಿ ನೋಡಿರೆ ಎನ್ನ ದೇಹಮುಂ

ಮುಳುಮುಳುಗೆದ್ದರೆ, ಛೇ ಛೇ ನಿನ್ನ ದೇಹದ ಮೇಲಣ ಮಣ್ಣು ಹೋಯಿತ್ತಲ್ಲದೆ, ನಿನ್ನ ಪಾಪವು ಹೋಗಲಿಲ್ಲವು. ಅಲ್ಲಿಂದ ಕಡೆಗೆ ಬಂದು ಕೆಟ್ಟ ಕತ್ತಿಯ ಕೊಂಡು ಕೆರವಿನಟ್ಟಿಯ ಮೇಲೆ ಮಸೆದು ಮಸ್ತಕವ ತೋಯಿಸಿ ತಲೆಯ ಬೋಳಿಸಿಕೊಂಡರೆ, ನಿನ್ನ ತಲೆಯ ತಿಂಡಿ ಹೋಯಿತ್ತಲ್ಲದೆ ನಿನ್ನ ಪಾಪವು ಬಿಡಲಿಲ್ಲವಯ್ಯ! ಅಲ್ಲಿಂದ ಕೋಲು ಬುಟ್ಟಿಯ ತೆಗೆದುಕೊಂಡು ಬರುವಂತಹ ದಿಂಡೆತೊತ್ತಿನ ಮುಕ್ಯಕ ಕಣ್ಣಿಲಿ ಕಂಡು ಪಡಿಪಾರಿ ಉತ್ತಣ್ಣನ ಎಡದ ಪಾವ ಎಕ್ಕಡದಿಂದೆ ಪಟಪಟನೆ ಹೊಡೆ ಎಂದಾತ ನಮ್ಮ ಅಂಬಿಗರ ಚೌಡಯ್ಯ ನಿಜ ಶರಣನು.

ಭಾವ— ಹಿಂದಿನ ವಚನದ ಭಾವವನ್ನೇ ವಚನಕಾರನು ಪುನಃ ಇಲ್ಲಿ ಹೇಳಿರುವನು. ಇದರಲ್ಲಿ ಅವನು ಲಿಂಗ ಮತ್ತು ಭಕ್ತ ಇವರು ಪರಸ್ಪರ ಹ್ಯಾಗೆ ವರ್ತಿಸಬೇಕೆಂಬುದನ್ನು ಹೇಳಿರುವನು. ಅವರು ಸತಿಸತಿ ಭಾವದಿಂದಲೇ ವರ್ತಿಸಬೇಕು. ಆದ್ದರಿಂದ ಅವರ ಮನಸ್ಸು ಒಂದಾಗಿರಬೇಕು. ಹೀಗೆ ಇದ್ದರೆ ದೇವರ ಮುಂದೆ ಎಂದೆಂದಿಗೂ ನಂದದ ದೀಪವನ್ನು ಅವರು ಹಚ್ಚಿದ ಹಾಗೆ ಅವರ ಪ್ರಕಾಶವು ಜಗತ್ತಿನಲ್ಲೆಲ್ಲ ತುಂಬುವದು. ಆದರೆ ಅವರ ಮನಸ್ಸು ಒಂದಾಗಿರದಿದ್ದರೆ ಹ್ಯಾಗೆ ಹಂದಿಗಳು ಹೊಲಸಿನಲ್ಲಿ ಹೊರಳಾಡಿ ಪರಸ್ಪರ ಮೂಸಿ ನೋಡುತ್ತವೋ ಹಾಗೆಯೇ ಇವರ ಸ್ಥಿತಿಯು ಭಕ್ತನು ತನ್ನ ಇಷ್ಟಲಿಂಗದ ಮೇಲಿನ ಭಕ್ತಿಯನ್ನು ಬಿಟ್ಟು ಪರದೈವಗಳ ಮೇಲೆ ಮನಸ್ಸು ಇಡುವದೆಂದರೆ ಇಂಥ ಹಂದಿಗಳು ನಡೆದಂತೆಯೇ ಸರಿ. ಇದು ನಿಜವಾದ ಭಕ್ತಿಯಲ್ಲ. ಆದ್ದರಿಂದ ಕಾಶೀ, ರಾಮೇಶ್ವರ, ಸೈಲಾರ, ಶ್ರೀಶೈಲ, ಹಂಪೆ, ರಾಜೋಟೆ ಮೊದಲಾದ ತೀರ್ಥಗಳಿಗೆ ಭಕ್ತನು ಹೋಗಬಾರದು. ಅವನಿಗೆ ಪಂಚಾಕ್ಷರಿಯುಪದೇಶವಾದ ಬಳಿಕ ಅವನು ವಿಶ್ವಾಸವಿಡತಕ್ಕ ಕ್ಷೇತ್ರ ತೀರ್ಥಗಳು ಅವನಲ್ಲಿಯೇ ಇವೆ ಎಂದು ಅಂಬಿಗರ ಚೌಡಯ್ಯನು ಇಲ್ಲಿ ಹೇಳಿರುವನು.

ವಚನ:— ೭೦. ಪರಧನ, ಪರಸತಿ, ಪರನಿಂದೆಗಳಿರೆ, ಮುಂದೆ ನರಕವು ಎಂದು ಗುರುವಾಕ್ಯ ಸಾರುತ್ತಿವೆ. ಪರಧನ, ಪರಸತಿ, ಪರಭೂ ವಿುಗಳುಪಿ ಹತವಾಗಿ ಹೋದ ದುರ್ಯೋಧನ. ಹರಿವ ನದಿಯ ವಿುಂದು ಗೋದಾನ ವಾಡುವ ನರಕಿಗಳ ನುಡಿಯ ಕೇಳಲಾಗದು. ಹದಿನಾಲ್ಕು ಲೋಕಕ್ಕೆ ಕರ್ತು ಶಿವನೊಬ್ಬನೆ ಎಂದು ಶ್ರುತಿಗಳು ಪೊಗಳುತ್ತಿಹವು.

ರಿರಾ, ಈ ದೈವ್ವವ ಕಂಡು ನಾಚಲಿಲ್ಲವೆ? ಭವಬಂಧನಂಗಳನಳಿಯಬೇಕೆಂದು ಬಹು ದೈವಕ್ಕೆರಗಿದರೆ ಅವು ನಿಮ್ಮ ಸಂಗತ ಒಂದಾದರೂ ಹೂಳಿಸಿಕೊಂಡವೇ? ನೀವು ಗಳಿಸಿದ ಅರ್ಥವನುಂಡುಂಡು ನಿಮ್ಮ ಭವದೊಳಗೆ ನೂಂಕಿದ ಪಿಶಾಚಿಗಳ ನೋಡಿಕೊಂಡು ಪ್ರಮಾಣಿಸಿ ಮರಳಿ ಲಿಂಗಭಕ್ತಿಯ ಮರೆದು ಬರಿವೆ ಶಿವಭಕ್ತರೆಂದು ಬೊಗಳುವ ಕುನ್ನಿಗಳು ಪರಭವಕ್ಕೆ ಒಳಗಾದರೆಂದಾತ ನಮ್ಮ ಅಂಬಿಗರ ಚೌಡಯ್ಯ.

ಭಾವಃ— ಪರಮಾತ್ಮನು ತನ್ನ ಸಮೀಪವಲ್ಲಿಯೇ ಇದ್ದಾನೆ. ನೀವು ಮರಣ ಹೊಂದುವ ವರೆಗೂ ಅವನು ನಿಮ್ಮಲ್ಲಿಯೇ ಇರುವನು. ಸತ್ತರೂ ಕೂಡ ನಿಮ್ಮೊಡನೆ ಬರುವನು. ಇಂಥ ಮಹಾವಸ್ತುವು ನಿಮ್ಮಲ್ಲಿರಲು ಬೇರೆ ಬಹು ದೈವಕ್ಕೆರಗಿದರೆ, ಈ ದೈವಗಳು ನಿಮಗೆ ಏನೂ ಸಹಾಯವಾಡಲಾರವು. ಇಷ್ಟೇ ಅಲ್ಲ, ಅವು ನಿಮ್ಮ ದ್ರವ್ಯವನ್ನು ಹರಣ ಮಾಡಿ, ನಿಮ್ಮನ್ನು ಭವದಲ್ಲಿ ನೂಂಕಿ ಪರಿಭವಕ್ಕೆ ಗುರಿಮಾಡುವವೆಂದು ಹೇಳುತ್ತಾನೆ.

ಅರತ ದೇವರ ಪೂಜೆಯ ಮಾಡಿ ಇಷ್ಟಲಿಂಗವ ಮರೆವ ಮೂಳ ಹೊಲೆಯರಿಗೆ ಮುಕ್ತಿ ಅಗದೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

ಭಾವಃ— ಭಕ್ತನು ಪರಧನ, ಪರಸತಿ, ಪರನಿಂದೆ ಇವುಗಳಿಂದ ದೂರವಿರತಕ್ಕದ್ದು. ಇಲ್ಲದಿದ್ದರೆ ದುರ್ಯೋಧನನಂತೆ ಅವನು ನಾಶವಾಗುವನು. ಹಾಗೆಯೇ ಹರಿಯುವ ನದಿಗಳ ಮೇಲೆ ಅವನು ವಿಶ್ವಾಸವಿಟ್ಟು ಸ್ನಾನವಾಡಿ ಗೊದಾನ ಮಾಡುವದಾದರೂ ವ್ಯರ್ಥವು. ಇಂಥ ನದಿಗಳಲ್ಲಿ ಒಣಗಿಹೋಗುವ ನೀರು ಮಾತ್ರ ಇರುತ್ತದೆ. ಆದರೆ ಹದಿನಾಲ್ಕು ಲೋಕಕ್ಕೆ ಒಡೆಯನಾದ ಶಿವನೊಬ್ಬನೇ ಇದ್ದಾನೆಂದು ವೇದಗಳು ಹೇಳುತ್ತಿದ್ದು ಅತನ ಚಿನ್ಹವಾದ ಇಷ್ಟಲಿಂಗ ಒಂದನ್ನೇ ಭಕ್ತನು ನಂಬಬೇಕು.

ವಚನ ೭೧. ಬರಿದು ಬಯಸುವ ಸೂಕರರೆಲ್ಲ ನೀವು ಕೇಳಿರೋ. ತರ್ಕ ವ್ಯಾಕರಣ, ಛಂದಸ್ಸು, ನಿಘಂಟು, ವೇದ, ಶಾಸ್ತ್ರವ ಕೇಳಿಯೋದಿ ನಂಗೆನೆ ಹರಿವರನೇನೆಂಬೆ? ಪರವಧುವೆಂಬುವದನರಿಯರಲ್ಲಾ! ಬೆರೆದಿರ್ದ ಪಾಪವ ಹೊನಲಲ್ಲಿ ಕಳಿವೆನೆಂಬ ಅಣ್ಣಗಳ ಬೆಡಗು ಬೇಡೆಂದಾತನಂಬಿಗ ಚೌಡಯ್ಯ.

ಭಾವ— ಅಂಬಿಗರ ಚೌಡಯ್ಯನು ತಾನು ಹೇಳುವ ಈ ಮಾತುಗಳೆಲ್ಲ ನಿರಾಧಾರವಾದವುಗಳಲ್ಲ. ಅವುಗಳಿಗೆ ತರ್ಕ ವ್ಯಾಕರಣ, ಛಂದಸ್ಸು, ನಿಘಂಟು, ವೇದ, ಶಾಸ್ತ್ರಗಳಲ್ಲಿ ಆಧಾರಗಳಿವೆ. ಇವೆಲ್ಲವೂ ಪರಮಾತ್ಮನೊಬ್ಬನನ್ನೇ ನಂಬಬೇಕೆಂದು ಹೇಳುತ್ತಿವೆ ಎಂದು ಇಲ್ಲಿ ಹೇಳುತ್ತಾನೆ. ಆದ್ದರಿಂದ ಇವುಗಳ ಜ್ಞಾನ ಮಾಡಿಕೊಂಡಿದ್ದಾದರೂ ನದಿಯಲ್ಲಿ ಜಳಕ ಮಾಡಿ ಪಾಪವನ್ನು ದೂರಮಾಡಬೇಕೆನ್ನುವವರ ಬೆಡಗು ತನಗೆ ಬೇಡೆಂದು ಇಲ್ಲಿ ಅವನು ಅನ್ನುತ್ತಾನೆ.

ವಚನ:— ೭೨. ಸತ್ತಡೆ ಸಂಗಡ ಹೊಳಿಸಿಕೊಂಬ ಲಿಂಗವು, ತನ್ನ ಕೊರಳಲ್ಲಿ ಹತ್ತಿಯಾಗಿ ಕಟ್ಟಿರಲು, ನಾನು ಸತ್ಯ ಶುದ್ಧ ಭಕ್ತನೆಂದರಿಯದೆ, ಮತ್ತನ್ಯ ದೈವಕ್ಕೆರಗುವ ಕತ್ತೆ ಮೂಳರು ನೀವು ಕೇಳಿರೋ. ಗಂಡನ ಕೂಡ ಸಮಾಧಿಯ ಕೊಂಬ ಹೆಂಡತಿ ಅನಂತ. ಹೆಂಡರ ಕೂಡ ಸಮಾಧಿಯ ಕೊಂಬ ಗಂಡರುಂಟೀ ಲೋಕದೊಳು? ಛೀ ಛೀ ಹಂದೆ ಮೂಳ

ಮನುಷ್ಯನ ವರ್ತನೆ.

ವಿವರಣೆ:— ವೀರಶೈವವಚನಕಾರರು ವ್ಯವಹಾರದಲ್ಲಿ ಮನುಷ್ಯನು ಹ್ಯಾಗೆ ಆಚರಿಸಬೇಕೆಂಬುದಕ್ಕೆ ಬಹಳ ಮಹತ್ವಕೊಡುತ್ತಾರೆ. ಆದ್ದರಿಂದ ಅವರು ಈ ವಿಷಯವನ್ನು ತಮ್ಮ ವಚನಗಳಲ್ಲಿ ವಿಶೇಷವಾಗಿ ವಿವರಿಸುವದುಂಟು. ಅವರು ಪ್ರಪಂಚವು ಅಥವಾ ಜಗತ್ತು ಮಿಥ್ಯವಾದುದೆಂದು ತಿಳಿಯುವದಿಲ್ಲ. ಇಲ್ಲಿ ನಡೆಯುತ್ತಲಿರುವ ಕಾರ್ಯಗಳೆಲ್ಲವೂ ಸತ್ಯವೆಂತಲೇ ಅವರು ನಂಬುತ್ತಾರೆ. ಆದ್ದರಿಂದ ಮನುಷ್ಯನು ತನ್ನ ಕಾರ್ಯಗಳನ್ನು ಹ್ಯಾಗೆ ನಿರ್ವಹಿಸಬೇಕೆಂಬದಕ್ಕೆ ಬಹಳ ಮಹತ್ವಕೊಡುತ್ತಾರೆ. ಮತ್ತು ಈ ವಿಷಯವನ್ನು ಕುರಿತು ಅವರು ಆಗಿಂದಾಗ್ಗೆ ವಿವೇಚಿಸುವದುಂಟು. ಕಾರ್ಯಗಳನ್ನು ಹೀಗೆ ಯೋಗ್ಯರೀತಿಯಿಂದ ಮಾಡುವದರಿಂದಲೇ ಆತ್ಮವಿಕಾಸಕ್ಕೆ ಕಾರಣವೆಂದು ಅವರು ಭಾವಿಸುತ್ತಾರೆ. ಆತ್ಮವಿಕಾಸವೆಂದರೆ ತಮ್ಮಲ್ಲಿ ಲಿಂಗದ ಗುಣಗಳನ್ನು ಬರಮಾಡಿಕೊಳ್ಳುವದೇ ಇರುತ್ತದೆ. ಲಿಂಗದ ಗುಣಗಳನ್ನು ಬರಮಾಡಿಕೊಳ್ಳುವದು, ವ್ಯವಹಾರವನ್ನು ಸರಿಯಾಗಿ ನಿರ್ವರ್ತಿಸುವದು, ಮತ್ತು ನೈತಿಕಾಚರಣೆ ಇವುಗಳಲ್ಲಿ ವಚನಕಾರರು ಭಿನ್ನತ್ವವನ್ನು ಎಣಿಸುವದಿಲ್ಲ. ಇವೆಲ್ಲವೂ ಒಂದೇ ಎಂದು ಅವರ ಅಭಿಪ್ರಾಯವು. ಪ್ರತಿಯೊಬ್ಬ ವಚನಕಾರನ ವಚನಗಳಲ್ಲಿ ಈ ಬಗೆಯ ವಿಚಾರಗಳು ತುಂಬಿಹೋಗಿರುತ್ತವೆ. ಆದರೆ ಅವುಗಳನ್ನು ವಿವರಿಸುವ ರೀತಿಗಳು ಮಾತ್ರ ಅವರವರ ಬಗೆಯ ಪ್ರಕಾರ ಭಿನ್ನ ಭಿನ್ನತೆರನಾಗಿರುತ್ತವೆ. ಅವರಲ್ಲಿ ಅಂಬಿಗರಚೌಡಯ್ಯನು ಈ ವಿಷಯವನ್ನು ಅತ್ಯಂತ ಸ್ಪಷ್ಟರೀತಿಯಿಂದ ಹೇಳುವದುಂಟು. ಅವನು ಬಹು ಗಂಭೀರವಾಗಿಯೂ, ಹಾಗೆಯೇ ಅತ್ಯಂತ ಸ್ಫುಟವಾಗಿಯೂ ಹೇಳುವ ಅವನ ತರವು ಅಪ್ರತಿಮವಾಗಿರುತ್ತದೆ.

ಯಾವಾಗಲೂ ದೇವರನ್ನು ಧ್ಯಾನಿಸು

ವಚನ:— ೭೩. ಬಡತನಕ್ಕೆ ಉಂಬುಸ ಚಿಂತೆ, ಉಣಲಾದರೆ ಉಡುವ ಚಿಂತೆ, ಉಡಲಾದರೆ ಇಡುವ ಚಿಂತೆ, ಇಡಲಾದರೆ ಹೆಂಡಿರ ಚಿಂತೆ, ಹೆಂಡಿರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ, ಬದುಕಾದರೆ ಕೇಡಿನ ಚಿಂತೆ, ಕೇಡಾದರೆ ಮರಣದ ಚಿಂತೆ, ಇಂತೀ ಹಲವು ಚಿಂತೆಯಲ್ಲಿ ಇಪ್ಪವರನು ಕಂಡೆನು. ಶಿವನ ಚಿಂತೆಯಲ್ಲಿದ್ದವರೊಬ್ಬರನು ಕಾಣೆನೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

ಭಾವ:— ಅಂಬಿಗರ ಚೌಡಯ್ಯನು ಮನುಷ್ಯನು ಯಾವಾಗಲೂ ಪರಮಾತ್ಮನ ಚಿಂತೆಯಲ್ಲಿರಬೇಕೆಂದು ಇದರಲ್ಲಿ ಹೇಳಿರುವನು. ಆದರೆ ಈ ಚಿಂತೆಯನ್ನು ಯಾರೂ ಮಾಡುವದಿಲ್ಲ. ಎಲ್ಲರೂ ತಮ್ಮ ಊಟ, ಹೊದೆಯುವ ವಸ್ತ್ರ, ಆಭರಣ, ಹೆಂಡಿರು, ಮಕ್ಕಳು, ದ್ರವ್ಯ, ಮೃತ್ಯು ಇಂಥವುಗಳ ಸಲುವಾಗಿ ಅನೇಕ ರೀತಿಯಿಂದ ಯಾವಾಗಲೂ ಚಿಂತೆ ಮಾಡುವದುಂಟು. ಆದರೆ ಈ ಚಿಂತೆಯನ್ನು ನಿವಾರಣೆ ಮಾಡಬಲ್ಲ ಪರಮಾತ್ಮನ ನೆನಪನ್ನು ಯಾರೂ ಮಾಡುವದಿಲ್ಲೆಂದು ಅವನ ಭಾವವು. ಮೇಲ್ಕಂಡ ಚಿಂತೆಗಳು ಹೊಸಹೊಸ ಚಿಂತೆಗಳನ್ನುಂಟುಮಾಡುವವು. ಅವುಗಳಿಗೆ ಮೇರೆ ಇಲ್ಲ. ಆದರೆ ಪರಮಾತ್ಮನ ಚಿಂತೆಯು ಈ ತರದ್ದಲ್ಲ. ಅದು ಹೊಸ ಚಿಂತೆಗಳನ್ನು ಹುಟ್ಟಿಸುವದಿಲ್ಲ. ಕಡೆಗೂ ಅದು ಸುಖವನ್ನು ಕೊಡುವದಾಗಿದೆ.

ಆತ್ಮಸಂಯಮನ ಮಾಡು

ವಚನ:— ೭೪. ಕುಡಿವ ನೀರೆನ್ನಬಹುದೆ ನೀರಲದ್ದುವಾಗ? ಅಡುವ ಕಿಚ್ಚೆನ್ನಬಹುದೆ ಮನೆಯ ಸುಡುವಾಗ? ಒಡಲು ತನ್ನದೆನ್ನಬಹುದೆ ಪುಣ್ಯಪಾಪವನುಂಬಾಗ? ಜೀವ ತನ್ನದೆನ್ನಬಹುದೆ ಮಿಕ್ಕು ಹೋಹಾಗ? ಇವನೊಡೆಬಡಿದು ಕಳೆ ಎಂದಾತ ಅಂಬಿಗರ ಚೌಡಯ್ಯ

ಭಾವ:— ಜಗತ್ತಿನಲ್ಲಿ ನಮ್ಮ ಕಣ್ಣೆದುರಿಗೆ ಅನೇಕ ವಸ್ತುಗಳು ತೋರುತ್ತವೆ. ಆದರೆ ಅವುಗಳಿಂದ ಹಿತವಾಗುವದು ಅಥವಾ ಅಹಿತವಾಗುವದು ಅವುಗಳ ಉಪಯೋಗದ ಮೇಲೆ ಅವಲಂಬಿಸಿದೆ. ಆದ್ದರಿಂದ ಯಾವಾಗಲೂ ಅವುಗಳ ಸದುಪಯೋಗ ಮಾಡಬೇಕೆಂದು ವಚನಕಾರನ ಭಾವವು. ಉದಾಹರಣಾರ್ಥವಾಗಿ ನೀರು ಉಪಯುಕ್ತ ವಸ್ತುವು. ಆದರೆ ಅದರಲ್ಲಿ ಒಬ್ಬನು ಮುಳುಗಿ ಸಾಯಬಹುದು. ಬೆಂಕಿಯು ಉಪಯುಕ್ತ ವಸ್ತುವು. ಆದರೆ ಅದು ಮನೆಯನ್ನು ಸುಡಬಹುದು. ಹೀಗೆ ಈ ಉಪಯುಕ್ತ ವಸ್ತುಗಳ ದುರುಪಯೋಗವಾಗಬಹುದು. ಹಾಗೆಯೇ ಶರೀರವು ಹಿತಕರ ವಸ್ತುವು. ಆದರೆ ಪುಣ್ಯಪಾಪಗಳ ಮೂಲಕ ಅದು ನಾನಾ ತರವ ಯಾತನೆಗಳಿಗೊಳಗಾಗಿ ಮನಸ್ಸಿಗೆ ಕ್ಲೇಶವನ್ನುಂಟುಮಾಡುವದು. ಹಾಗೆಯೇ ಜೀವನ ಸ್ಥಿತಿಯೂ ಇದೆ. ಇದು ಸರಿಯಾಗಿ ವರ್ತಿಸಿದರೆ ಸುಖವು. ವಿಕ್ಕಿ ನಡೆದರೆ ದುಃಖವು. ಅದು ಹೊಸ ಜನ್ಮಗಳನ್ನು ಪಡೆಯುವಂತೆ ಮಾಡುವದು. ಆದ್ದರಿಂದ ಇವುಗಳನ್ನು ಅಂಕಿತದಲ್ಲಿಟ್ಟುಕೊಂಡು ಸರಿಯಾಗಿ ನಡೆಯಬೇಕು. ಇದರಿಂದ ನೋಕ್ಷವಾಗುವದೆಂದು ವಚನಕಾರನ ಅಭಿಪ್ರಾಯವು.

ವೇಳೆಯನ್ನು ಸಾಧಿಸಿ ಕೆಲಸ ಮಾಡು.

ವಚನ— ೭೫. ಗಾಳಿ ಬಿಟ್ಟಲ್ಲಿ ತೂರಿಕೊಳ್ಳಿರಯ್ಯಾ! ಗಾಳಿ ನಿನ್ನ ಧೀನವಲ್ಲಯ್ಯಾ! ನಾಳೆ ತೂರಿಹೆನೆಂದಡೆ ಇಲ್ಲವಯ್ಯಾ! ಶಿವಶರಣ ಎಂಬುದೊಂದು ಗಾಳಿ ಬಿಟ್ಟಲ್ಲಿ ಬೇಗ ತೂರೆಂದ ಅಂಬಿಗರ ಚೌಡಯ್ಯ.

ಭಾವ— ವೇಳೆಯು ಮನುಷ್ಯನ ಕೈಯ್ಯಲ್ಲಿಲ್ಲ. ವೇಳೆಯನ್ನು ಸಾಧಿಸಿ ಕಾರ್ಯಮಾಡಬೇಕು. ಗಾಳಿ ಬಿಟ್ಟಾಗ ತೂರಿಕೊಳ್ಳಬೇಕೆಂದು ನಾಣ್ನುಡಿ ಇದೆ. ಹಾಗೆಯೇ "ಶಿವಶರಣು" ಎಂಬ ಭಾವವು ಮನಸ್ಸಿನಲ್ಲಿ ಉಂಟಾದ ಕಾಲಕ್ಕೆ ಸತ್ಕಾರ್ಯಗಳನ್ನು ಮಾಡಲೇಬೇಕು. ಈ ವೇಳೆಯು ತಪ್ಪಿಹೋದ ಬಳಿಕ ಸತ್ಕಾರ್ಯಗಳು ಜರಗಲಿಕ್ಕಿಲ್ಲೆಂದು ವಚನಕಾರನ ಭಾವವಿದ್ದ ಹಾಗೆ ತೋರುತ್ತದೆ.

ಮಾಯೆಯನ್ನು ದೂರಮಾಡು.

ವಚನ:— ೭೬. ಅಡವಿಯು ಹೊಗಿಸಿತ್ತು; ನೀರಲದ್ದಿತ್ತು; ಜಡೆಗಟ್ಟಿ ಭಸ್ಮವ ತೊಡಿಸಿತ್ತು; ಹಿಡಿದೊತ್ತಿ ಕೇಶವ ಕೀಳಿಸಿತ್ತು; ಹುಡಿ ಹುಚ್ಚುಗೊಳಿಸಿತ್ತು ಊರೊಳಗೆಲ್ಲ. ಬೆಡಗಿನ ಮಾಯೆಗೆ ನಾಚುವೆನೆಂದನಂಬಿಗರಚೌಡಯ್ಯ.

ಭಾವ:— ಮನುಷ್ಯನು ಮಾಯಾವಶನಾಗಿದ್ದಾನೆ ಈ ಮಾಯೆಯು ಅವನ ಮನಸ್ಸನ್ನು ಚಂಚಲಮಾಡಿಬಿಡುತ್ತದೆ. ಅದು ಅವನನ್ನು ಲಿಂಗನಿಷ್ಠೆಯಲ್ಲಿ ಇರಿಸುವದಿಲ್ಲ. ಒಮ್ಮೆ ಅದು ಪರ್ವತಗಳಿಗೆ ಹೋಗುವಂತೆ ಮಾಡಿ ಏಕಾಂತವಾಸಕ್ಕೆ ಗುರಿಮಾಡುವದು. ಅಥವಾ ಕ್ಷೇತ್ರಯಾತ್ರೆಗಳಿಗೆ ಹೊರಡಿಸುವದು. ಮತ್ತೊಮ್ಮೆ ತಪಸ್ಸನ್ನು ಆಚರಿಸಲಿಕ್ಕೆ ಹಚ್ಚುವದು. ಇನ್ನೊಮ್ಮೆ ಜೈನಸನ್ಯಾಸಿಯನ್ನಾಗಿಮಾಡಿ ಕೇಶವನ್ನು ಕೀಳಿಸಿಕೊಳ್ಳುವಂತೆ ಮಾಡುವದು. ಈ ಪ್ರಕಾರ ಅದು ಮನುಷ್ಯನನ್ನು ಹುಡಿಹೊಯ್ದುಕೊಳ್ಳುವ ತಿಳಿಗೇಡಿ ಹುಚ್ಚನಂತೆ ಮಾಡಿಬಿಡುತ್ತದೆ. ಹೀಗೆ ಮಾಡಿಸುವ ಇಂಥ ಮಾಯೆಯನ್ನು ಕಳೆಯಬೇಕೆಂದು ವಚನಕಾರನು ಇದರಲ್ಲಿ ಅನ್ನುತ್ತಾನೆ.

ಭಕ್ತನ ಆಚರಣೆಗಳು.

ವಚನ ೭೭. ಹಿಂದಣ ಜನ್ಮದಲ್ಲಿ ಹಲವು ಸುಕೃತಂಗಳ ಮಾಡಿ ಬೇಡಿಕೊಂಡಿದ್ದರ ದೆಸೆಯಿಂದ ಬಂದು ಹುಟ್ಟಿದರಯ್ಯಾ ಶಿವಭಕ್ತರ ಬಸಿರಲ್ಲಿ. ಮುಂದೆ ಶಿವಭಕ್ತರ ಭಕ್ತಿ ದೊಡ್ಡಿತ್ತೆಂದು ನಂಬಲರಿಯದೆ ಭ್ರಮಿತರಾಗಿ ಘನ ಸುಖವ ನೀಗಿ ಭಕ್ತಿಯ ಪದಸೇವೆಯೊಳು ಇರಲೊಲ್ಲದೆ ಹಿಂದಿನ ಬಯಕೆಯ ಮರೆದು ಕಂಡ ಹಂದಿಯೊಳಾಡಿ ನರಕವ ತಿಂದಂದೆ, ಸಂಸಾರ ಹೃದಯದೊಳು ಬಂದು ಮುಂದುಗೆಟ್ಟು ಮುಳುಗಿ ಈಸಾಡುವ ಲೋಗರಂತೆ ಹೊನ್ನು ನನ್ನದೆಂದು ಹೆಣ್ಣು ನನ್ನದೆಂದು ಮಣ್ಣು ನನ್ನದೆಂದು ಭಿನ್ನ ಭಾವದೊಳು ಮನ ಸಂದು, ಹೆಂಡತಿಗಾಗಬೇಕು, ಮಕ್ಕಳಿಗಾಗಬೇಕೆಂಬ ಭಂಡ ಮುಕೊರೆಯ ಮೂಳರಿರಾ, ನೀವು ಶಿವಭಕ್ತರಾಗಿ

ಹುಟ್ಟಿದ್ದು ಫಲವೋ? ಹೋತಿಂಗೆಂಬಂತೆ ಲಿಂಗವ ಕಟ್ಟಿಕೊಂಬಿರಿ. ವತ್ಸ
ನೆಗೊಬ್ಬ ಗುರುವಾದವಂಗೆ ಪರಕೆಗೆ ನೀಡುವಿರಿ. ಚರಲಿಂಗಕ್ಕೆ ಬೋನ
ಲ್ಲೆಂಬಿರಿ ಅರಿಕೆಯಲ್ಲಿ ಆಚಾರವಿಲ್ಲ. ಕಿರುಕುಳ ದೈವದ ಬೆನ್ನ ಬಿಡ
ಪರಿಕೆಯ ಹರಣವೆಂದು ಹರಿಹರಿದು ಹೋಗಿ ಕೊಲ್ವ ನರಕಿಗಳ ಕೊ
ಡೊಯ್ದು ಯಮನು ಇವರ ನಡುವಿಂಗೆ ಗಿರಿಕಿಯ ಕಟ್ಟಿ ಮೆಟ್ಟಿ ಮೆಟ್ಟಿ
ಬಿಗಿವಾಗ ತಿಗದಲ್ಲಿ ಹಾಯ್ದು ಗೂದಿಯ ಕಂಡು ಜಗವಂಕೆಯಲ್ಲಿ ನಗು
ರ್ದಾತ ನಮ್ಮ ಅಂಬಿಗರ ಚೌಡಯ್ಯನು.

ಭಾವಃ— ಈ ವಚನದಲ್ಲಿ ಭಕ್ತನು ಹ್ಯಾಗೆ ಆಚರಿಸಬೇಕೆಂಬದನ್ನು
ವಚನಕಾರನು ನಾನಾನ್ಯವಾಗಿ ವಿವರಿಸಿದ್ದಾನೆ. ಮನುಷ್ಯನು ಹುಟ್ಟಿ
ಹುಟ್ಟಿ ಬರಲಿಕ್ಕೆ ಅವನು ಮಾಡುವ ಕರ್ಮಗಳೇ ಕಾರಣವು. ಅವನು
ಸತ್ಕರ್ಮಗಳನ್ನು ಮಾಡಿದರೆ ಉತ್ತಮ ಜನ್ಮದಲ್ಲಿ ಹುಟ್ಟುವನು. ದುಷ್ಕ
ರ್ಮಗಳನ್ನು ಮಾಡಿದರೆ ಕೆಡಕು ಜನ್ಮದಲ್ಲಿ ಹುಟ್ಟುವನು. ಅದರಿ ಶ್ರೇಷ್ಠ
ರಾದ ಶಿವಭಕ್ತರ ಜನ್ಮದಲ್ಲಿ ಹುಟ್ಟಬೇಕಾದರೆ ಹಿಂದಿನ ಜನ್ಮದಲ್ಲಿ ಅವನ
ಸುಕೃತವನ್ನು ಮಾಡಿರಬೇಕು. ಇಂಥ ಜನ್ಮದಲ್ಲಿ ಹುಟ್ಟಿದ ಬಳಿಕ ದೇವರಲ್ಲಿ
ಭಕ್ತಿಯನ್ನು ತಾಳದೆ ಭಕ್ತಿಯಿಂದೆ ಉತ್ಪನ್ನವಾಗುವ ಘನಸುಖವನ್ನ
ಹೊಂದುವದನ್ನು ಬಿಟ್ಟುಕೊಟ್ಟು ಭಕ್ತಿಪದದ ಸೇವೆಯನ್ನು ಮಾಡದೆ ಕೀ
ಜನರ ಸಂಗತಿಯನ್ನು ಹಿಡಿಯುವವನು ನರಕವನ್ನು ತಿಂಬುವ ಹಂದಿ
ಯಂತೆಯೇ ಸರಿ. ಹೀಗೆ ವರ್ತಿಸುವ ಜನರು ಲೌಕಿಕರ ಹಾಗೆ ಹೊನ್ನು
ಹೆಣ್ಣು, ಮಣ್ಣು ಇವುಗಳಲ್ಲಿ ಆಶೆಯನ್ನು ತಾಳಿ ಅವುಗಳ ಸದುಪಯೋ
ಗವನ್ನು ಮಾಡುವದಿಲ್ಲ. ಇದು ಶಿವಭಕ್ತರಾಗಿ ಹುಟ್ಟಿದ್ದಕ್ಕೆ ಸಾರ್ಥಕವಾ
ದುದಲ್ಲ. ಹೋತಿಗೆ ಗಡ್ಡವಿದ್ದಂತೆ ಲಿಂಗವನ್ನು ಮಾತ್ರ ಕಟ್ಟಿಕೊಂಡರು
ಆ ಲಿಂಗ ಅವರಿಗೆ ಪ್ರಯೋಜನಕರವಾದುದಲ್ಲ. ಅವರು ಗುರುವನ್ನು
ವರ್ತನೆಗಾಗಿ ಮಾತ್ರ ಇಟ್ಟುಕೊಳ್ಳುತ್ತಾರೆ. ಅವನಿಗೆ ಏನಾದರೂ ಹರಿಕೆ
ಹೊತ್ತು ಆ ಹರಿಕೆ ತೀರಿಸಲು ದಾನವಾಡುವರು. ಆದರೆ ಯಾರಾ
ದರೂ ಪುಣ್ಯಪುರುಷರು ಬಂದರೆ ಅವರಿಗೆ ಏನೂ ದಾನ ಧರ್ಮ ಮಾಡು
ವದಿಲ್ಲ. ಇಂಥವರಿಗೆ ತಿಳುವಳಿಕೆ ಇಲ್ಲ, ಆಚಾರವೆಂಬುದಿಲ್ಲ. ಹಾಗೆಯೇ
ಕಿರುಕುಳ ದೈವಗಳಲ್ಲಿ ನಂಬಿಗೆ ಇಟ್ಟು ಅವುಗಳಿಗೆ ಬಲಿಕೊಟ್ಟು ಜೀವ
ಹಿಂಸೆಮಾಡುವರು. ಇಂಥವರನ್ನು ಪರಮಾತ್ಮನು ನಿಶ್ಚಯವಾಗಿ ಶಿಕ್ಷಿಸುವ
ನೆಂದು ಅಂಬಿಗರಚೌಡಯ್ಯನು ಬಹು ರೋಷದಿಂದ ಇವರನ್ನು ಜೈದಿರುವನು.

ವ್ರತನಿಯಮಗಳನ್ನು ಬಿಡಬೇಡ.

ವಚನಃ— ೭೮. ಮಕ್ಕಳು ಮರಿಗಳು ಸತ್ತು ನಷ್ಟವಾಗಿ ಕಷ್ಟ
ದುಃಖ ನೆಲೆಗೊಂಡಿತ್ತೆಂದು ತನ್ನಿಷ್ಟಲಿಂಗಪೂಜೆಯನಗಲಿಸಿ ಬಿಟ್ಟಿಯ
ಮಾಡಬಹುದೇನಯ್ಯ? ಜಂಗಮವು ಬಂದು ತನ್ನ ವ್ರತನೇಮಕ್ಕೆ ಬೇಡಿ
ದರೆ ನಿಮ್ಮ ಉಪದ್ರವೇನೆಂದು ಭಕ್ತಿಯ ಮಾಡದಿರಬಹುದೇನಯ್ಯ?
ಸಕಲ ದುಃಖವೆಲ್ಲ ತಮ್ಮಿಂದ ತಾವೇ ಬರಲರಿಯವು. ಭಕ್ತಿಯನ್ನು ಮರೆದು
ಮರವೆಯಲ್ಲಿ ಬೆರೆದು ಭವಭವದಲ್ಲಿ ಬರುವುದು ಅದೇ ದುಃಖವು ನಿಷ್ಠೆ
ಯೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

ಭಾವಃ— ಮನುಷ್ಯನಿಗೆ ಜಗತ್ತಿನಲ್ಲಿ ಅನೇಕ ಕಷ್ಟನಷ್ಟಗಳೂ ನಾನಾ
ಬಗೆಯ ದುಃಖಗಳೂ ಉತ್ಪನ್ನವಾಗುತ್ತವೆ. ಇಂಥ ಕಾಲದಲ್ಲಿ ಅವನು
ನಿರಾಶೆಯುಳ್ಳವನಾಗಿ ಪರಮಾತ್ಮನ ಮೇಲೆ ಕೋಪಿಸಿಕೊಂಡು ತಾನು
ಮಾಡತಕ್ಕ ಆಚರಣೆಗಳನ್ನು ಬಿಟ್ಟುಕೊಡುತ್ತಾನೆ. ಹೀಗೆ ಮಾಡಬಾರ
ದೆಂದು ವಚನಕಾರನ ಅಭಿಪ್ರಾಯವು. ಆಗ ಅವನು ತಾನು ಮಾಡ
ತಕ್ಕ ಇಷ್ಟಲಿಂಗಪೂಜೆಯನ್ನು ಮಾಡಲೇಬೇಕು. ಒಂದುವೇಳೆ ನಿನ್ನೆ
ಡೆಸೆ ಶಿವಶರಣರು ಬಂದರೆ ಅವರನ್ನು ಭಕ್ತಿಯಿಂದ ಕಾಣಲೇಬೇಕು.
ಯಾಕಂದರೆ ಐಹಿಕ ಕ್ಲೇಶಗಳು ತಮ್ಮಿಂದ ತಾವೇ ಬರುವದಿಲ್ಲ. ಅವು
ತನ್ನ ಕರ್ಮವಶದಿಂದ ಬರುತ್ತವೆ. ಅವುಗಳಿಗೆ ತಾನೇ ಹೊಣೆಗಾರನು.
ಈ ಪ್ರಕಾರ ವಚನಕಾರನು ಹೇಳಿ ಕಡೆಗೆ ಅನ್ನುವದೇನೆಂದರೆ, ಹೀಗೆ
ಅನುಭವಿಸತಕ್ಕವುಗಳು ನಿಜವಾಗಿ ದುಃಖಗಳಲ್ಲ. ನಿಜವಾದ ದುಃಖವು
ಮತ್ತು ಕ್ಲೇಶಪಡತಕ್ಕ ಸಂಗತಿಯು ಯಾವದೆಂದರೆ, ಭಕ್ತಿಯನ್ನು ಮರೆದು
ಅಜ್ಞಾನದಲ್ಲಿ ಮುಳುಗಿ, ನಾನಾ ತೆರದ ದುಷ್ಕೃತ್ಯಗಳನ್ನು ಮಾಡಿ ಪ್ರಪಂ
ಚದಲ್ಲಿ ತಿರುತಿರುಗಿ ಬರುವದೇ ನಿಜವಾದ ದುಃಖವು, ಇದನ್ನು ಕಳೆ ಎಂದು
ವಚನಕಾರನು ಹೇಳಿದ್ದಾನೆ.

ದುರ್ಗುಣಗಳನ್ನು ಬಿಡು

ವಚನಃ— ೭೯. ಮೃಡನ ನೊಲಿಸಿಹೆನೆಂದು ನುಡಿವ ನಾಲಿಗೆ ಎಡ ಹಿದಲ್ಲಿ, ಅದು ಕಲ್ಲು ಕೊರಡೆ? ಒಡಲಿಂಗೆ ಹೊನ್ನು ಹೆಣ್ಣು ಮಣ್ಣು ಅಪ್ಪ ಬಿದ್ದ ಕೊಲುವಾಗ ನಡೆವ ಗಂಡರುಂಟೆ? ತನ್ನೊಡಲೊಳಗಣ ಅನ್ನ ಮುರಳಿ ದೊಡೆ ಹೇಸುವಂತೆ, ಹೇಸಿ ಬಿಟ್ಟಡೆ ನಡೆದು ಶಿವನ ಕೂಡುವನೆಂದಾತ ನಂಬಿಗ ಚೌಡಯ್ಯ

ಭಾವಃ— ಮನುಷ್ಯನು ತನ್ನ ಪ್ರಪಂಚದಲ್ಲಿ ಹುಟ್ಟಿ ಹುಟ್ಟಿ ಬರಲಿಕ್ಕೆ ಅವನು ಮಾಡುವ ಕೃತ್ಯಗಳೇ ಕಾರಣವು. ಈ ಹುಟ್ಟನ್ನು ತೊಲಗಿಸಿ ಮೋಕ್ಷವನ್ನು ಹೊಂದಬೇಕಾದರೆ ಮೃದು ನುಡಿಗಳನ್ನು ಯಾವಾಗಲೂ ನುಡಿಯಬೇಕು. ಧನಲೋಭ ದುರಾಚಾರಗಳನ್ನು ಬಿಡಬೇಕು. ಅನ್ನವನ್ನು ಉಂಡ ಬಳಿಕ ಕಾರಿಕೊಂಡಲ್ಲಿ ಈ ಕಾರಿಕೆಯು ಹ್ಯಾಗೆ ತ್ಯಾಜ್ಯವೂ ಅಸಹ್ಯವೂ ಎನಿಸುತ್ತದೋ ಹಾಗೆಯೇ ಮನುಷ್ಯನು ತನ್ನೊಳಗಿಂದ ಹೊರಗೆ ಬರುವ ದುರ್ಗುಣಗಳು ತ್ಯಾಜ್ಯವೆಂದು ತಿಳಿಯಬೇಕು. ಹೀಗೆ ವರ್ತಿಸಿ ಆಚರಿಸಿದರೆ ಅವನು ಮೋಕ್ಷವನ್ನು ಹೊಂದುವನು.

ವಚನಃ— ೮೦. ನುಡಿವ ನುಡಿ ಶಬ್ದವೆ? ಕಾಯದ ಕಳವಳಕ್ಕೆ ಒಡಲಗೊಡುವರೆಲ್ಲ ಕೇಳಿರಯ್ಯ. ಸಂಧ್ಯಾ, ನೇಮ, ನಿತ್ಯ, ಜಪ, ತಪ, ಸಮಾಧಿಯೊನೆಂದಳೆಂದು ಬರವಂತೆ, ಬರವ ನುಡಿಯೊಳಗಿರ್ದು ನುಡಿದು ತಪ್ಪಿದೆನೆಂಬ ಈ ನುಡಿಗೆ ನಾಚುವೆನೆಂದ ನಂಬಿಗಚೌಡಯ್ಯ.

ಭಾವಃ— ವಚನವು ಅಶುದ್ಧವಿರುವದರಿಂದ ಭಾವವು ಚನ್ನಾಗಿ ಆಗುವದಿಲ್ಲ.

ಮಾತಾಡಿದ ಬಳಿಕ ಅದು ಕೇವಲ ಶಬ್ದವಲ್ಲ. ನುಡಿದಂತೆ ನಡೆದುಬೇಕೆಂದು ಇವರ ಮುಖ್ಯಾರ್ಥವಿದ್ದಂತೆ ತೋರುತ್ತದೆ.

ಚಂಚಲತೆಯನ್ನು ಬಿಡು.

ವಚನಃ— ೮೧. ಭಕ್ತ ನೆಂಬಿದರೆ ಕೊಪ್ಪದ ರಾಮಯ್ಯನಂತೆ ನಂಬಬೇಕಯ್ಯ. ಭಕ್ತ ನೆಂಬಿದರೆ ಕೆಂಭಾವಿ ಭೋಗಣ್ಣನಂತೆ ನಂಬಬೇಕಯ್ಯಾ. ಭಕ್ತ ನೆಂಬಿದರೆ ಚೇದಿರಾಜನಂತೆ ನಂಬಬೇಕಯ್ಯಾ. ಭಕ್ತ ನೆಂಬಿದರೆ ಏಣಾದಿನಾಥನಂತೆ ನಂಬಬೇಕಯ್ಯಾ. ಇಂತಪ್ಪ ನಂಬಿಗೆಗೆ ತಾನು ಸರಿ ಎಂದು ಬೀದಿಯ ಪೋರನಂತೆ, ತನ್ನಯ ಮನದೊಳಗೊಂದು ಮಾತು ಹೊರಗೊಂದು ಮಾತು. ತುದಿನಾಲಿಗೆಯಲ್ಲಿ ಭಕ್ತರ ನಂಬಿದೆನೆಂದು ಗಳಹುವ ಗೊಡ್ಡ ಹೊಲೆಯನ ಕಂಡೊಡೆ, ಎದೆ ಎದೆಯನು ಒದ್ದೊದ್ದು ತುಳಿ ಎಂದಾತ ನಮ್ಮ ಅಂಬಿಗರ ಚೌಡಯ್ಯ.

ಭಾವಃ— ಅನೇಕರು ಶಿವಶರಣರ ಚರಿತ್ರೆಗಳನ್ನು ಕೇಳುವರು. ಆದರೆ ಹೀಗೆ ಕೇಳಿದ್ದನ್ನು ಆಚರಣೆಯಲ್ಲಿ ತರುವದಿಲ್ಲ. ಹೀಗೆ ಮಾಡಿದರೆ ಕೇಳಿದ್ದು ಏನು ಪ್ರಯೋಜನ? ಹಿಂದಿನವರು ಭಕ್ತಿಯನ್ನು ಮಾಡುವಲ್ಲಿ ಅನೇಕ ಕಷ್ಟಗಳನ್ನು ಸಹಿಸಬೇಕಾಯಿತು. ನಾನಾ ಬಗೆಯ ಜನಾಪವಾದಗಳನ್ನು ಹೊರಬೇಕಾಯಿತು. ಈ ಬಗೆಯ ಅವಹೇಲನೆ. ನಿಂದೆ, ಕಷ್ಟನಷ್ಟಗಳನ್ನು ಸಹಿಸಲು ಮನುಷ್ಯನು ಸಿದ್ಧನಾಗಿರಬೇಕು. ಹೀಗೆ ಸಿದ್ಧನಾಗದೆ ಸಣ್ಣ ಹುಡುಗನಂತೆ ಚಂಚಲ ಮನಸ್ಸಿನವನಾಗಿ ಒಳಗೊಂದು ಹೊರಗೊಂದು ಮಾಡುತ್ತ ಹೋದರೆ ಅಂಥವನನ್ನು ಚನ್ನಾಗಿ ಶಿಕ್ಷಿಸಬೇಕೆಂದು ವಚನಕಾರನು ನುಡಿದಿರುವನು.

ವಚನಃ— ೮೨. ನಿಂಬೆಣ್ಣ ಮಾಡುವ ಭಕ್ತಿ ನಾಡೆಲ್ಲ ಮಾಡಬಹುದಯ್ಯ, ಕುಂಬಾರ ಗುಂಡಯ್ಯ ಮಾಡುವ ಭಕ್ತಿ ಊರೆಲ್ಲ ಮಾಡಬಹುದಯ್ಯಾ, ಬಸವಣ್ಣ ಮಾಡುವ ಭಕ್ತಿ ಶಿಶುವೆಲ್ಲ ಮಾಡಬಹುದಯ್ಯಾ, ಇದೇನು ದೊಡ್ಡಿತ್ತೆಂಬರು. ಸರ್ವರಿಗೆ ವಶವಾಗದ ಭಕ್ತಿ ಅವರ ಮನ ಜ್ಞಾನದಂತೆ ಇರಲಿ. ಶರಣಾರ್ಥಿ. ಈ ವಸುಧೆಯೊಳಗೆ ಶುದ್ಧ ಭಕ್ತಿಯನರಿತು ನಡೆದುದು ಸಿದ್ಧಿಯಾಗದೆ? ನುಡಿದುದು ಬಟ್ಟೆಯಾಗದೆ? ದೇಹಕ್ಕೆ ಕಷ್ಟ, ನಷ್ಟ ರೋಗರುಜಂಗಳು ಬಂದು, ಅಟ್ಟಿ ಮುಟ್ಟಿದವಾಗಿ ದೃಢವಾಗಿದ್ದು ಶರಣನ ಮನವು ನಿಶ್ಚಯಿಸಿ, ದೃಢಶೀಲಂಗಳಂ ಬಿಡದೆ ನಡೆವಾತ ದೊಡ್ಡ ಭಕ್ತನೆಂದಾತ ನಮ್ಮ ಅಂಬಿಗರ ಚೌಡಯ್ಯನು.

ಭಾವಃ— ಈ ವಚನದಲ್ಲಿ ಭಕ್ತನು ಹ್ಯಾಗೆ ದೃಢ ಮನಸ್ಸಿನಿಂದ ನಡೆಯಬೇಕೆಂಬುದನ್ನು ಹೇಳಿರುವನು. ಅನೇಕರು ಹಿಂದಿನವರು ಮಾಡಿದ ಭಕ್ತಿಯನ್ನು ಕೇಳಿ ಅದೇನು ದೊಡ್ಡದೆಂದು ಹೀಯಾಳಿಸುವರು. ಇಂಥವರಿಗೆ ಶರಣಾರ್ಥಿ ಎಂದು ವಚನಕಾರನು ಚೇಷ್ಟೆಮಾಡಿ, ಅವರ ಭಕ್ತಿಯು ಅವರ ಜ್ಞಾನ ಮತ್ತು ಮನಸ್ಸಿನಂತೆ ಇರಲಿ, ಅವರ ಗೊಡವೆ ನಮಗೆ ಬೇಡ ಎಂದು ನುಡಿದಿರುವನು. ಆದರೆ ಜಗತ್ತಿನಲ್ಲಿ ಶುದ್ಧ ಭಕ್ತಿಯಾವುದೆಂಬದನ್ನು ತಿಳಿದು ಹಾಗೆ ಆಚರಿಸಿದಲ್ಲಿ ಅವನಿಗೆ ಇಷ್ಟಕಾರ್ಯಗಳು ಸಿದ್ಧಿಯಾಗದೆ ಇರವು. ಇಷ್ಟೇ ಅಲ್ಲ, ಅವನು ನುಡಿದುದೇ ದಾರಿಯಾಗುವದು. ಒಂದುವೇಳೆ ಅವನ ದೇಹಕ್ಕೆ ಕಷ್ಟನಷ್ಟ ರೋಗ ರುಜೆಗಳು ಪ್ರಾಪ್ತವಾಗಿ ಅತ್ಯಂತ ಕ್ಲೇಶಪಟ್ಟರೂ ಅವನ ಮನಸ್ಸು ದೃಢವಾಗಿರಬೇಕು. ತನ್ನ ನಿಶ್ಚಯ ಭಾವವನ್ನು ಬಿಡಬಾರದು. ತನ್ನ ಶೀಲದಂತೆಯೇ ನಡೆಯಬೇಕು. ಹೀಗೆ ಇದ್ದಲ್ಲಿ ಅವನೇ ದೊಡ್ಡ ಭಕ್ತನು.

ದೃಢಮನಸ್ಸಿನಿಂದ ನಿರಂತರ ಶ್ರವಃಮಾಡು.

ವಚನಃ— ಆಹಾ. ವೀರಂಗೆ ರಣಾಗ್ರ ಕದನ ಭೋರೆಂದು ತಟ್ಟಿದಲ್ಲಿ, ದೂರಲಿಂದೆಸೆವ ಒಂದಂಬಿನಲ್ಲಿ, ಸೇರಿಬಂದಲ್ಲಿ ಹೊಯ್ವ ಬಿಲ್ಲಿನಲ್ಲಿ, ಅವು ಮೀರಿಬಂದಲ್ಲಿ, ಇರಿವ ಕಠಾರಿಯಲ್ಲಿ, ಅದು ತಪ್ಪಿದ್ದಕ್ಕೆ ತೆಕ್ಕೆಯಲ್ಲಿ ಪಿಡಿವ ಯುದ್ಧದಲ್ಲಿ, ಬಿದ್ದಲ್ಲಿ ಕಡಿವ ಬಾಯಲ್ಲಿ, ಇಂತಿವು ತನ್ನ ಪ್ರಾಣಕ್ಕೆ ಬಂದಲ್ಲಿ ತನ್ನ ಧೈರ್ಯವ ಮರೆಯಲಿಲ್ಲ. ಹೀಗಿರಲಿಲ್ಲವೇ ಭಕ್ತನ ಗುಣ? ಹೊನ್ನು, ಹೆಣ್ಣು, ಮಣ್ಣುಳ್ಳ ಕಾಲಕ್ಕೆ ಪನ್ನಗಧರನ ಶರಣರಿಗೆ ಅನ್ನೋದಕ ವಸ್ತ್ರಗಳ ಉಪಚಾರವ ಮಾಡುವುದು. ಅದು ತಪ್ಪಿದ್ದಕ್ಕೆ ನೀಡಿ ಮಾಡುವ ಭಕ್ತರ ಮನೆಯನೊಡಗೊಂಡು ಹೋಗಿ ತೋರುವುದು. ಅದಾಗದಿದ್ದೊಡೆ ಹರಶರಣರ ಕಮಂಡಲವ ಕೊಂಡು ಹೋಗಿ ಮಡುವಿನ ಅಗ್ಗಣಿಯ ತಂದು ಪಾದಾರ್ಚನೆಯ ಮಾಡುವುದು. ಅದಾಗದಿದ್ದೊಡೆ ಹರಶರಣರಿಗೆ ಇದಿರೆದ್ದು ಹೋಗಿ ನಮಸ್ಕರಿಸುವುದು. ಇಷ್ಟರೊಳಗೊಂದು ಗುಣವಿಲ್ಲದಿದ್ದೊಡೆ ಅವ ಭಕ್ತನಲ್ಲ. ಅವ ಹೊಲೆಯನೆಂದಾತ ನಮ್ಮ ಅಂಬಿಗರ ಚೌಡಯ್ಯನು.

ಭಾವಃ— ಭಕ್ತನು ಹ್ಯಾಗೆ ಇರಬೇಕೆಂಬುದನ್ನು ವಚನಕಾರನು ಇಲ್ಲಿ ಒಂದು ಉದಾಹರಣೆಯನ್ನು ಕೊಟ್ಟು ಇಲ್ಲಿ ಅತಿ ಸ್ಪಷ್ಟ ರೀತಿಯಿಂದ ವಿವರಿಸಿರುವನು. ಅವನು ಒಬ್ಬ ಶೂರ ಪುರುಷನಂತೆ ಇರಬೇಕೆಂದು ಹೇಳಿರುವನು. ಈ ಶೂರ ಪುರುಷನು ರಣಾಂಗಣದಲ್ಲಿ ವೈರಿಗಳು ಇದಿರಾದರೆ ಅವರು ದೂರದಲ್ಲಿರುವ ವರೆಗೆ ಬಾಣವನ್ನು ಎಸೆಯುವನು. ಅವರು ಸಮೀಪಕ್ಕೆ ಬಂದರೆ ಬಿಲ್ಲಿನಿಂದ ಅವರನ್ನು ಹೊಡೆಯುವನು. ಅದಕ್ಕೂ ಮೀರಿದರೆ, ಕಠಾರಿಯಿಂದ ತಿವಿಯುವನು. ಇದಕ್ಕೂ ಮೀರಿದಲ್ಲಿ ತೆಕ್ಕೆಯಲ್ಲಿ ಹಿಡಿದು ಅವರ ಕೂಡ ಹೋರಾಡುವನು. ನೆಲಕ್ಕೆ ಬಿದ್ದಲ್ಲಿ ಹಲ್ಲಿನಿಂದ ಕಡಿಯುವನು. ಈ ಪ್ರಕಾರ ಅವನು ಧೈರ್ಯಬಿಡದೆ, ತಾನು ಸಾಯುವ ವರೆಗೂ ಕಾದಾಡುವನು. ಭಕ್ತನಾದವನು ಹೀಗೆಯೇ ವರ್ತಿಸಬೇಕು. ಇದಕ್ಕೆ ಮತ್ತೊಂದು ಉದಾಹರಣೆಯನ್ನು ಕೊಟ್ಟು ವಿವರಿಸಿರುವನು. ಭಕ್ತನು ತನಗೆ ಶ್ರೀಮಂತಿಕೆಯು ಇರುವ ವರೆಗೆ ದಾನ ಧರ್ಮಮಾಡಬೇಕು. ಶ್ರೀಮಂತಿಕೆಯು ತಪ್ಪಿ ಹೋದರೆ, ನೀಡಿ ಮಾಡುವ ಭಕ್ತರ ಮನೆಯನ್ನು ತೋರಿಸಬೇಕು. ಇದೂ ಆಗದಿದ್ದರೆ ಶಿವಶರಣರ ಕಮಂಡಲವನ್ನು ತೆಗೆದುಕೊಂಡು ಹೋಗಿ ಅವರ ಪಾದಾರ್ಚನೆಗೆ ನೀರು ತಂದು ಕೊಡಬೇಕು. ಇದೂ ಆಗದಿದ್ದರೆ ಅವರಿಗೆ ಎದ್ದು ನಮಸ್ಕರಿಸಬೇಕು. ಇಂಥ ಗುಣವು ಭಕ್ತನಲ್ಲಿ ಇರಬೇಕು. ಈ ಗುಣವಿಲ್ಲದಿದ್ದರೆ ಅವನು ಹೊಲೆಯನೆಂದು ವಚನಕಾರನು ಅಂದಿರುವನು.

ನೇಮ ಶೀಲ ಹರಿಕೆಗಳನ್ನು ಹೊರಬೇಡ.

ವಚನಃ— ಅಳ. ನೇಮಸ್ತನೆಂಬುವ ಕ್ರೂರ ಕರ್ಮಿ. ಶೀಲವಂತನೆಂಬುವ ಸಂದೇಹಿ. ಭಾಷೆವಂತನೆಂಬುವ ಬ್ರಹ್ಮೇತಿಕಾರ. ಇವರು ಮೂವರು ಕುಳ್ಳಿರ್ದಲ್ಲಿ ಕುಳ್ಳಿರಲಾಗದು. ಇವರು ಹೋದ ಒಟ್ಟೆಯ ಹೋಗಲಾಗದು. ಇವರು ಮೂವರಿಗು ಗುರುವಿಲ್ಲ, ಲಿಂಗವಿಲ್ಲೆಂದಾತ ನಂಬಿಗ ಚೌಡಯ್ಯ.

ಭಾವಃ— ಅನೇಕರು ಅನೇಕ ಬಗೆಯ ನೇಮಗಳನ್ನೂ ಶೀಲಗಳನ್ನೂ ಹರಿಕೆಗಳನ್ನೂ ಹೊತ್ತುಕೊಂಡು ಕಷ್ಟಪಡುವರು. ಆದರೆ ಇವೆಲ್ಲವೂ ಷಟ್‌ಸ್ಥಲ ಮಾರ್ಗಕ್ಕೆ ಹೊರತು. ಇವುಗಳನ್ನು ಮಾಡಬಾರದೆಂದು ವಚನಕಾರನು ಅಂದಿರುವನು. ಈ ವಚನದಲ್ಲಿ ಅಂಬಿಗರ ಚೌಡಯ್ಯನು ಅನ್ನುವದೇನೆಂದರೆ ಹೀಗೆ ನೇಮ ಮಾಡುವವರು ಕ್ರೂರಕರ್ಮಿಗಳು, ಶೀಲ ಮಾಡುವವರು ಸಂದೇಹಿಗಳು, ಹರಿಕೆ ಹೊರುವವರು ಬ್ರಹ್ಮಹತ್ಯ ಮಾಡುವವರು, ಎಂದು ಅಂದು ಇವರು ಮೂವರು ಕುಳಿತಲ್ಲಿ ಕುಳ್ಳಿರಬಾರದು. ಹೋದಲ್ಲಿ ಹೋಗಬಾರದು. ಇವರಿಗೆ ಗುರುವಿಲ್ಲ ಲಿಂಗವಿಲ್ಲ ಎಂದು ಹೇಳಿರುವನು.

ಮನಸ್ಸಾಕ್ಷಿಯಾಗಿ ಕೆಲಸ ಮಾಡು.

ವಚನ ಆಃ. ಮಾಡುವ ಭಕ್ತಂಗೆ ಮನವೆ ಸಾಕ್ಷಿ. ಹೊರಹೊವ್ಮಿ ಬಯಲ ಹೊರಲೇನು? ಹವ್ಮಿಲ್ಲದೆ ಮಾಡಿ ಮನದಲ್ಲಿ ಮರುಗದಿರ್ದಡೆ ಕಲ್ಲಿ ತಾ ಹೆರೆಹಿಂಗದಿರ್ಪ ಅಂಬಿಗರ ಚೌಡಯ್ಯ.

ಭಾವಃ— ಜನರಿಗೆ ಕಾಣಬೇಕೆಂದು ಭಕ್ತಿಯನ್ನು ಮಾಡಬಾರದು. ಗುಪ್ತ ಭಕ್ತಿಯನ್ನು ಮಾಡಬೇಕು. ಮಾಡುವ ಭಕ್ತಿಗೆ ತನ್ನ ಮನವೇ ಸಾಕ್ಷಿಯಾಗಿರಬೇಕು. ತನ್ನನ್ನು ತಾನು ಹೊಗಳಿಕೊಳ್ಳಬಾರದು. ಅದರಿಂದ ಯಾವ ಪ್ರಯೋಜನವಿಲ್ಲ. ಅದು ಬಯಲು. ಮತ್ತು ಮನಸ್ಸಿನಲ್ಲಿ ಅಹಂಕಾರವಿಲ್ಲದೆ ಮಾಡಬೇಕು. ಮತ್ತು ಮಾಡಿ ಆನಂದಪಡಬೇಕು. ಹೀಗೆ ವರ್ತಿಸುವವನಲ್ಲಿ ಪರಮಾತ್ಮನು ವಾಸಿಸುವನು.

ತ್ರಿವಿಧಾಂಗ ರೀತಿಯಾಗಿ ಕಾರ್ಯ ಮಾಡು.

ವಚನಃ— ಆಃ. ಆವಾವ ತ್ರಿಗುಣ ಭೇದದಲ್ಲಿ ವಿಶ್ವಾಸವ ಮಾಡಿದಡೂ ಭಾವ ಶುದ್ಧವಾಗಿರಬೇಕು. ಯೋಗಿಯಾದಲ್ಲಿ ದೇಹಧರ್ಮವ ಮರೆದು ಭೋಗಿಯಾದಲ್ಲಿ ಸಂಚಿತವ ಮರೆದು ತ್ಯಾಗಿಯಾದಲ್ಲಿ ನೆನಹು ಹಿಂಚುಗೊಡುವುದು ಮುಂಚಾಗಿರಬೇಕು. ಇಂತೀ ಯೋಗಿ ಭೋಗಿ ತ್ಯಾಗಿ ಇಂತೀ ತ್ರಿವಿಧವನೊಳಕೊಂಡು ವಿರಕ್ತನಾದಲ್ಲಿ ಆತನಡಿಗೆರಗುವೆನೆಂದ ಅಂಬಿಗರ ಚೌಡಯ್ಯ.

ಭಾವಃ— ಷಟ್‌ಸ್ಥಲವಿದರು ತ್ಯಾಗಾಂಗ ಭೋಗಾಂಗ ಯೋಗಾಂಗವೆಂದು ಮನುಷ್ಯನ ಕ್ರಿಯೆಗಳಲ್ಲಿ ಭೇದ ಮಾಡಿರುವರು. ಇವುಗಳಿಗನುಸರಿಸಿ ಯಾವನು ನಡೆಯುವನೋ ಅವನೇ ನಿಜವಾದ ವಿರಕ್ತನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ. ಮನುಷ್ಯನ ಆರಂಭ ದಿಶೆಯಲ್ಲಿ ಅನೇಕ ವಿಕಾರಗಳು ಅವನಲ್ಲಿ ಎಡೆಗೊಂಡು ಅವನ ಮನಸ್ಸನ್ನು ಚಂಚಲ ಮಾಡುತ್ತವೆ. ಈ ಚಂಚಲತೆಯನ್ನು ಹೋಗಲಾಡಿಸುವದೇ ಮನುಷ್ಯನು ಮೊದಲು ಮಾಡತಕ್ಕ ಕರ್ತವ್ಯವು. ಇದು ಭಕ್ತಿಯನ್ನು ತಾಳಿ ಪರಮಾತ್ಮನ ಧ್ಯಾನದಲ್ಲಿ ಇದ್ದರೆ ಶಕ್ಯವು. ಇದರಿಂದ ಮನುಷ್ಯನ ಚಂಚಲತೆಯು ಹೋಗುವದು. ಭಕ್ತ ಮಹೇಶ್ವರ ಸ್ಥಲಗಳಲ್ಲಿ ಈ ವಿವರಣೆಯು ಹೇಳಲ್ಪಡುವದುಂಟು. ಇದು ತ್ಯಾಗಾಂಗವು. ಈ ಪ್ರಕಾರ ಮನುಷ್ಯನು ವರ್ತಿಸಿ ಮುಂದೆ ತನ್ನ ಕಾರ್ಯಗಳನ್ನು ಸರಿಯಾಗಿ ಮಾಡುತ್ತ ಅವುಗಳ ಪರಿಣಾಮವನ್ನು ಶಿವಾರ್ಪಣೆಯಿಂದ ಸೇವಿಸುತ್ತ ಹೋಗಬೇಕು. ಹೀಗೆ ಭೋಗಿಸುವಲ್ಲಿ ತಾನು ಮಾಡಿದ ಅಥವಾ ಮಾಡುವ ಕರ್ಮಗಳ ಕ್ಷಯವನ್ನು ಮಾಡುತ್ತ ತನ್ನ ಕಾರ್ಯಗಳನ್ನು ಮಾಡಬೇಕು. ಹೀಗೆ ಪ್ರಾಣಲಿಂಗಿ ಸ್ಥಳಗಳಲ್ಲಿ ಹೇಳಲ್ಪಡುವದು. ಇದು ಭೋಗಾಂಗವು. ಹೀಗೆ ಭಕ್ತನು ನಡೆದರೆ ಅವನು ಯಾವ ಕರ್ಮಗಳನ್ನು ಮಾಡಿದರೂ ಕೂಡ ಅವುಗಳ ಪರಿಣಾಮವು ಅವನ ಮೇಲೆ ಏನೂ ಆಗುವದಿಲ್ಲ. ಇದರಿಂದ ಮಾಡಿದ ಕರ್ಮಗಳು ಅಡಗಿ ಹೋಗಿ ಪುನರ್ಜನ್ಮವಾಗುವದು ನಿಲ್ಲುತ್ತದೆ. ಈ ಸ್ಥಿತಿಯುಂಟಾದ ಬಳಿಕ ಅವನು ಯೋಗಾಂಗ ಸ್ಥಿತಿಯನ್ನು ಹೊಂದುವನು. ಅಂದರೆ ಅವನಲ್ಲಿ ಲಿಂಗದ ಕಳೆಯು ಪ್ರಜ್ವಲಿತವಾಗಿ ಜಗತ್ತಿನಲ್ಲಿ ವ್ಯವಹರಿಸುವನು. ಆಗ

ಇದೂ ತಪ್ಪು. ಒಂದು ವೇಳೆ ಅವುಗಳಲ್ಲಿ ಇದ್ದಿದ್ದಾದರೆ, ಅವುಗಳಲ್ಲಿ ವಿರೋಧ ಅಭಿಪ್ರಾಯಗಳು ಎಂದೂ ಇರುತ್ತಿದ್ದಿಲ್ಲ. ಅವು ಒಂದೇ ಮಾತನ್ನು ಹೇಳುತ್ತಿದ್ದವು. ಬೇರೆ ಕೆಲವರು ಪರಮಾತ್ಮನು ಶ್ರೀ ಪರ್ವತದಲ್ಲಿ ಇದ್ದಾನೆಂದು ಅನ್ನುತ್ತಾರೆ. ಇದೂ ತಪ್ಪು. ಯಾಕಂದರೆ ಪರ್ವತಕ್ಕೆ ಹೋದವರು ಮೋಕ್ಷವನ್ನು ಹೊಂದಿ ಅಲ್ಲಿಯೇ ಉಳಿಯತಕ್ಕದ್ದು. ಅವರು ತಿರುಗಿ ತಮ್ಮ ಮನೆಗೆ ಬರತಕ್ಕದ್ದಲ್ಲ. ಆದ್ದರಿಂದ ಇವಾವುಗಳಲ್ಲಿ ಪರಮಾತ್ಮನು ಇರುವದಿಲ್ಲ. ಆದರೆ ಅವನು ಶುದ್ಧಮನಸ್ಸಿನವರಲ್ಲಿ ಇರುತ್ತಾನೆ. ಪರಮಾತ್ಮನನ್ನು ಕಾಣಲು ಇದೇ ಹಾದಿಯು ಎಂದು ವಚನಕಾರನ ಭಾವವು.

ನೈತಿಕ ವಚನಗಳು.

ವಚನಃ— ೯೯. ಐಶ್ವರ್ಯ ದುಃಖದಲ್ಲಿ ಬೇಯುವ ಹೊಲೆ ಸಂಸಾರವನೆ ಕಷ್ಟಿ, ಕೊಲೆಗೀಡಾಗದೆ ಸಲೆ ಸತ್ಯ ಸದಾಚಾರದಲ್ಲಿ ನಡೆ. ಸಟೆಯುನೆ ಬಿಡು. ದಿಟವನೆ ಹಿಡಿ. ಈ ಘಟವುಳ್ಳನಕ ಕಾಲದಲ್ಲಿ ಶಿವಭಕ್ತಿಯ ನಟಿಸಿ ನಡೆ ಎಂದಾತ ನಮ್ಮ ಅಂಬಿಗರ ಚೌಡಯ್ಯನು.

ಭಾವಃ— ಮನುಷ್ಯನು ಐಶ್ವರ್ಯವಂದರೆ ಸುಖವೆಂದು ಭಾವಿಸುವನು. ಆದರೆ ಅದು ದುಃಖವೆಂದು ಅಂಬಿಗರ ಚೌಡಯ್ಯನು ಅಂದಿರುವನು. ಯಾಕಂದರೆ ಅದು ಸಂಸಾರಕ್ಕೆ ಒಳಗುಮಾಡಿ, ಕೊಲೆಮಾಡಿಸುವದು, ಸುಳ್ಳುಹೇಳಿಸುವದು, ದುರಾಚಾರಕ್ಕೆ ಹಚ್ಚುವದು. ಇಂಥ ಸಂಸಾರವನ್ನು ಬಿಟ್ಟುಕೊಟ್ಟು, ಶಿವಭಕ್ತಿಯಿಂದ ನಡೆ ಎಂದು ವಚನಕಾರನು ಉಪದೇಶಿಸಿರುವನು.

ವಚನಃ— ೯೦. ಹೊಡೆನಟ್ಟು ದೇವರ ತಲೆಯ ತಾಟಿಸಿಕೊಂಬರು. ನೆಲಕೆಯೂ ತಲೆಗೆಯೂ ನಂಟುತನವೇ? ಕೊಲಬೇಡ ಪ್ರಾಣಿಗಳ. ಗೆಲಬೇಡ ನಂಬಿದರ. ಛಲವ ಸಾಧಿಸಬೇಡ ಗೋತ್ರದಲ್ಲಿ. ಕೊಲುವವ, ಗೆಲುವವ, ಛಲವ ಸಾಧಿಸುವವ ಹೊಲೆಯರ ಮಾದಿಗನೆಂದ ನಂಬಿಗಚೌಡಯ್ಯ.

ಅವನು ತನ್ನ ದೇಹ ಧರ್ಮವನ್ನು ಮರೆಯಹತ್ತುವನು. ಹೀಗೆ ಈ ಮೂರೂ ಸ್ಥಿತಿಯಲ್ಲಿ ಭಾವ ಶುದ್ಧವಾಗಿ ಆಚರಿಸಬೇಕು. ಹೀಗೆ ಆಚರಿಸುವವನೇ ನಿಜವಾದ ವಿರಕ್ತನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

ಶುದ್ಧಮನಸ್ಸಿನವರಲ್ಲಿ ಪರಮಾತ್ಮನಿರುವನು.

ವಚನಃ— ೮೭. ತನ್ನ ತನ್ನಿಚ್ಛೆಗೆ ಬಾಹಲ್ಲಿ ಪಿನಾಕಿ ಬೊಸರಗಿತ್ತಿಯ ಹಾಸೆ. ಮನವ ಕಟ್ಟಿ ಐದು ಭೂತವ ಸುಟ್ಟಡೆ ಎನ್ನ ದೇವನುಂಟಲ್ಲೆನಬೇಡ. ಮನಗಾಯಲಾರದೆ ತನು ಗಾಯಹೊಂದದೆ, ಎನ್ನ ದೇವ ಸೆರೆಯಲ್ಲೆಂದಾತ ನಂಬಿಗ ಚೌಡಯ್ಯ.

ಭಾವಃ— ವಚನವು ಅಶುದ್ಧವಿದೆ. ಇದರ ಅರ್ಥವು ಕೆಳಗೆ ಕಾಣಿಸಿದಂತೆ ಇರಬಹುದು. ಮನಸ್ಸನ್ನು ಗಟ್ಟಿಪಡಿಸಿದರೆ, ಪಂಚಭೂತದಿಂದಾವ ದೇಹದ ಧರ್ಮಗಳು ನಾಶಹೊಂದುವವು. ಹೀಗೆ ನಾಶಹೊಂದಿದ ಸ್ಥಿತಿಯು ಉಂಟಾದ ಕೂಡಲೆ, ದೇವನು ಇದ್ದಾನೋ ಇಲ್ಲವೋ ಎಂಬ ಸಂಶಯವು ಅವನಲ್ಲಿ ಹೊರಟುಹೋಗುವದು. ಆಗ ಅವನಿಗೆ ಪರಮಾತ್ಮನನ್ನು ಕೈಸೆರೆ ಸಿಕ್ಕ ಹಾಗೆಯೇ ಆಗುವದು. ಮನಸ್ಸನ್ನು ಶುದ್ಧಪಡಿಸಿದರೆ ಪಿನಾಕಿಯನ್ನು ತನ್ನಲ್ಲಿಯೇ ಕಾಣಬಹುದೆಂಬ ಭಾವವು.

ವಚನಃ— ೮೮. ವೇದದಲುಳ್ಳೊಡೆ ಪ್ರಾಣವಧೆಯಪ್ಪುದೆ? ಶಾಸ್ತ್ರದಲುಳ್ಳೊಡೆ ಸಮವಾಗದಿಪ್ಪುದೆ? ಪರ್ವತದಲ್ಲಿ ಉಳ್ಳೊಡೆ ಹೋದವರು ಮರಳಿ ಬಪ್ಪರೇ? ನಿರ್ಬುದ್ಧಿ ಮಾನವರನೇನೆಂಬೆನು? ಮನವಚನಕಾಯ ಶುದ್ಧರಾಗಿರ್ಪಾತನ ಹೃದಯದಲ್ಲಿ ನಿಮ್ಮ ಕಂಡೆನೆಂದ ಅಂಬಿಗರ ಚೌಡಯ್ಯ.

ಭಾವಃ— ಪರಮಾತ್ಮನು ಮತ್ತೆಲ್ಲೆಲ್ಲಿಯೂ ಇಲ್ಲ. ಯಾವನ ಮನಸ್ಸು ವಚನ ಮತ್ತು ಕಾಯ ಇವುಗಳು ಶುದ್ಧವಾಗಿರುತ್ತವೋ ಅವನ ಹೃದಯದಲ್ಲಿಯೇ ಅವನು ಯಾವಾಗಲೂ ವಾಸಿಸುತ್ತಾನೆ. ಅನೇಕರು ಪರಮಾತ್ಮನು ವೇದದಲ್ಲಿ ಇರುತ್ತಾನೆಂದು ಹೇಳುತ್ತಾರೆ. ಇದು ತಪ್ಪು. ಒಂದು ವೇಳೆ ಹೀಗೆ ಇದ್ದರೆ, ಆ ವೇದವು ಪ್ರಾಣವಧೆಯನ್ನು ಹೇಳುತ್ತಿದ್ದಿಲ್ಲ. ಬೇರೆ ಅನೇಕರು ಪರಮಾತ್ಮನು ಶಾಸ್ತ್ರಗಳಲ್ಲಿ ಇದ್ದಾನೆಂದು ಹೇಳುತ್ತಾರೆ.

ಭಾವಃ— ಅನೇಕರು ಶಿವಭಕ್ತಿಯನ್ನು ಮಾಡಬೇಕೆಂದು ದೇವರ ಮುಂದೆ ಸಾಷ್ಟಾಂಗಹಾಕಿ ತಲೆಯನ್ನು ನೆಲಕ್ಕೆ ಹಚ್ಚುವರು. ಹೀಗೆ ಮಾಡಬೇಕಾದರೆ ನೆಲಕ್ಕೂ ತಲೆಗೂ ಏನಾದರೂ ನೆಂಟುತನವಿರುತ್ತ ದೆಂದು ತಿಳಿದು ಹೀಗೆ ಮಾಡುವರೋ ಹ್ಯಾಗೆ ಎಂದು ಅಂಬಿಗರ ಚೌಡ ಯ್ಯನು ಕೇಳಿರುವನು. ಆದರೆ ಹೀಗೆ ಬಹಿರಂಗ ಕ್ರಿಯೆಗಳನ್ನು ಮಾಡು ವದಕ್ಕಿಂತ ಪ್ರಾಣಿಗಳಲ್ಲಿ ದಯವಿರಬೇಕು ನಂಬಿದವರ ವಿಶ್ವಾಸದ ದುರು ಪಯೋಗ ಮಾಡಬಾರದು, ಬಂಧು ಬಳಗದವರೊಡನೆ ಛಲವನ್ನು ಸಾಧಿ ಸಬಾರದು. ಹೀಗೆ ಯಾವನು ನಡೆಯುವದಿಲ್ಲವೋ ಅವನು ಮಾದಿಗ ನೆಂದು ವಚನಕಾರನು ಅಂದಿರುವನು.

ವಚನ:— ೯೧. ಎತ್ತ ಸುತ್ತಿ ಬಂದಡೂ ಊರಿಗೆ ಬಪ್ಪದು ತಪ್ಪದು. ಹಲವು ಮಾತನಾಡಿದಡೇನು? ಮೂರು ಮಲವ ಮರೆದಿರಬೇಕು. ಹೊಲಬು ದಪ್ಪಿದ ವ್ಯಾಘ್ರ ಬಲೆಯೊಳಗೆ ಬಿದ್ದಂತಾಗಬೇಡ ಇದ್ದನರಿತು ಬದುಕೆಂದ ಅಂಬಿಗಚೌಡಯ್ಯ.

ಭಾವಃ— ಊರಿಗೆ ಬರಲಿಕ್ಕೆ ಅನೇಕ ಹಾದಿಗಳು ಉಂಟು. ಆದರೆ ಊರಿಗೆ ಮುಟ್ಟಬೇಕೆಂಬ ಧ್ಯೇಯವು ಇರುವದರಿಂದ ಯಾವ ಹಾದಿ ಯಿಂದ ಬಂದರೂ ಮನುಷ್ಯನು ಅಲ್ಲಿಗೆ ಬಂದು ಮುಟ್ಟುವನು. ಹಾಗೆಯೇ ನಾನಾ ವಿಧ ವಿಚಾರಗಳು ಮನಸ್ಸಿನಲ್ಲಿ ಬರಬಹುದು. ಆದರೆ ದೇಹ ಸಂಬಂಧದ ಮಾಯಾ ಸಂಬಂಧದ ಮತ್ತು ಕರ್ಮ ಸಂಬಂಧದ ಮೂರೂ ಮಲಗಳನ್ನು ಬಿಟ್ಟುಕೊಟ್ಟು ಯಾವನು ವ್ಯವಹರಿಸುತ್ತಾನೋ ಅವನು ಪರಮಾತ್ಮನನ್ನು ನಿಶ್ಚಯವಾಗಿ ಮುಟ್ಟುವನು. ಏನು ಮಾಡಬೇಕೆಂಬದನ್ನು ತಿಳಿಯದೆ ಬಿಗರಿಯು ಹ್ಯಾಗೆ ಬಲೆಯೊಳಗೆ ಬಿದ್ದು ಒದ್ದಾಡಿ ಸಾಯುವದೋ ಹಾಗೆ ಮಾತ್ರ ವರ್ತಿಸಬಾರದು. ಪರಮಾತ್ಮನೊಬ್ಬನ ಕಡೆಗೆ ಧ್ಯೇಯವಿಟ್ಟು ವರ್ತಿಸಿದರೆ ಬದುಕುವಿ ಎಂದು ವಚನಕಾರನು ಹೇಳಿರುವನು.

ವಚನಃ— ೯೨. ತಿಂಬ ಜಾತಿಗೆ ಮೇವ ಹಾಕಿ ಕರುಳು ಕಂಡವ ಕೊಯ್ವ ತಿಂಬುವಂತೆ ದಾತಂಗೆ ಚಂದದ ಮಾತನಾಡಿ ಮೂರು ಮಲ ಸಂಧಿಸಿಕೊಂಬುವಂಗೆ ಲಿಂಗವಿಲ್ಲೆಂದನಂಬಿಗ ಚೌಡಯ್ಯ.

ಭಾವಃ— ಮಾಂಸಭಕ್ಷಕನು ತಿನ್ನುವವರ ಹೊರ್ತು ಏನೂ ಗೊತ್ತಿಲ್ಲದ ದನಗಳಿಗೆ ಹ್ಯಾಗೆ ಮೇವನ್ನು ಹಾಕಿ ಅವುಗಳನ್ನು ಪುಷ್ಟ ಮಾಡಿ ಕಡೆಗೆ ಅವನ್ನು ಕೊಂದು ತಿಂದು ಬಿಸುತ್ತಾನೋ, ಹಾಗೆ ದಾನ ಮಾಡುವಂಥ ಜನರಿಗೆ ಚಂದದ ಮಾತುಗಳನ್ನು ಹೇಳಿ ಅವರನ್ನು ಮೋಸ ಗೊಳಿಸಿ ಅವರ ಧನದ ಅಪವ್ಯಯ ಮಾಡಿ ಮಲದಲ್ಲಿ ಬಿದ್ದು ಯಾವನು ಗಾಸಿ ಯಾಗುತ್ತಾನೋ ಅವನಿಗೆ ಲಿಂಗವಿಲ್ಲೆಂದು ಇಲ್ಲಿ ವಚನಕಾರನು ಹೇಳಿರುವನು.

ವಚನಃ— ೯೩. ಮೂರುವ ಮುಟ್ಟದೆ, ನಾಲ್ಕುವನಂಟದೆ, ಐದುವ ನೆಚ್ಚಲು ಬೇಡ ಕಂಡಾ. ಆರುವ ಜಾರದೆ, ಏಳುವ ಹಿಡಿಯದೆ, ಎಂಟುವ ಗಂಟಿಕ್ಕಬೇಡ ಕಂಡಾ. ಒಂಬತ್ತು ಬಾಗಿಲು ಹಿಂದಿಕ್ಕಿ ಹೋದರೆ ಅಂಬಿಗ ಚೌಡಯ್ಯನ ಉಪದೇಶವಯ್ಯ.

ಭಾವಃ— ಮನುಷ್ಯನಲ್ಲಿ ಕಿವಿ, ಕಣ್ಣು, ಮೂಗು ಇತ್ಯಾದಿ ನವ ರಂಧ್ರಗಳಿವೆ. ಇವುಗಳ ಮೂಲಕ ಅವನಲ್ಲಿ ಅನೇಕ ಬಗೆಯ ವಿಕಾರ ಗಳು ಉತ್ಪನ್ನವಾಗುತ್ತವೆ. ಇವುಗಳೇ ಮನುಷ್ಯನನ್ನು ದುಃಖಕ್ಕೆ ಒಳ ಗುಮಾಡುತ್ತವೆ. ಮತ್ತು ನರಕದಲ್ಲಿ ಹಾಕುತ್ತವೆ. ಈ ಸ್ಥಿತಿಯು ಉಂಟಾಗದಿರಲು ಮನುಷ್ಯನು ಮೂರು ಮಲಗಳನ್ನು ಬಿಟ್ಟುಕೊಡ ಬೇಕು. ಅಂಗಜತುಷ್ಟಯಗಳಿಗೆ ಅಂಟಿಕೊಳ್ಳಬಾರದು. ಪೃಥಿವ್ಯಾದಿ ಪಂಚಭೂತಗಳನ್ನು ನಂಬಬಾರದು. ಜಾತಿ, ವರ್ಣ, ಆಶ್ರಮ, ಕುಲ, ಗೋತ್ರ, ನಾಮ ಇವುಗಳಿಗೆ ಸಂಬಂಧಿಸಿದ ಷಡ್ಭ್ರಮೆಗಳನ್ನು ದೂರಮಾಡ ಬೇಕು. ತನುವ್ಯಸನ, ಪಾನೋವ್ಯಸನ, ಧನವ್ಯಸನ, ರಾಜ್ಯವ್ಯಸನ, ಉತ್ಸಾಹವ್ಯಸನ, ಸೇವಕವ್ಯಸನ, ವಿಶ್ವವ್ಯಸನವೆಂಬ ಸಪ್ತ ವ್ಯಸನಗ ಳನ್ನು ಬಿಡಬೇಕು. ಕುಲವಾದ, ಛಲವಾದ, ಧನವಾದ, ರೂಪವಾದ, ಯೌವ್ವನವಾದ, ವಿದ್ಯಾವಾದ, ರಾಜ್ಯವಾದ, ತಪೋವಾದ ಎಂಬ ಅಷ್ಟ ವಾದಗಳನ್ನು ಕಟ್ಟಕೊಳ್ಳಬಾರದು. ಹೀಗೆ ವರ್ತಿಸಿದಲ್ಲಿ ಮೇಲೆ ಹೇಳಿದ ಒಂಬತ್ತು ಬಾಗಿಲುಗಳನ್ನು ದಾಟಿ ಪರಮಾತ್ಮನ ಸಮೀಪಕ್ಕೆ ಹೋಗುವನು.

ವಚನ ೯೪- ಲಿಂಗತನುವಿಂಗೆ ಶೃಂಗಾರವಪ್ಪತೆರ ನಾವು ದೆಂದೊಡೆ ಕಾಮ, ಕ್ರೋಧ, ಲೋಭ, ಮೋಹಾದಿಗಳಲ್ಲಿ ತೆರಪುಗೊಡದಿಪ್ಪುದು. ಲಿಂ ಗವೇ ಅಂಗವಾಗಿ ಧ್ಯಾನ ಧಾರಣ ನಿಜ ಸಮಾಧಿ ನಿವಾಸವಾಗಿ ನಿಶ್ಚಯ ನಿಜ ತತ್ವವಾಗಿ ನಿಂದುದೆ ಆಭರಣವೆಂದನಂಬಿಗ ಚೌಡಯ್ಯ.

ಭಾವಃ— ಎಲ್ಲರೂ ತಾವು ಜನರಲ್ಲಿ ಸೌಂದರ್ಯವುಳ್ಳವರಾಗಿ ಕಾಣಬೇಕೆಂದು ಅಪೇಕ್ಷಿಸುತ್ತಾರೆ. ಅದ್ದರಿಂದ ಅವರು ಆಭರಣಾದಿಗಳನ್ನು ಅನೇಕ ಬಗೆಯ ವಸ್ತ್ರಗಳನ್ನು ತೊಟ್ಟುಕೊಂಡು ಜನರ ದೃಷ್ಟಿಯಲ್ಲಿ ಹೊಳಪುಳ್ಳವರಾಗಿ ಕಾಣಲು ಬಗೆಯುತ್ತಾರೆ. ಆದರೆ ಲಿಂಗಾಂಗಿಗಳಿಗೆ ಪಂಚಭೂತದಿಂದಾದ ತನುವಿಲ್ಲ. ಅವರಿಗೆ ಲಿಂಗವೇ ತನುವಾಗಿರುತ್ತದೆ. ಅದ್ದರಿಂದ ಇಂಥವರ ಶರೀರಗಳು ಸೌಂದರ್ಯಯುಕ್ತವಾಗಿ ತೋರಬೇಕಾದರೆ ಕಾಮ ಕ್ರೋಧಾದಿಗಳಿಗೆ ಅವರು ಸ್ಥಾನ ಕೊಡಬಾರದು. ಹೀಗೆ ವರ್ತಿಸುವವೇ ನಿಜವಾದ ಆಭರಣಗಳನ್ನು ತೊಟ್ಟಂತೆ ಎಂದು ವಚನಕಾರನ ಭಾವವು. ಹೀಗೆ ಲಿಂಗವೇ ಅಂಗವಾಗಿದ್ದು, ಲಿಂಗಧ್ಯಾನ ಲಿಂಗಧಾರಣ ಲಿಂಗ ಸಮಾಧಿ ಇವುಗಳಲ್ಲಿಯೇ ವಾಸಸ್ಥಳವುಳ್ಳವರಾಗಿ ವ್ಯವಹರಿಸುತ್ತಿದ್ದರೆ ಪರಮಾತ್ಮನ ನಿಜತತ್ವ ಮಾತ್ರ ಇವರಲ್ಲಿ ಉಳಿಯುವದು. ಹೀಗೆ ವರ್ತಿಸುವವರು ಎಲ್ಲರಿಗೂ ದರ್ಶನಿಯರಾಗುವರು.

ವಚನಃ— ೯೫. ಶಿವಭಕ್ತನಾದ ಬಳಿಕ ಅನ್ಯ ಭಜನೆಯ ಮಾಡದಿರಬೇಕು. ಶಿವಭಕ್ತನಾದ ಬಳಿಕ ಪರಸತಿ, ಪರನಿಂದೆ, ಪರಧನವ ಹಿಡಿಯದಿರಬೇಕು. ಶಿವಭಕ್ತನಾದ ಬಳಿಕ ಲಿಂಗಕ್ಕೆ ತೋರದೆ ಪ್ರಸಾದವ ಮುಟ್ಟದಿರಬೇಕು. ಅಂಗಲಿಂಗವು ಸಮರಸವಾಗಿರಬೇಕು. ದಾರಿದ್ರ್ಯವು ಬಂದರೆ ಅಂಗವೆ ನಿನ್ನದೆಂದರಿಯಬೇಕು. ಸಂಪತ್ತು ಬಂದರೆ ನಿನ್ನದೆಂದು ಭಾವಿಸಬೇಕು. ಲಿಂಗಬಾಹ್ಯರಿಗೆ ನರಕ ತಪ್ಪದು. ಇಷ್ಟಲಿಂಗೇ ವಿಶ್ವಾಸಂ ಅನ್ಯಲಿಂಗ ಶ್ವಾನಯೋನಿ ಶತಂ ಗತ್ವಾ ಚಾಂಡಾಲಗೃಹಮಾಜರೇತ್. ಇದು ಕಾರಣ ಪ್ರಾಣಲಿಂಗದ ಭಕ್ತಿಯ ಮರೆದು ಯಮಪಟ್ಟಣಕ್ಕೆ ಹೋಹರೆಂದಾತ ನಮ್ಮ .ಅಂಬಿಗರಚೌಡಯ್ಯ ನಿಜಶರಣನು.

ಭಾವಃ— ಲಿಂಗವೇ ಅಂಗವಾಗಿರುವವನು ಹ್ಯಾಗೆ ವರ್ತಿಸಬೇಕೆಂಬುದನ್ನು ಇಲ್ಲಿ ವಚನಕಾರನು ವಿವರಿಸಿದ್ದಾನೆ. ಲಿಂಗದಲ್ಲಿ ವಿಶ್ವಾಸವುಳ್ಳವರು ಇತರ ದೇವತೆಗಳನ್ನು ನಂಬಬಾರದು. ಲಿಂಗಾರ್ಪಣಭಾವದಿಂದಲೇ ವರ್ತಿಸಬೇಕು. ಹೀಗೆ ವರ್ತಿಸುವದೇ ಅಂಗಲಿಂಗ ಸಮರಸವೆನಿಸುವದು. ಸಂಪತ್ತು ಅಥವಾ ದಾರಿದ್ರ್ಯ ಯಾವವು ಬಂದರೂ ಎಲ್ಲವೂ ಪರಮಾತ್ಮನವೆಂದು ಭಾವಿಸಿ ವರ್ತಿಸಬೇಕು. ಇದೇ ಪ್ರಾಣಲಿಂಗದ ಭಕ್ತಿಯು. ಈ ತೆರದ ಭಕ್ತಿಯನ್ನು ಮಾಡದಿದ್ದರೆ ಯಮಪಟ್ಟಣಕ್ಕೆ ಮಾತ್ರ ಹೋಗುವರು, ಮತ್ತು ಭವಾಂತರಗಳಲ್ಲಿ ಬರುವರು ಎಂದು ವಚನಕಾರನು ಹೇಳಿದ್ದಾನೆ.

ವಚನಃ— ೯೬. ಆಶೆಯುಳ್ಳಾತ ಒಬ್ಬರಧೀನದಲ್ಲಿಪ್ಪನು. ಆಶೆಯ ಮನದ ಕೊನೆಯನರಿದಾತ ಕೈಲಾಸದಾಚೆಯಲ್ಲಿಪ್ಪನೆಂದಾತ ಅಂಬಿಗರ ಚೌಡಯ್ಯ.

ಭಾವಃ— ನಿರಾಶೆಯುಳ್ಳವನೇ ನಿಜವಾದ ಸ್ವತಂತ್ರತೆಯುಳ್ಳವನೆಂದು ವಚನಕಾರನ ಅಭಿಪ್ರಾಯವು. ಮನವು ಯಾವಾಗಲೂ ಆಶಾಯುಕ್ತವಾಗಿರುತ್ತದೆ. ಇಂಥ ಮನದ ನಿಜಸ್ಥಿತಿಯನ್ನು ಯಾವನು ತಿಳಿದಿರುತ್ತಾನೊ ಆತನು ಕೈಲಾಸದಾಚೆಗೆ ಹೋಗುವನು. ಅಂದರೆ ಅವನನ್ನು ಬಂಧಿಸಲಿಕ್ಕೆ ಪರಮಾತ್ಮನಿಗೆ ಸಹ ಆಗದೆಂದು ವಚನಕಾರನ ಭಾವವು.

ವಚನ೯೭. ಮಾತುಗಂಟುಕತನದಿಂದೆಷ್ಟು ಮಾತನಾಡದಡೇನು? ಕಾಮಿನಿಯರ ಕಾಲ ದೆಸೆಯಲ್ಲಿ ಸಿಕ್ಕಿ ಕ್ರೋಧದ ದಳ್ಳುರಿಯಲ್ಲಿ ಬೆಂದು ಆಶೆ ಎಂಬ ಪಾಶ ಕೊರಳಲ್ಲಿ ಸುತ್ತಿ ಅದೇಕೊ ಅದೇತರ ಮಾತೆಂದನಂಬಿಗರ ಚೌಡಯ್ಯ.

ಭಾವಃ— ಬರೇ ವಾಚಾಳನಾಗಿದ್ದರೆ ಏನು ಪ್ರಯೋಜನ? ಅನೇಕ ದುರ್ಗುಣಗಳು ತನ್ನಲ್ಲಿರಲು ಬರೇ ಮಾತನಾಡುವದು ಏಕೆ ಎಂದು ವಚಕಾರನು ನುಡಿದಿರುವನು.

ವಚನಃ— ೯೮. ನಿಲ್ಲಿಸಬಹುದಯ್ಯಾ ಒಂದೇ ಮಂತ್ರದಲ್ಲಿ ಕಾಳೋರಗನ. ನಿಲ್ಲಿಸಬಹುದಯ್ಯ ಒಂದೇ ಮಂತ್ರದಲ್ಲಿ ಹಾರುವ ಪಕ್ಷಿಯನು. ನಿಲ್ಲಿಸಬಹುದಯ್ಯ ಒಂದೇ ಮಂತ್ರದಲ್ಲಿ ಹೆಬ್ಬುಲಿಯ. ನಿಲ್ಲಿಸಬಹುದಯ್ಯಾ ಒಂದೇ ಮಂತ್ರದಿಂದ ಹೊಯ್ವ ಹೆಮ್ಮಾರಿಯ. ನಿಲ್ಲಿಸಬಹುದಯ್ಯಾ ಒಂದೇ ಮಂತ್ರದಲ್ಲಿ ಬರುವ ಉರಿಬಾಣವನು. ಇಂತಿವೆಲ್ಲವನು ಒಂದೇ ಮಂತ್ರದಲ್ಲಿ ನಿಲ್ಲಿಸಬಹುದು. ಲೋಭವೆಂಬ ಗ್ರಹಣವ ಹಿಡಿದವರ ಏತರಿಂದ ನಿಲ್ಲಿಸಲಾಗದು. ಈ ಲೋಭಕ್ಕೆ ದಾರಿದ್ರ್ಯವೇ ಔಷಧವು. ಹೇಳಿದರೆ ಕೇಳರು. ತಾವು ತಿಳಿಯರು. ಶಾಸ್ತ್ರವ ನೋಡರು. ಭಕ್ತಿಯ ಹಿಡಿಯರು. ಇಂತಹ ಗೊಡ್ಡು ಮೂಳ ಹೊಲೆಯರಿಗೆ ಕರ್ಮವೆಂಬ ಶರಧಿಯಲ್ಲಿ ಬಿದ್ದು ಉರುಳಾಡುವುದೆ ಸತ್ಯವೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

ಭಾವಃ— ಲೋಭವು ಹೆಬ್ಬಾವು, ಹುಲಿ, ಹೆಮ್ಮಾರಿ, ಉರಿಯುವ ಬಾಣ ಇವುಗಳಿಗಿಂತಲೂ ಘಾತುಕವಾದದ್ದೆಂದು ವಚನಕಾರನು ಇಲ್ಲಿ

ಅನ್ನುತ್ತಾನೆ. ಲೋಭಕ್ಕೆ ಒಳಗಾದವನು ಬೇಕಾದ ದುಷ್ಟ ಕೃತ್ಯಗಳನ್ನು ಮಾಡಲು ಹೇಸುವದಿಲ್ಲ. ಯಾವ ಮಂತ್ರತಂತ್ರಗಳು ಅವನಮೇಲೆ ನಡಿಯಲಾರವು. ಇವನ ಲೋಭವನ್ನು ಹೋಗಲಾಡಿಸಬೇಕಾದರೆ ದಾಂ ದ್ರವೇ ಮದ್ದು. ಇಂಥವನು ಏನು ಹೇಳಿದರೂ ಕೇಳುವದಿಲ್ಲ. ತನಗೂ ತಿಳಿಯದು. ಶಾಸ್ತ್ರಗಳನ್ನೂ ನಂಬುವದಿಲ್ಲ. ಭಕ್ತಿಯನ್ನು ಎಂದೂ ಹಿಡಿಯುವದಿಲ್ಲ. ಇಂಥವನು ಕರ್ಮವೆಂಬ ಸಂಸಾರದಲ್ಲಿ ಬಿದ್ದು ಕಡೆಗೆ ನಷ್ಟಹೊಂದುವವನೇ ಸತ್ಯವೆಂದು ವಚನಕಾರನು ಹೇಳಿರುವನು.

ವಚನಃ— ೯೯. ಕೂಡಿದ ಧನವನೆಲ್ಲವನು ಗುರುಲಿಂಗಜಂಗಮಕ್ಕೆ ವಂಚನೆಯ ಮಾಡಿ ಒಳಗಿಟ್ಟುಕೊಂಡು, ನೆಲನ ತೋಡಿ ಬಚ್ಚಿಟ್ಟುಕೊಂಡು, ಹಲವು ತೆರದ ಆಭರಣಂಗಳ ಮಾಡಿಸಿ, ಕರ ಚರಣ ಉರ ಕರ್ಣಂಗಳೊಳಗಿಟ್ಟು, ಮತ್ತಿಷ್ಟು ಬದುಕಾಗಲೆಂದು ತನ್ನ ಕೈಯ್ಯೊಳಗಿನ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡುವ ಲಿಂಗಪೂಜಕನ ಪರಿ ಎಂತೆಂದೊಡೆ, ಆ ಭಕ್ತನು ಪಂಚಾಭಿಷೇಕದಿಂದ ಲಿಂಗಕ್ಕೆ ಮಜ್ಜನವ ನೀಡಿದರೆ ಲಿಂಗದ ಚಿತ್ತದಲ್ಲಿ ಸುಣ್ಣ ನೀರನೆತ್ತಿ ಬಾಜಿಸಿದಂತಾಯಿತ್ತಯ್ಯಾ! ಆ ಭಕ್ತನು ಪನ್ನೀರಿನಿಂದ ಮಜ್ಜನವ ನೀಡಿದರೆ ಲಿಂಗದ ಚಿತ್ತದಲ್ಲಿ ತಣ್ಣೀರೊಗದ್ದಿ ಬಾಜಿಸಿದಂತಾಯಿತ್ತಯ್ಯಾ! ಆ ಭಕ್ತನು ವಿಭೂತಿಯ ಧರಿಸಿದರೆ ಲಿಂಗದ ಚಿತ್ತದಲ್ಲಿ ಬೂದಿಯ ಬೊಕ್ಕಣವ ಕಟ್ಟಿ ಬಾಜಿಸಿದಂತಾಯಿತ್ತಯ್ಯಾ! ಆ ಭಕ್ತನು ಗಂಧವ ಧರಿಸಿದರೆ ಲಿಂಗದ ಚಿತ್ತದಲ್ಲಿ ಜಂಡಿಟ್ಟು ಬಾಜಿಸಿದಂತಾಯಿತ್ತಯ್ಯಾ! ಆ ಭಕ್ತನು ಅಕ್ಷತೆಯ ನೇರಿಸಿದರೆ ಲಿಂಗದ ಚಿತ್ತದಲ್ಲಿ ಕಲ್ಲು ಹೊರಿಸಿ ಬಾಧಿಸಿದಂತಾಯಿತ್ತಯ್ಯಾ! ಆ ಭಕ್ತನು ಪುಷ್ಪವ ಧರಿಸಿದರೆ ಲಿಂಗದ ಚಿತ್ತದಲ್ಲಿ ಬೆನ್ನಮೇಲೆ ಹೇರು ಹೊರಿಸಿದಂತಾಯಿತ್ತಯ್ಯಾ! ಆ ಭಕ್ತನು ಧೂಪವ ಬೀಸಿದರೆ ಲಿಂಗದ ಚಿತ್ತದಲ್ಲಿ ಅರವಸಿಕ್ಕಿ ಬಾಧಿಸಿದಂತಾಯಿತ್ತಯ್ಯಾ! ಆ ಭಕ್ತನು ದೀಪಾರತಿಯನೆತ್ತಿದರೆ ಲಿಂಗದ ಚಿತ್ತದಲ್ಲಿ ಪಂಜುಗಳ್ಳರು ಬಂದು ನೋರೆಯ ಸುಟ್ಟು ಬಾಜಿಸಿದಂತಾಯಿತ್ತಯ್ಯಾ!

ಭಾವಃ— ಅನೇಕ ಲೊ
ಮಾಡುವದುಂಟು. ಇದರಲ್ಲಿ
ಬೇಕೆಂದು ಮಾತ್ರ ಇರುತ್ತದೆ.
ರುತ್ತದೆಂಬವನ್ನು ವಚನಕಾರನ
ವರು ಪೂಜಾ ಕಾಲದಲ್ಲಿ ಮ
ಚಾರಗಳಿಲ್ಲವೂ ಪರಮಾತ್ಮನನ
ಇವರ ಪೂಜೆಯು ಕಪ್ಪಕ
ನ್ನುಂಟು ಮಾಡುವಂಥಾದ್ದು.
ನನ್ನು ಆತನು ಪ್ರೀತಿಸುವ ಬ

ವಚನಃ— ೧೦೦. ಉ
ರನೆಂಬರು. ಭೋಗಿಸಿದರೆ ಕಾ
ಮಾಡಿದ ಕರ್ಮ ಎಂಬರು. ಉ
ಯೊಳಗಿದ್ದರೆ ಮೃಗಜಾತಿ ಎಂ
ಎದ್ದಿದ್ದರೆ ಚಕೋರನೆಂಬರು.
ಪಾದ ಕಿರಿ ಕಿರುಗುಣಿಯಲ್ಲಿ ಮನ
ಅಂಬಿಗರ ಚೌಡಯ್ಯ.

ಭಾವಃ— ಯಾವದು
ತೋರುತ್ತದೋ ಅದನ್ನೇ ಯಾ
ವಚನಕಾರನ ಭಾವವು. ಜನ
ಯದಂತೆ ನಡೆಯಬಾರದೆಂದು
ಜನರು ಯಾವಾಗ್ಲೆ ಏನು ಅನ್ನು
ಈಗ ಒಂದು ಅಭಿಪ್ರಾಯವುಳ್ಳ

೧೦೧ ಮನ ಮುಗ್ನವಾಗಿ ಅರಿವನು ಘನ ಪ್ರಾಣಲಿಂಗದಲ್ಲಿ ಸವೆದು ತನುವನು ಕ್ರಿಯಾಚಾರವಿಡಿದು ಇಷ್ಟಲಿಂಗದಲ್ಲಿ ಸವೆದು ಮಹಾನುಭಾವನರಿತಂತಹ ವೀರಶೈವ ಸಂಪನ್ನರಾದ ಶಿವಶರಣರಿಗೆ ಸಂಸಾರಿಗಳಿಸಬಹುದೇ ಅಯ್ಯ? ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧ ಪದಾರ್ಥಂಗಳ ವಿವರಿಸಿ ಇಷ್ಟ ಪ್ರಾಣ ಭಾವನೆಂಬ ಮೂರು ಲಿಂಗದ ಮುಖವನರಿದರ್ಪಿಸಿ ಆರು ಲಿಂಗದನುವಿನಲ್ಲಿ ಕೈಕೊಂಡು ಬಂದ ಬಂದ ಸಕಲ ಪದಾರ್ಥವನು ಅದರ ಪೂರ್ವಾಶ್ರಯವನಳಿದು ಶಿವಪ್ರಸಾದವೆಂದು ಅನುಭವಿಸುತಿರ್ಪರು. ಅಂತಪ್ಪ ನಿರುಪಮ, ನಿರ್ಭೇದ್ಯ, ನಿರಾಳ, ನಿಶ್ಶೂನ್ಯ ಪರಮ ಪ್ರಸಾದಿಗಳಿಗೆ ಸಂಸಾರಿಗಳೆಂದು ನುಡಿವರು ಅಜ್ಞಾನಿ ಸಂದೇಹಿಗಳು. ಅಘೋರ ನರಕದಲ್ಲಿ ಮುಳುಗುವರೆಂದಾತನಂಬಿಗ ಚೌಡಯ್ಯ.

ಭಾವಃ— ಈ ವಚನದಲ್ಲಿ ಅಂಬಿಗರ ಚೌಡಯ್ಯನು ಶರಣನು ಜಗತ್ತಿನಲ್ಲಿ ಹ್ಯಾಗೆ ವ್ಯವಹರಿಸಬೇಕೆಂಬುದನ್ನು ಹೇಳಿದ್ದಾನೆ.- ಶಿವಶರಣರು ನಿಜವಾಗಿ ಸಂಸಾರಿಗಳಲ್ಲ. ಯಾಕಂದರೆ ಅವರ ವರ್ತನೆಯು ಪ್ರಸಾದಮಯವಾಗಿರುತ್ತದೆ. ಅವರು ಪ್ರಸಾದವನ್ನೇ ಭೋಗಿಸುವರು. ಮತ್ತು ಉದಕ್ಕನುಸಾರವಾಗಿಯೇ ಆಚರಿಸುವರು. ಅವರ ಆಚರಣೆಯು ಸಂಸಾರಿಗಳಂತಹದಲ್ಲ. ಇದರ ತರಹವನ್ನು ವಚನಕಾರನು ಇಲ್ಲಿ ನಿರ್ದೇಶಿಸಿರುವನು.

ಪ್ರಸಾದವೆಂದರೆ ಭೋಗಿಸುವ ವಸ್ತುವನ್ನು ಮೊದಲು ಪರಮಾತ್ಮನಿಗೆ ಅರ್ಪಿಸಿ ಆ ಮೇಲೆ ಅದನ್ನು ಸ್ವೀಕರಿಸುವದೇ ಇರುತ್ತದೆ. ಪರಮಾತ್ಮನಿಗೆ ಅರ್ಪಿಸುವದೆಂದರೆ ತನ್ನಲ್ಲಿ ಇರುವಂತಹ ಲಿಂಗಗಳಿಗೆ ಅರ್ಪಿಸುವದೆಂದು ಷಟ್‌ಸ್ಥಲವು ಹೇಳುತ್ತದೆ. ಪರಮಾತ್ಮನು ತನ್ನಲ್ಲಿಯೇ ಇರುತ್ತಾನೆ. ಆದ್ದರಿಂದ ಅರ್ಪಿಸಲ್ಪಡತಕ್ಕ ಯಾವ ವಸ್ತುವು ಇದೆಯೋ ಅದು ತನ್ನಲ್ಲಿಯೇ ಇದೆ. ಪರಬ್ರಹ್ಮ ವಸ್ತುವು

ದಿರೋ ಎಂದು ಕೇಳಲು ನ
ಯಲು ಆ ವೇಳೆಯೊಳು ಸ
ನಾಲ್ಕು ಸಾವಿರ ಮಂದಿಯೊಡ
ನಲು ಆ ಜಗದೇವ ಮೇಲೆ
ಹಲು ಅವರಿಗಾಗ ಕೈಲಾಸ
ನೇರಿ ಅವರು ಕೈಲಾಸವನೆಯೆ
ಳನು ತನ್ನ ಮುನ್ನಿನ ದಿವ್ಯ
ಪದವನೆಯಿದನು.'

ಇತ್ತ ಮಡಿವಾಳಯ್ಯ ದ
ನಸುನಗುತ ನಲಿದು ಇದಿರಾ
ರಿದು ಅಡ್ಡ ಬಂದವರ ನೆಲ
ಬಯಲಮಾಡಿ ಕಾದುತಿರಲು
ಪೊರಮಟ್ಟು ಚನ್ನಬಸವೇಶ್ವರ
ದಂಡನಾಯಕನು ಅರಮನೆಯಿ
ಗಳು ಮುಂತಾದವರು ಅಳಿಯ
ವೀರ ಮಾಹೇಶ್ವರರು ಬಾಗಿಲ
ಆ ವೀರ ಭಟರುಗಳ ತಲೆಯಂ
ವಾಳದೇವರು ಸಕಲ ಸೇನೆಯಂ
ಕಡಿದು ಕತ್ತರಿಸಿ ಇರಿದು ಮು
ರಿಸುತ್ತಂ ಆಳಿಂದಾಳುಗಳ ಹೆ
ತೇರಿಂ ತೇರ ಹಾಯ್ದು ಆ ಬಿ
ಕೊಯ್ದುಕೊಂಡು ತಿರಿಗಿ ಬ
ತಲೆಗಳಂ ಚಂಡಾಡುತಿರಲು

ಅಳಿಯ ಬಿಜ್ಜಳನು ಚನ್ನದಂಡನಾಯಕರು ಹೊರಹೊರಟು ಹೋಹ
ಸುದ್ದಿಯಂ ಕೇಳಿ ಮತ್ತಂ ತನ್ನ ಮುಂದಿ ಕುದುರೆ ಆನೆ ರಥ ಮುಂತಾವ
ಚತುರಂಗ ಬಲಮಂ ಕೂಡಿಕೊಂಡು ತನ್ನ ಸರ್ವ ಶಕ್ತಿಯಲ್ಲಿ ಬಂದು ಬೆನ್ನ
ಬಿಡದೆ ಹಿಂದಟ್ಟಿ ಕಾದುತ್ತ ನಾಲ್ಕಾರು ಗಾವುದ ಪರಿಯಂತ ತಗುಳು
ಮುಗುಳಾಗಿ ಕಾದುತ್ತ ಬರಲು ಮಡಿವಾಳಯ್ಯಗಳು ಕಂಡು ಚನ್ನಬಸವ
ರಾಜದೇವರೇ ನೋಡಯ್ಯ ನಿನ್ನ ಭೃತ್ಯನ ಸಾಹಸವನೆಂದು ನಿಲಲಾಗಿ
ಅಳಿಯ ಬಿಜ್ಜಳನಂ ಮೂದಲಿಸಿ ಕಾದರವಳ್ಳಿಯಲ್ಲಿ ಕಾಳಗದ ಕಣವಾಗಲು,
ಅಳಿಯ ಬಿಜ್ಜಳಂ ಬಂದು ಮುತ್ತಲು, ಇನ್ನೆಲ್ಲಿ ನುಸುಳುವಿರಿ, ನಿಮ್ಮೆಲ್ಲ
ರನು ಈ ಪೊಡವಿಗೆ ಬಲಿಯನಿಕ್ಕುವೆನೆಂದು ತನ್ನ ಚತುರಂಗ ಸೇನಾ
ಬಲ ಸಹಿತಂ ಮುತ್ತಿ ಗಣಂಗಳಂ ಮುತ್ತಿ ಕೋಟಾನುಕೋಟಿ ಬಾಣಗ
ಳಿಂದೆಸೆಯಲು ಬಿಲ್ಲುಗಾರರ ಬಾಣಂಗಳೆಲ್ಲವು ಸೋಂಕದೆ ಬಯಲೊಳು
ಹಾರುತಿರಲು, ನಸುನಗುತೆ ಮಡಿವಾಳಯ್ಯಗಳು ನೋಡು ನೋಡು ಚನ್ನ
ಬಸವಣ್ಣ, ಶರಭವೀರ ನಾನೆಂದು ಭುಜಾಸ್ಫಾಳನಂ ಗೈದು, ಮುರಿಗೆಯನೂ
ರ್ಧ್ವಕೆತ್ತಿ ಜಡಿದು ತೂಗಾಡಿ, ಬಸವಲಿಂಗಾ ಎಂದಬ್ಬರಿಸಿ ಗರ್ಜಿಸಲು
ಊರ ಕಂಗಳ ಹಿಂಡಿಂಗೆ ಬರಸಿಡಲು ಎರಗಿದಂತಾಯಿತ್ತು. ಮರೆದು
ಮುಂಕಾವ ಸೇನೆಯಂ ಕಂಡು ರಾಯನ ಮುದದಾನೆಯ ಹಿಂಡುಗಳಂ ನುಗ್ಗಿ
ವೀರ ಮಾವುತರು ಜಯ ಜಯ ಎಂದು ಬರಲು ನಿಸ್ಸಾಳಂ ಸೂಳ್ಪೈಸಿ ಧಳಂ
ಧಳಂ ಧುಂ ಧುಂ ಎಂದು ಕೋಟಾನುಕೋಟಿ ರಭಸಂಗಳು ಒಂದು ಲಕ್ಷ
ಕರಿಘಟಾವಳಿ ಎರಲು, ಹತ್ತೆಂಟು ಲಕ್ಷ ಕುದುರೆಗಳು ದುವ್ವಾಳಿ ಎರಲು,
ಹನ್ನೆರಡು ಲಕ್ಷ ಕಾಲಾಳು ಕವಿದು ಮುತ್ತಲು, ಆಗ ಮಡಿವಾಳಯ್ಯಗಳು
ವೀರಗಂಟಿಯಂ ನುಡಿಸಿ ತಾನಾಕಾಶಕ್ಕೆ ಬೆಳೆದು ಖಂಡೆಯ ಹಲಿಗೆ ಬಿಲ್ಲು
ನಾಲ್ಕು ಹಸ್ತಂಗಳಿದಿರಿಸಿ ವೀರಗಾಸೆಯನುಟ್ಟು ಉರಿಯನುಗುಳುತ್ತಿ ನೊ
ಸಲ ಕಣ್ಣಾಗ್ನಿಯಂ ಕೆದರುತ್ತಿ ಪರಿದು ಮುರಿಗೆಯನೊಗೆದು ಒಂದೆರಡು
ಲಕ್ಷಮಂ ಕೊಂದು ಮತ್ತಮಾ ಸಮರಾಂಗಣದಲ್ಲಿ ಮತ್ತೊಂದು ದಿಕ್ಕಿನಲ್ಲಿ

ರಮಂ ಮಾಡಿ ನೊಸಲ ಕಣ್ಣ
ಅನಂತ ಮುಕುಟವರ್ಧನರಂ
ನಲ್ಲೆ ಶೂಲದ ಬೊಮ್ಮಣ್ಣಗಳು
ವೀರಭಟರಂ ಸಂಹರಿಸಲು ಅ
ಗಲು ಬಯಲ ಬಸವಣ್ಣನಲ್ಲಿ
ಅಳಿಯ ಬಿಜ್ಜಳ ಮುರಿದೋಡಿ
ಸಹಿತ ರಣಭೂಮಿಯಲ್ಲಿ ಎರ
ಬಾಯ ಬಿಡುತ್ತ ಮುರಿದು ತಿ

ಇತ್ತ ಮಡಿವಾಳಯ್ಯಗ
ತಟಾಕದಲ್ಲಿ ಖಂಡೆಯಂ ತ್ರಿಶ
ರಾಜದೇವರಿಗೆರಗಿ ನೀವಿನ್ನು
ದೇವರಲ್ಲಿಗೆ ಪೋದಪೆವು. ಅ
ಕಾರ್ಜುನದೇವರಿದ್ದಾರೆ. ಅ
ಮಾಡಿ ಬಂದಿದ್ದೇನೆ. ನಾವಲ್ಲಿ
ನಾಲ್ಕೆಂಟು ಗಳಿಗೆ ಹಿಂಚುವ
ನಾವು ಕೈಲಾಸದಲ್ಲಿ ಕಲಿದೇ
ನಾವು ಲಿಂಗದಲ್ಲಿ ಎರಡು ಬಾ
ಮಾಡಿ ಚನ್ನಬಸವರಾಜದೇವ
ದೇವರ ಶಿವಾಲಯಕ್ಕೆ ಬಂದು
ದೇವರಿಗೆ ನಮಸ್ಕಾರಮಂ ಮಾ
ಪ್ರಸಾದಮಂ ತಳೆದು, ನೀವು
ಮಾಡಲು, ಕೇಳಯ್ಯ ಮಡಿವ

ಸಂಧಾನವ ಮಾಡಿ ಶಿವಯೋಗ ಮುದ್ರೆಯಲ್ಲಿ ಸನ್ನದ್ಧರಾಗಿ ನಿಮ್ಮ ಸತ್ಯ
ಶರಣರ ನೆನವುತ್ತಲಿರಿ ಸ್ವಾಮಿ ಎಂದು ಹೇಳಿ ತಾವು ತಮ್ಮ ಕರಸ್ಥ
ಲದ ಲಿಂಗಮುಂ ನೋಡಿ ಆನಂದಾವ್ಯತರಸದಲ್ಲಿ ಮುಳುಗಿ ಲಿಂಗ
ದಲ್ಲಿ ಐಕ್ಯವಾಗಲು,

ಇತ್ತ ಮುಂದೆ ಏಳ್ನೂರೆಪ್ಪತ್ತು ಅಮರ ಗಣಂಗಳು ಹಿಂದಣಿಂದೆ
ಚನ್ನಬಸವೇಶ್ವರ ದೇವರು ಸಕಲ ಗಣಂಗಳು ದಾರಿಯಲ್ಲಿ ಬಂದು ಕೂಡಿ
ಕೊಂಡು ನಡೆಗೊಂಡು ಉಳಿವೆಯ ಮಹಾಮನೆಗೆ ಬಂದು ಅಸಂಖ್ಯಾತ
ಮಹಾಗಣಂಗಳ ತಿಂಥಿಣಿಯೊಳು ಮೂರ್ತಗೊಂಡು ಒಡ್ಡೋಲಗಂಗೊಟ್ಟು
ಇರಲು,

ಆ ವೇಳೆಯಲ್ಲಿ ಗಂಗಾಂಬಿಕೆಯ ಸಮಸ್ತ ಶಿವಗಣಂಗಳ ರಾಣಿ
ವಾಸಂಗಳು ಎಲ್ಲ ಮಹೇಶ್ವರರಿಗೆ ಬಂದು ನಮಸ್ಕಾರಂಗಳಂ ಮಾಡಿ
ಎಲ್ಲ ದೇವರುಗಳಿಗೆ ನೈವೇದ್ಯವಾಯಿತ್ತೆಂದು ಬಿನ್ನಹಂ ಮಾಡಲು, ಆ
ವೇಳೆಯಲ್ಲಿ ಮಡಿವಾಳ ದೇವರ ಸಮಯಾಚಾರದ ಮಲ್ಲಿಕಾರ್ಜುನ ದೇವರು
ರುದ್ರಮುನಿ ದೇವರು ಬಿಜಯಂ ಮಾಡಲು, ಎಲ್ಲ ಗಣಂಗಳು ಇದಿರೆದ್ದು
ಚನ್ನಬಸವೇಶ್ವರ ದೇವರು ನಮಸ್ಕಾರಮುಂ ಮಾಡಿ ಗದ್ದುಗೆಯಲ್ಲಿ ಮೂರ್
ತ್ತಿಗೊಳಿಸಿ ಅರ್ಘ್ಯ ಪಾದ್ಯಾಚಮನಂಗಳಂ ಕೊಟ್ಟು ಸತ್ಕರಿಸಲು ಚನ್ನ
ದಂಡನಾಯಕರು ಎಲ್ಲ ಪ್ರಮಥರಿಗು ಸಿವುಗು ನಾವು ನಮಸ್ಕಾರಂಗಳಂ
ಮಾಡಿದೆವೆಂದು ಮಡಿವಾಳದೇವರು ನೀವು ನಿರೂಪಿಸುವುದೆಂದು ನಿರೂ
ಪಮಂ ಕೊಡಲು ನಮಗೆ ಹಿಪ್ಪರಿಗೆಗೆ ತಿರುಗಿ ಬನ್ನಿಯೆಂದು ಹೇಳಿ ತಾವು
ಹಿಪ್ಪರಿಗೆಯ ಕಲಿ ದೇವರಲ್ಲಿ ತಮ್ಮ ಕರಸ್ಥಲದ ಇಷ್ಟಲಿಂಗಮುಂ ನಿರೀಕ್ಷಿಸುತ್ತ
ಐಕ್ಯವಾದರು ಎಂದು ನಿರೂಪಮಂ ಕೊಡಲು, ಎಲ್ಲ ಗಣಂಗಳು ಪುಷ್ಪಾಂ
ಜಲಿಯಂ ಮಾಡಿ ವಿಭೂತಿಯುಂ ಸಕಲ ಗಣಂಗಳಿಗೆ ಕೊಟ್ಟು ಉಘೆ
ಉಘೆಂಗು ಭಲಾ ಎಂದು ಘೋಷಿಸಿ ಸಂತೋಷಮಾಗಿ ಆ ವೇಳೆಯಲ್ಲಿ

ಗಳಂ ಅನೇಕವಾದ ಲೇಹ್ಯ
ಕಾಯಗಳಂ ಸಂಡಿಗೆ ಹಪ್ಪಳ
ತಾಪ ಸಕಲ ಕೈಕರಣಂಗಳಂ
ಎಡೆ ಮಾಡಿ ನಮಸ್ಕರಿಸಿ
ಆರೋಗಣೆಯಂ ಮಾಡಿ ತೃಪ್ತಿ
ಚನ್ನಬಸವೇಶ್ವರ ದೇವರು ವಿಭ
ಸ್ಕಾರಮಂ ಮಾಡಿ ಪ್ರಭುದೇವ
ದೇವರು ಹನ್ನೆರಡು ಸಾವಿರ
ಅಮರ ಗಣಂಗಳು ಅಸಂಖ್ಯಾತ
ಶಿವಭಕ್ತ ಮಹೇಶ್ವರ ಕಾರುಣ್ಯ
ಮಾಡಿಹೆನು, ನಮ್ಮ ಬಿಜ್ಜಳರ
ಹವಾಯಿತ್ತು, ಮುಂದೆ ಏಳ್ನೂ
ಹುಟ್ಟಿದ ವೀರಬಸವಂತಂಗೆ
ಕಲ್ಯಾಣದಲ್ಲಿರ್ದ ಯತಿಗಳು
ಪಿಸಿ, ಚನ್ನಬಸವರಾಜದೇವರು
ನೋಡಿ, ಬಾರೈ ಎಲೆ ಚನ್ನಬ
ಮಾಡಿ ಬಾಪಾಗ ಹಾವುಗೆಯ
ಕೊಂಡು ಬಾ ಹೋಗು ಎಂದ
ಈ ಸಿದ್ಧಗಿರಿಯ ಮೇಲಣ
ಶಾಖೆಗೆ ವಿಭೂತಿಯ ತೊಟ್ಟಿಲ
ಗಳ ಕಟ್ಟಿ ಸಮಸ್ತ ಗಣಂಗಳ
ಹಡಪದ ರೇಚಣ್ಣಗಳು ಮರೆಯ
ರ್ತಿಯುಂ ಕಂಗಳು ತುಂಬಿ ನೆ

ಇತ್ತ ರುದ್ರಮುನಿದೇವರು ಮಲ್ಲಿಕಾರ್ಜುನ ದೇವರು ಈರ್ವರು ಉಳಿದು ಮೂರ್ತಿಂಗೊಂಡಿಹ ಸಮಯದಲ್ಲಿ ಹಡಪದ ರೇಚಣ್ಣಗಳು ಬಂದು ನೋಡುವಾಗಳೆ ಎಲ್ಲ ಗಣಂಗಳು ಸಹಿತ ಚನ್ನಬಸವರಾಜ ದೇವರು ಕೈಲಾಸಕ್ಕೆ ತಮ್ಮ ಕಾಯ ಸಹಿತ ಶಿವನಿರೂಪದಿಂ ಬಂದು ಅನೇಕ ಪುಷ್ಪಂಕಗಳನೇರಿ ಚಿತ್ತೈಸಿದುದಂ ಕಂಡು ರುದ್ರಮುನಿದೇವರು ದುಃಖವಿಂದಿರೆ, ರೇಚಣ್ಣಗಳು ಎಲೆ ಗುರುವೆ ಎನ್ನೊಡೆಯ ಚನ್ನಬಸವಣ್ಣನು ನಮ್ಮ ಬಿಟ್ಟು ಹೋದರೆಂದು ಬಿನ್ನಹಂ ಮಾಡಲು ಬಾರಯ್ಯ ರೇಚಣ್ಣಗಳೆ ನೀವು ಗಣಂಗಳಿಗೆ ವೀಳೆಯವಂ ಕೊಡುವಾಗ ಎಲ್ಲರಿಗೆ ಬಿಳಿ ಎಲೆಯಂ ಕೊಟ್ಟು ಒಬ್ಬ ಮಹೇಶ್ವರಗೆ ಕರಿಯ ಎಲೆಯ ವೀಳೆಯಂ ಕೊಡಲಾಗಿ ಚನ್ನಬಸವಣ್ಣನು ತನ್ಮ ಬಿಳಿ ಎಲೆಯ ವೀಳೆಯವನವರಿಗೆ ತಾವು ಕೊಟ್ಟು ಲಿಂಗಾರ್ಪಿತವ ಮಾಡಿದರಂತೆ. ಆದು ಕಾರಣ ಕೈಲ್ಲಾಸಕ್ಕೆ ಹೋದಲ್ಲಿ ಎಲ್ಲರನು ಬೇರೆ ಬೇರೆ ವಿಚಾರಿಸುವಾಗಲು ತಾಕ್ಕು ಸೋಕು ತಪ್ಪು ತಡೆಗಳು ಕಪ್ಪು ಕಿಲ್ಮಿಷವಿದ್ದರೆ ಮರ್ತ್ಯಕ್ಕೆ ತಿರುಗಿ ಕಳುಹಿಸಿ ಕೊಂಡು ಬರುವರು. ಆ ತಪ್ಪ ಕಳೆದುಕೊಂಡು ಬಂದಲ್ಲದೆ ಒಪ್ಪರು. ಅದು ಕಾರಣ ಚನ್ನಬಸವಣ್ಣನು ನಿಮ್ಮನು ಇಲ್ಲಿರಿಸಿ ನಿಮಗೆ ತಮ್ಮ ನಿರೂಪವನು ರಹಸ್ಯದಿ ಬರೆದು ಕರಿ ಎಲೆಯ ಗಳಿಗೆಯನು ನಮ್ಮಲಿರಿಸಿ ತಾವು ಜಿತ್ತೈಸಿದರೆಂದು ಆ ನಿರೂಪದ ಓಲೆಯನು ಕರೆ ಎಲೆಯ ಗಳಿಗೆಯನು ಕೊಡಲಾಗಿ ನೋಡಿಕೊಂಡರು. ಆ ಓಲೆಯ ನಿರೂಪವೆಂತೆಂದೊಡೆ, ಚನ್ನ ದಂಡನಾಯಕರು ರೇಚಣ್ಣಗಳಿಗೆ ಹೇಳುವ ನಿರೂಪವು—ನೀನು ಮಹೇಶ್ವರರಿಗೆ ವೀಳೆಯ ಕೊಡುವಾಗ ಪ್ರಪಂಚ ಬಂದಿತ್ತಾಗಿ ಅದು ಕಾರಣ ಇನ್ನು ಮರ್ತ್ಯದಲ್ಲಿ ನಾ ಬಾಹ ಪರಿಯಂತರವು ಉಳಿವೆಯ ಸಂಗಮನಾಥನ ರಂಗಮಂಟಪದಲ್ಲಿ ನೀನು ಶಿವಯೋಗ ಸಮಾಧಿಯಲ್ಲಿರೆ, ನಾವು ತಿರಿಗಿ ಮರ್ತ್ಯಕ್ಕೆ ಎಳ್ನೂರಿಪ್ಪತ್ತು ವರುಷದ ಮೇಲೆ ಆನಂದನಾಮ ಸಂವತ್ಸರಕ್ಕೆ ಉಳಿವೆಗೆ ಬಂದು ನಿನ್ನ ಕೂಡಿಕೊಂಡು ನಾವು ಕಲ್ಯಾಣಕ್ಕೆ ಬಂದೆವು. ಉಳಿವೆಯಲ್ಲಿ ನಾವು ಗಣಂಗಳನು ಹೃದಯದಲ್ಲಿ
ಸಾಕ್ಷಿಯಾಗಿ ನಿನ್ನನು ನಾವು
ಪದ ರೇಚಣ್ಣ, ಎಂದು ಇರಿಸಿ
ರುದ್ರಮುನಿದೇವರೇ ನಾನೊಬ್ಬ
ಅದು ಕಾರಣ ನನ್ನನಿಲ್ಲಿರಿಸಿದ
ದಲ್ಲಿ ಮರ್ತ್ಯಲೋಕದ ಮಹ
ವಿರಕ್ತ ಮಹೇಶ್ವರರು ಅತೀತ
ಜಿತ್ತೈಸಲು ಆ ರೇಚಣ್ಣಗಳು
ಮಹೇಶ್ವರರಿಗೆಲ್ಲ ಗಣ ಪರ್ವ
ರೋಗಣೆಯಂ ಮಾಡಿಸಿ ಎಲ್ಲಿ
ಆ ಮಹಾ ಮಹಂತಿಂಗೆ ನಮಸ್
ಕೊಡಪಾನಂಗಳಂ ಚಿನ್ನ ತ
ಜಾಳಿಗೆಗಳಂ ಚಿನ್ನದ ಚೀನಾ
ರಿಗೆಲ್ಲ ಶಿವಾರ್ಚನೆಯಂ ಉಪ
ರ್ಜುನ ದೇವರ ಮುಂದೆ ಆ
ಕೊಟ್ಟು ಶರಣೆಂದು ಆ ಮಹಾ
ದಾಪರ್ಣಂಗಳೆಲ್ಲವನು ಒಂದು
ಆ ದಹನವಾದ ಭಸ್ಮವುಂ ನಿ
ಪಳೆಗಳಂ ತೆಗೆದು ನಿಷ್ಪೇಪ
ಪ್ರಸ್ಥಾವದ ವಚನ,

ಈ ವಚನವ ನಾನು ನಿ
ಒಂದು ಕರೆ ಎಲೆಯ ಪ್ರಪಂಚಿನ
ಲಿಂಗ ಜಂಗಮಕ್ಕೆ ಪ್ರಪಂಚ

ಸಾಕ್ಷಿ. ಮರ್ತ್ಯದಲ್ಲಿ ಕರುಳಿಲ್ಲದ ಕಲಿಗಳಾದ ನಮ್ಮ ಶಿವಭಕ್ತರು ದಾಸೋ
ಹಂಗಳಂ ಮಾಡುವದೇ ಸಾಕ್ಷಿ. ಎನ್ನೊಡೆಯ ಚನ್ನಬಸವರಾಜದೇವರು
ನಿರೂಪಿಸಿದ ವಚನ ಹನ್ನೆರಡು ಸಾವಿರ. ಅವಪ್ಪ ನನ್ನ ಬರಹ. ನಾನೆ
ಹೇಳಿದ ವಚನ ಹನ್ನೊಂದಕ್ಕೆ ಕಡೆ ಇಲ್ಲವು. ಉಳಿವೆಯ ಮಹಾಮನೆ
ಯಲ್ಲಿ ಎನ್ನೊಡೆಯ ಮಹೇಶ್ವರನು ರುದ್ರಮುನಿದೇವರ ಮುಂದೆ ಓದಿ
ಹೇಳಿದ ಕಾಲಜ್ಞಾನದ ವಚನ. ರಾಕ್ಷಸ ನಾಮ ಸಂವತ್ಸರದ ಕಾರ್ತೀಕ
ಶುದ್ಧ ಪೌರ್ಣಮೆಯ ಮಂಗಳವಾರದ ರಾತ್ರಿಯಲ್ಲಿ ಜಗದೇವ ಪೊಲ್ಲಿ
ಬೊಮ್ಮಣ್ಣಂಗಳು ಪಂಜುಗಾರರಾಗಿ ಶರಣರ ನೋಯಿಸಿದ ಪರವಾದಿ
ಬಿಜ್ಜಳನ ಇರಿದು ಕೊಂದು ಕೈಲಾಸಕ್ಕೆ ಹೋದರು. ಬುಧವಾರ ರಾತ್ರಿ
ಯಲ್ಲಿ ಮಡಿವಾಳಯ್ಯಗಳು ಕಾದಿ ಸೇನೆಯಂ ಸಂಹರಿಸಿ, ಉದಯದಲ್ಲಿ
ಚನ್ನದಂಡನಾಯಕರು ಉಳಿವೆಗೆ ಹೋಹಲ್ಲಿ, ಅಳಿಯ ಬಿಜ್ಜಳನ ಸಕಲ
ಸೇನೆಯನೆಲ್ಲ ಮಡಿವಾಳಯ್ಯಗಳು ಕೂಗಿನ ಮಾರಿತಂದೆಗಳು ಶೂಲದ
ಬೊಮ್ಮಣ್ಣಗಳು ಸಮಸ್ತ ವೀರಗಣಂಗಳು ಕಾದಿ ಸಂಹಾರಮಂ ಮಾಡಿ
ಉಳಿವೆಯ ಮಹಾಮನೆಗೆ ಬಂದರು. ಬಂದ ರಾತ್ರಿಯಲ್ಲಿಯೆ ಕೈಲಾಸಕ್ಕೆ
ಬಿಜಯಂ ಗೆಯ್ದರು. ಅವರು ಹೋದ ನಾಲ್ಕು ಗಳಿಗೆಗೆ ಚನ್ನಬಸವರಾಜ
ದೇವರು ಚಿತ್ತೈಸಿದರು. ಆ ಕಾಲದಲ್ಲಿ ನಾನು ಬಯಲ ಬಸವಣ್ಣನ
ಲ್ಲಿರ್ದು ಎನ್ನೊಡೆಯ ಜನ್ನಬಸವಣ್ಣನಲ್ಲಿ ಹಾವುಗೆಯನರಸಿ ತೆಗೆದು
ಕೊಂಡು ಶಿರದಲ್ಲಿ ಹೊತ್ತುಕೊಂಡು ಬಂದೆನು. ಬಂದು ರುದ್ರಮುನಿ
ದೇವರು ಮಲ್ಲಿಕಾರ್ಜುನ ದೇವರ ಶ್ರೀಪಾದ ಪದ್ಮಂಗಳಲ್ಲಿ ಚನ್ನದಂಡನಾ
ಯಕರ ನಿರೂಪಮಂ ಇಸಿದುಕೊಂಡು ಓದಿ ಆ ಮರುದಿವಸದಲ್ಲಿ ಮರ್ತ್ಯ
ಲೋಕದಲ್ಲಿ ಮಹಾಗಣಂಗಳಿಗೆ ಗಣಪರ್ವಮಂ ಮಾಡಿ ಉಳಿದ ದ್ರವ್ಯಂ
ಗಳಂ ಶಿವಗಣಂಗಳಿಗೆ ಶಿವಾರ್ಪಣಮಂ ಮಾಡಿ ಆ ಪತ್ರ ಭಾಜನಂಗಳಂ
ವಹಿಸಿ ನಿಕ್ಷೇಪಿಸಿದೆನು. ಇನ್ನು ರುದ್ರಮುನಿದೇವರೆ ನನಗೆ ನೀವು
ಯಿಂದೆ ಸಂಗಮನಾಥನ ರಂಗಮಂಟಪದ ಮಧ್ಯದಲ್ಲಿ ಶಿವಯೋಗ ಸಮಾ
ಧಿಯಂ ತೋರಿದಿರಿ. ಜನ್ನಬಸವಣ್ಣ ಪ್ರಿಯ ಕರದಲ್ಲಿ

ನಿರೂಪಿಸಿದ

ಕಲ್ಯಾಣದ ಮಹಿಮೆ
ವಿನ್ಯಹ ಮಾಡಿಹೆನು. ಸುಚಿ

ಕೈಲಾಸಮಪ್ಪ ಶ್ರೀ ಕಲ
ದೇವಾಲಯ, ಅವಕ್ಕೆ ಮುಖ್ಯ
ಮುಂದಣ ಅನುಭಾವ ಮಂ
ದೇವರು ಮೋಳಿಗೆಯ ಮಾರ
ಮಡಿವಾಳ ಮಾಚಯ್ಯಗಳು
ಅಸಂಖ್ಯಾತ ಮಹಾ ಗಣಂಗ
ವದ ವಚನ.

ಏನಯ್ಯ ಚನ್ನಬಸವಣ್ಣ
ಸಾರೆ ಮರಳಿ ಮರಳಿ ಬಂದಿ
ದಲ್ಲಿ ನಿಂದಿತ್ತು ನಿನಗಾದ ಕಡೆ
ಕೇಳುತಿರಲು, ಅಂದಿಂಗೆ ಆಪ
ಯಲು ನಿಮ್ಮ ಗಣಂಗಳು
ಗುಹೇಶ್ವರ ಲಿಂಗದಲ್ಲಿ ಐಕ್ಯ
ಸಂಗಮೇಶ್ವರನಲ್ಲಿ ಐಕ್ಯವಾಗೆ
ಮುಗಿದು ಬಸವೇಶ್ವರ ದೇವ

ಶರಣು ಶರಣಾರ್ಥಿ,
ಯದಲ್ಲಿ ಉದಯವಾಗಲು,
ಮಾಡಿ, ಪ್ರಭುದೇವರು ತಮ್ಮ

ವಾದೆವು. ಎನ್ನ ಮನವ ಘನವೇ ಸೊಡ್ಡಳ ಬಾಚಿರಾಜಯ್ಯ. ನಮ್ಮ
ಗಣಂಗಳ ಹಸ್ತದಲ್ಲಿ ಚಿಕ್ಕದಂಡನಾಯಕರ ಕೆಯ್ಯ ಎಡೆಗೊಟ್ಟು ಬಿನ್ನಹಂ
ಮಾಡಿಹೆನು. ನಾನು ಹೋದ ಮೂರುವರೆ ತಿಂಗಳಿಗೆ ತಾಯಿ ಸೋಮಾ
ಯಕ್ಕನು ಜಗದೇವ ಮೊಲ್ಲೆಬೊಮ್ಮಯ್ಯಗಳ ಕೆಯ್ಯ ಪರವಾದಿ ಕೊಲಿಸಿ
ಪವಾಡಗಳ ಮೆರೆದಾಳು. ಕಲ್ಯಾಣಕ್ಕೆ ಅಳಿಯ ಬಿಜ್ಜಳಂಗೆ ರಾಯಪಟ್ಟ
ವಾದಿತ್ತು. ಚಿಕ್ಕದಂಡನಾಯಕರು ತಮ್ಮ ಹನ್ನೆರಡು ಸಾವಿರ ಜಂಗ
ಮವ ಸಹಿತ ಏಳ್ನೂರೆಪ್ಪತ್ತು ಗಣಂಗಳು ಸಹಿತ ಉಳಿವೆಯ ಮಹಾ
ಮನೆಗೆ ಬಿಜಯ ಮಾಡಿಹರು. ಹಾದಿಯಲ್ಲಿ ಅದ್ಭುತ ರಣವಾಯಿತ್ತು.
ಮಡಿವಾಳಯ್ಯಗಳು ಬಿಜ್ಜಳನ ಕರತಳವಂ ಕೊಯಿದಾರು. ಮೆರೆದಾರು.
ಕಡಿವಾಡುತ್ತ ನಡೆದಾರು. ಉಳಿವೆಯ ಮಹಾಮನೆಯಲ್ಲಿ ನಿಂದಾರು.
ಅಲ್ಲಿ ಚನ್ನ ಉಯ್ಯಾಲೆಯನೇರಿ ಕೈಲಾಸಕ್ಕೆ ಬಿಜಯ ಮಾಡಿಯಾರು. ನೀಲ
ಲೋಚನೆಯಮ್ಮನವರು ತಮ್ಮ ಲಿಂಗದಲ್ಲಿ ಐಕ್ಯವಾದಾಳು. ವಿಕ್ಕಿನ
ಪುರಾತನರು ತಮ್ಮ ಹಿಡಿದ ಕ್ರಿಯೆ ಹೋದಲ್ಲಿ ಬಯಲಾದಾರು. ಎಂದು
ನಿರೂಪಿಸುತಿರಲು ಉದಯವಾಗಲು ಅತ್ತ ಬಸವೇಶ್ವರ ದೇವರು ತಮ್ಮ
ಸಂಗಮೇಶ್ವರ ದೇವರಲ್ಲಿ ಐಕ್ಯವಾದರು.

ಇತ್ತ ಚನ್ನಬಸವೇಶ್ವರ ದೇವರು ಎಲ್ಲ ಗಣಂಗಳ ಸಮೂಹದಲ್ಲಿ
ಬಿನ್ನೈಸುವ ಪ್ರಸ್ಥಾವದ ವಚನ. ಆ ವೇಳೆಯಲ್ಲಿ ಸಿದ್ಧರಾಮಯ್ಯ ದೇವರು
ಬಿಜಯ ಮಾಡಲು ನೀಲಲೋಚನೆಯಮ್ಮನವರು ಬಸವಣ್ಣನು ಸಂಗ
ಮೇಶ್ವರ ದೇವರಲ್ಲಿಗೆ ಓಡಿ ಹೋದನೆಂದು ನಿರೂಪಿಸಲು, ಆಗ ಪಡ್ರ
ಸವಸೇ ನೀಡಿ ಆರೋಗಣೆಯಂ ಮಾಡಿಸಿ ಎನ್ನ ದೇವರದೇವ ಎಂದು
ಕರಗಳಂ ಮುಗಿದು ನಿಂದಿರಲು, ಸಿದ್ಧರಾಮಯ್ಯ ದೇವರಾರೋಗಣೆಯ
ಮಾಡಿ ನೀಲಲೋಚನೆಯಮ್ಮನವರ ಮುಖಮುಂ ನೋಡಿ, ಬಸವಣ್ಣ ನಿಮ್ಮ
ನಿಲಿಸಿ ಹೋದನೇ ಎಂದು ತಲೆದೂಗುತಿರಲು ಆ ನೀಲಲೋಚನೆಯಮ್ಮ

ರಾಮಯ್ಯ ಪ್ರಭುವೇ, ಸಂಗನಬ
ವರು ಬಯಲಾಗಲು,
ಅತ್ತ ಚನ್ನಬಸವೇಶ್ವರ ದೇ
ದೇವರು ಬಿಜಯಂ ಗೈಯ್ಯಲು
ಮಯ್ಯ ದೇವರಿಗೆ ಶರಣಾರ್ಥಿ
ವೇಶ್ವರ ದೇವರು ಬಿನ್ನೈಸುವ
ಮುಂದಣ ಕಲಿಯುಗದ
ಗಣಂಗಳೇ ಕೇಳಿ ಕೂಡಲ ಚನ್ನಸ
ಹೇಳಿಹೆನು. ಪಂಚಾಶತ್ ಕೋ
ಕೈಲಾಸಮಪ್ಪ ಶ್ರೀಶೈಲದ ಮಲ್ಲಿ
ಮುಟ್ಟಿತ್ತು. ನುನುಷ್ಯ ರಕ್ತ
ವೇಶಿಯರ ಗುಡಿಸಲು ಕಟ್ಟಿಹ
ಇಪ್ಪತ್ತೇಳು ದುರ್ಗದವರು ಅ
ಮೂವತ್ತೆರಡು ಕೊಟ್ಟವಾದಾ
ತುರುಕರ ಪಡೆ ಎದ್ದಿತ್ತು. ತ್ರಿಪುರ
ಮಾಡಿಯಾರು. ನಂದಿಯ ಕಂಭ
ತ್ತಾರು ಸಾವಿರ ಗೋರಿಯನಿಕ್ಕಿಹ
ದೀತು. ಮೂರು ಎರಡು, ಎರಡ
ಒಂದು ರಾಮೇಶ್ವರಕ್ಕೆ ನಡೆದೀ
ದೀತು. ವಿಕ್ಕಿದುಳಿದೀತು.
ಶಿವನ ಸಮಯ ಕೆಟ್ಟೇತು.
ಜಂಗಮದ ಕೆಯ್ಯ ಸೇವೆಯ ಮಾ
ಸೇಮುಂಗಳ ಮಾಡಿಯಾರು. ಪ್ರ

ಡರು. ಅವರ ಕೊಲ್ಲ ಹೋದಾರು. ನಮ್ಮ ಶರಣರು ಬೀಜಕೊಬ್ಬರಾಗಿ ಉಳಿದಾರು ಪಡುದರುಶನ ಕೆಟ್ಟು ಏಕ ದರುಶನದಲ್ಲಿ ಅಡಗೀತು. ಮತ್ತಾ ಪಡುದರ್ಶನವೆದ್ದೀತು.

ಕಲ್ಯಾಣಕ್ಕೆ ತೆಂಕಲು ತೊಂಭತ್ತೈದು ಗಾವುದ ದಾರಿಯಲ್ಲಿ ಇಬ್ಬರು ಪುರಾತನರು ಕಾಯುವೆರಸಿ ಕೈಲಾಸಕ್ಕೆ ಬಿಜಯ ಮಾಡಿಯಾರು. ಆ ದಿಕ್ಕಿನಲ್ಲಿ ಒಂದು ಕೆರೆಯಲ್ಲಿ ಕೆಂಡದ ನುಳಿ ಸುರಿದೀತು. ಅಡಗೀತು. ಆ ಕೆಂಡದ ಮಳೆ ಹೊಡೆವ ಗಾವುದ ಮುಧ್ಯದಲ್ಲಿ ಕಲ್ಯಾಣದ ಬಿಜ್ಜಳನ ವಂಶಿಕದವ ವೀರಬಸವಂತರಾಯ ಹುಟ್ಟಿಯಾನು. ಆ ದಿಕ್ಕಿನಲ್ಲಿ ನರಸಿಂಹ ನವತಾರ ಹೊಕ್ಕು ಹೊಡಕರಿಸಿತ್ತು. ಮತ್ತೆ ಈಶಾನ್ಯ ಮುಖವಾದೀತು. ಮತ್ತೆ ದಕ್ಷಿಣಕ್ಕೆ ಬಂದೀತು. ಮತ್ತೆ ಪಶ್ಚಿಮಕ್ಕೆ ಹೋದೀತು. ಮತ್ತೆ ದಕ್ಷಿಣಕ್ಕೆ ಮುಖವಾದೀತು. ಮತ್ತೆ ತುರುಕರ ಬಲ್ಲಪೆದ್ದೀತು. ಆ ಬಲ ಒಂದು ಬಂಡೆಯಲ್ಲಿ ಅಳಿದೀತು. ಆ ನರಸಿಂಹಾವತಾರ ಪಶ್ಚಿಮ ಮುಖದಲ್ಲಿ ನಿಂದಿತ್ತು. ದಕ್ಷಿಣ ಭಾಗದಲ್ಲಿ ಅಯಿದು ಕೊಟ್ಟ ಉಳಿದಾವು. ಒಂದು ಕೊಟ್ಟ ತನ್ನಿಂದ ತಾನೆ ಅಳಿದಿತ್ತು. ಕಾವೇರಿಯ ಮುಧ್ಯದಲ್ಲಿ ಎರಡು ಕೊಟ್ಟ ಉಳಿದಾವು. ಒಂದು ಕೊಟ್ಟ ವಿಷ್ಣು ಸಂಪ್ರದಾಯವಾದೀತು. ಒಂದು ಕೊಟ್ಟ ಈಶ್ವರ ಸಂಪ್ರದಾಯವಾದೀತು. ವಿಷ್ಣು ಕೊಟ್ಟ ವಿರೋಧಿಕೃತ ನಾಮ ಸಂವತ್ಸರದಲ್ಲಿ ಬಯಲಾದೀತು. ಆ ಈಶ್ವರ ಕೊಟ್ಟಲ್ಲಿ ಹನ್ನೊಂದು ಖಂಡೆ ಇದ್ದಾವು. ಆ ಹನ್ನೊಂದು ಖಂಡೆಯೊಳಗೆ ಮೂರು ಖಂಡೆ ಉಳಿದಾವು. ಮತ್ತೊಂದು ಖಂಡೆಯ ತಿರುವಲೂರು ಸಮ್ಮುಖವಾದೀತು. ಅಲ್ಲಿಂದ ಕುಂಜೇಶ್ವರ ದೇವರಿಗೆ ಬಂದೀತು. ಅಲ್ಲಿಂದ ಕಪಿಲೆಯ ತೀರಕ್ಕೆ ಬಂದೀತು.

ನಾಲ್ಕು ಪಟ್ಟದ ರಾಯರು ಹುಟ್ಟಿಯಾರು. ಆ ರಾಯರಿಂದ ಮುಂದೆ ಮೂವತ್ತೆರಡು ಕೊಟ್ಟ ಹುಟ್ಟಿಯಾವು. ದಕ್ಷಿಣ ಭಾಗದಲ್ಲಿ ಒಂದು ಈಶ್ವರ

ತೋರಿಯಾಳು. ಸೌಮ್ಯನಾಮ ಸಾಧಾರಣನಾಮ ಸಂವತ್ಸರದ ಮೂರು ಸಂವತ್ಸರದಲ್ಲಿ ಮೂರು ಉಳಿದೀತು. ಅಂದಿಗೆ ನಮ್ಮ ಅಂದಿಗೆ ನಮ್ಮ ಪುರಾತನರು ಸುಳ ಬೂದಿ ಮುಚ್ಚಿದ ಕೆಂಡದಂತೆ

ಅಲ್ಲಿಂದ ಮೇಲೆ ನಾಲ್ಕು ಗಮ ಕಳಿ ಕೆಟ್ಟತ್ತು. ಭಕ್ತಿಯ ನೂರೆಪ್ಪತ್ತು ಜಂಗಮ ಹನ್ನೆರ ಯಷ್ಟು ಬಟ್ಟಲು ಜೇವಿನಕಾಯ ಬಿಜಯಂ ಮಾಡಿಯಾರು. ಅಲ್ಲಿಂ ಜಪ್ಪರವನಿಕ್ಕೆ ಮೂರ್ತಗೈದಾರು. ಭಾಗದ ನೈಋತ್ಯದಿಂದ ವೀರಬ ಗುಡಿ ತೋರಣವ ಕಟ್ಟಿಯಾರು. ರವಾದೀತು. ಪಟ್ಟಾಭಿಷೇಕವ ವ ಮುತ್ತಿನ ಗದ್ದುಗೆಯ ತೆಗೆದು ಸಿ ನೇರುತ ಒಂದು ಪವಾಡಮುಂ ಗೆ ಕುಳ್ಳಿದ್ದು ರಾಜ್ಯಂಗೆಯ್ಯುತಿರಲ ಸಹಿತ ಪ್ರಭುದೇವರು ಸಹಿತ ಬಂದೇವು. ಅಲ್ಲಿ ಎಲ್ಲ ಗಣಂಗಳ ಅಲ್ಲಿಂದ ಮೇಲೆ ಕಲ್ಯಾಣಕ್ಕೆ ಬ ಬಸವಯ್ಯ ಬಂದು ನಮಗೆ ನ ಯಾನು. ಉಪ್ಪರಗುಡಿ ಉಭಂ

ಈ ಪ್ರಸ್ತಾವದಲ್ಲಿ ಸಿದ್ಧರಾಮಯ್ಯದೇವರ ವಚನಃ— ನಾನಾ ವ್ರತನೇಮಂಗಳಾದಾವು. ಸತ್ಯರುದ್ಧಕಾಯಕ ನಿತ್ಯ ನೇಮಂಗಳಾದಾವು. ಖಂಡಿತ ಕಾಯಕವ ಅಖಂಡಿತರ ಕಂಡೇವು. ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ ಅಂದಿಗೆ ನೂರು ತುಂಬಿತ್ತೆಂಬ ಸಂದ ಪುರಾತನರ ಕಂಡೇವು.

ಈ ಪ್ರಸ್ತಾವದಲ್ಲಿ ಸೊಡ್ಡಳ ಬಾಚರಸರ ವಚನ. ಸಿದ್ಧರಾಮಯ್ಯದೇವರು ಸೊನ್ನಲಪುರಕೆ ಬಿಜಯಂಗೆಯ್ವಂದಿಗೆ ಸೋಸಲ ಸೋಮೇಶ್ವರ ದೇವರಿಂಗೆ ನೊಸಲ ಕಣ್ಣಿ ನೆತ್ತಿಯಲ್ಲಿ ಅಮೃತವ ಕರೆದೀತೆಂಬ ಸುದ್ದಿ ಹುಟ್ಟಿತು. ಕಲ್ಲಕೋಳಿ ಕೂಗಿತೆಂಬ ಸುದ್ದಿಯ ಕೇಳಿ ನುಡಿದಾರು. ಬಿದಿರಿಯ ಕೋಟೆಯಲ್ಲಿ ಒಟ್ಟಿ ಶಿವಶರಣೆಯ ಗರ್ಭದಲ್ಲಿ ಒಂಬತ್ತು ವರುಷವಿರ್ದು ಒಬ್ಬ ಪುರಾತನ ಹುಟ್ಟಿಯಾನು. ಆ ಶರಣ ನಿಮ್ಮ ಪಾದವ ಕಂಡಾನು. ಹುಲ್ಲೀಕೇರಿಯ ಸೋಮೇಶ್ವರದೇವರ ಬಲಭಾಗದಲ್ಲಿ ಅಭಯಹಸ್ತ ತೋರಿತ್ತೆಂದು ನುಡಿದಾರು. ನಮ್ಮ ಸೊಡ್ಡಳ ದೇವರು ಸಾಕ್ಷಿಯಾಗಿ ಚನ್ನಯ್ಯಗಳು ಮರ್ತ್ಯಕ್ಕೆ ಬಂದುದೆ ಸಾಕ್ಷಿ ಕುರುಹು.

ಈ ವಾಕ್ಯಕ್ಕೆ ಮಡಿವಾಳಯ್ಯಗಳು ಹೇಳಿದ ವಚನ. ಎಲ್ಲ ಗಣಂಗಳಿಗೆ ಬಿನ್ನಹಂ ಮಾಡಿಹೆನು. ಅನೇಕ ಲಿಂಗ ನಿಷ್ಠೆಗಳಾದಾವು. ಮಹಾಪವಾಡ ಪುರುಷರು ಹುಟ್ಟಿಯಾರು. ಅವರ ಮುಂದೆ ನಿಂದೆಯ ನುಡಿದಾರು. ನಿಂದೆಯ ನುಡಿದವರಿಗೆ ನಿಮ್ಮ ಪುರಾತನ ಪವಾಡಗಳ ತೋರಿ ಮೆರೆದಾರು. ನಮ್ಮ ಕಲಿದೇವರು ಸಾಕ್ಷಿಯಾಗಿ ನಿಮ್ಮ ಪುರಾತನರು ಮರ್ತ್ಯದ ಕಲಿ ತೀರದಲ್ಲದೆ ಬಾರರು.

ಇದಕ್ಕೆ ಉರಿಲಿಂಗದೇವರು ಹೇಳಿದ ವಚನ—ನಮ್ಮ ಪುರಾತನರು ಬರುವಂದಿಗೆ ಮುಚ್ಚಿದ ಕಣ್ಣಿ ತೆರೆಯಯ್ಯ. ಕಿಚ್ಚಿನ ಮಳೆ ಸುರಿಯಯ್ಯಾ. ಕಲಿಯುಗದ ಬೆಳಸ ಕೂಡಿಸಯ್ಯಾ. ಭಕ್ತಿಯ ಬೆಳಸು ಬೆಳಿಸಯ್ಯಾ. ನಮ್ಮ ಉರಿಲಿಂಗದೇವರ ಶರಣರ ಮರ್ತ್ಯಕ್ಕೆ ತರಿಸಯ್ಯ.

ಸ್ವರ ವಿಕ್ಕು ಆನಂದನಾವು
ಒಂಬತ್ತು ವಚನ ಬಸನೇಶ್ವರ
ಯಲ್ಲಿ ನಿಕ್ಷೇಪ ಮಾಡಿದೆವು.
ಣನು ಕಂಡನು ಈ ವಚನ
ಮರ್ತ್ಯಕ್ಕೆ ಬಾಹಂದಿಗೆ ಈ ವ
ಲಿಕ್ಕೆ ಕಂಡುದುದೆ ಕುರುಹು.
ಕೂಡಲ್ಲದೆ ಬಾರೆವು ಬಸವಪ್ರಿ

ಎಲ್ಲ ಪುರಾತನರು ನಿರೂಪಿಸಿದ ಕಾಲಜ್ಞಾನದ ವಚನ.

ಉತ್ತರದಿಕ್ಕಿನ ಮಹಾಮೇರುವೆಂಬ ರಜತಾದ್ರಿ ಪರ್ವತದಲ್ಲಿ ರತ್ನ ಖಚಿತ ಸಿಂಹಾಸನದಲ್ಲಿ ಪರಮೇಶ್ವರನ ಓಲಗದಲ್ಲಿ ಅಸಂಖ್ಯಾತ ಮಹಾ ಗಣಂಗಳು ರುದ್ರಗಣಂಗಳು ಅಮರಗಣಂಗಳು ಪ್ರಮಥಗಣಂಗಳು ಎಂಬ ತ್ತೆಂಟುಕೋಟಿ ಮುನಿಗಳು ಬ್ರಹ್ಮ, ವಿಷ್ಣು, ಜಂಭಾರಿಗಳು ಅರುವತ್ತಾರು ಕೋಟಿ ರಾಕ್ಷಸರು ಮೂವತ್ತುಮೂರುಕೋಟಿ ದೇವತೆಗಳು ನಂದೀಶ, ಭೃಂಗೀಶ, ಷಣ್ಮುಖ, ವೀರಭದ್ರದೇವರು, ವಿಘ್ನೇಶ್ವರ ದೇವಿಯರು ಸಹ ವಾಗಿ ಓಲಗಂಗೊಟ್ಟು ಮೂರ್ತವಂ ಮಾಡಿರ್ಪ ಸಮಯದಲ್ಲಿ ನಾರದ ಮುನಿ ಬಂದು ಪರಮೇಶ್ವರಂಗೆ ಬಿನ್ನಹಂ ಮಾಡಿದನದಂತೆನೆ,

ಮರ್ತ್ಯಲೋಕದಲ್ಲಿ ಶಿವಮತ ಮಸಣಿಸಿ ಜೈನಮತವನುದ್ಧಾರವಾ ಡಿಕೊಂಡಿಹನು. ಕಲ್ಯಾಣ ಚಾಳುಕ್ಯರಾಯನ ಮಗನಾದ ಬಿಜ್ಜಳರಾಯನು ತನ್ನ ಪ್ರಾಬಲ್ಯವನೆ ಮಾಡಿಕೊಂಡಿಹನು. ನೀವು ಬಾಗವಾಡಿಯಲ್ಲಿ ಮಂಡಿ ಗೆಯ ಮಾದಿರಾಜ ಮಾದಲಾಂಬಿಕೆಯರ ಗರ್ಭದಲ್ಲಿ ಬಸವರಾಜನ ಕಳ ಹುವಂತೆ ಮಾಡಿರಿ. ಆತನ ವಾಕ್ಯವ ಕೇಳಿ ವಿಕ್ರಮನಾಮ ಸಂವತ್ಸ ರದ ಶ್ರಾವಣಶುದ್ಧ ಪಂಚಮಿಯ ಸೋಮವಾರ ಅರುಣೋದಯ ಕಾಲ ದಲ್ಲಿ ಕಂಥೆಯ ಧರಿಸಿಕೊಂಡು ಕಲ್ಯಾಣಕ್ಕೆ ಬಂದು ತಮ್ಮ ಸೋದರ ಮಾವನಾದ ಬಲದೇವ ಮಂತ್ರಿಯ ಮಗಳು ಗಂಗಾಂಬಿಕೆಯರ ಮದು ವೆಯಾಗಿ ಲಿಪಿಯ ಪವಾಡವ ಮೆರೆದ ಬಳಿಕ ಸಿದ್ಧಣ್ಣನಾಯಕರ ಮಗ ನಾದ ನೀಲಲೋಚನೆಯರ ವಿವಾಹವಾಗಿ ಪ್ರಧಾನಿಪಟ್ಟವ ಸಮನಿಸಿಕೊಂ ಡಿರುವಾಗ ನಿಚ್ಚ ಮುನ್ನೂರರುವತ್ತು ಪವಾಡಂಗಳಂ ಗೆಲಿದು ಅಕ್ಕನಾಗ ಲೆಯ ಗರ್ಭದಲ್ಲಿ ಕಕ್ಕಯ್ಯನವರ ಪ್ರಸಾದ ಪಿಂಡವೆ ಚನ್ನಬಸವಣ್ಣನಾಗಿ ಮರ್ತ್ಯದಲ್ಲಿ ನಂದನ ಸಂವತ್ಸರದ ವೈಶಾಖ ಶುದ್ಧ ಪಾಡ್ಯ ಮಂಗಳವ

ಜನೇವರು ನಮಸ್ಕಾರವುಂ ವ
ಇತ್ತ ಪ್ರಭುಸ್ವಾಮಿಗಳು ರಾಷ್ಟ್ರ
ಪಾಡ್ಯವು ಸೋಮವಾರದ ಉದ
ಗುಹೇಶ್ವರ ಲಿಂಗದಲ್ಲಿ ಬಯಲ

ಇತ್ತ ಬಸವರಾಜದೇವರು
ಶುದ್ಧ ಪಾಡ್ಯ ಮಂಗಳವಾರದ ಲ
ಸಂಗಮೇಶ್ವರನೊಳಗೆ ಬಯಲಾ

ಇತ್ತ ಚನ್ನಬಸವರಾಜದೆ
ಮರ್ತ್ಯಕ್ಕೆ ಬರುವ ತನಕ ಆಗು
ನಾಮ ಸಂವತ್ಸರದ ಕಾರ್ತಿಕ
ರಾತ್ರಿಯಲ್ಲಿಯು ಜಗದೇವ ಮೆ
ಇರಿದುಕೊಂದು ಬುಧವಾರ
ಗೊಡಚಿಯ ಗಿಡದ ಹೆತ್ತಿನಲ್ಲಿ
ಳಯ್ಯಗಳ ಇಟ್ಟು ಸತ್ತಿಗೇರಿಯಲ್
ಕಡಕೋಳದಲ್ಲಿ ಶಿವಪೂಜೆಯಂ
ಮತ್ತೆ ಮುಂದೆ ಅಳಿಯಬಿಜ್ಜಳ
ಲಾಗಿ ತಲವೂರಲ್ಲಿ ತಲೆಯ ಕ
ಮೂಗಬಸ್ತಿಯಲ್ಲಿ ಕೌಡಿ ಜಾ
ಕಾದಾಡಿ ಸಾಂಬರಾಣಿಯಲ್ಲಿ
ಮೇಲುಗೈ ಯಲ್ಲಾಪುರಕ್ಕೆ ಹೊ
ಗಳಿಲ್ಲಿ ಕೂಗಿದರು. ಆ ಸ
ಕರಿಯ ಹೊಳೆಯ ಕಿನ್ನರಯ್ಯ
ಅಲ್ಲಿಗೆ ಜೈನಬಲ ಬೆಂಬತ್ತಲು
ಲಿಗೆ ನದಿಯ ತಿರುಳಿ

ಮುಂದೆ ಆಶಾ ವರುಷಕ್ಕೆ ಕಲ್ಯಾಣವ ಡಿಳ್ಳಿಯ ಕುರುಮ ಪಾಚ್ಚಾ
ನವರು ಬಂದು ಕೆಡಿಸಿಹರು. ೭೭೭ ವರುಷ ತನಕ ಕೈಲಾಸದಲ್ಲಿ ಇದ್ದೆವು.
ಹದಿಮೂರಾನಂದ ತುಂಬಲು ಆನಂದನಾಮ ಸಂವತ್ಸರಕ್ಕೆ ಬಂದೆವು. ಉಳಿ
ವೆಯ ಮಹಾಮನೆಗೆ ಬಂವೆವು. ಮುಂದೆ ೧೨ ಆನಂದದ ಮುಂದೆ ಕ್ಷಯ
ನಾಮ ಸಂವತ್ಸರದ ಮಹಾನವಮಿ ಸೋಮವಾರವ ಮೂರು ತಾಸು
ಹೊತ್ತಿಗೆ ವಿಜಯಪುರ ಹೋದಿತ್ತು. ಅದು ಹಿಂದಾದ ಒಂದು ವರುಷ
ದೊಳಗೆ ಭಾಗಾನಗರ ಹೋದಿತ್ತು. ಅಲ್ಲಿಗೆ ಕಲಿ ಶಕೆ ೪೮೩೭ ವರು
ಷಕ್ಕೆ ಆನಂನಾಮ ಸಂವತ್ಸರಕ್ಕೆ ಶಾಲಿವಾಹನ ಶಕೆ ೧೬೫೭ ವರುಷಕ್ಕೆ
ಆನಂದ ಬರುತ್ತಿದೆ.

ಆಗ ಚಿನ್ನಬಸವೇಶ್ವರ ದೇವರಿಗೆ ಹಂಪೆಯ ವಿರೂಪಾಕ್ಷನ ರಂಗ
ಮಂಟಪದ ಮಧ್ಯದಲ್ಲಿ ಎಲ್ಲ ಗಣಂಗಳು ಕೂಡಿ ಪಟ್ಟಾಭಿಷೇಕಮಂ ಮಾಡಿ
ಮುಂದೆ ನಳನಾಮ ಸಂವತ್ಸರದ ಕಾರ್ತಿಕ ಮಾಸದಲ್ಲಿ ವೀರಬಸವಂತನು
ಚನ್ನಬಸವಣ್ಣನು ಪಾತಾಳಗಂಗೆಯಲ್ಲಿ ಸ್ನಾನಮಂ ಮಾಡಿ ಶ್ರೀಶೈಲ ಚನ್ನ
ಮಲ್ಲಿಕಾರ್ಜುನನ ದರುಶನವಾಗಿ ವೀರಬಸವಂತಂಗೆ ಪಟ್ಟವ ನೇಮಿಸಿ
ಗುಡಿಗೋಪುರವ ಕಟ್ಟಿಸಿ ವೈಷ್ಣವ ಮತವ ಗೆಲಿದು ಹಂಪೆಗೆ ಬಂದು ವಿರೂ
ಪಾಕ್ಷನ ದರುಶನವಾಗಿ ವೀರಬಸವಂತಂಗೆ ಪಟ್ಟಾಭಿಷೇಕಮಂ ಮಾಡಿ
ಚನ್ನಬಸವಣ್ಣಂಗೆ ಪ್ರಧಾನಿ ಪಟ್ಟವಾಗಿ ಶ್ರೀರಂಗಪಟ್ಟಣ ವಿದ್ಯಾನಗರ ವಿಜ
ಯಪುರ ಸಹ ದಕ್ಷಿಣದ ಸೀಮೆಯ ಗುಡಿಗೋಪುರಂಗಳ ಮುಕ್ಕುತುಕ್ಕು
ರುದ್ಧ ಮಾಡಿ ಕಟ್ಟಿಸಿ ಕಟ್ಟಿ ಕಾವುಲೆಯಂ ಕಟ್ಟಿಸಿ ಮಠ ಮಾನ್ಯ ಪುರವ
ಗ್ರಹಾರ ಮೊದಲಾದ ದಾನಂಗಳಂ ಕೊಟ್ಟು ರಾಜ್ಯಕ್ಕೆ ಕೌಲು ಕೊಟ್ಟು
ತುಂಬಿಸಿ ಮುಂದೆ ಶ್ರೀಮುಖನಾಮ ಸಂವತ್ಸರಕ್ಕೆ ಬಿದಿಗೆ ಮಂಗಳವಾರ
ದಿವಸದಲ್ಲಿ ವೀರಬಸವಂತನು ಚನ್ನಬಸವಣ್ಣನು ಎಲ್ಲ ಗಣಂಗಳು ಸಹ
ಕಲ್ಯಾಣಕ್ಕೆ ಬಂದು ರಾಜ್ಯವ ಧರ್ಮದಲ್ಲಿ ಆಳಿಯಾರು. ಕೂಡಲ ಸಂಗಮ
ದೇವರು ಸಾಕ್ಷಿಯಾಗಿ.

ಬಸವ
ನಿರೂಪಿಸಿದ ಕ

ಮೃತ್ಯುಲೋಕದ ಮಹಾ
ಸಂವತ್ಸರದ ಫಾಲ್ಗುಣ ಶುದ್ಧ
ಸೆ ಪಾನಿವಾಳ ಆಶ್ವಿನೀನಪ್ಪ
ನಿಮ್ಮ ಪುರಾತನರಂಗೆ ಬಿನ್ನಹಂ
ವರುಷದಲ್ಲಿ ದೇವಾಂಗನೆಂಬ ಜ
ಹವಂ ಮಾಡುವಲ್ಲಿ ಕಾಯಶೂ
ರ್ಚನೆಯ ಮಾಡುವ ಭೇದವ
ಯರು. ತ್ರೇತಾಯುಗದ ೧೬
ಭಕ್ತನ ಮಾಡಿ ಹೆಸರಿಟ್ಟ ಕ
ಕಂಠನೆಂಬ ಜಂಗಮವಾಗಿ ಬ
ನೀವು ಬಲ್ಲಿರಲ್ಲದೆ ಮತ್ತಾರು
ವರುಷದಲ್ಲಿ ವೃಷಭನೆಂಬ ಭಕ್ತ
ಅನುಪಿಷನೆಂಬ ಜಂಗಮವಾಗಿ
ಭೇದವ ನೀವು ಬಲ್ಲಿರಲ್ಲದೆ ಅ
ಳಲಕ್ಷದ ವರುಷದಲ್ಲಿ ಎನ್ನ
ಲಕ ಚಾಲುಕ್ಯರಾಯನ ಗರ್ಭ
ವಾಯಿತ್ತು. ಇಂಗುಳೇಶ್ವರ
ಮಾದಲಾಂಬಿಕೆಯರ ಗರ್ಭದಲ್ಲಿ
ವಾಯಿತ್ತು.

ನಾನು ಬಂದ ಕಾರ್ಯ

ರಸಯ್ಯ ಸುಂಕವ ಬಂಕಯ್ಯ ಹಡಪದಪ್ಪಣ್ಣ ಕೊಂಡುಗುಳಿ ಕೇತಿರಾ
ಜಯ್ಯ ಕಲಿಕೇತ ಬ್ರಹ್ಮಯ್ಯ ಮಡಿವಾಳ ಮಾಚಿದೇವಯ್ಯ ಮೊದಲಾದ
ಎಳ್ನೂರೆಪ್ಪತ್ತು ಅಮರಗಣಂಗಳು ನಿಮ್ಮ ಕೈಯ್ಯೆಡೆಗೆ ಚಿಕ್ಕದಂಡನಾಯ
ಕರ ಕೊಟ್ಟು ನಾವು ಕಪ್ಪಡಿಯ ಸಂಗನೇಶ್ವರಕೆ ಹೋದಿಹೆವು. ನಾವು
ಹೋದ ಮೂರುವರೆ ತಿಂಗಳಿಂದೆ ಮೇಲೆ ಹರಳಯ್ಯ ಮಧುವಯ್ಯಗ
ಳಿಂದ ಕವನ ಹುಟ್ಟಿತ್ತು. ಜಗದೇವ ಮೊಲ್ಲಿಬೊಮ್ಮಣ್ಣಗಳೀರ್ವರು ಪಂಜು
ಗಾರರಾಗಿ ಹೋಗಿ ಬಿಜ್ಜಳರಾಯನ ಕ್ಷಯವ ಮಾಡಿಯಾರು. ಅಳಿಯ
ಬಿಜ್ಜಳಂಗೆ ಪಟ್ಟವಾಗಿ ದಾಳಿಯು ಬಂದಾನು. ಕಾದರ ಹೊಳೆಯಲ್ಲಿ ಕಾದಾ
ಡಿಯಾರು. ಮುರುಗೋಡವಲ್ಲಿ ಮುರಿದಾರು. ಬಯಲ ಬಸವಣ್ಣನಲ್ಲಿ
ಕೂಗಿನ ಮಾರಿತಂದೆಗಳು ಬೊಬ್ಬಿಟ್ಟಾರು. ಅಸಂಖ್ಯಾತ ಮಹಾ ಗಣಂ
ಗಳು ಅಸನವನಿಕ್ಕಿ ಮಾತಾಡರು. ಅಲ್ಲಿಂದ ಉಳಿವೆಗೆ ನಡೆದಾರು.

ಕಲ್ಯಾಣ ಕೆಟ್ಟು ಕಲಬುರಿಗೆ ಎನಿಸಿತ್ತು. ಮಹಾದುಸ್ಸಂಗನೆಂಬ ಸುರಿ
ತಾಣನೆಂಬವ ಬಿರಿದಿಕ್ಕಿಯಾಳಿಯಾನು. ಉಲಾಹಿಲ್ಲಾ ಎಂಬ ಮುಸಲ್ಮಾನ
ರಾಕ್ಷಸರು ಏಕಚ್ಛತ್ರವೆನಿಸಿ ಆಳಿಯಾರು. ಚಪ್ಪಟಗತ್ತಿಯವರು ಘನ
ವಾದಾರು. ಡೊಂಕ ಬಿಲ್ಲಿನವರು ಎದ್ದಾಡಿಯಾರು. ಇಷ್ಟರಿಂದ ಮೇಲೆ
ಶಂಭು ತ್ರಿಪುರಾಂತಕದೇವರ ಶಿಖರವನಳಿದಾರು. ಆ ತ್ರಿಪುರಾಂತಕದೇವರ
ಪಶ್ಚಿಮ ದೋದಿಗೆಯ ಜೇಳು ಬಯಲಾದೀತು. ಆ ತ್ರಿಪುರಾಂತಕದೇ
ವರ ಗರುಡಗಂಬವ ಕೆತ್ತೀಡಾಡ್ಯಾರು. ಆ ತ್ರಿಪುರಾಂತಕದೇವರ ಶಿವಾ
ಲಯವಳಿದು ಮಸೂತಿಯ ಕಟ್ಟ್ಯಾರು. ಆ ತ್ರಿಪುರಾಂತಕದೇವರ ಮುಂದೆ
ಕಪಿಲೆಯ ಕೊಂದು ಬಾಣಸವ ಮಾಡಿಯಾರು. ಒತ್ತಿ ಒರಲಿತ್ತು.
ಮಂಗಳವಾಡದ ಬಸ್ತಿಯನಳಿದಾರು. ಕೊಲ್ಲಾಪುರದ ದೇವತೆಯ ಬೀಸಾ
ಟ್ಯಾರು. ಲಕ್ಷದಮೇಲೆ ತೊಂಬತ್ತಾರುಸಾವಿರ ಲಿಂಗದ ಗುಡಿಯಲ್ಲಿ
ಕುಮರಿಯ ಜಲಯವ ಕಟ್ಟಿಯಾರು.

ಕಲಿಯುಗದಲ್ಲಿ ಭಕ್ತಿ ಬರಸಾದೀತು ಶಿವ

ಹೊಕ್ಕಾರು. ಪುಣ್ಯ ಸ್ತ್ರೀಯರೆಲ್ಲ
ಮುಖಭಂಗಿತರಾದಾರು.

ಪರ್ವತದ ಮೇಲೆ
ಸುರಿಯು ಮಾರೀತು. ಪಶುಹ
ತದ ಮೇಲೆ ಜಂಗಮರೆಲ್ಲ
ಯರಾದಾರು. ಆ ಪರ್ವತದ
ಪುಣ್ಯವೆಲ್ಲ ಸೂಕ್ಷ್ಮವಾದೀತು.
ಭೂಮಿಯ ಮೇಲೆ ಬಿದ್ದಿತ್ತು
ಅಲ್ಲಿ ಹುಲಿ ಕರಡಿಯಾಡಿಯಾ

ನೈಋತ್ಯ ವಿರೂಪಾಕ್ಷ
ಆ ವಿರೂಪಾಕ್ಷದೇವರ ಮುಂ
ಕಳಸವಿಟ್ಟಾವು. ಲಕ್ಷದ ಮೇ
ದಲ್ಲಿ ಮಡಿದೀತು. ಮಾತಂಗ

ನಾವು ಹೋದೇಳು ನೂ
ಎಂಬುದು ಕೆಟ್ಟ ಬೆಟ್ಟದ ಕೊ
ಪಟ್ಟಣದಲ್ಲಿ ಏಳು ಛತ್ರವನ್ಹೆತ್ತಿ
ರಿಯ ಹುಲಿ ಮುಖದ ಮುಂದೆ

ಶತ್ರು ಮಿತ್ರರು ಸಮಾಧಾ
ಮೇಲೆ ಪಶ್ಚಿಮ ದಿಕ್ಕಿನಿಂದ ದೆ
ನಾಮ ಸಂವತ್ಸರಕ್ಕೆ ಉತ್ತರದ
ಭಾಗದಲ್ಲಿ ಕೃಷ್ಣಾವತಾರವಾದಿ
ದೀತು. ಖರನಾಮ ಸಂವತ್ಸರ
ದಾಳು.

ನಂದನನಾಮ ಸಂವತ್ಸರ

ಸರು ಸೂಕ್ಷ್ಮನಾದಾರು. ಶುಭಕೃತುನಾಮ ಸಂವತ್ಸರದಲ್ಲಿ ಇಪ್ಪತ್ತುಮೂರು ವರೆ ವರೂಷದ ಛತ್ರ ಬಯಲಾದೀತು. ಶುಭಕೃತುನಾಮ ಸಂವತ್ಸರದಲ್ಲಿ ರಾಕ್ಷಸರಿಂಗೆ ಕದನ ಹುಟ್ಟೀತು. ಕ್ರೋಧಿನಾಮ ಸಂವತ್ಸರದಲ್ಲಿ ಮುಂದು ಹಿಂದಾದೀತು. ಹಿಂದು ಮುಂದಾದೀತು.

ಪಶ್ಚಿಮದಿಂದ ರಾಕ್ಷಸರು ಬಂದಾರು. ಬಿದಿರಿಯಲ್ಲಿ ಮಹಾಮದು ತ್ರಿಯಂಕಟರು ಅಮವಾರಸಿಗೆ ಹಿಮಸೇತು ಮಧ್ಯದ ಶಿಲೆಗಳು ಬಂದಾವು. ಲೋಹದ ಕೀಲು ಕಂಭವನಿಕ್ಕೆ ಜಡಿದಾರು. ಬಹು ಮಾಡಿಕ್ಕೆದ ನವಾಜದ ಕಲ್ಲು ಕಿತ್ತುಯಾಳಲಿಕ್ಕೆ ಪರ್ವತದಲ್ಲಿ ರಚಿಸಿದಾ ತನ ಶಿರ ದಕ್ಷಿಣವಲ್ಲಿಕ್ಷಯವಾದಿತ್ತ. ಹಿರಿದು ಕಿರಿದಾದೀತು. ಕಿರಿದೆ ಹಿರಿದಾದೀತು. ಆಗಲಿಕ್ಕೆ ಅಜನ ಮರೆಯ ಕುಂಜರನೆದ್ದಿತ್ತು. ಹಣೆಯ ಹನ್ನೆರಡು ಗಾವುದ ಬೆನ್ನವಂ ಬೈನೂರು ಗಾವುದು ಬಾಲ ಬೀಸೀತು. ಆ ಬಿದಿರಿಯ ಹುಲಿ ಮುಖದ ಹುಲಿಗು ಆ ಅಜನ ಮರೆಯ ಕುಂಜರಗು ತರ್ಕ ಹುಟ್ಟೀತು. ಹುಟ್ಟಲಿಕ್ಕೆ ರಕ್ತದ ಕಡಲು ಹರಿದೀತು. ಹರಿಯಲಿಕ್ಕೆ ರಾಕ್ಷರಿಗೆ ಆದೆ ಕಡೆಯಾದೀತು.

ನವಖಂಡ ಪೃಥ್ವಿಗೆ ಅರು ಮುಖವಾದೀತು. ಮಹಾ ಸೋಜಿಗ ಹುಟ್ಟೀತು. ವಿಷದ ಗಾಳಿ ಬೀಸೀತು. ನಂಜಿನ ಮಳೆ ಸುರಿದೀತು. ಹನ್ನೆರಡು ಗಾವುದಕೊಂದು ಪಟ್ಟಣ, ಮೂಗಾವುದಕೊಂದು ಸಂತೆಯಾದೀತು. ಹೊಟ್ಟು ಹಾರೀತು. ಘಟ್ಟ ಉಳಿದೀತು. ಮಿಕ್ಕಿನದು ಪಲ್ಲಟಿಸಿ ನಿಂದಂದಿಂಗೆ ನೂರೊಂದಕೊಬ್ಬರಾದಾರು.

ನಾವು ಹೋದ ೭೭೭ ವರುಷಕ್ಕೆ ಬಿದಿರಿ ಎಂಬ ಪಟ್ಟಣ ಹುಲಿಕರಡಿಯಾಡಿಯಾವು. ಕಲ್ಯಾಣ ಮುನ್ನಿನಂತೆ ಪಟ್ಟಣವಾದೀತು. ೬೫ದ ಮೇಲೆ ತೊಂಬತ್ತಾರುಸಾವಿರ ಗೋರೆ ಗುಮ್ಮಟವಳಿದಾವು. ನವನಾಥಸಿದ್ಧರಿಗೆ ಬಿಡಾರವಾದೀತು. ಶೂನ್ಯಸಿಂಹಾಸನಕ್ಕೆ ಲಿಂಗಮುದ್ರೆ ಪ್ರತಿಷ್ಠೆಯಾದೀತು. ಗುಡಿಯವರು ಗುಡಿಗೆ ಬಂದಾರು. ಮನೆಯವರು ಮನೆಗೆ ಬಂದಾರು. ಬರಲಿಕ್ಕೆ ಮುತ್ತಯ್ಯೆಂಬ ಮಾ

ಕಲ್ಯಾಣಿಯುವ್ಮನವರ ಕಾಲಜ್ಞಾನದ ವಚನ.

ವಾಲಿಯ ಭಾಂಡಾರಕ್ಕೆ ಅಶ್ವಪತಿ ಗಜಪತಿ ನರಪತಿ ಮೂವರು ಮುಖ್ಯವಾಗಿ ಹದಿನೆಂಟು ನೆಜವು ಬರುವುದಕ್ಕೆ ಪೂರಾಯಿತು. ಇನ್ನು ಕಂದ ತಂವೆಯ ಕೊಂದಂದಿಗೆ ಕಲಿಶಕೆ ೪೬೬ ವರುಷ ಸುಣ್ಣದ ಮೂಗಿನ ಅಣ್ಣಗಳು ಅಳಿದ ಮುಂಬಿಸಿಗೆ ವೀರವಸಂತನ ದಂಡು ಬಾಹುದು.

ಈಶ್ವರನಾಮ ಸಂವತ್ಸರದಲ್ಲಿ ಧೂಮಕೇತು ಮೂಡೀತ್ತು. ಆರ ಡಿಯರಾಯ ಬಂದಾನು. ದಾರಾಯಿ ಭೂರಾಮ ಬಂದಾನು. ದಾರಾಯಿ ಭೂರಾಮ ೩೬ ವರುಷ ದಾರಾವಿಭುರಾಮನವತಾರ ೧೧ ಕಡೆಯಲ್ಲಿ ರಾಮರಾಜನೆಂಬ ಹೆಸರಿನಿಂದ ದಕ್ಷಿಣ ನಗರದಲ್ಲಿ ಕಟ್ಟಿ ೭ ವರುಷ ಬಲ್ಲ ವಂತ ನೃಪನು ದಟ್ಟಿಲಾಳುವನು. ಸಮರಾಜ್ಯವೆನಿಸಿ ಮುಟ್ಟಿ ನಡೆದಾನು. ಉತ್ತರದ ಕಾಶಿಯ ಸೃಷ್ಟಿಯ ನೆಲ್ಲವನು ಒಳಹೊಕ್ಕು ರಾಮನ ಶೇಷ ಕರ್ಮಂಗಳಂ ಮಾಡಿ ವಿಶ್ವೇಶ್ವರನ ಕಂಡು ಬಂದಲ್ಲಿ ತುರುಗ ಮೀಸಲ ಳಿಯದೆ ವಿರೂಪಾಕ್ಷನ ಕರುಣದಿಂದೆ ಅಳಿಯರಾಮನು ತಂದ ಕಿಲಾಪದ ತಂಡವನೆ ತೆಗೆಯಲು ಮರಣ ರೂಪಿಟ್ಟ ತೋರುವುದು. ನಾಲ್ಕು ದಿಕ್ಕಿಗೆ ಕಿಲಾಪವ ೭ ವರುಷಕ್ಕೆ ಭೂಪ ಕ್ಷತ್ರಿಯ ಅಳಿವ. ಕಾಳಗದಲ್ಲಿ ಅಪತ್ತು ತೋರಿ ಜಗದಲ್ಲಿ ಹುರುಮುಂಜಿಯ ವೇಶವನಾಳ್ವ ಹಬ್ಬಿಸಿ ಕೊಳ್ಳಿ ಯರು ಸೂಚಿಸಿ ಇವರ ನೆಜೆಗಳ ಪಿಡಿದುಕೊಂಡು ಆ ಸೇನೆ ಬಲವು ಗಜ ಪತಿಯ ಬಲಗೊಂಡು ಮೀಸಲಳಿಯದೆ ಭಾಂಡಾರವ ತೆಗೆವೆನೆಂದು ಮಾನು ಷನ ಕೊಂದು ಗಜಪತಿಯು ಹೊಯಿದಾಡಿ ರೋಷದಲ್ಲಿ ಮಡಿದಾರು. ಎರಡೊಂದು ವಾಸಕ್ಕೆ ಲೇಸ ತೋರುವದು. ಕುಂಬದ ಕಡೆಯಾಟವು ಶಿವನಿಂದೆಯ ಮಾಡುವ ತಾಟಕರಳಿದಾರು. ಹರನಿಂದೆ ಗುರುನಿಂದೆ ಪರ ನಿಂದೆಯ ಮಾಡುವರೆಲ್ಲ ಶ್ವಾನಸೂಕರ ಗರ್ಭದಲ್ಲಿ ಬಪ್ಪುದು ತಪ್ಪದು. ಇದು ಸಿದ್ಧಾಂತವು.

ಸಟೀಕಾ ಷಟ್

ಪ್ರಥಮೋಪದೆ

ಶ್ರೀ ರೇಣುಕ ಕಾ
ಕಾನ್ ಕ್ರಮಾತ್। ವಿ
ಸರ್ವೇಶ ದೇಶಿಕಾನ್ ॥
ಣಸಿದ್ಧಯೋಗಿನೌ। ನ
ಲಬ್ರಹ್ಮದೀಪಿಕಾಂ ॥೧

ಟೀಕು— ಶ್ರೀ ರೇಣುಕ ಕ
ದಲ್ಲಿ ಪುತ್ರ ಪರಂಪರೆಯಿಂದ ಪ್ರ
ಲಿಂಗಾತ್ಮಕಾನ್=ಪಂಚಬ್ರಹ್ಮ
ವುಳ್ಳ ಪಂಚಲಿಂಗಸ್ವರೂಪರಾದ
ಸರ್ವೇಶ್ವರದೇವರು, ಸೋಸಲೆ
ರೆಂಬ ಶಿವಯೋಗೀಶ್ವರರನು
ಣಸಿದ್ಧದೇವರ ಪುತ್ರನಾದ ರೇ
ದೀಪಿಕಾಂ=ಷಟ್ಸ್ಥಲಬ್ರಹ್ಮದೀಪಿಕ
ತ್ತಿದ್ದೇನೆ.

ಅನಂತರದಲ್ಲಿ ಬೃಹದಾರಣ್
ಶಾಸ್ತ್ರಂಗಳಿಗುತ್ತರವಾದ ವೇದೊ

ದಃ=ಸಾಮವೇದವು ಇತಿ=ಈ ಶ್ರುತಿಪ್ರಮಾಣದಿಂದೆ ಮಹಾದೇವನ ನಿಶ್ವಾಸ ವಾಯುವಿನಿಂದೆ ಅಪ್ರಯತ್ನವಾಗಿ ಅವತರಿಸಿದವು

ವೇದತ್ರಯಗಳು ಇನ್ನು ಚತುರ್ಥಾಗಮ ಸೂತ್ರಾರ್ಥದಿಂದೆ ವೇದೋತ್ಪತ್ತಿಯನು ತೋರಿಸುತಿರ್ದಪಂ

ವೇದಾಃ ಸಾಂಗಾಶ್ಚ ಚತ್ವಾರಃ ಶಿವಸ್ಯೋರ್ಧ್ವ ಮುಖೋದ್ಭವಾಃ ॥೩॥

ಟೀಕು— ಸಾಂಗಾಃ=ಛಂದೋವ್ಯಾಕರಣ ಕಲ್ಪನಿರುಕ್ತ ಶಿಕ್ಷಾಜ್ಯೋತಿಷ್ಯವೆಂಬ ಷಡಂಗಗಳೊಡನೆ ಕೂಡಿ ವರ್ತಿಸುತಿರ್ದ ಚತ್ವಾರೋವೇದಾಃ= ಋಗ್ಯಜುಃ ಸಾಮಾಥರ್ವಣವೆಂಬ ನಾಲ್ಕು ವೇದಂಗಳು ಶಿವಸ್ಯ=ಸದಾಶಿವನ ಊರ್ಧ್ವಮುಖೋದ್ಭವಾಃ=ಈಶಾನ್ಯಮುಖದೊಳುತ್ಪನ್ನವಾದವು ಈ ಶಿವಾಗಮ ಪ್ರಮಾಣದಿಂದೆ ವೇದವು ಶಿವಪ್ರಣೀತವೆಂಬರು.

ಹಾಗೆಯೇ ಚತುರ್ವೇದ ತಾತ್ಪರ್ಯಸಂಗ್ರಹದ ಸೂತ್ರಾರ್ಥದಿಂದೆ ವೇದೋತ್ಪತ್ತಿಯನು ತತ್ಪ್ರಮಾಣ್ಯವನು ತೋರಿಸುತಿರ್ದಪಂ॥

ವೇದಃ ಸ್ವಯಂ ಭವತು ವಾಯು ದಿವಾಪ್ರಣೀತಿಃ।
ಸರ್ವಂ ಪ್ರಮಾಣ ಮವಿಹಾಯ ಗೃಹ್ಣಾತಿಲೋಕಃ ॥೪॥

ಟೀಕು— ವೇದಃ=ವೇದವು ಸ್ವಯಂ ಭವತು ವಾ=ಸ್ವಯಂಭುವಾದರೂ ಆಗಲಿ ಸರ್ವಂ=ಸಮಸ್ತವಾದ ಸಾಂಗೋಪನಿಷತ್ತಿನೊಡನೆ ಕೂಡಿದ ವೇದ ಸಮೂಹವನು ಲೋಕಃ=ವಿದ್ವಜ್ಜನವು ಅವಿಹಾಯ = ಬಿಡದೆ ಪ್ರಮಾಣಂ= ಪ್ರಮಾಣ್ಯವನಾಗಿ ಗೃಹ್ಣಾತಿ=ಸ್ವೀಕರಿಸುತ್ತಿರ್ದಪುದು

ಇನ್ನು ವೃದ್ಧ ಜಾಬಾಲೋಪನಿಷನ್ಮಂತ್ರಸೂತ್ರದಿಂದೆ ಸಮಸ್ತ ಸಮಯ ಶಾಸ್ತ್ರಂಗಳಿಗುತ್ತರವಾದ ಶಿವಾಗಮೋತ್ಪತ್ತಿಯಂ ತೋರಿಸುತಿರ್ದಪಂ

ದದೆ ಇರ್ದ ನಿತ್ಯಃ=ಕೇಡಿ
ಸಕಲಜಗತ್ಕರ್ತಾ=ಸಮಸ್ತ ಜ
ಮಪ್ರಣೀತಾ = ಕಾಮಿಕಾದಿವಾ
ಹೇಳುತ್ತಿರ್ದಾತನು.

ಹಾಗೆಯೇ ಮೃಗೇಂದ್ರಸ
ಸುತಿರ್ದಪಂ

ಶ್ರಿಪದಾರ್ಥಂ ಚತು
ಸೂತ್ರೇಣೈಕೇನ ಸಂಗೃ

ಟೀಕು— ಜಗತ್ಪತಿಃ=ಸ
ದಾರ್ಥಂ=ಪತಿ, ಪಶು, ಪಾ
ಷ್ಪಾದಂ=ಜ್ಞಾನ, ಕ್ರಿಯಾ, ಚ
ಮಹಾತಂತ್ರಂ=ಸಿದ್ಧಾಂತಶಾಸ್ತ್ರ
ದಿಂದಲೇ ಸಂಗೃಹ್ಯ=ಸಂಗೃಹಿ
ಪ್ರಾಹ=ಹೇಳುತ್ತಿರ್ದಪನು.

ಇನ್ನು ಚತುರ್ವೇದ
ವೇದಾಗಮ ಪ್ರಾಮಾಣ್ಯವನು

ವೇದಾಃ ಪ್ರಮಾಣ
ದಿವ್ಯಂತವಾಗಮಮು

ಟೀಕು— ಭೋ ಹರ=
ಮಿತಿ = ವೇದಂಗಳು ಪ್ರಮಾಣ
ಮಾಡುತ್ತಿರ್ದ ಜನಃ = ವಿದ್ವಜ್ಜ
ನಿನ್ನ ಆಗಮಂ = ಆಗಮವನು

ಟೀಕು— ಸರ್ವವೇದೇಷು = ಸಮಸ್ತ ವೇದಂಗಳಲ್ಲಿ ಯತ್ = ಆವುದಾನೊಂದು ಪ್ರಮಾಣವು ದೃಷ್ಟಂ = ಕಾಣಲ್ಪಟ್ಟಿತ್ತು. ತತ್ಸರ್ವಂ = ಆ ಸಮಸ್ತ ಪ್ರಮಾಣವು ಶಿವಾಗಮ = ಶಿವಾಗಮದಲ್ಲಿ ದೃಷ್ಟ = ಕಾಣಲ್ಪಟ್ಟಿತ್ತು ಇತಿ ವೇದಾಗಮ ಪ್ರಾಮಾಣ್ಯಂ

ಇನ್ನು ಕಾಮಿಕ ಸೂತ್ರದಿಂದೆ ವೇದಾಗಮೈಕ್ಯವನು ತೋರಿಸುತ್ತಿರ್ದಪಂ

ಸಿದ್ಧಾಂತೋ ವೇದಸಾರಃ ಸ್ಯಾದನ್ಯಚ್ಚೇತ್ತು ಬಹಿಷ್ಕೃತಂ
ಸಿದ್ಧಾಂತವಿಹಿತಾಚಾರೊ ವೈದಿಕಾಚಾರ ಉಚ್ಯತೆ ॥೯॥

ಟೀಕು— ಸಿದ್ಧಾಂತಃ = ಶಿವಾಗಮವು ವೇದಸಾರಃ = ವೇದಸಾರವು ಸ್ಯಾತ್ = ಆಹುದು ಅನ್ಯಚ್ಚೇತ್ತು = ಉಳಿದ ಶಾಸ್ತ್ರನಾದೊಡೆ ಬಹಿಷ್ಕೃತಂ = ಬಹಿಷ್ಕರಿಸಲ್ಪಟ್ಟಿತು ಸಿದ್ಧಾಂತವಿಹಿತಾಚಾರಃ = ಶಿವಾಗಮದಲ್ಲಿ ವಿಧಿಸಲ್ಪಟ್ಟ ಸದಾಚಾರವು ವೈದಿಕಾಚಾರಃ = ವೇದೋಕ್ತಾಚಾರವೆಂದು ಉಚ್ಯತೆ = ಹೇಳಲ್ಪಡುತ್ತಿರ್ದಪುದು.

ಹಾಗೆಯೆ ಸಿದ್ಧಾಂತಶಿಖಾಮಣಿ ಸೂತ್ರದಿಂ ತೋರಿಸುತ್ತಿರ್ದಪಂ

ವೇದಸಿದ್ಧಾಂತಯೋರೈಕ್ಯ ಮೇಕಾರ್ಥ ಪ್ರತಿಪಾದನಾತ್। ಪ್ರಾಮಾಣ್ಯಂ ಸದೃಶಂ ಜ್ಞೇಯಂ ಪಂಡಿತೈರೇತಯೋಸ್ಸದಾ. ॥೧೦॥

ಟೀಕು— ವೇದಸಿದ್ಧಾಂತಯೋಃ = ವೇದಾಗಮಂಗಳಿಗೆ ಏಕಾರ್ಥ ಪ್ರತಿಪಾದನಾತ್ = ಒಂದೆಯರ್ಥವನೆ ಪ್ರತಿಪಾದಿಸುವುದರ ದೆಸೆಯಿಂದೆ ಏಕ್ಯಂ = ಏಕತ್ವವು ಏತಯೋಃ = ಈ ವೇದಾಗಮಂಗಳ ಪ್ರಾಮಾಣ್ಯಂ = ಪ್ರಮಾಣವು ಸದೃಶಂ = ಸಮಾನವಾಗಿ ಪಂಡಿತೈಃ = ವೇದಾಗಮ ಪಾರಂಗತರಾದ ವಿದ್ವಾಂಸರಿಂದೆ ಸದಾ = ಎಲ್ಲಾ ಕಾಲದಲ್ಲಿಯು

ಶಿವಾ
ವರ್ಷ ೮] ಜಾ
ಶೂನ್ಯಸಂಪಾ
(ಟೀ— ವಿ॥ ಕಲ್ಯಾಣಪ್ಪ ಬ್ಯಾಳಿ ಬಿ.

ಶೂನ್ಯಸಂಪಾದನೆಯು ವೀರ
ಗ್ರಂಥವಾಗಿದೆ. ವಚನಶಾಸ್ತ್ರಸಾ
ಭವಾಗಿ ತಿಳಿದುಕೊಳ್ಳುವಂತಹ
ಅನ್ಯಂಗೆ ಆದರೊಳಗಿನ ತಿರುಳನ್ನು
ಪ್ರಮಥರ ಕಾಲದಲ್ಲಿ ಶ್ರೀ ಪ್ರಭು
ಗಳಲ್ಲಿ ಈ ಮಹಾನುಭಾವದ ವ
ಶಿವಾನುಭವ ಗೋಷ್ಠಿಯನ್ನೇ ವಿ
ಪೂಜ್ಯರಾದ ವಿರಕ್ತ ಸ್ವಾಮಿಗಳು
ವಚನಗಳಿಗೆ ಒಂದು ವಿಶಿಷ್ಟ
ಆ ಮೇರೆಗೆ ವಿವೇಚಿಸಲ್ಪಟ್ಟು ಕ್ರ
ರಾ॥ ಸಾ॥ ಹಳಕಟ್ಟಿಯವರು ಮುದ್
ಮಾಡಿರುವರು

ಯಾಗಿ ಹೊಳೆಯಬಹುದು. ಯಾರಿಗಾದರೂ ಹೇಗೆ ಹೊಳೆಯುವವೋ ಹಾಗೆ ವ್ಯಕ್ತಪಡಿಸಲು ಅವರು ಸ್ವತಂತ್ರರಿದ್ದಾರೆ. ಆದರೆ ಈ ಸ್ವಾತಂತ್ರ್ಯವು ಮೇರೆದಪ್ಪಿ ವ್ಯಾಪ್ತ ಹೋಗಬಾರದು. ಇದನ್ನರಿತು ವಚನವಾಙ್ಮಯದಲ್ಲಿಯೇ ಪ್ರತಿನಿತ್ಯ ವ್ಯಾಸಂಗ ಮಾಡುತ್ತಿರುವ ರಾ॥ ಸಾ॥ ಹಳಕಟ್ಟಿಯವರ ಸಹಾಯದಿಂದ ಶೂನ್ಯಸಂಪಾದನೆಯೊಳಗಿನ ಉಜ್ವಲವಾದ ತತ್ವಗಳನ್ನು ನನಗೆ ತಿಳಿದ ಮಟ್ಟಿಗೆ ಸುಲಭವಾಗಿ ವಿಶದಪಡಿಸಬೇಕೆಂದು ಪ್ರಯತ್ನ ನಡೆಯಿಸಿದ್ದೇನೆ. ಅದಕ್ಕೆ ಪರಮಾತ್ಮನು ಯಶಸ್ಸುಕೊಡಲೆಂದು ಹಾರೈಸುತ್ತೇನೆ.

ಇನ್ನು ಶೂನ್ಯಸಂಪಾದನೆಯನ್ನು ಯಾರು ರಚಿಸಿದರು, ಎಂದು ರಚಿಸಿದರು, ಹೇಗೆ ರಚಿಸಿದರು, ಎಂಬೀ ಪ್ರಶ್ನಗಳ ಬಗ್ಗೆ ರಾ॥ ಸಾ॥ ಹಳಕಟ್ಟಿಯವರು ಶೂನ್ಯಸಂಪಾದನೆಯ ಪ್ರಸ್ತಾವನೆಯಲ್ಲಿ ದಿಗ್ದರ್ಶನ ಮಾಡಿದ್ದಾರೆ. ಆದರೆ ಶೂನ್ಯಸಂಪಾದನೆಯಲ್ಲಿ ಯಾವ ಯಾವ ಉದ್ಧಾತ್ತ ತತ್ವಗಳು ಉಡಕವಾಗಿವೆ, ಎಂಬೀ ಪ್ರಶ್ನೆಯನ್ನು ವಿವೇಚಿಸುವದು ಅತ್ಯಂತ ಮಹತ್ವದ್ದಾಗಿದೆ. ಪ್ರಸ್ತುತ ಲೇಖದ ಉದ್ದೇಶವಾದರೂ ಅದೇ ಆಗಿದೆ.

ಕ್ರಿ. ಶ. ೧೫ನೆಯ ಶತಮಾನದಲ್ಲಿ ವಿಜಯನಗರದ ಮೊದಲನೆಯ ದೇವರಾಯನು ಆಳುವಾಗ ಆತನ ಆಶ್ರಯದ ಕೆಳಗೆ ತೋಂಟದಾರ್ಯರೇ ಮೊದಲಾದ ನೂರೊಂದು ಜನ ವೀರಶೈವ ವಿರಕ್ತ ತತ್ವಜ್ಞಾನಿಗಳು ಪ್ರತಿನಿತ್ಯ ಶಿವಾನುಭವ ಗೋಷ್ಠಿಯಲ್ಲಿ ನಿರತರಾಗಿದ್ದರು. ಆ ತೋಂಟದ ಸಿದ್ಧಲಿಂಗದೇಶಿಕರಿಗೆ ಬೋಳಬಸವಾಚಾರ್ಯನೆಂಬ ಶಿಷ್ಯನಿದ್ದನು. ಆ ಬೋಳಬಸವೇಶ್ವರನು ಗೂಳೂರ ಸಿದ್ಧವೀರಾಚಾರ್ಯನೆಂಬವನಿಗೆ ಅಲ್ಲಮ ಪ್ರಭುದೇವರ ಪರಮಾನುಭವ ಬೋಧೆಯನ್ನು ಆರುಹಿದನು. ಪ್ರಭುದೇವರು ಆಯಾಯ ಪ್ರಸಂಗಗಳಲ್ಲಿ ಪ್ರಸ್ಥಾಪಿಸಿದ ಅವೆಹೌಲ್ಯವಾದ ವಚನಗಳನ್ನು ಸಿದ್ಧವೀರಾಚಾರ್ಯನು ಪ್ರಶ್ನೋತ್ತರ ರೂಪದಲ್ಲಿ ಸಂಗ್ರಹಿಸಿ ಅದಕ್ಕೆ ಶೂನ್ಯ ಸಂಪಾದನೆಯೆಂದು ಹೆಸರಿಟ್ಟನು. ಈ ವಿಷಯದಲ್ಲಿ ಗೂಳೂರ ಸಿದ್ಧವೀರಾ

ಗಳಿಗೆ ದಿವ್ಯಜ್ಞಾನ ಪ್ರಸನ್ನಮಂ
ತನರ ವಚನಂಗಳಿಂದೆ ಸಂಗ್ರಹಿ

ಇನ್ನು "ಶೂನ್ಯ"ವೆಂದರೇ
ಶೂನ್ಯವೆಂದರೆ ಶ್ರೀ ಶಂಕರಾಚ
ವಲ್ಲ. ಜೈನರು ಪ್ರತಿಪಾದಿಸುವ
ವೆಂಬುದು ಸಚ್ಚಿದಾನಂದ ನಿತ್ಯ
ಈ ಮೂಲ ಲಿಂಗವು ಸರ್ವಶ
ತನ್ನೊಳಗಿನ ಎಳೆಗಳಿಂದಲೇ
ಲಿಂಗವು ಸ್ವೇಚ್ಛಾಲೀಲಾವಿಲಾ
ಬ್ರಹ್ಮಾಂಡಗಳನ್ನೂ ಅನಂತಕೋ
ಆತ್ಮರುಗಳು ಮುಂದೆ ಪಂಚವಿಂ
ಪರವೆಂದು ತಿಳಿದು ಜಾತಿ ವರ್ಣ
ಬಂಧಮೋಕ್ಷಗಳಿಗೆ ಬಲಿಬಿದ್ದವು.
ಜೀವರುಗಳಿಗೆ ದೇಹದ ಬಗ್ಗೆ ಹ
ಚನೆಮಾಡಿಸಬೇಕೆಂಬ ಸದಿಚ್ಛೆ
ಲಿಂಗಜಂಗಮರೂಪದಿಂದ ಭೂವಿ

ಈ ಪರಶಿವ ಲಿಂಗವು ಭ
ದೀಕ್ಷೆಯಿಂದ ಸಂಸಾರಿಗಳ ಮಲ
ಪವಾಗಿ ಬಂದು ಅವರ ಕರಸ್ಥಲ
ಪವಾಗಿ ಬಂದು ಅವರ ಅಂತರ
ದವ ಕರುಣಿಸಿಕೊಟ್ಟನು. ಆ
ವೇಶನು; ಲಿಂಗರೂಪವೇ ಚನ್ನ
ದೇವರು. ಈ ಮೇರೆಗೆ ಆ
ತ್ರಿವಿಧ ರೂಪದಿಂದ ಅವತರಿಸಿರ

ಗಳೊಡನೆ ಮಹಾನುಭಾವಗೋಷ್ಠಿಯನ್ನು ಮಾಡಿ ಮಾಯೆಯನ್ನು ಗೆದ್ದು ನಿರ್ಮಾಯ ನಿರಂಜನ ಮಾಯಾ ಕೋಲಾಹಲನೆಂಬ ಬಿರುದನ್ನು ಧರಿಸಿರುವದೇ ಸತ್ಯ. ಆದರೆ ಯಾರಾದರೂ ಪ್ರಭುದೇವರು ಮಾಯಾವಾದಿಗತನೆಂದು ಹೇಳಿದರೆ ಅವರಿಗೆ ಗುರುಲಿಂಗಜಂಗನು ದ್ರೋಹ ತಪ್ಪದೆಂದು ಹಡಪದ ಅಪ್ಪಣ್ಣಗಳು ಅಪ್ಪಣೆಯನ್ನು ಕೊಡಿಸಿದ್ದಾರೆ.

ಈ ಮೇರೆಗೆ ನಿಃಕಲ ಲಿಂಗದ ಜಂಗಮಸ್ವರೂಪವಾದ ಪ್ರಭುದೇವರು ಜಗತ್ತಿನಲ್ಲಿ ಅವತರಿಸಿ ಸಂಸಾರದಲ್ಲಿ ಬಳಲುವ ಜೀವರುಗಳಿಗೆ ಪರಮಾತ್ಮನ ನಿಲವನ್ನು ತಿಳಿಸಿ, ಆ ಪರಶಿವಲಿಂಗದಿಂದಲೇ ಈ ಜೀವಾತ್ಮವು ಲುಂಟಾಗಿರುವದೆಂಬದನ್ನರುಹಿ ಅವರಿಗೆ ಈ ಸಂಸಾರದಲ್ಲಿ ಹ್ಯೇಯವನ್ನು ಹುಟ್ಟಿಸಿ ಆ ಸಂಸಾರಕ್ಕೆ ಕಾರಣೀಭೂತವಾದ ಮಾಯೆಯನ್ನು ನಿವೃತ್ತಿಮಾಡಿದರು. ಈ ವಿಷಯಗಳಿಗನುರೂಪವಾಗಿ ಪ್ರಸ್ತಾವನೆಯಲ್ಲಿ ಪ್ರಭುದೇವರು (೧) ಪಿಂಡಸ್ಥಲ (೨) ಪಿಂಡಜ್ಞಾನಸ್ಥಲ (೩) ಸಂಸಾರ ಹ್ಯೇಯಸ್ಥಲ (೪) ಮಾಯಾವಿಲಾಸ ವಿಡಂಬನಸ್ಥಲ ಎಂಬೀ ನಾಲ್ಕು ಸ್ಥಲಗಳಲ್ಲಿ ಅನೇಕ ಸುಗಮವಾದ ವಚನಗಳಿಂದ ಸಂಸಾರಿಗಳಿಗೆ ಬೋಧೆ ಮಾಡಿರುವರು.

೧. ಪಿಂಡಸ್ಥಲ.

ಪ್ರಮಥರಲ್ಲಿ ಪ್ರಭುದೇವರು ಪರಮಾತ್ಮನ ನಿಲವನ್ನು ಕೆಳಗಿನ ವಚನದಲ್ಲಿ ನಿರೂಪಿಸಿದ್ದಾರೆ. ಇದಕ್ಕೆ ಪಿಂಡಸ್ಥಲವೆನ್ನುವರು. ಪಿಂಡವೆಂದರೆ ಜೀವಾತ್ಮನು.

ಕಲ್ಲೊಳಗಣ ಪಾವಕದಂತೆ ಉದಕದೊಳಗಣ ಪ್ರತಿಬಿಂಬದಂತೆ ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಶಬ್ದದಂತೆ ಗುಹೇಶ್ವರಾ ನಿಮ್ಮ ನಿಲವನನುಭವ ಸುಖಿ ಬಲ್ಲ॥

ಅಂದರೆ ಪರಶಿವಲಿಂಗವು ನಮ್ಮ ದೇಹದಲ್ಲಿ ಕಣ್ಣಿಗೆ ತೋರದಂತೆ ಅಡಗಿರುವಾಗಿದ್ದಾನೆಂಬರ್ಥ. ಅತನ ನಿಲವನ್ನು ಅನುಭಾವಿಯಾದ ಶರಣನೇ ಬಲ್ಲ.

ಸಕಲಪ್ರಪಂಚಗಳು ತೋರುವ
ಯಿಂದ ಹುಟ್ಟಿದೆನೆಂದು ಜೀವ
ಸ್ಥಲವೆನ್ನುವರು. ನಮ್ಮ ಈ
ಗಿರುತ್ತದೆ. ಆದರೆ ಜೀವವು
ದಿಂದಲೂ ಭಿನ್ನ ಭಿನ್ನ ಸಂಸ್ಕಾ
ದೇಹದಲ್ಲಿ ಮನೆಮಾಡಿಕೊಂಡಿ
ಹೊಸದಾದರೂ ಜೀವವು ಬಹ
ದಲ್ಲಿ ಪ್ರಭುದೇವರು ಅಪ್ಪಣೆಕೊ

ಆದಿ ಆಧಾರವಿಲ್ಲದಂದು,
ಸುರಾಳ ನಿರಾಳವಿಲ್ಲದಂದು
ಸಚರಾಚರವೆಲ್ಲ ರಚನೆಗೆ
ನುದಯಿಸಿದನಂದು ॥

ಅಂದರೆ ಜೀವಾತ್ಮನು ಈ ದೃಶ
ಪೂರ್ವದಲ್ಲಿ ಪರಶಿವಲಿಂಗದಿಂದ
ವದೇ ಪಿಂಡಜ್ಞಾನಸ್ಥಳವು.

ಮಹಾಜ್ಞಾನಿಗಳಾದ ಬಸ
ಯುಗಾಂತರಗಳ ಹಿಂದೆ ಯಾವ
ವರೆಂಬದನ್ನು ಸ್ಮರಿಸಿಕೊಂಡು ಪ
ರ್ಥವಾಗಿ ಇಲ್ಲಿ ಪ್ರಭುದೇವರ

ಕೃತಯುಗದಲ್ಲಿ ನಾನು ಸ
ತ್ರೇತಾಯುಗದಲ್ಲಿ ಶೂನ್ಯ
ದ್ವಾಪಾರಯುಗದಲ್ಲಿ ಅನಿ

೩ ಸಂಸಾರಹ್ಯೇಯಸ್ಥಲ.

ಅನಾದಿಗಣೇಶ್ವರತ್ವವನ್ನು ನಿರೂಪಿಸಿದ ಪ್ರಭುದೇವರು ಆದಿ ಚಿಚ್ಛಕ್ತಿಯಿಂದ ಹುಟ್ಟಿದ ಜೀವಾತ್ಮನು ತನ್ನಿಂದ ಭಿನ್ನವಾದ ಸಂಸಾರಭ್ರಾಂತಿಯನ್ನು ನಿವೃತ್ತಿಮಾಡಬೇಕೆಂದು ಅನೇಕ ವಚನಗಳಲ್ಲಿ ಪ್ರಸ್ತಾಪಿಸಿರುವರು. ಇದಕ್ಕೆ ಸಂಸಾರಹ್ಯೇಯಸ್ಥಳವೆನ್ನುವರು. ಆ ವಚನಗಳ ತಾತ್ಪರ್ಯವಿಷ್ಟೇ. ಈ ಸಂಸಾರದಲ್ಲಿ ತೊಳಲಾಡುವ ಜೀವಿಗಳು ತಮ್ಮನ್ನು ಹುಟ್ಟಿಸಿದ ಪರಶಿವಲಿಂಗವನ್ನು ಮರೆತುಬಿಟ್ಟಿದ್ದಾರೆ. ದೇಹವೇ ತಾವೆಂದು ತಿಳಿದು ಸುಖದುಃಖಗಳಿಗೀಡಾಗಿದ್ದಾರೆ. ಮೂರ್ತಿಮಂತಾದ ದೇಹವು ನಶ್ವರವಾದುದೆಂಬುದನ್ನರಿಯರು. ಈ ಸಂಸಾರದಲ್ಲಿ ಹುಟ್ಟು ಸಾವುಗಳು ಯಾರನ್ನೂ ಬಿಟ್ಟಿಲ್ಲ. ಸತ್ತ ದನವನ್ನು ತಿನ್ನಬೇಕೆಂದು ನಾಯಿಗಳು ಕಡಿದಾಡುವಂತೆ ಸಂಸಾರ ಜೀವಿಗಳು ತಮ್ಮ ಹೊಟ್ಟೆಯ ಸಲುವಾಗಿ ಪರಸ್ಪರ ಹೋರಾಡುತ್ತಿರುತ್ತವೆ. ಈ ಪ್ರಕಾರ ಅಂಗಸುಖಕ್ಕಾಗಿ ಹಂಬಲಿಸುವ ಸಂಸಾರಿಗಳಿಗೆ ಲಿಂಗದ ಪರಿವೆಯೇ ಇಲ್ಲ. ಸೂತ್ರದ ಬೊಂಬೆಯಂತಿದ್ದ ಈ ದೇಹವನ್ನು ನೆಚ್ಚಿ ಜೀವಿಗಳು ಸೂತ್ರಧಾರನನ್ನೇ ಮರೆಮಬಿಟ್ಟಿರುವರು. ಭೌತಿಕ ಪ್ರಪಂಚದಲ್ಲಿ ಮಾನವೀ ಅಘಟಿತ ಘಟನಾ ಕಾರ್ಯಗಳೇ ಜೀವರುಗಳನ್ನು ದಂಗುಬಡಿಸಿಬಿಟ್ಟಿವೆ. ಈ ಪ್ರಪಂಚದಲ್ಲಿ ದ್ರವ್ಯಲೋಭ, ಅನ್ನದಾಶೆಗಳಿಂದ ಒಬ್ಬರ ಕೊರಳನ್ನೊಬ್ಬರು ಕೊಯ್ಯಲು ಹಿಂದುಮುಂದು ನೋಡಲಾರರು. ದೂರ ದೂರ ವ್ಯಾಪಾರಮಾಡಿ ಜಗತ್ತಿನ ಪೇಟೆಯನ್ನೇ ಹರಣಮಾಡಬೇಕೆನ್ನುವ ದುರಾಶೆಯುಳ್ಳ ಜೀವರು ಅನ್ಯರ ಬಗ್ಗೆ ತಿಲಮಾತ್ರವಾದರೂ ದಯೆಯನ್ನು ತೋರಿಸದಾಗಿದ್ದಾರೆ. ಈ ದೇಹವೆಂಬ ಪಂಜರದಲ್ಲಿ ಜೀವವೆಂಬ ಗಿಳಿಯು ಇಂದ್ರಿಯಂಗಳೆಂಬ ಬೆಕ್ಕುಗಳ ಪಕ್ಕದಲ್ಲಿ ಸಿಕ್ಕು ಪೇಚಾಡುತ್ತಿದೆ. ಇತ್ಯಾದಿ

ಇಂಥ ದುಃಖಮಯವಾದ ಸಂಸಾರದಲ್ಲಿ ಆಸಕ್ತಿಯನ್ನು ತೊರೆದು ನಿರಂತರ ಆ ಪರಶಿವಲಿಂಗದಲ್ಲಿಯೇ ತಲ್ಲೀನ ಮನಸ್ಕರಾಗಿರೆಂದು ಪ್ರಭುದೇವರು ಸಂಸಾರಿಗಳಿಗುಪದೇಶಿಸಿದ್ದಾರೆ.

ನವನ್ನು ಬಿಟ್ಟು ಸಂಸಾರಕ್ಕೆಳಸ
ಹ್ಯೇಯವುಂಟಾದ ಮನುಷ್ಯನು
ಬಾರದು. ಇದಕ್ಕೆ ಮಾಯಾ
ಮಾಯೆಯ ಸ್ವರೂಪವನ್ನು ಪ್ರ
ವಿನೋದಪರವಾಗಿ ಹೇಳಿದ್ದಾರೆ
ಗಂಡಹೆಂಡರಲ್ಲಿ ಪ್ರೇಮವನ್ನು
ಗಳನ್ನು ಹಡೆಯಿಸುವದು ಮಾ
ಳೆನ್ನಳಿಸುವದು ಮಾಯೆ; ನಿಚ್ಚ
ಸುವದು ಮಾಯೆ; ಸೆರೆ ಸಿಂದಿ
ಮನೆಗೆ ಮನವೆಳಿಸುವದು ಮಾ
ಯ್ಯುವದು ಮಾಯೆ; ಸತ್ತವರ
ದೇಹವನ್ನು ಸುಟ್ಟು ಜೀವವ
ಪಂಚತತ್ವಗಳಿಂದ ಜಗತ್ತಿಗೆ ಅ
ಇಂದ್ರಿಯಂಗಳನ್ನು ಕೋಡಗನ
ನರು ಬಂದು ಹಿಡಿದೆಳೆಯುವಾಗ
ಭೂಮಿಯಲ್ಲಿ ಕಠಿಣತ್ವ ಆಕಾ
ಹಸಿವು ತೃಷೆಗಳ ತಾನು ನೆಲಿಸಿ
ಸಿತ್ತು ಮಾಯೆ; ಅಗ್ನಿಜಲಪ್ರಳಯ

ಆದುದರಿಂದ ಇಂಥ ಮಾ
ತೀತನಾದ ಪರವಸ್ತುವನ್ನು ನಂ
ದ್ದಾರೆ. ಇಲ್ಲಿಗೆ ಪ್ರಸ್ತಾವನೆಯು

ಭಕ್ತಿ.

೧ ಹೇ ವ್ಯಕ್ತಿಯೇ, ಸುಂದವಶ್ರುಗಳದೇಕೆ?
ಅವ್ಯಕ್ತನನು ಕಾಣಲೆಂದು ಹಂಬಲಿಕೆ!

೨ ಹಂಬಲದ ಬೆಂಬಲವೆ ಮುಂದರಿವ ದಾರಿ
ಮುಂಬಂದರಿನಿಸಾನು ಕಾಣ ಬಳಸಾರಿ!

೩ ಕಾಣನೇ? ಕಾಣೆಯಾ ಕಂಬನಿಗಳನ್ನು?
ಜಾಣನೇ ಪೇಳಿದರ ಗೂಢಾರ್ಥವನ್ನು.

೪ ತುಂಬಿರುವ ಕೊಳದೊಳಗೆ ಹಾರಲೇನೊದಗುವದು?
ಅಂಬುವನಿಗಳು ತುಳುಕಿ ಮೇಲ್ಬರುವವವು ಸಿಡಿದು.

೫ ಎದೆದುಂಬಿ ಕೊರಲ ಸೆರೆಯುಬ್ಬಿರುವದಲ್ತೇ!
ಉದ ನಿನ್ನ ಬಗೆದಿಪ್ಪಗಳು ಪೇಳ್ವವಲ್ತೇ?

೬ ಇಂತಿರಲು ಚಿಂತೆಯೇ? ಲಭಿಸುವದು ಬಗೆವಯಕೆ!
ಅಂತಾದೊಡೆಲ್ಲಿಹುದು ದುಗುಡವದು ಮನ್ಮನಕೆ?

೭ ನಂಬುಗೆಯ ತನಿರಸದಿ ತುಂಬಿರಲು ನಿನ್ನೆದೆಯು
ಕಂಬನಿಗಳೊಸರುವವೆಯವರೊಳಗೆ ಪರನಿಳೆಯೆ?

೮ ದಿಟದಿಟವು! ದಿಟದಿಟವು!! ನೀನೆನ್ನುವದು ದಿಟವು!!!
ಅಟಮಟವ ಮಾತಲ್ಲೆ? ನಂಬಲೇನೀ ವಚವ?

೯ ನಿನ್ನೊಳಗೆ ನೀ ನೋಡು, ಕಾಣ್ಬುದಾ ಪರವಸ್ತು!
ಮನ್ನಿಸುವೆನೀ ನುಡಿಯ! ನಿನಗೆ ಮಂಗಳಮಸ್ತು!

ಬಾಹ್ಯ ಆ

ಅಷ್ಟಾವರಣಗಳೆಂದರೆ
ಅವು ನಮ್ಮನ್ನು ಪಾಪದಿಂದಲ
ನಮ್ಮಲ್ಲಿ ಸ್ವಚ್ಛತೆ, ಆರೋಗ್ಯ
ವರಣಗಳು ಒಳ್ಳೆ ಸಾಧನಗ
ನಿಮಿತ್ತ ನಿರ್ಮಿತವಾಗಿ ಕೊ
ಸಕ್ಕೆ ಸಾಧನೀಭೂತವಾದವು.
ಶರೀರಶೋಭೆಗಳಿಗೆಂದು ಮಾಡಿ
ತವಶದಿಂದ ಆಧ್ಯಾತ್ಮಿಕದ ಜೆ
ರಣಗಳಾವವೆಂದರೆ:— (೧) ಗು
ದಕ (೫) ಪ್ರಸಾದ (೬) ವಿಭೂ

ತಾನು ಸದಾಚಾರಸಂಪ
ದೈವದವರಿಂದ ಅನುಜ್ಞೆ ಹೊಂದಿ
ಸಂಸ್ಕಾರವನ್ನು ಹೊಂದಿ ತನ್ನ
ಪರಿಶುದ್ಧತೆಗಳು ನೆಲೆಗೊಳ್ಳಲಿಂ
ಮಾಡಿ ನಿತ್ಯಾಚರಣೆಗಳನ್ನು ಪ
ಮಾಡುವವನೇ ಗುರುವು.

ಎಲ್ಲಿಡೆಯಲ್ಲಿಯೂ ಅಡ
ಇದೆಯೆಂಬುವದನ್ನು ತೋರ್ಪಡಿ
ದಲ್ಲಿ ಶ್ರೀ ಸದ್ಗುರುವಿನ ಹಸ್ತದಿ
ಚಿಹ್ನವೇ ಲಿಂಗವು.

ನಾವು ಊಟಮಾಡುವ ಆಹಾರದಲ್ಲಿ ಸಹ ಸಂಸ್ಕಾರ ವಿಶೇಷದಿಂದ ಒಂದು ತರಹದ ಶಿವಕಳೆಯನ್ನು ತುಂಬಿ ಆ ಭಾವವು ಬಲಿದು ಮನಸ್ಸಿನ ಪವಿತ್ರತೆಯಿಂದ ಸ್ವೀಕರಿಸುವ ಆಹಾರವೇ ಪ್ರಸಾದವು.

ನಮ್ಮ ಮೈಗೆ ಚಳಿಯು ತಗಲಬಾರದೆಂದೂ ಮೈಯ್ಯೊಳಗಿನ ಉಷ್ಣತೆಯು ಹೊರಗೆ ಹೋಗಬಾರದೆಂದೂ ತಿಳಿದು ಮೈಗೆ ತೊಡೆದುಕೊಳ್ಳುವ ಬೂದಿಯನ್ನು ಒಂದು ವಿಧಾನದಿಂದ ಪವಿತ್ರೀಕರಿಸಿ ಅದನ್ನೇ ಭಕ್ತಿ ಭಾವನೆಯಿಂದ ಸರ್ವಾಂಗಕ್ಕೂ ಲೇಪಿಸಿಕೊಂಡರೆ ಅದೇ ವಿಭೂತಿಯೆನಿಸುತ್ತದೆ.

ತನ್ನ ದೇಹವು ಶೋಭಾಯಮಾನವಾಗಿ ಕಾಣಲೆಂದು ಒಂದಾನೊಂದು ಕಾಲದಲ್ಲಿ ನಮ್ಮ ಪೂರ್ವಜರು ಧರಿಸಿಕೊಳ್ಳುತ್ತಿದ್ದ ಗಿಡದ ಕಾಯಿಗಳನ್ನೇ ಕಾಲಾಂತರದಿಂದ ಸಂಸ್ಕಾರಮಾಡಿ ಅವು ಪರಮಪವಿತ್ರ ವಸ್ತುಗಳೆಂದು ಧರಿಸುತ್ತ ಬಂದರು. ಇವೇ ರುದ್ರಾಕ್ಷಿಗಳು.

ಗುಪ್ತವಾಗಿಟ್ಟ ಮಾತಿನಲ್ಲಾಗಲಿ ವಸ್ತುವಿನಲ್ಲಾಗಲಿ ಮಹತ್ವವು ಹೆಚ್ಚಾಗಿರುತ್ತದೆಂಬ ತತ್ವವನ್ನೊಳಕೊಂಡ ಪಂಚಾಕ್ಷರೀ ಮತ್ತು ಷಡಕ್ಷರೀ ಮಂತ್ರಗಳನ್ನು ಬಹುದಿವಸಗಳಿಂದ ನಮ್ಮ ಹಿರಿಯರು ಗುಪ್ತವಾಗಿಡುತ್ತ ಬಂದಿದ್ದಾರೆ. ಗೌಪ್ಯವಾಗಿಟ್ಟ ಅಪಾರ ಶಕ್ತಿಯುಳ್ಳ ಶಬ್ದವೇ ಮಂತ್ರವೆನಿಸುತ್ತದೆ.

ಜನರಲ್ಲಿ ಶ್ರದ್ಧಾ ಭಾವನೆಗಳನ್ನು ಬೆಳೆಯಿಸಲಿಕ್ಕೆ ಸಂಸ್ಕಾರಗಳ ಉತ್ಪತ್ತಿಯಾಯಿತು. ನಿಷ್ಠೆಯಿಂದ ಅಷ್ಟಾವರಣಗಳನ್ನನುಸರಿಸಿ ನಡೆದರೆ ನಿಜವಾಗಿಯೂ ನಮ್ಮ ರಕ್ಷಣೆಯಾಗುವದು.

ಗುರು.

ನಮ್ಮ ವೀರಶೈವ ಧರ್ಮವು ಆಗಮದಿಂದ ಪ್ರತಿಪಾದಿತವಾಗಿದೆ. ಆಗಮಕಾಲದಲ್ಲಿ ನಮ್ಮ ಯೋಗಿವರೇಣ್ಯರು ಅಡವಿಯಲ್ಲಿ ವಾಸವಾಡಿ

ಆದರೆ ಕಾಲಾನುತೋಧದಿಂದ ಗುರುಗಳನ್ನು ಆರಿಸುವ ಪರಿಪಾಟು ನಿಂತು ಗುರುಸಂತತಿಯವರಿಗೆ ಗುರುಗಳೆಂದು ಕರೆಯುವ ಸಾಂಪ್ರದಾಯವುಂಟಾಯಿತು. ಅದಕ್ಕೆ ವೈವದವರು ಅಂಧಶ್ರದ್ಧೆಯಿಂದ ಒಪ್ಪಿಗೆಯನ್ನು ಕೊಡುತ್ತ ಬಂದರು. ಈ ರೂಢಾಚಾರವೇನೂ ನಿರಂಕುಶ ಪ್ರಭುತ್ವದ ಸೊತ್ತಲ್ಲ. ಸಮಾಜದವರಿಗೆ ತಮಗೆ ಯುಕ್ತ ಕಂಡವರನ್ನು ಗುರುಗಳನ್ನು ಮಾಡಿಕೊಳ್ಳಲು ಸರ್ವಾಧಿಕಾರವಿದೆ.

ಲಿಂಗ.

ವೈವ ಧರ್ಮದಿಂದಲೇ ವೀರಶೈವ ಧರ್ಮವು ಉತ್ಕ್ರಾಂತಿಯನ್ನು ಹೊಂದಿದೆಯೆಂಬದನ್ನು ತೋರಿಸಲಿಕ್ಕೆ ಲಿಂಗವು ಒಳ್ಳೆ ದೃಷ್ಟಾಂತವಾಗಿದೆ. ಗುಡಿಗುಂಡಾರಗಳಲ್ಲಿ ಕಂಡುಬರುವ ಸ್ಥಾವರ ಲಿಂಗಾಕಾರದ ಪೀಠಕಗಳ ಮೇಲೆ ಕಾಂತಿಯನ್ನು ಕೂಡ್ರಿಸಿ ಅದಕ್ಕೆ ಲಿಂಗವೆಂದು ಹೆಸರಿಟ್ಟರು. ವೈವಧರ್ಮವು ಸ್ಥಾವರಲಿಂಗ ಪೂಜೆಯನ್ನು ಪ್ರತಿಪಾದಿಸುತ್ತದೆ. ವೀರಶೈವ ಧರ್ಮವು ಇಷ್ಟಲಿಂಗ ಪೂಜೆಯನ್ನು ಪ್ರತಿಪಾದಿಸುತ್ತದೆ. ಗುಡಿಯಲ್ಲಿರುವ ಒಬ್ಬ ದೇವರನ್ನು ಎಲ್ಲರೂ ಸರಿಯಾಗಿ ಪೂಜೆ ಪುನಸ್ಕಾರಗಳನ್ನು ಮಾಡಲಿಕ್ಕೆ ತೊಂದರೆಯಾಗುವದೆಂದು ತಿಳಿದು ಲಿಂಗಧಾರಣೆಯ ಶೋಧವನ್ನು ನವ್ಯ ಆರ್ಯರು ಪ್ರಚಾರದಲ್ಲಿ ತಂದರು. ತನ್ನ ಮೈಮೇಲಿರುವ ದೇವರನ್ನು ತಾನು ಬೇಕಾದಷ್ಟುಸಾರೆ ಸ್ವತಂತ್ರತೆಯಿಂದ ಪೂಜಿಸಲು ಯಾರ ಅಕ್ಷೇಪವೂ ಇಲ್ಲ. ತಮ್ಮ ದೇವರನ್ನು ದೇಹದ ಮೇಲೆ ಧರಿಸಿಕೊಂಡು ತಿರುಗಾಡುವ ವ್ಯಕ್ತಿಗಳು ಜಗತ್ತಿನಲ್ಲಿ ವೀರಶೈವರೊಬ್ಬರೇ. ವೀರಶೈವರಲ್ಲಿ ಲಿಂಗಧಾರಣೆಗೆ ಹೆಣ್ಣುಗಂಡೆಂಬ ಭೇದಭಾವವಿಲ್ಲ. ಈ ಲಿಂಗ ಧಾರಣ ಶೋಧದಿಂದ ಪ್ರತಿಯೊಂದು ವ್ಯಕ್ತಿಗೆ ಆತ್ಮವಿಕಾಸಮಾಡಿಕೊಳ್ಳಲು ಬೇಕಾದಷ್ಟ ಅವಕಾಶವಿರುತ್ತದೆ.

ಲಿಂಗವು ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗವೆಂದು ತ್ರಿವಿಧವಾಗಿರುವದು. ಇಷ್ಟಲಿಂಗವನ್ನು ಈ ಸ್ಥೂಲತನುವಿನ ಮೇಲೆ ಧರಿಸುತ್ತಾರೆ. ಪ್ರಾಣಲಿಂಗವನ್ನು ಸೂಕ್ಷ್ಮತನುವಿನ ಮೇಲೆ ಧರಿಸುತ್ತಾರೆ.

ಬಾಹ್ಯ ಅಷ್ಟ

ಶುದ್ಧವಾಗುತ್ತದೆ. ಪ್ರಾಣಲಿಂಗದಿ
ಭಾವಲಿಂಗದಿಂದ ನಮ್ಮ ಭಾವ
ಭಾವಗಳನ್ನು ಪರಿಶುದ್ಧಗೊಳಿಸುವ
ಸಿಯನ್ನು ಮಾಡಿದ್ದಾರೆ. ಇಷ್ಟಲಿ
ದಿಗಳಿಂದ ತನ್ನ ತನುವನ್ನು ಸ್ವಚ್ಛ
ದೇಹದ ಹೊಲಸು ಅಥವಾ ಅ
ಲಿಂಗಧಾರಿಯು ನಿರಂತರ ಪ
ಬಹುಕಾಲದಿಂದ ಬಂದ ರಕ್ತ ಸ
ವವು. ಅಂದರೆ ಅವನ ಮಾಯ
ಲಿಂಗ ಪರಾಯಣನು ತನ್ನ ಭಾ
ಪಾಪದ ಫಲಗಳನ್ನು ಅನುಭವಿಸು
ಭಸ್ಮವಾಗುವಂತೆ ಭಾವಪರಿಶುದ್ಧ
ಪರಿಹಾರವಾಗುವವು.

ಲಿಂಗಪೂಜೆಯು ಮನಸ್ಸನ
ಯವಾಗಿದೆ. ಲಿಂಗನಿಷ್ಠರು ತಾವ
ವೆಂದು ತಿಳಿದು ಜ್ಞೋಪಾನವಾ
ಣಗಳು ಲಿಂಗ ಕಳೆದರೆ ಆತ್ಮಘಾ
ವಿಧಾನವನ್ನು ಮೇರೆಗೊಳಿಸಲಿಕ್ಕೆ
ಹೇಗೆ ಪ್ರೇಮುವೆನಿಸುತ್ತದೆಯೋ
ಯುವದೋ ಹಾಗೆ ಅವರು ಪೂಜ
ನೆಂಬುದೇ ಶಿವಮಂತ್ರ। ನನ್ನಯ್ಯ
ಹರಿಹರಾಚಾರ್ಯರು ನುಡಿದಿರ
ಧರ್ಮದ ಕಟ್ಟಳೆಯಿದೆ. ಪೂಜಾ
ತೆಗೆ ಬಿಡಲ್ಪಟ್ಟಿನೆ.

ಮತಪ್ರಸಾರಕಾರ್ಯವನ್ನು ಮಾಡುತ್ತಿದ್ದರಲ್ಲದೆ ಲೋಕಸಂಗ್ರಹಕಾರ್ಯದಲ್ಲಿಯೂ ತತ್ಪರರಾಗಿದ್ದರು. ಹಿಂದಕ್ಕೆ ಮಳೆಯಮಲ್ಲಯ್ಯನವರೆಂಬ ಜಂಗಮ ಮೂರ್ತಿಗಳು ಅರಬಸ್ಥಾನಕ್ಕೆ ದಯಮಾಡಿಸಿ ಎಷ್ಟೋ ಜನ ಖಲೀಂದ್ರರಿಗೆ ವೀರಶೈವ ದೀಕ್ಷೆಯನ್ನು ಕೊಟ್ಟರೆಂದು ಇತಿಹಾಸದಿಂದ ತಿಳಿಯುತ್ತದೆ. ಅಧ್ಯಾತ್ಮಿಕ ವಿಷಯವನ್ನು ಕುರಿತು ವೀರಶೈವ ಜಂಗಮರು ಶಂಕರಾಚಾರ್ಯರೊಡನೆ ವಾದ ಮಾಡಿದರೆಂದು ಉಲ್ಲೇಖಗಳ ಮೇಲಿಂದ ಕಂಡುಬರುತ್ತದೆ. ಇದರ ಮೇಲಿಂದ ಜಂಗಮರೆಂದರೆ ಸುಜ್ಞಾನಿಗಳು ಲೋಕಸಂಗ್ರಹ ಕಾರ್ಯಕರ್ತರು ಇದ್ದರೆಂದು ಗೊತ್ತಾಗುವದು. ಜಂಗಮರು ಮಹಾವೈರಾಗ್ಯಶಾಲಿಗಳೂ ಹೊನ್ನು ಹೆಣ್ಣು ಮಣ್ಣಿನಾಶೆಯನ್ನು ತೊರೆದವರೂ ಆಗಿದ್ದರು.

ಜಂಗಮರಲ್ಲಿ ಸ್ಥಿರ, ಚರ, ಪರರೆಂದು ಮೂರು ವಿಭಾಗವಾಗಿದ್ದಾರೆ. ಸ್ಥಿರ ಜಂಗಮರೆಂದರೆ ಒತ್ತಟ್ಟಿಗೆ ಭಕ್ತಾದಿಗಳು ಕಟ್ಟಿಸಿಕೊಟ್ಟ ಮಠದಲ್ಲಿದ್ದುಕೊಂಡು ಪರಮ ವೈರಾಗ್ಯಶಾಲಿಗಳಾಗಿ ತಮ್ಮ ಶುದ್ಧಾಚರಣೆಯಿಂದ ಭಕ್ತಾದಿಗಳಿಗೆ ಮಾರ್ಗದರ್ಶಿಗಳಾಗಿರತಕ್ಕಂಥವರು. ಚರಜಂಗಮರೆಂದರೆ ಲೋಕೋಪಕಾರಾರ್ಥವಾಗಿಯೂ ಮತಪ್ರಸಾರದ ಸಲುವಾಗಿಯೂ ಜಗತ್ತಿನಲ್ಲಿ ಸಂಚರಿಸುವಂಥವರು. ಇವರು ವಿಶ್ವಕುಟುಂಬಿಗಳು. ಜಗತ್ತೇ ತಮ್ಮದೆಂದು ಅದರ ಸೇವೆ ಮಾಡುವಂಥವರು. "ಸ್ವಾರ್ಥೋ ಯಸ್ಯ ಪರಾರ್ಥ ಏವ ಸ ಪುಮಾನ್ ಲೋಕೇ ಸತಾಮಗ್ರಣೀಃ" ಎಂಬ ಭಾರತವಾಕ್ಯವು ಜಂಗಮರ ಕರ್ತವ್ಯಕ್ಕೆ ಅನುಗುಣವಾಗಿದೆ. ಪರಜಂಗಮರೆಂದರೆ ಮಹಾಜ್ಞಾನಿಗಳು, ತಪೋನಿಷ್ಠರು, ಶಿವಯೋಗಿಗಳು, ಅವತಾರಿ ಪುರುಷರು, ಲೋಕದೊಳಗಿದ್ದು ಇಲ್ಲದ ಮಹಿಮರು, ಬೇಕು ಬೇಡೆಂಬೆರಡು ಭವಬೀಜಗಳನ್ನು ಹುರಿದವರು, ವೇದಶಾಸ್ತ್ರಕ್ಕೆ ನಿಲುಕದವಂಥವರು. ಅವರ ನುಡಿಯೇ ನುಡಿಯು, ಅವರ ನಡೆಯೇ ನಡೆಯು. ಇಂಥವರು ಜಗದಲ್ಲಿ ಬಹುವಿರಳ. ಇಂಥವರೊಡನೆ ಸರಸವಾಡುವ ಮೂಢರು ಉರಿಕೊಳ್ಳಿಯಿಂದ ತಲೆಯನ್ನು ತುರಿಸಿಕೊಂಡಂತೆಯೂ ಹಾವಿನ ಹೆಡೆಗೆ ಮುದ್ದಿಡುವಂತೆಯೂ ಹಿಂಸೆಪಡುವರು.

ಚಿಮ್ಮುವದು. ಎರಿನಿಂದ ಇಳುಕಲಿಗೆ ಹರಿಯುವದು ನೀರಿನ ಗುಣಧರ್ಮವಾಗಿರುವದರಿಂದ ಗುರುವಿನ ಶಿರದ ಜ್ಞಾನಗಂಗೆಯು ಅಧೋಮುಖವಾಗಿ ಹರಿದು ಪಾದಾಗ್ರದಿಂದ ಹೊರಸೂಸುವದು. ಆ ಸುಜ್ಞಾನಜಲವನ್ನೇ ಪಾದೋದಕವೆಂದು ಭಾವಿಸಿ ಭಕ್ತನು ಸ್ವೀಕರಿಸುವನು.

ಪಾದೋದಕದಲ್ಲಿ ಗುರುಪಾದೋದಕ, ಲಿಂಗಪಾದೋದಕ, ಜಂಗಮಪಾದೋದಕವೆಂದು ಮೂರು ತೆರನುಂಟು. ವೀರಶೈವರು ಗುರುಲಿಂಗಜಂಗಮದಲ್ಲಿ ಭೇದವನ್ನೆಣಿಸುವದಿಲ್ಲ. ಒಬ್ಬನೇ ದೇವರು ಕಾರ್ಯವಶದಿಂದ ಮೂರು ರೂಪವಾಗಿ ಭೂಮಿಯಲ್ಲಿ ಅವತೀರ್ಣನಿರುವನೆಂದು ತಿಳಿಯುತ್ತಾರೆ. ಗುರುವು ಸದ್ಬೋಧೆ ಮಾಡುವ ದೇವರು, ಲಿಂಗವು ಪೂಜೆಗೊಳ್ಳುವ ದೇವರು, ಜಂಗಮವು ಮೋಕ್ಷಕ್ಕೆ ಸಾಧನೀಭೂತವಾದ ಸುಜ್ಞಾನವನ್ನು ದಯಪಾಲಿಸುವ ದೇವರು. ಈ ಮೂವರ ಅನುಗ್ರಹ ಕರುಣೆಯನ್ನು ಪಡೆದುಕೊಳ್ಳುವದೇ ಪಾದೋದಕ ಸೇವನೆಯು.

ಗುರುಲಿಂಗಜಂಗಮ ಶಬ್ದಗಳು ಸಂಬಂಧವಾಚಕವಿರುವದರಿಂದ ಅವುಗಳಲ್ಲಿ ತಾರತಮ್ಯವನ್ನೆಣಿಸಕೂಡದು. ಗುರುವು ಮೊದಲು ಲಿಂಗಧಾರಣಮಾಡುವದರಿಂದ ಗುರುವಿಗೆ ಪ್ರಾಧಾನ್ಯಬರುತ್ತದೆ. ಲಿಂಗಪೂಜೆಯಿಂದ ಗುರುಶಿಷ್ಯರಿಬ್ಬರೂ ಉದ್ಧಾರವಾಗುವದರಿಂದ ಲಿಂಗಕ್ಕೆ ಪ್ರಾಶಸ್ತ್ಯವುಂಟಾಗುತ್ತದೆ. ಲಿಂಗಪೂಜೆಯ ಫಲವೇ ಜಂಗಮವು ಅರ್ಥಾತ್ ಸುಜ್ಞಾನವಾಗಿರುವದರಿಂದ ಜಂಗಮಕ್ಕೆ ಅಧಿಕ್ಯವುಂಟಾಗುವದು. ಆದರೆ ಗುರುಲಿಂಗಗಳ ಸಹಾಯವಿಲ್ಲದೆ ಜಂಗಮತ್ವವು ಪ್ರಾಪ್ತವಾಗಲಾರದು. ಕಾರಣ ಗುರುಲಿಂಗಜಂಗಮದಲ್ಲಿ ಭೇದವನ್ನೆಣಿಸದೆ ಅವರ ಪಾದೋದಕವನ್ನು ಸೇವಿಸಬೇಕೆಂದು ನಮ್ಮ ಧರ್ಮವು ಸಾರುತ್ತದೆ.

ಮಹಾನುಭಾವಿಗಳ ಪಾದಧೂಳಿಯನ್ನು ಶಿರದಲ್ಲಾಂತು ಅವರ ಪಾದತೀರ್ಥವನ್ನು ಸೇವಿಸುವದು ವಿಹಿತವೆಂದು

ಬಾಹ್ಯ

ಲಿಂಗಪೂಜೆಯಾದ ಬಳಿ
ನದು. ಪ್ರಸಾದವನ್ನು ಒಡಲ
ತೆಯಿಂದಾಗಲಿ ಸೇವಿಸದಿರುವದೆ
ಯಲ್ಲಿ ಬಂದ ಶುದ್ಧ ಆಹಾರವ
ಗೊಮ್ಮೆ ಶಿವಾಶರಣೆನ್ನುತ್ತ ಸೆ
ಸೇವಿಸುವಾಗ ಮನಸ್ಸು ಅತ್ತಿತ್ತ
ವಿನಲ್ಲಿಯೇ ತಲ್ಲೀನವಾಗಿರಿಸುವದ
ಸೇವಿಸುವ ಆಹಾರದಿಂದಲೇ ವ
ಉತ್ಪತ್ತಿಯಾಗುವದರಿಂದ ನಾವು
ಪಿಂಡವನ್ನು ಬೆಳೆಯಿಸುವದಕ್ಕಿಂ
ಯಿಂದ ಪ್ರಸಾದ ಸೇವಿಸಿ ಮಂತ್ರ
ಮಾಂಸ ಪಿಂಡಿಯು ಪಾಶವಿಕ
ಮಂತ್ರಪಿಂಡಿಯು ಆಚಾರ ವಿ
ಹೋಗುತ್ತಾನೆ. ಇದರಿಂದ ನಾ
ಧರ್ಮಕ್ಕೂ ನಿಕಟಸಂಬಂಧವಿರ

ಪ್ರಸಾದದಲ್ಲಿ ಶುದ್ಧ, ಸಿ
ಭಾಗಗಳನ್ನು ಕಲ್ಪಿಸಿದ್ದಾರೆ.
ಹಾರವು. ನಿಷಿದ್ಧವಾದ ಮದ್ಯಮ
ಹಾಲು, ಹಣ್ಣು, ಹಂಪಲ ಮೆ
ಪ್ರಸಿದ್ಧ ಪ್ರಸಾದವೆಂದರೆ ತಪ್ಪೊ
ಗಳು. ಒಪ್ಪಿನ ಮೇಲೆ ವೀರಶೈವ
ಗಳಲ್ಲಿ ಸಾತ್ವಿಕ ಗುಣಗಳೇ ಪ್ರಾ
ಬೇಕಾಗಿಲ್ಲ.

ಮಾಂಸ ಮದ್ಯಗಳನ್ನು ಸೇವಿಸಲಿಕ್ಕೆ ಹೇಳುವದಿಲ್ಲವೆಂದು ಏಕೆ ತಿಳಿಯಬಾರದು? ಅವರ ಕಾಲಸ್ಥಿತಿಯು ವಿಪರೀತವಾಗಿರುವದರಿಂದ ಜಾತಿ ಜಾತಿಗಳಲ್ಲಿ ವೈರಭಾವನವಡಗಿ ಮೈತ್ರಿಯು ಬೆಳೆಯುತ್ತ ನಡೆದಿರುವ ಕಾರಣ ಒಂದೇ ಮನೆಯವರಂತೆ ಅವರು ಪರಸ್ಪರ ಊಟ ಫಲಾಹಾರಗಳನ್ನು ನಡೆಯಿಸುವದುಂಟು. ಧಾರ್ಮಿಕ ಕಟ್ಟಳೆಗೆ ಹೀಗೆ ಮಾಡುವದು ವಿರುದ್ಧವಾದರೂ ದೇಶಬಾಂಧವರಲ್ಲಿ ಪರಸ್ಪರ ಪ್ರೇಮವು ಹೆಚ್ಚುತ್ತಿರುವದು ರಾಷ್ಟ್ರದ ಭಾಗ್ಯೋದಯವೆಂದೇ ಅನೇಕರು ಭಾವಿಸಿದ್ದಾರೆ. ಈ ಮಾತು ರಾಷ್ಟ್ರಹಿತದ ದೃಷ್ಟಿಯಿಂದ ಒಳಿತಾದುದು. ನಾಲಿಗೆಯ ಚಾಪಲ್ಯಕ್ಕಾಗಿ ಅವರು ಪರಸ್ಪರ ಸಹಭೋಜನವಾಡದೆ ಸ್ನೇಹಭಾವದಿಂದ ಮಾತುತ್ತಿದ್ದಾರೆ.

ಈಗಿನ ವಾತಾವರಣವೇ ವಿಪರೀತವಾಗಿದೆ. ಧರ್ಮದ ಕಟ್ಟಳೆಗಳೆಲ್ಲ ಶಿಥಿಲವಾಗಿ ಅವು ರಾಜಕೀಯ ಸ್ವರೂಪವನ್ನು ಹೊಂದಲಾರಂಭಿಸಿವೆ. ಸ್ವಾಮಿಗಳಲ್ಲಿ ಪೂಜ್ಯತೆಯಿಲ್ಲ. ಭಕ್ತರಲ್ಲಿ ಪೂಜ್ಯಭಾವನೆಯಿಲ್ಲ. ಒಬ್ಬರ ಅವಗುಣಗಳನ್ನೊಬ್ಬರು ಬೈಲಿಗಿಡಲು ಮುಂದುವರಿಯುವರಲ್ಲದೆ ಒಬ್ಬರನ್ನು ಇನ್ನೊಬ್ಬರು ಸುಧಾರಿಸುವ ಎದೆಗಾರಿಕೆಯು ಯಾರಿಗೂ ಇಲ್ಲ. ರಾಜಕೀಯ ಶಾಸನಗಳ ಬಲವಿಲ್ಲದೆ ಸಮಾಜವನ್ನು ಭದ್ರವಾಗಿಡುವದು ಸುಲಭಸಾಧ್ಯವಲ್ಲ.

ವಿಭೂತಿ.

ನಮ್ಮ ಪೂರ್ವಜರು ಒಂದಾನೊಂದು ಕಾಲದಲ್ಲಿ ತೀರ ಕಾಡುಸ್ಥಿತಿಯಲ್ಲಿದ್ದಾಗ ಆಕಳುಗಳನ್ನು ಸಾಕಿಕೊಂಡು ಅವುಗಳ ಹಾಲು ಕುಡಿದು ಉಪಜೀವಿಸುತ್ತಿದ್ದರು. ಕೃಷಿಯನ್ನೂ ಆಗ ಮಾಡುತ್ತಿದ್ದರು. ಅವರಿಗೆ ಹೊದೆಯಲಿಕ್ಕೆ ಬಟ್ಟೆಗಳೇನೂ ಇದ್ದಂತೆ ಕಾಣುವದಿಲ್ಲ. ಅವರು ಅಹಿಂಸಾವಾದಿಗಳಾದ್ದರಿಂದ ಹುಲಿಯ ಚರ್ಮವನ್ನಾಗಲಿ ಕೃಷ್ಣಾಜಿನವನ್ನಾಗಲಿ ಉಪಯೋಗಿಸುತ್ತಿರಲಿಲ್ಲ. ನೂಲಿನ ಹಾಗೂ ಉಣ್ಣೆಯ ಬಟ್ಟೆಗಳ

ಬಾಹ್ಯ ಆಚ

ಪ್ರಚಾರದಲ್ಲಿ ಬಂದರೂ ಹಿರಿಯ
ಅವರ ಸಂತತಿಯವರು ಜಳಕ
ವನ್ನು ಹಚ್ಚಿಕೊಳ್ಳುತ್ತ ಬಂದರು
ರಣಹೊಂದಿ ಆ ಬೂದಿಯಲ್ಲಿ ಅ
ಧರಿಸಿದರೆ ಸರ್ವ ಪಾಪಗಳು ನಾ
ಅದಕ್ಕೆ ಉದಾತ್ತ ಸ್ವರೂಪವನ್ನು
ಅದನ್ನು ಧರಿಸಹತ್ತಿದರು.

ಮುಂದೆ ಆ ಭಸ್ಮವು ಸಂಸ್
ಪುಟ್ಟ ಕ್ರಿಯಾಪುಟ್ಟಗಳೆಂಬೆರಡು ಪ
ರಿತು. ಆಮೇಲೆ ಅದಕ್ಕೆ ವಿಭೂ
ಟ್ಟಿತು. ಜಗತ್ತಿನಲ್ಲಿರುವ ಪ್ರತಿಯೆ
ಶಾಸ್ತ್ರದ ಇತಿಹಾಸವನ್ನು ನೋಡಿ
ಬೆಳೆಯಿತು, ಹೇಗೆ ಪರ್ಯಾಯ
ಯುಕ್ತವಾದ ಪ್ರಶ್ನೆಗಳನ್ನೊಳಕೊ
ಉತ್ಕ್ರಾಂತಿಯ ಚಿಹ್ನಗಳು. ಕ
ಬಂದಾಗ ಅನೇಕ ವ್ಯತ್ಯಾಸಗಳನ

ಸದ್ಯಕ್ಕೆ ಹೇರಳವಾಗಿ ಒ
ಭಸ್ಮವನ್ನು ಧರಿಸಿ ಚಳಿಯನ್ನು ಕಳೆ
ಇರುವದಿಲ್ಲ. ಹಾಸಿಗೆ ಹೊದಿಕೆಗ
ಆದರೆ ನಮ್ಮ ಧರ್ಮದಲ್ಲಿ ವಿಭೂ
ಕಲ್ಪಿಸಿ ಅದರ ಮಹತ್ವವನ್ನು ಹೆ
ಬೇಕುಬೇಕಾದ ವಸ್ತುವಿನಲ್ಲಿ ಇಲ್ಲ
ಬಹುಶಃ ಎಲ್ಲ ಧರ್ಮದಲ್ಲಿಯೂ
ಅನೇಕರು ನಿಜವಾದ ಆನಂದಶಾಂ
ಒಂದು ರೀತಿಯಿಂದ

ವರಂಗೆ ಸಿಟ್ಟುವಾತಿ ತಮ್ಮ ಒಣ ಹೆಮ್ಮೆಯನ್ನು ಕಾಪಾಡಿಕೊಳ್ಳುವರು. ಅವುಗಳನ್ನು ವಿಶ್ವಾಸವಿಲ್ಲದಿದ್ದರೂ ಸುಶಿಕ್ಷಿತರೂ ಕೂಡ ಅಂಧಶ್ರದ್ಧೆಯಿಂದ ಪಾಲಿಸುತ್ತಬಂದಿದ್ದಾರೆ. ಕೆಲವು ಸುವಿಚಾರಿಗಳು ಈ ಸಂಸ್ಕಾರ ವಿಧಾನಗಳಿಗೆ ವಿರೋಧಬಟ್ಟರೂ ಬಹು ಜನರು ರೂಢಿಯ ದಾಸರಾಗಿರುವದರಿಂದ ಅವುಗಳನ್ನು ವ್ಯತ್ಯಾಸವಾಡಲಿಕ್ಕಾಗುವದಿಲ್ಲ. ವಿಭೂತಿ ಧರಿಸುವದರಿಂದ ಪಾಪಗಳು ನಾಶವಾಗುತ್ತಿದ್ದರೆ ವಿಭೂತಿ ಧರಿಸಿದ ಅನೇಕ ಮಹನೀಯರು ಎಷ್ಟೋ ಪಾಪಾಚರಣೆಗಳನ್ನೇಕೆ ಮಾಡುತ್ತಿದ್ದಾರೆ? ನಿಜವಾಗಿ ನೋಡಿದರೆ ಅಂಧಶ್ರದ್ಧೆಯುಳ್ಳ ಭಕ್ತರಲ್ಲಿ ಒಂದು ತರಹದ ಪವಿತ್ರ ಭಾವನೆಯು ನೆಲೆಗೊಳ್ಳಲೆಂದೂ ಅವರಿಂದ ಪಾಪಕಾರ್ಯಗಳು ಘಟಿಸಬಾರದೆಂದೂ ವಿಭೂತಿಧಾರಣೆಯ ತತ್ವವನ್ನು ನಮ್ಮ ಆರ್ಯರು ಪ್ರಚಾರದಲ್ಲಿ ತಂದಿರಬಹುದು. ವಿಭೂತಿ ಧರಿಸುವವರ ಪಾಪಗಳು ನಾಶವಾಗುವವೆಂದರೆ ಅವರು ಪಾಪಗಳನ್ನು ಮಾಡಬಾರದೆಂದು ಎಚ್ಚರಿಕೆಯನ್ನು ಕೊಟ್ಟಂತೆಯೇ ಸರಿ.

ರುದ್ರಾಕ್ಷಿ.

ದೇಹದ ಮೇಲೆ ಆಲಂಕಾರಗಳನ್ನು ಧರಿಸಿ ಸುಂದರವಾಗಿ ಕಾಣಬೇಕೆಂಬ ಕಲ್ಪನೆಯು ಈಗ ಇದ್ದಂತೆ ಹಿಂದಕ್ಕೂ ಇದ್ದಿತು. ಪೂರ್ವದಲ್ಲಿ ಅರಣ್ಯದೊಳಗೆ ಕಾಲಹರಣ ಮಾಡುತ್ತಿದ್ದ ನಮ್ಮ ಆರ್ಯರು ರುದ್ರಾಕ್ಷಿಗಳೆಂಬ ಗಿಡದ ಕಾಯಿಗಳಿಗೆ ಮೋಹಗೊಂಡು ಸರವನ್ನಾಗಿ ಮಾಡಿ ಕೊರಳಲ್ಲಿ ಧರಿಸುತ್ತಿದ್ದರು. ಅದರಂತೆ ಉಳಿದವರು ತುಳಸೀ ಮಣಿಗಳನ್ನು ತಳೆಯುತ್ತಿದ್ದರು. ಆದರೆ ಮುತ್ತು ರತ್ನಹಾರಾದಿಗಳ ಈಗಿನ ನವಯುಗದಲ್ಲಿ ರುದ್ರಾಕ್ಷಿ ಸರಗಳಿಗೆ ಅಲಂಕಾರ ದೃಷ್ಟಿಯಿಂದ ಸ್ವಲ್ಪೂ ಮಹತ್ವವಿಲ್ಲ ಮೊದಲು ಅಲಂಕಾರವೆಂದು ತಿಳಿಯಲ್ಪಟ್ಟ ರುದ್ರಾಕ್ಷಿಗಳು ಉತ್ಪತ್ತಿಯಾದದಿಂದ ಶಿವನ ನೇತ್ರಗಳೆಂದೂ ಅವುಗಳನ್ನು ಧರಿಸುವವರಿಗೆ ರೋಗ ಭೂತಾದಿಗಳ ಭಯವು ಹಿಂಗುವದೆಂದೂ ಹುಸಿ ನುಡಿಯನ್ನು ವಿಶ್ವಾಸಿಕ

ವದು. ಶ್ರದ್ಧೆಯು ಒಮ್ಮೆ ಭದ್ರವಾಗಿ ಬೇರೂರಿದ ಬಳಿಕ ಅ
ಯಿಂದ ಅಘಟಿತ ಘಟನಾಕಾರ್ಯಗಳು ನೆರವೇರುವವು. ಸಿನ್ನಲ್ಲಿ
ಯೊಂದಿದ್ದರೆ ನೀನು ನಿನ್ನೆದುರಿನ ಗುಡ್ಡಕ್ಕೆ ಸರಿಯೆಂದು ಹೇಳಿದರೆ
ನಿಜವಾಗಿಯೂ ಸರಿಯುವದು ಎಂದು ಕ್ರೈಸ್ತನು ಹೇಳಿದ್ದಾನೆ. ಈ ರ
ಸ್ಯವನ್ನರಿತೇ ನಮ್ಮ ಪೂರ್ವಜರು ಪಂಚಾಕ್ಷರಿ ಮತ್ತು ಷಡಕ್ಷರಿ ಮಂತ್ರ
ಗಳನ್ನು ಶ್ರದ್ಧೆಯುಳ್ಳ ಶಿಷ್ಯರಿಗೆ ಗೌಪ್ಯವಾಗಿ ಹೇಳುತ್ತ ಬಂದರು. ಕೇಳಿದ
ವರು ಅವುಗಳನ್ನು ನಂಬುತ್ತ ಸದ್ಗತಿಯನ್ನ ಕಂಡರು.

ಮಂತ್ರಗಳೇನೋ ಶಬ್ದಗಳೇ. ತೋರಿಕೆಯ ಶಬ್ದಗಳಲ್ಲೇನೂ ನಿಜ
ವಾದ ಸ್ವಾರಸ್ಯವಿರುವದಿಲ್ಲ. ಅದರೆ ಆ ಶಬ್ದಗಳಲ್ಲಿ ಅಂತರ್ಗತವಾದ
ಸ್ಫೂರ್ತಿಯಲ್ಲಿ ಸಾಮರ್ಥ್ಯವುಂಟು. ಶ್ರದ್ಧೆಯೇ ಮಂತ್ರದಲ್ಲಿ ಅಡಕವಾದ
ಸ್ಫೂರ್ತಿಯದು. "ಪಂಚಾಕ್ಷರಿ ಮತ್ತು ಷಡಕ್ಷರಿ ಮಂತ್ರಗಳನ್ನು ಜಪಿ
ಸುವವನು ಸುಖಸಂಪತ್ತನ್ನು ಪಡೆಯುವನು. ಸದ್ಗತಿಯನ್ನು ಹೊಂದು
ವನು" ಎಂದು ಗುರುವು ಗೌಪ್ಯವಾಗಿ ಶಿಷ್ಯನ ಕಿವಿಯಲ್ಲಿ ಹೇಳಿದರೆ
ಅವರ ಮೇಲೆ ತುಂಬಾ ವಿಶ್ವಾಸವನ್ನಿಟ್ಟ ನಡೆದುಕೊಂಡವನು ಇಷ್ಟಾ
ರ್ಥವನ್ನು ತಪ್ಪದೆ ಪಡೆಯುವನು. ಇಷ್ಟಾರ್ಥಗಳು ಸಿದ್ಧಿಸದಿದ್ದರೆ ಅವ
ನಲ್ಲಿ ಶ್ರದ್ಧೆಯು ಶಿಥಿಲವಾಗಿರಬೇಕೆಂದೇ ಅವರು ತಿಳಿಯುತ್ತಿದ್ದರಲ್ಲದೆ
ಪ್ರಸಂಗವು ಒದಗಿಬಂದಿಲ್ಲವೆಂದು ಭಾವಿಸುತ್ತಿರಲಿಲ್ಲ. ನಮಗೆ ಬಂದಡ
ರುವ ದುಃಖ ವಿಪತ್ತುಗಳಿಗೆ ನಮ್ಮ ಮನೋದೌರ್ಬಲ್ಯವೇ ಕಾರಣವ
ಲ್ಲದೆ ಅನಿರ್ವಾಹ ಪ್ರಸಂಗಗಳೇನೂ ಕಾರಣವಲ್ಲವೆಂಬುದೇ ಮಂತ್ರನಿ
ಷ್ಠರ ತಿಳುವಳಿಕೆ.

ಈಗಿನ ವಾತಾವರಣದಲ್ಲಿ ಮಂತ್ರ ಹೇಳುವವರಲ್ಲಿಯೂ ಕೇಳುವ
ವರಲ್ಲಿಯೂ ಮಹತ್ವವಿಲ್ಲದ್ದರಿಂದ ಮಂತ್ರದಲ್ಲಿದ್ದ ಮಹತ್ವವೂ ಹಾರಿಹೋ
ದಂತಾಗಿದೆ. ಏನೋ ಮಂತ್ರದಲ್ಲಿ ನಂಬಿಗೆಯಿಟ್ಟು ಕೆಲವು ಬಡಪ್ರಾ
ಣಿಗಳು ತಕ್ಕಮಟ್ಟಿಗೆ ಫಲಸಿದ್ಧಿಯನ್ನು ಪಡೆಯುತ್ತಿರಬಹುದು. ತಿಳಿದ

ಇದು ಶಾಸ್ತ್ರೀಯ ಯುಗ
ಶ್ರದ್ಧೆಗಳು ಅಡಗಹತ್ತಿವೆ. ಇದೊ
ಆಘಾತವೆಂದೇ ಹೇಳಬಹುದು.
ಮಾನ್ಯಗಳಲ್ಲಾಗಲಿ ಇಂಥ ಪವಿ
ಕಾಶವೇ ಇಲ್ಲ. ಎಲ್ಲಿ ನೋಡಿದ
ಬಡಿವಾರಗಳೇ ಕಣ್ಣಿಗೆ ಎದ್ದು
ಲೋಪವಾಗಹತ್ತಿದೆ. ಶಾಸ್ತ್ರೀಯ
ವನ್ನು ಕಂಡುಹಿಡಿದು ಪ್ರಯೋಗ
ಡುವದಾಗಿರುತ್ತದೆ.

ನಾವು ಶಾಸ್ತ್ರಜ್ಞರೆದುರಿಗೆ
ಅವುಗಳ ಸತ್ಯಾಂಶವನ್ನು ಶೋಧಿ
ಗಳು ಕಲ್ಲು, ಕಟ್ಟಿಗೆ. ಮಣ್ಣಿನ
ಎಂದಿಷ್ಟೇ ಹೇಳುವರಲ್ಲದೆ ಅವರ
ಹರಿಯದು.

ಶಾಸ್ತ್ರಜ್ಞನ ದೃಷ್ಟಿಯಲ್ಲಿ ಗ
ಳಿದ್ದ ಒಬ್ಬ ಮನುಷ್ಯನು; ಲಿಂಗ
ಜಂಗಮವೆಂದರೆ ಊರೂರು ತಿರ
ವೆಂದರೆ ಕಾಲುತೊಳೆದ ನೀರು; ವಿ
ವಿಭೂತಿಯೆಂದರೆ ಬೂದಿಯ ಜೊ
ಗಿಡದ ಕಾಯಿ; ಮಂತ್ರವೆಂದರೆ ವ
ಪೆಟ್ಟಿನ ಅರ್ಥವನ್ನು ಶಾಸ್ತ್ರಜ್ಞನಿಂ
ದೃಷ್ಟಿಯಿಂದ ಕವಚವರಣಗಳನ್ನ
ಅವುಗಳಲ್ಲೇನೂ ಅರ್ಥವಿಲ್ಲ. ಮೇ

ನೆಂದರೆ ಶಿವನ ವಾಕ್ಯ. ಈ ಮಾತಿಗೆ ಸುಶಿಕ್ಷಿತರೆನಿಸಿಕೊಳ್ಳುವವರು ಒಪ್ಪದಿದ್ದರೂ ಮೂಢ ನಂಬಿಗೆಯುಳ್ಳವರೂ ನಿಜವಾದ ಶ್ರದ್ಧೆಯುಳ್ಳವರೂ ತಪ್ಪದೆ ಒಡಂಬಟ್ಟು ಅದರಿಂದ ಸುಜ್ಞಾನಂದಗಳನ್ನು ಪಡೆದುಕೊಳ್ಳುತ್ತಾರೆ. ಅವರು ಅನುಭವಿಸುವ ಆನಂದವು ಶಾಸ್ತ್ರೀಯ ಮತವಾದಿಗಳಿಗೆಂದಿಗೂ ಸಲ್ಲಲಾರದು. ಅದುದರಿಂದ ಶಾಸ್ತ್ರೀಯ ವಿಚಾರಕ್ಕಿಂತಲೂ ಅನುಭವವೇ ಮಿಗಿಲೆಂದು ಭಾವಿಸಿ ಅಷ್ಟಾವರಣಗಳಲ್ಲಿ ನಿಷ್ಠೆಯನ್ನಿಡುವದು ಪ್ರತಿಯೊಬ್ಬ ವೀರಶೈವನ ಕರ್ತವ್ಯವಾಗಿದೆ.

ವರದಾನಿ ಗುಡ್ಡಮ್ಮ.

ವರದಾನಿ ಗುಡ್ಡಮ್ಮೆ ಭಕ್ತವತ್ಸಲೆ ನಿನ್ನ
ಚರಣವರುಶನದಾಸೆಯಿಂದೆ ನಾ ಹಗಲಿರುಳು
"ಬರಬೇಕು ಬಂಬೇಕು" ಎಂದು ಹಂಬಲಿಸುತ್ತೆ
ಕಡೆಗಿಂದು ಬಂದು ನಿನ್ನ।
ಪರಮಪಾವನ ಮೂರ್ತಿಯನ್ನು ಕಣ್ದಣಿ ನೋಡಿ
ಹರುಷದಿಂದೊಡಗೂಡಿ ಭಕ್ತಿಗಿಂಬನು ಮಾಡಿ
ಹೊರಳುತ್ತಲಿರುತಿಹೆನು ನಿನ್ನಯಡಿಹುಡಿಯಲ್ಲಿ
ಬೆರಗಾಗಿ ತವ ಲೀಲೆಗೆ ॥೧॥

ಇಲ್ಲಿ ಸುಳಿಯುವ ಗಾಳಿ ಕಲ್ಪತರುವಿನ ಗಾಳಿ
ಇಲ್ಲಿರುವ ನುಣುಪಾದ ಹಾಸುಗಲ್ಲುಗಳೆಲ್ಲ
ಚಲ್ವವಾಗಿಹ ಹಂಸದುಪ್ಪಳದ ಹಾಸಿಗೆಗ-

ಶ್ರೀ ಕೂಡಲ ಸಂಗಮ ಕ್ಷೇತ್ರವು.

ಈ ಕ್ಷೇತ್ರವು ವಿಜಾಪುರ ಜಿಲ್ಲಾ ಹುನಗುಂದ ತಾಲೂಕಿನಲ್ಲಿ ಕೃಷ್ಣೆ ಮತ್ತು ಮಲಪ್ರಭಾ ನದಿಗಳ ಸಂಗಮಸ್ಥಳದಲ್ಲಿದೆ. ಇಲ್ಲಿ ಸಂಗಮವೆಂದು ಗ್ರಾಮವಿದ್ದು ಅದು ಬಾಗಲಕೋಟೆಯಿಂದ ಈಶಾನ್ಯ ದಿಕ್ಕಿಗೆ ೩೦ ಮೈಲಿನ ಮೇಲೆ ಇದೆ. ಈ ಕ್ಷೇತ್ರ ಸ್ಥಾನದಲ್ಲಿ ಶ್ರೀಬಸವೇಶ್ವರನು ಕಲ್ಯಾಣಕ್ಕೆ ಹೋಗುವ ಪೂರ್ವದಲ್ಲಿ ಅನೇಕ ವರ್ಷ ವಾಸವಾಗಿದ್ದರಿಂದ ಮತ್ತು ಕಡೆಗೆ ಈ ಲಿಂಗದಲ್ಲಿಯೇ ಐಕ್ಯ ಹೊಂದಿದ್ದರಿಂದ ಇದು ವೀರಶೈವರಿಗೆ ಅತ್ಯಂತ ಪವಿತ್ರ ಸ್ಥಾನವಾಗಿರುತ್ತದೆ. ಆದರೆ ಇದು ವೀರಶೈವರಿಗಷ್ಟೇ ಅಲ್ಲ, ಎಲ್ಲ ಜಾತಿಯ ಜನರಿಗೂ ಕೂಡ ಪುಣ್ಯಸ್ಥಲವಾಗಿರುತ್ತದೆ.

ಈ ಕ್ಷೇತ್ರದ ಒಂದು ಸ್ಥಲ ಪುರಾಣವಿದ್ದು, ಅದರಲ್ಲಿ ಅನೇಕ ಮಹತ್ವದ ಮನೋರಂಜಕ ವಿಷಯಗಳಿರುವದರಿಂದ ಅದರೊಳಗಿನ ಸಂಗತಿಗಳನ್ನು ನಾವು ಇಲ್ಲಿ ವಿವರಿಸಿದ್ದೇವೆ.

ಕೃಷ್ಣಾ ನದಿಗೆ ಮುಖ್ಯವಾಗಿ ೫ ಸಂಗಮುಗಳಿವೆ. ಅವು ಯಾವವೆಂದರೆ:— (೧) ಪಂಚಗಂಗಾ ಸಂಗಮ ಅಥವಾ ನರಸೋಬಾನ ವಾಡಿ (೨) ಘಟಪ್ರಭೆಯ ಸಂಗಮ ಅಥವಾ ಮೂರಮಟ್ಟಿ ಸಂಗಮ (೩) ಮಲಾಪಹಾರೀ ಸಂಗಮ ಅಥವಾ ಕೂಡಲಸಂಗಮ (೪) ಭೀಮಾ ಸಂಗಮ ಅಥವಾ ಕಾಡಲೂರ ಸಂಗಮ (೫) ತುಂಗಭದ್ರಾ ಸಂಗಮ ಅಥವಾ ನಿವೃತ್ತಿ ಸಂಗಮ ಎಂದು ಇದ್ದು, ಇವೆಲ್ಲವೂ ಕರ್ನಾಟಕ ಭಾಗದಲ್ಲಿ ಅತ್ಯಂತ ಪ್ರಸಿದ್ಧವಾಗಿರುತ್ತವೆ.

ಕೂಡಲಸಂಗಮ ಕ್ಷೇತ್ರದ ವಿಸ್ತಾರವು ಸುತ್ತಲು ೫ ಮೈಲು ಇದೆ. ನೈರುತ್ಯ ದಿಕ್ಕಿಗೆ ಮಲಾಪಹಾರೀ ದಂಡೆಯ ಮೇಲೆ ಪಾಪನಾಶನಾಳ ಎಂಬ ಗ್ರಾಮವಿದ್ದು ಇಲ್ಲಿ ಶ್ರೀಪಾಪೇಶ್ವರ ದೇವಾಲಯ ಒಂದುಂಟು.

ಕೃತಯುಗದಲ್ಲಿ ಈ ಸಂಗ
ನಿಗೆ ಅವ್ಯತೇಶ್ವರನೆಂದೂ, ತ್ರೇತ
ಕ್ಷೇತ್ರವೆಂದೂ ದೇವರಿಗೆ ಯಜ್ಞೇ
ಕಪಿಲಕ್ಷೇತ್ರವೆಂದೂ ದೇವರಿಗೆ ಸಿದ್ಧೇ
ಕ್ಷೇತ್ರವೆಂದೂ ದೇವರಿಗೆ ಸಂಗಮೇ
ಳಿ ಪುರಾಣದಿಂದ ತಿಳಿದುಬರು

ದೇವರ ಮುಂದೆ ಎರಡು ನ
ಇದ್ದದ್ದು ಅವ್ಯತೇಶ್ವರನ ಮುಂ
ಪರಶುರಾಮನು ಪೂಜೆ ಮಾಡಿ
ಹೇಳಲ್ಪಡುತ್ತದೆ.

ನದಿಯಲ್ಲಿ ಮತ್ತು ದಂಡೆ
ನೀರಿನಲ್ಲಿ ೧೩ ತೀರ್ಥಗಳೂ ಉಂ

ಬಿಳೀ ಕಲ್ಲಿನ ಮೇಲೆ ಒಂ
ಗಳಿದ್ದು ಇವುಗಳಿಗೆ ತ್ರಿಕುಟೇಶ್ವರ
ದಲ್ಲಿ ಕೂಡಲೇಶ್ವರನೆಂದು, ಈಶ
ಹೀಗೆ ಲಿಂಗಗಳಿಲ್ಲದೆ, ದೇವರ ಗ
ಡುತ್ತವೆ. ಈ ೮ ಲಿಂಗಗಳ ಹೆಸರುಗ
ಶ್ವರ (೨) ಯಜ್ಞೇಶ್ವರ (೩) ಚಂಡೇ
ಶ್ವರ (೪) ಸೋಮೇಶ್ವರ (೫) ಸಿದ್ಧೇ
ಶ್ವರನ ಹತ್ತರವೇ ಗಣಪತಿಯೊಂದ

ಅಲ್ಲದೆ ೧೩ ತೀರ್ಥಗಳು ಇ
(೧) ಗೋಷ್ಪಾದ ತೀರ್ಥ (೨) ವ
(೪) ಶುಕ್ಲ ತೀರ್ಥ (೫) ಶಂಖ ತೀರ್

ಈಗಲೂ ಇದ್ದು ಈ ಸ್ಥಳಕ್ಕೆಯೇ ಗೋಪ್ರಾದತೀರ್ಥವೆಂಬ ಹೆಸರು ಇದೆ. ಅಕಳು ಮತ್ತು ಎತ್ತು ಇವುಗಳನ್ನು ಹೊಡೆದು ಹಿಂಸಿಸಿದವನು ಇಲ್ಲಿ ಸ್ನಾನ ಮಾಡಿದರೆ ಪಾಪದಿಂದ ಬಿಡುಗಡೆ ಹೊಂದುತ್ತಾನೆ.

ವಾಯು ತೀರ್ಥ:— ಇಲ್ಲಿ ಹನುಮಂತನ ಮೂರ್ತಿಯು ಇದ್ದು ಇಲ್ಲಿ ಪೂಜೆ ಮಾಡುವವನು ಬೇನೆಗಳಿಂದ ದೂರಾಗುವನು.

ಸೂರ್ಯ ತೀರ್ಥ:— ವಾಯುತೀರ್ಥದ ಸವಿೂಪದಲ್ಲಿಯೇ ಇದು ಇದೆ. ಇಲ್ಲಿ ಕುದುರೆಯ ಚನ್ನಾದ ಕಲ್ಲು ಇದೆ. ಇದರ ಪೂರ್ವಕ್ಕೆ ಕೆಂಪು ಕಲ್ಲು ಕಾಣಿಸುತ್ತದೆ. ಇಲ್ಲಿ ಸ್ನಾನ ಮಾಡಿ ಪೂಜೆಸಿದವನು ಇಷ್ಟಸಿದ್ಧಿಯನ್ನು ಹೊಂದುತ್ತಾನೆ. ಪಾವನಾದನೆಂಬ ಋಷಿಯು ಇಲ್ಲಿಯೇ ತಪಸ್ಸು ಮಾಡಿದನೆಂದು ಖ್ಯಾತಿಯು ಇದೆ.

ಶುಕ್ಲ ತೀರ್ಥ:— ಕೂಡಲ ಮುಖದ ಹತ್ತರ ಸ್ನಾನ ಮಾಡಿ ಪಂಚಲಿಂಗಗಳ ಅಭಿಷೇಕ ಮಾಡಿದರೆ ಎಲ್ಲ ಪಾಪಗಳಿಂದ ಮುಕ್ತನಾಗುತ್ತಾನೆ. ಇದರ ಹತ್ತಿರವೇ ಸೋಮೇಶ್ವರನು ಇರುತ್ತಾನೆ.

ಶಂಖ ತೀರ್ಥ:— ಮೇಲೆ ವಿವರಿಸಿದ ಅಕಳ ಖುರದ ಸವಿೂಪದಲ್ಲಿಯೇ ಪಶ್ಚಿಮ ಪ್ರವಾಹದಲ್ಲಿ ಸ್ನಾನ ಮಾಡಿದ್ದಾದರೆ ಶುದ್ಧನಾಗುತ್ತಾನೆ. ಇಲ್ಲಿಯ ಕಲ್ಲಿನ ಮೇಲೆ ಶಂಖದ ಆಕೃತಿಯಂತೆ ಚಿನ್ಹವಿರುವ ಕಾರಣ ಶಂಖತೀರ್ಥವೆನ್ನುವರು.

ಚಕ್ರ ತೀರ್ಥ:— ದೇಸಾಯಿ ಬಂಡೆಗಲ್ಲಿನ ಹತ್ತಿರ ಉತ್ತರಕ್ಕೆ ಚಕ್ರಾಕಾರದ ಕಲ್ಲು ಇರುತ್ತದೆ. ಇದು ಯಾವಾಗಲೂ ನೀರಿನಲ್ಲಿ ಮುಳುಗಿರುತ್ತದೆ. ಇಲ್ಲಿ ೬ ತಿಂಗಳು ಸ್ನಾನ ಮಾಡಿದವನು ಸಂಸಾರ ಚಕ್ರದಿಂದ ಮುಕ್ತನಾಗುತ್ತಾನೆ.

ಐರಾವತ ತೀರ್ಥ:— ಚಕ್ರತೀರ್ಥದ ಪಶ್ಚಿಮಕ್ಕೆ ಕಲ್ಲಿನ ಮೇಲೆ ವಿಷ್ಣುಪಾದ ಚಿನ್ಹವಿದೆ. ಇಲ್ಲಿ ಈಶ್ವರನ ಪೂಜೆ ಮಾಡಿದ್ದಾದರೆ ಮುಕ್ತಿಯುಂಟಾಗುತ್ತದೆ. ಇಲ್ಲಿ

ಶ್ರೀ ಕೂಡಲ ಸಂ

ಸಿದ್ಧ ತೀರ್ಥವು:— ಕೂಡಲ
ಹತ್ತಿರ ಸ್ನಾನ ಮಾಡಿ ಸಿದ್ಧೇಶ್ವರ
ಯನ್ನು ಹೊಂದಿದರಂತೆ. ಈ ಕ
ಇರುತ್ತದಂತೆ. ಇದರ ಬಾಗಿಲಿಗೆ
ಸಿದ್ಧ ಶರಣರು ವಾಸಿಸುತ್ತಿರೆಂದು

ಜಟಾ ತೀರ್ಥ:— ಉಭಯ
ಅಡೇ ದಂಡೆಗೆ ವೀರಭದ್ರ ದೇವರ
ಪೃಷ್ಣಾ ನದಿಯಲ್ಲಿ ಸ್ನಾನ ಮಾಡಿ
ಸಾಯುಜ್ಯವು ಪ್ರಾಪ್ತವಾಗುತ್ತದೆ.
ತೀರ್ಥ.

ಋಣವಿಮೋಚನ ತೀರ್ಥ:—
ಹೊಳೆಯಲ್ಲಿ ಸ್ನಾನ ಮಾಡಿ ಸಂ
ರಿಂದ ಹಿಂದಿನ ಜನ್ಮದಲ್ಲಿ ಸಾಲಕೊಂ
ದೊರೆಯುತ್ತದೆ ಡಾಲ್ಫ್ಯನೆಂಬ
ವಿಮೋಚನನಾಗಿ ಇಲ್ಲಿ ಮುಕ್ತಿಯ

ಗೌರೀ ತೀರ್ಥ:— ಆಡಿಹಾ
ಕಲ್ಲು ಇದೆ. ಇದರ ಹತ್ತಿರ ಕಲ್ಲ
ಚಿನ್ಹವದೆ. ಇದೇ ಗೌರೀ ತೀರ್ಥ
ಕಡೆಗೋಲು ಪೂಜೆ ಮಾಡಿದರೆ
ದಂತೆ.

ಕೋಟಿ ತೀರ್ಥ:— ಗವಿಕುಂ
ಕಡೆಯ ದಂಡೆಯ ಮೇಲೆ ಕಲ್ಲು
ಗಳು ಮೂಡಿರುತ್ತವೆ. ಇದಕ್ಕೆ ರು

ಅಶುಭ ಚಿಹ್ನವೆಂದು ಜನರು ತಿಳಿಯುತ್ತಾರೆ. ಅಭಿಷೇಕದ ನೀರು ಈ ನೀರಿನ ಮೇಲಿಂದ ಹರಿದು ಜಲಹರಿಯಲ್ಲಿ ಬೀಳುತ್ತದೆ.

ಸಂಗಮೇಶ್ವರ ಮೂರ್ತಿಯು ಹುಟ್ಟು ಲಿಂಗವದೆ. ಅಂದರೆ ಇದು ಜನರು ಕಟ್ಟಿದು ನಿರ್ಮಿಸಿದ ಲಿಂಗವಲ್ಲ. ಕಾರಣ ಸಿದ್ಧೇಶ್ವರನೆಂತಲೂ ಇದಕ್ಕೆ ಹೆಸರು ಬಂದಿದೆ. ಅಮೃತೇಶ್ವರನೆಂತಲೂ ಕರೆಯುತ್ತಾರೆ.

ಶ್ರೀಬಸವೇಶ್ವರನು ಈ ಲಿಂಗದಲ್ಲಿಯೇ ಐಕ್ಯವಾದನೆಂದು ಹೇಳ್ಪಡುತ್ತಿದೆ. ಅವನು ಐಕ್ಯವಾದದ್ದು ಶ್ರೀಸಂಗಮೇಶ್ವರ ದೇವರ ಪಿಂಡಿಕೆಯಲ್ಲಿ ಉತ್ತರಬದಿಗೆಂದು ಹೇಳುತ್ತಾರೆ. ಈ ಸ್ಥಳದಲ್ಲಿ ಈಗಲೂ ಸ್ವಲ್ಪ ತಗ್ಗು ಕಾಣುತ್ತಿದೆ.

ಕೃಷ್ಣೆಯು ಪರಶುರಾಮನಿಗೆ ಹೆಚ್ಚಿಗೆ ಸಂಬಂಧಪಟ್ಟ ಹಾಗೆ ಕಾಣುತ್ತದೆ. ಇದೇ ನದಿಯ ಧಡದಲ್ಲಿರುವ ಶೂರ್ಪಾಲಿ ಎಂಬ ಗ್ರಾಮದಲ್ಲಿ ಪರಶುರಾಮನು ಮುಂಜಾವಿನಲ್ಲಿ ಕಪ್ಪಡಿಸಂಗಮದಲ್ಲಿ ಮಧ್ಯಾಹ್ನ ಕಾಲದಲ್ಲಿ ಮತ್ತು ಶ್ರೀಶೈಲದಲ್ಲಿ ಸಾಯಂಕಾಲದಲ್ಲಿ ಇರುವನೆಂದು ತಿಳಿಯಲ್ಪಟ್ಟಿದೆ.

ಊರ ಮುಂದೆ ಅನೇಕ ಬಂಡೆಗಲ್ಲುಗಳು ಇದ್ದು ಅವುಗಳಿಗೆ ಸಪವಿತ್ರತೆಯು ಕಲ್ಪಿಸಲ್ಪಟ್ಟಿದೆ. ಆ ಕಲ್ಲುಗಳು ಯಾವವೆಂದರೆ:— (೧) ಅಕಳ ಖುರದ ಕಲ್ಲು (೨) ದೇಸಾಯಿಬಂಡೆ (೩) ಕರೇಕಲ್ಲು (೪) ಬಿಳೇಕಲ್ಲು (೫) ಕೆಂಪುಕಲ್ಲು (೬) ಗಂಗೇಗೌರೀಕಲ್ಲು (೭) ರುದ್ರಪಾದಕಲ್ಲು (೮) ಆನೆಯಕಲ್ಲು (೯) ಕುದುರೆಕಲ್ಲು (೧೦) ಆಚಾರಬಂಡೆ (೧೧) ಗವಿಕುಂಡ (೧೨) ವಿಠ್ಠಲರಾಯನ ಕಂಬ. ಇವುಗಳಲ್ಲಿ ಕೆಲವು ಹಿಂದೆಯೇ ವರ್ಣಿಸಲ್ಪಟ್ಟಿವೆ.

ಇವು ಅಲ್ಲದೆ ಇನ್ನೂ ಕೆಲವು ಪವಿತ್ರ ಸ್ಥಾನಗಳೆಂದು ತಿಳಿಯಲ್ಪಟ್ಟಿವೆ. ಅವು ಯಾವವೆಂದರೆ, ಸೀತಾಕುಂಡ, ಅಕ್ಕಮ್ಮನ ಮಡು, ಶಂಭು

ಗಂಗಮ್ಮನ ಗುಡಿಯು ಇದೆ. ನೀಲಗಂಗಮ್ಮನು ಬಸವೇಶ್ವರನ ಪತ್ನಿಯು. ಶ್ರೀ ಬಸವೇಶ್ವರನು ಸಂಗಮಕ್ಕೆ ಹೋದ ಬಳಿಕ, ನೀಲಗಂಗಮ್ಮನೂ ಅವನನ್ನು ಹಿಂಬಾಲಿಸಿ ಈ ಸ್ಥಳದಲ್ಲಿ ಬಂದಳು. ಆದರೆ ಅಷ್ಟರಲ್ಲಿ ಬಸವೇಶ್ವರನು ಲಿಂಗೈಕ್ಯನಾದ ಸುದ್ದಿಯನ್ನು ಕೇಳಿದ ಕೂಡಲೆ, ನೀಲಗಂಗಮ್ಮನು ಇದೇ ಸ್ಥಳದಲ್ಲಿ ತನ್ನ ಲಿಂಗವಲ್ಲಿ ಐಕ್ಯಳಾದಳು. ಐಕ್ಯಳಾದ ಸ್ಥಳದಲ್ಲಿ ಗುಡಿಯು ಕಟ್ಟಲ್ಪಟ್ಟಿದೆ. ತಂಗಡಿಗಿ ಗ್ರಾಮದ ಹೆಸರು "ತಂಗಿ ಅಡಗಿದಳು" ಎಂಬುದರಿಂದ ಉಂಟಾಗಿದೆಂದು ಜನರು ಹೇಳುತ್ತಾರೆ.

ಈ ದೇವಾಲಯದ ಜಾತ್ರೆಯು ಜ್ಯೈತ್ರ ಬಹುಳ ಪಂಚಮಿ ದಿವಸ ಪ್ರತಿವರ್ಷ ಆಗುತ್ತದೆ. ಮೂಲಾನಕ್ಷತ್ರದಲ್ಲಿ ತೇರು ಎಳೆಯುತ್ತಾರೆ. ತೇರು ಬಹಳ ದೊಡ್ಡದು ಇದ್ದು ಅದರ ಎತ್ತರ ೧೦೧ ಅಡಿ ಇದೆ. ಜಾತ್ರೆಯಲ್ಲಿ ಒಕ್ಕಲುತನದ ಸಾಮಾನುಗಳ ವ್ಯಾಪಾರ ಬಹಳವಾಗುತ್ತದೆ. ಜಾತ್ರೆಗಿಂತ ೯ ದಿವಸ ಮೊದಲು "ಬಸವನ ಪಟ" ಎಂದು ಕಟ್ಟುತ್ತಾರೆ. ಆಗ ಪ್ರತಿದಿವಸ ರಾತ್ರೆಯಲ್ಲಿ ಸಣ್ಣ ತೇರನ್ನು ಎಳೆಯುತ್ತಾರೆ. ಮಾರ್ಗಶೀರ್ಷ ತಿಂಗಳದಲ್ಲಿ ಕಾರ್ತಿಕವಾಗುತ್ತದೆ. ಶ್ರಾವಣದಲ್ಲಿ ಮಹಾಭಿಷೇಕವಾಗುತ್ತದೆ. ಗುಡಿಯ ಪೂಜಾರರು ಜೀರ ಮೊದಲಾದವರಿಗೆ ಇನಾಮು ಭೂಮಿಗಳು ಇರುತ್ತವೆ.

ಆದರೆ ಈ ಸ್ಥಳವು ಪುರಾಣಪ್ರಸಿದ್ಧವಲ್ಲದೆ ಇತಿಹಾಸಪ್ರಸಿದ್ಧವೂ ಇರುತ್ತದೆ. ಇದರ ಸರೆಯಲ್ಲಿಯೇ ತಾಳೀಕೋಟೆಯ ರಣಾಂಗಣವು ಇದೆ. ಈ ಮಹಾಯುದ್ಧವು ಕೃಷ್ಣೆಯ ಉತ್ತರದಂಡೆಯಲ್ಲಿರುವ ತಂಗಡಿಗಿ ಗ್ರಾಮದಿಂದ ಪೂರ್ವಕ್ಕೆ ೮ ಮೈಲುಗಳ ಮೇಲಿರುವ ರಕ್ಕಸಿಗಿಯ ವರೆಗೆ ಇರುವ ಮೈದಾನಿನಲ್ಲಿ ಆಯಿತು. ಶ್ರೀ ಸಂಗಮನಾಥನ ದೇವಾಲಯದ ಎತ್ತರವಾದ ಸ್ಥಳದಿಂದ ಈ ಸಮರಾಂಗಣವನ್ನು ಬಹು ದೂರದ ವರೆಗೆ ಕಾಣಬಹುದಾಗಿದೆ.

ಇಲ್ಲಿಯ ಹವೆ ಮತ್ತು ನೀರು ಬಹು

೩

ಅಲ್ಲೊಂದು ಇಲ್ಲೊಂದು
ಎದ್ದಿರುವ ಮನೆಗಳಲಿ
ಜೀವ ಮಿಸುಕಾಡುತಿಹುದು!
ಸೊಲ್ಲಿಲ್ಲ! ಬಿದ್ದಿರುವ
ಹೆಣವು ಹಾ! ಮಿಸುಕಿದೊಲು
ಭಾವನೆಗೆ ಎನಿಸುತಿಹುದು!

೪

ಸುಮ್ಮನೇ ನಿಂತಿದ್ದೆ!
ಗಾಳಿ ನಿಡುಸುಯ್ಯುತಿತ್ತು!
ಮವ್ಮಾನವೇ ರೂಹು
ಗೊಂಡಂತೆ ಹಳ್ಳಿಯದು
ಕಂಗಳಿಗೆ ಕಾಣುತಿತ್ತು!

೫

ರಕ್ಕಸನ ಕಂಗಳೊಲು
ಅಲ್ಲೊಂದು ಇಲ್ಲೊಂದು
ದೀವಿಗೆಗಳುರಿದಿದ್ದವು!
ದುಷ್ಕಾವೇಶದಲಿ
ಹಿಂದುಮುಂದುಗಳೆಲ್ಲ
ಒಂದಾಗಿ ತೋರಿದ್ದವು!

೬

ಈ

ಮತ್ತು ಆರ್ಯಸಂಸ್ಕೃತಿಗಳ ರಹಸ್ಯವನ್ನು ಕಂಡುಹಿಡಿಯಲು ಅವು ಮಹತ್ವದ ಸಾಧನಗಳಾಗಿವೆ.

ಉಪನಿಷತ್ತುಗಳ ಮುಖ್ಯೋದ್ದೇಶವು ಮನುಷ್ಯನಿಗೆ ಮೋಕ್ಷಮಾರ್ಗವನ್ನು ತೋರಿಸಿಕೊಡುವದೇ ಇರುತ್ತದೆ. ಉಪನಿಷತ್ ಇದರ ಮೂಲಾರ್ಥವನ್ನು ನೋಡಿದರೆ ಮನುಷ್ಯನಿಗಿರುವ ಬಂಧನೆಗಳನ್ನು ದೂರಮಾಡಿ ಅವನನ್ನು ಪರಮಾತ್ಮನ ಸಮೀಪಕ್ಕೆ ಒಯ್ಯುವದೇ ಅವುಗಳ ಉದ್ದೇಶವಿರುತ್ತದೆಂದು ಕಂಡುಬರುವದು.

ವೀರಶೈವ ವಚನಕಾರರಾದರೂ ಉಪನಿಷತ್ತಿನ ತತ್ವಗಳನ್ನೇ ತಮ್ಮ ವಚನವಾಙ್ಮಯದಲ್ಲಿ ಬೀರಿರುವರು. ಉಪನಿಷತ್ತಿನ ತತ್ವಗಳೇ ಅವರ ವಚನಗಳಲ್ಲಿ ಒಡಮೂಡಿರುವವು. ಹ್ಯಾಗೆ ಉಪನಿಷತ್ತುಗಳು ಹಿಂದೂ ಧರ್ಮದ ಸ್ಥಿತಿಯನ್ನು ತಿಳಿಯಲು ಸಾಧನವಾಗಿರುತ್ತವೋ ಹಾಗೆಯೇ ವಚನಗಳೂ ವೀರಶೈವ ಧರ್ಮದ ತಿರುಳನ್ನು ಅರಿಯಲು ಉತ್ತಮ ಸಾಧನಗಳಾಗಿವೆ.

ಉಪನಿಷತ್ತುಗಳು ಆತ್ಮನ ಉಚ್ಚ ಸ್ಥಿತಿಯ ರೀತಿಯನ್ನು ವಿವರಿಸುತ್ತವೆ. ಆತ್ಮನು ತನ್ನನ್ನು ತಾನು ಏಕೆ ಅರಿಯನೆಂಬುದನ್ನು ಅವು ಹೇಳಿಕೊಟ್ಟು ಅವನನ್ನು ಪರಬ್ರಹ್ಮನ ನೆರೆಯಲ್ಲಿ ಒಯ್ಯಲು ಸಹಾಯಕಾರಿಗಳಾಗಿವೆ. ವಚನಕಾರರ ಉದ್ದೇಶವಾದರೂ ಹೀಗೆಯೇ ಇದೆ. ಪ್ರತಿಯೊಬ್ಬ ಮನುಷ್ಯನಿಗೆ ಮುಕ್ತಿಮಾರ್ಗದ ಜ್ಞಾನವನ್ನು ತಿಳಿಯಪಡಿಸಬೇಕೆಂಬುದೇ ಅವುಗಳನ್ನು ರಚಿಸಿದ ಶಿವಶರಣರ ಪ್ರಯತ್ನವಿದೆ. ಇದರಲ್ಲಿ ಅವರು ಏನೂ ಮುಚ್ಚುಮರೆಮಾಡದೆ ತಿರುಳ್ಗನ್ನಡದಲ್ಲಿ ತಮ್ಮ ವಿಚಾರಗಳನ್ನು ಜನತೆಯ ಮುಂದೆ ಇಟ್ಟಿರುವರು.

ಉಪನಿಷತ್ಕಾರರು ಪರಮಾತ್ಮನನ್ನು ಇದಿರಿದಿರಿಗೆ ಪ್ರತ್ಯಕ್ಷವಾಗಿ ಕಾಣಬೇಕೆಂಬ ಉತ್ಕಟೇಚ್ಛೆಯನ್ನು ತಾಳಿರುವರು. ಅವರಿಗೆ ಬೇರೊಬ್ಬರ

ಈಶೋ

ಹಾಗೆಯೇ ವಚನವಾಙ್ಮಯ
ಇಂಬು ಇಲ್ಲ. ವಚನಕಾರರು
ಲಯವೆಂದು ಭಾವಿಸಿರುವರು.
ವಸ್ತು ಎಂದರೆ ಜೀವಾತ್ಮನಲ್ಲಿ
ಅದರಲ್ಲಿ ಪ್ರಕಾಶವನ್ನು ಬೀರಿ
ಧ್ಯೇಯವಾಗಿದೆ.

ಆದ್ದರಿಂದ ಪೂರ್ವದ
ರಂತೆ ದೇವಾಲಯಗಳನ್ನು
ಲಲ್ಲ. ಶಿವಾನುಭವದ ತಿರುವಳಿಕೆ
ಗ್ರಾಮಗ್ರಾಮಗಳಲ್ಲಿ ಮಠಗಳನ್ನು

ಉಪನಿಷತ್ತುಗಳು ದೇವರು
ಪಾದಿಸುತ್ತವೆ. ಅವು ಜಾತಿ,
ಮೀರಿದವಾಗಿವೆ ಹಾಗೆಯೇ ವೀ
ಇದ್ದಾನೆಂದು ಪ್ರತಿಪಾದಿಸುತ್ತಾರೆ
ತಿಗಳ ಲೀಲೆಗೆ ಇಂಬು ಇಲ್ಲ.

"ಸ್ವಾಮಿ ನೀನು ಶಾಶ್ವತ
ರಿಯಲು, ಮಹಾದೇವ ಮಹಾ
ಪತಿ ಜಗಕ್ಕೆ ಏಕೋದೇವ, ನ
ದೇವ ಕೂಡಲಸಂಗಮದೇವ" ಎ

ಈ ವಿಚಾರಗಳನ್ನು ಪ್ರತಿ
ನಗಳಲ್ಲಿ ನುಡಿದಿರುವನು.

ಪರಬ್ರಹ್ಮ ವಸ್ತುವನ್ನ
ಋಷಿಗಳ ಹಂಬಲವಾಗಿತ್ತು.

ಈಶಾವಾಸ್ಯೋಪನಿಷತ್.

ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದ
ಚ್ಯತೆ। ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೆ ॥

ಓಂ ಶಾಂತಿಃ ಶಾಂತಿಃ ಶಾಂತಿಃ।

ಓಂ ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್।
ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯ ಸ್ವಿದ್ಧನಂ ॥೧॥

ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ।
ಏವಂ ತ್ವಯಿ ನಾನ್ಯಥೇತೋಸ್ತಿ ನ ಕರ್ಮ ಲಿಪ್ಯತೆ ನರೇ ॥೨॥

ಅಸುರ್ಯಾ ನಾಮ ತೆ ಲೋಕಾ ಅಂಧೇನ ತಮಸಾವೃತಾಃ। ತಾಂ
ಸ್ತೆ ಪ್ರೇತ್ಯಾಭಿಗಚ್ಛಂತಿ ಯೇ ಕೇ ಚಾತ್ಮಹನೋ ಜನಾಃ ॥೩॥

ಅನೇಜದೇಕಂ ಮನಸೋ ಜವೀಯೋ ನೈನದ್ದೇವಾ ಆಪ್ನುವನ್
ಪೂರ್ವಮರ್ಷತ್। ತದ್ಧಾವತೋ ಅನ್ಯಾನತ್ಯೇತಿ ತಿಷ್ಠತ್ತಸ್ಮಿನ್ನಪೋ
ಮಾತರಿಶ್ವಾ ದಧಾತಿ ॥೪॥

ತದೇಜತಿ ತನ್ನೈಜತಿ ತದ್ದೂರೆ ತದ್ವಂತಿಕೆ। ತದಂತರಸ್ಯ
ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ ॥೫॥

ಯಸ್ತು ಸರ್ವಾಣಿ ಭೂತಾನ್ಯಾತ್ಮನ್ಯೇವಾನುಪಶ್ಯತಿ। ಸರ್ವಭೂ
ತೇಷು ಚಾತ್ಮಾನಂ ತತೋ ನ ವಿಜಿಗುಪ್ಸತೆ ॥೬॥

ಯಸ್ಮಿನ್ ಸರ್ವಾಣಿ ಭೂತಾನ್ಯಾತ್ಮೈವಾಭೂದ್ವಿಜಾನತಃ। ತತ್ರ
ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ ॥೭॥

ಸ ಪರ್ಯಗಾಚ್ಛುಕ್ರಮಕಾಯಮವ್ರಣಮಸ್ನಾವಿರಂ ಶುದ್ಧಮ
ಪಾಪವಿದ್ಧಮ್। ಕವಿರ್ಮನೀಷೀ ಪರಿಭೂಃ ಸ್ವಯಂಭೂರ್ಯಥಾ ತಥ್ಯತೋ
ಅರ್ಥಾನ್ ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ ॥೮॥

ಅನ್ಯದೇವಾಹುಃ ಸಂಭವಾದ
ಧೀರಾಣಾಂ ಯೇ ನಸ್ತದ್ವಿಚಚಕ್ಷಿ

ಸಂಭೂತಿಂ ಚ ವಿನಾಶಂ
ಶೇನ ಮೃತ್ಯುಂ ತೀರ್ತ್ವಾ ಸಂಭೂ
ಹಿರಣ್ಮಯೇನ ಪಾತ್ರೇಣ ಸ
ಪಾವೃಣು ಸತ್ಯಧರ್ಮಾಯ ದೃಷ್ಟ

ಪೂಷನ್ನೆಕರ್ಷೆ ಯಮ
ಸಮೂಹ। ತೇಜೋ ಯತ್ತೇ ರ
ಯೋ ಅಸಾವಸೌ ಪುರುಷಃ ಸೋ

ವಾಯುರನಿಲಮಮೃತಮಥ
ಸ್ಮರ ಕೃತಂ ಸ್ಮರ ಕ್ರತೋ ಸ್ಮರ ಕೃ
ಅಗ್ನೇನಯ ಸುಪಥಾ ರಾಯ
ವಿದ್ವಾನ್। ಯುಯೋಧ್ಯಸ್ಮಜ್ಜುಹು
ಉಕ್ತಿಂ ವಿಧೇಮ ॥೧೮॥

ಓಂ ಪೂರ್ಣಮದಃ ಪೂರ್
ಚ್ಯತೆ। ಪೂರ್ಣಸ್ಯ ಪೂರ್ಣಮಾ

ಓಂ ಶಾಂತಿಃ ಶಾಂತಿಃ ಶಾ

ಮೂಲ ಭೂತ ವಸ್ತುವು ಪೂರ್ಣವಾಗಿದ್ದು ಅದರಿಂದ ಹುಟ್ಟಿದ್ದಾವರೂ ಪೂರ್ಣವೇ ಇರುತ್ತದೆ. ಮತ್ತು ಇಂಥ ಪೂರ್ಣವಾದ ವಸ್ತುವಿನೊಳಗಿಂದ ಪೂರ್ಣವನ್ನು ಹೋಗಲಾಡಿಸಿದರೆ ಉಳಿದುದು ಪೂರ್ಣವೇ ಇರುತ್ತದೆ. ಪರಬ್ರಹ್ಮನು ಮತ್ತು ಅವನಿಂದಾದ ವಸ್ತುಗಳೆಲ್ಲ ಪೂರ್ಣವಾಗಿದ್ದು, ಅವು ಚಿರಕಾಲ ಪೂರ್ಣವಾಗಿಯೇ ಇರುತ್ತವೆ.

(೧) ಪೃಥ್ವೀತಲದಲ್ಲಿ ಯಾವುದಕ್ಕೆ ಜೀವವಿದೆಯೋ ಅದೆಲ್ಲವೂ ಪರಮಾತ್ಮನಿಂದ ಆಚ್ಛಾದಿಸಲ್ಪಟ್ಟಿದೆ. ಹೀಗೆ ವಸ್ತು ಮಾತ್ರವಾದುದನ್ನು ತ್ಯಾಗ ಮಾಡಿ ಮನುಷ್ಯನು ಸಂತೋಷದಿಂದಿರತಕ್ಕದ್ದು. ನಿನ್ನ ಅಥವಾ ಹೆರವರ ಒಡವೆಗೆ ಕಾಂಕ್ಷಿಸಬೇಡ ಎಂದು ಮೊದಲಿನ ನುಡಿಯಲ್ಲಿ ಹೇಳಲ್ಪಟ್ಟಿದೆ. ಇದರಲ್ಲಿ ಪರಮಾತ್ಮನು ಸರ್ವವ್ಯಾಪಿಯಾಗಿರುತ್ತಾನೆ. ಅತನೇ ನಿಜ ವಸ್ತುವು. ಅಂಥದನ್ನು ಮನುಷ್ಯನು ಕಾಂಕ್ಷಿಸತಕ್ಕದ್ದು. ಉಳಿದ ವಸ್ತುಗಳು ತನ್ನವಿರಲಿ ಅಥವಾ ಹೆರವರವಿರಲಿ ಅವುಗಳ ಮೋಹವನ್ನು ಬಿಟ್ಟುಬಿಡಬೇಕು. ಹೀಗೆ ಬಿಟ್ಟುಬಿಟ್ಟಾದಾದರೆ ಮನುಷ್ಯನು ಸುಖಪಡುವನೆಂದು ಇದರಲ್ಲಿ ಹೇಳಲ್ಪಟ್ಟಿದೆ.

(೨) ಮುಂದೆ ಉಪನಿಷತ್ಕಾರನು ಅನ್ನುವದೇನೆಂದರೆ, ಈ ಪ್ರಕಾರ ವಸ್ತುಮಾತ್ರವನ್ನು ಆತ್ಮರೂಪದಿಂದ ಕಾಣಲು ಅಸಮರ್ಥನಾದರೆ ಈ ಲೋಕದಲ್ಲಿ ಕರ್ಮಗಳನ್ನು ಮಾಡುತ್ತ ನೂರು ವರ್ಷಗಳ ವರೆಗೆ ಜೀವಿಸಲು ಇಚ್ಛೆಯನ್ನು ಮಾಡಬೇಕು. ಈ ಪ್ರಕಾರ ಜೀವಿಸುವ ಇಚ್ಛೆಯನ್ನು ಮಾಡಿದ್ದಾದರೆ ಯಾವ ಪ್ರಕಾರ ಮನುಷ್ಯನು ಅಶುಭ ಕರ್ಮದಿಂದ ಅಲಿಪ್ತನಾಗಲು ಇಚ್ಛಿಸುತ್ತಾನೋ ಅದು ಮಾತ್ರ ಅವನಿಗೆ ಕೈಗೂಡದು.

ಮನುಷ್ಯನು ಕರ್ಮಗಳಿಂದ ದೂರಿರುವದು ಅವಶ್ಯವು. ಆದ್ದರಿಂದ ಯಾವ ಕರ್ಮದಿಂದ ಮನುಷ್ಯನು ನಿರ್ಲೇಪನಾಗಲು ಶಕ್ಯವೋ ಅಂಥ ಕರ್ಮವನ್ನೇ ಅವನು ಮಾಡುತ್ತ ಹೋಗಬೇಕು. ಇದೇ ಅವನ ಜೀವಿ

ಮುಲದಿಂದ ರಹಿತವಾದದ್ದು, ಪಾಪರಹಿತವಾದದು, ಯಾವತ್ತನ್ನು ಕಾಣುವಂಥಾದ್ದು, ಯಾವತ್ತನ್ನು ತಿಳಿಯುವಂಥಾದ್ದು, ಸರ್ವವ್ಯಾಪಿಯಾದದ್ದು ಮತ್ತು ಸ್ವಯಂಭುವು ಆಗಿದೆ. ಈ ಆತ್ಮನೆಂದರೆ ಈಶ್ವರನು. ಈ ಈಶ್ವರನು ನಿತ್ಯವಾದ ಸಂವತ್ಸರನೆಂಬ ಹೆಸರಿನ ಪ್ರಜಾಪತಿಗೆ ಅದರ ಯೋಗ್ಯತೆಯಂತೆ ಆಯಾ ಕರ್ತವ್ಯಗಳನ್ನು ವಿಭಾಗಿಸಿಕೊಟ್ಟಿರುತ್ತಾನೆ.

ಈ ಪ್ರಕಾರ ಉಪನಿಷತ್ಕಾರನು ಆತ್ಮನ ಸ್ವರೂಪವನ್ನು ವರ್ಣಿಸಿ ಕರ್ಮ ಮತ್ತು ಜ್ಞಾನ ಇವುಗಳ ವಿವರವನ್ನು ಮುಂದೆ ಹೇಳುತ್ತಾನೆ.

(೯) ಯಾರು ಕೇವಲ ಕರ್ಮವನ್ನು ಮಾಡುತ್ತಾರ್ಥೋ ಅವರು ಅತ್ಯಂತ ಗಾಢವಾದ ಅಂಧಕಾರದಲ್ಲಿ ಪ್ರವೇಶ ಮಾಡುತ್ತಾರೆ. ಮತ್ತು ಯಾರು ಕರ್ಮದ ತ್ಯಾಗ ಮಾಡಿ ಕೇವಲ ದೇವತಾ ಜ್ಞಾನದಲ್ಲಿ ರತರಾಗುತ್ತಾರೋ ಅವರೂ ಸಹ ಇದಕ್ಕಿಂತಲೂ ಹೆಚ್ಚಿನ ಅಂಧಕಾರದಲ್ಲಿ ಪ್ರವೇಶ ಮಾಡುತ್ತಾರೆ.

(೧೦) ವಿದ್ಯೆಯ ಮೂಲಕ ಒಂದು ಪದವು ಪ್ರಾಪ್ತವಾಗುವದೆಂದು ಹೇಳುತ್ತಾರೆ ಮತ್ತು ಅವಿದ್ಯೆ ಎಂದರೆ ಕರ್ಮದ ಮೂಲಕ ಬೇರೊಂದು ಪದವು ಪ್ರಾಪ್ತವಾಗುವದೆಂದು ಹೇಳುತ್ತಾರೆ. ಹೀಗೆ ನಾವು ಬುದ್ಧಿವಂತರಾದವರಿಂದ ಕೇಳುತ್ತೇವೆ. ಅವರು ಈ ಬುದ್ಧಿ ಕರ್ಮ ಮತ್ತು ಜ್ಞಾನ ಇವುಗಳಲ್ಲಿ ಹೀಗೆ ಅಂತರವಿದೆ ಎಂದು ನಮಗೆ ಹೇಳುತ್ತಾರೆ.

(೧೧) ಜ್ಞಾನ ಮತ್ತು ಕರ್ಮ ಇವುಗಳನ್ನು ಒತ್ತಟ್ಟಿಗೆ ಅನುಷ್ಠಾನ ಮಾಡಬೇಕೆಂದು ಯಾವನಿಗೆ ತಿಳಿಯುತ್ತದೋ ಅವನು ಕರ್ಮದ ಮೂಲಕ ಆಗುವ ಮೃತ್ಯುವ ಅತಿಕ್ರಮಣ ಮಾಡಿ ಜ್ಞಾನದಿಂದ ಆಗುವ ಅಮೃತತ್ವವನ್ನು ಅಂದರೆ ಮೋಕ್ಷವನ್ನು ಹೊಂದುವನು.

(೧೨) ಯಾರು ಕಾರಣಬ್ರಹ್ಮದ ಅಂದರೆ ಅವಿದ್ಯೆಯ ಉಪಾಸನೆಯನ್ನು ಮಾಡುತ್ತಾರೋ ಅವರು ಗಾಢಾಂಧಕಾರವನ್ನು ಪ್ರವೇಶ ಮಾಡು

ಮತ್ತು ಅವಕ್ತ ಉಪಾಸನೆಯ
ನವರಿಗೆ ಸ್ಪಷ್ಟ ಮಾಡಿ ತೋರಿಸಿ
ಕೇಳಿರುವೆವು.

(೧೪) ಅವಿದ್ಯೆ ಮತ್ತು
ವಿದ್ಯೆ ಇವೆರಡನ್ನು ಯಾವನು
ಅವನು ಮೃತ್ಯುವಿನ ಆಚೆಗೆ ಹೆ
ಯನ್ನು ಪಡೆಯುತ್ತಾನೆ.

(೧೫) ಸುವರ್ಣದ ಪಾತ್ರೆ
ನು ಹ್ಯಾಗೆ ಆಚ್ಛಾದಿಸಲ್ಪಟ್ಟಿರುವ
ಜನರ ದೃಷ್ಟಿಗೆ ಕಾಣದಂತೆ ಆ
ಪಾಸನೆಯು ಯಾರ ಧರ್ಮವೆ
ಆವರಣವನ್ನು ದೂರ ಮಾಡತಕ್ಕ

(೧೬) ಜಗತ್ತಿನ ಪೋಷಣೆ
ಮನ ಮಾಡುವಂಥ, ಮತ್ತು
ಎಲೋ ಪ್ರಜಾಪತಿಯ ಪುತ್ರನೇ,
ನಿನ್ನ ಕಲ್ಯಾಣಕರವಾದ ತೇಜಸ್ಸ
ಇದರಿಂದ ಯಾವ ಪುರುಷನು
ನಾನಾಗುವನು.

(೧೭) ಜ್ಞಾನ ಮತ್ತು ಕ
ವನ್ನು ಹೊಂದಿದಂಥ ನನ್ನ ವ
ಪಿಯೂ ಮರಣ ರಹಿತವೂ ಆಗಲಿ
ಹೀಗೆ ಸಂಕಲ್ಪ ಮಾಡುವ ಪ್ರಾ
ಸ್ವರೂಪಾದ ಬ್ರಹ್ಮದ ಸ್ಮರಣೆಯ

ಈಶೋಪನಿಷತ್ತಿನಲ್ಲಿ ಆತ್ಮನ ಸ್ವರೂಪವು ಬಹು ಚೆನ್ನಾಗಿ ವಿವರಿಸಲ್ಪಟ್ಟಿದೆ ಆತ್ಮನಿಗೆ ಜನನ ಮರಣಗಳಿಲ್ಲ, ಅದು ಸರ್ವವ್ಯಾಪಿಯಾಗಿದೆ, ಎಲ್ಲವನ್ನೂ ವ್ಯಾಪಿಸಿದೆ. ಆದರೆ ಅವಿದ್ಯೆಯ ಮೂಲಕ ಜಗತ್ತಿನಲ್ಲಿ ವಿವಿಧತೆಯು ಉತ್ಪನ್ನವಾಗಿದೆ ಮತ್ತು ಪುಣ್ಯಪಾಪಗಳು ಪ್ರಾಪ್ತವಾಗುತ್ತವೆ. ಇವುಗಳನ್ನು ಹೋಗಲಾಡಿಸಿ ಆತ್ಮನನ್ನು ತಿಳಿಯಬೇಕಾದರೆ ಜಗತ್ತಿನಲ್ಲಿದ್ದುದನ್ನೆಲ್ಲ ಪರಮಾತ್ಮಭಾವದಿಂದ ಕಾಣಬೇಕು. ಇದರಿಂದ ಅವಿದ್ಯೆಯು ನಾಶವಾಗುವದೆಂದು ಇದರಲ್ಲಿ ಹೇಳಲ್ಪಟ್ಟಿದೆ.

ಜಗತ್ತಿನಲ್ಲಿ ಕ್ರಿಯೆಯು ಇದ್ದು ಧ್ಯಾನವೂ ಅದ್ಭುತವಾಗಿ ಬೆರೆಯಬೇಕು. ಹಿಗೆ ಬೆರೆದವರಾದರೆ ಮನುಷ್ಯನು ಶ್ರೇಷ್ಠ ಸ್ಥಿತಿಗೆ ಬರುವನು. ಬೆರೆಯದಿದ್ದರೆ ಕ್ರಿಯೆಯು ಅವನನ್ನು ಬಂಧನಕ್ಕೆ ಗುರಿಮಾಡುವದು. ಅದೇ ಪ್ರಕಾರ ಯಾರು ಕೇವಲ ಧ್ಯಾನದಲ್ಲಿ ಮುಳುಗಿರುತ್ತಾರೋ ಅವರೂ ಕೂಡ ಜಗತ್ತಿನಲ್ಲಿ ದುಃಖವನ್ನು ಹೊಂದುವರು. ಈಶೋಪನಿಷತ್ತಿನಲ್ಲಿ ಅವಿದ್ಯೆ ಎಂದರೆ ಕ್ರಿಯೆ, ವಿದ್ಯೆ ಎಂದರೆ ಧ್ಯಾನ ಈ ಅರ್ಥವನ್ನು ಇಟ್ಟುಕೊಂಡು ಉಕ್ತಿಗಳು ಹೇಳಲ್ಪಟ್ಟಿವೆ.

ಮೇಲ್ಕಂಡ ವಿಧದಿಂದ ಆತ್ಮಜ್ಞಾನ ಮಾಡಿಕೊಂಡವನು ಮಾಯೆ ಮತ್ತು ದುಃಖದಿಂದ ದೂರಾಗುವನು. ಯಾವನು ಎಲ್ಲ ವಸ್ತುಗಳಲ್ಲಿ ತನ್ನನ್ನು ಮತ್ತು ತನ್ನಲ್ಲಿ ಎಲ್ಲ ವಸ್ತುಗಳನ್ನು ಕಾಣುತ್ತಾನೋ ಅವನಿಗೆ ಮೋಹಗಳು ಒದಗುವ ಬಗೆ ಹೇಗೆ?

ಈ ಬಗೆಯ ಸಾಮರಸ್ಯ ಭಾವವನ್ನು ಕಂಡುಹಿಡಿಯುವದು ಮನುಷ್ಯನ ಮುಖ್ಯ ಧ್ಯೇಯವಾಗಿರತಕ್ಕದ್ದು. ಜಗತ್ತಿನ ಶಾಂತತೆಯು ಇದರ ಮೇಲೆಯೇ ಅವಲಂಬಿಸಿದೆ. ಹೀಗೆ ತಿಳಿದವನು ಮತ್ತು ಆಚರಿಸುವವನು ಯಾರ ಗೂಡವೂ ದ್ವೇಷವಾಡಲಾರನು. ಆದರೆ ಈ ವಿಚಾರಗಳು ಈ ಕಾಲದಲ್ಲಿ ರೂಢವಾಗಿರದ್ದರಿಂದಲೇ ದೇಶಗಳಲ್ಲಿ ಮತ್ತು ಸಮಾಜದಲ್ಲಿ ಅನೇಕ ಬಗೆಯ ದ್ವೇಷಾಸೂಯೆಗಳು ನೆಲೆಗೊಂಡಿರುವವು.

ಗಿಯೂ ಅಪೇಕ್ಷಿಸದೆ ಲೋಕವಲ್ಲಭನ ಸೇವೆಯು ತನ್ನ ಕರ್ತವ್ಯವೆಂದು ತಿಳಿದು ದೇವರನ್ನು ಪ್ರೀತಿಸುವವನು ನಿಷ್ಕಾಮ ಭಕ್ತನು. ಸಕಾಮ ಮತ್ತು ನಿಷ್ಕಾಮ ಭಕ್ತರಿಬ್ಬರೂ ಭಕ್ತವರ್ಗದಲ್ಲಿಯೇ ಗಣನೀಯರಾದರೂ ಇವರೀರ್ವರ ಯೋಗ್ಯತಾ ನಿರ್ಣಯವು ಭೂಮ್ಯಾಕಾಶದಷ್ಟಿದೆ.

ಇಂದ್ರಕೀಲದಲ್ಲಿ ಸಕಾಮಿಯಾಗಿ ತಪಸ್ಸು ಮಾಡುತ್ತಿದ್ದ ಹಸಯೋಗಿಯಾದ ಕಲಿಪಾರ್ಥನಿಗೆ ನಾಲ್ಕು ತಿಂಗಳಾದರೂ ಪರಶಿವನು ಪ್ರತ್ಯಕ್ಷವಾಗದಿದ್ದನು. ನಿಷ್ಕಾಮ ಭಕ್ತನಾದ ಕಲಿಭೀಮನು ತನ್ನ ಗದೆಯನ್ನು ಮೇಲಕ್ಕೆಸೆದು ಬಾರೆಂದು ಕರೆದೊಡನೆಯೇ ಕ್ಷಣಾರ್ಧದಲ್ಲಿ ಕೈಲಾಸಪತಿಯು ಬಂದುಬಿಟ್ಟನು. ಸಕಾಮಭಕ್ತ ನಿಷ್ಕಾಮಭಕ್ತಿ ಇವರಡಕ್ಕೂ ಇರುವ ವ್ಯತ್ಯಾಸವನ್ನು ಮೇಲಿನ ಇತಿಹಾಸದಿಂದ ತಿಳಿಯಬಹುದು.

ಪರಮಾತ್ಮನಿಗೆ ಭಕ್ತರೆಂದರೆ ಬಹು ಪ್ರೇನು. "ಮಮ ಭಕ್ತೋಹಿ ಮಮಾಧಿಕಃ" ಎಂದು ಅವನು ಜಗತ್ತಿನಲ್ಲಿ ಡಂಗುರ ಹೊಡೆದಿರುವನು. ಅವರಲ್ಲಿಯೂ ನಿಷ್ಕಾಮಭಕ್ತರು ಅವನಿಗೆ (ದೇವರಿಗೆ) ಅತ್ಯಂತ ಪ್ರಿಯತಮರೆಂದು ಅತನು ಬಾಯಿಬಿಟ್ಟ ಹೇಳದಿದ್ದರೂ ಅತನ ಚರ್ಯೆಗಳಿಂದ ನಾವು ನಿರ್ಧರಿಸಬಹುದು.

ಭಕ್ತರನ್ನು ಪ್ರೀತಿಸುವಾಗ ಕುಲ, ರೂಪ, ಅಧಿಕಾರ, ಐಶ್ವರ್ಯ ಮೊದಲಾದವುಗಳಾವನ್ನೂ ಲೆಕ್ಕಿಸದೆ ಆ ದಯಾಘನನು ಭಕ್ತನ ಚಿತ್ತವೃತ್ತಿಯನ್ನು ಮಾತ್ರ ಅವಲೋಕಿಸುವನೆಂಬುದನ್ನು ನಾವು ಮಾರ್ಕಂಡೇಯ, ಕಣ್ಣಪದೇವ, ಬಿಲ್ಹಣಾದಿಗಳನ್ನು ಕೇಳಿ ತಿಳಿಯಬಹುದು.

ಭಕ್ತಿಯ ರುಚಿಯನ್ನು ಚನ್ನಾಗಿ ಅನುಭವಿಸಿದ ಮಹಾಕವಿ ಮಗ್ಗೆ ಮಾಯಿದೇವನು.

ಏನೆನಲುಂಟು ಭಕ್ತಿಯ ಮಹಾತ್ಮತೆಯು

ಗೊಳಿಸುವಳು. ಆಕೆಗೆ 'ಕೊಡಗೂಸು' ಎಂದು ಹೆಸರಿಡಿ, ನಿಮಗೆ ಮು
ಗ್ಗವಾಗಲಿ" ಎಂದು ಹೇಳಿ ಹರಸಿ ಅದೃಶ್ಯನಾದನು. ಶಿವದೇವನು
ಸ್ವಪ್ನದಿಂದೆದ್ದತ್ತು ಕಲ್ಯಾಣಿಯನ್ನು ಜಾಗ್ರದಗೊಳಿಸಿ ಯಾವದ್ವೃಂತವನ್ನೂ
ಆಕೆಗೆ ತಿಳುಹಿದನು. ಅದಕ್ಕವಳು ಅತ್ಯಂತವಾಗಿ ಹರ್ಷಿಸಿ "ಹೃದಯೇ
ಶ್ವರಾ ನಾನು ಮನಸ್ಸಿನಲ್ಲಿ ಹೆಣ್ಣು ಮಗಳಾದರೆ ಸಾಕೆಂದು ಸಂಕಲ್ಪಿ
ದ್ದೆನು. ಪಂಚಿವನೂ ಅದನ್ನೇ ಅಪ್ಪಣೆ ಮಾಡಿರುವನಲ್ಲಾ" ಎಂದು
ಪರಮಾತ್ಮನ ಅಪಾರ ಮಹಿಮೆಯನ್ನು ಕೊಂಡಾಡಿದಳು.

ಕಲ್ಯಾಣೀ ಶಿವದೇವರು ಸ್ವಲ್ಪ ಕಾಲ ಕಳೆಯಲಾಗಿ ಶಿವಕೃಪೆ
ಯಿಂದ ಶಿವದೇವ ಪತ್ನಿಯು ಗರ್ಭಿಣಿಯಾಗಿ ಸುಮುಹೂರ್ತದಲ್ಲಿ ಒಂದು
ಕನ್ಯಾರತ್ನವನ್ನು ಹಡೆದಳು. ಜಾತಕರ್ಮಾದಿಗಳಾಗಲು ಆ ಶಿಶುವಿಗೆ
ಶಿವನಪ್ಪಣೆಯಂತೆ ಕೊಡಗೂಸೆಂದು ಹೆಸರಿಟ್ಟರು. ಮಗುವು ಬಾಲ
ಚಂದ್ರನಂತೆ ಬೆಳೆಯಿತು.

ಮಗುವಿಗೆ ತಕ್ಕಷ್ಟು ವಯಸ್ಸಾಗಲು ತಂದೆ ತಾಯಿಗಳು ಓದು
ಬರಹಗಳನ್ನೂ ಆಚಾರವಿಚಾರಗಳನ್ನೂ ಕಲಿಸತೊಡಗಿದರು. ಹುಡುಗಿಯು
ವಿಧೇಯಳಾಗಿ ವಿದ್ಯಾವಂತೆಯೂ ಗುಣವಂತೆಯೂ ಆಗುತ್ತಿದ್ದಳು. ಹೀಗಿ
ರುತ್ತಿರಲು ಹುಡುಗಿಗೆ ೮—೯ ವರ್ಷ ವಯಸ್ಸಾಯಿತು.

ಒಂದಾನೊಂದು ದಿವಸ ಪತಿಪತಿಗಳೀರ್ವರೂ ಸರಸಸಲ್ಲಾಪದಲ್ಲಿರು
ವಾಗ ಹೀಗೆ ಚರ್ಚಿಸಿದರು.

ಶಿವದೇವಃ— ಪ್ರಿಯತಮೆ, ಶಿವರಾತ್ರಿಯ ಪುಣ್ಯದಿನವು ಸನ್ನಿಹಿತ
ವಾಯಿತು. ಭೂಕೈಲಾಸವೆನಿಸಿದ ಶ್ರೀಶೈಲಕ್ಷೇತ್ರದಲ್ಲಿ ಶ್ರೀ ಮಲ್ಲಿಕಾರ್ಜುನ
ಸ್ವಾಮಿಯ ಜಾತ್ರೆಯು ನಡೆಯುವುದು. ಆ ಕಾಲದಲ್ಲಿ ಅಖಂಡ ಭರತ
ಖಂಡದಿಂದಲೂ ಸಾಧುಸಂತರೂ, ಗುರುಜಂಗಮರೂ ದಯಮಾಡಿಸು
ವರು. ಇದಲ್ಲದೆ ಆ ಕಾಲದಲ್ಲಿ ಶ್ರೀ ಮಲ್ಲಿಕಾರ್ಜುನನ ಬಗೆಬಗೆಯಾದ
ಉತ್ಸವಗಳನ್ನು ನಡೆಸುವರು. ಆದುದರಿಂದ ನಾವು ಯಾತ್ರೆಯ

ಯನ್ನು ಮಾಡುವೆವೆಂಬುದಾಗಿ ನ
ದ್ದೆನು. ಮಗಳಾಗಿ ನನ್ನ ಇಷ್ಟಾರ್ಥ
ಸೇವೆಯನ್ನು ಈ ಸಡಗರದಲ್ಲಿ
ಪ್ರಮಾದವಾಯಿತು.

ಶಿವದೇವಃ— ದೇವೀ ಚಿಂತಿ
ನಿನ್ನನ್ನು ಕ್ಷಮಿಸುವನು. ಹರ
ಯರು ಹೇಳುವರು. ನಿನ್ನ ಪ್ರತಿ

ಕಲ್ಯಾಣಿಃ— ಪ್ರಾಣನಾಥಾ
ಹೊರಡಬಹುದು. ಕುಮಾರಿಯೊ

ಶಿವದೇವಃ— ಕುಮಾರಿಯ
ಪ್ರತಿದಿನವೂ ಕಪಿಲೆಯ ಹಸುವಿ
ಕಲ್ಲಿನಾಥನಿಗೆ ಸಲ್ಲಿಸುವ ವ್ರತವು
ನಿಂದಲೂ ಒಂದು ದಿನವೂ ತ
ಆದುದರಿಂದ ನಾವು ಯಾತ್ರೆಯ
ಕುಮಾರಿಯು ಈ ವ್ರತವನ್ನು ನ

ಕಲ್ಯಾಣಿಃ— ದೇವಾ, ಎಳ
ವ್ರತವನ್ನು ನಡಿಸುವಳೇ? ಮನೆ
ಇರಲು ತಾನೇ ಸಾಧ್ಯವೇ?

ಶಿವದೇವಃ— ಮಗಳನ್ನೇ

ಕಲ್ಯಾಣಿಃ— ತಾವೊಬ್ಬರೇ
ಸಲ್ಲಿಸಿಬರಬಾರದೇಕೆ? ನಾನು ಮನೆ
ಪೆನು.

ಶಿವದೇವ:— ಮಾಡುವದೇನು ಮಗಳನ್ನು ಕರೆದು ಅವಳಿಗೀ ವಿಷಯವನ್ನೆಲ್ಲ ತಿಳಿಸಿ ಅವಳು ಮನೆಯಲ್ಲಿದ್ದು ಶಿವಸೇವೆಯನ್ನು ಮಾಡು ತ್ತಿರುವಂತೆ ನಿಯಮಿಸಿ ನಾವೀವರೂ ಶ್ರೀಶೈಲಕ್ಕೆ ಹೊರಡೋಣ.

ಹೀಗೆ ಪತಿಪತಿಗಳು ಮಾತನಾಡುತ್ತಿರುವಲ್ಲಿ ಪಾಠಶಾಲೆಗೆ ಹೋಗಿದ್ದ ಮಗಳು ಓಡಿಯೋಡಿ ತಂದೆತಾಯಿಗಳಿದ್ದ ಸ್ಥಳಕ್ಕೆ ಒಂದು ಆನಂದ ದಿಂದ ತಾಯಿಯ ಮೈಮೇಲೆ ಬಿದ್ದು ನಲಿದಾಡುವಳು. ಮಾತಾಪಿತೃ ಗಳು ಸೌಂದರ್ಯ, ಸೌಜನ್ಯ, ಸೌಕುಮಾರ್ಯ ಸೌಭಾಗ್ಯಗಳನ್ನೂ ಅಕೃತ್ರಿಮವಾದ ನಡೆನುಡಿಗಳನ್ನೂ ನೋಡಿ ಮನದಣಿಯ ಆನಂದಿಸು ವರು. ಶಿವದೇವನು ಮಗಳ ಮುದ್ದು ಮುಖವನ್ನು ನೋಡಿ ಸಂತೋ ಷಾತಿಶಯದಿಂದ

ಶಿವದೇವಃ— ತಂಗೀ ನಾನೂ ನಿಮ್ಮ ತಾಯಿಯೂ ಶ್ರೀಶೈಲಕ್ಕೆ ಹೋಗಿಬರುವೆವು. ನೀನು ಮನೆಯಲ್ಲಿ ಎಚ್ಚರಿಕೆಯಿಂದ ಇರುವೆಯಾ?

ಕೊಡಗೂಸುಃ— ತಂದೆಯೇ ನಿನ್ನಪ್ಪಣೆಯಂತಾಗಲಿ.

ಕಲ್ಯಾಣಿಃ— (ಮಗಳನ್ನು ಮೈದಡವಿ) ಅಮ್ಮಾ ಮನೆಯಲ್ಲಿರುವುದು ಮಾತ್ರವಲ್ಲ. ನಾವು ಶ್ರೀಶೈಲದಿಂದ ಹಿಂದಿರುಗಿ ಬರುವ ವರೆಗೂ ನಿಮ್ಮ ತಂದೆಯು ನಡೆಸುತ್ತಿರುವ ಕಲ್ಲಿನಾಥನ ವ್ರತವನ್ನು ನಡೆಸುವಿಯಾ?

ಕೊಡಗೂಸುಃ— ಅಮ್ಮಾ ನಿಮ್ಮ ಆಪ್ಪಣೆಯನ್ನು ಎಂದಾದರೂ ಮೀರಿರುವೆನೇ. ನೀವು ನಿಶ್ಚಿಂತರಾಗಿ ಯಾತ್ರೆಗೆ ಹೋಗಿ ಬನ್ನಿ ನೀವು ಬರುವ ವರೆಗೂ ಪ್ರತಿದಿನವೂ ತಂದೆಯು ಕಲ್ಲಿನಾಥನಿಗೆ ಸಲ್ಲಿಸುತ್ತಿರುವ ಬಿಳಿ ಹಾಲನ್ನು ನಾನೂ ತಪ್ಪದೆ ಶಿವನಿಗೆ ಸಲ್ಲಿಸುವೆನು.

ಶಿವದೇವಃ— (ಮಗಳ ತಲೆಯನ್ನು ಕೈಯಿಂದ ಸವರಿ) ಮಗೂ ಪ್ರತಿದಿನವೂ ಜ್ಞಾಪಕವಾಗಿ ಸ್ವಾಮಿಗೆ ಕಪಿಲೆಯ ಹಸುವಿನಿಂದ ಬಿಳಿ

ಕೊಡಗೂಸಿನ ಶಿ

ಸುಳ್ಳೋ ಎಂಬುದನ್ನು ನೀವು ಂ
ಸ್ವಾಮಿಯನ್ನೇ ಕೇಳಿ ತಿಳಿಯರಿ.

ಕೊಡಗೂಸಿನ ವಿಮಲವಾ
ಶಿವದೇವರು ಬಹುವಾಗಿ ಕೊಂದ
ರಾದರು.

ಸುಮುಹೂರ್ತ ಒಂದರಲ್ಲಿ
ಬುದ್ಧಿಖಾದೆಗಳನ್ನೆಲ್ಲಾ ಹೇಳಿ ಶ್ರೀ
ನಾನಾ ದೇಶಗಳಿಂದ ತಂಡೋಪ
ದ್ದರು.

ಮರುದಿನ ಕೊಡಗೂಸು ಮ
ಮಡಿಯುಟ್ಟು ತಮ್ಮ ಮನೆಯಂ
ಬಿಳಿ ಹಾಲನ್ನು ಕರೆದು ಅದ
ಕಾಯಿಸಿ ತಾನು ವಿಭೂತಿ ರುದ್ರಾ
ಲಯದ ಕಡೆಗೆ ನಡೆದಳು.

ಹೀಗೆ ಹೋಗುವಾಗ ಬಾ
ನೋಡುವೆನು, ಶಿವನು ಯಾವ
ದಾಗಿ ತವಕಿಸುತ್ತ ಬಹು ಬೇಗ
ಸ್ಥಾನದ ಅಂದಚೆಂದಗಳನ್ನು ನೆ
ಆ ದೇವಾಲಯದ ಪ್ರಾಕಾರದಲ್ಲಿ
ಗಳನ್ನು ನೋಡಿ ಸಂತೋಷಪಟ್ಟ

ದೇವಾಲಯದ ಗರ್ಭಾಂಗ
ಭನು ಲಿಂಗಾಕಾರವಾಗಿ ತೋ

ಕೊಡಗೂಸು ನಿಷ್ಕಪಟವು ಭಕ್ತಳಾದುದರಿಂದ ತಂದೆಯು ಶಿವನಿಗೆ ಕಪಿಲೆಯ ಹಾಲನ್ನು ಸಮರ್ಪಿಸಿ ಬಾರೆಂದುದನ್ನು ಪರಮಾತ್ಮನಿಗೆ ಕುಡಿಸುವದೆಂದು ಅರ್ಥ ಮಾಡಿಕೊಂಡಳು ಶಿವನಿಗೆ ಹಾಲನ್ನು ನಿವೇದಿಸಿ ಹಿಂದಕ್ಕೆ ತರುವದು 'ದತ್ತಾಪಹಾರ ದೋಷ' ವೆಂದೂ ಜಿಪುಣತನವೆಂದೂ ಅವಳ ನಂಬುಗೆ ಆದುದರಿಂದ ಕಲ್ಲಿನಾಥನು ಹಾಲನ್ನು ಎದ್ದು ಬಂದು ಕುಡಿಯದೆ ಮೌನವಾಗಿದ್ದುದನ್ನು ನೋಡಿ,

ಕಂದ ದಡದಡಿಪೆದೆ ಬಿಸಿಮುಸಗುವ ।
ನಿಡುಸುಯ್ದುಂಪಿಪ ಗರಂಗಳಿರ್ಪೋಡಿದ ಬಾಯ್ ॥
ಗುಡುಗುಡನೆ ಸುರಿದ ಕಣ್ಣಿನಿ ।
ಯೊಡನಿರೆ ಕೊಡಗೂಸು ನೋಡಿ ಲಿಂಗಮನಾಗಳ್ ॥

ವೃಷಭೇಂದ್ರವಿಜಯ ಅ ೯ ಪ. ೨೨

ಎಲೈ ಕರುಣಾಭರಣನಾದ ಸರ್ಪಭೂಷಣಾ ! ಉಮಾಧವಾ !! ಶಂಕರಾ !!!

ಕಂದ॥ ಏಂ ಕಾರಣಮೀ ಪಾಲಂ ।
ನೀಂ ಕುಡಿಯದೆ ಸುಮ್ಮನಿರ್ಪೆಯಕಟಕಟಿನಗಾ ॥
ಟಂಕಮನಾಗಿಪುದುಚಿತವೆ ।
ಶಂಕರ ನೀ ಪೇಳ್ವುದೆಂದು ಮಗುಳ್ದಿಂತೆಂದಳ್ ॥೭೩॥

ಪಸಿವೇನಾದುದೊ ದೇವ ಕೇಳ್ದಿನಗೆ ಪಾಲೇಂ ಕಾಯದೋ ಪೊತ್ತಿತೋ ।
ಬಿಸುಪಾರಿರ್ದುದೊ ಕಂಮನಾಗದೊ ತನತ್ತಿಂ ಪೇರದೋ ಕಣ್ಗೆ ರಂ ॥
ಜಿಸದೋ ಮೇಣ್ ಪೊಗೆಸುತ್ತಿದತ್ತೊ ಪೆರರಿಂ ಕಣ್ಣಿಂಜಲಾದತ್ತೆಂಬ ।
ಲ್ಲಿಸಿಯಾಗಿರ್ದುದೊ ಮೀಸಲೋಸರಿಸಿತೋ ಪೇಳೇಂಟದಿರ್ಪಂದಮಂ

ಮನವೆಳಸಿ ನೋಡಿದೆನೆನ ।
ಲ್ಲೆನೆಯಂ ಬೇರ್ಕೈದುತಂದೆನೇ ಪಾಲನಿದಂ ॥
ಮನೆಯಲ್ಲಿ ತಡಂಗೆಯ್ದಿನೆ ।
ನಿನೆದಿನೆ ಪೆರಕೊಂದನೇಕೆ ನುಡಿಯೆ ಪುರಾರೀ ॥೭೫॥

ಬಿಸುಪಾರಿರ್ದೋಡೆ ಸವಿಸಮ ।
ನಿಸುಗುಮೆ ಬಗೆದಂದು ಜವದಿ ನೀಂಟೆಯ್ಯಸುಧಾ ॥
ರಸಮಂ ನೀಂ ಬಯಸಿದುದಂ ।
ಪೆಸಸೀಗಳೆ ನಿನಗೆ ಪೋಗಿತಂದಪೆನಭವಾ ॥೭೬॥

ಪೊಸಸಕ್ಕರೆಯಂಗವ ಮಧು ।
ರಸಮಂ ನರುನೆಯ್ಯನೆಸೆವ ಕದಳೀ ಫಲಮಂ ॥
ರಸನೆ ಯೆಳಸಿದುದ ನೆನ್ನೋಳ್ ।
ಪೆಸಸೀಗಳೆ ನಿನಗೆ ತಂದಪೇಂ ಶಶಿಮೌಳಿ ॥೭೭॥

ಪುರಿಗಡುಬು ತರಗು ಚಕ್ಕುಲಿ ।
ಕರಂಜಿಕಾಯತಿರಸಂಚಿಗುಳಿಲಡ್ಡುಗೆ ಸ ॥
ಕ್ಕರೆ ಪೇಣಿಯೊಳವುಮನ್ಯಂ ।
ದಿರದೋಳ್ನೀಂ ಬಯಸೆ ಪೋಗಿ ತಂದಪೆನೀಗಳ್ ॥೭೮॥

ಪಾಲೊಡನಾರೋಗಿಪೆನೆನೆ ।
ಲೀಲೆಯೊಳಾಂ ಪೋಗಿ ತರ್ಪೆನೋರಗಮನಿವಳ್ ॥
ಬಾಲಕಿ ಪುಸಿ ನುಡಿದಪಳೆಂ ।
ದಾಲೋಚಿಸದಿರು ಪರೀಕ್ಷಿಸೆನ್ನಯ ಗುಣಮುಂ ॥೭೯॥

ಎನ್ನ ಮಾತನುಪೇಕ್ಷೆಗೆಯ್ಯದೆ ಪಾಲನೀಂಟೆದಡಯ್ಯ ಕೇಳ್ ।
ನಿನ್ನನಾಂ ಕರದೊಯ್ವ ನೊಪ್ಪುವ ವೀರಭದ್ರನ ತೇರ್ಗೆಸಂ ॥
ಪನ್ನ ಮದ್ಗುರು ಪರ್ವ ಕೆನ್ನೆಯ ತಂದೆ ನಾಳೆನಗೀವರ ॥
ತ್ನೋನ್ನತಾಭರಣಂಗಳಂ ನಿನಗೀವೆನೆಂದು ಕಳಾಧರಾ ॥೮೦॥

ವೃಷಭೇಂದ್ರವಿಜಯ ಅ. ೯

ಎಂಬುದಾಗಿ ಪರಮೇಶ್ವರನನ್ನು ನಾನಾ ಪ್ರಕಾರವಾಗಿ ಪ್ರಾರ್ಥನೆಮಾಡಿದರೂ ಶಂಕರನು ಸಾಕಾರನಾಗಿ ಬಂದು ತಾನು ತಂದಿಟ್ಟ ಹಾಲನ್ನು ಕುಡಿಯದೆ ಮೌನವಾಗಿರುವುದನ್ನು ನೋಡಿ ಕೊಡಗೂಸು ಬಾಲೆಯು ಅತ್ಯಂತ ದುಃಖಿಯಾಗಿ ಕಂದಿ ಕುಂದಿ ಬೆಂದು ಬಸವಳಿದು ಬೇಗುದಿಯಾಗಿ ಹೋದಳು.

ಆಗ ಹುಡಿಗಿಯು ಈ ರೀತಿ ತನ್ನ ಮನಸ್ಸಿನಲ್ಲಿ ಯೋಚಿಸಿದಳು. 'ನಾನು ಮುಂದೆ ನಿಂತಿರುವುದರಿಂದ ಪರಮೇಶ್ವರನು ಎದ್ದುಬಂದು ಹಾಲು ಕುಡಿಯಲು ನಾಚುತ್ತಿರಬಹುದು. ಆದುದರಿಂದ ನಾನು ಈ ಕಂಬದ ಮರೆಯಲ್ಲಿ ನಿಂದುಕೊಂಡರೆ ಶಿವನು ಹಾಲನ್ನು ಕುಡಿವನು ಹೀಗೆ ಆಲೋಚಿಸಿ, ಕೊಡಗೂಸು ಬಾಲಕಿಯು ಆ ದೇವಾಲಯದ ಆದೊಂದು ಕಂಬದ ಮರೆಯಲ್ಲಿ ಸ್ವಲ್ಪಕಾಲ ನಿಂತುಕೊಂಡಳು. ಸ್ವಲ್ಪ ಕಾಲವಾದ ಮೇಲೆ

'ಈಗ ಶಂಕರನು ಹಾಲುಕುಡಿದು ಹೋಗಿರಬೇಕು' ಎಂದು ಯಥಾ ಪ್ರಕಾರ ತನ್ನ ಹಾಲಿನ ಬಟ್ಟಲ ಹತ್ತಿರಕ್ಕೆ ಬಂದು ನೋಡಿದಳು. ಪೂರ್ವದಲಿನಂತೆ ಹಾಲು ತುಂಬಿದ ಪಾತ್ರೆಯಿದ್ದಿತು. ಕೊಡಗೂಸಿಗೆ ಬಹು ದುಃಖವಾಗಿ.

ಮೃಡನಡಿಗೆ ಪೊಡವಡುಗು ಪಾಲಂ ।
ಕುಡಿಯದಿರ್ದಡೆ ನೋಡಿ ಕಡುಸಿಡಿ ।
ಮಿಡಿಗೊಳತ್ತೋರಂತೆ ಚಿಂತಿಸುತಿರ್ಕು ಕೊಡಗೂಸು ॥
ಬಡವಗುವು ನಾನೆಂದು ಕಾಡುವ ।
ಪೊಡೆಯ ನಿಮ್ಮುವನೇನನೆಂಬೆನು ।
ಕಡೆಗೆ ಆಡೋಗಿಸಿದಡಲ್ಲದೆ ಬಿಡೆನು ನಿಮ್ಮಾಣೆ ॥೧೯॥

ಹಾಲನೀಗಳು ಕುಡಿಯದಿರ್ದಡೆ ।
ಕೇಳಿಯಮ್ಮವರೆನ್ನನಾಗಳೆ ।
ಬೀಳ ಸದೆದಸುವನ್ನೆ ಕಳೆಯುವರಲ್ಲದವರಿಂದೆ ॥
ಮೇಲದೆಂತುಂ ಸಾವು ತಪ್ಪದು ।
ಶೂಲಿ ಚಿತ್ತೈಸೆಯ ಹಿಂದಕೆ ।
ಕಾಲನಿಕ್ಕುವಳಲ್ಲ ಯಿಲ್ಲಿಯೆ ಸತ್ತು ಸರಿಯುಹೆನು ॥೨೦॥

ಬಸವಪುರಾಣ ಸಂಧಿ ೧೪

ಮೇಲ್ಕಂಡಂತೆ ಬಾಲಕಿಯು ಪ್ರತಿಜ್ಞೆಮಾಡಿ ಶಿವನೇ ನೀನು ಹಾಲು ಕುಡಿಯದಿದ್ದರೆ ಮುಂದಿರುವ ಕಲ್ಲು ಕಂಭಕ್ಕೆ ನನ್ನ ತಲೆಯನ್ನು ಆಹುತಿಯಾಗಿ ಕೊಡುವೆನು. ನಾನೆಂದಿಗೂ ಮಾತಾಪಿತೃಗಳಿಗೆ ಸುಳ್ಳು ಹೇಳತಕ್ಕವಳಲ್ಲ ಎಂದು ಕೊಡಗೂಸು ಮುಂದಿರುವ ಶಿಲಾಸ್ತಂಭದ ಕಡೆಗೆ ಸರಸರನೆ ನಡೆದಳು.

ದಯಾ ಘನನಾದ ಪರಮೇಶ್ವರನು ಇನ್ನು ತಡ ಮಾಡಿದರೆ ಕೆಲಸ ಕೆಡುವುದೆಂದು ಶಿವಲಿಂಗ ಮಧ್ಯದಲ್ಲಿ ನಿಜರೂಪುದೋರಿ ಪಾರ್ವತಿ ಸಹಿತನಾಗಿ ಓಡಿಬಂದು

ಕಂದ॥ ನಂದಸೆ ನೊಂದಪಳಿಂದೊ।
ಲ್ದಿಂದು ಧರಂ ಪಿಡಿದು ಸೆಗಪಿ ನಿಜಕರದಿನವ॥

ಳ್ತಂದಪ್ಪೆವಾಲನೀಂಟಿದ।
ನಂದಂ ವಿಗೆ ಭಕ್ತ ವತ್ಸಲಂ ಬಳಿಕಾಗಳ್॥

ವೃಷಭೇಂದ್ರ ವಿಜಯ ಅ. ೯. ಪ. ೮೨.

ಜಗನ್ನಿಯಾಮಕನೂ ಸರ್ವಜ್ಞ ಸರ್ವ ಚೈತನ್ಯ ಸರ್ವೇಶ್ವರನೂ ಆದ ಸರ್ವ ಮಂಗಲಾಧವನ ಆ ಅಸದೃಶ ರೂಪವನ್ನು ನೋಡಿ ಸುಕುಮಾರಿಯಾದ ಕೊಡಗೂಸು ಚಕಿತಳಾದಳು. ಮತ್ತು ಮೃತ್ಯುಂಜಯನನ್ನು ಕುರಿತು

ಎಳನಗೆಯುಜ್ಜ್ವಮುದ್ದು ಮೊಗದೊಳ್ಪುಧೆಯಿಂದಭಿಷೇಕಪಂತೆಕಂ ।
ಬೆಳಗಡದೊಪ್ಪಿ ಲಿಂಗ ತನುವಂ ಕೊಡಗೂಸು ಮನೋನುರಾಗಸಂ॥
ಮಿಳಿತ ವಿನೋದದಿಂ ಪಸುಳೆಯಾನೆನುತಂ ಸುಧೆಯೀಂಟಲೊಲ್ಲದುಂ ।
ಮುಳಮು ನೊಡರ್ಚಿಕಾಡಿದೆಗಡೆಂದೆನೆ ನಕ್ಕನಹೀಂದ್ರಭೂಷಣಂ ॥೮೩॥

ಜನಕಂಬಂದೊಡೆ ಪೇಳ್ದಪೆ ।
ನಿನಿತೆಲ್ಲಮನಯ್ಯ ಮರೆಯದಿರ್ಬಳಿಕೆನಗಂ॥
ನಿನಗಂ ಸಂವಾದಮದುಂ ;
ಟಿನುತಂ ಪೊಡಮಟ್ಟ ನಗುತೆ ಮನೆಗೇಳ್ತಂದಳ್ ॥೮೪॥

ವೃಷಭೇಂದ್ರ ವಿಜಯ ಅ. ೯.

ಕೊಡಗೂಸು ಈ ವಿಧವಾಗಿ ಶಂಕರನನ್ನು ಹಂಗಿಸಿ ಮನೆಗೆ ಹೊರಟು ಹೋದಳು. ಇತ್ತ ಸರ್ವ ಮಂಗಲಾದೇವಿಯು ಶಿವನೇ! ಮುಗ್ಧೆಯಾದ ಬಾಲಕಿಯನ್ನು ಈ ಪರಿಯಾಗಿ ಕಾಡಿಸುವುದು ನ್ಯಾಯವೇ, ಕರುಣಾಮಯನೆಂದೂ, ಭಕ್ತಪ್ರಾಣನೆಂದೂ ನಿನ್ನನ್ನು ವೇದಗಳು ಹೊಗಳುವುದು ಸಟೆಯೇ, ಎಂದು ನಿಷ್ಠುರೋಕ್ತಿಯನ್ನಾಡಲು ಉಮಾಪತಿಯು ನಸುನಗೆಯಿಂದ ದೇವಿಗಿರಿಜೆ ಕೇಳು.

ಬಾಲೆಯನುಣ್ಣಿಡಿ ಬಟ್ಟಲ ।
ಪಾಲಿಂದಿನಿದಾಗೆ ಕಿಲಿಗೆ ಪಾಲ್ಗುಡಿಯದೆಮುಂ ॥
ನಾಲಲನೆಯ ಮುಗ್ಧೋಕ್ತಿಯ ।
ನಾಲಿಸಿದೆಂ ಮುದದಿನೆಂದನುಮೆಗೆ ಮಹೇಶಂ ॥

ವೃಷಭೇಂದ್ರ ವಿಜಯ ಅ. ೯. ಪ. ೮೫.

ಇತ್ತೆ ಕೊಡಗೂಸು ಬಾಲೆಯು ವೇಳೆಗೆ ಸರಿಯಾಗಿ ಶಿವಾಲಯಕ್ಕೆ ಕಪಿಲೆಯ ಬಳ್ಳ ಹಾಲನ್ನು ಶುಚಿರ್ಭೂತಳಾಗಿ ತಂದು ಶಿವನ ಮುಂದಿಡುತ್ತಲೇ ಶಂಕರನು ಪ್ರತ್ಯಕ್ಷನಾಗಿ ಬಂದು ಹಾಲು ಕುಡಿದು ಆ ಬಾಲಿಕೆಯನ್ನು ಮುದ್ದಾಡಿ ಮನೆಗೆ ಕಳುಹುವನು.

ಹೀಗೆ ಏಳೆಂಟು ದಿನಗಳು ಕಳೆದವು. ಪ್ರತಿದಿನವೂ ಕೊಡಗೂಸು ಕ್ರಮ ತಪ್ಪದೆ ಶಿವನಿಗೆ ಹಾಲು ಕುಡಿಯಿಸಿ ಹೋಗುತ್ತಿದ್ದಳು. ಎಂಟನೆಯ ದಿನ ತಂದೆತಾಯಿಗಳು ಶ್ರೀಶೈಲ ಯಾತ್ರೆಯನ್ನು ಮುಗಿಸಿಕೊಂಡು ಆ ಕಲ್ಲಿನಾಥ ದೇವಾಲಯದ ಮಾರ್ಗವಾಗಿ ಬರುತ್ತಿದ್ದರು. ದೇವರಿಗೆ ಹಾಲು ಕುಡಿಯಿಸಿ ಬರಿಯ ಬಟ್ಟಲನ್ನು ಹಿಡಿದುಕ್ಕೊಂಡು ಅನೆಂದದಿಂದ ಮನೆಗೆ ಹಿಂದಿರುಗಿ ಬರುತ್ತಿದ್ದ ತಮ್ಮ ಮಗಳನ್ನು ಸಂಧಿಸಿದರು. ತಂದಿ ತಾಯಿಗಳು ಮಗಳನ್ನು ನೋಡಿ

ಶಿವದೇವಃ— ತಂಗೀ! ಶಿವಾಲಯಕ್ಕೆ ಹೋಗಿದ್ದೆಯ್ಯಾ?

ಕೊಡಗೂಸುಃ— ತಂದೆಯೇ, ಶಿವಾಲಯದಿಂದಲೇ ಬಂದೆನು.

ಶಿವದೇವಃ— ಬಟ್ಟಲು ಬರಿದಾಗಿದೆಯಲ್ಲ ನಿವೇದನೆಯಾದ ಹಾಲೆಲ್ಲಿ?

ಕೊಡಗೂಸುಃ— (ಆಶ್ಚರ್ಯದಿಂದ) ನೀವು ಹೇಳಿ ಹೋಗಿದ್ದಂತೆ ಕಲ್ಲಿನಾಥನಿಗೆ ಪ್ರತಿದಿನವೂ ಕಪಿಲೆಯ ಬಳ್ಳ ಹಾಲನ್ನು ಸಲ್ಲಿಸಿ ಬರುತ್ತಿರುವೆನು.

ಶಿವದೇವಃ— (ಕೋಪ ಮತ್ತು ಆತುರದಿಂದ) ಸಲ್ಲಿಸುವುದೆಂದರೇನು?

ಕೊಡಗೂಸುಃ— ನಾನು ಶಿವನ ಮುಂದೆ ಹಾಲು ಬಟ್ಟಲಿಟ್ಟ ಕೂಡಲೇ ಶಂಕರನು ಎದ್ದು ಬಂದು ಕುಡಿದು ಹೋಗುವನು ಇದೇ ಸಲ್ಲಿಸುವದು.

ಶಿವದೇವಃ— (ಶಿವದೇವನು ಮಗಳ ಮಾತನ್ನು ಸುಳ್ಳೆಂದು ಭಾವಿಸಿ) ಮಗಳೇ! ನಿಜವನ್ನು ಹೇಳು? ಇಲ್ಲದಿದ್ದಲ್ಲಿ ನಿನ್ನನ್ನು ಶಿಕ್ಷಿಸುವೆನು. ಹಾಲನ್ನು ಚಲ್ಲಿದೆಯೋ ಅಥವಾ ನೀನೇ ಕುಡಿದೆಯೋ? ನಿನ್ನ ಗೆಳತಿಯರಿಗೇನಾದರೂ ಕೊಟ್ಟಿಯೋ?

ಕೊಡಗೂಸುಃ— ನಾನು ಹಾಲನ್ನು ಅನುಪಯೋಗ ಪಡಿಸಲಿಲ್ಲ. ಕಲ್ಲಿನಾಥನಿಗೆ ಕುಡಿಸಿ ಬಂದೆನು.

ಕಲ್ಯಾಣಿಃ— ಮಗಳೇ ನಿಜವನ್ನು ಹೇಳು.

ಕೊಡಗೂಸುಃ— [ಆಶ್ಚರ್ಯಾತಿಶಯದಿಂದ) ಅಮ್ಮಾ ನಿಜವಾಗಿಯೇ ಹೇಳುವೆನು. ನಾನು ನಿಮ್ಮೊಡನೆ ಎಂದಿಗೂ ಸಟೆಯಾಡುವವಳಲ್ಲ. ಬೇಕಾದರೆ ನಾಳೆ ನೀವೇ ಬಂದು ಸ್ವಾಮಿಯನ್ನು ವಿಚಾರಿಸಬಹುದು.

ಶಿವದೇವನು ಮಗಳ ಮಾತನ್ನು ಕೇಳಿ ಬಹಳವಾಗಿ ಚಿಂತಿಸಿದನು. ಏನು ಶಂಕರನು ಈ ಹುಡುಗಿಗೆ ನಿಜರೂಪುದೋರಿದನೆ? ಇಲ್ಲ! ಇಲ್ಲ! ಈಕೆಯು ಸುಳ್ಳು ಹೇಳುವಳು. ಇವಳ ನಿಜವನ್ನು ನಾಳೆ ಪ್ರತ್ಯಕ್ಷವಾಗಿ ಪರೀಕ್ಷಿಸುವೆನು ಎಂದು ನಿಶ್ಚಯಿಸಿ ಪತ್ನೀಪುತ್ರಿಯರೊಂದಿಗೆ ಮನೆಗೆ ಬಂದನು.

ಶಿವದೇವನಿಗೆ ಬೆಳಕಾಗುವದಾವಾಗ ಎಂದು ಚಿಂತೆ ಹತ್ತಿತು. ಹಾಗೂ ಹೀಗೂ ಆ ದಿನವನ್ನು ಕಳೆದನು. ಮರುದಿನ ಸೂರ್ಯೋದಯವಾಯಿತು. ಶಿವಾಲಯಕ್ಕೆ ಹೋಗುವ ಕಾಲವು ಸಮೀಪಿಸಿತು. ಎಲ್ಲರೂ ಸ್ನಾನ ಮಾಡಿ ಮಡಿಯನ್ನುಟ್ಟು ಕಪಿಲೆಯ ಬಳ್ಳ ಹಾಲನ್ನು ಮಗಳ ಕೈಯಿಂದಲೇ ತೆಗೆಯಿಸಿಕೊಂಡು ದೇವಾಲಯಕ್ಕೆ ಹೊರಟರು.

ಶಿವದೇವನು ಈಗ ಬಾಲಕಿಯ ಮಾತನ್ನ ಪರೀಕ್ಷಿಸುವೆನು. ಶಿವನು ನಿಜರೂಪುದೋರದಿದ್ದರೆ ಕೊಡಗೂಸನ್ನು ಅಲ್ಲಿಯೇ ತಿರಸ್ಕರಿಸಿ ಬರುವೆನು. ಶಿವವ್ರತ ಭಂಗ ಮಾಡಿದ ಅನೃತವಾದಿಯಾದ ಮಗಳ ಮುಖವೆ ತಾನೆ ಫಲವೇನು, ಎಂದು ತನ್ನ ಅಂತರಂಗದಲ್ಲಿ ಚಿಂತಿಸಿದನು.

ಕೊಡಗೂಸು ಈ ದಿನ ನಮ್ಮ ತಂದೆತಾಯಿಗಳ ಮುಂದೆ ಶಿವನು ಎದ್ದು ಬಂದು ಹಾಲು ಕುಡಿವನು ಎಂದು ಸಡಗರದಿಂದ ಹೊರಟಳು.

ಕಲ್ಯಾಣಿಯು ಶಿವಶಿವಾ ಮುಂದೇನು ಗತಿ, ಹುಡುಗಿಯು ಸುಳ್ಳು ಹೇಳಿದಳು. ಪ್ರಾಣಕಾಂತನು ಶಿವವ್ರತಭಂಗವನ್ನು ಸಹಿಸುವನಲ್ಲ. ಮುಂದೆ ಏನೋ ಪ್ರಮಾದವಾಗುವಂತಿದೆಯಲ್ಲಾ! ಕಲ್ಲಿನಾಥನೇ ಕಾಪಾಡಬೇಕು ಎಂದು ತರ್ಕಿಸಿದಳು.

ಶ್ರೀ ಕಲ್ಲಿನಾಥನ ದೇವಾಲಯವನ್ನು ಮೂರು ಮಂದಿಯೂ ಸೇರಿದರು. ಕೊಡಗೂಸು ಎಂದಿನಂತೆ ಹಾಲಿನ ಪಾತ್ರೆಯನ್ನು ಕಲ್ಲಿನಾಥ ಸ್ವಾಮಿಯ ಮುಂದಿಟ್ಟು ಕೈಜೋಡಿಸಿ ಎಲೈ ಭಕ್ತಪರಾಧೀನ, ನಿತ್ಯ ನಿರ್ಮಳ, ಸುಗುಣಾಭರಣ, ದಿನಂಪ್ರತಿ ಬಂದು ಹಾಲುಕುಡಿಯುತಿದ್ದಂತೆ ಈ ದಿನವೂ ಬಂದು ಹಾಲು ಕುಡಿ ಎಂದು ಭಕ್ತಿಭಾವದಿಂದ ಪ್ರಾರ್ಥಿಸಿದಳು.

ಕಂದ॥ ಹರನಾ ಭಕ್ತಿಯ ಮಹಿಮೆಯ ।
ಪರಿಯಂ ಧರೆಗರಿಪಲೆಂದು ಪಾಲ್ಗಡಿಯದೆಸೈ ॥
ತರೆ ಸುರ್ತ ಸಗಿಗಳಾಗ ।
ಲ್ತರಳೆ ಪಿತಂಗಂಡು ಕಾಯ್ವಿನಿಂ ಸುತೆಗೆಂದಂ ॥

ವೃ. ವಿ. ಆ. ೯ ಪ. ೯೨

ಪರಮೇಶ್ವರನು ಎದ್ದು ಬಂದು ಹಾಲುಕುಡಿಯದಿದ್ದುದನ್ನು ನೋಡಿ ಕ್ರೋಧಾವಿಷ್ಟನಾದ ಶಿವದೇವನು.

ಕುಡಿಕುಡಿದು ನೀನೆ ಸುಧೆಯಂ ।
ವೃಡನೀಂಟುಗು ಮೆಂದು ನುಡಿದೆ ಪುಸಿಯಂ ನಿನ್ನಂ ॥
ಕಡಿದಿಕ್ಕದೆ ವಾಗ್ಬೆಸೆ ಕೇಳ್ ।
ಕಡುಪಾತಕಿಯೆಂದು ತಂದೆಯುರೆಯಟ್ಟಲೊಡಂ ॥೯೩॥

ವೃ. ವಿ. ಆ. ೯ ಪ.

ಎಂಬುದಾಗಿ ಗರ್ಜಿಸಲು ಭಯಕಂಪಿತೆಯಾದ ಕೊಡಗೂಸು ಪರಶಿವನನ್ನು ಕುರಿತು ಪ್ರಾರ್ಥಿಸಲು

ಹಾ ಮಹೇಶ್ವರ ಹಾ ಮದೀಶ್ವರ ನೀನೆ ಸದ್ಗತಿ ಕಾವುದೆಂ ।
ದಾಮಹಾ ಭಯಕಂಪಿತಾಂಗಿ ಯೊರಲ್ದಿ ಬಾಯ್ಬಿಡೆ ಜೇಗದಿಂ ।
ಸೋಮ ಶೇಖರನಂಜದಿರ್ತನುಜಾತೆಯೆಂದಭಯಂಗುಡು ।
ತ್ತಾ ಮನೋಜ್ಞಸುಧಾರಸಂಗುಡಿದಂ ಕೃಪಾನಿಧಿ ಶಂಕರಂ ॥೯೪॥

ವೃ. ವಿ. ಆ. ೯ ಪ

ಪರಮೇಶ್ವರನು ಲಿಂಗೋದ್ಭವನಾಗಿ ಬಂದು ಮುಂದಿದ್ದ ಹಾಲನ್ನು ಕುಡಿದನು. ಕಲ್ಯಾಣೀ ಶಿವದೇವರು ಈ ಅದ್ಭುತವನ್ನು ನೋಡಿ ಸ್ತಂಭೀಭೂತರಾದರು. ಆಗ ಶಿವನು ಕೊಡಗೂಸಿನ ನಿರ್ಮಲವಾದ ಭಕ್ತಿಯನ್ನೂ ಮಾತಾಪಿತೃಭಕ್ತಿಯನ್ನೂ ಸದಾಚಾರ ಸನ್ಮಾರ್ಗವನ್ನೂ ಹೊಗಳಿ ಇನ್ನು ಮೇಲೂ ಕೈಲಾಸದಲ್ಲಿರಲು ತಕ್ಕವಳೆಂದು ನಿಶ್ಚಯಿಸಿ.

ಕಂದ ಆ ಕೊಡಗೂಸಂ ಕರುಣಾ ।
ಲೋಕನದಿಂ ನೋಡಿ ತೆಗೆದು ಬಿಗಿಯಪ್ಪುತೆ ಗೌ ॥
ರೀಕಾಂತಂ ತನ್ನೊಡ ಲೋ ।
ಳ್ಪೋಕೆಯಲೊಳಪುಗಿಸೆ ಪೊಗುವವುಗಳಂ ಜನಕಂ ॥೯೫॥
ಕಂಡೆಲೆಪೋಗದಿರೆನುತಂ ।
ಚಂಡಿಕೆ ವಿಡಿದೆಳೆಯೆ ಪೊರಗುಳಿದಿರೆಭೂ ॥

ಮುಂಡಲ ಮುಚ್ಚರಿ ಪಡೆಯುಂ ।
ಕೊಂಡಾ ಕೊಡಗೂಸು ಲಿಂಗದೊಳಪೊಕ್ಕಿರ್ದಳ್ ॥೯೬॥
ಅಮರ್ದವಳಮುದ್ಧ ಭಕ್ತಿಯೊ ।
ಳನುರ್ದಂ ತನಗಿತ್ತ ಮುದ್ಧ ಭಕ್ತಿಗೆ ಸೊಗಯ ॥
ಪ್ಪವರ್ದನೊಸೆದಿತ್ತನಗಹಂ ।
ನವರ್ಣಿಗಳ್ವೊಗಳೆನಲಿಯೆ ಶರಣಸಮೂಹಂ ॥೯೭॥

ಪರಶಿವಮೂರ್ತಿಯು ಆ ಬಾಲಕಿಯನ್ನು ತನ್ನಲ್ಲಡಗಿಸಿಕೊಂಡನು. ತಂದೆತಾಯಿಗಳು ದುಃಖಾಶ್ಚರ್ಯದಿಂದ ಹಿಂತಿರುಗಿದರು.

ನಿಷ್ಕಾಮನು ಭಕ್ತಿಪ್ರಭಾವದಿಂದ ಕೊಡಗೂಸು ಮಹಾ ಮಹಾ ಮುನಿಗಳಿಗೂ ಅಲಭ್ಯವಾದ ಶಿವಸನ್ನಿಧಿಯನ್ನೈದಿದಳು. ಈ ಪ್ರಕಾರವಾಗಿ ಕೊಡಗೂಸು ಭಕ್ತಿಮಾರ್ಗದಿಂದ ಯಾರಾದರೂ ಸುಲಭವಾಗಿ ಶಿವಪದವನ್ನು ಸೇರಬಹುದೆಂಬುದನ್ನು ಲೋಕಕ್ಕೆ ಬೋಧಿಸಿ ತನ್ನ ಪವಿತ್ರವಾದ ಚರಿತೆಯನ್ನು ಕೀರ್ತಿಮಯವನ್ನಾಗಿ ಮಾಡಿದಳು.

ಬ್ರಹ್ಮಪಕ್ಷಿ.

೧

ಆದಿಯನಾದಿಯ ಅಜೆಗೆ ಅಜೆಗೆ
ನಾದಬಿಂದು ಕಳೆಯಾಜೆಗೆ ಅಜೆಗೆ
ನೋಟಕು ನಿಲುಕದ ನುಡಿಗೂ ಸಿಲುಕದ
ಮಾಟದ ಅಜೆಯ ಮಾಟಕು ಉಲುಕದ
"ಏನೇನಿಲ್ಲಂ" ಬುವ ಆ ಪಕ್ಕಿ
ತಾನೇ ತಾನಾಗಿದ್ದಿತು ಉಕ್ಕಿ!

೨

ಜೊಮಕ್ಕಿಯದು ಎಂತೋ ಏನೋ
ಸುಮ್ಮನಿರದೆ ಸಲ್ಲೀಲೆಗೆ ಏನೋ
ಹೊಟ್ಟೆವಂದು ತಾ ತನ್ನ ಬಗೆಯೊಳೇ
ಇಟ್ಟಿತು ಅನೇಕ ತತ್ತಿತತ್ತಿಗಳ!
ಒಂದೊಂದರೊಳೇ ಅಗಣಿತ ತತ್ತಿ!
ಕುಂದದೊಳಗಿಹುದು ಜೀವದ ಜ್ಯೋತಿ!

೩

ಗಣನೆಗೆ ಮೀರಿಹ ತತ್ತಿಗಳಿಡುತಲಿ
ಅನಿಶವು ಅವುಗಳ ಮೇಲ್ಕಾರುತಲಿ
ಮಿಗಿಯದ ಪ್ರೇಮದ ಕಾವನು ಕೊಡುತಲಿ
ಒಗೆಯಿಸುತಿದೆ ತನ್ನೋಲಿಹ ಪರಿಗಳ!
ಎರಕದ ಕಾಪಿಗೆ ಜೀವವು ಹಿಗ್ಗಿ
ಹೊರಬರಲೆಳಪುದು ಮೇಲಕೆ ನುಗ್ಗಿ!

೪

ತತ್ತಿಯ ಒಳಗಣ ಎನಿತೊ ತತ್ತಿಗಳು
ಮುತ್ತಿದ ಭಾರದ ಭರದ ಕುತ್ತಿನಲಿ
ಕೆಳಕೆಳಗಿಳಿಯಲು ಪ್ರೇಮದ ಬಿಸುಪನು
ತಲುಪಲವಕೆ ತಡವಹುದೆನಿತೋ ದಿನ!
ಕುತ್ತನು ಮೆಟ್ಟುತ ಮೇಲಕ್ಕೆದ್ದ
ತತ್ತಿಗೆ ಕಾವದು ಸಿಗುವದು ಸಿದ್ಧ!

೫

ಕಾಪಿನ ಬೆಳಕಲಿ ಒಳಗಣ ಜೀವವು
ಆ ಪಕ್ಕಿಯ ಬೆಳಗುವ ಚಿದ್ರೂಪವ
ದಿಟ್ಟಿಸಿ ನಲಿಯುತಲುಲಿಯಲು ಹಾರಲು
ಥಟ್ಟನೆ ಹೊರಬಿಹುದದ ತಾ ಸೇರಲು!
ಈ ಪರಿ ತತ್ತಿಗಳೆಲ್ಲವನೊಡೆದು
ಆ ಪಕ್ಕಿಯ ಜೀವವು ಸೇರುವದು!

೬

ಬೊಮ್ಮವಕ್ಕಿಯದು ಅನಂತಕಾಲದಿ
ಬೊಮ್ಮವರಿಗಳನು ಪುಟ್ಟಿಸೆ ಚಿತ್ತದಿ
ಮೆರೆಯುವ ಬ್ರಹ್ಮಾಂಡವ ತಾನಕ್ಕತ
ಸುರಿಪುದು ಕಾವಿನ ಧಾರೆಯ ಸಂತತ
ಬೊಮ್ಮನ ಮರಿಯಾಗುವ ಜೀವ
ನೆಮ್ಮಲು ಬೇಕಾ ಬಲ್ಮೆವ!

ಸರ್ವಜ್ಞ ಕವಿ.

(ಲೇಖಕ:— ಚಿಚ್ಚ ಕೋವ.)

೧. ಮೊದಲು ಮಾತು:—ಹಿಂದಿನ ತಳಹದಿಯ ಮೇಲೆ ಇಂದಿನ ಸಾಹಿತ್ಯದಿಂದ ಮುಂದಿನ ಮುಂದಿರವನ್ನೇರಿಸಬೇಕೆಂದು ಶ್ರೀ ಅರವಿಂದರು ಉಸುರಿರುವರು. ಕನ್ನಡ ನಾಡದೇವಿಗೆ ಭವ್ಯಭುವನವನ್ನು ಕಟ್ಟಲೆಳಸುವ ನಾವು ಈ ಮಹಾತತ್ವವನ್ನು ಎಂದಿಗೂ ಮರೆಯಕೂಡದು. ಗತಕಾಲದ ವಿವಿಧ ವಿಚಾರಗಳೇ ನಮ್ಮ ಪೂಜ್ಯ ಪೂರ್ವಿಕರು ನಮಗಾಗಿ ಕಾದಿಟ್ಟ ಬೆಲೆಯಳಿಪ ಸೊತ್ತು. ಅದನ್ನು ಉಪಯೋಗಿಸಿಯೇ ನಾವು ನಮ್ಮ ಎಳ್ಗೆಯನ್ನು ಪಡೆಯಬೇಕು. ಉನ್ನತಿಯ ದಾರಿಯನ್ನು ತುಳಿಯುವ ಪಥಿಕನು ಈ ಬುತ್ತಿಯನ್ನು ಉಪೇಕ್ಷಿಸಿ ನಡೆಯುವಂತಿಲ್ಲ. ತಮ್ಮ ಭೂತಕಾಲವನ್ನು ಅಲ್ಲಗಳೆದು ಘನತೆಗೇರಿದ ರಾಷ್ಟ್ರಗಳ ಉದಾಹರಣೆಗಳನ್ನು ಇತಿಹಾಸ ದರ್ಶನವು ತೋರಿಸುವದಿಲ್ಲ. ಆದುದರಿಂದ ಅತ್ಯೋದ್ಧಾರಕ್ಕಾಗಿ ಕಟಿಬದ್ಧರಾದ ಕನ್ನಡಿಗರು ತಮ್ಮ ಸರ್ವಜ್ಞನ ದಿವ್ಯ ಸಂದೇಶವನ್ನು ಕೇಳುವುದು ಆವಶ್ಯಕ.

೨. ಇದು ಕ್ರಾಂತಿಕಾಲಃ—ಮೇಲಾಗಿ ನಾವು ಇರುವುದು ಕ್ರಾಂತಿ ಕಾಲದಲ್ಲಿ. ಜಗತ್ತಿನಲ್ಲಿ ಎಲ್ಲೆಲ್ಲಿಯೂ ಪ್ರಚಂಡವಾದ ವಿಪ್ಲವಗಳು ನಡೆದಿವೆ. ಇವುಗಳ ಹೊಡತಕ್ಕೆ ಈಡಾಗದ ಕ್ಷೇತ್ರವು ಒಂದೂ ಇಲ್ಲ. ಭೂಗರ್ಭದಂತೆ ಸಮಾಜದ ಒಡಲು ಕುದಿಯುತ್ತಲಿದೆ. ಹೊಸ ವಿಚಾರಗಳ ಹೊಡತದಿಂದ ಅದು ಅದರತೊಡಗಿದೆ. ಅಲ್ಲಲ್ಲಿ ಜ್ವಾಲಾಮುಖಿಗಳು ಕೆಂಗಂಡಗಳನ್ನು ಕಾರಿ ಹಳೇ ಪದ್ಧತಿಯನ್ನು ಹಾಳು ಮಾಡಿವೆ. ಹೊಸ ಸೃಷ್ಟಿಗೆ ಅನುವನ್ನುಂಟುಮಾಡಿದೆ.

ಇದು ಜನತೆಯ ಯುಗವು! ಈ ವರೆಗೆ ಮನಬಂದಂತೆ ಕುಣಿದ ಮುಂಗರಸರ ಮುಕುಟಗಳು ಜನಸಾಮಾನ್ಯರ ಪ್ರತಿನಿಧಿಗಳನ್ನು ಅಲಂಕರಿಸಿವೆ. ಅಳುಗಳು ಅರಸರಾಗಿ ಅರಸರು ಅಳುಗಳ ಹಾಳು ಬಾಳಿನಲ್ಲಿ ಜಾರುತ್ತಲಿದ್ದಾರೆ. ಗುಡಿಸಲಿಗೆ ಗೌರವವು ಬಂದು ಅರಮನೆಗಳು ಅಸ್ಪೃಶ್ಯಗಳಾಗಿವೆ. ಧನಿಕರ ಮದವು ಮಾಯವಾಗುತ್ತಲಿದೆ. ಶಕ್ತಿಯ ಸಂಕ್ರ

ಮಣವಾಗಿ ಬಲ್ಲಿವರ ಸ್ಥಾನವನ್ನು ಬಡವರು ಆಕ್ರಮಿಸಿದ್ದಾರೆ. 'ಧನಬ
ಲ'ವು ವೈಭವದಿಂದ ಬೆಳೆದು 'ಸಂಘೇ ಶಕ್ತಿಃ ಕಲೇ ಯುಗೇ' ಎಂಬ
ವಚನವು ಸಾರ್ಥವಾಗುತ್ತಿದೆ. ಆದ್ದರಿಂದಲೇ ಇದಕ್ಕೆ 'ಜನಯುಗ' ಎಂಬ
ಅಭಿಧಾನವು. 'ಧನಯುಗ'ದ ಸೂರ್ಯನು ಮುಳುಗಿ 'ಜನಯುಗ'ದ
ಚಾರುಚಂದ್ರನು ಮೂಡಣದಲ್ಲಿ ವೈದಾಳುತ್ತಿರುವನು. ಧನಿಕರ
ಕೈಬಿಟ್ಟ ಅಧಿಕಾರಸೂತ್ರಗಳು ಜನಸಾವಾನ್ಯರನ್ನು ಸೇರಿದ ಮೂಲಕ
ಅವರಲ್ಲಿ ಹೊಸ ಹುರುಪು ಹೊಳೆಯತೊಡಗಿದೆ. ನವಯುಗದ ನವ
ನಾಗರಿಕತೆಯನ್ನು ನಿರ್ಮಿಸಹತ್ತಿದ್ದಾರೆ.

ಜಗತ್ತಿನಲ್ಲಿ ನಡೆದ ವಿಪ್ಲವಗಳ ಮಾರ್ದನಿಯು ನಮ್ಮ ಭರತಖಂಡ
ದಲ್ಲಿಯೂ ಕೇಳಬರುತ್ತಿದೆ. ಈಗ ಭರತಖಂಡಕ್ಕೂ ಒಂದು ಪರಿವರ್ತ
ನೆಯ ಕಾಲ ಒದಗಿದೆ. ಮಹಾ ವ್ಯಕ್ತಿಗಳು ಮಹಾ ಶಕ್ತಿವಾಹಿನಿ
ಗಳನ್ನು ದೇಶದ ಮೇಲೆ ಹರಿಯಲು ಬಿಟ್ಟಿದ್ದಾರೆ. ಅದೇನು ಸಾಮಾನ್ಯ
ವಾದ ಪ್ರವಾಹವಲ್ಲ; ಪ್ರಚಂಡ ಪ್ರವಾಹ. ಆ ಬಲ್ಮೆಯ ಹೊನಲು
ದೇಶದ ಮೂಲೆ ಮೂಲೆಗಳಲ್ಲೂ ನುಗ್ಗಿ ಜಡಜೀವನವನ್ನು ಕೊಚ್ಚುತ್ತಿದೆ.
ಅದರ ವೈದ್ಯುತ ಸ್ಪರ್ಶದಿಂದ ನಿರ್ಜೀವವಾಗಿದ್ದ ಅಸ್ಥಿಪಂಜರಗಳೂ ಕೂಡ
ಸಜೀವನವಾಗಿ ಕಾರ್ಯೋನ್ಮುಖವಾಗಲಾರಂಭಿಸಿವೆ. ಮಲಗಿದ್ದ ನಾಡು
ಎಚ್ಚೆತ್ತಿದೆ; ಕುರಿಗಳಂತೆ ಅರಚುತ್ತಿದ್ದವರು ಸಿಂಹಗಳಂತೆ ಗರ್ಜಿಸುತ್ತಿ
ದ್ದಾರೆ. ಬೀಸುವ ಬಿರುಗಾಳಿಯು ಬೂದಿಮುಚ್ಚಿದ ಕೆಂಡಗಳನ್ನು ಊದಿ
ಊದಿ ನುಗ್ಗುತ್ತಿದೆ! ಇದ್ದಲಿಯಂತಿದ್ದವರು ಈಗ ಕೆಂಗೆಂಡಗಳಂತೆ ದೇದೀ
ಪ್ಯಮಾನವಾಗಿದ್ದಾರೆ; ಮೂಕರಾಗದ್ದವರು ವಾಗ್ಮಿಗಳಾಗಿದ್ದಾರೆ; ಕುರುಡ
ರಿಗೆ ಕಣ್ಣು ಬಂದಿದೆ; ದುರ್ಬಲರಂತಿದ್ದವರಿಗೆ ಭೀಮಬಲ ಬಂದಿದೆ;
ಕ್ಲೈಬ್ಯವು ವಾಯುವಾಗಿ ಎದೆಯಲ್ಲಿ ಕೆಚ್ಚು ಉದಿಸಿದೆ; ಬಗೆಯಲ್ಲಿ ನೆಚ್ಚು
ಮೂಡಿದೆ.

ಇದಕ್ಕೆ ಕನ್ನಡನಾಡೇ ಅಪವಾದವಾಗುವದೆಂತು? ಅದೂ ಇದೀಗ
ಕಣ್ಣು ತೆರೆಯುತ್ತಲಿದೆ. ಅದರ ಎಚ್ಚೆತ್ತ ತರುಣರು ಒಂದು ಭೀಷಣ
ವಾದ ನೋಟನ್ನು ಕಾಣುತ್ತಾರೆ. ಕನ್ನಡನಾಡು ತುಂಡುತುಂಡಾಗಿದೆ.
ಮತಪಂಥಗಳ ತಿಕ್ಕಾಟವಿಂದುಂಟಾದ ಬೇಗೆಯು ಜನತೆಯನ್ನು ಸುಡು
ತ್ತಲಿದೆ. ಈ ಕಲಹಾಗ್ನಿಯಲ್ಲಿ ಬೆಂದು ಬೆಂಡಾದ ಕನ್ನಡಿಗರು ತಮ್ಮ
ಉಜ್ವಲವಾದ ಇತಿಹಾಸವನ್ನು ಮರೆತು ಎಲ್ಲ ವಿಧದಿಂದಲೂ ದಾಸಾ

ನುದಾಸರಾಗಿದ್ದಾರೆ. ಸ್ವತಂತ್ರವಾಗಿ ವಿಚಾರಮಾಡುವ ಸಾಮರ್ಥ್ಯವನ್ನೂ
ಕೂಡ ಕಳೆದುಕೊಂಡು ಅವರು ರೂಢಿಮೂಢರಾಗಿದ್ದಾರೆ. ಈ ಭಯಾ
ನಕ ದೃಶ್ಯದಿಂದ ಬೆಚ್ಚಿ ಬೆರಗಾದ ತರುಣರಲ್ಲಿ ಬಂಧನದ ಜುಗುಪ್ಸೆ
ಉಂಟಾಗಿದೆ. ದಾಸ್ಯದ ದಾರುಣ ಸಂಕೋಲೆಗಳನ್ನು ಒಮ್ಮೆಲೇ ಕಡಿ
ದೊಗೆದು ಸ್ವಾತಂತ್ರ್ಯದ ಸ್ವರ್ಗೀಯ ಗಾಳಿಯನ್ನುಸುರಲು ಅವರು ಹಾತೊ
ರೆಯುತ್ತಿರುವರು. ಹಲವೆಡೆಯಲ್ಲಿ ಯೋಗ್ಯವಾದ ಮೇರೆಯನ್ನು ಮೀರಿದ
ಮೂಲಕ ಈ ಸ್ವಾತಂತ್ರ್ಯ ಪ್ರೀತಿಯು ಸ್ವೈರವೃತ್ತಿಯನ್ನು ತಾಳುವ
ಸಂಭವವಿದೆ. ಇತ್ತೀಚೆಗೆ ವಿಶಿಷ್ಟತ್ವವನ್ನು ಪಡೆದ ಪ್ರಕೃತಿ ಜೀವನವು
ಪಶುಜೀವನದ ಅಂಧಾನುಕರಣವಾಗಿದೆ. ಈ ಮೇರೆಗೆ ತರುಣರ ಉತ್ಸಾ
ಹವು ಅಡ್ಡದಾರಿಯನ್ನು ಹಿಡಿಯುವ ಅಂಜಿಕೆಯು ಬಹಳವಿದ್ದುದರಿಂದ
ಈಗಾಗಲೆ ಅದನ್ನು ತಡೆಯಲು ಜೇಕು. ಸಂಪೂರ್ಣವಾದ ಸ್ವಾತಂ
ತ್ರ್ಯದ ಆಸ್ವಾದವನ್ನು ತುಂಬಾ ಸವಿದ ನಮ್ಮ ಪೂಜ್ಯ ಸತ್ಪುರುಷರ
ಸಂದೇಶವು ತರುಣರನ್ನು ತೀವ್ರವೇ ಮುಟ್ಟುವಂತೆ ಮಾಡುವದೇ ಅದಕ್ಕೆ
ತಕ್ಕ ಉಪಾಯ. ಹಿಂದಿನ ಹಿರಿಯರು ಹಿಡಿದ ಸ್ವಾತಂತ್ರ್ಯದ ದಾರಿಯು
ಮುಕ್ತಿಪಥವು. ಅವರಿಗೆ ಇಹಪರಗಳೆರಡನ್ನೂ ಸಾಧಿಸಿಕೊಟ್ಟಿತು. ಅವರ
ಮೇಲ್ಪಂಕ್ತಿಯು ಇವರಿಗೂ ಹಿತಕರವಾಗಲಾರದೇ?

೨. ಸರ್ವಜ್ಞನು ಕ್ರಾಂತಿಕರನು:— ಜಗತ್ತಿನಲ್ಲಿಯ ಸತ್ಪುರುಷ
ರೆಲ್ಲರೂ ಒಂದು ಬಗೆಯ ಕ್ರಾಂತಿಕರರೇ! ತಮ್ಮ ಮನಸ್ಸನ್ನು ಹಾಳು
ಮಾಡಿ ಅದರಲ್ಲವರು ಅನಂದದ ಅಲರುಗಳನ್ನು ನೆಟ್ಟವರು. ನಿರಂತರ
ವಾಗಿ ಕಂಪನ್ನು ಬೀರುವ ಆ ಬಾಡದ ಹೂಗಳ ಪರಿಮಳವು ಅನ್ಯರ
ಮನಸ್ಸಿನಲ್ಲಿಯೂ ಅದೇ ಮಾದರಿಯ ವಿಘ್ನವನ್ನೆಬ್ಬಿಸಿ ಅವರಿಗೂ ಶಾಶ್ವ
ತವಾದ ಸೌಖ್ಯವನ್ನು ಒದಗಿಸಿಕೊಟ್ಟಿರುವುದು. ಈ ದೃಷ್ಟಿಯಿಂದ ಅವ
ರೆಲ್ಲರೂ ಒಂದೇ ಬಳಗದವರು. ಆದರೂ ವ್ಯಕ್ತಿತ್ವವೆಂಬುದೂ ಅವರನ್ನು
ಬಿಟ್ಟಿದ್ದಲ್ಲ. ಅವರ ಉಪದೇಶವು ಮಾದರಿಯು ಅವರವರ ವೈಶಿಷ್ಟ್ಯವ
ನ್ನವಲಂಬಿಸಿದೆ. ಹಲವರ ಉಪದೇಶಪದ್ಧತಿಯು ಸೌಮ್ಯಸ್ವರೂಪದ್ದಿದ್ದರೆ
ಹಲವರದು ಜ್ವಾಲಾಮುಖಿಯನ್ನೆಯೆ ಹೋಲುತ್ತಿದೆ. ನಮ್ಮ ಸರ್ವ
ಜ್ಞರು ಎರಡನೆಯ ತರಗತಿಗೆ ಸೇರಿದವನು. ಅವನು ಹುಟ್ಟು ಸ್ವತಂ
ತ್ರನು; ಯಾವ ಬಗೆಯ ಕಟ್ಟಿಗೂ ಒಳಗಾಗದವನು. ಇತಿಹಾಸವು ಅವನ
ಕಾರ್ಯದ ವಿಷಯವಾಗಿ ಮೌನವನ್ನು ತಾಳಿದರೂ ಅವನ ವೀರ್ಯವ

ತಾದ ವಚನಗಳು ಅವನ ಕೆಲಸದ ಮಹತ್ವವನ್ನು ಸಾರಿಹೇಳುತ್ತಿವೆ. ಸರ್ವಜ್ಞನು ಪ್ರಕೃತಿಮಾತೆಯ ಜೊಚ್ಚಿಲುಮಗ. ಆಕೆಯ ಮಡಲಲ್ಲಿ ವಸಬಂದಂತೆ ನಲಿದಾಡಿ ಆಕೆಯಿಂದಲೇ ಬುದ್ಧಿಯನ್ನು ಕಲಿತವನು ನಾಡಿನಲ್ಲೆಲ್ಲ ಅಲೆದಾಡಿ ದೊರಕಿಸಿದ ಅನುಭವವೇ ಅತನ ಜಾಣ್ಮೆಯ ಅಡಿಗಲ್ಲು. ಯಾವಬಗೆಯ ದಾಕ್ಷಿಣ್ಯವನ್ನು ಇಡವೆ ಸರ್ವಜ್ಞನು ಕಂಡಂತೆಯೆ ಆಡಿದವನು. ಭೂಮಂಡಲವು ನುನಿದು ಕೆಂಡವಂತಾದರೂ ಅದರ ಪರಿವೆ ಅವನಿಗಿಲ್ಲ. ಸರ್ವಜ್ಞನು ಮಾಡಿದಂತೆ ಆಡಿದವನು; ನುಡಿದಂತೆ ನಡೆದವನು. ಖಂಡತುಂಡಾದ ಅವನ ನುಡಿಯು ಸಿಡಿಲಿನಂತೆ ಜನರನ್ನು ಹೊಡೆದು ಅವಂಲ್ಲಿ ಅಭೂತ ಪೂರ್ವವಾದ ಕ್ರಾಂತಿಯನ್ನುಂಟು ಮಾಡುತ್ತಿರಲಿಕ್ಕೆ ಸಾಕು. ಸರ್ವಜ್ಞನು ಕನ್ನಡ ನಾಡಿನ ಕಡುಗೊಡಲಿ! ಈತನ ಏಟಿನಿಂದ ಮುಳ್ಳುವರಗಳೆಪ್ಪೋ ಮಣ್ಣುಪಾಲಾಗಿ ಸಮಾಜಕ್ಷೇತ್ರವು ನಿರ್ಮಂಟಕವಾಯಿತು. ಸರ್ವಜ್ಞನು ಸ್ವಾತಂತ್ರ್ಯ ಪ್ರಿಯನಿದ್ದರೂ ಸ್ವೈರಾಚಾರಿಯಲ್ಲ; ಕ್ರಾಂತಿಕಾರನಿದ್ದರೂ ಶಾಂತಿಯನ್ನು ತೊರೆದವನಲ್ಲ. ಇವನು ಮತಪಂಥಗಳ ಗಲಾಟೆಯಲ್ಲಿ ವಿಶೇಷನಾಗಿ ಸಿಲುಕಿದವನಲ್ಲ ಸರ್ವಜ್ಞನು ಜಾತಿಯಿಂದ ವೀರಶೈವನಿದ್ದರೂ ಅವನು ಸರ್ವಸಮ್ಮತವಾದ ಸನಾತನ ತತ್ವಗಳನ್ನೆಯೆ ಹೆಚ್ಚಾಗಿ ಹೇಳಿರುವನು. ಮೇಲಾಗಿ ಸರ್ವಜ್ಞನು ಜನ ಸಾಮಾನ್ಯರ ಮುಂದಾಳು; ಅವರಿಗಾಗಿ ಅವತರಿಸಿದವನು. ಜನತೆಯನ್ನುದ್ಧರಿಸಲೋಸುಗ ತನ್ನ ಕಿರಿಗನ್ನಡ ನುಡಿಯನ್ನೂ ಅನುಭವಜ್ಞಾನವನ್ನೂ ಧಾರೆಯೆರೆದವನು. ಒಂದೇ ಸ್ಥಳದಲ್ಲಿ ಬಹಳ ದಿವಸ ನಿಲ್ಲದೆ ಅಖಂಡವಾಗಿ ಎಲ್ಲೆಡೆಯಲ್ಲಿ ಸಂಚರಿಸಿ ಮಲಗಿದ ಜನರನ್ನು ಬಡದೆಬ್ಬಿಸಿದ ಮಹಾತ್ಮನಿವನು. ಆದ್ದರಿಂದ 'ಜನಯುಗ'ಕ್ಕೆ ತಕ್ಕವನಾದ ಸರ್ವಜ್ಞಮೂರ್ತಿಯ ಸಂದೇಶದ ಮಹತ್ವವು ಈ ಕಾಲದಲ್ಲಿ ಅಷ್ಟಿಷ್ಟೆಂದು ಹೇಳಲಾಸಲ್ಲ! ಅವನ ಹುರಿಗೊಳಿಸುವ ಉಪದೇಶದ ಬೆಳಕಿನಲ್ಲಿ ನಮ್ಮ ತರುಣರು ತಮ್ಮ ಮುಂದಿನ ಏಳ್ಗೆಯ ದಾರಿಯನ್ನು ಕಾಣಲೆಂದೇ ಈ ಸಂದೇಶವನ್ನು ಸಾರಿದುದು!

೪. ಗ್ರಂಥದ ರಚನೆ:— ಸರ್ವಜ್ಞನು ಗ್ರಂಥವೊಂದನ್ನು ಬರೆದು ತನ್ನ ತತ್ವಗಳನ್ನು ಜನರಲ್ಲಿ ಬೀರಲಿಲ್ಲ. ನಿರಂತರ ಸಂಚಾರದಲ್ಲಿ ಕಾಲಕಾಲಕ್ಕೆ ಒದಗಿದ ಸಂದರ್ಭಗಳು ಅವನ ಅದ್ಭುತವಾದ ಪ್ರತಿಭೆಯನ್ನು ಇರಿದು ಕಾವ್ಯದ ಚಿಕ್ಕ ಚಿಕ್ಕ ಸೆಲೆಗಳನ್ನು ಹುಟ್ಟಿಸಿದವು. ನಿರ್ಮಲವಾದ ನೀರಿನಿಂದ ತುಂಬಿದ ಈ ಸಣ್ಣಸುಟ್ಟ ವಾಹಿನಿಗಳು ಸ್ವತಂತ್ರವಾಗಿ ಹರಿದು ಪಥಿಕರ ಪಿಪಾಸೆಯನ್ನು ಸಂತೈಸುತ್ತವೆ. ಆದರೆ ಇವುಗಳ ಹುಟ್ಟು ಹುರುಳುಗಳು ಒಂದೇ ಇದ್ದ ಮೂಲಕ ಇವುಗಳಲ್ಲಿ ಉಪದೇಶದ ಒಂದೇ ಸೂತ್ರವನ್ನು ಕಾಣಬಹುದು. ವಿವಿಧ ಕಾಲಕ್ಕೆ ವಿವಿಧ ಸಂದರ್ಭಗಳಲ್ಲಿ ಸ್ಫುರಿಸಿದ ಪದ್ಯಗಳಲ್ಲಿಯೂ ಒಂದೇ ಸಾಧನ ಸೋಪಾನವನ್ನು ಕಂಡುಹಿಡಿಯಬಹುದು. ನನ್ನ ಈ ಗ್ರಂಥದಲ್ಲಿ ಈ ಬಗೆಯ ಯತ್ನವು ಮಾಡಲಾಗಿದೆ. ಪರಿವಿಡಿಯನ್ನು ಕಂಡಕೂಡಲೇ ರಚನೆಯ ಕ್ರಮವು ತಾನಾಗಿಯೇ ಗೊತ್ತಾಗುವದು. ಇದರಲ್ಲುಪಯೋಗಿಸಿದುದು ವೇದಾಂತದ ಪರಿಭಾಷೆ. ವೀರಶೈವರ ಷಟ್ಸ್ಥಲಗಳು ವೇದಾಂತಿಗಳ ಮೂರು ಸ್ಥಳದಲ್ಲಿ ಅಡಕವಾಗಿವೆ ಭವಿಯೇ ಬದ್ಧನು ಭಕ್ತ ಮಹೇಶ್ವರ ಮುಮುಕ್ಷುಗಳು; ಪ್ರಸಾದಿ ಪ್ರಾಣಲಿಂಗಿಗಳಿಗೆ ಸಾಧಕರೆಂಬ ಹೆಸರು. ಮತ್ತು ಶರಣ ಐಕ್ಯರಿಗೆ ವೇದಾಂತದಲ್ಲಿ ಸಿದ್ಧರೆಂದು ಕರೆಯುವದುಂಟು. ಗ್ರಂಥದ ಉಪಯೋಗವು ಲಿಂಗವಂತರಲ್ಲದ ಜನರಿಗೂ ಆಗಬೇಕೆಂಬ ಉದ್ದೇಶದಿಂ ಈ ತರಹದ ರಚನೆಯನ್ನು ಮಾಡಲಾಗಿದೆ. ಸರ್ವಜ್ಞನು ನುಡಿದುದು ಸರ್ವರಿಗಾಗಿಯಲ್ಲವೇ?

೫ ಓದುಗರಲ್ಲಿ ವಿನ್ನಹ:— ಸರ್ವಜ್ಞನ ಪದ್ಯಗಳಲ್ಲಿ ವೈದಿಕಪರಿಭಾಷೆಯಿದೆ. ಶಿವ-ಲಿಂಗಗಳೆಂದರೆ ದೇವ-ಈಶ್ವರನೆಂಬ ಭಾವನವನ್ನಿಟ್ಟು ಓದಿದರೆ ಅನ್ಯ ಮತಸ್ಥರಿಗೂ ಸರ್ವಜ್ಞನು ಪ್ರಿಯನಾಗದಿರನು. ಮೇಲಾಗಿ ಮತಪಂಥಗಳ ಕಟ್ಟುಗಳನ್ನು ಸಡಲಿಸಿ ಅವುಗಳಲ್ಲಿ ಅನಿಷ್ಟವಾದವುಗಳನ್ನು ಬೀಸಾಟ ಸನಾತನ ಸತ್ಯವನ್ನೆಯೆ ಪೂಜಿಸುವ ಕಾಲವಿದು. ಇಂಥ ಸಮಯದಲ್ಲಿ ನಮ್ಮ ಪೂರ್ವಗ್ರಹಗಳನ್ನು ತೊರೆದು ಅರಿವಿನ ಬೆಳಕಿನಿಂದ ನಮ್ಮ ಎದೆಯಲ್ಲಿಯ ಕಗ್ಗತ್ತಲೆಯನ್ನು ದೂಡುವಾ. ಬರೀ ಶಬ್ದಕ್ಕಾಗಿ ಹೆಣಗಾಡದೆ ಅರ್ಥದ ಮಾಧುರ್ಯವನ್ನು ಸವಿಯುವಾ!! By the fruits we shall know them, not by the roots. 'ಸರ್ವಜ್ಞನ ಸಂದೇಶ'ವನ್ನು ಸಾಧ್ಯವಿದ್ದ ಮಟ್ಟಿಗೆ ಅತನ ಮಾತಿನಲ್ಲಿಯೇ ಸಾರಲು ಯತ್ನಿಸಲಾಗಿದೆ. ಅದರ ಬೆಲೆಯನ್ನು ಕಟ್ಟುವದು ಫಲವನ್ನು ಕಂಡು ಮೂಲವನ್ನಲ್ಲ. ಇದೇ ಓದುಗರಲ್ಲಿ ನನ್ನ ಕೊನೆಯ ವಿನ್ನಹ!

ಚರಿತ್ರ ಪರಿಚಯ.

೧ ಹಿಂದಿನಿಂದ ಮುಂದೆಃ— ನದಿಯ ಮೂಲವನ್ನೂ ಋಷಿಯ ಕುಲವನ್ನೂ ಕಾಣಬಾರದೆಂಬ ಗಾದೆಯು ಎಲ್ಲರಿಗೂ ಗೊತ್ತಿದ್ದರೂ ಚಿನ್ನಗಳನ್ನು ಕಾಣುವ ಕುತೂಹಲವೇನೂ ಜನತೆಯಲ್ಲಿ ಕಡಿವೆಯಾಗಿಲ್ಲ. ಹೊಸ ಪುರುಷರು ಮುಂದೆ ಬಂದಾಗ ಅವರ ಇತಿಹಾಸಪರಂಪರೆಯನ್ನು ಅರಿತುಕೊಳ್ಳಲು ಜನರು ಮೊದಲುಮಾಡುವರು. ಅನಂತರವೇ ಅವರು ಹೇಳಿದ್ದನ್ನು ಕೇಳುವರು. ಜನರಲ್ಲಿಯ ಈ ಸಹಜವಾದ ಜಿಜ್ಞಾಸೆಯನ್ನು ಮೂಲೆಗೊತ್ತಿ ಮುಂದುವರಿಯುವದು, ಅನುಚಿತವೆಂದು ತಿಳಿದು ಸರ್ವಜ್ಞನ ಚರಿತ್ರಪರಿಚಯವನ್ನು ಸ್ವಲ್ಪದರಲ್ಲಿ ಮಾಡಿಕೊಡಲು ಬಯಸಿದುದು.

೨ ಸರ್ವಜ್ಞನಕಾಲಃ— ಸರ್ವಜ್ಞನಿದ್ದ ಕಾಲದ ವಿಷಯದಲ್ಲಿ ಪಂಡಿತರಲ್ಲಿ ಇನ್ನೂ ಐಕಮತ್ಯವಾಗಿಲ್ಲ. ಕೆಟಿಲ್ ಸಾಹೇಬರು ಅದು ೧೮ನೆಯ ಶತಮಾನವೆಂದೂ ಶ್ರೀಮಾನ್ ಆರ್. ನರಸಿಂಹಾಚಾರ್ಯರವರು ೧೭ನೆಯ ಶತಮಾನವೆಂದೂ ಅಭಿಪ್ರಾಯಪಡುತ್ತಾರೆ. ಶ್ರೀಮಾನ್ ಉತ್ತುಂಗಿಯವರ ಮತದಂತೆ ಸರ್ವಜ್ಞನು ೧೬ನೆಯ ಶತಮಾನದವನು. ಅವರು ಕೊಟ್ಟ ಪ್ರಮಾಣಗಳನ್ನು ವಿಮರ್ಶಿಸಲು ೧೬ನೆಯ ಶತಮಾನವೇ ಸರ್ವಜ್ಞನಿದ್ದ ಕಾಲವಾಗಿರಬೇಕೆಂದು ತೋರುತ್ತಿದೆ. ನಮ್ಮ ಪೂರ್ವೇತಿಹಾಸವು ಹೇಳುಹೆಸರಿಲ್ಲದಂತಾದ ಮೂಲಕ ಹೆಚ್ಚಿನ ಆಧಾರಗಳು ದೊರಕುವಂತಿಲ್ಲ. ಅಂತೂ ವಿಜಯನಗರ ಸಾಮ್ರಾಜ್ಯದ ಕೊನೆಯ ಭಾಗದಲ್ಲಿ ಸರ್ವಜ್ಞನು ಇದ್ದಿರಬೇಕೆಂದು ಊಹಿಸಲು ಅಡ್ಡಿಯಿಲ್ಲ.

೩ ಸರ್ವಜ್ಞನ ಜನ್ಮಃ— ಸರ್ವಜ್ಞನ ಕಾಲದ ವಿಷಯವಾಗಿಯೇ ಇಷ್ಟು ಅನಿಶ್ಚಿತತೆಯಿದ್ದಮೇಲೆ ಆತನ ಜನ್ಮತಿಥಿಯು ಗೊತ್ತಾಗುವ ಸಂಭವವೇ ಇಲ್ಲ. ಆದರೆ ಸರ್ವಜ್ಞನೇ ತನ್ನ ತಂದೆತಾಯಂದಿರ ವಿಷಯವಾಗಿಯೂ, ಜನ್ಮದ ವಿಷಯವಾಗಿಯೂ ಬರೆದಿಟ್ಟ ಮೂಲಕ, ಅದರ ಅಲ್ಪಸ್ವಲ್ಪ ಪರಿಚಯವನ್ನು ಮಾಡಿಕೊಡುವುದು ಸಾಧ್ಯವಾಗಿದೆ.

ತನ್ನ ಆತ್ಮಚರಿತ್ರೆಯನ್ನು ಹೇಳುವಾಗ, ತಾನು ಕೈಲಾಸಪತಿಯಾದ ವರಶಿವನ ದಾಸನೆಂದೂ, ತನ್ನ ಹೆಸರು ಪುಷ್ಪದತ್ತ ಎಂದೂ ಸರ್ವಜ್ಞನು ಉಸುರಿದ್ದಾನೆ. ಮುಂದೆ ಶಿವನ ಆಜ್ಞೆಯಿಂದ ಲೋಕಸಂಗ್ರಹಕ್ಕಾಗಿ ಅವನು 'ವರರುಚಿಯಾಗಿ' ಜನ್ಮತಾಳಿದನಂತೆ. 'ಸಾಲೆ ಸರ್ವ

ಜ್ಞನಾ'ಗಿ ಹುಟ್ಟಿದುದು ಅವನ ಮೂರನೆಯ ಜನ್ಮ. ಈ ಪೂರ್ವಜನ್ಮದ ಕಥೆಯನ್ನು ಕೇಳಿ ಸರ್ವಜ್ಞನಲ್ಲಿ ಮೊದಲಿಗೇ ಅವಿಶ್ವಾಸ ಹುಟ್ಟುವ ಸಂಭವವಿದೆ. ಆದರಿ ಕೊಂಚ ವಿಚಾರಮಾಡಿದರೆ ಪೂರ್ವಜನ್ಮದ ಜ್ಞಾನವೂ ಅದರ ಕಥನವೂ ನಮಗೇನು ಅಪರಿಚಿತವಾದವುಗಳಲ್ಲವೆಂಬುದು ಕಂಡುಬರಬರುವುದು. ಗೀತೆಯಲ್ಲಿ ಭಗವಂತನು ತನ್ನ ಪೂರ್ವಜನ್ಮದ ಪರಿಚಯವನ್ನು ಪಾರ್ಥನಿಗೆ ಮಾಡಿಕೊಟ್ಟಿಲ್ಲವೇ? ಉಪನಿಷತ್ತುಗಳಲ್ಲಿಯ ಮಹರ್ಷಿಯೋರ್ವನು ತಾನು ಹಿಂದೆ 'ವಾಮದೇವ' ನಿದ್ದಬಗ್ಗೆ ಹೇಳಿಲ್ಲವೇ? ಇತ್ತೀಚಿನ ಅಧ್ಯಾತ್ಮವಾದಿಗಳಲ್ಲಿಯ (*Theosophists*) ಹಿರಿಯರಾದ ಹಲವರು ತಮ್ಮ ಪೂರ್ವಜನ್ಮದ ವೃತ್ತಾಂತವನ್ನು ಬರೆದಿಟ್ಟಿದ್ದಾರೆ. ಆದ್ದರಿಂದ ಪೂರ್ವಜನ್ಮಗಳ ವಿಷಯವು ನಮಗೆ ಹೊಸದಾದ್ದಲ್ಲ. ಹೀಗಿರಲು ಸರ್ವಜ್ಞನ ವಿಷಯದಲ್ಲಿಯೇ ಸಂದೇಹಪಡುವ ಕಾರಣವೇನು?

ಸರ್ವಜ್ಞನ ತಂದೆಯಾದ ಬಸವರಸನೆಂಬ ಬ್ರಾಹ್ಮಣನು ಧಾರವಾಡ ಜಿಲ್ಲೆಗೆ ಸೇರಿದ ಮಾಸೂರ ಗ್ರಾಮದವನು. ಅವನ ಹೆಂಡತಿಯ ಹೆಸರು ಅಕ್ಕಮಲ್ಲವ್ವ, ಈ ಉಭಯತರಿಗೆ ಬಹಳ ದಿವಸ ಮಕ್ಕಳಾಗಲಿಲ್ಲ. ಇದರಿಂದ ದುಃಖಿತನಾಗಿ ಬಸವರಸನು ಶ್ರೀ ಕಾಶೀ ಕ್ಷೇತ್ರಕ್ಕೆ ಹೋಗಿ ವಿಶ್ವೇಶ್ವರನ ಆರಾಧನೆಯನ್ನು ಮಾಡತೊಡಗಿದನು. ಅವನ ಅನನ್ಯ ಸೇವೆಯಿಂದ ಸ್ವಲ್ಪಕಾಲದಲ್ಲಿಯೇ ಈಶ್ವರನು ಪ್ರಸನ್ನನಾಗಿ ಅವನಿಗೆ ವರವನ್ನಿತ್ತನು ಈತನ ಪ್ರಸಾದವನ್ನು ಗ್ರಹಿಸಿ ಬಸವರಸನು ಮರಳಿ ತನ್ನ ಊರಿಗೆ ಬರಲು ಹೊರಟನು. ದಾರಿಯಲ್ಲಿ ಒಂದು ದಿನ ಆತನು ಅಂಬಲೂರೆಂಬ ಹಳ್ಳಿಯಲ್ಲಿ ಇಳಕೊಂಡನು. ಮಧ್ಯಾನ್ಹದ ಸಮಯ; ಹೊಟ್ಟೆ ಹಸಿದಿದೆ; ಬಸವರಸನು ಕುಂಬಾರ ಸಾಲೆಗೆ ಹೋಗಿ ಗಡಿಗೆಗಳನ್ನು ಕೊಂಡು ಊರಹೊರಗಿನ ತೋಟವಲ್ಲಿ ಅಡಿಗೆಯನ್ನು ಮಾಡಹತ್ತಿದನು. ಇಷ್ಟರಲ್ಲಿ ಮೋಡ ಮುಸುಕಿ ಭೋರೆಂದು ಮಳೆಯು ಸುರಿಯಹತ್ತಿತು ಅವಸರದಿಂದ ಸಾಹಿತ್ಯವನ್ನು ಕಟ್ಟಿಕೊಂಡು ಅವನು ಮತ್ತೆ ಕುಂಬಾರ ಸಾಲೆಗೆ ಬಂದನು. ಗಡಿಗೆಗಳನ್ನು ಕೊಳ್ಳುವಾಗ ಕುಂಬಾರರ ಪರಿಚಯವಾಗಿತ್ತು. ಅವರು ಕೆಲಕಾಲ ಆಶ್ರಯ ಕೊಟ್ಟಾರೆಂಬ ಭಾವನೆಯಿಂದ ಬಸವರಸನು ಅಲ್ಲಿಗೆ ಬಂದುದು. ಆಗ ಮನೆಯಲ್ಲಿ ಮಾಳಿಯೆಂಬ ಬಾಲವಿಧವೆಯೋರ್ವಳೆ ಇದ್ದಳು. ಮಾಳಿಯು ಬಸವರಸನನ್ನು ಚೆನ್ನಾಗಿ ಸತ್ಕರಿಸಿದಳು. ಬಸವರಸನು ಅಡಿಗೆ ಮಾಡಿ ಊಟ

ವನ್ನು ಮುಗಿಸಿದನು. ಮಳೆಯು ಹೊರಗೆ ಸುರಿಯುತ್ತಲೇ ಇದ್ದಿತು. ಸುಂದರಿಯಾದ ಆ ಬಾಲವಿಧವೆ; ಆಕೆಯ ಚಲವಿನ ನಡತೆ; ಒಲವಿನ ಅತಿಥ್ಯ. ಬಸವರಸನು ಅವುಗಳಿಗೆಲ್ಲ ಮನಸೋತನು. ಮಾಳಿಯು ಕೂಡ ಶಿವ ಪ್ರಸಾದದಿಂದ ಹೊಳೆಯುವ ಆ ಬ್ರಾಹ್ಮಣನಲ್ಲಿ ಅನುರಕ್ತಳಾದಳು. ಈ ಪರಸ್ಪರ ಪ್ರೀತಿಯಮೂಲಕ ಮಳೆಯಿಂದುಂಟಾದ ಏಕಾಂತದಲ್ಲಿ ಬಸವರಸನು ಮಾಳಿಯಲ್ಲಿ ಗರ್ಭವನ್ನಿಟ್ಟು ತನ್ನ ಊರಿಗೆ ಹೊರಟು ಹೋದನು. ಸಕಾಲಕ್ಕೆ ಮಾಳಿಯು ಹಡೆದಳು. ಆಕೆಯಲ್ಲಿ ಹುಟ್ಟಿದ ಮಗುವೇ ಪರಶಿವನ ವರಪುತ್ರನಾದ ಸರ್ವಜ್ಞನು!

೪ ಬಾಲ್ಯ ಮತ್ತು ಶಿಕ್ಷಣಃ— ಚಿಕ್ಕಂದಿನಲ್ಲಿಯೆ ಸರ್ವಜ್ಞನ ಕಳೆಯನ್ನು ಕಂಡ ಹಿರಿಯರು ಈತನು ಕುಂಬಾರ ಮನೆಯಲ್ಲಿ ಹೇಗೆ ಹೊಳೆತನೆಂದು ಆಶ್ಚರ್ಯಪಡಹತ್ತಿದರು. ಅದರಂತೆಯೇ ಖಂಡಪರಶುವಿನ ವರಪುತ್ರನಾದ ತನ್ನನ್ನು ಮಾಳಿಯು ಮಗನೆಂದು ಕರೆಯುವುದು ಸರ್ವಜ್ಞನಿಗೆ ಸೇರಲಿಲ್ಲ. ತನ್ನ ನೈಜವೈಭವದ ನೆನಹಿದ್ದ ದಾವನು ಕೀಳಜೀವನವನ್ನಂಗೀಕರಿಸುವನು? ಹೀಗಿರಲು ಒಂದು ದಿನ ಮಾಳನೂ ಮಾಳಿಯೂ ಹೆಮ್ಮೆಯಿಂದ ನೀನಾರ ಮಗನೆಂದು ಸರ್ವಜ್ಞನಿಗೆ ಕೇಳಲಾಗಿ. "ನಾನು ಶಿವನ ಮೇಳದವನು; ಬ್ರಾಹ್ಮಣನು ನನ್ನ ತಂದೆಯಲ್ಲ; ಮಾಳಿಯು ತಾಯಿಯಲ್ಲ; ಶಿವನ ವರದಿಂದ ಹುಟ್ಟಿದವನು." ಎಂದವನು ಉತ್ತರ ಕೊಟ್ಟನು. ಅವರ ಆಧ್ಯಾತ್ಮಿಕ ಅರ್ಥವನ್ನರಿಯದೆ ತಂದೆತಾಯಂದಿರಿಬ್ಬರು ಅತೀವ ಕೋಪಿಸಿಕೊಂಡು ಸರ್ವಜ್ಞನನ್ನು ಕೂಡಲೆ ಮನೆಯ ಹೊರಗಟ್ಟಿದರು.

ಅಂದಿನಿಂದ ಸರ್ವಜ್ಞನು ನಿಜವಾಗಿ ಪ್ರಕೃತಿ ಪಾರ್ವತಿಯ ಮುದ್ದು ಮಗನಾದನು. ಆಕೆಯ ಸೊಬಗನ್ನು ಮನಬಂದಂತೆ ಉಂಡನು. ತೋರಿದತ್ತ ತಿರುಗಾಡಿ ಸರ್ವಜ್ಞನು ಗಿರಿಗಳ ಗಾಂಭೀರ್ಯವನ್ನೂ, ನದಿಗಳ ನೈರ್ಮಲ್ಯವನ್ನೂ, ಸಾಗರದ ಸ್ವಾತಂತ್ರ್ಯವನ್ನೂ ಹಾಗೂ ಗಗನದ ವೈಶಾಲ್ಯವನ್ನೂ ಸಂಪೂರ್ಣವಾಗಿ ಪಡೆದನು. ವನರಾಜಿಯಲ್ಲಿ ವಿರಾಜಿಸುವ ಹೂಗಳು ಅವನಿಗೆ ಚಾರಿತ್ರ್ಯದ ಸೌರಭವನ್ನು ಕೊಟ್ಟವು; ಮರಗಳು ಮನಸ್ಸಿನ ಔದಾರ್ಯವನ್ನಿತ್ತವು; ಹಕ್ಕಿಗಳು ಅವನ ಬುದ್ಧಿಗೆ ಅಮರರ ಆಕಾಶದಲ್ಲಿ ಅನಿರುದ್ಧವಾಗಿ ಹಾರಲು ಕಲಿಸಿದವು. ಜನಸಂದಣಿಯಲ್ಲಿ ಅಲೆದಾಡಿದಾಗ ಸರ್ವಜ್ಞನಿಗೆ ಒಳಿತು ಕೆಡಕು ಅನುಭವಗಳಿಂದ ಚನ್ನಾಗಿ

ಬೋಧೆಯಾಯಿತು. ಈ ಮೇರೆಗೆ ಶಿಕ್ಷಣವನ್ನು ಹೊಂದಿದ ಸರ್ವಜ್ಞನು ಜನಸೇವೆಯ ಹೊಣೆಯ ಕಾರ್ಯವನ್ನು ನಿರ್ವಹಿಸಲು ಸಿದ್ಧನಾದನು.

೫ ದಿನಚರ್ಯಃ— ಇಂಥ ಸುಶಿಕ್ಷಣದಿಂದ ಸಜ್ಜನಾದ ಸರ್ವಜ್ಞನು ಮಂಡೆಯನ್ನು ಬೋಳಿಸಿಕೊಂಡನು. ತುಂಡಗಂಬಳಿಯನ್ನು ಹೊದ್ದು ಯಾವಾಗಲು ಹಿಂಡನಗಲಿದ ಗಜದಂತೆ ಸ್ವತಂತ್ರವಾಗಿ ಇರಹತ್ತಿದನು. ಜನರ ಸಂಸರ್ಗವನ್ನು ಅವನು ಅದಷ್ಟು ತಪ್ಪಿಸುತ್ತಿರಬೇಕು. ನಮ್ಮ ಹಿಂದಾದ ಕನ್ನಡನಾಡಿನಲ್ಲಿ ಹರನನ್ನು ಭಜಿಸುತ್ತ ಹಸಿವಾದಾಗ ಕರದಿ ಕಪ್ಪರವನ್ನು ಹಿಡಿದು, ಹತ್ತೆಂಟು ಮನೆಗಳಲ್ಲಿ ಭಿಕ್ಷೆಯನ್ನು ಬೇಡಿ ಸರ್ವಜ್ಞನು ಜನರ ಸೇವೆಯನ್ನು ಮಾಡುತ್ತಿದ್ದನು. ಇಷ್ಟೇ ಅಲ್ಲ. ಇಂಥ ತಿರಿವರಿಂ ಸಿರಿವಂತರಾರು? ಎಂದು ಒಳ್ಳೇ ಅಭಿಮಾನದಿಂದ ಅವನು ಕೇಳುತ್ತಾನೆ. ನಿಶ್ಚಯವ ಬಿಡದೆ ಸರ್ವಜ್ಞನು ಯಾರ ಇಚ್ಛೆಯಂತೆಯೂ ನಡೆಯುತ್ತಿರಲಿಲ್ಲ. ನೆಟ್ಟಿ ಒಂದೇ ಊರಲ್ಲಿ ದೀರ್ಘಕಾಲ ನಿಲ್ಲದೆ, ನಿರಂತರ ಸಂಚಾರದಲ್ಲಿ ಜನರ ಈ ಕುಂದುಕೊರತೆಗಳನ್ನು ಕಂಡು, ನಿಸ್ಪೃಹವೃತ್ತಿಯ ಸರ್ವಜ್ಞನು ಅವರನ್ನು ತನ್ನ ಮಿಂಚಿನ ಮಾತಿನಿಂದ ತಿದ್ದುತ್ತಿದ್ದನು.

೬ ಅಂತರಂಗಃ— ಸರ್ವಜ್ಞನಂಥ ಪುಣ್ಯಾತ್ಮನನ್ನು ಕುಲಗೆಟ್ಟವನೆಂದು ಹೀಯಾಳಿಸುವ ಹೇಸಿ ಜನರು ಇಂದಿನಂತೆ ಅಂದಿನ ಸಮಾಜದಲ್ಲಿಯೂ ಕಡಿಮೆಯಿರಲಿಲ್ಲ. ಆದರೆ "ದೈವಾಯತ್ತಂ ಕುಲೇ ಜನ್ಮ! ಮದಾಯತ್ತಂ ತು ಪೌರುಷಂ" ಜನ್ಮವು ದೈವದ ಆಧೀನವಿದ್ದರೆ ಪೌರುಷವೇನೂ ಅದಕ್ಕೊಳಪಟ್ಟಿದ್ದಲ್ಲ. ಅದು ನನ್ನ ಆಧೀನವಿದೆ! ಎಂದುಸುರಿದ ಕರ್ಣನಂತೆ ಸರ್ವಜ್ಞನ ಭಾವನೆಯಿತ್ತು. ಕುಲಗೆಟ್ಟವರು ಚಿಂತೆಯೊಳಗಿರುವದಿಲ್ಲ. ಕುಲಗೆಟ್ಟ ಋಷಿಗಳು ಪರಮಾತ್ಮನನ್ನು ಮರೆಹೊಕ್ಕು ಪವಿತ್ರರಾಗಲಿಲ್ಲವೇ? ಜೀವವು ಶಿವನ ಕುಲಕ್ಕೆ ಸೇರಿದುದು! ಮಾಂಸದ ಹುತ್ತಾದ, ಎಲುವಿನ ಹಂದರವಾದ ದೇಹಕ್ಕೆ ಕುಲವಾವುದಯ್ಯ, ಎಂದು ಸರ್ವಜ್ಞನು ಕೇಳುತ್ತಾನೆ.

ಸರ್ವಜ್ಞನೆಂಬುದು ಅವನು ತನಗೆ ತಾನೇ ಇಟ್ಟುಕೊಂಡ ಹೆಸರು. ಸರ್ವಜ್ಞನ ಮೂಲ ಹೆಸರು ಏವುದು ಗೊತ್ತಿಲ್ಲ. ಆದರೆ ಅವನು ತನ್ನನ್ನು ಸರ್ವಜ್ಞನೆಂದು ಕರೆದುಕೊಂಡುದು ಹೆಮ್ಮೆಯಿಂದ ಮಾತ್ರ ಅಲ್ಲ. ಸರ್ವಜ್ಞನೆಂದರೆ ಎಲ್ಲವನ್ನು ಬಲ್ಲವನಲ್ಲ; ಎಲ್ಲರಿಂದ ಬಲ್ಲವ! ಸರ್ವರೊಳು ಒಂದೊಂದು ನುಡಿಗಲಿತು ಸರ್ವಜ್ಞನು. ವಿದ್ಯೆಯ ಪರ್ವತನಾದ ಸರ್ವಜ್ಞ

ನಾದ ಎಂಥ ವಿನೀತವಾದ ಅಭಿಮಾನವಿದು? 'ನಾನು ಹೇಳಲರಿಯೆನ್ನ; ಪನ್ನಗಧರನು ಎನಗೆ ಬುದ್ಧಿಯನ್ನು ದಯಪಾಲಿಸಿದ. ಆತನ ಶರಣ ಅಳು ನಾನು. ಶಿವನು ಹೇಳಿನಲು ಹೇಳಿದೆನು! ಇದು ಸರ್ವಜ್ಞನ ವಿನಮ್ರ ಭಾವನೆ. ಇದೇ ಎಲ್ಲಿರ ಭಾವನೆಯಾದರೆ—

೨ ಬದ್ಧ-ಸ್ಥಲ.

೧ ಹಿಂದಿನಿಂದ ಮುಂದೆಃ— ಇನ್ನು ಸರ್ವಜ್ಞಮೂರ್ತಿಯ ಸರ್ವ ಸಂಗ್ರಾಹಕ ಉಪದೇಶವನ್ನು ಅರಿತುಕೊಳ್ಳುವ; ಬದ್ಧ-ಸ್ಥಲವೆಂದರೆ ಬದ್ಧರ ಸ್ಥಲ; ಉನ್ನತಿಯ ಪಥದಲ್ಲಿ ಅವರಿಗಿದ್ದ ಸ್ಥಾನ; ಅವರ ಮನಸ್ಸೆ; ನೆನೆಹು ಭೂಮಿಕೆ ವಾಸನೆ ಆಕಾಂಕ್ಷೆಗಳ ಸ್ವರೂಪ. ಜನಸಾಮಾನ್ಯರೆಲ್ಲರೂ ಬದ್ಧರೇ! ಅವರು ಈ ಜಾಗತಿಕ ಸುಖಕ್ಕೆ ಅಂಟಿಕೊಂಡಿರುವ ಮೂಲಕ ಇವುಗಳ ಕೂಡ ಸಂಬದ್ಧರಾದ ಮೂಲಕ, ಅವರಿಗೆ ಬದ್ಧರೆಂಬ ಹೆಸರು. ಲಿಂಗವಂತರು ಅವರಿಗೆ ಭವಿಗಳೆಂದೂ ಜೈನರು ನಿರ್ಭವ್ಯರೆಂದೂ ಕರೆಯುವದುಂಟು. ಸರ್ವಜ್ಞನು ಕಂಡು ಹಿಡಿದ ಬದ್ಧರ ಲಕ್ಷಣಗಳನ್ನು ಅವರಿಗೆ ಅವನು ಮಾಡಿದ ಉಪದೇಶವನ್ನೂ ಇಲ್ಲಿ ಕಾಣಿಸಲಾಗಿದೆ.

೨ ಬದ್ಧರ ಲಕ್ಷಣಃ— ಈ ಜಗತ್ತಿನಲ್ಲಿ ಎಲ್ಲವನ್ನು ಬಲ್ಲವರು ಅರೂ ಇಲ್ಲ. ಅಲ್ಪ ಸ್ವಲ್ಪ ಬಲ್ಲವರು ಹಲವರಿದ್ದರೂ ಅರಿತದ್ದನ್ನು ಕಾರ್ಯರಂಗಕ್ಕಿಳಿಸಲು ಅವರಲ್ಲಿ ಬಲವಿಲ್ಲ. ಬಲವಿದ್ದವರಿಗೆ ಕಾರ್ಯಪೂರ್ತಿಗೆ ಬೇಕಾದ ಸಾಹಿತ್ಯವಿಲ್ಲ. ಆದ್ದರಿಂದ ಯಾವ ಬಗೆಯ ದೊಡ್ಡ ಕೆಲಸವು ಕೈಗೂಡದೆ ಹೀನಾವಸ್ಥೆಯಲ್ಲಿದ್ದ ನಮ್ಮ ಸಮಾಜವ ಏಳ್ಗೆಯನ್ನು ಹೊಂದಲಾರದಾಗಿದೆ. ಇಲ್ಲಿಯ ಜನರ ಬಯಕೆಗಳು ತೀರ ಸಂಕುಚಿತವಾದವುಗಳು. ಬೆಚ್ಚನಾ ಮನೆ, ಬೆಚ್ಚಕ್ಕೆ ದುಡ್ಡು, ಇಚ್ಛೆಯರಿಯುವ ಗುಣಿಗಳಾದ ವಡದಿಮಕ್ಕಳಾದರೆ ಇವರ ಮನೀಷೆಯ ಮೇರೆಯಾಯಿತು. ಹೊನ್ನು, ಹೆಣ್ಣು, ಮಣ್ಣುಗಳ ಜೊತೆಗೆ ಮನ್ನಣೆಯನ್ನು ಸೇರಿಸಿದರೆ ಜನಸಾಮಾನ್ಯರ ಆಕಾಂಕ್ಷೆಗಳ ಸ್ಫುಟವಾದ ಚಿತ್ರವು ನಮ್ಮೆದುರು ನಿಲ್ಲುವುದು. ಜೊಳ್ಳು ಮನುಜರು ಈ ಸುಳ್ಳು ಸಂಸಾರದ ಜಾಲದಲ್ಲಿ ಸಿಲುಕಿ ಹೊಳ್ಳಾಡುತ್ತಿರುವರು. ಆದರೆ ಇವರ ನೈಜ-ಸ್ವರೂಪವು ಅವರಿಗೆ ತಿಳಿಯದಾಗಿದೆ. ಮುಕ್ಕಣ್ಣನೊಡ್ಡಿದ ಬಲೆಯದು; ಮೂರನೆಯ ಕಣ್ಣು ತೆರೆಯದ ವಿನಃ ಅದು ಕಾಣುವದೆಂತು? ಅವರಿ ಜನರ ಮಾತನ್ನು ಕೇಳಿದರೆ ಈ ಜಗತ್ತೆಲ್ಲ ಸತ್ಪುರುಷರ ಬಿಡಾರವೆಂಬಂತೆ ತೋರುವುದು. ವಚನದಲ್ಲಿ

ಎಲ್ಲರೂ ಶುಚಿ-ವೀರ-ಸಾಧುಗಳು, ಆದರೆ ಹೊನ್ನು ಹೆಣ್ಣಂ ಸೋಂಕಲು ಯಾರ ಮನಸ್ಸೂ ಚಲಿಸದೆ ಇರುವದಿಲ್ಲ. ಈ ಮೇರೆಗೆ ಆಟದಲ್ಲಿ ಬಾಲ್ಯವನ್ನೂ, ನೋಟದಲ್ಲಿ ತಾರುಣ್ಯವನ್ನೂ, ಚಿಂತೆಯಲ್ಲಿ ವಾರ್ಧಕ್ಯವನ್ನೂ ಕಳೆದು, ಕೊನೆಗೆ ಕಾಲನ ತುತ್ತಾಗುವದೇ ಈ ಜನರು ಹಿಡಿಯುವ ಪಾದಿ. ಇದಕ್ಕೂ ಹೆಚ್ಚಿನ ಆದರ್ಶವಿಲ್ಲ. ಶ್ರೇಷ್ಠತರಗತಿಯ ಸಾಧನೆ ಇಲ್ಲ. ವಿಷಯ-ವಿಷಯ-ವನ್ನು ಸುಖವೆಂದು ಸೇವಿಸಿ ಹಾಳಾದ-ಹಾಳಾಗುವ ನಂಜುಂಡರ ಅವಸ್ಥೆಯಿದು! ಇಂಥವರಿಗೂ ಸರ್ವಜ್ಞನು ಬುದ್ಧಿ ಕಲಿಸಿ, ಕೆಲಮಟ್ಟಿಗೆ ಸುಖಿಗಳನ್ನಾಗಿ ಮಾಡಿದ್ದಾನೆ.

೩ ವ್ಯವಹಾರ ಚಾತುರ್ಯಃ— ಅಭ್ಯುದಯ ನಿಶ್ರೇಯಸುಗಳು ಧರ್ಮದ ಗುರಿಯ ಎರಡಂಗಗಳು. ಇಹವನ್ನು ಗೆದ್ದು ಪರವನ್ನರಸಬೇಕಲ್ಲವೆ? ಸರ್ವಜ್ಞನ ಸಂದೇಶವು ಈ ಉಭಯ ಅಂಗಗಳನ್ನು ಒಳಗೊಂಡಿದ್ದಾಗಿದೆ. ಇಹ ಸುಖವೇ ಗುರಿಯಾಗಿರುವ ಬದ್ಧರಿಗೆ ಸರ್ವಜ್ಞನು ವ್ಯವಹಾರಚಾತುರ್ಯವನ್ನು ಕಲಿಸಿದನು. ಪರಸುಖವೇ ಪ್ರಧಾನವಾದ ಮುಮುಕ್ಷುಗಳಿಗೆ ಮುಕ್ತಿಮಾರ್ಗವನ್ನು ತೋರಿಸಿದನು. ಆದರೆ ಸರ್ವಜ್ಞನ ವ್ಯವಹಾರವು ಪರಮಾರ್ಥದ ಪೂರ್ವಸಿದ್ಧತೆ; ಅದನ್ನು ಬಿಟ್ಟದ್ದಲ್ಲ. ಅದಕ್ಕೆ ವಿರುದ್ಧವಾದದ್ದಂತೂ ಅಲ್ಲವೇ ಅಲ್ಲ. ಚಾತುರ್ಯ, ವೀರ್ಯ, ಔದಾರ್ಯ ಮುಂತಾದ ವ್ಯವಹಾರಕ್ಕೆ ಅವಶ್ಯವಿದ್ದ ಸದ್ಗುಣಗಳು ಮನುಷ್ಯನಲ್ಲಿ ಹುಟ್ಟಿದಂದಿನಿಂದಿರಬೇಕಾದರೂ ಅವು ಪ್ರಯತ್ನದಿಂದ ಪ್ರಾಪ್ತವಾಗಲಾರವೆಂದಲ್ಲ. ಬರೆವಂಗೆ ಓದು ಬರುವಂತೆ ಅಭ್ಯಾಸಕ್ಕೆ ಅಸಾಧ್ಯವಾದುದು ಯಾವದೂ ಇಲ್ಲವೆಂದು ಸರ್ವಜ್ಞನ ಮತ. ಈ ಸದ್ಗುಣಗಳ ಸಹಾಯವಿಲ್ಲದೆ ಇಹಸುಖವು ಸಂಪೂರ್ಣವಾಗಿ ಸಿಗಲಾರದು. ಆದುದರಿಂದ ಅವುಗಳನ್ನು ಪಡೆಯಲು ಪ್ರತಿಯೊಬ್ಬನು ಯತ್ನಿಸಬೇಕೆಂದು ಸರ್ವಜ್ಞನು ಹೇಳುತ್ತಾನೆ.

೪ ವಿದ್ಯೆಃ— ಯಾವ ಕಾರ್ಯವು ಕೈಗೂಡಬೇಕಾದರೂ ಮನುಷ್ಯನ ಬುದ್ಧಿಯು ಚುರುಕಾಗಿರಬೇಕು. ಸೋಲದಾ ಬುದ್ಧಿಯಿರುವವನಲ್ಲಿ ಭಾಗ್ಯದ ಕೀಲ ಕಾಣಯ್ಯ! ಎಂದು ಸರ್ವಜ್ಞನ ಹೇಳಿಕೆ. ಈ ಬುದ್ಧಿಯನ್ನು ಸಂಸ್ಕಾರಗೊಳಿಸುವ ಕೆಲಸವನ್ನು ವಿದ್ಯೆಯು ಮಾಡುತ್ತಿದೆ. ಆದರಿಂದ ವಿದ್ಯೆಯೇ ಎಲ್ಲರ ತಾಯ್ತಂದೆ. ಇಷ್ಟೇ ಅಲ್ಲ. ವಿದ್ಯಾಧನವನ್ನು ಯಾರೂ ಕದಿಯಲಾರರು. ನಾವು ಇರುವಲ್ಲಿಗೆ ವಿದ್ಯೆಯು ನಮ್ಮೊಡನೆ

ಬಂದು ನಮ್ಮನ್ನು ಸಲುಹುವದು. ಇಂಥ ವಿದ್ಯೆಯನ್ನು ಮಕ್ಕಳಿಗೆ ಕೊಡದ ಗುರುಹಿರಿಯರು ಶುದ್ಧವೈರಿಗಳೆಂದು ಸರ್ವಜ್ಞನು ಸಾರುತ್ತಾನೆ.

ಮೇಲಾಗಿ ವಿದ್ಯೆಯನ್ನು ಪಡೆದವನ ಮಾತು ಮುತ್ತಿನ ಹಾರದಂತಿರಬೇಕು. ರಸಿಕರ ಮಾತು ಶಶಿಯುದಿಸಿ ಬಂದಂತೆ ಅಲ್ಲಿ ಕಡುನಗೆಯ್ಯು ಹುತ್ತು. ಆದರೆ ಅರಸಿಕರ ಮಾತಿನಿಂದ ಹಗೆ-ಕೊಲೆಗಳುಂಟಾಗುವ ಸಂಭವವು ಬಹಳ. ಹೊಲಬನರಿದು ಕಾಲಕ್ಕೆ ಸರಿಯಾಗಿ ಮಾತನಾಡಬೇಕು. ಒಂದು ಮೇಳೆ ಮಾತರಿವನು ಸೋತರೂ ಅಡ್ಡಿಯಿಲ್ಲ. ಆದರೆ ಮಾತಿಗೆ ಮಾತು ಮಥಿಸಿ ಕಲಹದ ಕಿಡಿಗಳು ಹಾರಬಾರದು. ಮಾತು ಬಲ್ಲವನು ನುಡಿದಂತೆ ನಡೆದರೆ ಜಗವನ್ನು ಕೂತಲ್ಲಿ ಆಳ್ವನೆಂದು ಸರ್ವಜ್ಞನು ಪದೆ ತಟ್ಟಿ ಹೇಳುತ್ತಾನೆ.

೫ ವೀರ್ಯಃ—ಬುದ್ಧಿಯು ಕಾರ್ಯಸಿದ್ಧಿಯ ದಾರಿಯನ್ನು ತೋರಿಸುತ್ತದೆ. ಆದರೆ ಆ ಹಾದಿಯನ್ನು ಹಿಡಿಯುವ ಸಾಮರ್ಥ್ಯವು ಅದರಲ್ಲಿಲ್ಲ. ಅದು ಉತ್ಸಾಹದ ಕೆಲಸ. ಪ್ರಬಲವಾದ ಭಾವನೆಯಲ್ಲಿಯೇ ಪ್ರೇರಿಸುವ ಶಕ್ತಿಯಿದೆ. ತಿಳಿಯದ ಬುದ್ಧಿಗೆ ಹೊಳೆದ ಸಾಧನೆಯನ್ನು ದೃಢವಾದ ನಂಬಿಕೆಯಿಂದ ಮಾಡದ ಹೊರತು ಸಿದ್ಧಿಯು ಸಿಗಲಾರದು. ಕಾರ್ಯಕ್ಷೇತ್ರದಲ್ಲಿಳಿದವನು ಮುಂದಿಟ್ಟ ಹೆಜ್ಜೆಯನ್ನು ಹಿಂದೊಯ್ಯಬಾರದು. ಸ್ವಾಮಿಯಾದ ಹಿರಿದಾದ ಕಾರ್ಯದಲ್ಲಿ ಪ್ರಸಂಗ ಬಂದರೆ ಮನುಷ್ಯನು ಮಡಿಯಲೂ ಸಿದ್ಧನಿರಬೇಕು. ಗಮ್ಯಕ್ಕಾಗಿ ಮಡಿಯಲು ಸಿದ್ಧರಿದ್ದವರೇ ಗೆಲವಿನ ಹೂಗಳನ್ನು ಮುಡಿಯುವರು. ಆದುದರಿಂದ ಹುಟ್ಟಿದವನಿಗೆ ಸಾವು ಇಟ್ಟದ್ದೆಂಬುದನ್ನು ಜಾತಿವೀರರು ಮರಣಕ್ಕೆ ಶರಣೆನ್ನಲು ಹೆದರುವದಿಲ್ಲ.

೬ ವಿತ್ತಃ—ವಿದ್ಯೆ ವೀರ್ಯಗಳ ಜೊತೆಗೆ ವಿತ್ತವೂ ಅನೇಕ ಸಲ ಕಾರ್ಯಸಿದ್ಧಿಗೆ ಅತ್ಯವಶ್ಯವಿರುತ್ತದೆ. ಈ ಜಗತ್ತಿನಲ್ಲಿ ಧನಿಕನೇ ದಿನಕರನು. ಸಿರಿಯಣ್ಣವುಳ್ಳವನೇ ಹಿರಿಯಣ್ಣ. ಬಲ್ಲಿದನ ನುಡಿಯು ಬೆಲ್ಲದಂತೆ ಸಿಹಿ! ಬಡವನ ಸವಿಮಾತು ಕೂಡ ಬೇವಿಗಿಂತ ಕಹಿ! ಹೀಗಿರಲು ಧನವನ್ನು ದೊರಕಿಸುವದು ಎಷ್ಟು ಅಗತ್ಯವೆಂಬುದನ್ನು ಬೇರೆ ಹೇಳುವ ಕಾರಣವಿಲ್ಲ. ಅದರೆ ಸಿರಿಯನ್ನು ಸಂಪಾದಿಸುವುದು ಸಾಲದಿಂದಲ್ಲ, ಉದ್ಯಮದಿಂದ. ಉದ್ಯೋಗಿಯನ್ನು ಲಕ್ಷ್ಮಿಯು ತಾನಾಗಿಯೇ ವರಿಸುವಳು. ಎಲ್ಲ ಉದ್ಯಮಗಳಲ್ಲಿ ಒಕ್ಕಲತನವು ಮೇಲಾದದ್ದು. ಯಾಕಂದರೆ ಮೇಟಿಯಿಂದ ರಾಟಿಯು ನಡೆದು ಜನರಿಗೆ ಅನ್ನವಸ್ತ್ರಗಳು ದೊರಕುತ್ತವೆ. ಅದಿಲ್ಲದೆ ಹೋದರೆ ದೇಶದ ಆಟವೇ ಸಾಗುವಂತಿಲ್ಲ.

ಇನ್ನು ಉದ್ಯೋಗದಿಂದ ದೊರಕಿಸಿದ ದುಡ್ಡಿನ ವಿನಿಯೋಗವು ಚನ್ನಾಗಿ ಆಗಬೇಕು. ಉಳ್ಳಲ್ಲಿ ಉಣದವನ ಹಾಗೂ ದಾನವೀಯದ ಮನ ಒಡಪೆಯು ಕಳ್ಳರಿಗೆ ಅಥವಾ ಅರಸರಿಗೆ ಸಿಗುವುದು ಖಂಡಿತ. ಇದೂ ಗೊತ್ತಿದ್ದರೂ ಧನವನ್ನು ಮಣ್ಣಿನಲ್ಲಿಡುವ ಮೋಹವು ಮಾನವರಿಗೆ ಬಿಡುವದಿಲ್ಲ. ಕೊಡದೆ ಉಣ್ಣದೆ ಹೂಳಿಟ್ಟ ಹಣವು ಸತ್ತಮೇಲೆ ಹೆಂಬಾಲಿಸುವದೇ? ಎಷ್ಟು ಮರುಳರೀ ಮಾನವರು? ದಾನವನ್ನು ಕೊಡಿಸಲು ಕನಲುವರು. ಆದರೆ ದಂಡವನ್ನು ಸುಮ್ಮನೆ ಗುಣುಗುಟ್ಟುತ್ತ ಕೊಡುವರು. ಕಳ್ಳರಿಗೆ, ಸುಳ್ಳರಿಗೆ, ಡಾಂಭಿಕರಿಗೆ ಕೊಡುವವರು ಧರ್ಮಕ್ಕೆ ಎಳ್ಳಷ್ಟು ಕೊಡರು. ಎಲೈ! ಹುಟ್ಟುವಾಗೀ ಧನವನ್ನು ಹೊಟ್ಟೆಗಟ್ಟಿ ತಂದಿರುವಿರಾ? ಕಟ್ಟಕಡೆಗೆ ಕೊಂಡೊಯ್ಯುವಿರಾ? ಯಾಕೆ ವೃಥಾ ದುರಾಶೆ. ಕೊಡಿ! ದಾನದಿಂದ ಸಕಲ ಪದವು ದೊರಕುವುದು. ಲೋಕದಲ್ಲಿ ದಾನ ಮಾಡದವನು ಕೆಟ್ಟ ಕಾಣಾ! ಎಂದು ಸರ್ವಜ್ಞನು ಕಳವಳದಿಂದ ಹೇಳುತ್ತಾನೆ. ದುಡ್ಡಿನ ವಿಷಮವಿಭಾಗದಿಂದ ಸಮಾಜದಲ್ಲುಂಟಾಗುವ ಅಸ್ಪೃಶ್ಯತೆಯನ್ನು ದೂರೀಕರಿಸಲು ನಮ್ಮ ಹಿರಿಯರ ದಾನಪದ್ಧತಿಯು ಇಂದಿನ ಅಸಮರ ಪದ್ಧತಿಗಿಂತ ಮೇಲಾದದ್ದಲ್ಲವೆ?

೭ ನಿಸ್ಪೃಹತೆಃ—ಯಾವಾಗಲೂ ಪರಾವಲಂಬಿಯಾದ ಜೀವನವು ಹೇಯವಾದದ್ದು. ಜಗದಿ ಸ್ವಾತಂತ್ರ್ಯವೇ ಲೇಸೆಂದು ಸರ್ವಜ್ಞನು ಹೇಳುವನು. ಸ್ವಾತಂತ್ರ್ಯವೇ ಸಕಲ ಸೌಭಾಗ್ಯಗಳ ತವರುಮನೆ. ದಾಸ್ಯದಲ್ಲಿಯ ಸುಖವು ನಿಜವಾದ ಸುಖವೇ ಅಲ್ಲ. ಅಪಮಾನದ ಸವಿಯೂಟಕ್ಕಿಂತ ಉಪವಾಸವಿರುವದು ಉತ್ತಮ. ನಿಂದ್ಯ ಅರಮನೆಗಿಂತ ವಂದ್ಯವಾದ ಎಲೆಮನೆಯೇ ಒಳಿತಲ್ಲವೇ? ಹೆಂಗಿನ ಹಾಲಿಗಿಂತ ಅಂಬಲಿಯು ತಿಳಿಯು ಸಾವಿರಪಾಲು ಸವಿಯಾದದ್ದು. ಆದ್ದರಿಂದ ದೇಹಸುಖಕ್ಕಾಗಿ ಕರ್ತೃನನ್ನು ದಾಸ್ಯದ ಮರಣಕ್ಕೀಡು ಮಾಡುವುದು ಸರ್ವಥಾ ಯೋಗ್ಯವಲ್ಲವೆಂದು ಸರ್ವಜ್ಞನ ಅಭಿಪ್ರಾಯ. ಆದರೆ ಮನುಷ್ಯನು ನಿಸ್ಪೃಹನಿದ್ದರೂ ಗರ್ವಿಷ್ಠನಿರಕೂಡದು. ಅವನು ವಿನೀತನಿರತಕ್ಕದ್ದು. ಯಾಕಂದರೆ ಆಳಾಗಬಲ್ಲವನೇ ಅರಸಾಗಿ ಆಳುವನು. ಯಾವನಿಗೆ ಈ ಬಗೆ

ಯಾಗಿ ಆಳಾಗಿ ಬಾಳಲು ಬರುವದಿಲ್ಲವೊ ಅವನು ಬೇಗನೆ ಹಾಳಾಗು
ವನು.

೮ ಅನ್ಯಗುಣಗಳುಃ— ಅನುಭವಿಯ ನೇದವೇ ನಿಜವಾದ ವೇದ
ವಿದ್ದ ಕಾರಣ ಅವನನ್ನುಳಿದು ಅನ್ಯ ಕೈಲಾಗದವರನ್ನು ನಂಬಿ ಕೆಡಬಾ
ರದು. ಕುಂತೀದೇವಿಯಂಥವಳು ಹಿರಿಮಗನನ್ನು ಕೊಲಿಸಿದಳು. ಹೀಗಿ
ರಲು ಸಾಮಾನ್ಯ ಜನರನ್ನು ನಂಬುವುದೆಂತು? ಪ್ರತಿಯೊಬ್ಬನು ಮುಂಜಾ
ಗ್ರತೆಯುಳ್ಳವನಿರಬೇಕು. ತಾಗುವಾ ಮುನ್ನವೇ ತಲೆಯನ್ನು ಬಾಗಿಸ
ಬೇಕು. ತಾಗಿ ತಲೆಯೊಡೆದ ಬಳಿಕ ಬಾಗುವಲ್ಲೇನು ಜಾಣ್ಮೆ? ಮಹ
ತ್ವದ ಹಂಚಿಕೆಗಳನ್ನು ಲೋಕಾಂತದಲ್ಲಿ ಮಾಡದೆ ಏಕಾಂತದಲ್ಲಿ ಮಾಡು
ತ್ತಿರಬೇಕು. ಇಬ್ಬರೊಳಗಣ ಕಿಚ್ಚು ಒಬ್ಬರನ್ನುಳಿದು ಒಬ್ಬರನ್ನು ಸುಡು
ವದಿಲ್ಲ ಎಂಬುದನ್ನರಿತು ಯಾವಾಗಲೂ ಕಲಹವನ್ನು ಮಾಡಬಾರದು.
ಆನೆ ಬೀದಿಲಿ ಬರಲು ನಾಯಿಯು ಬೊಗಳುವದು. ಅದು ಅದರ ಸಹಜ
ಸ್ವಭಾವ. ಆದರೆ ಆ ನಾಯಿಯಂತೆ ಆನೆ ಬೊಗಳಿದರೆ ಅದು ಆನೆಯ
ಮಾನಹಾನಿಯೇ ಸರಿ! ಅದುದರಿಂದ ನಿಂದಕರ ಬಿರುನುಡಿಗಳನ್ನು
ಶಾಂತವೃತ್ತಿಯಿಂದ ಸಹಿಸಬೇಕು.

ಮನುಷ್ಯನಿಗೆ ಯಾವ ಬಗೆಯ ವ್ಯಸನವು ಇರಕೂಡದು. ದಾಸಿ
ಯನು ಹೋಗುವಗೆ ಹೇಸಿ ಜಯಲಕ್ಷ್ಮಿಯು ತೊಲಗುವಳು. ಆತನ
ಆಯುಷ್ಯವು ನಾಶವಾಗುವುದು. ಮದ್ಯದಲ್ಲಿಲ್ಲವನು ನೀಡಿ ವಾರನಾರಿ
ಯರಲ್ಲಿ ಬಿದ್ದುಬರುವವನ ಕೀರ್ತಿಯು ಅಡಗಿ ಅವನು ಸಂತಾನಹೀನ
ನಾಗುವನು. ಭಂಗಿಯನ್ನು ಸೇದುವವನು ಮಂಗನಂತೆ ಮಂಕಾಗುವನು.
ಆದ್ದರಿಂದ ವ್ಯಸನದಿಂ ದೇಹವನು ಮಸಣದಲ್ಲಿಟ್ಟುಡಿ. ಅದನ್ನು ತೊರೆದು
ಹಸನಾಗಿ ದುಡಿದರೆ ಅಶನ ವ್ಯಸನಗಳು ದೊರಕುವವೆಂದು ಸರ್ವಜ್ಞನು
ಹೇಳುತ್ತಾನೆ.

೯ ವಿವಿಧ ವಿಷಯಃ— ದೇವರಲ್ಲಿ ಕುಲಭೇದವಿಲ್ಲದಾಗ ನಾವೇ
ಅದನ್ನೆತ್ತುವುದು ಮರುಳತನವಲ್ಲವೇ? ಎಲ್ಲ ಮನುಜರು ನಡೆಯುವುದು
ಒಂದೇ ಭೂಮಿ; ಕುಡಿಯುವುದು ಒಂದೇ ನೀರು; ನಮ್ಮನ್ನವನ್ನು
ಬೇಯಿಸುವುದು ಒಂದೇ ಬೆಂಕಿ. ನಡುವೆ ಕುಲಗೋತ್ರವೆತ್ತಣದು?
ಸತ್ತ ಕತ್ತೆಯನು ಹೊತ್ತವನು ಹೊಲೆಯನಲ್ಲ. ಹೆರವಿತ್ತವನ್ನು ಹೊತ್ತ
ವನು ಹೊಲೆಯ. ಇದನ್ನರಿತು ಸ್ಪರ್ಶಾಸ್ಪರ್ಶದ ಗೊಂದಲವನ್ನೆಬ್ಬಿಸ

ಬಾರದು. ಸ್ವರ್ಗದ ದಾರಿಯಾದ ನಾರಿಯನ್ನು ಮನ್ನಿಸಬೇಕು. ಮನೆ
ನೋಡಿ ಅಜ್ಜಿಯೇ ಲೇಸಲ್ಲವೇ? ನಾಲಿಗೆಯಲ್ಲಿ ಎರಡು ನುಡಿ ಇರಕೂ
ಡದು. ಅಡಿ ತಪ್ಪಿದರೆ ಅಲ್ಲಿಯೇ ಇರಬಾರದು. ಕರೆಯದೆ ಎಲ್ಲಿಯೂ
ಹೋಗಬೇಡ; ಜಗಳವಾಡುವವಳ ನೆರೆ ಬೇಡ. ಕನ್ನಡಿಗನ ಕಳೆಯನ್ನು
ಸಂಪಾದಿಸು. ಯಾಕಂದರೆ ನಂಬಿದವರನ್ನು ಪ್ರಾಣಹೋದರೂ ಕನ್ನಡಿ
ಗನು ತೊರೆಯುವದಿಲ್ಲ. ಅವನ ಗೆಳತನವು ಕೈಯಲ್ಲಿಯ ಅಲಗವಿದ್ದಂತೆ.
ಅದನ್ನು ಬಿಡುವದು ಆತ್ಮಘಾತಕವೇ ಸರಿ! ಎಂದು ಹೇಳಿ ಸರ್ವಜ್ಞನು
(ಆ ಕಾಲದ) ಕನ್ನಡಿಗರ ಹಿರಿತನವನ್ನು ಸಾರಿರುವನು. ಬದ್ಧರಿಗೆ ಉಪ
ಯುಕ್ತವಾದ ಅನೇಕ ಸಂಗತಿಗಳನ್ನು ಸರ್ವಜ್ಞನು ಹೇಳಿರುವನು. ಆದರೆ
ಅವೆಲ್ಲವುಗಳನ್ನು ವಿವರಿಸಲು ಇಲ್ಲಿ ಸ್ಥಳವಿಲ್ಲ. ಆದ್ದರಿಂದ ಈಗ ಇಷ್ಟೇ
ಸಾಕು.

೪ ಮುಮುಕ್ಷು ಸ್ಥಲ.

ಹಿಂದಿನಿಂದ ಮುಂದೆಃ— ಮುಕ್ತನಾಗಲು ಬಯಸುವನು ಮುಮು
ಕ್ಷುವು. ಸಂಸಾರದ ತಾಪವನ್ನು ತಾಳಲಾರದೆ ಅದರಿಂದ ಬಿಡುಗಡೆ
ಹೊಂದಲು ಅವನು ಹಾತೊರೆಯುತ್ತಾನೆ. "ತೆರಣಿಯ ಹುಳು ತನ್ನ
ಸ್ನೇಹದಲ್ಲಿ ಮನೆಮಾಡಿ, ತನ್ನ ನೂಲು ತನ್ನ ಸುತ್ತಿ ಸಾವತೆರನಂತೆ
ಮನಬಂದಂತೆ ಬಯಸಿ ಬೇವುತ್ತಿದ್ದೇನೆ ಅಯ್ಯ! ಎನ್ನ ಮನದ ದುರಾ
ಶೆಯ ಮೊಣಿಸಿ ನಿಮ್ಮತ್ತ ತೋರಾ ಚನ್ನಮಲ್ಲಿಕಾರ್ಜುನಾ!!" ಎಂದು
ಮಹಾದೇವಿಯಕ್ಕನಂತೆ ವ್ಯಾಕುಲರಾಗಿರುವ ಮುಮುಕ್ಷುಗಳು ಸಾವಿರಕ್ಕೆ
ಒಬ್ಬರೂ ದೊರಕುವದಿಲ್ಲ. ಮೇಲಾಗಿ ಮುಕ್ತಿಯ ಇಚ್ಛೆಯು ಬದ್ಧನಲ್ಲಿ
ಒಮ್ಮೆಲೇ ಮೂಡುವದಿಲ್ಲ. ಅದಕ್ಕೆ ಹಲವು ಸಂದರ್ಭಗಳು ಒದಗಬೇಕು.
ಅವುಗಳಲ್ಲಿ ಸತ್ಸಂಗವು ಪ್ರಮುಖವಾದುದು

ಸತ್ಸಂಗಃ— ಸತ್ಸಂಗದಿಂದಲೇ ಸನ್ಮಾರ್ಗವೆಂಬುದು ಸನಾತನ ತತ್ವವು!
ತ್ರಿವಿಧ ತಾಪದಿಂದ ಬಳಲಿದ ಬದ್ಧನಲ್ಲಿ ಸತ್ಸಂಗದಿಂದ ವಿವೇಕವು ಉದಿಸಿ
ಅವನಿಗೆ ಚಿರಸುಖದ ಹೆದ್ದಾರಿಯು ಸ್ಪಷ್ಟವಾಗಿ ಕಾಣುವುದು. ಆದರೆ
ಜಗತ್ತಿನಲ್ಲಿ ದುರುಳರ ಸಂತೆಯೇ ಎಲ್ಲೆಲ್ಲಿಯೂ ನೆರೆದ ಮೂಲಕ ಸಜ್ಜ
ನರನ್ನು ಕಾಣುವದೇ ಕಷ್ಟಸಾಧ್ಯವಾಗಿದೆ. ಮೇಲಾಗಿ ದುರುಳರು ಸತ್ಸು
ರುಷರ ಸೋಗುಹಾಕಿ ಅತ್ತಿತ್ತ ಮೆರೆಯುತ್ತಾರೆ. ಕಲ್ಲುಪ್ಪ ಕರ್ಪೂರ
ದಂತೆ ಕಾಣುವದಿಲ್ಲವೆ? ಒಡಲಲ್ಲಿ ವಿಷವನ್ನಿಟ್ಟುಕೊಂಡು ಇಟ್ಟಿಯ

ಹಣ್ಣು ಕೆಂಪಾಗಿ ತೋರುವದಿಲ್ಲವೇ? ಬೊಗ್ಗಿದ ಬೆತ್ತು ಮರಳಿ ಮೆಟ್ಟು ವಂತೆ ಸಾಧುಗಳಂತೆ ನಟಿಸುವ ಸ್ವಾರ್ಥ ಸಾಧುಗಳು ತಕ್ಕ ಸಮಯ ಒದಗಿದಾಗ ತಮ್ಮ ಕಠಾಲರೂಪವನ್ನು ತಾಳಲು ಹೇಸುವದಿಲ್ಲ. ಮಳೆ ಗಂಜಿ ಮರದ ಆಶ್ರಯವನ್ನು ಕೈಕೊಂಡರೆ ಮಳೆಯು ನಿಂತರೂ ಮರದ ಹನಿಯು ಬಿಡದು. ದುರುಳರ ನೆರಳೂ ಇಂತಹದೇ! ತೆರೆದ ಕೆಂಡವ ಮೆಟ್ಟಿದರೆ ಮರುಗಬೇಕಾಗುವಂತೆ ದುರುಳರ ಕೂಟವು ತನ್ನನ್ನು ತಾನೇ ಇರಿದುಕೊಂಡಂತೆ. ಹೀಗಿದ್ದರೂ ತಿಳಿಗೇಡಿಯಾದ ಜನರು ಅವರನ್ನೆಯೇ ಹಂಬಾಲಿಸುತ್ತಾರೆ. ಗಂಧವನು ತೇವಲ್ಲಿ ಒಂದು ನೊಣವೂ ಬರುವ ದಿಲ್ಲ. ಮಲವನ್ನು ಮುತ್ತುವಾಗ ನೊಣಗಳು ಹಿಂಡುಗಟ್ಟಿ ನಾ ಮುಂದೆ ನೀ ಮುಂದೆ ಎಂದು ಸಾಗುತ್ತಿವೆ! ಮನೆಗೆ ತಂದ ಹಾಲನ್ನು ಕೊಳೆದ ಮಾನವರು ಸರಾಯಕೆದ್ದು ಹಾರುವರು. ಆದ್ದರಿಂದ ದುರುಳರ ಅನುಯಾ ಯಿಗಳ ತಂಡು ಬಲು ದೊಡ್ಡದಾಗಿದೆ. ಮತ್ತು ಜಗತ್ತಿನಲ್ಲೆಲ್ಲ ಅವರ ಗೊಂದಲವೇ ನಡೆದಿದೆ. ಆದರೆ ಸತ್ಯವಂತರೂ ಸತ್ತರೆಂದು ತಿಳಿಯ ಬೇಡಿರಿ. ಹೆತ್ತವ್ವ ಮಗನ ಕರೆವಂತೆ ಅವರು ನಿಮ್ಮನ್ನೆತ್ತಿಕೊಂಬವರು ಹೆದರಬೇಡಿರಿ! ಎಂದು ಸರ್ವಜ್ಞನ ಆಶ್ವಾಸನವು. ದಂತಪಂಕ್ತಿಯ ನಡುವೆ ನಾಲಿಗೆಯು ಇರುವಂತೆ ದುರ್ಜನರ ಬಳಸಿನಲಿ ಸಜ್ಜನರಿರುವರು. ಸತ್ಪು ರುಷರಿರುವದೇ ನಿಜವಾದ ತೀರ್ಥ. ಕಪ್ಪೆ ಮೀನುಗಳ ಮನೆಯಾದ ಹರಿವ ನೀರು ಎತ್ತಣದ ತೀರ್ಥವಯ್ಯಾ? ಸತ್ಯರಾ ನುಡಿ ತೀರ್ಥ; ಸತ್ಯರಾ ನಡೆ ತೀರ್ಥ, ಹಾಗೂ ಉತ್ತಮರ ಸಂಗವದು ತೀರ್ಥ! ಆದ್ದ ರಿಂದ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ಪುಣ್ಯವನ್ನು ಪಡೆಯಲು ಬಯ ಸುವವರು ಒಂದು ಕ್ಷಣಮಾತ್ರವಾದರೂ ಸಜ್ಜನರ ಸಹವಾಸದಲ್ಲಿ ನಿಲ್ಲ ಬೇಕು. ಒಳಿದನ ಸಂಗದಲ್ಲಿ ಕಳ್ಳನೂ ಒಳ್ಳಿದನಾಗುತ್ತಾನೆ. ಹೃದಯ ಶೂನ್ಯರ ಒಲವಿನಿಂದ ಅರಿದವರ ಕದನವೇ ಲೇಸು. ನಿಂದೆಯನು ಮಾಡಿದರು ಸಂದ ಸಜ್ಜನನು ಒಳ್ಳೆಯವನು. ಹೀಗಿದ್ದ ಮೂಲಕ ಉನ್ನತಿಗೆಯ್ಯಲೆಳಸುವ ಪ್ರತಿಯೊಬ್ಬನು ಏನಾದರೂ ಕೊಟ್ಟು ಜ್ಞಾನಿಯ ಕೆಳೆಯನ್ನು ಕೊಳ್ಳಬೇಕು. ಸತ್ಪುರುಷರ ಒಡನಾಟದಿಂದ ಪೊರಬೊ ಮ್ಮನು ಮುಂದೆ ಬಂದು ನಿಲ್ಲುವನು. ಭಕ್ತರೊಡಗೂಡಿ ಭಕ್ತಿಯಲ್ಲಿ ಎಡೆ ಬಿಡದೆ ಬೆರೆವಿರ್ದ ಮನುಜನು ತತ್ಕಾಲ ಮುಕ್ತನಾಗುವನು. ಆದುದ ರಿಂದ ಲಜ್ಜೆಯನು ತೊರೆದು ಶಿವಶರಣರ ಹೆಜ್ಜೆಯಲ್ಲಿ ನಡೆಯಬೇಕು.

೨ ತಪಸ್ಸುಃ— ಈ ಮೇರೆಗೆ ಸತ್ಪುರುಷರ ಸಹವಾಸದಿಂದ ಏಳ್ಗೆಯ ದಾರಿಯು ಕಾಣುವದರಲ್ಲಿ ಸಂದೇಹವಿಲ್ಲ. ಆದರೆ ಆ ದಾರಿಯಿಂದ ನಾವೇ ಹೋಗಬೇಕಲ್ಲವೇ? ತಾನುಂಬ ಊಟವನು ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಿ ಬಹುದೇ! ಎಂದು ಶ್ರೀ ಬಸವಣ್ಣನವರು ಕೇಳಿದಂತೆ ನಮ್ಮ ಉನ್ನತಿಗಾಗಿ ನಾವೇ ಹೆಣಗಾಡಬೇಕಲ್ಲವೆ? ಶರಣರೆಂದರೆ ವೇಲ್ಮೆಯ ದಾರಿಯಲ್ಲಿದ್ದ ದೀಪಸ್ತಂಭಗಳು. ಅವರು ನಮಗೆ ಯೋಗ್ಯವಾದ ಸಾಧ ನವನ್ನು ಹೇಳಬಹುದು. ಆದರೆ ಅದನ್ನು ಮಾಡುವವರು ನಾವೇ! ಅನ್ಯರಲ್ಲ. ಆ ಸಾಧನೆಗೆ ತಪಸ್ಸೆಂಬ ಹೆಸರು. ತಪಸ್ಸೆಂದರೆ ಅನೇಕರಿಗೆ ಹೆದರಿ ಮನೆ ಮಾರುಗಳನ್ನು ತೊರೆದು ಅಡವಿಯಲ್ಲಿ ನಿಂತು ದೇಹವನ್ನು ಸವಿಸುವದು ತಪಸ್ಸೆಂದು ಅವರ ಭಾವನೆ. ಆದರೆ ಒಮ್ಮೊಮ್ಮೆ ತಪಸ್ಸು ಈ ಭೈರವ ರೂಪವನ್ನು ತಾಳಿದರೂ ಅದಕ್ಕೆ ಸೌಮ್ಯರೂಪವೂ ಒಂದು ಇರುವದು. ಭಗವಾನ್ ಶ್ರೀಕೃಷ್ಣನಿಗೆ ಅಭಿಪ್ರೇತನಾದುದು ಅದೇ! 'ಹುತ್ತು ಬಡಿದರೆ ಹಾವು ಸಾಯಬಲ್ಲದೆ? ಅಘೋರತಪ ಮಾಡಿದಡೇನು, ಆತ್ಮಶುದ್ಧಿಯಾ ಗುವತನಕ? ಈ ಆತ್ಮಶುದ್ಧಿಗಾಗಿ ಆಚರಿಸಬೇಕಾದ ತಪಸ್ಸು ಕಾಯಿಕ, ವಾಚಿಕ ಮತ್ತು ಮಾನಸಿಕವೆಂದು ಮೂರು ವಿಧವಾದದ್ದು. ಸತ್ಪುರುಷರ ಸಂಗದಿಂದ ತಿಳಿಯಾದ ಮನಸ್ಸಿನ ಮುಮುಕ್ಷುಗಳು ಕೆಚ್ಚಲೊಳಿದ್ದು ನೊರೆ ವಾಲನ್ನುಣ್ಣದ ಉಣ್ಣೆಗಳಂತಿರದೆ ಅವರ ಬೋಧಸುಧೆಯನ್ನು ಸವಿದು ಅಮರರಾಗಲು ಯತ್ನಿಸಬೇಕು.

೩ ಶಾರೀರ ತಪಃ— ಮುಮುಕ್ಷುವು ಗುರುಹಿರಿಯರಿಗೆ ಶಿರಬಾಗಿ ವಂದಿಸಬೇಕು. ಅತಿಥಿಗಳನ್ನು ಯೋಗ್ಯರೀತಿಯಿಂದ ಸತ್ಕರಿಸಬೇಕು. ಜಗ ತ್ತಿನಲ್ಲಿ ಅನ್ನವೇ ಪ್ರಾಣವಿದ್ದಕಾರಣ ಹಸಿದವಗೆ ಅನ್ನವನ್ನಿತ್ತು ನನ್ನಿ ಯನ್ನು ನುಡಿಯಬೇಕು. ತನ್ನಂತೆ ಪರರ ಬಗೆದು ಆಗ ಬಾ, ಈಗ ಬಾ ಎನ್ನದೆ ಧರ್ಮ ಮಾಡಬೇಕು. ಮರಣವು ಯಾರಿಗೂ ಬಿಟ್ಟದ್ದಲ್ಲ. ಆದ್ದ ರಿಂದ ಕೆಟ್ಟಕೆಲಸದಲ್ಲಿ ದುಡ್ಡು ಪಾಳುಮಾಡದೆ ದಾನಮಾಡುವದು ಶ್ರೇಷ್ಠವಾದದ್ದು. ಕುದಿಯದೆ, ಆಡಿಕೊಳದೆ ಸದ್ಬುದ್ಧಿ ಯಿಂದಿತ್ತ ಈ ಗುಪ್ತ ದಾನವು ಸಾತ್ವಿಕತೆಯನ್ನು ಬೆಳಿಸುತ್ತಿದೆ.

ಆಹಾರಶುದ್ಧಿಯು ಮುಮುಕ್ಷುವು ಮಾಡಬೇಕಾದ ಎರಡನೆಯ ಪಾತು. 'ಆಹಾರಶುದ್ಧೌ ಸತ್ವಶುದ್ಧಿಃ' ಶುದ್ಧವಾದ ಸಾತ್ವಿಕಾಹಾರ ದಿಂದ ಮನಸ್ಸು ಸತ್ವಪ್ರಧಾನವಾಗುತ್ತಿದೆ. ಅದಕ್ಕಾಗಿ ಯಾವಾಗಲೂ

ಅವನ್ನೇ ಸೇವಿಸಬೇಕು. ಹಸಿವಿಲ್ಲದುಣಬಾರದು; ಹಸಿದು ವತ್ತಿರ ಕೂಡದು ಬಿಸಿ ಕೂಡ ತಂಗಳುಣತಕ್ಕದ್ದಲ್ಲ. ಉಂಡು ಶತಪದ ನಡೆದು ಎಡ ಮಗ್ಗುಲಲಿ ಮಲಗಿದರೆ ವೈದ್ಯನ ತಾಪವೇ ಇಲ್ಲ. ಒಮ್ಮೆ ಉಂಡವನು ತ್ಯಾಗಿಯು ಎರಡುಸಲ ಉಂಡವನು ಭೋಗಿಯು ಅದರಿ ಅನೇಕಸಲ ಊಟ ಮಾಡುವವನು ರೋಗಿಯೆಂದು ಸರ್ವಜ್ಞನು ಉಸುರುತ್ತಾನೆ. ರುಜೆಗಳನು ಸೆರೆಗಳೆದು ನಾಲಿಗೆಯನ್ನು ಕಟ್ಟಿದವನ ಪಚನವು ಬೆಳಗಿ ಇವನು ಕಾಲನಿಗೆ ದೂರನಾಗುತ್ತಾನೆ.

ಆಹಾರಶುದ್ಧಿಯ ಜೊತೆಗೆ ಮುಮುಕ್ಷುವು ಬ್ರಹ್ಮಚರ್ಯವನ್ನು ಪಾಲಿಸಬೇಕು. ಕಾಮನನ್ನು ಹರನು ಹಿಂದೇ ಕೊಂದಿರುವನು. ಇವನ ಕಾಟವು ನಮಗೆ ಇಲ್ಲವೆಂದು ತಿಳಿಯಕೂಡದು. ಯಾಕಂದರೆ ಇಂದುವದನೆಯರ ಕಡೆಗಣ್ಣಿನ ನೋಟದಲ್ಲಿ ಅನಂಗನು ಇನ್ನೂ ವಾಸಿಸುತ್ತಿರುವನು. ಪರಸ್ತ್ರೀಯನ್ನು ಮುಟ್ಟಿದವನು ಕೆಟ್ಟು ಇವನಿಗೆ ಪರಲೋಕದ ಹಾನಿಯಾಗುವದು. ಪುರುಷರಿಗೆ ಪರಸ್ತ್ರೀಯರು ಹೇಯವಿರುವಂತೆ ಸ್ತ್ರೀಯರಿಗೆ ಪರಪುರುಷರು ನಿಂದ್ಯರು. ಇಲ್ಲಿಯ ಉಪದೇಶವು ಪುರುಷರಿಗಿದ್ದರಿಂದ ಸ್ತ್ರೀಯರ ನಿಂದೆಯಾದಂತೆ ಕಂಡರೂ ಅದು ಅವರ ನಿಂದೆಯಲ್ಲ. ಕಾಮವಿಕಾರದ ನಿಂದೆ ಎಂಬದನ್ನಾರೂ ಮರೆಯಕೂಡದು. ಆದ್ದರಿಂದ ವೀರ್ಯವನ್ನು ತಡೆದವನೇ ಪರಬೊಮ್ಮನನ್ನು ಪಡೆಯಲು ಪಾತ್ರನಾಗುತ್ತಾನೆ.

ಮುಕ್ತಿಯನ್ನು ಹೊಂದಲೆಳಸುವ ಮನುಜರು ಹಿಂಸೆಯನ್ನೆಂದಿಗೂ ಮಾಡಕೂಡದು. ತಾನು ಸೊಂದರೂ ಅನ್ಯರನ್ನು ಅವನು ನೋಯಿಸಬಾರದು. ಒಂದಾಡ ಕೊಂದವನು ಸ್ವರ್ಗವ ಹೊಂದಿದರೆ ಯಾವಾಗಲೂ ಆಡುಗಳನ್ನೇ ತಿನ್ನುವ ಕಟಿಕನು ಇಂದ್ರನಾಗಬೇಕಲ್ಲ? ಯಾರಿಗೂ ಕೇಡನ್ನು ಬಯಸಬೇಡ. ಯಾರ ಮೇಲೂ ಸಿಟ್ಟಿಗೇಳಬೇಡ ಅವರು ಮುನಿದರೂ ನೀನು ಮುನಿಯಬೇಡೆಂದು ಸರ್ವಜ್ಞನು ಮುಕ್ತಿಕಾಮಿಗಳಿಗೆ ಉಪದೇಶಿಸುತ್ತಾನೆ.

೪ ವಾಙ್ಮಯ ತಪಃ— ಇಹಪರದಿ ಸತ್ಯಕ್ಕೆ ಜಯವಿದ್ದ ಕಾರಣ ಮುಮುಕ್ಷುವು ದಿಟವನ್ನೆ ನುಡಿಯುತ್ತಿರಬೇಕು. ಸತ್ಯರಿಗೆ ಧರೆಯಲ್ಲಿ ಮಸ್ತಕದಿ ಎರಗುವದು. ಹೆತ್ತ ತಾಯಿಯು ತನ್ನ ಮಗುವನ್ನು ಕರೆವಂತೆ ಬೇವರು ಅವನನ್ನು ಎತ್ತಿಕೊಂಬುವನು. ಹುಸಿಯ ಹೇಳುವದರಿಂದ

ಪಿಮ ಸಾಯುವದು ಲೇಸಾದುದು. 'ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್' ಎಂಬಂತೆ ಪ್ರಿಯವಾದ ಸತ್ಯವನ್ನು ಆಡಬೇಕು. ಮಾತಿನ ಘಾಯವು ಸತ್ತರೂ ಮಾಯುವದಿಲ್ಲವಾದ್ದರಿಂದ ಬಿರುನುಡಿಗಳನ್ನೆಂದಿಗೂ ಉಪಯೋಗಿಸಕೂಡದು. ಸುಮ್ಮನೆ ಭೂಮಂಡಲವನ್ನು ರೇಗಿಸಿ ಏನು ಪ್ರಯೋಜನ? ಕೇಳುವವರಿದ್ದರೆ ಬುದ್ಧಿಯನು ಹೇಳುವದು. ಅದರಂತೆಯೇ ಮುಕ್ತಿಕಾಮನು ತನ್ನ ಸ್ವಾಧ್ಯಾಯವನ್ನು ಮರೆಯಬಾರದು. ಅರ್ಥವ ಮರ್ಮವನರಿದು ಓದುತ್ತಿರಬೇಕು. ಯಾಕಂದರೆ ಓದಿನಿಂ ಒಡಲನರಿವಡೆ ಸಿಪ್ಪಿಯು ಕಬ್ಬಾದಂತೆ ಎಂದು ಸರ್ವಜ್ಞನು ಹೇಳುವನು.

೫ ಮಾನಸ ತಪಃ— ಮುಕ್ತಿಕಾಮನ ಮನಸ್ಸು ಯಾವಾಗಲೂ ಪ್ರಸನ್ನವಾದದ್ದಿರಲಿಕ್ಕೆ ಸಾಕು. ಮನೆಯು ಸುಟ್ಟರೂ ಒಳಗಿನ ಮನುಜನು ಬೆಯ್ದುದಂತೆ ಕಡುತಾಪಗಳು ಮುತ್ತಿದರೂ ಅತನ ಮನಸ್ಸು ತಣ್ಣಗಿರಬೇಕು. ಎಲ್ಲರೂ ಒಯ್ದು ಕಲ್ಲು ಕೊಂಡು ಒಗೆದರೂ ಅವರ ಮೇಲೆ ಕೋಪಿಸಬಾರದು. ಶ್ವಾನನ ಬೊಗಳಿಕೆ ಆನೆಗೆ ಗಾನವಿರುವಂತೆ ಹೀನನ ನಿಂದೆಯು ಮುಮುಕ್ಷುವಿಗೆ ಆನಂದವನ್ನೇ ಕೊಡಬೇಕು. ಹೀಗೆ ಚಿತ್ತ ಚಿತ್ತಸಮರಸವಿಲ್ಲದೊಡೆ ವೇದಶಾಸ್ತ್ರಾಗಮಗಳ ಅಭ್ಯಾಸವು ಬರೇ ಬೂದಿಯಲ್ಲಿಯ ಹೋಮ. ಅದರಿಂದ ಯಾವ ಪ್ರಯೋಜನವೂ ಇಲ್ಲ.

ಈ ರೀತಿ ಮನಸ್ಸು ಸ್ಥಿರವಾಗಬೇಕಾದರೆ ಆತ್ಮಸಂಯಮನವು ಅಗತ್ಯ. ಪಂಚೇಂದ್ರಿಯಗಳನ್ನು ತನ್ನ ವಶಕೆ ತಂದಾತನು ನಿಜವಾಗಿ ಧನ್ಯನು. ಕಣ್ಣು, ನಾಲಿಗೆ, ಮನವು ತನ್ನದಲ್ಲ. ಇವು ಮೂರು ತಮ್ಮನ್ನು ಕೊಲ್ಲುವ ವೈರಿಗಳು. ಆದುದರಿಂದ ಕಜ್ಜೆ ಕೈ ಬಾಯಿಗಳನ್ನು ಇಜ್ಜೆಯೊಳಟ್ಟು ಪೆಣ್ಣು ಹೊನ್ನು ಮಣ್ಣುಗಳನ್ನು ಬಿಟ್ಟರೆ ಮನಸ್ಸು ಅಚಲವಾಗಿ ನಿಲ್ಲುವದು.

ಅಂತೂ ಈ ತಪಸ್ಸನ್ನೂ ಅದರಂತೆಯೇ ಎಲ್ಲ ಕಾರ್ಯಗಳನ್ನು ಆಡದೇ ಮಾಡುವವನು ಉತ್ತಮನು. ತನ್ನ ನಡೆನುಡಿಗಳಲ್ಲಿ ವಿವೇಕವನಿಟ್ಟು ಪ್ರತಿಯೊಂದು ಹೆಜ್ಜೆಯನ್ನು ಎಚ್ಚರದಿಂದಿಡುವ ಜಾಣನು ಲೋಕಕ್ಕೆ ಆರಾಧ್ಯನಾಗುತ್ತಾನೆಂದು ಸರ್ವಜ್ಞನು ಖಂಡಿತವಾಗಿ ಸಾರುತ್ತಾನೆ.

೬ ಸಚ್ಛಿಷ್ಯನು:— ಈ ತ್ರಿವಿಧ ತಪಸ್ಸಿನಿಂದ ಪೂತನಾದ ಮುಮುಕ್ಷುವು ಸಚ್ಛಿಷ್ಯನಾಗಲು ಯೋಗ್ಯನಾಗುವನು. ಯಾಕಂದರೆ ತನುವನ್ನು

ಮೀಸಲಿಟ್ಟು ಈಶನನ್ನು ನೆನೆದರೆ ಕೈಲಾಸವು ಸಮೀಪಿಸುವದು. ಇಂದಿ
ಯಗಳನ್ನು ಬಿಗಿಹಿಡಿಯದ ಉಂಡಾಡಿಗಳಿಗೆ ಸ್ವರ್ಗವು ಸಿಗಬೇಕಾದರೆ
ಅದನ್ನೇನು ರಂಡೆಯಾಳುವಳೇ? ಎಂದು ಸರ್ವಜ್ಞನು ಕೇಳಿರುವನು.
ಹಸಿಯ ಸಮಿಧೆಗಳನ್ನು ಹೊಸೆದರೆ ಕಿಚ್ಚಾಗದಂತೆ ವಿಷಯಂಗಳುಳ್ಳವ
ನಿಗೆ ಗುರುಕರುಣವು ದೊರೆಯಲಾರದು. ಭಕ್ತಿ ಇಲ್ಲದ ಶಿಷ್ಯನಿಗೆ ಒಳ್ಳೆ
ಉಪದೇಶವನ್ನು ಕೊಟ್ಟು ಉಪಯೋಗವಿಲ್ಲ. ಸಚ್ಛಿಷ್ಯನು ಸುರಧೇನುವಿ
ನಂತಿದ್ದ ಗುರುವನ್ನು ಕರೆದು ಉಂಡು ಶಾಶ್ವತವಾದ ಆನಂದವನ್ನು ಪಡಿ
ಯತಕ್ಕದ್ದು.

೭. ಸದ್ಗುರು— ಯಾವದೇ ಶಾಸ್ತ್ರವನ್ನು ಕಲಿಯಬೇಕಾದರೂ
ಇದಕ್ಕೆ ಗುರುವಿಲ್ಲದೆ ಸಾಗುವದಿಲ್ಲ. ಹೀಗಿರಲು ಎಲ್ಲ ಶಾಸ್ತ್ರಗಳ ತಳಪಾ
ದಿಯಾದ ಅಧ್ಯಾತ್ಮ ಶಾಸ್ತ್ರವನ್ನು ಗುರುವಿಲ್ಲದೆ ಅರಿತುಕೊಳ್ಳುವದು ಹೇಗೆ
ಸಾಧ್ಯವಾದೀತು? ಮುಂಡೆ ಬೋಳಿಸಿಕೊಂಡು ಕೈಯಲ್ಲಿ ದಂಡ
ವನ್ನು ಹಿಡಿದು ಹೆಂಡತಿಯ ಬಿಟ್ಟು ತೆರಳಿದರೆ ಆತ್ಮಜ್ಞಾನವು ಪ್ರಾಪ್ತ
ವಾಗುವಂತಿಲ್ಲ. ಅದಕ್ಕೆ ಗುರುಮುಖವೇ ಬೇಕು. ಒಳ್ಳೆಯ ಗುರುವಿ
ನುಪದೇಶವಿಲ್ಲದೆ ಮುಕ್ತಿಯು ಸಿಗಲಾರದು. ಮಂದಬೊಳಗಿನ ಬೆಂಕಿಯು
ತನ್ನ ತಾನರಿಯದಂತೆ ದೇವರು ತನ್ನಲ್ಲಿದ್ದರೂ ಸದ್ಗುರು ತೋರದೆ ಅದು
ತಿಳಿಯುವದಿಲ್ಲ. ಸಂಸಾರತಾಪದಿಂದ ಬಳಲುತ್ತಿದ್ದವರು ಗುರುವಿಗೆ ಶರಣು
ಹೋದರೆ ಅವರ ಆಪತ್ತು ಆಳದು ಕರ್ಪೂರದ ಬೆಟ್ಟು ಸುಡುವಂತೆ ಅವರ
ಪೂರ್ವ ಕರ್ಮವು ಸುಟ್ಟುಹೋಗುವದು. ಇಂಥ ಗುರುವಿನ ವಿಸ್ತಾರ
ವನ್ನು ಎಷ್ಟೆಂದು ಬಣ್ಣಿಸಬೇಕು? ಅವನು ಬ್ರಹ್ಮಾಂಡದಲ್ಲಿ ಒಳಗೆ ಹೊರಗೆ
ಬೆಳಗಿ ಮೆರೆಯುತ್ತಿರುವನು. ಸಾಮಾನ್ಯ ಬಂಧುಗಳು ಬಂದು ಉಂಡು
ಹೋಗುವರು. ಅವರು ಬಂಧನವನ್ನು ಕಳೆಯಲರಿಯರು. ಜಗಕೆಲ್ಲ
ಮುಕ್ತಿಯನ್ನು ಕೊಡುವ ಗುರುವಿಂದ ಮಿಗಿಲಾದ ಬಂಧುಗಳುಂಟೇ?
ಹರಭಕ್ತಿಯುಳ್ಳ ಗುರುವಿಗೆ ನರದೇವನೆಂದೆನ್ನಬಹುದು. ತನ್ನ ಪರರೂ
ಪಲ್ಲಿ ನಿಂದು ನರರಿಗೆ ನೆರವೀಯಲು ಅರಿಯದೆ ದೇವನು ಗುರುವಿನ
ರೂಪವನ್ನು ತಾಳುತ್ತಾನೆ. ಇಂಥವನಿಗೆ ಈ ಜಗತ್ತಿನಲ್ಲಿ ಸರಿಯಾದವ
ರಾರು? ಸುರತರುವು ಮರವಲ್ಲ. ಸುರಭಿಯು ಆಕಳಲ್ಲ. ಪರುಷವು ಪಾಷಾ
ಣವಲ್ಲ. ಅವರಂತೆಯೇ ಗುರುದೇವನು ಸಾಮಾನ್ಯ ಮನುಷ್ಯನಲ್ಲ.

ಮುಂದೆ ಸಾಗುವದು.

ಭಕ್ತನ ಮನೆಗೆ ಅವನಾದರೊಬ್ಬ ಲಿಂಗಪೂರಿತನಾದ ಜಂಗಮವು ಬಂದ
ಕಾಲಕ್ಕೆ ಅವನ ಸಮಯಾಚಾರ ಸಮಯ ಭಕ್ತಿಯನ್ನು ಅರಿತು ಅದ
ರಂತೆ ನಡಿಸಿ ಅದರ ಮೂಲಕ ತನ್ನ ಆಚಾರ ಮತ್ತು ತನ್ನ ಭಕ್ತಿ
ಯನ್ನು ದೃಢಪಡಿಸಿಕೊಳ್ಳಬೇಕೆಂದು ವಚನಕಾರನು ಇಲ್ಲಿ ಅಭಿಪ್ರಾಯ
ತಾಳಿದ್ದಾನೆ. ಸಮಯಾಚಾರ ಸಮಯಭಕ್ತಿ ಎಂದರೆ ಷಟ್‌ಸ್ಥಲದ
ಪ್ರಕಾರ ಪ್ರತಿಯೊಬ್ಬನ ಭಕ್ತಿ ಮತ್ತು ಆಚಾರ ಇವುಗಳಲ್ಲಿ ಪ್ರಗತಿಯು
ಉಂಟಾದ ಹಾಗೆ ಅವನಲ್ಲಿ ಸ್ಥಿತ್ಯಂತರವು ಪ್ರಾಪ್ತವಾಗುವದುಂಟು. ಈ
ಸ್ಥಿತ್ಯಂತರದ ತರಹವನ್ನು ಭಕ್ತನು ಜಂಗಮನಿಂದ ಅರಿತುಕೊಂಡು
ತನ್ನ ಮನಸ್ಸಿನ ಸ್ಥಿತಿಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುತ್ತ ಹೋಗ
ಬೇಕು. ಇದೇ ಸಮಯಾಚಾರವನ್ನು ಅರಿತು ವರ್ತಿಸುವದು ಇದೆ.
ಹೀಗೆ ಮಾಡುವದೇ ಲಿಂಗಪೂಜೆಯು ಅಥವಾ ತನ್ನಲ್ಲಿ ಲಿಂಗವನ್ನು
ಬರಮಾಡಿಕೊಳ್ಳುವಿಕೆಯು. ಈ ರೀತಿಯನ್ನು ಬಿಟ್ಟುಕೊಟ್ಟು ತನ್ನಷ್ಟಕ್ಕೆ
ತಾನೆ ಲಿಂಗಪೂಜೆಯನ್ನು ಮಾಡಿಕೊಂಡರೆ, ಇದು ಸತ್ಯರು ನಡೆಯ
ತಕ್ಕ ನ್ಯಾಯವಾದ ಪದ್ಧತಿಯಲ್ಲ. ಲಿಂಗಿಯು ತನ್ನಷ್ಟಕ್ಕೆ ತಾನೇ ಪೂಜೆಮಾಡಿ
ಕೊಂಡು ಲಿಂಗಧ್ಯಾನದಲ್ಲಿದ್ದರೆ ಫಲಕಾರಿಯಲ್ಲವೆಂದು ಷಟ್‌ಸ್ಥಲದ ತತ್ವ
ಗಳಿವೆ. ಅವನು ಗುರುಲಿಂಗಜಂಗಮದ ಉಪಯೋಗಮಾಡಿಕೊಳ್ಳತ
ಕ್ಕದ್ದು. ಇವು ಅವನ ಆಚಾರಕ್ಕೆ ಅವಶ್ಯವಾದವುಗಳು. ಅಂದರೆ ಅವನು
ಗುರುಲಿಂಗಜಂಗಮದೊಡನೆ ಶಿವಾನುಭವದಲ್ಲಿದ್ದುಕೊಂಡು ತನ್ನ ಹೆಚ್ಚು
ವಿಕೆಯನ್ನು ಮಾಡಿಕೊಳ್ಳಬೇಕು. ಹೀಗೆ ಮಾಡದೆ ಹೋದರೆ ಪ್ರತ್ಯಕ್ಷ
ವಾಗಿ ಕಣ್ಣಮುಂದೆ ದ್ರವ್ಯದ ನಿಧಿಯು ಇರುತ್ತಿರಲಿಕ್ಕೆ ಅದನ್ನು ಕಾಣದೆ
ಸಂದಿಗೊಂದಿಗಳಲ್ಲಿ ಅದನ್ನು ಹುಡುಕಲಿಕ್ಕೆ ಹೋಗುವ ಕುರುಡನಂತೆಯೇ
ಇವನ ಸ್ಥಿತಿಯು ಎಂದು ಹೇಳಿರುವನು.

ವಚನಃ— ೧೨೦. ನೇಮಸ್ತನೇನು ಬಲ್ಲನಯ್ಯ ಲಿಂಗದ ಕುರುಹ?
ಸೂಳೆಯ ಮಗನೇನು ಬಲ್ಲನಯ್ಯ ತಂಪೆಯ ಕುರುಹ? ಜಂಗಮದ
ಅನುವ ತೊತ್ತಿನ ಮಗನೇನು ಬಲ್ಲನಯ್ಯ? ಇಂತಪ್ಪ ಅಂಗವೆ ಲಿಂಗ
ಲಿಂಗವೆ ಅಂಗ, ಲಿಂಗವೆ ಜಂಗಮವು ಜಂಗಮವೆ ಲಿಂಗವೆಂದರಿಯದ
ವನು ಭಕ್ತರೆಂದರೆ ಅಘೋರ ನರಕವೆಂದಾತ ನಮ್ಮ ಅಂಬಿಗರ ಚೌಡಯ್ಯ
ನಿಜಶರಣನು.

ಭಾವಃ— ನೇಮಸ್ತನು ತಾನು ಆಚರಿಸುವ ನೇಮದ ಅಂತರಂಗವನ್ನು ಅರಿಯದೆ ಅದನ್ನು ಪಾಲಿಸುವದುಂಟು. ಸೂಳೆಯ ಮಗನು ತಾನು ಯಾರಿಗೆ ಹುಟ್ಟಿದೆನೆಂಬವನ್ನು ಹ್ಯಾಗೆ ಅರಿಯಲಾರನೋ ಹಾಗೆಯೇ ಈ ನೇಮಸ್ತನ ಇರವು. ಇವನು ತಾನು ಪಾಲಿಸುವ ನೇಮಗಳ ಹದವನ್ನು ಅರಿಯನು. ಹಾಗೆಯೇ ಜನರು ಬರೇ ಜಂಗಮ ಜಂಗವವೆಂದು ಅನ್ನುವರು. ಆದರೆ ಇವರು ತೊತ್ತಿನ ಮಕ್ಕಳು. ಇವರಿಗೆ ಜಂಗಮದ ಅನುಭವ ತಿಳಿಯದು ಎಂದು ವಚನಕಾರನು ನಿಷ್ಕರವಾಗಿ ಅಂದು ಅನ್ನುವದೇನೆಂದರೆ, ಅಂಗವು ಎಂದರೆ ಶರೀರದ ಬಾಹ್ಯ ಕ್ರಿಯೆಗಳು ಇವೇ ಲಿಂಗವಾಗಿವೆ, ಲಿಂಗವೇ ಅಂಗವಾಗಿದೆ, ಈ ಬಗೆಯ ಲಿಂಗವೇ ಜಂಗಮವು, ಜಂಗವವೇ ಲಿಂಗವು ಹೀಗಿದ್ದು ಇದನ್ನು ತಿಳಿಯದವರು ಭಕ್ತರೆಂದರೆ ಅಘೋರ ನರಕವೆಂದು ವಚನಕಾರನು ಅನ್ನುತ್ತಾನೆ. ಎಂದರೆ ಅಂಗ, ಲಿಂಗ, ಜಂಗವು ಇವೆಲ್ಲವನ್ನು ತನ್ನಲ್ಲಿ ಸಾಮರಸ್ಯವನ್ನು ಮಾಡಿ ಆಚರಿಸಬೇಕೆಂದು ವಚನಕಾರನ ಮುಖ್ಯ ಭಾವವು. ಅಂಗವು ಬಾಹ್ಯ ಆಚರಣೆಗೆ ಸಂಬಂಧಪಡುತ್ತದೆ. ಲಿಂಗವು ಸೂಕ್ಷ್ಮ ಆಚರಣೆಗೆ ಸಂಬಂಧಪಡುತ್ತದೆ. ಇವೆರಡೂ ಅತ್ಯಂತ ನಿಕಟಸಂಬಂಧವಾದವುಗಳು. ಆದ್ದರಿಂದ ಅವುಗಳಲ್ಲಿ ಪರಸ್ಪರ ಸಂಬಂಧವನ್ನಿಟ್ಟು ಆಚರಿಸಿದ್ದಾದರೆ ಅಂಗ ಲಿಂಗದ ಗುಣಗಳು ತನ್ನಲ್ಲಿ ದೃಢಪಡುತ್ತ ಹೋಗುವವು. ಹೀಗೆ ದೃಢಪಟ್ಟು ಲಿಂಗದಲ್ಲಿ ಅತ್ಯುಚ್ಚತೆಯನ್ನು ಹೊಂದಿದವನಲ್ಲಿ ಲಿಂಗ ಜಂಗಮಗಳು ಸಾಮರಸ್ಯದಿಂದ ವರ್ತಿಸಹತ್ತುವವು. ಈ ಸ್ಥಿತಿಯನ್ನು ಅರಿತು ಆಚರಿಸದ ಭಕ್ತನಿಗೆ ನರಕವೆಂದು ವಚನಕಾರನು ಅಂದಿದ್ದಾನೆ.

ವಚನಃ— ೧೨೧. ನೇಮಸ್ತನೇನ ಬಲ್ಲನಯ್ಯ ಲಿಂಗದ ಕುರುಹ? ಸೂಳೆಯ ಮಗನೇನ ಬಲ್ಲನಯ್ಯ ತಂದೆಯ ಕುರುಹ? ಭಕ್ತನಲ್ಲದವನ ಬಳಿಗೆ ಜಂಗಮ ಹೋದರೆ ಆ ಸೂಳೆಯ ಮಗನೇನ ಬಲ್ಲನಯ್ಯ ಜಂಗಮದ ಕುರುಹ? ಲಿಂಗಧ್ಯಾನ, ಜಂಗಮಧ್ಯಾನ ಇಂತೀ ಉಭಯವ ನರಿಯದವರ ಬಾಯಲ್ಲಿ ನಮ್ಮ ಪಡಿಹಾರಿ ಉತ್ತಣ್ಣಗಳ ಎಡದ ಪಾದರಕ್ಷೆಯಲಿ ಅವನ ಅಂಗುಳ ಮುಟ್ಟಿ ಹೊಡಿ ಎಂದಾತ ನಮ್ಮ ಅಂಬಿಗರಚೌಡಯ್ಯ.

ಭಾವಃ— ಇದು ೧೨೦ ನೇ ವಚನದ ಭಾವವನ್ನೇ ಹೇಳುತ್ತಿದೆ. ಲಿಂಗ ಜಂಗಮವನ್ನು ಅರಿಯಬೇಕಾವಲ್ಲಿ ಲಿಂಗ ಧ್ಯಾನ ಜಂಗಮ ಧ್ಯಾನ

ಮಾಡಬೇಕೆಂದು ಹೇಳಿರುವನು. ಇಲ್ಲಿ ಲಿಂಗ ಜಂಗಮವೆಂದರೆ ತನ್ನಲ್ಲಿರುವ ಉಚ್ಚ ವಸ್ತುಗಳೆಂದು ವಚನಕಾರನ ಭಾವವು.

ವಚನಃ— ೧೨೨. ಗುರುವಿನೊಳಡಗಿರ್ದ ಭಕ್ತ ಪರವ ಕಂಡುದಿಲ್ಲ! ಲಿಂಗದೊಳಡಗಿರ್ದ ಭಕ್ತ ಜಂಗಮವ ಕಂಡುದಿಲ್ಲ! ಇವರಿಬ್ಬರ ಭಕ್ತಿ ಎಂತಾಯಿತ್ತೆಂದೊಡೆ. ಹುರಿ ಮಾಡಿದ ಹಗ್ಗದಂತಾಯಿತ್ತು ನೋಡಾ. ಅರುಹು ಆಚಾರವಿಡಿದು ಆಚರಿಸುವ ಸದ್ಭಕ್ತನು ಗುರುಲಿಂಗ ಜಂಗಮವನು ನೆರೆ ಕಂಡು ಸಮ್ಮತವಾಗಿ ಇಹಪರವೆಂಬ ಉಭಯ ಸಂಕಲ್ಪವ ನರಿತುದಿಲ್ಲ ಎಂದಾತ ನಮ್ಮ ಅಂಬಿಗರಚೌಡಯ್ಯನು.

ಭಾವಃ— ಭಕ್ತನು ಗುರುವಿನೊಳಗಡಗಿರಬೇಕು. ಭಕ್ತನು ಲಿಂಗದೊಳಗಡಗಿರಬೇಕು. ಗುರುವು ಬಾಹ್ಯ ಕ್ರಿಯೆಗೆ ಸಂಬಂಧಪಟ್ಟವನು. ಮತ್ತು ಲಿಂಗವು ಅಂತರಿಂದ್ರಿಯಗಳಿಗೆ ಸಂಬಂಧಪಟ್ಟದ್ದು ಇದ್ದು ಇವೆರಡರಲ್ಲಿ ಮಗ್ನನಾದ ಭಕ್ತನು ಹುರಿಮಾಡಿದ ಹಗ್ಗದಂತೆ ಆಗುವನೆಂದು ಅನ್ನುತ್ತಾನೆ. ಅಂದರೆ ಅವನು ಅಷ್ಟು ಬಲಶಾಲಿಯಾಗುವನು. ಭಕ್ತನು ಗುರುವಿನ ಮೂಲಕ ಕ್ರಿಯೆಗಳ ರೀತಿಯನ್ನು ಅರಿಯಬೇಕು, ಲಿಂಗದ ಮೂಲಕ ಅರುಹನ್ನು ಅರಿಯಬೇಕು. ಹೀಗೆ ಇವುಗಳನ್ನು ತಿಳಿದು ಆಚರಿಸುವವನಾದ್ದರಿಂದ ಭಕ್ತನು ಗುರುಲಿಂಗ ಜಂಗಮವನ್ನು ತನ್ನಲ್ಲಿ ಒಳಕೊಳ್ಳುವನು. ಹೀಗೆ ಇವುಗಳನ್ನು ಕಂಡಿದ್ದಾದರೆ ಅವನಿಗೆ ಇಹವೂ ಇಲ್ಲ. ಪರವೂ ಇಲ್ಲ. ಅವನು ನಿಂವಯ ಸ್ಥಿತಿಯನ್ನು ಹೊಂದುವನೆಂದು ವಚನಕಾರನು ಗುರುಲಿಂಗ ಜಂಗಮರ ವಿವರವನ್ನು ವಿವರಿಸಿರುವನು.

ವಚನಃ— ೧೨೩. ಜಂಗಮದ ಪಾದತೀರ್ಥವು ಎನ್ನಂಗದೋಷವ ಕಳೆಯಿತಯ್ಯ. ಜಂಗಮದ ಪಾದತೀರ್ಥವು ಲಿಂಗಕ್ಕೆ ಪ್ರಾಣಪ್ರತಿಷ್ಠೆಯಾಯಿತಯ್ಯ. ಜಂಗಮದ ಪಾದತೀರ್ಥವು ಸಂಗನ ಶರಣರಿಗೆ ಮುಕ್ತಿಪಥವ ತೋರಿತಯ್ಯ. ಇಂತಪ್ಪ ಜಂಗಮದ ಪಾದತೀರ್ಥಕ್ಕೆ ಅಂತಪ್ಪ ಹಿರಿಯರು ತಮ್ಮ ಗರುವಿಕೆಯ ಬಿಟ್ಟು ದೀರ್ಘದಂಡ ನಮಸ್ಕಾರವ ಮಾಡಿ ಜಂಘೆಯನಿಕ್ಕಿ ನಡೆದುಬಂದು ಕೊಂಡೊಡೆ, ಆತನೇ ಕಂಗಳ ಮೂರುಳ್ಳ ದೇವನೆಂಬೆ. ಹಾಗಲ್ಲದೆ ಅಂಧಕನಂತೆ ಪಂಗುಳನಂತೆ ತಾನಿದ್ದಲ್ಲಿ ಅಂಗೈಯಾಂತು ಕೊಂಬ ಜೆಂಗಿ ಮೂಳ ಮುಕೊರೆಯ ಹೊಲೆಯರ ಕಂಡರೆ ನಿತ್ತಿಯ ಮೇಲೆ ಟೊಂಗ ಟೊಂಗನೆ ಹೊಡೆ ಎಂದಾತ ಅಂಬಿಗರಚೌಡಯ್ಯ.

ಭಾವ:— ಜನರು ಜಂಗಮದ ಪಾದತೀರ್ಥ ಪ್ರಸಾದವನ್ನು ತೆಗೆದು ಕೊಳ್ಳಬೇಕೆನ್ನುವರು. ಜಂಗಮವನ್ನು ಸಲಿಸಬೇಕೆನ್ನುವರು. ಪಡಕೊಳ್ಳ ಬೇಕೆನ್ನುವರು. ವೀರಶೈವರಲ್ಲಿ ಈ ಪಾದೋದಕದ ವಿಧಾನವು ಬಹು ವಿಶಿಷ್ಟತೆರನಾಗಿರುತ್ತದೆ. ಈ ಗುರುಲಿಂಗ ಜಂಗಮನ್ನೆಲ್ಲ ತನ್ನಲ್ಲಿ ಒಳಗು ಮಾಡುವಂತೆ ಈ ವಿಧಾನದ ರಚನೆಯು ಇರುತ್ತದೆ. ಇದರ ಮರ್ಮ ವನ್ನು ಭಕ್ತನು ತಿಳಿದು ಆಚರಿಸಬೇಕು. ಹೀಗೆ ಆಚರಿಸಿದ್ದಾದರೆ ಜಂಗ ಮದ ಈ ಪಾದ ತೀರ್ಥವು ಅಂಗದ ದೋಷಗಳನ್ನು ಕಳೆಯುವದು. ಭಕ್ತನಲ್ಲಿ ಪ್ರಾಣಪ್ರತಿಷ್ಠೆಯಾಪಂತೆ ಆಗುವದು. ಅಂದರೆ ಅವನಲ್ಲಿ ಆತ್ಯಂ ಚೈತನ್ಯವು ಉತ್ಪನ್ನವಾಗುವದು. ಹೀಗೆ ಪಾದತೀರ್ಥವು ನಿಜವಾದ ಶರಣ ರಿಗೆ ಮುಕ್ತಿ ಮಾರ್ಗವನ್ನು ತೋರಿಸುವದು. ಇತರ ಅಂಗವಿಕಾರಿಗಳಿಗೆ ತೋರಿಸಲಾರದೆಂದು ವಚನಕಾರನ ಭಾವವು. ಇಂಥ ಪಾದೋದಕಕ್ಕೆ ಸ್ತರ ಭಕ್ತರು ಎಂಥ ದೊಡ್ಡ ಸ್ಥಾನದಲ್ಲಿದ್ದರೂ, ಅವರು ತಮ್ಮ ದೊಡ್ಡ ಸ್ತಿಕೆಯನ್ನು ಬಿಟ್ಟುಕೊಟ್ಟು ವಿನೀತಭಾವರಾಗಿ ಜಂಗಮನಿಗೆ ಶರಣುಹಾಕಿ ಪಡೆದುಕೊಳ್ಳಬೇಕು. ಇಂಥವರು ಪರಮಾತ್ಮನ ಸ್ವರೂಪವು. ಹೀಗಿಲ್ಲ ದಿದ್ದರೆ ಅವರು ಕುರುಡರು, ಪಂಗುಳರು. ಸೊಕ್ಕಿನಿಂದ ಜಂಗಮರ ಕೂಡ ನಡೆದವರನ್ನು ಪರಮಾತ್ಮನು ಶಿಕ್ಷಿಸುವನೆಂದು ವಚನಕಾರನು ಅಂದಿದ್ದಾನೆ.

ಅರ್ಪಣ ಮಾಡುವುದು.

ವಿವರಣೆ:— ವಚನಕಾರರು ಜಂಗಮನಿಗೆ ಬಹಳ ಮಹತ್ವಕೊಟ್ಟು ಅತನಿಗೆ ಅರ್ಪಿಸಬೇಕೆಂದು ಬಹಳವಾಗಿ ಉಪದೇಶಿಸುವರು. ಆದರೆ ಹೀಗೆ ಸ್ವೀಕರಿಸತಕ್ಕ ಜಂಗಮನ ಸ್ಥಿತಿಯ ವಿಷಯದಲ್ಲಿ ಮತ್ತು ಅತನ ಸ್ವರೂಪದ ವಿಷಯದಲ್ಲಿ ಅವರಲ್ಲಿ ಉಚ್ಚ ವಿಚಾರಗಳಿವೆ. ಹೀಗೆ ವರ್ತಿಸುವವರಿಗೆ ಮಾತ್ರ ಅರ್ಪಣಮಾಡಬೇಕೆಂದು ಅವರು ಒತ್ತಿ ಹೇಳು ತ್ತಾರೆಯೇ ಹೊರ್ತು, ಇತರ ಜಂಗಮರು ಇದಕ್ಕೆ ಅಪಾತ್ರ ರೆಂತಲೇ ಅವರ ಅಭಿಪ್ರಾಯವದೆ. ಸರಿಯಾಗಿ ನಡೆಯದ ದುರ್ವರ್ತ ನೆಯುಳ್ಳ ಜಂಗಮರನ್ನು ಅವರು ಅತ್ಯಂತ ಕಟುವಾದ ಶಬ್ದಗಳಿಂದ ತಮ್ಮ ವಚನಗಳಲ್ಲಿ ಹೀಯಾಳಿಸಿರುವರು. ಸರಿಯಾಗಿ ನಡೆಯುವ ಜಂಗ ಮನ ಮುಖವೇ ಲಿಂಗವೆಂದು ಅವರ ಹೇಳಿಕೆಯು. "ಲಿಂಗದ ಮುಖ ಜಂಗಮ" ಅಥವಾ "ಜಂಗಮ ಮುಖ ಲಿಂಗ" ವೆಂದು ಅವರು ಆಗಿಂದಾಗ್ಗೆ ಹೇಳುವದುಂಟು. ಜಂಗಮನು ಸದಾಚಾರಿಯಾಗಿ ಕಾಯಕವನ್ನು ಮಾಡುತ್ತ ಅದರ ಸಹಾಯದಿಂದಲೇ ಅವನು ಲೋಕೋದ್ಧಾರ ಕಾರ್ಯಗಳನ್ನು ಮಾಡತಕ್ಕದ್ದು. ಪೂರ್ವದ ವಚನಕಾರರ ಕಾಲದಲ್ಲಿ ಇಷೇ ಜಂಗಮರ ರೀತಿಯಾಗಿತ್ತು. ಅವರು ಕೇವಲ ಭಿಕ್ಷುಕರಾಗಿರಲಿಲ್ಲ. ಹೀಗೆ ವರ್ತಿಸು ವವರಿಗೆ ಮಾತ್ರ ಅರ್ಪಣಮಾಡಿ ಸಹಾಯ ಮಾಡುವದು ಭಕ್ತರ ಕರ್ತ ವ್ಯವಾಗಿದೆ. ಕಾಯಕದ ಜಂಗಮನು ಉಚ್ಚ ಧ್ಯೇಯವನ್ನಿಟ್ಟುಕೊಂಡು ಒಂದು ಕಾಯಕವನ್ನು ಮಾಡಿ ಆ ಕಾಯಕದಿಂದ ದೊರೆತ ಹಣದಿಂದ ತನ್ನ ಧ್ಯೇಯಕ್ಕೋಸ್ಕರ ದುಡಿಯುವವನಾಗಿರುವನು. ವಚನಕಾರರಲ್ಲಿ ಕಾಯಕ ವೆಂದರೆ ಜನರನ್ನು ಒಂದು ವಿಧದಿಂದ ಕಾಡಿಬೇಡುವದಿಲ್ಲ. ಕಾಯಕವು ಉಪಜೀವನದ ಹೋರೆಯಾಗಿದ್ದು ಆ ಹೋರೆಯಿಂದ ದೊರೆಕಿಸಿದ್ದನ್ನು ಲಿಂಗಾರ್ಥವಾಗಿ ಉಪಯೋಗಿಸತಕ್ಕದ್ದು. ಇದೇ ಕಾಯಕವೆನಿಸಿಕೊ ಳ್ಳುವದು. ಹೀಗೆ ವರ್ತಿಸುವವರೇ ಜಂಗಮಮುಖಲಿಂಗ ಎಂಬ ಅಭಿಧಾನಕ್ಕೆ ಪಾತ್ರರು. ಅರ್ಪಿಸಿದ್ದನ್ನು ಕೈಕೊಳ್ಳಲು ಯೋಗ್ಯರೆಂದು ವಚನಕಾರರ ಅಭಿಪ್ರಾಯವಿದೆ.

ವಚನ:— ೧೨೪. ಪೊಟ್ಟಿ ಪೊಟ್ಟಿ ಸತ್ರೆಯ ತಂದು ಒಟ್ಟಿ ಪೂಜಿಸಿದರೇನು, ಮನಶುದ್ಧವಿಲ್ಲದನ್ನಕ್ಕರ? ಮನ ಮುಗ್ಧವಾಗಿ ಶಿವಧ್ಯಾ

ನದಲ್ಲಿ ಕೂಡಿ ಒಂದೇ ದಳವ ಧರಿಸಿದರೆ ಶಿವನು ಒಲಿಯನೆ? ಅಂತ
ಪೂಜೆಯ ಮಾಡುವದಕಿಂತಲು ಅದೇ ತೊಪ್ಪಲವನು ಕುದಿಸಿ ಪಾಕವ
ಮಾಡಿದಲ್ಲಿ ಆ ಲಿಂಗವು ತೃಪ್ತಿಯಾಯಿತ್ತು. ಬರಿದೆ ಲಿಂಗವ ಪೂಜಿಸಿ
ಜಂಗಮಕ್ಕೆ ಅನ್ನವ ಕೊಡದೆ ಲಿಂಗದ ಮುಖವು ಜಂಗಮವು ಎಂದು
ತಿಳಿಯದೆ ತನು ಮನ ಧನವನು ಗುರುಲಿಂಗಜಂಗಮಕ್ಕೆ ಸವಿಸದೆ ಬಾಗಿ
ಲಿಗೆ ಕಾವಲಿಕ್ಕೆ ಹೆಂಡಿರು ಮಕ್ಕಳು ಕೂಡಿಕೊಂಡು ತನ್ನ ತಾನೇ ತಿಂಬು
ವಂಥ ನೀಚ ಹೊಲೆಯರ ಮೂಗ ಸವರಿ ಮೆಣಸಿನ ಹಿಟ್ಟು ತುಪ್ಪವ
ತುಂಬಿ ಪಡಿಹಾರಿ ಉತ್ತಣ್ಣಗಳ ಪಾದುಕೆಯಿಂದ ಹೊಡಿ ಎಂದಾತ
ನವ್ಯ ಅಂಬಿಗರ ಚೌಡಯ್ಯ ನಿಜ ಶರಣನು.

ಭಾವಃ— ಲಿಂಗವನ್ನು ಪೂಜಿಸಬೇಕೆಂದು ಅನೇಕರು ಪುಷ್ಪಗ
ಳನ್ನು ಬುಟ್ಟಿ ಬುಟ್ಟಿ ತುಂಬ ತುಂಬಿಸಿ, ಬಹುವೇಳೆ ಅದರಲ್ಲಿ ಕಳೆಯು
ವರು. ಅದರೆ ಇವರ ಮನಸ್ಸು ಶುದ್ಧವಾಗಿರದಿದ್ದರೆ ಹೀಗೆ ಮಾಡಿದ
ಪೂಜೆಯೆಲ್ಲ ವ್ಯರ್ಥವಾದುದೆಂದು ವಚನಕಾರನ ಭಾವವು. ಪೂಜೆಮಾ
ಡುವಲ್ಲಿ ಮನಸ್ಸನ್ನು ಪರಮಾತ್ಮನಲ್ಲಿ ಇರಿಸಿ ಒಂದೇ ದಳವನ್ನು ಲಿಂಗದ
ಮೇಲೆ ಇಟ್ಟರೆ ಸಾಕು, ಅದರಿಂದ ಪರಮಾತ್ಮನು ಒಲಿಯುವನು. ಭಕ್ತನು
ಕಷ್ಟಪಟ್ಟು ಪೂಜೆ ಮಾಡುವದರಕಿಂತಲೂ ಕಾಯಕದಿಂದ ದುಡಿದು
ದೊರೆದದ್ದು ಒಂದು ತೊಪ್ಪಲಲಾದರೂ ಚಿಂತೆ ಇಲ್ಲ, ಅದನ್ನು ಕುದಿಸಿ
ತಿಂದರೆ ಲಿಂಗವು ತೃಪ್ತಿಯಾಗುವದು. ಆದ್ದರಿಂದ ವ್ಯರ್ಥವಾಗಿ ಲಿಂಗ
ಪೂಜೆಯಲ್ಲಿ ಕಾಲಕಳೆಯಬಾರದು. ಆದರೆ ಅವನು ಜಂಗಮನಿಗೆ ಆಹಾ
ರವನ್ನು ನೀಡಬೇಕು. ಯಾಕಂದರೆ ಲಿಂಗಕ್ಕೆ ಮುಖವು ಜಂಗಮವಿವೆ.
ಆದ್ದರಿಂದ ಅತನಿಗೆ ಸಲ್ಲಿಸಿದ್ದು ಲಿಂಗಕ್ಕೆ ಹೋಗಿ ಮುಟ್ಟುವದು. ಅದ
ರಂತೆಯೇ ಗುರುಲಿಂಗಜಂಗಮಕ್ಕೆ ಭಕ್ತನು ತನ್ನ ತನುಮನಧನಗಳನ್ನು
ಅರ್ಪಿಸಬೇಕು. ಹೀಗೆ ಮಾಡದೆ ಭಕ್ತನು ತನ್ನ ಮನೆಯ ಬಾಗಿಲವನ್ನು
ಹಾಕಿಕೊಂಡು ಯಾರಿಗೂ ಏನೂ ಕೊಡದೆ ತನ್ನ ಮಕ್ಕಳು ಮರಿಗಳೊಂ
ದಿಗೆ ಗುಪ್ತವಾಗಿ ತಿಂದದ್ದಾದರೆ ಅವನು ಕಠಿಣವಾದ ಶಿಕ್ಷೆಗೆ ಪಾತ್ರ
ನಾಗುವನೆಂದು ವಚನಕಾರನು ಅಂದಿದ್ದಾನೆ.

ವಚನಃ— ೧೨೫. ಹಾಡಿಮಾಡುವ ಹರಿಕೆಯು ಕೇಳು. ಕೂಡಿ
ಮಾಡುವ ಕೂಡಿಕೆಯು ಕೇಳು. ಹಾಡಿ ಮಾಡಿ, ಕೂಡಿ ಮಾಡಿ, ಬದು
ಕಿಗೆ ಕೇಡು ತಂದುಕೊಳ್ಳಲೇತಕೋ? ತನ್ನ ಬೇಡಲಿಕ್ಕೆ ಬಂದ ಲಿಂಗ

ಜಂಗಮದ ಇರವನರಿತು ನೀಡ ಕಲಿತರೆ ರೂಢಿಯೊಳಗೆ ಅತನೇ ಜಾಣ
ನೆಂದಾತ ನವ್ಯ ಅಂಬಿಗರ ಚೌಡಯ್ಯನು.

ಭಾವಃ— ಅನೇಕರು ಪದಗಳನ್ನು ಮತ್ತು ಸ್ತೋತ್ರಗಳನ್ನು ಅನ್ನುತ್ತ
ಪರಿಕೆ ಹೊತ್ತು ಪೂಜೆ ಮಾಡುವರು. ಬೇರೆ ಅನೇಕರು ಬಹುಜನರಿಗೆ
ಊಟಕ್ಕೆ ಹೇಳಿ ಜನರನ್ನು ಕೂಡಿಸಿ ಅಟ್ಟಹಾಸದಿಂದ ಬಲು ಸಮಾರಂ
ಭದಿಂದ ಪೂಜಾದಿ ಕಾರ್ಯಗಳನ್ನು ನೆರವೇರಿಸುವರು. ಹೀಗೆ ಮಾಡು
ವದೆಲ್ಲವೂ ವ್ಯರ್ಥ, ದುಡ್ಡಿನ ವ್ಯಯವೆಂದು ವಚನಕಾರನು ಅಂದಿರುವನು.
ಜನರು ಹೀಗೆ ಯಾಕೆ ಮಾಡಬೇಕು? ಹೀಗೆ ಮಾಡದೆ ಲಿಂಗವೆಂದ
ರೇನು ಜಂಗಮವೆಂದರೇನು ಎಂಬುದನ್ನು ಅವರು ಅರಿಯಬೇಕು. ಇದನ್ನು
ಅರಿತು ಮಾಡಿದ್ದಾದರೆ, ಜಗತ್ತಿನಲ್ಲಿ ಜಾಣರೆನಿಸಿಕೊಳ್ಳುವರೆಂದು
ವಚನಕಾರನು ಅಂದಿರುವನು.

ವಚನಃ— ೧೨೬. ಸ್ವಲ್ಪ ಅವ್ಯಕ್ತನ್ನವನೊಯ್ದು ಹುತ್ತವೆಂದು
ಬಿಲದ್ವಾರದಲ್ಲಿ ಹೊಯ್ವ ತೊತ್ತಿಗೆಲ್ಲಿಯದೋ ಶಿವಾಚಾರ? ಅದು ಎಂತೆಂ
ದೊಡೆ, ಕಲ್ಲನಾಗರ ಕಂಡರೆ ಹಾಲು ಹೊಯ್ಯೆಂಬಳು. ಬದುಕಿದ ನಾಗರ
ಕಂಡರೆ ಕೊಲ್ಲು ಕೊಲ್ಲು ಎಂಬಳು. ಉಂಬ ದೇವರು ಬಂದರೆ ಇಲ್ಲ
ವೆಂದು ಅಟ್ಟುವಳು. ಉಣ್ಣದ ಕಲ್ಲು ಪ್ರತಿಮೆಯ ಮುಂದಿಟ್ಟು ಉಣ್ಣು
ಉಣ್ಣು ಎಂಬಳು. ಇಂಥ ವೇಷದ ಡಂಭ ತೊತ್ತಿಗೆ ವಿಚಾರಿಸದೆ ಲಿಂಗವ
ಕೊಡಲಾಗದೆಂದಾತ ನವ್ಯ ಅಂಬಿಗರ ಚೌಡಯ್ಯನು.

ಭಾವಃ— ಅನೇಕರು ನಾವು ದಾನವಾಡುವೆನೆಂದು ಸಕ್ಕರೆ ಬೆರಿ
ಸಿದ ಅನ್ನವನ್ನು ಒಯ್ದು ಇರಿವೇ ಹುತ್ತಿನ ಮೇಲೆ ಇಡುವರು. ಇದು
ಏತರ ದಾನ? ಜನರು ತಾವು ನಾಗರಹಾವಿನ ಪೂಜೆ ಮಾಡುವೆವೆಂದು
ಜೀವವಿಲ್ಲದ ಕಲ್ಲನಾಗರ ಮೇಲೆ ಹಾಲು ಹೊಯ್ದು ಹೋಗುವರು. ಆದರೆ
ಅವರು ಜೀವಂತ ಒಂದು ನಾಗರ ಹಾವನ್ನು ಕಂಡರೆ ಕೊಲ್ಲು ಕೊಲ್ಲು
ಎಂದು ಕೋಲನ್ನು ತೆಗೆದುಕೊಳ್ಳುವರು. ಹಾಗೆಯೇ ಉಣ್ಣುವ ಜಂಗ
ಮರು ಬಂದರೆ, ಇಲ್ಲವೆಂದು ಹೊರಗೆ ಅಟ್ಟುವರು. ಆದರೆ ಉಣ್ಣದ
ಲಿಂಗದ ಪ್ರತಿಮೆಯ ಮುಂದೆ ನೈವೇದ್ಯವನ್ನು ಇಟ್ಟು ಉಣ್ಣೆಂದು ಅನ್ನು
ವರು. ಇದು ಏತರ ದಾನ? ಹೀಗೆ ಆಚರಿಸುವವರು ಲಿಂಗಧಾರಣಕ್ಕೆ
ಅಯೋಗ್ಯರು. ಇವರು ವೇಷಧಾರಿಗಳಾದ ಡಂಭಾಚಾರಿಗಳೆಂದು ವಚ
ನಕಾರನು ಅಂದಿರುವನು.

ವಚನಃ— ೧೨೭. ದೇಹಾರವ ಮಾಡುವಣ್ಣಗಳಿರಾ, ಅಣ್ಣಗಳಿರಾ, ಒಂದು ತುತ್ತು ಆಹಾರವನಿಕ್ಕಿರಯ್ಯಾ! ದೇಹಾರಕ್ಕೆ ಆಹಾರವೇ ನಿಚ್ಚಣಿಕೆ. ದೇಹಾರವ ಮಾಡುತ್ತೆ ಆಹಾರವನಿಕ್ಕದಿರ್ದೊಡೆ, ಆಹಾರವಿಲ್ಲೆಂದನಂಬಿಗ ಚೌಡಯ್ಯ.

ಭಾವಃ— ಅತ್ಯಂತ ಆಡಂಬರದಿಂದ ಸಮಾರಂಭಗಳನ್ನು ಮಾಡಬೇಕೆಂದು ಬಯಸುವ ಅಣ್ಣಗಳಿರಾ, ಹೀಗೆ ಮಾಡುವದಿದ್ದರೆ ಒಂದು ತುತ್ತು ಅನ್ನದಾನ ಮಾತ್ರ ಮಾಡಿದರೆ ಸಾಕು. ಅನ್ನದಾನವಿಲ್ಲದಿದ್ದರೆ ಆಡಂಬರಗಳು, ಸಮಾರಂಭಗಳು ವ್ಯರ್ಥವಿವೆ.

ವಚನಃ— ಉದಯದಲೆದ್ದು ಪತ್ರೆಪುಷ್ಪಗಳಿಗೆ ಹೋಗುವ ಅಣ್ಣಗಳು ನೀವು ಕೇಳಿರೊ. ನೀವು ಗಿಡದ ಪೈರಿಗಳೋ? ಗಿಡದ ದಾಯಾದಿಯರೋ? ಹಸಿಯ ತೊಪ್ಪಲನೆ ತಂದು ಆ ದೇವರ ಮಸ್ತಕದ ಮೇಲೊಟ್ಟುವ ಆ ತೊಪ್ಪಲನೆ ತಂದು ಬಿಸಿಮಾಡಿ ಪಶುಪತಿ ಎಂಬ ಜಂಗಮಕ್ಕೆ ನೀಡಿದೊಡೆ ಆ ಜಂಗಮದ ಬಸಿರು ತುಂಬಿದೊಡೆ ಲಿಂಗದ ಹಸುವಡಗತೆಂದಾತ ನಮ್ಮ ಅಂಬಿಗರ ಚೌಡಯ್ಯ.

ಭಾವಃ— ಅನೇಕರು ನೇಮನಿಷ್ಠೆಯುಳ್ಳವರಾಗಿ ಉದಯಕಾಲದಲ್ಲಿ ಎದ್ದು ಲಿಂಗಪೂಜೆಗೆಂದು ಪತ್ರೆ ಪುಷ್ಪಗಳನ್ನು ತಂದಿಟ್ಟುಕೊಳ್ಳುವರು. ಈ ಪ್ರಕಾರ ಆಗಡಗಳೊಡನೆ ಹಗೆತನವೇಕೆಂದು ವಚನಕಾರನು ಅಂದಿರುವನು. ಹೀಗೆ ಮಾಡುವ ಪೂಜೆ ವ್ಯರ್ಥವೆಂದು ಆತನ ಭಾವವು. ಹೀಗೆ ಮಾಡುವದರಕಿಂತಲೂ ಹಸಿಯ ತೊಪ್ಪಲನ್ನೇ ಬಿಸಿ ಮಾಡಿ ಜಂಗಮಕ್ಕೆ ನೀಡಿ ಅವನ ಹಸಿವನ್ನು ಹೋಗಲಾಡಿಸಿದರೆ, ಲಿಂಗದ ಹಸಿವು ಹೋಗುವದು ಮತ್ತು ಪರಮಾತ್ಮನು ತೃಪ್ತಿಗೊಳ್ಳುವನು. ಭಕ್ತನಾದವನು ಸ್ವಾರ್ಥಿಯಾಗದೆ ದಾನಮಾಡಬೇಕೆಂದು ವಚನಕಾರನ ಮುಖ್ಯ ಭಾವವು.

ವಚನಃ— ೧೨೯. ದೊಡ್ಡ ದೊಡ್ಡ ಶೆಟ್ಟಿಗಳ ಕಂಡು, ಅಡ್ಡಗಟ್ಟಿ ಹೋಗಿ ಶರಣಾರ್ಥಿ ಎಂಬ ಎಡ್ಡುಗಳ್ಳತನಕ್ಕೆ ತಮ್ಮ ಮಠಕ್ಕೆ ಬನ್ನಿ ಹರಿಯರೇ ಎಂಬರು. ಹೋಗಿ ಶರಣಾರ್ಥಿ ಭಕ್ತನೆಂದೊಡೆ ಕೇಳದ ಹಾಗೆ ಅಡ್ಡ ಬೋರೆಯನಿಕ್ಕಿಕೊಂಡು ಸುಮ್ಮನೆ ಹೋಗುವ ಹೆಡ್ಡ ಮೂಳರಿಗೆ ದುಡ್ಡೇ ಪ್ರಾಣವಾಯಿತ್ತು. ದುಡ್ಡಿಸ್ತರ, ಕುರುಹನರಿಯದೆ ಪೊಳ

ವಾವ ಮೇಲೆ ಹೊಡಹೊಡಕೊಂಡು ನಗುತಿರ್ದಾತ ನಮ್ಮ ಅಂಬಿಗರ ಚೌಡಯ್ಯ.

ಭಾವಃ— ಜಂಗಮನು ದೊಡ್ಡ ದೊಡ್ಡ ವರ್ತಕರನ್ನು ಕಂಡು ಅವರೆದುರಿಗೆ ಹೋಗಿ ಶರಣಾರ್ಥಿ ಎಂದೆನ್ನುವನು. ಆಗ ಆ ವರ್ತಕನು ಅವನಿಗೆ ತನ್ನ ಮನೆಗೆ ಬರಬೇಕೆಂದು ಕರ್ಕಶತನದಿಂದ ಅನ್ನುವನು. (ಭಕ್ತನ ಮನೆಗೆ ಮಠನೆಂಬ ಹೆಸರು ಇಲ್ಲಿದೆ.) ಅದಕ್ಕೆ ಆ ಜಂಗಮನು ಅಶೆಬಟ್ಟ ಅವನ ಮನೆಗೆ ಹೋಗಿ ಎಲೋ ಭಕ್ತನೇ ಶರಣಾರ್ಥಿ ಎಂದನ್ನುವನು. ಇದಕ್ಕೆ ಶಬ್ದವು ಕೇಳಿಯೂ ಕೇಳದ ಹಾಗೆ ಅಡ್ಡ ಬೋರೆಯು ಹಾಕಿ ಸುಮ್ಮನೇ ಹೊರಟು ಹೋಗುವನು. ಇಂಥ ಭಕ್ತನಿಗೆ ದುಡ್ಡೇ ಪ್ರಾಣವು. ಲಿಂಗವು ಪ್ರಾಣವಲ್ಲ. ಹಾಗೆಯೇ ಈ ಜಂಗಮನು ಈ ಸರಿವಂತನ ತರಹವನ್ನು ಅರಿಯದೆ ಬೆನ್ನುಹತ್ತುತ್ತಾನೆ. ಇದೂ ಹಾಸ್ಯಾಸ್ಪದವೆಂದು ವಚನಕಾರನು ಅಂದಿದ್ದಾನೆ. ಈ ಉಭಯತರನ್ನೂ ವಚನಕಾರನು ಇಲ್ಲಿ ಹಳಿದಿರುವನು.

ವಚನಃ— ೧೩೦. ಕರದಲ್ಲಿ ಲಿಂಗವ ಪಿಡಿದುಕೊಂಡು ಕಣ್ಣುಮುಚ್ಚಿ ಸರ ಜಪಮಾಲೆಯ ಬೆರಳಿಂದ ಎಳೆದೆಳೆದು ಎಣಿಸುತ್ತ ಗುರುಮೂರ್ತಿಯ ಧ್ಯಾನಿಸುತ್ತ ಕಂಡೆನೆಂಬುತ್ತ ಇರುವರೆ ಮೂಳರಿರಾ? ನಿನು ಗೆಲ್ಲಿಯದೋ ಗುರುಧ್ಯಾನ? ವರ ಪಂಚಸ್ತ್ರವಿಂಗೆ ಸರಿ ಎನಿಸಿಕೊಂಬ ಗುರುಸ್ವಾಮಿ ನಿಮ್ಮ ನೆರೆಹೊರೆ ಸರಿಸಮೀಪ ಗ್ರಾಮದಲ್ಲಿರಲು ಅವರನು ಲೆಕ್ಕಿಸದೆ ಉದಾಸೀನವ ಮಾಡಿ ಕಂಡು ನಿನ್ನ ಉಂಬ ಉಡುವ ಸಿರಿ ಸಂಪತ್ತಿನೊಳು ಅವರನು ಸತ್ಕರಿಸದೆ ಕರದಲ್ಲಿ ನೋಡಿ ಕಂಡಹೆನೆಂದು ಸಿರವಂ ಬಿಗಿದು ಕಣ್ಣನೆ ತೆರೆಯದೆ ಸ್ಪುರದಲಾಗ ಪಿಟಿ ಪಿಟಿ ಎನ್ನುತ್ತ ಅರಿದೆನೆಂಬ ಅರುವಿಂಗೆ ಸಿರದೂಗಿ ಬೆಡಗಾಗಿ ನಗುತಿರ್ದ ನಮ್ಮ ಅಂಬಿಗರಚೌಡಯ್ಯನು.

ಭಾವಃ— ಅನೇಕರು ಕರದಲ್ಲಿ ಲಿಂಗವನ್ನು ಹಿಡಿದು ಕಣ್ಣುಮುಚ್ಚಿ ಜಪಮಾಲೆಯನ್ನು ಎಣಿಸುತ್ತ ಗುರುಮೂರ್ತಿಯ ಧ್ಯಾನಿಸುತ್ತ ಅವನನ್ನು ಕಂಡೆವೆಂದು ಹೇಳಿಕೊಂಡು ಸಮಾಧಾನ ಪಡುವರು. ಆದರೆ ಇವರಿಗೆಲ್ಲಿಯದು ಗುರುಧ್ಯಾನ? ಇವರಿಗೆ ಗುರುವು ದೊರಕಲಾರನು. ಆದರೆ ಅತ್ಯೋತ್ಕೃಷ್ಟ ವಸ್ತುವಾದ ಗುರುವು ತನ್ನ ಸಮೀಪದಲ್ಲಿಯೇ ಇರಲು ಆತ

ನನ್ನು ಲೆಕ್ಕಿಸದೆ ಅವನ ಬೋಧಾಮೃತವನ್ನು ಸೇವಿಸದೆ ತನ್ನ ಶ್ರೀಮಂತಿಕೆಯಲ್ಲಿ ಅವನನ್ನು ಏನೂ ಸತ್ಕರಿಸದೆ, ಬರೇ ಲಿಂಗಮೂರ್ತಿಯನ್ನು ದಿಟ್ಟಿಸಿ ನೋಡುತ್ತ, ಶಿರಸ್ಸನ್ನು ಬಿಗಿಹಿಡಿದು ಪಿಟಿ ಪಿಟಿ ಎಂದು ಮಂತ್ರವನ್ನು ಉಚ್ಚರಿಸುತ್ತ ಪರಮಾತ್ಮನ ಜ್ಞಾನವಾಯಿತು ಎಂದು ಹೇಳಿಕೊಳ್ಳುವರು. ಇಂಥ ಮೂರ್ಖರನ್ನು ನೋಡಿ ನಾನು ಬೆರಗಾಗಿ ನಗುತ್ತಿದ್ದೆನೆಂದು ಅಂಬಿಗರ ಚೌಡಯ್ಯನು ಅಂದಿದ್ದಾನೆ.

ಜಂಗಮನ ಆಚರಣೆ.

ವಿವರಣೆಃ— ವೀರಶೈವರು ಜಂಗಮನಿಗೆ ಅತ್ಯಂತ ಮಹತ್ವ ಕೊಟ್ಟಿರುವರು. ಆದ್ದರಿಂದ ಆತನು ಅತ್ಯುಚ್ಚ ವರ್ತನೆಯುಳ್ಳವನಿರಬೇಕೆಂದು ಅವರು ಆಗಿಂದಾಗ್ಗೆ ಒತ್ತಿ ಹೇಳುವದುಂಟು. ಮತ್ತು ಹೀಗೆ ನಡೆಯದ ಜಂಗಮರನ್ನು ಅವರು ಅತ್ಯಂತ ಕಟುವಾದ ಶಬ್ದಗಳಿಂದ ದೂಷಿಸುತ್ತಾರೆ. ಜಂಗಮನಿಂದಲೇ ಇತರ ಭಕ್ತರಲ್ಲಿ ಧಾರ್ಮಿಕ ತಿಳುವಳಿಕೆಯು ಉಂಟಾಗಬೇಕಾದ್ದರಿಂದ ವಚನಕಾರರು ಈ ಪ್ರಕಾರ ಜಂಗಮರ ವಿಷಯವಾಗಿ ಅನ್ನುವದು ಸ್ವಾಭಾವಿಕವಾಗಿದೆ. ವಚನಕಾರರು ಹೊರ ವೇಷಕ್ಕೆ ಎಂದೂ ಮಹತ್ವ ಕೊಟ್ಟಿಲ್ಲ. ಆದರೆ ಆ ವೇಷಕ್ಕೆ ಸರಿಯಾಗಿ ವರ್ತನೆ ಇರಬೇಕೆಂದು ಹೇಳುವರು. ಈ ವರ್ತನೆ ಇಲ್ಲದವನು ಜಂಗಮವೆನ್ನಿಸಿಕೊಳ್ಳಲಾರನು. ಜಂಗಮವು ಕೇವಲ ಜನ್ಮದಿಂದ ಬಂದುದಲ್ಲ. ಉಚ್ಚ ಧಾರ್ಮಿಕ ವೃತ್ತಿಯಿಂದಲೇ ಅದು ಅವನಲ್ಲಿ ಬರತಕ್ಕದ್ದಾಗಿರುವದು.

ವಚನಃ— ೧೩೧. ಕಂಥೆ ತೊಟ್ಟವ ಗುರುವಲ್ಲ; ಕಾವಿ ಹೊತ್ತವ ಜಂಗಮವಲ್ಲ; ಶೀಲ ಕಟ್ಟಿದವ ಶಿವಭಕ್ತನಲ್ಲ; ನೀರು ತೀರ್ಥವಲ್ಲ; ಕೂಳು ಪ್ರಸಾದವಲ್ಲ. ಹೌದೆಂಬುವನ ಬಾಯ ಮೇಲೆ ಅರ್ಧಮಣದ ಪಾದರಕ್ಷೆಯ ತೆಗೆದುಕೊಂಡು ಮಾಸಿ ಕಡಿಮೆ ಇಲ್ಲದೆ ತೂಗಿ ತೂಗಿ ಟೊಂಕನೆ ಹೊಡೆ ಎಂದಾತ ನಮ್ಮ ಅಂಬಿಗರ ಚೌಡಯ್ಯ.

ಭಾವಃ— ಬಾಹ್ಯ ಚಿನ್ಹೆಗಳಿಂದ ಗುರುವಾಗುವದಿಲ್ಲ ಅಥವಾ ಜಂಗಮವಾಗುವದಿಲ್ಲ. ಅಥವಾ ಔಪಚಾರಿಕ ಹೊರಗಿನ ಕ್ರಿಯೆಗಳಿಂದಲೂ ಭಕ್ತನಾಗುವದಿಲ್ಲ. ಆದರೆ ಮನಸ್ಸಿನ ಪಾವಿತ್ರ್ಯದಿಂದಲೇ ಮನುಷ್ಯನು ಉಚ್ಚಸ್ಥಿತಿಗೆ ಬರುತ್ತಾನೆ. ಅದರಂತೆಯೇ ನೀರು ಮತ್ತು ಆಹಾರ ಇವುಗಳಲ್ಲಿಯೂ ಸ್ವತಃ ಸಿದ್ಧವಾದ ಪೂಜ್ಯತ್ವವು ಇರುವದಿಲ್ಲ. ಅವು ತೀರ್ಥ ಮತ್ತು ಪ್ರಸಾದವೆನ್ನಿಸಿಕೊಳ್ಳಬೇಕಾದರೆ ಮನುಷ್ಯನ ಭಾವಿಕತನದ ಮೇಲೆ ಅವಲಂಬಿಸಿದೆ. ಅಂದರೆ ಮನುಷ್ಯನ ಉಚ್ಚತರದ ಮನಸ್ಸಿನ ಸ್ಥಿತಿಯಿಂದಲೇ ಪಾವಿತ್ರ್ಯವು ಉತ್ಪನ್ನವಾಗುತ್ತದೆಂದು ವಚನಕಾರನ ಮುಖ್ಯ ಅಭಿಪ್ರಾಯವಿದೆ.

ವಚನಃ—೧೩೨. ಈಶಲಾಂಛನವ ತೊಟ್ಟುವನದ ವೇಷಲಾಂಛನವ ತೊಡಲೇತಕ್ಕೆ? ಇದು ನಿಮ್ಮನುಡಿ ನಡೆಗೆ ನಾಚಿಕೆಯಲ್ಲವೆ? ಅಂದಣ ಛತ್ರಾಭರಣ ಕರಿತುರಗಂಗಳ ಗೊಂದಣವೇತಕ್ಕೆ? ಅದು ಘನಲಿಂಗದ ಮೆಚ್ಚಲ್ಲೆಂದನಂಬಿಗ ಚೌಡಯ್ಯ.

ಭಾವಃ— ಪರಮಾತ್ಮನ ಚಿನ್ಹಗಳನ್ನು ಧರಿಸಿದ ಬಳಿಕ ಮನಸ್ಸಾದರೂ ಶುದ್ಧವಾಗಿರಬೇಕು. ಮನುಷ್ಯನು ಶುಚಿತ್ವದ ಬ್ರಾಹ್ಮ ಚಿನ್ಹಗಳನ್ನು ಮಾತ್ರ ಹೊರಬಾರದು. ಅವನಲ್ಲಿ ಕಾಪಟ್ಯಭಾವವಿದ್ದರೆ. ಅದು ಅತನ ನಡೆನುಡಿಗೆ ನಾಚಿಕೆಯಾದದ್ದು. ಮಠಾಧಿಪತಿಗಳು ಪಲ್ಲಕ್ಕಿ. ಛತ್ರ ಆನೆ, ಕುದುರೆಗಳ ಆಡಂಬರವನ್ನು ಬಯಸುವರು. ಈ ತೊಂದರೆಗಳು ಅವರಿಗೆ ಏತಕ್ಕೆ? ಇವುಗಳನ್ನು ಅವರು ಬಯಸಬಾರದು. ಇವುಗಳನ್ನು ಬಯಸುವದರಿಂದ ಶ್ರೇಷ್ಠವಾದ ಮಹಾಲಿಂಗವು ಅವರಲ್ಲಿ ಎಂದೂ ಒದಗಲಾರದು.

ವಚನಃ— ೧೩೩. ಬ್ರಹ್ಮಕ್ಕೆ ಬಾಯ್ದೆರೆದು ಮಾತನಾಡಿ ಪರಬೊಮ್ಮದ ವೇಷವ ನುಡಿದು ಒಮ್ಮನ ಅಂಬಿಲಿಯನಿಕ್ಕೆಂದು ಹಾಲುಬುತ್ತಿ ಹೊಲಬುಗೆಟ್ಟವರ ಕಂಡು ಅವರಿಗೆ ಒಲವರವಿಲ್ಲೆಂದ ಅಂಬಿಗರ ಚೌಡಯ್ಯ.

ಭಾವಃ— ಜಂಗಮರು ಬ್ರಹ್ಮದ ಮಾತನ್ನು ಬಹುವಾಗಿ ಜನರ ಮುಂದೆ ನುಡಿಯುವರು. ಹೀಗೆ ನುಡಿದು ಕಡೆಗೆ ಹೊಟ್ಟೆಗಂದು ಕ್ಷುದ್ರ ಜನರನ್ನು ಕಂಡು ಅವರನ್ನು ಯಾಚಿಸುವರು. ಇವರಿಗೆ ಪರಮಾತ್ಮನ ಒಲವು ಉಂಟಾಗಲಾರದು. ಜಂಗಮರು ಭಿಕ್ಷುಕರಾಗಿ ವರ್ತಿಸಿದರೆ, ಅವರ ಮಾನಕ್ಕೆ ಹಾನಿಯು. ಅವರು ಒಂದು ಕಾಯಕವನ್ನು ಹಿಡಿದು ವರ್ತಿಸಿದ್ದಾದರೆ ಸ್ವತಂತ್ರ ಜೀವಿಗಳಾಗಿ ಸುಖವಾಗಿ ಬಾಳುವರು. ಮತ್ತು ಅವರಿಗೆ ಪರಮಾತ್ಮನೂ ಒಲಿಯುವನು.

ವಚನಃ— ೧೩೪. ಸಹಜವಯ್ಯ ಶಿವಗಣಂಗಳ ನುಡಿ ಸತ್ಯವು. ಪಾಷಂಡಿ ಪ್ರಪಂಚಿಗಳ ದಾಸಿವೇಶಿಯರ ಕಾಸಿಗಾಸೆ ಮಾಡುವ ಮೂಷಕರ ಪರುಷಕ್ಷಕರನೆಂತು ಮಹಂತಿನ ದೇವರೆನಬಹುದಯ್ಯ? ವೇಶಿಯಂತೆ ವೇಷವ ಹಲ್ಲಡಿಸಿಕೊಂಡು ಸರ್ವರಿಗೆ ಸಮತ ವಚನವ ನುಡಿದು, ಶಿವಭಕ್ತರನುಣ್ಣಿಸಿ ಬಣ್ಣಿಸಿ ಕಾಸುವೀಸಗಳನಿಸದುಕೊಂಡು ಪಾಶಬದ್ಧರಾಗಿ ಹೇಸಿಕೆಯ ಕಿಸುಕುಳದ ಮೂತ್ರದ ಕುಳಿಯಲ್ಲಿ ಹೊರಳುವ ಧೂರ್ತ ಲಾಂಛನಿಗಳು ಯಮಪುರದಲ್ಲಿ ಲೋಲರಾಗಿಪ್ಪರೆಂದಾತನಂಬಿಗ ಚೌಡಯ್ಯ.

ಭಾವಃ— ಇಲ್ಲಿ ವಚನಕಾರನು ಹಿರೇಮಠದವರೆಂದು ಅಂದುಕೊಂಡು ದುರಾಚಾರದಲ್ಲಿರುವವರನ್ನು ನಿಂದಿಸಿರುವನು. ಇವರು ಪ್ರಾಪಂಚಿಕಾಗಿ ವರ್ತಿಸುತ್ತ, ದಾಸಿವೇಶಿಯರ ಸಂಗಮಾಡುತ್ತ ಕಾಸಿಗಾಗಿ ಆಶೆ ಮಾಡುತ್ತ ಇರುತ್ತಾರೆ. ಇವರು ನಿಜವಾಗಿ ದನಕಾಯುವವರು. ಇವರಿಗೆ ಹಿರೇಮಠದವರೆಂದು ಹೇಗೆ ಅನ್ನಬೇಕು? ಹೇಗೆ ವೇಶಾಸ್ತ್ರೀಯು ಅಂದಚಂದ ಮಾಡಿಕೊಂಡು ಒಯ್ಯಾರದಿಂದ ಇರುತ್ತಾಳೋ ಹಾಗೆ ಇವರು ಮಠಸ್ಥರ ವೇಷ ಹಾಕಿಕೊಂಡು ಜನರ ಮುಂದೆ ವಚನಗಳನ್ನು ಹೇಳುತ್ತ ಹಿಂದಿನ ಭಕ್ತರ ಚರಿತ್ರೆಗಳನ್ನು ಬಣ್ಣಿಸುತ್ತ ಭಿಕ್ಷವನ್ನು ಇಸಿದುಕೊಂಡು ಹೋಗುವರು. ಮತ್ತು ಹೀಗೆ ದೊರಕಿಸಿದ ಹಣವನ್ನು ವ್ಯಭಿಚಾರದಲ್ಲಿ ಹಾಳು ಮಾಡುವರು. ಇವರು ಕಡೆಗೆ ಯಮಪುರಕ್ಕೆ ಹೋಗುವದೇ ನಿಶ್ಚಯವು.

ವಚನಃ— ೧೩೫. ಬ್ರಹ್ಮದ ಮಾತನಾಡಿ ಕನ್ನೆಯರ ಕಾಲದೆಸೆಯಲ್ಲಿ ಕುಳಿತಲ್ಲಿ ಪರಬೊಮ್ಮದ ಮಾತು ಅಲ್ಲಿ ನಿಂದಿತ್ತೆಂದನಂಬಿಗ ಚೌಡಯ್ಯ.

ಭಾವಃ— ಜಂಗಮರು ಬರಿಯ ಬ್ರಹ್ಮದ ಮಾತನಾಡಿ ವ್ಯಭಿಚಾರ ಮಾಡುತ್ತ ತಿರುಗುವರು. ಇವರಿಗೆ ಆ ಬ್ರಹ್ಮದ ಮಾತು ಅಲ್ಲಿಯೇ ನಿಂತಿತು. ಆದರಿಂದ ಏನೂ ಉಪಯೋಗವಿಲ್ಲೆಂದು ವಚನಕಾರನ ಭಾವವು.

ವಚನಃ— ೧೩೬. ರತಿಯಿಂದ ರತ್ನ, ಗತಿಯಿಂದ ವಾದ್ಯ, ಸದ್ಗತಿಯಿಂದ ಮುಕ್ತಿ, ನಿರ್ಗತಿಯಿಂದ ವಿರಕ್ತಿ, ಈ ನಾಲ್ಕರ ಮತಿಯ ತಿಳಿಯಬೇಕೆಂದನಂಬಿಗಚೌಡಯ್ಯ.

ಭಾವಃ— ಮನಸ್ಸಿನ ಪ್ರೀತಿಯ ಮೂಲಕ ರತ್ನಕ್ಕೆ ಬೆಲೆಯು ಉಂಟಾಗುತ್ತದೆ. ಸರಿಯಾದ ಬಡಿಯುವಿಕೆಯಿಂದ ವಾದ್ಯದಲ್ಲಿ ಸೊಗಸಾದ ನಾದವು ಉತ್ಪನ್ನವಾಗುತ್ತದೆ. ಸತ್ಕಾರ್ಯಗಳನ್ನು ಮಾಡುವದರಿಂದ ಮುಕ್ತಿಯಾಗುತ್ತದೆ. ನಿರ್ದೋಷ ಭಾವದಿಂದ ವಿರಕ್ತಿಯುಂಟಾಗುತ್ತದೆ. ಈ ನಾಲ್ಕರ ಹದವನ್ನು ಅರಿಯಬೇಕೆಂದು ವಚನಕಾರನು ಅಂದಿರುವನು. ವಿರಕ್ತನು ಏತರಲ್ಲಿಯೂ ಬೆರಿಸದೆ ವರ್ತಿಸಬೇಕೆಂದು ಅವನ ಮುಖ್ಯ ಭಾವವು.

ವಚನಃ— ೧೩೭. ವೇದ ವೇದಾಂತರ ಶಾಸ್ತ್ರಸಂಪದರ ಅಗಮ್ಯಾತೀತರ ಪರಬ್ರಹ್ಮ ಸ್ವರೂಪರ ಪರಮವಿರಕ್ತರ ಕೂಡಿಕೊಂಡಿರುವ,

ತಾನರಿವಲ್ಲಿ ಅರಿವ, ಕೇಳುವಲ್ಲಿ ಎಡೆದೆರಪಿಲ್ಲದ, ಪದ ಪದಾರ್ಥಂಗಳಂ
ಕ್ರಿ ಕ್ರಿಯಾರ್ಥದಿಂದೆ ತತ್ವ ತತ್ವಾರ್ಥಂಗಳಲ್ಲಿ ಪದಚ್ಛೇದವ ಮಾಡುವ,
ಪಾರಮಾರ್ಥಿಕರ ಪಾದವೇ ಪದವೆಂದನಂಬಿಗಚೌಡಯ್ಯ.

ಭಾವಃ— ಪರಮಾರ್ಥಿಕರಾದ ಜಂಗಮರು ಹೇಗೆ ನಡೆಯಬೇ
ಕೆಂಬುದನ್ನು ವಚನಕಾರನು ಇಲ್ಲಿ ಹೇಳಿರುವನು ದುಷ್ಟ ಸಂಗತಿಯಿಂದ
ದೂರಾಗಿದ್ದು ವೇದ ವೇದಾಂತಗಳನ್ನು ಅರಿತಂಥ ಶಾಸ್ತ್ರವನ್ನು ಬಲ್ಲಂಥ
ಆಗಮಜ್ಞಾನವನ್ನು ಹೊಂದಿ ಆದಕ್ಕೆ ಮೀರಿ ನಿಂತಂಥ ಪ್ರಬ್ರಹ್ಮಜ್ಞಾ
ನವನ್ನು ಹೊಂದಿ ಆ ಜ್ಞಾನವೇ ತಾವಾಗಿರುವಂಥ ಪರಮ ವಿರಕ್ತರನ್ನು
ಕೂಡಿಕೊಂಡು ಇರಬೇಕು. ಹಾಗೆಯೇ ಅವರು ಜ್ಞಾನಸಂಪಾದನೆಯನ್ನು
ಮಾಡಿಕೊಳ್ಳಬೇಕು. ಜ್ಞಾನಿಗಳ ಅನುಭಾವವನ್ನು ಕೇಳುವಲ್ಲಿ ಏಕಾಗ್ರ
ಚಿತ್ತದಿಂದ ಕೇಳಬೇಕು. ಪದ ಪದಾರ್ಥಗಳು ಕ್ರಿ ಕ್ರಿಯಾರ್ಥಗಳು ತತ್ವ
ತತ್ವಾರ್ಥಗಳು ಇವುಗಳ ಮರ್ಮವನ್ನು ಅರಿಯಬೇಕು. ಈ ಬಗೆಯ
ವೃತ್ತಿಯುಳ್ಳ ಜಂಗಮರ ಪಾದದ ಸಾನ್ನಿಧ್ಯವೇ ನಿಜವಾದ ಪದವೆಂದು
ಅಂಬಿಗರ ಚೌಡಯ್ಯನು ಇಲ್ಲಿ ಅಂದಿರುವನು.

ವಚನಃ— ಅಖಿಲ. ಅಯ್ಯಾ ನಾವು ಪರಮ ವಿರಕ್ತರು, ಪಟ್ಟದ
ಯ್ಯನವರು, ಚರಮೂರ್ತಿಗಳು, ಪರದೇಶಿಗಳು, ಎಂದು ಶಂಖ
ನಿಳಿಲು ದಂಡಾಗ್ರ ಎಂಬ ಬಿರಿದು ಪಿಡಿದು, ಕಾವಿ ಕಾಷಾಯಾಂ
ಬರವ ಹೊತ್ತು ಸರ್ವ ಕಾರ್ಯದಲ್ಲಿ ಶ್ರೇಷ್ಠರೆಂದು ಗರ್ವರಲ್ಲಿ ಕೊಬ್ಬಿ
ಕಾಮನಾಟದಲ್ಲಿ ಕಲಕಿ, ಮನಸ್ಸಿನಲ್ಲಿ ದುರ್ಗುಣವನಿಟ್ಟುಕೊಂಡು ಮಾತಿ
ನಲ್ಲಿ ನೀತಿಯ ಸೇರಿಸುತ್ತ, ಕಪಟದಲ್ಲಿ ಚರಿಸುವಂತಹ ತೊನ್ನ ಹೊಲೆಮಾ
ದಿಗರ ಸಂಗ ಮಾಡಲಾಗದು. ಅವರ ಪ್ರಸಂಗವ ಕೇಳಲಾಗದು. ಅದೇನು
ಕಾರಣವೆಂದರೆ ಗುರುಲಿಂಗಜಂಗಮವಾದ ಬಳಿಕ ಅಷ್ಟಾವರಣದಲ್ಲಿ ನಿಷ್ಠಾ
ಪರರಾಗಿರಬೇಕು. ಪರಧನ ಪರಸತಿಯರ ಹಿಡಿಯೆನೆಂಬ ನೇಮದಲ್ಲಿ
ಬಲ್ಲಿದರಾಗಿರಬೇಕು. ಶಿವಭಕ್ತರಾದವರ ಭವವ ಗೆಲಿಸಿ ಮೋಕ್ಷವ
ಹೊಂದಿಸಬೇಕು. ಶಿವಲಾಂಛನವ ಹೊತ್ತ ಬಳಿಕ ಶಿವನಂತಿರಬೇಕು.
ಬರಿದೆ ನಾನು ಮಹೇಶ್ವರನೆಂದು, ನಾನು ಶಿವಭಕ್ತನೆಂದು, ತನ್ನ ಹೃನ್ಮಂ
ದಿರದಲ್ಲಿ ನೆಲಸಿದ ಚಿನ್ಮಯ ಜಂಗಮಲಿಂಗಕ್ಕೆ ತನುಮನಧನವೆಂಬ ತ್ರಿವಿಧ
ಪದಾರ್ಥವನರ್ಪಿಸಿ, ತ್ರಿವಿಧ ಪ್ರಸಾದವ ಗರ್ಭೀಕರಿಸಿಕೊಂಡು, ಪ್ರಸನ್ನ
ಪ್ರಸಾದವ ಸ್ವೀಕರಿಸಿ, ಪರತತ್ವ ಪ್ರಸಾದದಲ್ಲಿ ತಾನು ತಾನಾಗಲರಿಯದೆ

ಉಚ್ಚಂಗೀ ದುರ್ಗಿಗೆ ಬಿಟ್ಟ ಪೋತರಾಜನಂತೆ, ಮಾರು ಮಾರು ಜಡೆ
ಗಳ ಬಿಟ್ಟು ಆಡಿನೊಳಗಿರುವ ಹಿರಿಯ ಹೋತಿನಂತೆ ಮೊಳ ಮೊಳ
ಗಡ್ಡಗಳ ಬಿಟ್ಟು, ಡೊಂಬ ಜಾತಿಗಾರನಂತೆ ವೇಷವ ತೊಟ್ಟು, ಮೀಸೆಯ
ಬೋಳಿಸಿಕೊಂಡು, ಕೈಪವ ಧರಿಸಿ, ಸಂಸ್ಕೃತ ಗೀರ್ವಾಣ ಭಾಷೆಯ ಕಲಿತು
ಕಾಕ ಕುಟಿಲ ಕುಹಕದ ಗಾಳಿಪೂಜೆಯಿಂದ ಬಂದ ಸುಡುಗಾಡ ಸಿದ್ಧ
ಯ್ಯಗಳಂತೆ ಗಿಡಮೂಲಿಕೆಗಳು ತಂತ್ರಮಂತ್ರ ಯಂತ್ರದ ಭಾಷೆಗಳ
ಕಲಿತುಕೊಂಡು. ಪುರಜನರ ಮೆಚ್ಚಿಸಬೇಕೆಂದು, ಅಯ್ಯಾ ನಾವು ಕರೆ
ಬಾವಿಯನಗಿಸಬೇಕೆಂದು, ಮಠಗುಡಿಯ ಕಟ್ಟಿಸಬೇಕೆಂದು, ಮಾನ್ಯದಲ್ಲಿ
ಬಲ್ವಗಿಡಗಳ ಹಚ್ಚಿಸಬೇಕೆಂದು, ಮದುವೆ, ಅಯ್ಯಾಚಾರವ ಮಾಡಬೇ
ಕೆಂದು, ಅನ್ನಕ್ಷೇತ್ರ ಅರವಟಿಗೆಯ ಇಡಿಸಬೇಕೆಂದು, ಪುರಾಣಗಳ ಹಚ್ಚಿ
ಸಬೇಕೆಂದು, ಇಂತಪ್ಪ ದುರಾಸೆಯ ಮುಂದುಗೊಂಡು ನಾನಾ ದೇಶವ
ತಿರುಗಿ, ಅರಸರ ಮದದಂತೆ ಗರ್ವದಿಂದ ಹೆಚ್ಚಿ, ಹೇಸಿ ಹೊಲೆಮಾದಿಗರ
ಕಾಡಿ ಬೇಡಿ, ಹುಸಿಯನೆ ಬೊಗಳಿ ಒಬ್ಬನ ಒಲವ ಮಾಡಿಕೊಂಡು,
ವ್ಯಾಪಾರ ಮರ್ಯಾದೆಯಲ್ಲಿ ಪೇಟೆಯಲ್ಲಿ ಕುಳಿತು ಅನಂತ ಮಾತುಗ
ಳನಾಡುತ್ತ, ಸೆಟ್ಟ ಮುಂತಾದ ಅನಂತ ಕಳ್ಳ ಹಾದರಗಿತ್ತಿಯ ಮಕ್ಕಳ
ಮಾತಿನಿಂದೊಲಿಸಿ, ಅವರು ಕೊಟ್ಟೊಡೆ ಹೊಗಳಿ, ಕೊಡದಿರ್ದೊಡೆ ಬೊಗಳಿ,
ಈ ಭ್ರಷ್ಟ ಹೊಲೆಮಾದಿಗರು ಕೊಟ್ಟ ದ್ರವ್ಯಗಳ ತೆಗೆದುಕೊಂಡು ಬಂದು,
ಕಡೆಗೆ ಜೋರರು ಒಯ್ದರೆಂದು ಮಠದೊಳಗೆ ಮಡಗಿಕೊಂಡು ಪರಸ್ತ್ರೀ
ಯರ ಹಡಿಕಿ ಯೋನಿಯೊಳಗೆ, ಇಂದ್ರಿಯ ಬಿಟ್ಟು, ಕಾಮಕ್ರೋಧದಲ್ಲಿ
ಮುಳುಗಿ ಮತಿಗೆಟ್ಟು, ಶಿವಪಥಕ್ಕೆ ದೂರಾಗಿ, ದುರಾಚಾರವ ಆಚರಿಸಿ,
ನಡೆನುಡಿಗಳು ಹೊರ್ತಾಗಿ, ವ್ಯರ್ಥ ಹೊತ್ತುಗಳೆದು, ಸತ್ತುಹೋಗುವ
ಜಡದೇಹಿ ಕಡುಪಾತಕ ಕತ್ತೆ ಹಡಿಕರಿಗೆ ಪರಮ ನಿರಂಜನ ಜಂಗಮ
ಲಿಂಗ ದೇವರೆಂದು ಕರೆತಂದು, ಪಾದತೀರ್ಥ ಪ್ರಸಾದವ ತೆಗೆದುಕೊಂ
ಬುವರಿಗೆ ಇಪ್ಪತ್ತೊಂದು ಯುಗ ಪರಿಯಂತರ ನರಕಕೊಂಡದಲ್ಲಿಕ್ಕುವ,
ಇಂತಪ್ಪ ಜಂಗಮವನು ಪೂಜೆ ಮಾಡುವಂತಹ ಶಿವಭಕ್ತನು ಉಭಯ
ತರ ಮೂಗ ಸೀಳಿ ಮೆಣಸಿನ ಹಿಟ್ಟು ತುಪ್ಪವ ತುಂಬಿ, ಪಡಿಹಾರಿಗಳೆ
ಡದ ಪಾದುಕೆಯಿಂದೆ ಪಡಪಡನೆ ಹೊಡಿ ಎಂದಾತ ನಮ್ಮ ಅಂಬಿಗರ
ಚೌಡಯ್ಯ ನಿಜಶರಣನು.

ಭಾವಃ— ಇಲ್ಲಿ ವಚನಕಾರನು ಮಠಾಧಿಪತಿಗಳ ದುರ್ವರ್ತನೆಗ
ಳನ್ನು ವರ್ಣಿಸಿ ಹೀಗೆ ನಡೆಯುವವರನ್ನು ಚನ್ನಾಗಿ ಶಿಕ್ಷಿಸಬೇಕೆಂದು

ಅನ್ನುತ್ತಾನೆ. ಮಠಾಧಿಪತಿಗಳು ತಾವು ಪಟ್ಟದವರು, ಚರಮೂರ್ತಿಗಳು ವಿರಕ್ತಾಶ್ರಮದವರು, ದೇಶಿಕೇಂದ್ರರು ಎಂದು ಹೇಳಿಕೊಂಡು ಶಂಖ, ದಂಡ ಮುಂತಾದ ಚಿನ್ಹಗಳನ್ನು ಹಿಡಿದುಕೊಂಡು, ಕಾವಿಕಾಷಾಯಾಂಬರಗಳನ್ನು ಹೊದ್ದುಕೊಂಡು, ತಾವು ಎಲ್ಲರಿಗಿಂತಲೂ ಹೆಚ್ಚಿನವರು ಶ್ರೇಷ್ಠರು ಎಂದು ಹೆಸ್ಮೆತಾಳುವರು. ಆದರೆ ಕಾಮುವಾಸನೆಗೆ ಗುರಿಯಾವಂಥ ದುರ್ಗುಣಗಳಲ್ಲಿ ಮುಳುಗಿದಂಥ ಮಾತಿನಲ್ಲಿ ಮಾತ್ರ ನೀತಿಯನ್ನು ಹೇಳುತ್ತ ತಿರುಗುವಂಥ ಕಪಟಿಗಳ ಸಂಗವನ್ನು ಎಂದೂ ಮಾಡಲಾಗದು. ಮತ್ತು ಅವರೊಡನೆ ಮಾತುಕಥೆ ಸಹ ಆಡಬಾರದು. ಯಾಕಂದರೆ ಗುರುಲಿಂಗಜಂಗಮವಾದವರು ಅತ್ಯಂತ ನೀತಿಯಿಂದ ನಡೆಯಬೇಕು. ಭಕ್ತರನ್ನು ಸನ್ಮಾರ್ಗಕ್ಕೆ ಹಚ್ಚಬೇಕು. ಇವರು ತಮ್ಮ ಹೃದಯಮಂದಿರದಲ್ಲಿರುವ ಚಿನ್ಮಯ ಜಂಗಮಲಿಂಗಕ್ಕೆ ತಮ್ಮನ್ನು ಅರ್ಪಿಸಿಕೊಂಡು ಪರತತ್ವ ಪ್ರಸಾದದಲ್ಲಿ ತಾವೇ ತಾವಾಗಿರಬೇಕು. ಹೀಗೆ ಆಚರಿಸದೆ, ಉದ್ದುದ್ದ ಜಡೆಗಳನ್ನು ಬಿಟ್ಟುಕೊಂಡು ಗಡ್ಡಬಿಟ್ಟು, ಜಾತಕಾರ ಡೊಂಬರಂತೆ ನಾನಾ ವೇಷಗಳನ್ನು ಧರಿಸಿಕೊಂಡು ಕೆಲವು ಸಂಸ್ಕೃತ ಶ್ಲೋಕಗಳನ್ನು ಕಲಿತು. ಅವುಗಳನ್ನು ಹೇಳುತ್ತ ತಿರುಗುವರು. ಇಲ್ಲವೆ ಸುಡಗಾಡಸಿದ್ಧರಂತೆ ಗಿಡಮೂಲಿಕ, ಯಂತ್ರ ತಂತ್ರಗಳನ್ನು ಕಲಿತುಕೊಂಡು ಜನರನ್ನು ಮೋಸಮಾಡುತ್ತ ಹೋಗುವರು. ಇಲ್ಲವೆ ಕೆರೆ ಬಾವಿಗಳನ್ನು ಅಗಿಸುವೆವೆಂದು ಮಠ ಗುಡಿ ಕಟ್ಟಿಸುವೆವೆಂದು ಅಯ್ಯಾಚಾರಮಾಡಿಸುವವೆಂದು ಪುರಾಣಹೇಳಿಸುವೆವೆಂದು ಹೀಗೆ ನಾನಾಪರಿ ಸುಳ್ಳು ಹೇಳಿ ಹೊಲಯರು ವ್ಯಾಪಾರಸ್ತರು ಮುಂತಾದ ಪಾಪಿಷ್ಠ ಜನರನ್ನು ಮಾತಿನಿಂದ ಒಲಿಸಿ ಅವರಿಂದ ದುಡ್ಡು ಎತ್ತಿ ತಮ್ಮ ಮಠದಲ್ಲಿ ಅದನ್ನು ಹೂಗಿದು ಅದನ್ನು ಯಾರೋ ಕಳ್ಳರು ಒಯ್ದರೆಂದು ಸುಳ್ಳು ಸುದ್ದಿಯನ್ನು ಹರಿವಿ, ಹೀಗೆ ಕೂಡಿದ ಹಣದಿಂದ ಹಾದರಮಾಡುತ್ತ, ಶಿವಪಥಕ್ಕೆ ದೂರಾಗಿ ದುರಾಚಾರವ ಮಾಡುತ್ತ ವ್ಯರ್ಥ ಸತ್ತುಹೋಗುವರು. ಇಂಥ ಜಡದೇಹಿಗಳಾದ ಮಠಾಧಿಪತಿಗಳು ನಿರಂಜನ ಜಂಗಮಲಿಂಗದೇವರೆಂದು ತಿಳಿದು ಅವರನ್ನು ಕರೆತಂದು ಅವರ ಪಾದತೀರ್ಥ ಪ್ರಸಾದವನ್ನು ಸೇವಿಸುವವರಿಗೆ ನರಕವೇ ಪ್ರಾಪ್ತಿ ಎಂದು ವಚನಕಾರನು ಇಲ್ಲಿ ಅಂದಿದ್ದಾನೆ.

ವಚನಃ— ೧೫೯. ಸೋಮವಾರ ಹುಣ್ಣಿವೆ ಅಮವಾಸ್ಯೆ ಎಂದು ಉಪವಾಸವಿರ್ದು ಶಿವನಿಗೆ ಅರ್ಪಿತ ಎಂದು ನುಡಿವರು. ಕಾಮ ಕ್ರೋಧ

ಮೋಹ ಮದಮತ್ಸರವರನಳಿಯರು. ಶಿವನ ನೆಲೆಯನರಿಯದೆ ಎನಗೆ ಗತಿಕೊಡುವ ಲಿಂಗವಿದೇ ಎಂದು ತಿಳಿಯದೆ ಗ್ರಾಮದ ಹೊರತಾಯು ದಲ್ಲಿರುವ ದೇವರುಗಳು ಅಧಿಕವೆಂದು ಪೂಜಿಸಿ ಅವಕಿಕ್ಕಿದ ಕೂಳ ತಾ ತಿಂಬುವನು. ಇನ್ನು ಸೋಮಧರಗರ್ಪಿತವೆಂದು ಭುಂಜಿಸುವವರ ತೆರ ಸಂತೆ, ದೊಡ್ಡ ಗ್ರಾಮದ ಶೂಕರನು ಗಂಗೆಯಲ್ಲಿ ಮಿಂದು ಬಂದು ಅಮೇಧ್ಯವ ಭುಂಜಿಸಿದ ತೆರನಾಯಿತೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

ಭಾವಃ— ಜಂಗಮರು ತಮ್ಮ ಸ್ಥಲಕ್ಕೆ ಅನುಗುಣವಾದ ಆಚಾರಗಳನ್ನು ಅರಿಯದೆ, ಸೋಮವಾರ ಹುಣ್ಣಿವೆ ಅಮವಾಸ್ಯೆ ಎಂದು ಉಪವಾಸ ಮಾಡುವರು. ಮತ್ತು ಶಿವನಿಗೆ ಅರ್ಪಿತವೆನ್ನುವರು. ಆದರೆ ಷಡ್ರಿಪುಗಳನ್ನು ದೂರಮಾಡಲಾರರು. ತಾವು ಧರಿಸಿದ ಇಷ್ಟಲಿಂಗದಲ್ಲಿ ಲಿಂಗಾಂಗ ಸಾಮರಸ್ಯತ್ವವನ್ನು ಹೊಂದಲರಿಯದೆ ಊರ ಹೊರಗಿರುವ ದೇವರುಗಳೇ ಅಧಿಕವೆಂದು ನಂಬಿ ಅವುಗಳನ್ನು ಪೂಜಿಸಿ ಅವಕ್ಕೆ ನೈವೇದ್ಯವನ್ನು ಕೊಟ್ಟು ಅದು ಪ್ರಸಾದವೆಂದು ಭುಂಜಿಸುವರು, ಮತ್ತು ಪರಮಾತ್ಮನಿಗೆ ಅರ್ಪಿತವೆಂಬುವರು. ಇಂಥ ಜನರ ಸ್ಥಿತಿಯು ಹಂದಿಯು ಗಂಗಾ ನದಿಯಲ್ಲಿ ಮಿಂದು ಹೇಸಿಕೆಯನ್ನು ತಿಂದಂತೆಯೇ ಸರಿ ಎಂದು ವಚನಕಾರನು ಇಲ್ಲಿ ಅಂದಿರುವನು.

ವಚನಃ— ೧೬೦. ಕೇಳು ನೀನೆಲೊ ಮಾನವ, ಸೋಮವಾರ ಅಮವಾಸ್ಯೆ ಹುಣ್ಣಿವೆ ಎಂಬ ದೊಡ್ಡ ಹಬ್ಬಗಳು ಒಂದಿಹವೆಂದು ಮನೆಯ ಸಾರಿಸಿ ರಂಗವೋಲೆಯನಿಕ್ಕಿ ಆಸನವ ಬಲಿದು ಪತ್ರೆ ಪುಷ್ಪ ಮೊದಲಾದ ಅನಂತ ಸೌರಂಭವ ಸಪರಿಸಿ ವಿರಕ್ತನ ಕರೆತಂದು ಪೂಜೆಯ ಮಾಡುವದಕ್ಕಿಂತಲೂ ಹೊರೆಯಲ್ಲಿ ಚರಿಸಾಡುವ ಕಾಳ ಶುನಕನ ತಂದು ಅಗದ್ದುಗೆಯಲ್ಲಿ ಪೂಜೆ ಮಾಡುವುದು ಮಹಾ ಲೇಸಯ್ಯ. ಅದೇನು ಕಾರಣವೆಂದಡೆ, ಆಣವಮಲ ಮಾಯಾಮಲ ಕಾರ್ಮಿಕ ಮಲಕ್ಕೆ ಹೊರತೆಂದು ಅಷ್ಟಮದ ವಿರಹಿತನೆಂದು ಷಡ್ಗುಣವ ಸಂಹರಿಸಿದವನೆಂದು ಶಾಸ್ತ್ರದಲ್ಲಿ ಸಂಪನ್ನನೆಂದು ಕ್ರಿಯೆಯಲ್ಲಿ ವೀರಶೈವನೆಂದು ನಿರಾಭಾರಿ ಎಂದು ಬಾಯಿಲೆ ಬೊಗಳಿ ಲೌಕಿಕದಲ್ಲಿ ಮಠವ ಮಾಡಿಕೊಂಡು ಮಾನ್ಯವ ಸಂಪಾದಿಸಿಕೊಂಡು ಆಶನಕಾಶ್ರಯನಾಗಿ ವ್ಯಸನಕ್ಕೆ ಹರಿದಾಡಿ ವಿಷಯದಲ್ಲಿ ಕೂಡಿ ಸರ್ವವು ಎನಗೆ ಜೇಕೆಂದು ತಪೋ ಗುಣದಿಂದ ದ್ರವ್ಯವ

ಕೂಡಿಸಿ ವಿರತಿಸ್ಥಲವು ಹೆಚ್ಚೆಂದು ಕಾವಿಯ ಹೊದೆದು ಕೌಪೀನವ ಕಟ್ಟಿ ನೇಮ ಡಂಭಕದಿಂದೆ ತಿರುಗುವ ಭ್ರಷ್ಟರ ಮುಖವ ನೋಡಲಾಗದು. ಇಂತಪ್ಪ ವಿರತರ ಪೂಜೆಯ ಮಾಡುವದಕ್ಕಿಂತಲೂ ಕರೇ ನಾಯಿಯ ತಂದು ಪೂಜೆಯ ಮಾಡುವುದು ಮಹ ಲೇಸು ಕಂಡಯ್ಯ. ಪಂಚಾವ್ಯ ತವ ಮುಂದಿಟ್ಟರೆ ಕಣ್ಣು ನೋಡುವುದು, ದ್ರವ್ಯ ಮುಂದಿಟ್ಟರೆ ಕೈಯ್ಯಲಿ ಮುಟ್ಟುವುದು, ಎಂದು ಪೇಳುವ ವಿರತರ ನಾಲಿಗೆಯು ಆ ನಾಯ ಬಾಲಕ್ಕಿಂತಲು ಕರ ಕಷ್ಟವು. ಇಂತಹ ವಿರತರ ಪೂಜೆಯ ಮಾಡುವಾತನು ಆ ಜಂಗಮನು ಉಭಯತರ ಮೂಗು ಸವರಿ ಕತ್ತಿಯನೇರಿಸಿ ಕಡಿಹಾರಿಗಳ ಪಾದುಕೆಯಿಂದೆ ಪಡಪಡ ಹೊಡಿ ಎಂದಾತ ನಮ್ಮ ಅಂಬಿಗರ ಚೌಡಯ್ಯ ನಿಜ ಶರಣನು.

ಭಾವಃ— ಅನೇಕರು ಲಿಂಗಾಂಗಿಗಳು ಹೇಗೆ ಹೇಗೆ ಆಚರಿಸ ಬೇಕೆಂಬುದನ್ನು ಅರಿಯದೆ ಸೋಮವಾರ, ಅಮಾವಾಸ್ಯೆ, ಹಬ್ಬ, ಹುಣ್ಣಿಮೆ ಎಂದು ತಿಳಿದು ಆ ದಿನ ಮನೆಯನ್ನು ಸಾರಿಸಿ ವಿಶೇಷ ಸನ್ನಾಹವನ್ನು ಮಾಡಿ ವಿರಕ್ತರನ್ನು ಕರೆದುಕೊಂಡು ಬಂದು ಪೂಜೆ ಮಾಡುವರು. ಹೀಗೆ ಪೂಜೆಮಾಡುವವಕ್ಕಿಂತಲೂ ಊರಲ್ಲಿ ಚರಿಸಾಡುವ ಕರೇ ನಾಯಿಯನ್ನು ತಂದು ಗದ್ದುಗೆ ಹಾಕಿ ಅದನ್ನು ಪೂಜೆ ಮಾಡುವದು ಒಳಿತು ಎಂದು ವಚನಕಾರನು ಅಂದಿರುವನು. ಈ ವಿರಕ್ತನು ಬಾಯಲ್ಲಿ ಮಾತ್ರ ತಾನು ಪಡ್ರಿಪುಗಳನ್ನು ಸಂಹರಿಸಿದವನೆಂದು ಕ್ರಿಯೆಯಲ್ಲಿ ವೀರಶೈವನೆಂದು ನಿರಾಭಾರಿ ಎಂದು ಬೊಗಳಿಕೊಂಡು ಮಠಮಾನ್ಯಗಳನ್ನು ಹೇಗಾದರೂ ಸಂಪಾದಿಸಿಕೊಂಡು ವಿಷಯಗಳಲ್ಲಿ ಹೊರಳಾಡಿ ವೇಷ ಡಂಭಕದಿಂದ ತಿರುಗುತ್ತಾನೆ. ಇಂಥವನನ್ನು ಎಂದೂ ಪೂಜೆ ಮಾಡಲಾಗದು. ಈ ವಿರಕ್ತರು ವಸ್ತುಗಳನ್ನು ತೆಗೆದುಕೊಳ್ಳುವವರು ತಾವಲ್ಲ, ಆದರೆ ತಮ್ಮ ಕೈ ಅಥವಾ ಕಣ್ಣು ಮಾತ್ರ ಅನುಭವಿಸುತ್ತದೆ, ಎಂದು ಹೇಳುತ್ತಾರೆ. ಹೀಗೆ ಹೇಳುವವರ ನಾಲಿಗೆಯು ಆ ನಾಯ ಬಾಲಕ್ಕಿಂತಲೂ ಕರಕಷ್ಟವಾದದ್ದು. ಇಂಥ ವಿರಕ್ತರ ಪೂಜೆಯನ್ನು ಮಾಡುವವನೂ ಇಂಥ ವಿರಕ್ತರೂ ಚನ್ನಾಗಿ ಶಿಕ್ಷಿಸಲ್ಪಡಲಿಕ್ಕೆ ಯೋಗ್ಯರೆಂದು ವಚನಕಾರನು ಅಂದಿರುವನು.

ಜಾತಿಭೇದವಿಲ್ಲ.

ವಿವರಣೆಃ— ವೀರಶೈವರಲ್ಲಿ ಅನುವಂಶಿಕ ಭೇದಭಾವಗಳಿರುವದಿಲ್ಲ. ಇಂಥ ಭೇದಗಳೆಲ್ಲವೂ ದೀಕ್ಷೆಯಿಂದ ಹೊರಟುಹೋಗುವವು. ವೀರಶೈವನು ದೀಕ್ಷೆಯಿಂದ ಪುನರ್ಜಾತನಾಗಿ ಉಚ್ಚ ವೃತ್ತಿಯಿಂದ ಇರಬೇಕು. ಇಂಥವನಿಗೆ ಕುಲ, ಜಾತಿ, ವರ್ಣಗಳು ಏನೂ ಅಳಿಯಲಾರವು. ಈ ವಿಚಾರಗಳನ್ನು ವಚನಕಾರರೆಲ್ಲರೂ ತಮ್ಮ ವಚನಗಳಲ್ಲಿ ಮೇಲಿಂದಮೇಲೆ ಸಾರುವರು. ಅಂಬಿಗರ ಚೌಡಯ್ಯನಾದರೂ ಕೆಳಗಿನ ವಚನಗಳಲ್ಲಿ ಹೀಗೆಯೇ ವಿವರಿಸಿರುವನು.

ವಚನಃ— ೧೪೧. ಬೇಡಂಗೆ ಜೇಡಂಗೆ ಡೋಹರಂಗೆ ಹೊಲೆಯಂಗೆ ರೂಢಿಗೀಶ್ವರನೊಲಿದ ಪರಿಯ ನೋಡಾ! ಲೋಕದ ಮಾನವರು ಮಾಡುವರು ಸಮಯಂಗಳನು. ಮಾಡಲಿಕ್ಕೆ ಅವರೇನು ಸ್ವತಂತ್ರರೇ? ಇವನೊಡ್ಡಿದ ಠಾವಿನಲ್ಲಿ ಕಲ್ಲು ಮುಳ್ಳು ಮೂಡುವವೆಂದಾತ ನಮ್ಮ ಅಂಬಿಗರ ಚೌಡಯ್ಯನು.

ಭಾವಃ— ಪರಮಾತ್ಮನಲ್ಲಿ ಭೇದಭಾವವಿಲ್ಲ. ಮನುಷ್ಯನು ಎಂಥ ಜಾತಿ, ಕುಲ, ಗೊತ್ರ, ವರ್ಣದವನಿದ್ದರೂ ಪರಮಾತ್ಮನ ಪ್ರೀತಿಯು ಮತ್ತು ದಯೆಯು ಎಲ್ಲರ ಮೇಲೂ ಸರಿಯಾಗಿ ಇರುತ್ತದೆ. ಒಬ್ಬನು ಬೇಡನಿರಲಿ, ಜೇಡನಿರಲಿ, ಡೋಹರನಿರಲಿ, ಅವನಲ್ಲಿ ಸದ್ಗುಣ, ಸದಾಚಾರ, ಸದ್ಭಕ್ತಿಗಳಿದ್ದರೆ, ಪರಮಾತ್ಮನು ಅವನಿಗೆ ಒಲಿಯುವನೆಂದು ವಚನಕಾರನ ಭಾವವು. ಹೀಗೆ ಆದ ಉದಾಹರಣೆಗಳು ವೀರಶೈವ ಶರಣರಲ್ಲಿ ಮತ್ತು ಪುರಾತನರಲ್ಲಿ ಅನೇಕವಿವೆ. ಬೇಡರ ಕನ್ನಪ್ಪ, ಜೇಡರ ದಾಸಿಮಯ್ಯ, ಡೋಹರ ಕಕ್ಕಯ್ಯ, ಹರಳಯ್ಯ ಮೊದಲಾದವರಿಗೆ ಪರಮಾತ್ಮನು ಒಲಿದದ್ದನ್ನು ನೋಡಿರೆಂದು ವಚನಕಾರನು ಇಲ್ಲಿ ಅಂದಿರುವನು. ಆದರೆ ಜನತೆಯಲ್ಲಿ ಈ ರೀತಿಯು ಇರದೆ ಅನೇಕ ತರದ ಸಮಯಗಳು ತೋರಿಬರುವದುಂಟು. ಇವು ಪರಮಾತ್ಮನಿಗೆ ಒಪ್ಪಿಗೆಯಾದ ಪುಗಳಲ್ಲೆಂದು ವಚನಕಾರನು ಅಂದಿದ್ದಾನೆ. ಅವುಗಳನ್ನು ಲೋಕದ ಮಾನವರು ಮಾಡುವರು. ಹೀಗೆ ಅವುಗಳನ್ನು ಮಾಡಲಿಕ್ಕೆ ಅವರಿಗೇನು ಸ್ವಾತಂತ್ರ್ಯವು ಎಂದು ಇಲ್ಲಿ ಪ್ರಶ್ನಿಸಿದ್ದಾನೆ. ಈ ಪ್ರಕಾರ ಸಮಾಜದಲ್ಲಿ ಭೇದಭಾವಗಳನ್ನು ಕಲ್ಪಿಸಿದರೆ, ಅಲ್ಲಿ ಕಲ್ಲು, ಮುಳ್ಳುಗಳು

ಮೂಡುವವೆಂದು ಅಂದಿದ್ದಾನೆ. ಅಂದರೆ ಸಮಾಜದಲ್ಲಿ ಪ್ರೀತಿ, ವಿಶ್ವಾಸಗಳು ಹೊರಟುಹೋಗಿ ದ್ವೇಷಾಸೂಯೆಗಳು ಉಂಟಾಗುವವೆಂದು ವಚನಕಾರನ ಭಾವವು.

ವಚನಃ— ೧೪೨. ಕುಲಹೀನ ಶಿಷ್ಯಂಗೆ ಅನುಗ್ರಹವ ಮಾಡಿ ತಿರುಗಿ ಅವನ ಮನೆಯಲ್ಲಿ ಉಣ್ಣಬಾರದೆಂದು ಅಕ್ಕಿ ಕಣಕವ ಕೊಂಡು ಹೋಗುವ ಗುರುವಿನ ಕಂಡರೆ ಕೆಡವಿ ಹಾಕಿ ಮೂಗನೇ ಕೊಯ್ದು ಇಟ್ಟಂಗಿಯ ಕಲ್ಲಿಲೆ ಸಾಸಿವೆಯ ತಿಕ್ಕಿ ಹಿಟ್ಟನೆ ತಳಿದು ಮೇಲೆ ನಿಂಬಿಯ ಹುಳಿಯನೆ ಹಿಂಡಿ ಪಡುವಲ ಗಾಳಿಗೆ ಹಿಡಿ ಎಂದಾತ ನಮ್ಮ ಅಂಬಿಗರ ಚೌಡಯ್ಯನು.

ಭಾವಃ— ಅನೇಕರು ಭಕ್ತ ಭಕ್ತರಲ್ಲಿ ಭೇದವನೆಣಿಸಬಾರದು, ಅವರೆಲ್ಲರೂ ಒಂದು, ಆದರೆ ಗುರು ಭಕ್ತ ಇವರಲ್ಲಿ ಭೇದವಿದೆ ಎಂದು ಹೇಳುವದುಂಟು. ಆದರೆ ವೀರಶೈವ ಧರ್ಮದ ಪ್ರಕಾರ ಹೀಗೆ ಭಾವಿಸುವದು ತಪ್ಪೆಂದು ವಚನಕಾರನ ಅಭಿಪ್ರಾಯವಿದೆ. ಗುರು ಶಿಷ್ಯರು ಸಾಮರಸ ಭಾವದಿಂದಲೇ ಆಚರಿಸಬೇಕೆಂದು ಅವನ ಅಭಿಪ್ರಾಯ. ಗುರುವು ಒಬ್ಬನಿಗೆ ಅನುಗ್ರಹ ಮಾಡಿ ದೀಕ್ಷೆಯನ್ನು ಕೊಟ್ಟ ಬಳಿಕ, ಇವನು ಕುಲಹೀನನು, ಕೀಳ ಜಾತಿಯವನು ಎಂದು ತಿಳಿದು ಅವನ ಮನೆಯಲ್ಲಿ ಊಟ ಮಾಡದೆ ಅವನಿಂದ ಅಕ್ಕಿ ಕಣಕ ತೆಗೆದುಕೊಂಡು ಹೋಗಿ ತನ್ನ ಮನೆಯಲ್ಲಿ ಅಡಿಗೆ ಮಾಡಿ ಭುಂಜಿಸುವನು. ಇಂಥ ಗುರುವನ್ನು ಚನ್ನಾಗಿ ಶಿಕ್ಷಿಸಬೇಕೆಂದು ವಚನಕಾರನು ಇಲ್ಲಿ ಅಂದಿರುವನು.

ವಚನಃ— ೧೪೩. ಶೀಲವಂತರು ಶೀಲವಂತರು ಎಂದು ಶೀಲದಲ್ಲಿ ಆಡರಿಸುವ ಅಣ್ಣಗಳು ನಿಮ್ಮ ಶೀಲವಾವುದು ಹೇಳಿರೋ. ಅರಿಯದಿದ್ದರೆ ಕೇಳಿರೋ. ಶಿರಸ್ಸಿನಲ್ಲಿ ಶಿವನಿಪ್ಪ, ಕಟಿಯಲ್ಲಿ ವಿಷ್ಣುವಿಪ್ಪ, ಆಧಾರದಲ್ಲಿ ಬ್ರಹ್ಮನಿಪ್ಪ, ಲಲಾಟದಲ್ಲಿ ವಿಭೂತಿ, ರುದ್ರಾಕ್ಷಿ, ಜಿಹ್ವೆಯಲ್ಲಿ ಪಂಚಾಕ್ಷರಿಯು, ಇಂತಪ್ಪ ಅಷ್ಟಾವರಣದಲ್ಲಿ ಸವಿಯದೆ, ಸಂಸಾರವೆಂಬ ಶರಧಿಯಲ್ಲಿ ಮುಳಿಗೇಳುವರು ಶೀಲವಂತರಲ್ಲ. ಬರಿದೆ ನಾವು ಶೀಲವಂತರೆಂಬುವ ಮನುಜ ಕೇಳು. ಕಣ್ಣೇ ಕಂಚಗಾರ, ಕರ್ಣವೇ ಬಣಜಿಗ. ಮೂಗೇ ಈಳಿಗ, ಕೊರಳೇ ಕುಂಬಾರ, ತುಟಿಯೇ ಹೆಂಡಗಾರ, ಹಲ್ಲೇ ಕಲ್ಲುಕುಟಿಗ, ತಲೆಯೇ ವೋಸುಗಾರ, ಬೆನ್ನೇ ಜೇಡ, ಅಂಗಯ್ಯೇ ಅಕ್ಕಸಾಲಿಗ, ಮುಂಗೈಯೇ ಬಡಿಗ, ಕರವೇ ಕೋಮುಟಿಗ, ಕಣಕಾಲೇ

ಕಾಳಿಂಗಿ, ಕುಂಡಿಯೇ ಕುಡುವೊಕ್ಕಲಿಗ, ಒಳದೊಡೆಯೇ ಸವುಗಾರ, ಹೊರದೊಡೆಯೇ ಮಚ್ಚಿಗ, ಮೇಗಾಡಿ ಹೊಲೆಯ, ಬದ್ದಿಯೇ ಜೈಲಗಂಬಾರ, ಇಂತಪ್ಪ ಕುಲ ಹದಿನೆಂಟು ಜಾತಿ ಎಲು ಮಾಂಸವನು ತುಂಬಿಟ್ಟುಕೊಂಡು, ನನ್ನ ಕುಲ ಹೆಚ್ಚು ನಿನ್ನ ಕುಲ ಕಡಿಮೆ ಎಂದು ಹೊಡೆದಾಡುವಂತಹ ಅಣ್ಣಗಳನ್ನು ಹಿಡಿತಂದು ಮೂಗನೆ ಸವರಿ ಮೆಣಸಿನ ಹಿಟ್ಟು ತುಪ್ಪವ ತುಂಬಿ ನಮ್ಮ ಪಡಿಹಾರಿ ಉತ್ತಣ್ಣನ ವಾಮ ಪಾದುಕೆಯಿಂದ ಪಡಪಡನೆ ಹೊಡಿ ಎಂದಾತ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

ಭಾವಃ— ವೀರಶೈವರು ನಡತೆ ಆಚಾರ ಇವುಗಳಿಗೆ ಮಹತ್ವ ಕೊಟ್ಟಿರುವರು. ಆದರೆ ಅನೇಕರು ಈ ವಿಷಯದಲ್ಲಿ ಅತಿರೇಕವನ್ನು ಮಾಡಿಕೊಂಡು ಅನೇಕ ಬಗೆಯ ಕಠಿಣವಾದ ಶೀಲಗಳನ್ನು ಆಚರಿಸಿ ತಾವು ಶೀಲವಂತರು, ತಾವು ಶ್ರೇಷ್ಠರು, ಎಂದು ಹೆಸ್ಮೆ ಪಡುವರು. ಇಂಥವರನ್ನೂ ಕೂಡ ಅಂಬಿಗರ ಚೌಡಯ್ಯನು ಇಲ್ಲಿ ಹಳಿದಿರುವನು. ಇಂಥವರಾದರೂ ಕೇವಲ ಸಂಸಾರಿಗಳು ಮತ್ತು ಪ್ರಾಪಂಚಿಗಳು ಎಂದು ಕಂದಿರುವನು. ವೀರಶೈವರಾದವರು ಅಷ್ಟಾವರಣಗಳ ಮರ್ಮವನ್ನು ತಿಳಿದು ಆಚರಿಸತಕ್ಕದ್ದು. ಇಂಥವರ ಶಿರಸ್ಸಿನಲ್ಲಿ ಶಿವನಿರುವನು. ಕಟಿಯಲ್ಲಿ ವಿಷ್ಣುವಿರುವನು. ಆಧಾರದಲ್ಲಿ ಬ್ರಹ್ಮನಿರುವನು. ಇವರು ಲಲಾಟದಲ್ಲಿ ವಿಭೂತಿಯನ್ನೂ ಕೊರಳಲ್ಲಿ ರುದ್ರಾಕ್ಷಿಯನ್ನೂ ಧಾರಣ ಮಾಡಿಕೊಂಡು ಜಿಹ್ವೆಯಲ್ಲಿ ಪಂಚಾಕ್ಷರಿಯನ್ನು ಉಚ್ಚರಿಸುವರು. ಆದರೆ ಹೀಗೆ ವರ್ತಿಸದೆ ಬರೇ ಬಾಹ್ಯ ಆಚರಣೆಗಳನ್ನು ಮಾತ್ರ ಆಚರಿಸಿ ಸಂಸಾರವೆಂಬ ಶರಧಿಯಲ್ಲಿ ಮುಳಿಗೇಳುವರು. ಇವರು ಶೀಲವಂತರಲ್ಲ. ವೀರಶೈವರಲ್ಲಿ ಜಾತಿಭೇದಗಳಿರುವದಿಲ್ಲ. ಜಾತಿಭೇದಗಳಿವೆ ಎಂದು ಎಣಿಸಿದರೆ ಆ ಜಾತಿಗಳೆಲ್ಲವೂ ಬೇರೆ ಇಲ್ಲ, ಮನುಷ್ಯನ ದೇಹದಲ್ಲಿಯೇ ಇವೆ ಎಂದು ಅಂದಿರುವನು. ಅದು ಹೇಗೆಂದರೆ, ನಿಮ್ಮ ಕಣ್ಣು ಕಂಚಗಾರ, ಕಿವಿ ಬಣಜಿಗ, ಮೂಗು ಈಳಿಗ, ಕೊರಳು ಕುಂಬಾರ, ತುಟಿ ಹೆಂಡಗಾರ, ಹಲ್ಲು ಕಲ್ಲುಕುಟಿಗ, ತಲೆ ಭಾರಕೊರುವವ, ಬೆನ್ನು ಜೇಡ, ಅಂಗಯ್ಯು ಅಕ್ಕಸಾಲಿಗ, ಮುಂಗಯ್ಯು ಬಡಿಗ, ಕರ ಕೋಮಟಿಗ, ಕಣಕಾಲು ಕಾಳಿಂಗಿ, ಪುಚ್ಛವು ಕುಡುಪೊಕ್ಕಲಿಗ, ಒಳಡೊಡೆಯು ಸವುಗಾರ, ಹೊರದೊಡೆಯು ಮಚ್ಚಿಗ, ಮೇಗಾಡಿ ಹೊಲೆಯ, ಬದ್ದಿಯು ಜೈಲಗಂಬಾರ ಹೀಗೆ ಅನೇಕ ಕೀಳು ಜಾತಿಗಳು ತನ್ನಲ್ಲಿಯೇ ಇವೆ.

ತ್ಯಾಜ್ಯವಾದ ಎಲುವೂ ಮಾಂಸವೂ ಸಹ ತನ್ನಲ್ಲಿಯೇ ಇವೆ. ತೆರದ ಸ್ಥಿತಿಯನ್ನು ಲಕ್ಷಿಸದೆ, ನನ್ನ ಜಾತಿ ಹೆಚ್ಚು, ನಿನ್ನ ಜಾತಿ ಕಡಿಮೆ ಎಂದು ಹೊಡೆದಾಡುವ ಜನರನ್ನು ಚನ್ನಾಗಿ ಶಿಕ್ಷಿಸಬೇಕೆಂದು ವಚನಕಾರನು ಖಂಡಿರುವನು.

ವಚನಃ— ೧೬೪. ಕಷ್ಟನ ಮನೆಯಲ್ಲಿ ಸೃಷ್ಟಿಗೀಶ್ವರನಂಬಾಗ ಎತ್ತ ಹೋದವೋ ನಿಮ್ಮ ಶಾಸ್ತ್ರಂಗಳು? ಕೆತ್ತ ಮುಚ್ಚಳು ಬೇಡಂಗೆ. ತೆರವಾಗ ಇಕ್ಕಿದ ಜನ್ನಿವಾರ ಬೀಯವಾದವು! ಮುಕ್ಕುಳ್ಳಿಸಿದ ನೀರ ತಂದೆ ದಡೆ, ಎತ್ತಲಿಪ್ಪವು ನಿಮ್ಮ ವೇದಂಗಳು? ನಿಮ್ಮ ದುಃಖ ಬೇಡೆಂದಾತ ಅಂಬಿಗಚೌಡಯ್ಯ.

ಭಾವಃ— ಜನರು ಇಂಥಿಂಥವರ ಮನೆಯಲ್ಲಿ ಉಣ್ಣಬಾರದೆಂದು ನಿರ್ಬಂಧಿಸುತ್ತಲಿರುವರು. ಆದರೆ ಅತ್ಯಂತ ಕೀಳುಜಾತಿಯವನಾದ ಮಾದರ ಚನ್ನಯ್ಯನ ಮನೆಯಲ್ಲಿ ಪರಮಾತ್ಮನು ಉಂಡಿರುತ್ತಾನೆ. ಹೀಗೆ ಉಣ್ಣುವ ಕಾಲಕ್ಕೆ ನಿಮ್ಮ ವೇದಗಳು ಎತ್ತ ಹೋದವೆಂದು ವಚನಕಾರನು ಕೇಳುತ್ತಾನೆ. ಅಡಿಗೆಯ ಮಡಿಕೆಯು ಮುಚ್ಚಳು ಬೇಡನ ಕಣ್ಣಿಗೆ ತೆರೆಯುವಾಗ ಹಾಕಿದ ಯಜ್ಞೋಪವೀತಗಳೆಲ್ಲವೂ ನಷ್ಟವಾದವು. ಅಂದರೆ ಬ್ರಾಹ್ಮಣರ ಶ್ರೇಷ್ಠತೆಯು ಹೊಂಟುಹೋಯಿತು. ಹಾಗೆಯೇ ಬಾಯೊಳಗೆ ಹಾಕಿದ ನೀರಿನಿಂದ ಲಿಂಗದ ಮೇಲೆ ಕಣ್ಣಪ್ಪನು ಅಭಿಷೇಕಮಾಡುವಾಗ ನಿಮ್ಮ ವೇದಂಗಳು ಎಲ್ಲಿ ಇದ್ದವು? ಅಂದರೆ ಜನರು ಬಾಹ್ಯಾಚರಣೆಯು ಸಲುವಾಗಿ ಬಹಳ ಕಷ್ಟಪಡಬಾರದೆಂದು ವಚನಕಾರನು ಇಲ್ಲಿ ಹೇಳಿರುವನು.

ವಚನಃ— ಹೊಲೆಯ ಹೊಲೆಯ ಎಂದಡೆ ಹೊಲೆಯರೆಂತಪ್ಪರಯ್ಯ? ಹೊಲೆಯ ಹೊರಕೇರಿಯಲ್ಲಿರುವನು. ಊರೊಳಗಿಲ್ಲವಯ್ಯ ಹೊಲೆಯರು? ತಾಯಿಗೆ ಬೈದವನೇ ಹೊಲೆಯ, ತಂದೆಗೆ ಉತ್ತರ ಕೊಟ್ಟವನೇ ಹೊಲೆಯ, ತಂದೆಗೆ ಬೈದವನೇ ಹೊಲೆಯ, ಕೊಡುವ ದಾನಕ್ಕೆ ಅಡ್ಡ ಬಂದವನೇ ಹೊಲೆಯ, ನಡೆವ ದಾರಿಂಗೆ ಮುಳ್ಳ ಹಚ್ಚಿದವನೇ ಹೊಲೆಯ, ಬ್ರಾಹ್ಮಣನ ಕುತ್ತಿಗೆಯ ಕೊಯ್ದವನೇ ಹೊಲೆಯ, ಹತ್ತು ಆಡಿದರೆ ಒಂದು ನಿಜವಿಲ್ಲದವನೇ ಹೊಲೆಯ, ಅರ್ಥಕ್ಕೆ ಪ್ರಾಣಹತ್ಯ ಮಾಡುವನೇ ಹೊಲೆಯ, ಚಿತ್ತದಲ್ಲಿ ಪರಸತಿಯ ಬಯಸಿದವನೆ ಹೊಲೆಯ, ಲಿಂಗಮುದ್ರೆಯ ಕಿತ್ತಿದವನೇ ಹೊಲೆಯ, ಲಿಂಗವ ಬಿಟ್ಟು ತಿರುಗುವವನೇ ಹೊಲೆಯ, ಧರ್ಮದ ನಿಂದೆಯ ಮಾಡುವವನೇ ಹೊಲೆಯ, ಧರ್ಮವ ಮಾಡದವನೇ ಹೊಲೆಯ, ಬಸವನ ಕೊಂದವನೇ ಹೊಲೆಯ, ಬಸವನ ಇರಿದವನೇ ಹೊಲೆಯ, ಲಿಂಗಪೂಜೆಯ ಮಾಡದವನೇ ಹೊಲೆಯ, ಇಂತಪ್ಪ ಹೊಲೆಯರು ಊರ ತುಂಬ ಇರಲಾಗಿ, ಹೊರಕೇರಿಯವರಿಗೆ ಹೊಲೆಯ ಸಲಬಹುದೆ? ಹೊಲೆಯ ಹುಟ್ಟಿದ ಮೂರು ದಿನಕ್ಕೆ ಪಿಂಡಕ್ಕೆ ನೆಲೆಯಾಯಿತ್ತು. ಹಿಪ್ಪೆಯನುಂಡ ತೊಗಲು ಹರಗೋಲವಾಯಿತ್ತು. ಗುರುಗಳಿಗೆ ಚವ್ಮಾವುಗೆಯಾಯಿತ್ತು ಹೂಡಲಿಕ್ಕೆ ಮಿಣಿಯಾಯಿತ್ತು. ಹೊಡೆಯಲಿಕ್ಕೆ ಬಾಂಕೋಲವಾಯಿತ್ತು. ಬಂಡಿಗೆ ಮಿಣಿಯಾಯಿತ್ತು. ಅರಸಂಗೆ ಮೃದಂಗವಾಯಿತ್ತು. ತೋಲು ನಗಾರಿಯಾಯಿತ್ತು. ತುಪ್ಪ ತುಂಬಲಿಕ್ಕೆ ಸಿದ್ದಲಿಕೆ, ಎಣ್ಣೆ ತುಂಬಲಿಕ್ಕೆ ಬುದ್ದಲಿಕೆ, ಸಿದ್ದಲಿಕೇನ ತುಪ್ಪ, ಬುದ್ದಲಿಕೇನ ಎಣ್ಣೆ, ಕಲ್ಲಿ ಶೆಟ್ಟಿ ಮಲ್ಲಶೆಟ್ಟಿಗಳು ಕೂಡಿ, ನಾ ಶೀಲವಂತ, ತಾ ಶೀಲವಂತ ಎಂದು ಶುದ್ಧೈಸಿಕೊಂಡು ತಿಂದು ಬಂದು ಜಗಳ ಬಂದಾಗ ನಿನ್ನ ಕುಲ ಹೆಚ್ಚು, ನಿನ್ನ ಕುಲ ಹೆಚ್ಚುಕಡಿಮೆ ಎಂದು ಬಡಿದಾಡುವ ಕುನ್ನಿ ನಾಯಿಗಳ ಮೋರೆ ಮೋರೆಯ ಮೇಲೆ ನಮ್ಮ ಪಡಿಹಾರಿ ಉತ್ತಣ್ಣಗಳ ವಾಮ ಪಾದುಕೆಯ ಕೊಂಡು ಅವರ ಅಂಗುಳ ಮೆಟ್ಟಿ ಪಡಪಡನೆ ಹೊಡಿ ಎಂದಾತ ನಮ್ಮ ದಿಟ್ಟ ಅಂಬಿಗರ ಚೌಡಯ್ಯ ನಿಜಶರಣನು.

ಭಾವಃ— ಬಹು ಜನರು ಹೊಲೆಯ ಹೊಲೆಯು ಎಂದು ಅತ್ಯಂತ ತಿರಸ್ಕಾರ ಮತ್ತು ಹೇಯಭಾವದಿಂದ ನುಡಿಯುವರು. ಹೊಲೆಯರು ಊರ ಹೊರಗಿರುತ್ತಾರೆಂದು ಅನ್ನುವಿರಿ. ಅದು ಹಾಗಲ್ಲ, ಹೊಲೆಯರು ಊರೊಳಗೇ ಇರುತ್ತಾರೆಂದು ವಚನಕಾರನು ಅನ್ನುತ್ತಾನೆ. ಯಾರು ದುರ್ಗುಣವುಳ್ಳವರಾಗಿ ದುರ್ಮಾರ್ಗವಲ್ಲಿ ವರ್ತಿಸಿ ಜನರಿಗೆ ಬೇಡಾಗಿ ಇರುತ್ತಾರೋ, ಅವರೇ ಹೊಲೆಯರೆಂದು ಅವನು ಇಲ್ಲಿ ನುಡಿದಿರುವನು. ಅಂದರೆ ತಾಯಿ ತಂದೆಗಳಿಗೆ ಬಯ್ಯುವವರು ಮತ್ತು ಇದಿರುತ್ತರ ಕೊಡುವವರು, ನಡುದಾರಿಗೆ ಮುಳ್ಳು ಹಚ್ಚುವವರು, ಬ್ರಾಹ್ಮಣನನ್ನು ಕೊಂದವರು, ಹತ್ತನಾಡಿದರೂ ಅವರಲ್ಲಿ ಒಂದಾದರೂ ನಿಜವಿಲ್ಲದವರು, ದುಡ್ಡಿನಾಸೆಗಾಗಿ ಪ್ರಾಣ ಹಿಂಸೆ ಮಾಡುವವರು, ಚಿತ್ತದಲ್ಲಿ ಪರಸತಿಯ ಬಯಸುವವರು, ಲಿಂಗಮುದ್ರೆಯನ್ನು ಕಿತ್ತಿದವರು, ಲಿಂಗಧಾರಣವಿಲ್ಲದೆ ತಿರುಗುವವರು, ಧರ್ಮನಿಂದೆ ಮಾಡುವವರು, ದಾನಧರ್ಮ ಮಾಡದವರು, ದಾನವನ್ನು ಕೊಂದವರು, ಮತ್ತು ಹೊಡೆಯುವವರು, ಲಿಂಗಪೂಜೆ ಮಾಡ

ವರು ಇವರೆಲ್ಲರೂ ಹೊಲೆಯರು ಎಂದು ಹೇಳಿ, ಇಂಥ ಹೊಲೆಯರು ಊರ ತುಂಬ ಇದ್ದಾರೆ, ಇವರೇ ನಿಜವಾದ ಹೊಲೆಯರು ಎಂದು ವಚನಕಾರನು ಅನ್ನುತ್ತಾನೆ. ಅದರಂತೆಯೇ ಜನರು ಸ್ಪೃಶ್ಯಾಸ್ಪೃಶ್ಯ ಭಾವವುಳ್ಳವರಾಗಿ ಮುಟ್ಟುಚಟ್ಟನಿಂದ ಆಚರಿಸುತ್ತಾರೆ. ಆದರೆ ಮಾನವರೆಲ್ಲರೂ ಹೊಲೆಯಿಂದಲೇ ಹುಟ್ಟುವದಿಲ್ಲವೇ? ಆದ್ದರಿಂದ ಅವರೆಲ್ಲರೂ ಹೊಲೆಯರೆಂದೆನ್ನಬೇಕಾಗುವದು. ಅದರಂತೆಯೇ ಹೊಲೆಯರು ತೊಗಲು ಹಿಡಿಯುವದರಿಂದ ಅವರು ನೀಚ ಕುಲದವರೆಂದು ಅನ್ನುವದುಂಟು. ಆದರೆ ಆ ತೊಗಲಿನಿಂದಲೇ ಹರಗೋಲಾಗಿ ಅದರಲ್ಲಿ ಜನರು ಕುಳಿತುಕೊಂಡು ನದಿಯನ್ನು ದಾಟುತ್ತಾರೆ. ತಾವು ಉಚ್ಚ ಸ್ಥಳದವರೆಂದು ಹೇಳಿಕೊಳ್ಳುವ ಗುರುಗಳು ಅದರಿಂದ ಮಾಡಿವ ಮಜ್ಜಿಗಳನ್ನು ಪೆಟ್ಟಿಕೊಂಡು ಅಡ್ಡಾಡುತ್ತಾರೆ. ತೊಗಲು ಹೊಲಗಷ್ಟದಲ್ಲಿ ಹೂಡಲಿಕ್ಕೆ ಮೊಣಿ, ಹೊಡೆಯಲಿಕ್ಕೆ ಬಾರಕೋಲು, ಬಂಡಿಗೆ ಮಿಣಿಯಾಗಿ ಹೀಗೆ ಅದರ ಮೂಲಕ ಹೊಲದಿಂದ ಬಂದ ಧಾನ್ಯವನ್ನು ನಾವು ಉಣ್ಣುತ್ತೇವೆ. ಹಾಗೆಯೇ ಯಾರನ್ನು ನಾವು ಅತ್ಯಂತ ಆದರಭಾವದಿಂದ ಕಾಣುತ್ತೇವೋ ಅಂಥ ಅರಸರಿಗೆ ಅದು ಮೃದಂಗವೂ ನಗಾರಿಯೂ ಆಗುತ್ತದೆ. ಹಾಗೆಯೇ ತುಪ್ಪ ತುಂಬಲಿಕ್ಕೆ ಸಿದ್ದಲಿಕೆ, ಎಣ್ಣೆ ತುಂಬಲಿಕ್ಕೆ ಬುದ್ದಲಿಕೆಯಾಗಿ ಇಂಥ ತುಪ್ಪ ಎಣ್ಣೆಯನ್ನು ಶ್ರೇಷ್ಠ ಕುಲದವರೆಂದು ಹೇಳಿಕೊಳ್ಳುವ ನಮ್ಮಶೆಟ್ಟಿಗಳು ತಾವು ಶೀಲವಂತರು ತಾವು ಶೀಲವಂತರು ಎಂದು ಹೆಮ್ಮೆಬಡುತ್ತ ತಿಂದು ಜಗಳ ಬಂದಾಗ ಮಾತ್ರ ನನ್ನ ಕುಲ ಹೆಚ್ಚು ನಿನ್ನ ಕುಲ ಕಡಿಮೆ ಎಂದು ಬಡಿದಾಡುತ್ತಾರೆ. ಇಂಥ ನಾಯಿ ಜಾತಿಯವರನ್ನು ಚನ್ನಾಗಿ ತಲಿಸಬೇಕೆಂದು ವಚನಕಾರನು ಅನ್ನುತ್ತಾನೆ. ಹೀಗೆ ಆಚರಿಸುವವರೇ ಹೂಲೆಯರೆಂದು ಅವನ ಅಭಿಪ್ರಾಯ.

ವಚನಃ— ೧೪೬. ಶುಕ್ಲಶೋಣಿತ ಪಿಂಡದಲ್ಲಿಯೇ ಉತ್ಪತ್ತಿ. ಚಿತ್ರ ನಾಯು ಪ್ರಾಣ ಅಷ್ಟದಳ ಪದ್ಮದಲ್ಲಿಹುದು. ಹೊಲೆ ಮುಡಿ ಮೂಡಿವರೆ ಹೆಣ್ಣೆಂಬರು. ಗಡ್ಡಮೀಸೆಯಾಗಲು ಗಂಡೆಂಬರು. ನಡುವೆ ಸುಳಿವಾತನು ಹೆಣ್ಣಲ್ಲ ಗಂಡಲ್ಲ. ಇದರಂತುವ ತಿಳಿಯಲ್ಕೆ ಶ್ರುತಿಗಗೋಚರವೆಂ ದಾತನಂಬಿಗರ ಚೌಡಯ್ಯ.

ಭಾವಃ— ಯಾವ ಪ್ರಕಾರ ಜಾತಿಭೇದವನ್ನು ವೀರಶೈವರು ಎಣಿಸ ತಕ್ಕದಲ್ಲವೋ ಹಾಗೆಯೇ ಅವರು ಸ್ತ್ರೀಪುರುಷ ಭೇದವನ್ನೂ ಎಣಿಸಕೂ

ನಿಸ್ಸಾಳಧ್ವನಿ ದಂವಳ ದಳವೆನೆ
ನಿಸ್ಸೇಷಧ್ವನಿ ಭರದಿಂ ಘೋರೆನೆ
ವಾದ್ಯಧ್ವನಿ ಸೋಜಿಗವೆನೆ ನೆಗೆದವು
ಜೋದ್ಯಂ ಪುಟ್ಟಲ್ತರದಿಂದೊಗೆದವು
ತಂದೋಂ ಧಿತ್ತೋಂ ಧೋಂ ಮೆಂದೆನುತಂ
ದಿಂ ದಿಂ ಧಿಮಿಧೀ ಧಿಮಿತೆಂದೆನುತಂ
ದುಮುದುಮು ತಶ್ತೋಂ ತತ್ತೋಂಗೆನುತಂ
ಚಮಕಂ ತಕನ ಕತಕ ಎಂದೆನುತುಂ
ಝುಂ ಝುಂ ಝುಂ ಝುಂ ತಕತಕ ಎನುತುಂ
ಝುಂ ಝುಂ ದಿಕ್ಕಟ ತಕ್ಕಟ ಎನುತುಂ
ತಂದ್ರಂ ದಿಕ್ಕಟ ದಿಕ್ಕಟ ಎನುತುಂ
ಝೂಂದ್ರಂಕಟ ಝೂಂದ್ರೊಂಕಟ ಎನುತುಂ
ಸಂಗೀತಧ್ವನಿಯುಮ್ಮಳಿಸುತ್ತಲ್
ಜಂಗಮನಾದಂ ನಭವಂ ಮುಟ್ಟಲ್
ಜಗ ವೊರ್ಗುಡಿಸಲುಘೇ ಎಂದೆನುತುಂ
ಬಗೆ ವಿಗೆ ಶರಣರ್ಜಯಜಯ ಎನುತುಂ

ಕೈಕೊಳ ರವಕಾರಿಗಳೊಂದೆಸೆಯೊಳ್
ಬೈಕೆಯ ಸತಿಯರ ಸಾಲೊಂದೆಸೆಯೊಳ್
ಜೋಳಾದಿಗಳೊರ್ಬಳಿಯೊಂದೆಸೆಯೊಳ್
ಜೋಳ ಸಚಿವ ಸಂತತಿಯೊಂದೆಸೆಯೊಳ್
ತುರುಗಾವಳಿಗಳ್ತಾವೊಂದೆಸೆಯೊಳ್
ಕರಿಘಟಿಗಳ್ತರದಿಂದೊಂದೆಸೆಯೊಳ್
ಪೊನ್ನರಥಂಗಳ್ಬೀರೊಂದೆಸೆಯೊಳ್
ರನ್ನದ ನಡೆವನೆ ಬೇರೊಂದೆಸೆಯೊಳ್
ಅರಸು ಮಕ್ಕಳುಂ ನೆರೆದೊಂದೆಸೆಯೊಳ್
ಸಿರಿವಂತರ ನೆರೆ ಒಂದೊಂದೆಸೆಯೊಳ್
ವ್ಯವಹಾರಿಗಳಿರೆ ತಾ ಒಂದೆಸೆಯೊಳ್
ತವೆ ಸಾಹಸದಾಳ್ಗಳು ಒಂದೆಸೆಯೊಳ್

ಬೆಟ್ಟವನೇರಿಯೆ ನೋಡುತಲಿರ್ಪರ್
ನಟ್ಟದೊಳಿಲ್ಲಂ ನೋಡುತಲಿರ್ಪರ್
ಪಡುಗುಗಳೇರಿಯೆ ನೋಡುತ್ತಿರ್ಪರ್
ನಡೆ ಭೈತ್ರದೊಳುಂ ನೋಡುತ್ತಿರ್ಪರ್
ಮುಗಿಲೇರಿಯೆ ನಡೆ ನೋಡುತ್ತಿರ್ಪರ್
ಮುಗಿಲಂ ಮುಟ್ಟುವ ಮಾಡದೊಳಿರ್ಪರ್
ಮನೆಮನೆಗಳ ನೆಲೆಮಾಡದೊಳಿರ್ಪರ್
ಘನನಿಳಯಂಗಳ ಭದ್ರದೊಳಿರ್ಪರ್
ವೇದಿಕೆಗಳ ಮೇಲಂ ತೀವಿರ್ಪರ್
ವಾವಂತ ರತ್ನಸ್ತಂಭದೊಳಿರ್ಪರ್

ತಿರುವೀಥಿಯೊಳೆಡೆ ಇಲ್ಲೆಡೆ ಯಿಲ್ಲಂ
ಕರುಮಾಡದೊಳೆಡೆ ಯಿಲ್ಲೆಡೆಯಿಲ್ಲಂ
ತರುವನದೊಳಗೆಡೆ ಯಿಲ್ಲೆಡೆಯಿಲ್ಲಂ
ಗಿರಿಕುಲಿದೊಳಗೆಡೆ ಯಿಲ್ಲೆಡೆಯಿಲ್ಲಂ
ನೆಲದೊಳ್ನಭದೊಳಗಿಲ್ಲೆಡೆ ಇಲ್ಲಂ
ಜಲದೊಳ್ಜಗದೊಳಗಿಲ್ಲೆಡೆ ಇಲ್ಲಂ
ಏನೆಂಬೇಂ ಶಿವಶಿವ ತಿರುನಾಳಂ
ಏನೆಂಬೇಂ ಹರಹರ ತಿರುನಾಳಂ
ಇಂತಿರುತಿರಲೊಪ್ಪಿಡಿದಿಡಿದೆಡೆಯೊಳ್
ಅಂತಿಂತೆನಬಾರದ ಸಂದಣಿಯೊಳ್
ಕೆಲಬಲನರಿಯಲ್ಕೀನೆಂದರಿಯಂ
ತಲೆಯುಳಿಯಲ್ಕೊಡದೇನೆಂದರಿಯಂ
ನೆರೆ ನೆರೆದೀ ಕ್ಷೋಭಂ ನೆರೆ ಮಸಗಲ್
ಹರಹರ ಶಿವನಾನಂದಂ ಮಸಗಲ್
ಮುತ್ತಿನ ಮಂಟಪವತ್ತಿಂತೊಲೆಯಲ್
ಮೆತ್ತನೆ ಮೆಲ್ಲನೆಯೊಂದಡಿ ನಡೆಯಲ್

ಕೈಮುಗಿದುವು ಕಮಳ ವನವಿದೆಂದೆನೆ
ಮೈನಿಕ್ಕುವು ಪುಳಕಂಗಳಿವೆಂದೆನೆ

ಹೃದಯ ಕಮಲದೊಳಗೆಯ್ತರ್ಪನ್ನಂ
ಹೃದಯ ಕಮಲವಿರಲಾರದೆ ಮುನ್ನಂ
ಮಸ್ತಕದೊಳ್ಪರದಿಂ ಮೂಡಿದವೆನೆ
ಹಸ್ತಂಗಳ್ಮುಗಿದಿರ್ದವು ಜೋಂಕೆನೆ
ಇರೆ ಶಿವನಂ ಸತಿಯರ್ಸೆರೆ ಕಾಣುತೆ
ಹರಹರ ಎಡಹುತೆ ತಾಗುತೆ ಪರಿಯುತೆ
ಅಡಿ ಎನ್ನಡಿ ಎಂಬಂದಂ ಗಾಣೋ
ಅಡಿ ಎನ್ನಡಿ ಎನ್ನಿಂದಂ ಗಾಣೋ
ಗುಡಿಗಟ್ಟಿಂ ಗುಡಿಗಟ್ಟಿಂ ಶಿವಶಿವ
ಗುಡಿವಾಳ್ದೇಂ ಗುಡಿವಾಳ್ದೇಂ ಶಿವಶಿವ
ಓಹೋ ಓಹೋ ಕಣ್ಣಿಕ್ಕಿನಿಯನೆ
ಓಹೋ ಓಹೋ ಮನವಿಕ್ಕಿನಿಯನೆ
ಎನುತುಂ ತಮ್ಮೊಳ್ಗುಣುಗುಟ್ಟುತೆ
ಮನದೊಳ್ಮೆಚ್ಚುತೆ ಮೊಗಮಂ ನೋಡುತೆ
ಲಿಕ್ಕಿಸಲಾರದೆ ಶಿವ ಸದ್ರೂಪಂ
ಉಕ್ಕುವ ನೇಹದೊಳಭವನ ರೂಪಂ
ನೋಡುತೆ ಕೆಯ್ಗಳನೆತ್ತುತೆ ಮುಗಿಯುತೆ
ಆಡುತೆ ಪಾಡುತೆ ಶಿವನಂ ಪರಸುತೆ

ಒಪ್ಪುವ ಮುತ್ತೈದೆಯರಿಕ್ಕೆಗಳಂ
ಇಪ್ಪಸರದ ಕವಿಗಳ ತಕ್ಕೈಗಳಿಂ
ತಿರುಪಾಡೋದುತೆ ತಲೆದೂಗುವರಿಂ
ಹರಹರ ಎನುತುಂ ಕಳವಳಿಸುವರಿಂ
ಕಯ್ಯೆತ್ತಿಯೆ ಕರೆಯುತ್ತಿರ್ಪವರಿಂ
ಮೆಯ್ಯಿಕ್ಕಿಯೆ ಮಣಿಯುತ್ತಿರ್ಪವರಿಂ
ಪುಳಕಾವಳಿಯಂ ಹೇರಿರ್ಪವರಿಂ
ಬಳಸುವ ಬೆಮರಿಂ ಗದುಗದಿಸುವರಿಂ
ಅರಲಂ ಸೂಸುತೆ ಪೊಡೆಮಡುವವರಿಂ
ಬೆರಳಂ ಕಚ್ಚುತೆ ಲಲ್ಲೈಸುವರಿಂ
ಕಣ್ಣಂ ಕಳೆದು ನಿವಾಳಿಸುವವರಿಂ

ಕಣ್ಣಂ ಕಳೆದಾಗಳೆ ಪಡೆವವರಿಂ
ಆನಂದವ ಜಲ ತೀವಿರ್ಪವರಿಂ
ನಾನಾ ಚೇಷ್ಟೆಗಳಿಂದಿರ್ಪವರಿಂ
ಒತ್ತುವ ಸುತ್ತುವ ದೇವರಡಿಯರಿಂ
ಮುತ್ತುವ ಮಣೆದಾಡುವ ಪಡಿಯರರಿಂ
ಹಿಂದೆ ಚತುರ್ವೇದವ ಹಾದಿಗಳಿಂ
ಮುಂದೆ ಗಣಂಗಳ ತಿರುವೀಧಿಗಳಿಂ
ಕೆಲದೊಳ್ಕಿರೆವ ಮಹಾದೇವಿಯರಿಂ
ಬಲದೊಳ್ಪಯಸುವ ಮಾಹೇಶ್ವರರಿಂ
ಪೊನ್ನಾಂಬಲದಧಿಪತಿಯೊಪ್ಪಿರ್ದಂ
ಪೊನ್ನಾಂಬಲದುನ್ನತಿಯೊಪ್ಪಿರ್ದಂ
ಪೊನ್ನಾಂಬಲದರಸಂ ಮೆರೆದಿರ್ದಂ
ಪೊನ್ನಾಂಬಲನಾಥಂ ಮೆರೆದಿರ್ದಂ

ಇಂತಿರೆ ಮೂಡಣ ಬಾಗಿಲ ದೆಸೆಯೊಳ್
ಸಂತಂ ನೆರೆದುದು ಶಿವಸನ್ನಿಧಿಯೊಳ್
ಧರಣಿಯೊಳಗೆ ಪಿರಿಯರ್ಗಂ ಪಿರಿಯರ್
ಪುರದೊಳ್ನೆರೆ ಪಿರಿಯರ್ಗಂ ಪಿರಿಯರ್
ಹಿರಿಯ ಮಹೇಶ್ವರರೊಂದಾಗಿರುತಿರೆ
ತಿರುನಾಳ್ಪೋಪರ್ಕುಣಿದಾಡುತ್ತಿರೆ
ನುಡಿಸಿದೊಡರಿಯದೆ ಮುಟ್ಟಿದೊಡರಿಯದೆ
ಎಡಹಿದೊಡರಿಯದೆ ತಾಗಿದೊಡರಿಯದೆ
ದೇವರನರಿಯದೆ ತಿರುನಾಳರಿಯದೆ
ಅವುದುಮಂ ಮನದೊಳಗರಿಯದೆ
ನಾನಾ ಪರಮೋತ್ಸಾಹದಿನರಿಯದೆ
ತಾನೆಂದರಿಯದೆ ಇದಿರೆಂದರಿಯದೆ
ಬೀಗುತೆ ಬಿಕ್ಕುತೆ ತೂಗುತೆ ತೊನೆವುತೆ
ತೇಗುತೆ ತಣಿವುತೆ ತವೆ ಸುಖವೇರುತೆ
ಮೂಡೆವೆರಸಿ ಕುಣಿಕುಣಿದಾಡುತ್ತುಂ

ಕೂಡಿದ ಸುಖದಿಂ ಸುಖಿಯಾಗುತ್ತುಂ
ಹೊತ್ತುದು ಹೊರೆ ಚಿತ್ತದೊಳೀಶಂ ನೆರೆ
ಪತ್ತಿ ಜಿಗಿಲ್ತಿರ್ಪುದು ದೇಹಂ ನೆರೆ

ಇಂತಿರಲಲ್ಲಿಗೆ ನಡೆದಂ ದೇವಂ
ಸಂತಸದಿಂದಂ ದೇವರ ದೇವಂ
ನೋಡಾ ಪಾರ್ವತಿ ಎನ್ನಯ ಭಕ್ತನ
ಕೂಡಿದ ಸುಖಿ ಎರಡರಿಯದ ಭಕ್ತನ
ನೆನೆಯುತೆ ನೆನೆಯುತೆ ತಿರುನಾಳಾದಂ
ನೆನೆಯುತೆ ನೆನೆಯುತಲೆನ್ನಾಳಾದಂ
ಕುರುಹಿನ ಹೊರೆಯವನವನಿಂತೋರ್ವಂ
ಕುರುಹಿನ ಹೊರೆಯವನಾನಿಂತೋರ್ವಂ

ಎನುತೋರ್ವಂ ಪೂಜಾರಿಯನಲ್ಲಿಗೆ
ಪಿನಾಕಿ ಕಳುಪಲ್ಸುಖದಿಂದಲ್ಲಿಗೆ
ಪೋದಾತಂ ಮುಟ್ಟಲ್ಕುಮ್ಮದೆ ಬರೆ
ಭೇದಾಭೇದವನರಿಯದೆ ನೆರೆ ಬರೆ
ಎನ್ನವರಂ ಮುಟ್ಟಲ್ನೀಂ ಪಡೆವಾ
ಎನ್ನಯ ಭಕ್ತರನರಿಯಲ್ಪಡೆವಾ
ಹೋಗೈ ನಂದೀಶಾ ನೀ ಹೋಗೆನೆ
ರಾಗಂಬೆತ್ತುತ್ಸವದಿಂ ಭೋಂಕೆನೆ
ಬಂದಂ ಬಂದಂ ಬದುಕಿದೆನೆನುತುಂ
ಇಂದುಧರನ ಬೆಸಸೆನಗಾಯ್ತೆನುತುಂ
ಬಂದಾ ತಿರುನಾಳ್ಪೋವರನಪ್ಪತೆ
ಸಂದಣಿಸುವ ಸಂಭ್ರಮದಿಂದಪ್ಪತೆ
ನೋಡಲ್ಜನವನಿಪುವ ತೆರದಿಂ
ಮೂಡೆಯನಿಪುತೆ ಶರ್ವನ ಬೆಸದಿಂ
ಕೈವಿಡಿದೊಡಗೊಂಡೊಲವಿಂ ಬಂದಂ
ಐವಡಿ ಸುಖದಿಂ ಭಕ್ತಂ ನಂದಂ

ಸೊಸ ಜಡೆ ಮಕುಟಂ ಭಾಳದ ಭಸಿತಂ
ಪೊಸ ಕುಂಡಲ ಯುಗಳಂ ದರಹಸಿತಂ
ಸುಲಿಪಲ್ಲೊಪ್ಪುವ ಸುರುಚಿರ ವದನಂ
ನಲವಿಂ ತೀವಿದ ಶಾಂತಿಯ ಸದನಂ
ನಿರ್ಮಳ ನೂತನ ವಸನಾವರಣಂ
ನಿರ್ಮಳ ರುದ್ರಾಕ್ಷಿಗಳಾಭರಣಂ
ತೋರಲ್ಕಶಿ ಕಳೆ ಯಿಲ್ಲದ ಶಿವನಂ
ತೋರಲ್ಕರಿಗೊರಲಿಲ್ಲದ ಹರನಂ
ಶೈವ ಪವಿತ್ರಂ ಶೈವಾಕಾರಂ
ಶೈವಕುಲಾರ್ಕಂ ನಿಂದಿರೆ ಧೀರಂ
ಕುಲವಳಿದ-ದು ಕುಲನಾಮವದಿರ್ದುದು
ತೊಲಗಿತು ತನು ನಿಜ ಜೀವವುದಿರ್ದುದು
ಪುಣ್ಯ ಶರೀರಂ ಪುಟವಿಟ್ಟಿರ್ದುದು
ಪುಣ್ಯಂ ಪುರುಷಾಕಾರಂಗೊಂಡುದು
ಎನಿಪಾ ತಿರುನಾಳ್ವೋವರನೊಲವಿಂ
ಘನ ಮಹಿಮಂ ನಂದೀಶಂ ನಲವಿಂ
ಕೈಗೊಟ್ಟೊಡಗೊಂಡೊಳಗಂ ಪುಗುತಿರೆ

ಸೈಗೆಡದೆಲ್ಲಂ ಜಯ ಜೀಯೆನುತಿರೆ
ಒಳಪುಗುತುಂ ಶಿವನೊಳಗಂ ಪೊಕ್ಕಂ
ತೊಳಗುತೆ ಬೆಳಗುತೆ ಬೆಳಗಂ ಮಿಕ್ಕಂ
ತಿರುನಾಳಾಗುತೆ ಹರನಾಳಾದಂ
ಹರನಾಳಾಗುತೆ ತಿರುನಾಳಾದಂ
ಶಿವಲಿಂಗದ ಸಂಗದ ಸುಖಿಯಾದಂ
ಶಿವಭಕ್ತಿಯ ಮುಕ್ತಿಯ ಮುದ್ದಾದಂ

ಇಂತಾಗಲ್ಕರೆದವು ಪೂ ಮಳೆಗಳ್
ಸಂತಂ ಪೊಳಗಿದುವಾ ದುಂದುಭಿಗಳ್
ನೆಗೆದವು ವಿಮಾನವಂಬರ ತಳದೊಳ್
ಒಗೆದವು ತಾರಾದ್ರೀಶನ ಪುರದೊಳ್

ನಿಂದಿರೆ ಕಾಣುತ್ತುಂ ಗಿರಿಜೇಶಂ
ಸಂದಣಿಸುವ ಪುಳಕದಿ ಸರ್ವೇಶಂ
ಕೊಂಡದೊಳಗೆ ಮುಳುಗಿಸು ಎಂದೆನುತುಂ
ಕೊಂಡೆನ್ನಲ್ಲಿಗೆ ಬಪ್ಪುದು ಎನುತುಂ
ಭಾವಿಸೆ ಪೊಗಳಲ್ದೇವರ ಕಂಡಂ
ದೇವರ ದೇವಂ ದೇವರ ಗಂಡಂ
ಕೋಟಾಕೋಟಿ ಗಣಂಗಳ್ಸಹಿತಂ
ಕೋಟಾಕೋಟಿ ಬಲಂಗಳ್ಸಹಿತಂ
ಪೊನ್ನಾಂಬಲದರಮನೆಯಂ ಪೊಕ್ಕಂ
ಪನ್ನಗಭೂಷಣನೊಲವಿಂ ಪೊಕ್ಕಂ

ಇತ್ತಂ ನಂದೀಶಂ ಸಲಿದಾಗಳ್
ಚಿತ್ತಜಹರನಿತ್ತಾಜ್ಞೆಯೊಳಾಗಲ್
ತಿರುನಾಳ್ವೋವರನೊಡಗೊಂಡೊಲವಿಂ
ಹರುಷಂಗೊಂಡಾ ಕೊಂಡದೊಳೊಲವಿಂ
ಕುಲವಂ ಜಲದೊಳಗೆಲೆದೊಳೆವಂತು
ಕುಲವಂ ಶಿವಕುಲವಂ ಮಾಳ್ಪಂದದಿ
ತಂದು ಮುಳುಂಗಿಸಿದಂ ನಂದೀಶಂ
ಇಂದುಧರನ ಬೆಸದಿಂ ನಂದೀಶಂ
ತಿರುನಾಳ್ವೋವರ್ಮುಳುಂಗಿ ನಿಂದಿರೆ
ಹರಹರ ಶಿವಶಿವ ಎನುತುಂ ನಿಂದಿರೆ

ಬೆಳಗಿನ ಬಳಗವದೊರ್ಮುಳಿಗೊಂಡುದೊ
ತೊಳಗುವ ಪುಣ್ಯಂ ಪುಂಜಂಗೊಂಡುದೊ
ಚಂದ್ರಂ ನಿಜ ರೂಪಿಂದಂ ನಿಂದನೊ
ಚಂದ್ರಿಕೆಗವಯವಂ ಶಿವನಿತ್ತನೊ
ಶಿವಕಾರುಣ್ಯಂ ತಪೆ ರೂಪಾದುದೊ
ಶಿವಸಾಮರ್ಥ್ಯಂ ಸಂದಣಿಗೊಂಡುದೊ
ಎಂಬಂದದ ರೂಪಿಂ ನಿಂದಿರ್ದಂ
ಪೊಂಬಣ್ಣದ ತನುವಂ ತಳೆದಿರ್ದಂ

ಬಂದರಮನೆಯಂ ಪರಮಂ ಪೊಕ್ಕಂ
ಹೆಂದದ ಹೆಚ್ಚಿದ ಸುಖದೊಳ್ಮಿಕ್ಕಂ
ಸಿಂಹಾಸನನಾಗುತೆ ಸುಖವದನಂ
ಸಿಂಹಾಸನ ಚರ್ಮಾಂಬರ ವಸನಂ
ಹರುಷದಿ ಗಣಪದವಿಯನೊಲವಿಂದಂ
ತಿರುನಾಳ್ಪೋವರಿಗಿತ್ತನಂದಂ
ನಿಗೆ ಸುಖದಿಂ ಶಂಕರನೊಪ್ಪಿರ್ದಂ
ಮೃಗಧರಧರಮಸ್ತಕನೊಪ್ಪಿರ್ದಂ
ಹರಿಯಜಪೂಜಿತಪದನೊಪ್ಪಿರ್ದಂ
ಶರಣವ್ರಜ ಸಂಪದನೊಪ್ಪಿರ್ದಂ
ನಿತ್ಯನಿವಾಸಪ್ರಭು ಒಪ್ಪಿರ್ದಂ
ಸತ್ಯಸುಭಾಷಿತ ವಿಭು ಒಪ್ಪಿರ್ದಂ
ಸುಕುಮಾರ ಶಿಖಾಮಣಿ ಯೊಪ್ಪಿರ್ದಂ
ಸಕಲಪ್ರಮಥಾಗ್ರಣಿಯೊಪ್ಪಿರ್ದಂ
ಸೋಮಕಳಾವಿಳಸಿತನೊಪ್ಪಿರ್ದಂ
ಪ್ರೇಮಕಳಾ ವರ್ಧಿತನೊಪ್ಪಿರ್ದಂ
ಹೆಂಪಿನ ಹೆಚ್ಚಿನ ನಿಧಿಯೊಪ್ಪಿರ್ದಂ
ಹಂಪೆಯ ರಾಯಂ ತಾನೊಪ್ಪಿರ್ದಂ

ಕಂದ॥ ತಿರುನಾಳ್ಪೋವರನೊಲವಿಂ
ಹರುಷಂ ಮಿಗೆ ಮೆರೆದ ಶಂಭುಶಂಕರನಘಕುಲ
ಹರಣಂ ಭಕ್ತಿಯನೆಂದುಂ
ಕರುಣಿಸುತಿರ್ಕೆಮಗೆ ಹಂಪೆಯ ವಿರೂಪಾಕ್ಷಂ ॥

ತಿರುಕುರುಂಪೆ ತೊಂಡರ ಮಹಾತ್ಮೆ.

ಕಂದ॥ ಪರಮೇಶಂ ಗೌರೀಶಂ
ಕರುಣಾವಾಸಂ ಸುಖಾಂಬುನಿಧಿ ಸರ್ವೇಶಂ
ಧರಣೀತಳದೊಳ್ಕೆರೆದಂ
ತಿರುಕುರುಪೆಯ ತೊಂಟರಂ ವಿರೂಪಾಕ್ಷ ಶಿವಂ

ರಗಳೆ.

ಧರೆಗೆ ಮೆರೆವ ಕಾಂಚಿಪುರದೊಳೊಪ್ಪುತಿರ್ಪನಲ್ಲಿ
ತಿರುಕುರುಂಪೆತೊಂಡರೆಂಬ ಪರಮ ಭಕ್ತನಿರ್ಪನಲ್ಲಿ
ಅಸಗನೊಂದನೆಸಗನೆತ್ತ ಮಿಸುಕದಭವ ವಶದೊಳಿರ್ಪ
ಎಸೆವ ಶಿವನ ಭಕ್ತರೆಂತು ಬೆಸಸಿದಂತೆ ಸುಖದೊಳಿರ್ಪ
ಅತನಿರವಿಳಾತಳಕ್ಕೆ ನೂತನಂ ನಮಶ್ಶಿವಾಯ
ಭೂತನಾಥನರಿವನುಳಿದರರಿಯರೈ ನಮಶ್ಶಿವಾಯ
ಇಂತೆನಲ್ಕೆ ಮುಂತೆ ಜಾವವಾಗಲೆಳ್ದು ನಡೆದು ಬಂದು
ಕಂತುಹರನ ಪೂಜೆಗೋಜೆಯಿಂದೆ ಪೂವನೆಳಸಿತಂದು
ಶಿವನ ಭವನದೊಳ್ಪಿರಕ್ಕೆ ಎತ್ತಿ ಪತ್ತಿ ಸುತ್ತಿ ಬಂದು
ಅವಿಕೃತ ಸ್ವಭಾವ ಭಕ್ತ ನೆಳಸಿ ಬಾಗಿಲೊಳಗೆ ನಿಂದು
ಪೂವನಭವನಂಘ್ರಿಗಳ್ಗೆ ಭಾವಿಸುತ್ತಲಿತ್ತು ನೋಡಿ
ದೇವರಾಜ ಕಲ್ಪಭೂಜ ದೇವ ಕರುಣಿಸೆಂದು ಬೇಡಿ
ನಿನ್ನ ಬಾಗಿಲಲ್ಲದನ್ಯದವರನೆಂತು ಬಗೆವುದಿಲ್ಲ
ನಿನ್ನನಲ್ಲದನ್ಯ ಸಂಗವನ್ನು ನೆಂತು ಅರಿವುದಿಲ್ಲ
ಕರುಣಿಸಯ್ಯ ಕರುಣಿಸಭವ ಕರುಣಿಸೆಂದು ಕೆಯ್ಯನೆತ್ತಿ
ಸೆರಗು ಬೆರಗನರಿಯದಚ್ಚ ಶರಣನಲ್ಲಿ ಭಕ್ತಿ ಎತ್ತಿ
ನಡೆದು ಮನೆಗೆ ಬಂದು ತನ್ನ ಕಾಯಕಕ್ಕೆ ಸಲಲು ನೆನೆದು
ಮೃಡನ ಭಕ್ತರಿತ್ತ ವಸ್ತ್ರಮಂ ನಿಕಾರಿಸಲ್ಕೆ ಬಗೆದು

ಪಾಪವೆಂಬ ಮಲಿನ ಮನದ ಸೀರೆಯುಂ ತೆರಳ್ಚಿ ಕಟ್ಟ
ಕೋಪವೆಂಬ ಕತ್ತಿ ನಿಲಲು ಬೆನ್ನ ಮೇಲೆ ವಾಣದೊಟ್ಟ

ನಡೆದು ಭವನ ಭಕ್ತಿರಸದ ಹೊಳೆಯ ತಡೆಯ ಬಳಿಗೆ ಬಂದು
ಮೃಡನೆ ಶರಣೆನುತ್ತೆ ದೇಹವೆಂಬ ಕಲ್ಲ ಬಳಿಗೆ ಬಂದು
ತಾಪತ್ರಯಗಳೆಂಬ ಕಿಚ್ಚಿನಿಂದೆ ಕುದಿಸೆ ಕುದಿವುತಿರಲು
ತಾಪವಾರೆ ವಸ್ತ್ರಕುಲವನಲ್ಲಿ ಪಿಡಿದು ತೊಳೆವುತಿರಲು
ಒಗೆದನೊಗೆದನನುಮು ಹರನ ಪರವು ಭಕ್ತಿರಸದೊಳೊಗೆದ
ಒಗೆದನೊಗೆದನಾಹ ದೇಹಭಾವವಳಿದು ಸುಖದೊಳೊಗೆದ
ಒಗೆದ ಧನಿಯನಾಲಿಸಿದರ ಪಾಪ ಓಡಿ ಹೋಗಲೊಗೆದ
ಒಗೆಯೆ ಸಿಡಿವ ಹನಿಗಳೆಯ್ದಿದವರೆ ಮುಕ್ತರಾಗಲೊಗೆದ
ಏಕ ನಿಷ್ಠೆಯಿಂದೆ ತಿರುಹಿ ಮುರುಹಿ ಹಿಳಿದು ಹಿಂಡಿ ಮತ್ತೆ
ಏಕನಭವನೆಂಬ ದಿಟದ ಬಿಸಿಲೊಳೊಣಗಿಸುತ್ತ ಮತ್ತೆ
ಪುರಹರ ಪ್ರಸಾದದಿಂದೆ ರಂಜಿಸಲ್ಕೆ ಗಂಜಿ ಇಟ್ಟು
ಶರಣಸಂಗದಿಂದೆ ಘಟ್ಟಿಸುತ್ತೆ ಹೊಳಹನೊಪ್ಪವಿಟ್ಟು
ಪರಮನಂಘ್ರಿಗಳ್ಗೆ ಇಚ್ಛೆಯಂತೆ ಮಡಿಸಿ ಗಳಿಗೆ ಮಾಡಿ
ತಿರುಕುರುಂಪೆತೊಂಡರೆಸೆವ ಮನದ ಮಡಿಯ ನೊಂದುಗೂಡಿ
ಸಕಲ ಭಕ್ತಜನಕೆ ಮನದ ಮಡಿಯ ನೀವುತಿರ್ಪನಲ್ಲಿ
ಸಕಲ ಶರಣ ಕುಲಕೆ ಸಿಂಗರಂಗಳೀವುತಿರ್ಪನಲ್ಲಿ
ಎನಿತುಪಾಸವಾದೊಡಲ್ಲಿ ಬಳಲದಳಲದೊಗೆವನೊಲ್ದು
ಎನಿತು ಶಕ್ತಿಗುಂದೆ ಕುಂದಲನಿತು ಮಿಗಿಲನೊಗೆವನೊಲ್ದು
ಇಂತು ಪಲವು ಕೆಲವು ದಿವಸವೀ ಚರಿತ್ರದಿಂದಿರಲ್ಕೆ

ಕಂತುಹರನುಮುರಿದು ರಜತಗಿರಿಗೆ ಶರಣನಂ ತರಲ್ಕೆ
ನೆನೆದು ದೇವಗಣಕುಲಕ್ಕೆ ಬೆಸಸುತಿರ್ದನಭವನಲ್ಲಿ
ಮನುಜ ಲೋಕದೊಳಗೆ ತೊಳಗಿ ಬೆಳಗಿ ಮೆರೆವ ಚೋಳದೇಶದಲ್ಲಿ
ತಿರುಕುರುಂಪೆ ತೊಂಡರೆಂಬ ಭಕ್ತರಿರ್ಪರಲ್ಲಿ ಪೊಕ್ಕು
ನೆರೆದು ನಡೆದು ಮುಂದುಗೆಡಿಸಿ ಬನ್ನಿಮೆಂದು ಬೆಸಸೆ ಮಿಕ್ಕು

ನಡೆದು ದೇವಕೋಟಿಗಣಸಮೂಹವೆಲ್ಲವೆಯ್ದಿ ಬಂದು
ಮೃಡನ ಭಕ್ತ ತಿರುಕುರುಂಪೆತೊಂಡರಲ್ಲಿಗೆಯ್ದಿ ಬಂದು
ಎನಗೆ ತನಗೆ ಮತ್ತೆ ವಸ್ತ್ರವೀಯಲಲ್ಲಿ ಬೆಟ್ಟದಂತೆ
ಘನಕೆ ಘನವೆನುತ್ತೆ ಬೆಳೆಯೆ ಸಂತಸಂಬಡುತ್ತಲಿಂತೆ

ಎನ್ನ ಭಕ್ತರಿತ್ತ ಸೀರೆಯೊಗೆಯಲಾನು ಪಡೆದೆನೆನುತೆ
ತನ್ನ ಮನದೊಳುತ್ಸವಂ ಬಡುತ್ತಲಿಂತು ಸಂದುದೆನುತೆ

ಒಗೆವುತಿರ್ದ ನೊಗೆವುತಿರ್ದ ನೆನಿತನಿನಿತು ಸವೆಯವಲ್ಲಿ
ಒಗೆಯಲೊಗೆಯೆ ಮೇಲೆ ಸೀರೆ ರಾಸಿಯಾಗುತಿರ್ದವಲ್ಲಿ
ಒಂದುಪಾಸ ವೆರಡುಪಾಸವಾಗಲೊಗೆವುತಿರ್ದನಲ್ಲಿ
ಸಂದಿಸುತ್ತೆ ಸಲವುಪಾಸವಾಗಲೊಗೆವುತಿರ್ದನಲ್ಲಿ
ಒಗೆದು ಬಳಲೆ ಶಕ್ತಿಗೆಟ್ಟು ಬೀಳುತೇಳ್ದು ಮತ್ತೆಯೊಗೆದು
ಬಗೆಯೊಳಂಜೆನಯ್ಯ ದೇವ ಹೋಗೆನೆನುತ ಮೀರಿಯೊಗೆದು
ಒಗೆವುತೊಗೆವುತಲ್ಲಿ ಬಳಲಿ ಭಕ್ತಿ ಚಿತ್ತದಲ್ಲಿ ಪೊಕ್ಕು
ನೆಗೆದು ನಿಷ್ಠೆ ರೂಪುಗೊಂಡು ಮನದ ಮೊನೆಯೊಳುರ್ಕಿ ಮಿಕ್ಕು
ಮುಟ್ಟಿ ಕೆಲವು ಸೀರೆ ನಿರ್ಮಳಂಗಳಾಗುತಿರ್ದವಲ್ಲಿ
ದಿಟ್ಟಿಸಲ್ಕೆ ಕೆಲವು ಸೀರೆ ನಿರ್ಮಳಂಗಳಾದುವಲ್ಲಿ
ನೆನೆಯೆ ಸೀರೆಯೊಟ್ಟಿಲೆಲ್ಲ ನಿರ್ಮಳಂಗಳಾದವಲ್ಲಿ
ಮನದೊಳಂಜಿ ಗಣಸಮೂಹವರಿದೆನುತ್ತೆ ಚಿತ್ತದಲ್ಲಿ
ಎಮ್ಮ ವಶವಿದಲ್ಲ ಒಲ್ಲೆನುತ್ತೆ ಶಿವನೆ ಬಲ್ಲನೆಂದು
ತಮ್ಮಿಳೊಂದುಗೂಡಿ ರಜತ ಗಿರಿಗೆ ಭೋಂಕನೆಯ್ದಿ ಬಂದು

ದೇವ ದೇವ ಎನನೆಂಬೆವು ದಿವಿಯೊಳಗೆ ತಾನೆಯರಿದು
ಭಾವದೊಳಗೆ ಎಳ್ಕೆನಿತ್ತು ಜಲನೆ ಇಲ್ಲ ನಿಷ್ಠೆ ಪಿರಿದು
ಎನಿತುಪಾಸವಾಗಲಾಗಲನಿತು ಮಿಗಿಲನೊಗೆವುತಿರ್ದ
ಎನಿತೆನಿತ್ತು ಶಕುತಿಗುಂದೆ ಎನಿತನಿತ್ತು ಒಗೆವುತಿರ್ದ
ಅಭವ ನೀವೆ ಬಲ್ಲಿರಯ್ಯ ನಿಮ್ಮ ಭಕ್ತರಿರವದರಿದು
ವಿಭುವೆ ನೀನೆ ನಡೆದು ಕರುಣದಿಂದಲವರಮನವನೊರೆದು
ಕರುಣಿಸೆಂಬ ಬಿನ್ನಪಕ್ಕೆ ಮೆಯ್ಯನಾಂತು ನಡೆದು ಬಂದು
ಗಿರಿಜೆ ಬಾರ ಬಾರ ನೋಡ ಬಾರ ಬಾರೆನುತ್ತೆ ನಲಿದು ಬಂದು
ನಡೆದು ಬಂದು ಗಗನದೊಳಗೆ ಕಾಣದಂತೆಯುಮೆಯನಿರಿಸಿ

ಪೊಡವಿಗಿಳಿಯುತೊಂದು ರೂಪನಲ್ಲಿ ಮೆಲ್ಲನೊಲ್ದು ಧರಿಸಿ
ಗಜದ ಚರ್ಮಮುಂ ಜಗಕ್ಕೆ ಕರಿಯ ಕಂಥೆಯಾಗಿಸುತ್ತೆ

ನಿಜದ ರೂಪನಡಗಿಸುತ್ತೆ ಭಕ್ತರೂಪನೊದಗಿಸುತ್ತೆ
ಒಗೆದ ಕಯ್ಯಕೊದ್ದೆಯಾದುವದಕೆ ಮುನ್ನವೆಯ್ದಿ ಬಂದು
ನಿಗೆದ ಘನ ನಿದಾಘದೊಳಗೆ ಹೊಳೆಯತಡೆಯ ಬಳಿಗೆ ಬಂದು
ತಿರುಕುರುಂಪೆತೊಂಡರೆಂಬರಿವನೀವೆ ಎಂದು ನುಡಿಯೆ
ಸೊರಳುತಲ್ಲಿ ಮೆಲ್ಲನೇಳ್ದು ದೇವ ದೇವ ಅಡಿಯ ಪಿಡಿಯೆ
ಬಂದಿರೆತ್ತಣಂ ಬಿಸಿಲ್ಕರಂ ನೆಳಲ್ಗೆ ಸಾರಿ ದೇವ
ಹಿಂದೆಯೊಗೆದ ನೀರೆಯೊಟ್ಟಲಿಂದೆ ಘನವ ಕಂಡೆ ದೇವ
ಬಿಸಿಲುಗಳೆಯಲೀಗ ತಂದೆಯೊಗೆದು ಕೊಟ್ಟಪೆಂ ಮಹೇಶ
ಎಸೆವ ಡೆಲ್ವು ಬಿಳಿದು ಮಾಡಿ ಯೊಗೆದು ಕೊಟ್ಟಪೆಂ ಮಹೇಶ
ಎಂದೊಡಭವನಲ್ಲಿ ಮೆಚ್ಚಿ ಬೀಳುಡೆಯನು ಕೊಡುವ ತೆರದಿ
ಮಂದರಾಚಲಕ್ಕೆ ನಡೆವ ಸಂಚಕರವನೀವ ತೆರದಿ
ಕೊಟ್ಟು ನಾಳೆ ಜಾವದೊಳಗೆ ಕುಡುವುದೆಂದು ಪೋಗಲಲ್ಲಿ
ಬಿಟ್ಟು ಬಿದಿರ್ದು ತಿರಿಕುರುಂಪೆತೊಂಡರೊಗೆವುತಿರ್ದರಲ್ಲಿ

ಇತ್ತಲಭವನೊಲ್ದು ಬಂದು ಕಾಳಮೇಘ ತತಿಯನಂದು
ಚಿತ್ತವುಂ ಪರೀಕ್ಷಿಪೊಂದು ಬಗೆಯ ನೇಹ ರಸದೊಳೊಗೆದು
ನೆನೆಯೆ ಧರಣಿಯುಂ ವಿಯತ್ತಳಂಗಳಂ ತೆರಳ್ಚಿ ತೀವಿ
ಘನನಿಕಾಯವೆಯ್ದಿ ಕರೆದು ಉರದೆ ಧರೆಯೊಳೆಲ್ಲ ತೀವಿ
ಕತ್ತಲಿಟ್ಟ ಕವಿದು ಕರೆವ ಮಳೆಗಳೊಳಗೆ ತೆರಳದಲ್ಲಿ
ಚಿತ್ತವಿಟ್ಟು ತಿರುಕುರುಂಪೆ ತೊಂಡರೊಗೆವುತಿರ್ದರಲ್ಲಿ
ಒಗೆದನೊಗೆದನುದಯದಿಂದೆ ಯಸ್ತಮಾನವಾಗಲೊಗೆದು
ಒಗೆದು ನೋಡಿ ಮತ್ತೆಯೊಗೆದು ಬಿಚ್ಚಿ ನೋಡಿ ಮತ್ತೆ ಯೊಗೆದು
ಕರತಳಂಗಳೊಳಗೆ ಕೆಂಪು ಕೆಚ್ಚುಗಟ್ಟಿ ಸುಲಿಯಲೊಗೆದು
ಪೆರಲತುದಿಗಳೊಳಗೆ ಯರುಣಜಲದ ಧಾರೆಯೊಗೆಯಲೊಗೆದು
ಒಗೆಯಲೊಗೆಯಲೊಡೆಯೆ ಕಲ್ಲು ಕಂಥೆ ಕರ್ಪನಾಗಿ ತೋರೆ
ಒಗೆಯೆ ಬಿಳಿದು ಹಾರೆ ಕರಿದು ತೋರೆ ಮುಸಿಯ ಬಣ್ಣವೇರೆ
ಕಂಥೆ ಕಾರ್ಪದಂತೆ ನೀಲದಂತೆ ಕರ್ಪನಾಗಿ ತೋರೆ
ಕಂಥೆ ಕತ್ತಲಿಟ್ಟ ಗರಳದಂತೆ ರಾಹು ಬಣ್ಣವೇರೆ
ಕಂಡು ಖಾತಿಗೊಂಡು ಚಿಂತೆಗೊಂಡು ಮೇಲೆ ನೋಡಿ ಸುಯ್ದು
ಕೊಂಡೆ ನಾವ ಹೊತ್ತಿನೊಳಗಿದೇನೆನುತ್ತೆ ಸುಯ್ದು ಬಯ್ದು

ತೆಗೆಯಲಿಲ್ಲ ತಿರುಹಲಿಲ್ಲ ಮುರುಹಲಿಲ್ಲ ಮಳೆಗಳೊಳಗೆ
ಒಗೆಯಲಿಲ್ಲ ಹಿಂಡಲಿಲ್ಲ ತೊಳೆಯಲಿಲ್ಲ ಮಳೆಗಳೊಳಗೆ
ಎಲ್ಲಿ ಗಳಿಸಿದಂ ಮಹಾತ್ಮನಿಂತಿದಂ ನಮಶ್ಶಿವಾಯ
ಎಲ್ಲಿ ಪೊರ್ದಿತಿವರನಿಂತು ಕಂಥೆ ಇದು ನಮಶ್ಶಿವಾಯ
ಎನುತೆ ಮತ್ತೆ ಯೊಗೆವುತಿರೆ ಸಹಸ್ರ ಕಿರಣನುದಯವಾಗೆ

ಮನದೊಳಲ್ಲಿ ಕಂಥೆ ಧವಳಮಪ್ಪ ಚಿಂತೆ ಘನವದಾಗೆ
ಎಂತು ಮಾಡುವೇಂ ಮಹೇಶ ಭಕ್ತನೀಗಳೆಯ್ದಿ ಬರ್ಪ
ಎಂತು ನೋಳ್ಪೆನವರ ಮುಖಮನೆಂತು ಶಿವನ ನೋಡಿ ಬರ್ಪ
ಎಂದು ಮತ್ತೆ ಬರ್ಪ ದಾರಿಯಂ ನಿರೀಕ್ಷಿಸುತ್ತಯೊಗೆಯೆ
ನೊಂದು ಮನದೊಳೇನನೆಂಬೆನೆಂದು ಚಿಂತಿಸುತ್ತಯೊಗೆಯೆ
ಕಂಥೆ ಕರ್ಪನಾಗೆ ಶಿವನ ಚಿತ್ತವಲ್ಲಿ ಬಿಳಿಯದಾಗಿ
ಕಂತುಹರನುನುಲ್ಲಿ ದೂರದಿಂದೆ ಭಕ್ತ ವೇಷನಾಗಿ
ಬರುತಿರಲ್ಕೆ ತಿರುಕುರುಂಪೆತೊಂಡರಾಗ ನೋಡಿ ಕಂಡು

ಹರನೆ ಹರನೆ ಬಂದರೀವೆನೇನನೆಂದು ಭೀತಿಗೊಂಡು
ಸತ್ಯವಿಡಿದು ಸಮತೆಗೆಟ್ಟು ಭಕ್ತಿ ಮೀರಿ ಮುಂದುವರಿದು
ನಿತ್ಯ ಪದದ ನಿಷ್ಠೆ ನಿಮಿರ್ದು ನೆತ್ತಿಗೇರಿ ಮೀರಿ ನೆಗೆದು
ಧೈರ್ಯವಳಿದು ಲಜ್ಜೆಯುಳಿದು ಮನದೊಳಲ್ಲಿ ಚಿಂತೆ ಮಾಡಿ
ವೀರ್ಯವೆತ್ತಿ ನೆನಹು ಭಕ್ತಿ ತನು ವಿಸರ್ಜನಕ್ಕೆ ಮೂಡಿ
ಹುಸಿದು ಬರ್ದುಕುವಾಸೆಯಿಂದೆ ಸತ್ತೊಡೊಳ್ಳಿತೆಂಬ ತೆರದಿ
ಎಸೆವ ಕಂಥೆಗೆನ್ನ ತನುವನೊಗೆದು ಕೊಡುವನೆಂಬ ತೆರದಿ
ಬಿಳಿದು ಮಾಡಲಾರೆನೆಂದು ಪದತಳಕ್ಕೆ ಬೀಳ್ವ ತೆರದಿ
ತಿಳಿದು ತನಗೆ ತಾನೆ ಮುಳಿದು ತನುವನೊಗೆದು ಕುಡುವ ತೆರದಿ
ಇದಿರೊಳಾಗದೆಂದು ಸೂಕ್ಷ್ಮ ತನುವನೊಗೆದು ಕೊಡುವ ತೆರದಿ
ಅದಿರದಿಂತು ರಜತ ಗಿರಿಯೊಳೊಗೆದು ಕೊಡುವೆನೆಂಬ ತೆರದಿ
ತನ್ನನೊಗೆದುಕೊಂಡನಾಹ ತಿರುಕುರುಂಪೆತೊಂಡರಲ್ಲಿ

ಅನ್ನೆಗಂ ಮಹೇಶನರಿದು ಬೇಡ ಬೇಡೆನುತ್ತಲಲ್ಲಿ
ಬರೆ ಮಹೇಶನಿಂದೆ ಮುನ್ನ ಶಿವನ ಹಸ್ತದಲ್ಲಿ ನೆಗೆದು

ಸಿರವನೆತ್ತಿ ಸಸಿನವೆರಸಿ ಹಸ್ತಮಸ್ತಕಕ್ಕೆ ನೆಗೆದು
ಪುಷ್ಪವೃಷ್ಟಿ ಸುರಿದವಲ್ಲಿ ಪರಮನೊಸಗೆ ಎಸೆದವಲ್ಲಿ
ಪುಷ್ಪಚಾಪ ವಿಪಿನ ದಾವನೆಂಬ ಕಹಳೆ ಕರೆದವಲ್ಲಿ
ಅಗಲಭವನೆಯ್ದಿ ಬಂದು ತನ್ನ ರೂಪನೊಲ್ದು ತೋರಿ
ನಾಗ ಕಟಕನಿಂದುಜೂಟನಯ್ದು ಮೊಗವನೆಯ್ದೆ ತೋರಿ
ತವಕಿಸುತ್ತ ದಶಭುಜಂ ತ್ರಿನೇತ್ರದಿಂದಲೊಪ್ಪಿ ತೋರಿ
ರವಿ ಸಹಸ್ರ ಕಿರಣ ಕೋಟಿಯಿಂದೆ ವೀರಿ ಬೆಳಗಿ ತೋರಿ
ನೋಡ ಗಿರಿಜೆ ಗಣಸಮೂಹವೆಯ್ದೆ ಬಂದತಾಂತರುಂಟಿ
ನೋಡ ದೇವಲೋಕದೊಳಗೆ ಮಡಿಯನಿಂತು ಮಾಳ್ಪರುಂಟಿ
ಎನ್ನ ಕಂಫೆಗಿಂತು ತನ್ನ ತನುವನೊಗೆದುಕೊಂಡರುಂಟಿ
ಎನ್ನಗೋಸುಗಿಂತು ನಿಂದು ತನ್ನ ತೊರೆದು ಮೆರೆದರುಂಟಿ
ಹುಸಿಯಲರಿಯದಚ್ಚ ಸತ್ಯ ಶರಣ ಬಾರ ಬಾರೆನುತ್ತಿ
ಹುಸಿಗೆ ಹೇಸಿ ನಿನ್ನನೊಗೆದುಕೊಂಡ ಶರಣ ಬಾರೆನುತ್ತಿ

ಎಂದು ತಿರುಕುರುಂಪೆತೊಂಡರಂ ಮಹೇಶನಪ್ಪಿಯಪ್ಪಿ
ಬಂದ ಗಣನಿಕಾಯಕಕ್ಕೆ ತೋರಿ ಹರುಷದಿಂದಲಪ್ಪಿ
ಧರಣಿಯಲ್ಲುಳೇ ಎನಲ್ಕೆ ಗಗನ ತಳಕೆ ವೀರಿ ನೆಗೆದು
ಶರಣನಂ ವಿಮಾನದೊಳಗೆ ಪುಗಿಸಿ ಬಯಲನುಗಿದು ಬಗಿದು
ರಜತಗಿರಿಗೆ ಬಂದು ಸಿಂಹವಿಷ್ಟರ ಪ್ರತಿಷ್ಠನಾಗಿ
ಭುಜಗ ಭೂಷನವರ್ಗೆ ನಿತ್ಯಪದವನಿತ್ತು ನೋಡಿ ಬೀಗಿ

ದೇವವೃಂದದೊಳಗೆ ದೇವದೇವನೊಪ್ಪುತಿರ್ದನಲ್ಲಿ
ದೇವನಿಕರ ಮಕುಟವೇದ್ಯ ಪಾದನೊಪ್ಪುತಿರ್ದನಲ್ಲಿ
ಶರಣಕುಲ ಸರೋಜಬಾಲ ತರಣಿ ಕಿರಣನೆಸೆದನಲ್ಲಿ
ಶರಣಶರಧಿವರ್ಧನಪ್ರಭೂತಚಂದ್ರ ನೆಸೆದನಲ್ಲಿ
ಭಕ್ತಜನಮಯೂರಮೇಘನಿನದನೊಪ್ಪುತಿರ್ದನಲ್ಲಿ
ಭಕ್ತಹೃದಯ ಧಾವ ಭವನ ಚರಿತನೊಪ್ಪುತಿರ್ದನಲ್ಲಿ
ಅಮಮ ವಿಷಧರಪ್ರಸಿದ್ಧ ಮೂರ್ತಿಯೊಪ್ಪುತಿರ್ದನಲ್ಲಿ
ಅಮಮ ಸಕಲದೇವರಾಜನೊಪ್ಪುತಿರ್ದನಲ್ಲಿ
ಕುಂಜರಾಸುರೋಗ್ರ ಚರ್ಮವಸನನೊಪ್ಪುತಿರ್ದನಲ್ಲಿ

ಕಂಜನಯನನಯನ ಕುಜಲಸಿತಭರಣನೆಸೆದನಲ್ಲಿ
ಮಹಾದಾನಿ ಮಹಾವಾನಿ ಮಹಾದೇವನೊಪ್ಪಿದಂ
ಮಹಾ ಕರುಣಿ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ ॥

ಕಂದ॥ ಪ್ರಿಯವೊಗೆಯಲೊಗೆದ ತಿರುಕುರುಂ
ಪೆಯತೊಂಡರಭೃತ್ಯನೆಂದು ಶಂಕರನ ಭವಂ
ಜಯಶೀಲಂ ಕುಡು ಶಿವಭ
ಕ್ತಿಯ ನೆನಗೊಲವಿಂದೆ ಹಂಪೆಯ ವಿರೂಪಾಕ್ಷಂ ॥

ಅರಿವಾಳ್ತಾಂಡರ ಮಹಾತ್ಮೆ.

ಕಂದ॥ ಅರಿವಾಳ್ತಂಡರನಿಂತೀ
ಧರೆಯರಿಯಲ್ಕೆರೆದನಪ್ರತಿಮನಭವನುಮಾ
ವರನೇಕನದ್ವಿತೀಯಂ
ಪುರವ.ಥನಂ ಕರುಣೆ ಹಂಪೆಯ ವಿರೂಪಾಕ್ಷಂ ॥

ರಗಳೆ.

ಪುರಹರನ ಸೆಜ್ಜೆಯೆನಿಸಿದ ಜೋಳದೇಶದೊಳ್
ಧರೆಗೆ ಮೆರೆವುತ್ತಿರ್ಪುದೊಂದು ಪುರ ಒಪ್ಪದೊಳ್
ತಿಣ್ಣಮುಂಗಳವೆಂಬ ಪುರದಲ್ಲಿ ಪುಟ್ಟಿದಂ
ಕಣ್ಣನೆನಿಸಿದ ಶಿವನ ಭಕ್ತಿಯಂ ಮುಟ್ಟಿದಂ
ತನ್ನ ಪೆಸರೊಪ್ಪುವರಿವಾಳ್ತಾಂಡರೆಂಬುದದು
ಪನ್ನಗಾಭರಣನ ಕಿವಿಗೆ ಸವಿಯನೀವುದದು
ಕೊಟ್ಟ ಕೂಲಿಗೆ ಕೆಯ್ಯ್ಗಳಂ ಕೊಯ್ದು ಜೀವಿಪಂ
ದಿಟ್ಟ ಮೂರುಳ್ಳ ಶಂಭುವಿಂಗಿತ್ತು ಸೇವಿಪಂ
ಅಲ್ಲಿ ಬೆಳೆದಿಪ್ಪ ನೆಲ್ಬರಲುಮಾಧೀಶಂಗೆ
ಅಲ್ಲಿ ಬಂದೋಗರದ ನೆಲ್ಲೆಲ್ಲವೀಶಂಗೆ
ಮರನೆಲ್ತನಿಯ ಸದಕದ ನೆಲ್ಬರಬರುತಿರಲ್
ಕರುಣೆಗಂ ತನಗಂ ಪ್ರಸಾದಸುಖಮಾಗಿರಲ್
ನನ್ನಿ ಇಲ್ಲದೆ ಬೇರೆ ನುಡಿಗಳಂ ನುಡಿದರಿಯ
ಅನ್ನೆಯುಂಗಳನೆಂದುವುಂ ಮರೆದು ಕೇಳ್ದರಿಯ
ಉದಯದೊಳಗೇಳ್ದು ಕಣ್ಣಂ ಹೊಸೆವುತೆಯ್ತಂದು
ಮದನಾರಿ ಇರ್ಪ ತಿರುನಲ್ಲೂರ್ಗೆ ನಡೆತಂದು
ನಿಂದು ಕಿವಿವಿಡಿದು ಕೈಮುಗಿದು ಜೊತ್ತಂ ಪೊತ್ತು
ತಂದೆ ನೀಂ ಹೆಚ್ಚಿ ಬಾಳೆಂದು ಪರಕೆಯನಿತ್ತು
ಶಿವ ನಿನ್ನ ಬಾಗಿಲಲ್ಲದೆ ಮತ್ತರಿವುದಿಲ್ಲ
ಶಿವ ನಿನ್ನ ಮುಖವಲ್ಲದಿನ್ನರಿವ ಮುಖವಿಲ್ಲ

ನಿನ್ನ ತಿರುನಾಳಲ್ಲದಿನ್ನಂವ ನಾಳಿಲ್ಲ
ನಿನ್ನ ಭೇರಿಯ ನಾದವಲ್ಲದಾಲಿಪುದಿಲ್ಲ
ಎನಗೆ ಹೊನ್ನುಂ ನೀನೆ ಎನಗೆ ಚನ್ನಂ ನೀನೆ
ಎನಗಪ್ಪವಂ ನೀನೆ ಎನಗುಳ್ಳವಂ ನೀನೆ
ಎಂದಿಂತು ಪೊಡವಟ್ಟ ಹರುಷದಿಂ ನಡೆತರ್ಪ
ಎಂದುವುಂ ನಿತ್ಯ ನೇಮಂ ತಾನಿದಂ ತರ್ಪ
ಅರಸಿ ಕರೆದೊಡೆ ಪೋಪನಲ್ಲದಿರ್ದೊಡೆ ಪೋಗ
ಎರಗನಾಸೆಗೆ ಸಲ್ಲ ನಿಚ್ಚಗುಚ್ಚುಕನಾಗ
ಎಂತಪ್ಪ ಲಾಭಂಗಳಿಲ್ಲ ಉಂಟಾದೊಡಂ
ಕಂತುಹರನಂ ಬಿಟ್ಟು ಪೋಗನೇನಾದೊಡಂ
ನಂಟರುಂ ಶಂಭುವೇ ನಲ್ಲರುಂ ಶಂಭುವೇ
ಉಂಟೆನಿಪ ಬಂಧುವುಂ ಬಳಗವುಂ ಶಂಭುವೇ
ತನಗೆ ಕಣ್ಣಂ ಗತಿಯುಮೀಶನೇ ಎಂದಿರ್ದು
ತನಗೆ ಧನಮುಂ ಮನಮುಮೀಶನೆಂದೇ ಇರ್ದು
ಕೂಲಿಯಿಂದಾದ ಓಗರದ ನೆಲ್ಲಕ್ಕಿಯಂ
ಮೇಲೆನಿಸಿ ಬೆಳೆದ ಮಾವದು ಕೊಯ್ದು ಕೀರೆಯಂ
ತಂದು ನಲವಿಂದ ಶಿವನಾರೋಗಣೆಗೆ ಕೊಟ್ಟು
ಸಂದಣಿಪ ಪುಳುಕದಿಂದಂ ಸಂತಸಂಬಟ್ಟು
ಎನ್ನಾಯುವಂ ಕೊಂಡು ಬರ್ದುಕು ನೀನೆಂದೆನುತೆ
ಎನ್ನಯ್ಯ ನೀನೆ ಬೆಳೆ ಸಿರಿವಂತನಾಗೆನುತೆ
ಎಂದು ಪೊರಮಟ್ಟು ತನ್ನೂರ ನಲವಿಂ ಪೊಕ್ಕು
ಇಂದುಶೇಖರನ ಪ್ರಸಾದಕ್ಕೆ ಮನಂ ಮಿಕ್ಕು
ಕೂಲಿಯಾಳ್ಗಳ ನಡುವೆ ಎಂತಂತೆ ನಿಂದಿರ್ಪ
ಆಲೋಕಿಸಲ್ಕಿವನ ಕಣ್ಣ್ಗೆ ತನ್ನಂತಿರ್ಪ
ಇಂಚೆವೋದಾ ಕೆಯ್ಗಳೊಳಗೆ ಈತಂ ಪುಗಲ್
ವಂಚಿಸದೆ ವಿಪುಳ ಫಲವಾಗಿರ್ಪವತಿ ಮಿಗಿಲ್
ಕಯ್ಯೊಡೆಯರುತ್ಸವಂಬಡುವರಾತನನರಿಯ
ಅಯ್ಯಯ್ಯ ಲಾಭವಾಯ್ತೆಂಬರಾತನನರಿಯ
ಇಂತು ಕೂಲಿಗೆ ಕೊಯ್ವನಂತು ಪರಮಂಗೀವ
ಇಂತಿಂತು ಎಂತುಮುಂ ಶಿವನತ್ತಲೇ ಭಾವ

ಏನೆಂಬೆನೊಪ್ಪುವರಿವಾಳ್ತಾಂಡರಿರ್ಪುದಂ
ನಾನಾ ವಿಧದ ಶರ್ವನರ್ಚನೆಯೊಳಿರ್ಪುದಂ
ಭಕ್ತರಂ ಕಂಡೊಡಂ ಜೀವ ಬಂದಂದದಿಂ
ಭಕ್ತರಂ ಕಂಡೊಡೆರಗುವನೆರಗದಂದದಿಂ
ಕೂಲಿಗೊಳ್ಳಂ ನೋಡ ದೇವ ದಾನದ ಕಯ್ಸಿ
ಕೂಲಿಗೊಳ್ಳಂ ನೋಡ ವಿಕ್ಕ ಭವಿಗಳ ಕಯ್ಸಿ
ಇಂತು ಪಲವುಂ ಕೆಲವು ವತ್ಸರಂ ನಡೆಯುತಿರೆ
ಸಂತತಂ ಶಿವಭಕ್ತಿ ಮೀರಿ ದಳನೇರುತಿರೆ

ಒಂದು ದಿನ ಓಗರವ ನೆಲ್ಬಾರದಡಂದಿಗೆ
ಒಂದುಪಾಸವಾದುದು ಶಿವನ ಭಕ್ತಂಗೆ
ಎರಡನೆಯ ದಿವಸಕಂ ಮತ್ತೆ ನೆಲ್ಬಾರದಿರಲ್
ಪರಮ ಭಕ್ತಂಗೆರಡುಪಾಸವಾಗುತ್ತಿರಲ್
ಆಹಾ ಮಹಾದೇವ ಬರ್ದುಕಿದೆಂ ಬರ್ದುಕಿದೆಂ
ಆಹ ಉಪವಾಸವಲ್ಲಲ್ಲಯ್ಯ ಬರ್ದುಕಿದೆಂ
ಈ ತೆರದೆ ನಡೆಯಿಸಯ್ಯ ನಿನ್ನನು ಬೇಡುವೆಂ
ಈ ತೆರದೆ ನೇಮವಂ ಕುಂದದಾಂ ಮಾಡುವೆಂ
ಎಂದೆನುತೆ ಉಪವಾಸಮುಂ ತೃಪ್ತಿಯಾಗುತಿರೆ
ಬಂದಕ್ಕಿಯಂ ಶಿವಂಗಳ್ಕರಿಂದೀಯುತಿರೆ
ಇಪ್ಪತ್ತು ಉಪವಾಸವಾದುದಾ ಭಕ್ತಂಗೆ
ತಪ್ಪದೆ ಶಿವಂಗೆ ಭಾಷೆಗಳನೀವಾತಂಗೆ
ಆಗ ಕೋಡಡೆ ಕೊಂಕದಲುಗದಲ್ಲಾಡದಿರೆ
ರಾಗದಿಂದೊಂದೊಂದು ದಿನಕೆ ಕಳೆ ಏರುತಿರೆ

ಇತ್ತಲಾ ಕೈಲಾಸದೊಳಗೆ ಸರ್ವೇಶ್ವರಂ
ಚಿತ್ತದೊಳಗರಿದು ದಯೆಯಿಂದಂ ಮಹೇಶ್ವರಂ
ಬಾರಾ ಉಮೇ ಎಮ್ಮ ಭಕ್ತನಂ ನೋಡುವೆಂ
ಮೀರಿಗೆಡೆ ಜೀವ ಪರಿಯಂತರಂ ಕಾಡುವಂ
ಆರುವರಿಯದನೋರ್ವ ಗುಪ್ತ ಮಾಹೇಶ್ವರಂ
ಘಾರುಣಿಯೊಳಿರ್ದಪಂ ಸಾತ್ವಿಕ ಮಹೇಶ್ವರಂ

ತೋರಿದಪೆನೀಗಳೀ ಭಕ್ತನ ಗುಣಂಗಳಂ
ಬೀರಿದಪೆನೀಗಳೆ ಮಹೇಶನ ಗುಣಂಗಳಂ
ಎಂದು ಪೇಳುತ್ತೊಡಂಗೊಂಡು ಹರುಷಂ ಮಿಕ್ಕು
ಬಂದು ಜೋಳ ಕ್ಷಿತೀಶ್ವರನ ದೇಶಂ ಪೊಕ್ಕು
ತಿರುನಲದ ದೇವಾಲಯದ ಮುಂದೆ ನಿಂದಿರಲ್
ಗಿರಿಜೆಗೊರೆಯುತುಂ ಗರ್ದ್ದಿಯೊಳಗಂ ನಿಂದಿರಲ್

ಇತ್ತಲರಿವಾಳ್ತಾಂಡರೊಯ್ಯನೊಂದಡಿ ಇಡುತೆ
ಹತ್ತಿರ್ಪತ್ತೊಂದು ಉಪವಾಸದಿಂದಂ ಬರುತೆ
ಕೂಲಿಯೋಗರದಕ್ಕಿ ಕೊಯ್ತೀರೆಯಂ ಕೊಂಡು
ಮೇಲೆ ಕಂಪಿಡುವ ಮಾವಡುವನೊಲವಿಂ ಕೊಂಡು
ಒಚ್ಚೆ ರಂಗಿನ ಉಡಿಗೆ ಒಳಗೆ ಕುಡುಗೊಲ್ಮೆರೆಯೆ
ಪಚ್ಚೆ ಪಸಿಯೊಕ್ಕಲ ಮಗಂ ಭಕ್ತಿ ಕಣ್ದೆರೆಯೆ
ಬರೆ ಗಿರಿಜೆ ಕಂಡೀತನೇ ಭಕ್ತನೆಲೆ ದೇವ
ಹರ ನಿಮ್ಮನರ್ಚಿಸಲ್ಬಲ್ಲನೇ ಎಲೆ ದೇವ
ಪಾಡಲಾಡಲ್ಪೊಗಳಲೀತನೇನೀವನೇ
ನೋಡಲೊಕ್ಕಲ ಮಗಂಗೊಲ್ಪೆ ಮೇಲರಿವನೇ

ಎನೆ ವಿರೂಪಾಕ್ಷನೆಂದಂ ಮೇನಕಾಸುತೆಗೆ
ನಿನಗೆ ಪೇಳ್ವೆಂ ಕೇಳು ಕಡು ಹಿತವನಿಂತೆನಗೆ
ಅರ್ಚಿಸಲ್ಕರಿಯನನ್ಯಕ್ಕಳಿಪದಿರಬಲ್ಲ
ಎಚ್ಚತ್ತು ಪೊಗಳಲರಿಯಂ ಹುಸಿಯದಿರಬಲ್ಲ
ಆಡಲರಿಯಂ ಬಲ್ಲವರ್ಬಲ್ಲನೆಲೆ ದೇವಿ
ಪಾಡಲರಿಯಂ ಪಾಡಿ ನರ್ತವೀತಂ ದೇವಿ
ಎನ್ನನರಿಯದ ಚಲ್ವು ಶಬುದ ಚಲ್ವೆಲೆ ಗಿರಿಜೆ
ಎನ್ನನರಿಯದ ಪಾಡು ಪಲವಾದಿತಲೆ ಗಿರಿಜೆ
ನಡೆ ಇಲ್ಲದನ ಪಾಡ ನಾನೊಲ್ವೆನೇ ದೇವಿ
ನುಡಿದು ಪುಸಿವನ ನುಡಿಯ ನಾನೊಲ್ವೆನೇ ದೇವಿ
ನುಡಿ ಕಿರಿದು ನಡೆ ಪಿರಿದು ನೋಡೆನ್ನ ಭಕ್ತರ್ಗೆ
ನುಡಿಗಳುಂ ನಡೆಗಳುಂ ಪೊರಪೊಣ್ಮವಾತಂಗೆ

ಓಡಲ ಪಿಡಿದಿಹ ಗುಣಗಳಿಲ್ಲವಾ ಭಕ್ತಂಗೆ
ಸಡಗರವ ಸಂಭ್ರಮದ ಬಗೆ ಪೂರ್ವವೀತಂಗೆ
ಅವನ ಚರಿತವ ಪೊಗಳ್ವಡರಿದು ವೇದಂಗಳಿಗೆ
ಭುವನದೊಳು ನಡೆವ ಮನುಜರ ಪರಿಯು ಅಲ್ಲಿವಗೆ
ತೋರಿದವೆನೀಗಳುಂ ಭಕ್ತನ ಗುಣಂಗಳಂ
ಮೀರಿ ಮಿರುಗುತಿರ್ಪೇಕ ನಿಷ್ಠನ ಗುಣಂಗಳಂ

ಎನುತಮಿರಲಂತೊಂದು ಬಿರುಗಾಳಿ ಬೀಸಿತ್ತು
ವನದ ತರಗೆಲೆ ಕಾಳ ಧೂಳಿಯಂ ನೆಗಪಿತ್ತು
ಅಗಳಾ ಗಾಳಿ ಗರಿವಾಳ್ತಾಂಡನಳುಕುತ್ತೆ
ಸಾಗಿಸುತಲಕ್ಕೆ ಕೊಯ್ಮೀರೆಯಂ ಪಿಡಿವುತ್ತೆ
ಕಣ್ಮುಚ್ಚಿ ಧೂಳಡಸಲೊತ್ತರಿಸಿ ಬರುತಿರಲ್
ಉಣ್ಮೆದುಪವಾಸದಿಂ ಡೆಂಡಣಿಸಿ ಬರುತಿರಲ್
ಮುಂದೊಂದು ಬೀಟಿ ಇರ್ದುದ ಕಾಣದೆಡಹಿದಂ
ನಿಂದು ಗಿರಿಸುತೆ ಶಿವಂ ನೋಡುತಿರಲೆಡಹಿದಂ
ಹರಹರ ನಮಃಶಿವಾಯೆನುತೆ ಬೀಳ್ದಂ ನೋಡ
ಎರೆಯ ಬೀಟಿಗೆ ಹಾಸಿ ಹರಹಿ ಬೀಳ್ದಂ ನೋಡ
ಬೀಳ್ದು ತನ್ನಾಯುವೊಕ್ಕಂತೆ ಹಿರಿದುಂ ಮರುಗಿ
ಏಳ್ದು ಜಲ್ಲಿರ್ದಕ್ಕಿಯಂ ಕಂಡು ಮಿಗೆ ಮರುಗಿ
ಅಯ್ಯೋ ಶಿವನ ಬಾಯ ತುತ್ತ ಎಂತೊಕ್ಕೆನೇ
ಅಯ್ಯೋ ಶಿವದ್ರೋಹವಾಯ್ತಿನ್ನು ಬಾಳ್ವೆನೇ
ಎಂದುಮಿಂತಾಗದಿಂದೇಕಿಂತುಟಾದುದೋ
ಮಂದಭಾಗ್ಯವಿದೆನಗೆ ಬಂದು ಬಳಿಸಂದುದೋ
ಇನ್ನಾವ ಪೋರೆಯಂ ಮುಂತಿಟ್ಟು ಪೋದಪೆಂ
ಇನ್ನೆವರ ಹಸಿದಿರ್ಪನಿನ್ನೆಂತು ಪೋದಪೆಂ
ಇರೆನಿನ್ನಿರಂ ಸತ್ಯವಿದೆ ಸತ್ಯವೆಂದೆನುತೆ
ಅರಿವಾಣನಿರದೆ ಹೆಡತಲೆಗಾಗಿ ಮೋಹಿಸುತೆ
ಸಂಸರದ ದೇಗ್ಗೆ ಕುಡುಗೋಲ್ಗೊಳ್ವ ಮಾಳ್ಕೆಯಿಂ
ಸಂಸರಂ ತಾನಿಲ್ಲದಡಲ್ಕೈಕ ನಿಷ್ಠೆಯಿಂ
ಘರಿಘರಿಲನರಿಯೆ ಪಾರ್ವತಿ ಕಂಡು ಸಾಲ್ಗೆನಲ್

ಪರಹರ ಮಹಾದೇವಾ ಮಾಣಿಸೈ ಎನುತಿರಲ್
ನೋಣರಿನರೇ ನೋಯದಂಜದಿರು ಎಲೆ ದೇವಿ
ನೀನೇಕೆ ಮರುಗಿದಪೆ ನೋಡು ಪಾರ್ವತಿದೇವಿ
ಎನಲಲ್ಲಿ ಕೈದೆಗೆಯಲನುವಾನಿಸದೆ ಕರಂ
ಮನವಾರೆಯರಿದು ತಲೆ ಬೀಳ್ವಾಗಲೀಶ್ವರಂ
ಹೋಹೋ ಹೊ ಸಾಕಿನ್ನು ಬಿಡು ಬಿಡರಿವಾಳ್ತಾಂಡ
ಅಹಾಹ ಇಂತು ಮೀರುಪರೆ ಯರಿವಾಳ್ತಾಂಡ
ಎನುತೆ ತಲೆದಡಹಿ ಕೈವಿಡಿದೆತ್ತಿ ಶಂಕರಂ

ತನತನಗೆ ಪೂಮಳೆಗಳೆರಗಿದವನಂತರಂ
ದುಂದುಭಿ ಸ್ವನಮುಣ್ಮೆದವು ಗಗನದೋಳ್ಮೂಡೆ
ಸಂದಣಿಸಿ ಬಂದುದಲ್ಲಲ್ಲಿ ಗಣತತಿ ಕೂಡೆ
ಅಲ್ಲಿಯರಿವಾಳ್ತಾಂಡರಂ ದೇವನಪ್ಪಿದಂ
ಸಲ್ಲೀಲೆಯಿಂ ನೋಡಿ ನೋಡಿ ಮೈಪೆರ್ಚಿದಂ
ಇನಿತು ಉಪವಾಸದೊಳಗಿಂತು ಬಂದವರುಂಟೆ
ಇನಿತು ದಿನವೀ ನೇಮವಂ ಸಲಿಸಿದವರುಂಟೆ
ನಡೆ ಮಗನೆ ಕೈಲಾಸಪುರಕೆ ನೀನೆಂದೆನುತೆ
ತಡೆಯದೇರೈ ವಿಮಾನವನಿದಂ ನೀನೆನುತೆ

ಒಲ್ಲೆನೊಲ್ಲೆಂ ತಂದೆ ನಾನಿಂತು ಬರ್ಪೆನೇ
ಇಲ್ಲಿ ನೀಯುಣ್ಣದೊಡೆ ಅಲ್ಲಿಗೈತರ್ಪೆನೇ
ಆರೋಗಿಸಲ್ವೇಳ್ಪುದಿಲ್ಲಿ ಈಗಳ್ವೇವ
ಆರಯ್ಯೆ ನಾಂ ತಂದ ಕೀರೆಯಂ ಎಲೆ ದೇವ
ನೀವುಂಡೊಡಪ್ಪೆಯಾದೊಡೆ ಬಂದಪೇಂ ದೇವ
ದೇವ ಬಾರೆಂ ಬಾರೆನತಿ ವಿರೋಧವಿವೆನಗೆ
ಎನೆ ಮುದ್ದುತನವ ಸಲಿಸುತ್ತುಂಡನೀಶ್ವರಂ
ಮನವಾರೆ ಕೀರೆ ಮಾವಡುವಿಂದೆ ಶಂಕರಂ
ದನಿಗುಡಲ್ತಾಹ ನಾಂ ಬದುಕಿದೆಂ ಶಿವನುಂಡ
ಎನಗಿನ್ನು ದಾರು ಸರಿ ಎನ್ನೊಡೆಯನೊಲಿದುಂಡ
ಎಂದು ಕೊಂಡಾಡುತಿರೆ ಕಂಡು ಮೆಯ್ಪೆರ್ಚುತುಂ

ಇಂದುಮುಖಿ ಪಾರ್ವತಿಗೆ ತೋರಿ ನಲವೇರುತುಂ
ಕೊಂಡಾಡುತುಂ ನವ ವಿಮಾನದೊಳ್ಮನ್ನಿಳಿಂಸಿ
ಕೊಂಡೊಯ್ದು ಕೈಲಾಸಪುರದೊಳಗಲಂಕರಿಸಿ
ಓಗರದ ಕುಡುಗೋಲ ನೋಡು ನೋಡೆಂದೆನುತೆ
ರಾಗದಿಂ ಬಂದ ಗಣವೃಂದಕ್ಕೆ ತೋರಿಸುತೆ
ಗಣಪದವಿಯಂ ಕೊಟ್ಟು ಸುಖದೊಳರಿವಾಳ್ತಾಂಡ
ಗಣವೃಂದದೊಳ್ಸಂದು ಬಂದರರಿವಾಳ್ತಾಂಡ

ಎಂದು ಗಣಪದವಿಯಂ ಕೊಟ್ಟು ಕಾರುಣ್ಯದಿಂ
ಇಂದುಧರನಂದು ಕೈಲಾಸದೊಳ್ಪರುಷದಿಂ
ಕಮಲಭವ ವಿಮಲಮಸ್ತಕ ಹಸ್ತನೊಪ್ಪಿದಂ
ಪ್ರಮಥಗಣ ವಾರ್ಧಿವರ್ದ್ಧನ ಚಂದ್ರನೊಪ್ಪಿದಂ
ಕಂದರ್ಪ ದರ್ಪದಹನ ಜ್ಯೋತಿಯೊಪ್ಪಿದಂ
ಕುಂದಕುಟ್ಮಳ ಸನ್ನಿಭ ಶರೀರನೊಪ್ಪಿದಂ
ಭರ್ಗನೊಪ್ಪಿದನುಗ್ರತರ ರೂಪನೊಪ್ಪಿದಂ
ದುರ್ಗತ್ರಯಾರಣ್ಯದಾವ ಶಿಖಿಯೊಪ್ಪಿದಂ
ಉಮ್ಮಮ್ಮ ಪಂಪಾಪುರಧೀಶನೊಪ್ಪಿದಂ
ಉಮ್ಮ ಹಂಪೆಯ ವಿರೂಪಾಕ್ಷ ಶಿವನೊಪ್ಪಿದಂ

ಕಂದ॥ ಅರಿವಾಳ್ತಾಂಡರ್ಗೊಲವಿಂ
ಕರುಣಿಸಿ ಗಣಪದವನಿತ್ತ ಶರ್ವಂ ಶಶಿಶೇ
ಖರನೆಮಗೆ ಭಕ್ತಿಯಂ ಕೂ
ರ್ತುರವಣೆಯಿಂದೀಗೆ ಹಂಪೆಯ ವಿರೂಪಾಕ್ಷಂ

ಒಲಘಾಂಡ ಮೂರ್ತಿಗಳ ಮಹಾತ್ಮೆ.

ಕಂದ ॥ ಒಲಘಾಂಡ ಮೂರ್ತಿಗಳನಾ
ಜ್ವಲನಾರ್ಕೇಂದು ತ್ರಿನೇತ್ರನ ಪ್ರತಿಮುಂ ಮುತ್
ಕುಲಪತಿ ಮೆರೆದಂ ಧಾತ್ರೀ
ತಳದೊಳ್ಮದನಾರಿ ಹಂಪೆಯ ವಿರೂಪಾಕ್ಷಂ ॥

ರಗಳೆ.

ವಸುಮತಿಗೆ ತೊಡವೆನಿಸಿ ಪಾಂಡ್ಯ ದೇಶದೊಳೊಂದು
ಎಸೆವ ಮದುರಾಪುರವೆನಿಪ್ಪವೆಸರಿಂ ಸಂದು
ಮೆರೆದಿರ್ಪುದೊಂದು ಪುರವಾ ಪುರದೊಳೊಪ್ಪುವಂ
ಹೆರೆಸೂಡಿದನ ಭಕ್ತಿಭಾವಮುವನಪ್ಪುವಂ
ತನ್ನ ಪೆಸರೊಲಘಾಂಡಮೂರ್ತಿ ಎಂಬುದು ಧರೆಗೆ
ತನ್ನರ್ಥ ಸಂಖ್ಯೆ ಮಿಗೆ ಘನಘನಕೆ ಊರ್ವರಿಗೆ
ಬಲ್ಲಿದಂ ವ್ಯವಹಾರಿ ಎನಿಸಿರ್ಪನಾ ಪುರಕೆ
ಎಲ್ಲರಿಂದಧಿಕತರನಾಗಿರ್ಪನಾ ಪುರಕೆ
ಶಿವನ ಶರಣಗೆ ಕಿಂಕರನಾಗಿ ಜೀವಿಪಂ
ಭವನ ಶರಣರ್ಗೆಲ್ಲವಂ ಕೊಟ್ಟು ಸೇವಿಪಂ
ಇಂತಿರ್ದು ಶಿವನ ಭವನವನೊಲ್ದು ನಡೆತಂದು
ಸಂತತಂ ಪುಳಕಂಗಳುರವಣಿಸುತಂ ನಿಂದು
ಒಳಪೊಕ್ಕು ಮಿಗೆ ಜೊಕ್ಕ ನಾಯನಾರ್ಗೊಲ್ದಲ್ಲಿ
ತಿಳಿದಗ್ಗವಣಿಯ ಮಜ್ಜನವನೀವುತ್ತಲ್ಲಿ
ಹೊನ್ನ ಬೆಳ್ಳಿಯ ಮೌಕ್ತಿಕದ ಚಿಪ್ಪಿನೊಳಗಿಕ್ಕಿ
ಭಿನ್ನ ಸೌರಭ್ಯಂಗಳಿಂ ಹೊರೆದು ಕಂಪಿಕ್ಕಿ
ಇರ್ದ ಚಂದನವನೊಲ್ದುದ್ವರ್ತನಂ ಮಾಡಿ
ಹೊರ್ದಿದಿರವಂತಿ ಸಂಪಿಗೆಯಲರ್ಗಳಂ ಸೂಡಿ
ನವ ಧೂಪಮಂ ಕೊಟ್ಟು ಮಂಗಳಾರತಿ ಎತ್ತಿ
ನವನವ ಪ್ರೇಮಂಗಳಿಂದಭವನಂ ಸುತ್ತಿ

ಆರೋಗಿಸಲ್ಕೊಟ್ಟು ವೀಳೆಯಂಗಳನಿತ್ತು
ಸಾರ ಘನಸಾರಮುಂ ಪುಳುಕಿಸುತೆ ನಲಿದಿತ್ತು
ಗರ್ಭಗೃಹದಲ್ಲಿ ಚಂದನದ ಸೌದೆಯನಿಕ್ಕಿ
ನಿರ್ಝರದ ಸ್ವೇದ ಪುಳಕಂಗಳಿಂ ಮೈಯಿಕ್ಕಿ
ದೇವ ಚಂದನದ ನೇಮವನಿದಂ ನಡೆಯಿಪುದು
ಆವುದೊಂದರಿದಾದೊಡಂ ದೇವ ಕರುಣಿಪುದು
ಎಂದೆನುತೆ ನಿತ್ಯ ನೇಮಂ ಮಾಡಿ ನಡೆತಂದು
ಇಂದು ಶೇಖರನೆ ಶರಣೆನುತುಂ ಮನೆಗೆ ಬಂದು
ಕುಂದದೆ ವ್ಯವಹಾರವಾಡುತಿರ್ಪಂ ನೋಡ
ಎಂದುವುಂ ಪುಸಿಗಳಂ ಕೇಳ್ದುಮರಿಯ್ದುಂ ನೋಡ
ಭಕ್ತಿ ವೊದಲಾಗಿ ಸತ್ಯವೆ ಲಾಭವಾತಂಗೆ
ಭಕ್ತರ್ಗೆ ಕುಡುವುದೆ ವ್ಯವಹಾರವಾತಂಗೆ
ಚಂದನದ ನೇಮವೇ ತನಗೆ ಹರಣಂ ನೋಡ
ಬಂದ ಶಿವಭಕ್ತರೇ ಬಂಧುಬಳಗಂ ನೋಡ
ಇಂತು ಚಂದನದ ನೇಮಂ ಹೆಚ್ಚಿ ಹಿಗ್ಗುತ್ತಿರೆ
ಸಂತತಂ ಪಲಕೆಲವು ವತ್ಸರಂ ನಡೆವುತಿರೆ
ಮನವನಾರಯ್ಯಲ್ಕೆ ನೆನೆದನೊಂದಂ ಶಿವಂ
ಧನವನಪಹರಿಸುವುದ್ಯೋಗದಾಶ್ಚರ್ಯವಂ
ನೆನೆಯೆ ಕ್ರಮಂಗಳಿಂಧನವೆಲ್ಲ ತೀರುತಿರೆ
ದಿನದಿನಕೆ ಚಂದನದ ನೇಮ ಪಿರಿದಾಗುತಿರೆ
ಉಳ್ಳ ಹೊನ್ನೆಲ್ಲವುಂ ಚಂದನಕೆ ತೀರುತಿರೆ
ಉಳ್ಳ ವಸ್ತ್ರಾವಳಿಯು ಚಂದನಕೆ ತೀರಿತ್ತು
ಪಡೆದಿರ್ದ ಭೂಮಿಯುಂ ಚಂದನಕೆ ತೀರಿತ್ತು
ತೊಡಿಗೆಯುಂ ತೊತ್ತಿರುಂ ಚಂದನಕೆ ತೀರಿತ್ತು
ಮಾನವುಂ ಮಹಿಪೆಯುಂ ಚಂದನಕೆ ತೀರಿತ್ತು
ನಾನಾ ವಿಳಾಸಮುಂ ಚಂದನಕೆ ತೀರಿತ್ತು
ಮದನ ಮದಹರನ ನೇಮಂ ಗಂಧವಂತಿರದೆ
ಸದಮಳನ ಸಂಪದದ ಗಂಧಕ್ಕೆ ಸೈರಿಸದೆ
ಹೆಂಡತಿಯ ಕೊರಳ್ಕೈರವಾಳಿಯೊಂದುಳಿಯಲ್ಕೆ

ಶಿವಾನುಭವ.

ವರ್ಷ ೮] ಮಾರ್ಚ್ ೧೯೩೬ [ಸಂಚಿಕೆ ೬

ಕ್ರಿಯಾಭಕ್ತಿಜ್ಞಾನಗಳು.

(ಲೇಖಕ:— ಸತ್ಯಾಭಿವಾನಿ.)

ಆತ್ಮವಿಕಾಸವೇ ಎಲ್ಲ ಧರ್ಮಗಳ ಮುಖ್ಯ ಗುರಿಯು. ಆತ್ಮ ವಿಕಾಸವೆಂದರೆ ಆತ್ಮವು ಪರಿಪೂರ್ಣತೆಯನ್ನು ಹೊಂದೋಣವು. ಹಿರಿಯರು ಆತ್ಮವು ಪರಿಪಕ್ವಸ್ಥಿತಿಗೆ ಬರಬೇಕಾದರೆ ಒಂದು ಸೀಮೆಯನ್ನು ಕಲ್ಪಿಸಿ ಇ್ದಾರೆ. ಅದಕ್ಕೇ ಮೋಕ್ಷ ಅಥವಾ ಶಿವಸಾಯುಜ್ಯವೆಂಬ ಹೆಸರು. ನಮ್ಮೀ ದೇಹವು ಕಾಲಕಾಲಕ್ಕೆ ಭಿನ್ನಭಿನ್ನ ಸಂಸ್ಕಾರಗಳನ್ನು ಹೊಂದಿ ಈಗ ಒಂದು ವಿಶಿಷ್ಟತರದ ಸ್ವರೂಪವನ್ನು ತಾಳಿರುತ್ತದೆ. ನಮ್ಮ ಜೀವನು ನಾನಾ ಜನ್ಮಗಳಲ್ಲಿ ಹುಟ್ಟಿಬರುತ್ತಾನೆಂದರೆ ನಮ್ಮ ತಾಯಿ ತಂದೆಗಳ ರಕ್ತಮಾಂಸ ಮಜ್ಜಾಗಳಷ್ಟೇ ನಮ್ಮ ಶರೀರದಲ್ಲಿರದೆ ಲಕ್ಷಾವಧಿ ವರ್ಷಗಳ ಹಿಂದೆ ಇದ್ದಂಥ ನಮ್ಮ ಸಂಬಂಧಿಕರ ಅಂಶವು ಕೂಡ ನಮ್ಮಲ್ಲಿರತ್ತದೆಂಬ ರ್ಥವು. ದೇಹವು ಪರಂಪರಾಗತವಾಗಿ ವೀರ್ಯಾಂಶದಿಂದ ಈಗಿನ ರೂಪವನ್ನು ತಾಳಿದಂತೆ ಆತ್ಮವಾದರೂ ಭಿನ್ನ ಭಿನ್ನ ಸಂಸ್ಕೃತಿಗಳ ಪ್ರಭಾವದಿಂದ ಜನ್ಮಾಂತರಿಯ ಮೂಲಕ ಭಿನ್ನ ಭಿನ್ನ ಸ್ವರೂಪವನ್ನು ಹೊಂದಿ ಕೊನೆಗೆ ಪರಿಪೂರ್ಣವಾಗುವದು. ಇದಕ್ಕೇ ಆತ್ಮವಿಕಾಸವೆನ್ನುವರು. ಅದರ ಸೀಮಾಂತರವು ಅಲ್ಲಿಗೆ ಮುಗಿಯಿತು. ಆ ಸೀಮೆಯನ್ನು ಮುಟ್ಟಿದ ಬಳಿಕ ಜೀವನಿಗೆ ಪುನರ್ಜನ್ಮನಿಲ್ಲ. ಆ ಪರಿಪಕ್ವಸ್ಥಿತಿಗೆ ಮುಟ್ಟುವ ತನಕ ಮನುಷ್ಯನು ಭವದಲ್ಲಿ ಪುನಃ ಪುನಃ ಹುಟ್ಟಿಬಂಬೇಕಾಗುತ್ತದೆ. ಶರೀರವು ವ್ಯಾಯಾಮದಿಂದ ಬಲಪಡುವಂತೆಯೂ ಬುದ್ಧಿಯು ಅಭ್ಯಾಸದಿಂದ ಪ್ರಗತಿಯನ್ನು ಹೊಂದುವಂತೆಯೂ ಆತ್ಮವು ಕ್ರಿಯಾಭಕ್ತಿಜ್ಞಾನಗಳೆಂಬ ಸಾಧನಗಳಿಂದ ವಿಕಾಸವನ್ನು ಹೊಂದುವದು. ಶರೀರ ಬುದ್ಧಿ ವಿಕಾಸಗಳೂ ಆತ್ಮವಿಕಾ

ಸವೂ ಏಕಕಾಲಕ್ಕೆ ಆಗಿಬಿಡುವವು. ಮನುಷ್ಯನ ಆತ್ಮವು ಬಲವಾಗಿದ್ದರೆ ಆತನಿಗೆ ಪಂಚವಸ್ತುವಿನ ಸಾನ್ನಿಧ್ಯವು ಲಭಿಸುವದು. ದುರ್ಬಲಾತ್ಮರಿಗೆ ಪರಮಾತ್ಮನು ದೂರವಾಗೇ ಇರುತ್ತಾನೆ. ಅಂತೆಯೇ 'ನಾಯಮಾತ್ಮಾ ಬಲಹೀನೇನ ಲಭ್ಯಃ' ಎಂಬ ಶ್ರುತಿವಚನವುಂಟು.

ಲಿಂಗಾಂಗಿಗಳಾದ ಶಿವಶರಣರು ಆತ್ಮಬಲಶಾಲಿಗಳು. ಶಾಪಾನುಗ್ರಹ ಸಮರ್ಥರು, ಪಂಚಪರುಷದನಿಧಿಗಳು ಅಘಟಿತಘಟನಾ ಶಕ್ತಿಯುಳ್ಳವರು. ಆ ಪುಣ್ಯಾತ್ಮರ ಆತ್ಮವು ಹೇಗೆ ಅಷ್ಟು ಬಲಶಾಲಿಯಾಯಿತು? ಸಾಮಾನ್ಯರಾದ ನಮ್ಮಗಳಿಗೆ ಅವರಂತೆ ಆತ್ಮವಿಕಾಸವನ್ನು ಮಾಡಿಕೊಳ್ಳಲಿಕ್ಕೆ ಬರುತ್ತದೆಯೇ ಹೇಗೆ? ಬರುತ್ತಿದ್ದರ ನಾವು ಹೇಗೆ ನಡೆದುಕೊಳ್ಳಬೇಕು? ಇವು ವಿಚಾರಿಸತಕ್ಕ ವಿಷಯಗಳಾಗಿವೆ.

ಶಿವಶರಣರು ಇಷ್ಟಲಿಂಗವೇ ಪರದೈವವೆಂದು ತಿಳಿದು ಅದರ ನಿತ್ಯಾನುಸಂಧಾನದಿಂದ ಘನತರವಾದ ತೇಜಸ್ಸನ್ನೂ ಓಜಸ್ಸನ್ನೂ ಪಡೆದರು. ಅರ್ಥಾತ್ ಅವರು ಇಷ್ಟಲಿಂಗದ ಬಗ್ಗೆ ತಾಳಿದ ಕ್ರಿಯಾ ಭಕ್ತಿ ಜ್ಞಾನಗಳಿಂದ ಅವರಲ್ಲಿ ಅಂಥ ಸಾಮರ್ಥ್ಯವುಂಟಾಯಿತು. ಅದರಂತೆ ನಾವೂ ಆಚರಿಸಿದರೆ ನಮಗೂ ಅಂಥ ಶಕ್ತಿಯುಂಟಾಗುವದರಲ್ಲಿ ಯಾವ ಸಂದೇಹವೂ ಇಲ್ಲ.

ಇಷ್ಟಲಿಂಗ ಪೂಜೆಯೇ ಕ್ರಿಯೆಯು. ಹರಿದಾಡುವ ಮನಸ್ಸನ್ನು ಏಕಾಗ್ರವಾಗಿ ಮಾಡಲಿಕ್ಕೆ ಇಷ್ಟಲಿಂಗಪೂಜೆಯು ನೇರ್ಪಟ್ಟಿದೆ. ಹರಿದಾಡುವ ನೀರನ್ನು ತಡೆದು ನಿಲ್ಲಿಸುವದು ದುಸ್ಸಾಧ್ಯವು. ಆದರೆ ಅದರ ಪ್ರವಾಹವನ್ನು ಮಾತ್ರ ಬೇರೆ ಕಡೆಗೆ ತಿರುಗಿಸಲಿಕ್ಕೆ ಬರುತ್ತದೆ. ಪಾಪಕ್ಕೆಳಿಸುವ ಮನಸ್ಸನ್ನು ಪುಣ್ಯದ ಕಡೆಗೆ ಹೊರಳಿಸುವದರಿಂದಲೇ ಆತ್ಮದ ವಿಕಾಸವಾಗುತ್ತದೆ. ಆದುದರಿಂದಲೇ ಹೊನ್ನು ಹೆಣ್ಣು ಮಣ್ಣು ಈ ವಿಷಯಗಳ ಕಡೆಗೆ ನಮ್ಮ ಮನಸ್ಸು ಹೋದರೆ ನಾವು ಅಧೋಗತಿಗೆ ಹೋದೆವೆಂದು ತಿಳಿದು ಮಹಾಜ್ಞಾನಿಗಳು ಅದನ್ನು ಲಿಂಗಪೂಜೆ ಮಾಡುವ ಪವಿತ್ರ ಕೆಲಸಕ್ಕೆ ಹಚ್ಚಿದ ಮನಸ್ಸು ಮತ್ತೂ ಅತ್ತಕಡೆಗೇ ಎಳೆದರೆ ಲಿಂಗಪೂಜೆಯಿಂದೇನು ಪ್ರಯೋಜನ?

ಹೊನ್ನು ಹೆಣ್ಣು ಮಣ್ಣುಗಳಿಗೆ ಮರುಳಾಗುವದು ಮನುಷ್ಯನ ಸಹಜ ಸ್ವಭಾವವು. ಯಾವನಾದರೂ ತಾನು ಮರುಳಾಗಿಲ್ಲವೆಂದು ಹೇಳಿದರೆ ಅತನು ಸುಳ್ಳು ಹೇಳುತ್ತಾನೆಂದು ತಿಳಿಯಬೇಕು. ಅಥವಾ ಅವನಿಗೆ ಮನ

ಸ್ಸೆಂಬುದೇ ಇರಲಿಕ್ಕಿಲ್ಲ. ಮನಸ್ಸಿಲ್ಲದವನು ಮನುಷ್ಯನೇ ಅಲ್ಲ. ಸೌಂದರ್ಯ ಸೊಬಗುಗಳಿಗೆ ಮರುಳಾಗದವರಾರು? ತಮ್ಮನ್ನು ಮರುಳುಗೊಳಿಸುವಂಥ ಸೊಬಗು ಸೌಂದರ್ಯಗಳನ್ನೇ ಇಷ್ಟಲಿಂಗದಲ್ಲಿ ಕಲ್ಪಿಸಿ ಅದನ್ನು ಪತ್ರಿ, ಪುಷ್ಪ, ಧೂಪ, ದೀಪ, ನೈವೇದ್ಯಾದಿಗಳಿಂದ ಶೃಂಗರಿಸಿ ಕಾಮಿಗಳು ಅಲಂಕಾರ ಯುಕ್ತಳಾದ ಸ್ತ್ರೀಯಳನ್ನು ನೋಡಿ ಹಿಗ್ಗುವಂತೆ ಲಿಂಗನಿಷ್ಠರು ಲಿಂಗವನ್ನು ನೋಡಿ ಹರ್ಷಬಡುವರು. ಸುಂದರಳಾದ ಸ್ತ್ರೀಯು ಕಾಮುಕರನ್ನು ಆಕರ್ಷಿಸುವಂತೆ ಇಂದ್ರನೀಲಮಣಿಯಂತೆ ಕಾಂತಿಯುಕ್ತವಾದ ಲಿಂಗವು ಭಕ್ತಿವಂತರನ್ನು ಆಕರ್ಷಿಸುತ್ತದೆ. ಕಾಮುಕನು ಸ್ತ್ರೀಯಳೊಡನೆ ಬೆರೆದು ರತಿಸುಖವನ್ನು ಹೊಂದುವಂತೆ ಲಿಂಗನಿಷ್ಠನು ಲಿಂಗದ ಕೂಟದಿಂದ ರಮಿಸುವನು. ಅಂತೆಯೇ ಸಮರಸ, ಕೂಟ, ಒಡನಾಟ ಗಳೆಂಬ ಶಬ್ದಗಳನ್ನು ವಿಷಯಕ್ಕೆ ಅನುಕೂಲಿಸುವಂತೆ ಪಾರಮಾರ್ಥಕ್ಕೂ ಸಂಬಂಧಪಡಿಸಿರುವರು. ಸೌಂದರ್ಯದಲ್ಲಿ ಸತ್ಯಸ್ವರೂಪಿಯಾದ ಪರವಸ್ತುವಿನ ಅಸ್ತಿತ್ವವಿದೆ. ಸೌಂದರ್ಯದಲ್ಲಿ ಆಕರ್ಷಕ ಶಕ್ತಿಯು ಇದೆ. ಕಾರಣ ಇಷ್ಟಲಿಂಗಪೂಜಕನು ಲಿಂಗವು ಒಳ್ಳೆ ಶೋಭಾಯಮಾನವಾಗಿ ಕಾಣುವಂತೆ ಸೌಂದರ್ಯಯುಕ್ತವಾದುದನ್ನಾಗಿ ಮಾಡಬೇಕು.

ಮನಸ್ಸು ಏಕಾಗ್ರವಾಗಲಿಕ್ಕೆ ನಮ್ಮ ಆದರ್ಶವಸ್ತುವು ಸುಂದರವಾಗಿದ್ದರಷ್ಟೇ ಸಾಲದು. ಆ ವಸ್ತುವನ್ನು ಚನ್ನಾಗಿ ನಿರೀಕ್ಷಣೆ ಮಾಡುವ ಶಕ್ತಿಯೂ ನಮಗೆ ಬೇಕಾಗುತ್ತದೆ. ಇಷ್ಟಲಿಂಗವನ್ನು ಶೃಂಗರಿಸಿ ಅಂತೂ ಇಂತೂ ಅದನ್ನು ನೋಡಿ ಬಿಟ್ಟವಮಾತ್ರಕ್ಕೆ ನಮ್ಮ ಮನಸ್ಸು ಏಕಾಗ್ರವಾಗಲರಿಯದು. ಅದನ್ನು ಒಂದು ಪದ್ಧತಿಯಿಂದ ನೋಡಬೇಕಾಗುತ್ತದೆ. ಬೆನ್ನುಹುರಿಯನ್ನು ಮಣಿಸದೆ ನೆಟ್ಟಿದು ಕುಳಿತು ಎರಡೂ ನೇತ್ರಗಳ ದೃಷ್ಟಿಯನ್ನು ಮೂಗಿನ ಮೇಲೆ ಹಾಕಿ ಲಿಂಗನಿರೀಕ್ಷಣೆಮಾಡಬೇಕು. ಪದ್ಮಾಸನವನ್ನು ಹಾಕಿಕೊಂಡು ಕೂಡ್ರಬೇಕು. ಭಗವದ್ಗೀತೆಯಲ್ಲಿ "ಸಮಂ ಕಾಯ ಶಿರೋಗ್ರೀವಂ ಧಾರಯನ್ನಚಲಂ ಸ್ಥಿರಃ। ಸಂಪ್ರೇಕ್ಷ್ಯನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್॥" ಅಂದರೆ ಬೆನ್ನು, ಗೋಣು, ತಲೆ ಇವುಗಳನ್ನು ಒಂದೇ ರೇಷೆಯಲ್ಲಿ ನಿಲ್ಲಿಸಿ ಅಲ್ಲಾಡದಂತೆ ಸ್ಥಿರಮಾಡಬೇಕು. ಅತ್ತಿತ್ತ ದಿಕ್ಕುಗಳ ಕಡೆಗೆ ನೋಡದೆ ದೃಷ್ಟಿಯನ್ನು ತನ್ನ ಮೂಗಿನ ತುದಿಯಲ್ಲಿರಿಸಿ ಪರವಸ್ತುವನ್ನು ನಿರೀಕ್ಷಣೆಮಾಡಬೇಕೆಂದು ಹೇಳಿದೆ. ಈ ಮೇರೆಗೆ ಆಸನ ನಿರೀಕ್ಷಣಕ್ರಮಗಳಾದರೂ ಚಿತ್ತೈಕಾಗ್ರತೆಗೆ ಸಾಧನೀ

ಭೂತವಾಗಿವೆ. ಡ್ರಿಲ್ ಶಿಕ್ಷಕರಿಂದ ಕ್ರಮಬದ್ಧವಾದ ನಡಿಗೆ ಶಿಸ್ತುಗಳನ್ನು ಕಲಿತುಕೊಳ್ಳುವಂತೆ ಯೋಗ್ಯ ಗುರುವಿನಿಂದ ಆಸನ ನಿರೀಕ್ಷಣಗಳ ಪರಿಯನ್ನರಿತುಕೊಳ್ಳಬೇಕು.

ಇಷ್ಟಲಿಂಗಪೂಜೆ ಮಾಡುವಾಗ ನಮ್ಮ ಲಿಂಗಮೂರ್ತಿಯು ಸುಂದರವಾಗಿ ಕಾಣಬೇಕು. ನಾವು ನಿಯಮಿತವಾದ ಆಸನಬದ್ಧರಾಗಿ ಲಿಂಗ ನಿರೀಕ್ಷಣೆ ಮಾಡಬೇಕು. ಆದರೆ ಇಷ್ಟೆಲ್ಲ ಮಾಡಿ ನಮ್ಮ ದೇಹವೇ ಅಶುಚಿಯಾಗಿದ್ದರೆ. ನಮ್ಮ ಬಟ್ಟೆಗಳು ಮಲಿನವಾಗಿದ್ದರೆ ಲಿಂಗಮೂರ್ತಿಯಲ್ಲಿಯೇ ನಮ್ಮ ಮನಸ್ಸನ್ನು ನಾಟಿಸಲು ಸೊಗಸೆನಿಸದು. ದೇಹಬಟ್ಟೆಗಳು ಪರಿಶುದ್ಧವಾಗಿದ್ದರೆ ಮನಸ್ಸೂ ಪವಿತ್ರವಾಗುತ್ತದೆ. ಆದುದರಿಂದ ಶುದ್ಧ ನೀರಿನಿಂದ ಸ್ನಾನಮಾಡುವದೂ ಬಟ್ಟೆಬರಿಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವದೂ ಚಿತ್ತೈಕಾಗ್ರತೆಗೆ ಬಲವಾದ ಸಾಧನಗಳಾಗಿವೆ. ಇಷ್ಟೆಲ್ಲ ಸಾಹಿತ್ಯಗಳನ್ನಡಿಮಾಡಿಟ್ಟುಕೊಂಡರೂ ಮಂಗ ಮನಸ್ಸು ದುಷ್ಟ ವಿಷಯಗಳ ಕಡೆಗೆ ಧಾವಿಸಿದರೆ ಮಾಡುವದೇನು?

ಕ್ರಿಯಾಚಾರವು ಆತ್ಮವಿಕಾಸದ ಮೊದಲನೆಯ ಮೆಟ್ಟಿಲು. ಒಳ್ಳೆ ಮಡಿವಂತನಾದ ಮನುಷ್ಯನು ಧಾಳವಾಗಿ ವಿಭೂತಿಯನ್ನು ಧರಿಸಿ ಒಟ್ಟಿ ಒಟ್ಟಿ ಪತ್ರೆಪುಷ್ಪಗಳನ್ನು ಧರಿಸಿ ಲಿಂಗಪೂಜೆ ಮಾಡಿದರೆ ಅಷ್ಟಕ್ಕೇ ಅತನ ಮನಸ್ಸು ಪವಿತ್ರವಾಯಿತೆಂತಲ್ಲ. ನಾವು ಇಷ್ಟೆಲ್ಲ ಮಾಡುವದು ಆ ಲಿಂಗದಲ್ಲಿ ಪ್ರೇಮವನ್ನು ಬೆಳೆಯಿಸುವದಕ್ಕಾಗಿಯೇ. ನಾವು ಕ್ರಿಯೆಯನ್ನು ಮಾಡುತ್ತ ಹೋದಂತೆ ಲಿಂಗದ ಬಗ್ಗೆ ನಮ್ಮ ಪ್ರೇಮವು ಬೆಳೆಯುತ್ತ ಹೋದರೆಮಾತ್ರ ನಮ್ಮ ಕ್ರಿಯಾಚಾರವೆಲ್ಲ ಸಫಲವಾದಂತಾಯಿತು. ಆದರೆ ಕ್ರಿಯೆಯನ್ನು ಮನ ಬಲ್ಲಂತೆ ಬೆಳೆಯಿಸಿ ಜನರನ್ನು ದಂಗುಬಡಿಸಿ ತಮ್ಮ ಮನಸ್ಸಿನ ಪ್ರೇಮವನ್ನು ಹೊನ್ನು, ಹೆಣ್ಣು, ಮಣ್ಣುಗಳಲ್ಲಿರುವ ಕುನ್ನಿ ಡಂಭಕರಿಗೆ ಆತ್ಮವಿಕಾಸವೆಂದಿಗೂ ಆಗಲರಿಯದು. ನಾವು ಮಾಡುವ ಕ್ರಿಯೆಯೆಲ್ಲವೂ ಇಷ್ಟಲಿಂಗದ ಪ್ರೇಮಕ್ಕೆ ಅರ್ಥಾತ್ ಭಕ್ತಿಗೆ ಪೋಷಕವಾಗಿರಬೇಕು. ಕ್ರಿಯೆಯ ಪರ್ಯವಸಾನವೇ ಭಕ್ತಿಯು. ಭಕ್ತಿಯೇ ಕ್ರಿಯೆಯ ಫಲವು. ಭಕ್ತಿಯು ಆತ್ಮವಿಕಾಸದ ಎರಡನೆಯ ಮೆಟ್ಟಿಲು.

ಭಕ್ತಿಯಲ್ಲಿ ಡಾಂಭಿಕ ಭಕ್ತಿಯೆಂದೂ ಶುದ್ಧ ಭಕ್ತಿಯೆಂದೂ ಎರಡು ಪ್ರಕಾರಗಳುಂಟು. ಇವುಗಳಲ್ಲಿ ಮೊದಲನೆಯದು ಎರಡನೆಯವರನ್ನು

ಮೋಸಗೊಳಿಸಲಿಕ್ಕೂ ಸ್ವಾರ್ಥವನ್ನು ಸಾಧಿಸಿಕೊಳ್ಳಲಿಕ್ಕೂ ಉಪಯೋಗಿಸಲ್ಪಡುತ್ತದೆ. ಡಾಂಭಿಕರು ಆಡಂಬರಕ್ಕೆ ಮರುಳಾಗುವ ಅಜ್ಞರನ್ನು ಬಲೆಯಲ್ಲಿ ಕೆಡವಿ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುವರು. ಆದರೆ ಶುದ್ಧ ಭಕ್ತಿಯುಳ್ಳವರು ತಮ್ಮಿಂದ ತಾನೇ ಉದ್ಧಾರ ಹೊಂದುವುದಲ್ಲದೆ ಅನ್ಯರನ್ನು ಸಹ ತಮ್ಮ ಭಕ್ತಿಯ ಬಲದಿಂದ ಉದ್ಧಾರಮಾಡುತ್ತಾರೆ.

ಇಷ್ಟಲಿಂಗದಲ್ಲಿ ಭಕ್ತಿಯನ್ನಿರಿಸುವದೆಂದರೆ ಲಿಂಗಮೂರ್ತಿಯನ್ನು ಬಿಟ್ಟು ಬಿಡದೆ ಪ್ರಾರ್ಥಿಸುವದು ಸ್ತುತಿಸುವದು ಅಥವಾ ಧ್ಯಾನಮಾಡುವದು ಪ್ರಾರ್ಥನೆಯಲ್ಲಿ ಬಲವಾದ ಸಾಮರ್ಥ್ಯವಿರುತ್ತದೆಂದು ಲಾರ್ಡ್ ಟೆನಿಸನ್ನನೆಂಬ ಕವಿಯು ಕೆಳಗೆ ಬರೆದ ಪ್ರಕಾರ ಹೇಳಿದ್ದಾನೆ.

More things are wrought by prayer
Than this world dreams of
Wherefore, let thy voice rise like a fountain
For me night and day,
for what are men better than sheep or goats
If knowing God, they lift not hands of prayer
Both for themselves and those who call them friends.

ಕನಸು ಮನಸ್ಸುಗಳಲ್ಲಿಯೂ ಕೂಡ ಕಾಣಲಶಕ್ಯನಾದ ಕಾರ್ಯಗಳು ಪ್ರಾರ್ಥನೆಯಿಂದ ಲಭಿಸುತವೆ. ಆದ್ದರಿಂದ ನೀನು ಹಗಲಿರಳು ಬಿಟ್ಟುಬಿಡದೆ ಪರಮಾತ್ಮನ ಧ್ಯಾನಮಾಡು. ಪರಮಾತ್ಮನ ಕಡೆಗೆ ನಿನ್ನ ಧ್ವನಿಯು ಕಾರಂಜಿಯಂತೆ ಪುಟಿಯುತ್ತಿರಲಿ. ಯಾರಿಗೆ ಪರಮಾತ್ಮನ ಅಸ್ತಿತ್ವದ ಅರಿವುಂಟೋ ಅವರು ಅತನನ್ನು ಕೈನೀಡಿ ಪಾರ್ಥಿಸಿ ತಮ್ಮ ಹಾಗೂ ತಮ್ಮ ಬಂಧುಗಳ ಹಿತವನ್ನು ಚಿಂತಿಸದೆ ಹೋದರೆ ಅವರು ಕುರಿ ಆಡುಗಳಿಗಿಂತ ಕೀಳಲ್ಲವೇ?

ಯೇಸು ಕ್ರಿಸ್ತನು ಹೇಳಿರುವುದೇನಂದರೆ ನಿನ್ನಲ್ಲಿ ಪರಮಾತ್ಮನ ಬಗ್ಗೆ ಶ್ರದ್ಧೆಯಿದ್ದರೆ ನಿನ್ನೆದುರಿಗೆ ಕಾಣುವ ಗುಡ್ಡಕ್ಕೆ ನೀನು ನಡೆಯೆಂದು ಆಜ್ಞಾಪಿಸು. ಅದು ತತ್‌ಕ್ಷಣವೇ ಸಂಚರಿಸಬಲ್ಲದು. ಮಿ. ಗಾಂಧಿಯವರಾದರೂ ತಮ್ಮ ಎಲ್ಲ ಶ್ರೇಯಸ್ಸಿಗೂ ಯಶಸ್ಸಿಗೂ ಪರಮಾತ್ಮನಲ್ಲಿಟ್ಟ ನಿಸ್ಸೀಮ ಭಕ್ತಿಯೇ ಕಾರಣವೆಂದು ಹೇಳಿದ್ದಾರೆ. ಭಕ್ತಿಯಲ್ಲಿ ಅಂಥ

ಉಜ್ಜಲವಾದ ಶಕ್ತಿಯುಂಟು. ಕಾರಣ ಇಷ್ಟಲಿಂಗದಲ್ಲಿ ನಾವು ಅನನ್ಯ ಭಕ್ತಿಯನ್ನಿರಿಸಿದ್ದಾದರೆ ನಮಗೂ ಅಂಥ ಸಾಮರ್ಥ್ಯವು ಬಂದೇ ಬರುವದೆಂಬದು ಸಿದ್ಧಾಂತವು.

ಲಿಂಗಪೂಜೆಗಾಗಿ ಅನೇಕ ಕ್ರಿಯೆಗಳನ್ನು ಮಾಡುವ ಮನುಷ್ಯನಲ್ಲಿ ಆ ಲಿಂಗದ ಬಗ್ಗೆ ಭಕ್ತಿಯಿಲ್ಲದಿದ್ದರೆ ವ್ಯರ್ಥವಲ್ಲವೇ? ಅದರಂತೆಯೇ ಲಿಂಗದಲ್ಲಿಯೇ ಪರಮಭಕ್ತಿಯನ್ನಿರಿಸಿದ ವ್ಯಕ್ತಿಯು ತನ್ನ ಪ್ರೇಮವನ್ನು ಪ್ರಮಾದವಶದಿಂದ ಹೊಲ್ಲದ ವಿಷಯಗಳಲ್ಲಿರಿಸಿದರೆ ಹೇಗೆ? ತನ್ನ ಗಂಡನನ್ನೇ ಹೆಚ್ಚಾಗಿ ಪ್ರೀತಿಸುವ ಸ್ತ್ರೀಯಳು ಪರಪುರುಷನನ್ನು ಆಕಸ್ಮಾತ್ ಅಷ್ಟೇ ಪ್ರೇಮದಿಂದ ಕಾಣಲಿಕ್ಕಿಲ್ಲೆಂದು ಹೇಗೆ ಹೇಳಬೇಕು? ಒಂದೇ ಪ್ರೇಮವು ಎಂಡು ವಿಷಯಗಳಲ್ಲಿ ಹಂಚಲ್ಪಟ್ಟರೆ ಆತ್ಮವು ಬಲಶಾಲಿಯಾಗದೆ ಶಿಥಿಲವಾಗಲಿಕ್ಕಿಲ್ಲವೇ? ಆದುದರಿಂದ ಮನಸ್ಸನ್ನು ಶಿಥಿಲವಾಗಗೊಡಬಾರದೆಂದೇ ಮಹನೀಯರು ಜ್ಞಾನವೆಂಬ ಮೂರನೆಯ ಮೆಟ್ಟಿಲನ್ನು ಕಲ್ಪಿಸಿದ್ದಾರೆ. ಭಕ್ತಿಯಿಂದ ಪ್ರಸಂಗವಶಾತ್ ಏನಾದರೂ ಪ್ರಮಾದವು ಘಟಿಸಬಹುದು. ಆದರೆ ಅರಿವು, ಸದಸದ್ವಿವೇಕ ಬುದ್ಧಿ, ಅಥವಾ ಜ್ಞಾನದಿಂದ ಪ್ರಮಾದವು ಘಟಿಸುವ ಸಂಭವವೇ ಇಲ್ಲ. ಆದುದರಿಂದ ಜ್ಞಾನವೇ ಎಲ್ಲಕ್ಕೂ ಶ್ರೇಷ್ಠವಾದದ್ದು. ಜ್ಞಾನಿಗಳೇ ಎಲ್ಲರಿಗಿಂತಲೂ ಮಿಗಿಲಾದವರು. ಭಕ್ತಿಯ ಕ್ಷೇತ್ರದಲ್ಲಿ ಪ್ರಮಾದವೆಂಬ ಮದ್ದಾನೆಯು ಸಂಚರಿಸಿದರೆ ಜ್ಞಾನವೆಂಬ ಅಂಕುಶವು ಇರಿದು ಅದನ್ನು ದಾರಿಗೆ ತರುವದು. ಭಕ್ತಿಯಲ್ಲಿ ಅಜ್ಞಾನವೆಂಬ ಕತ್ತಲೆಯು ಮುಸುಕಿದರೆ ಸುಜ್ಞಾನವೆಂಬ ಜ್ಯೋತಿಯು ಅದನ್ನು ಧ್ವಂಸ ಮಾಡುವದು. ಭಕ್ತಿಯ ಸಾಮರ್ಥ್ಯವನ್ನು ಸರಿಯಾಗಿ ಕ್ರಮಗೊಳಿಸಲಿಕ್ಕೆ ಜ್ಞಾನದ ಸಹಾಯವು ಅವಶ್ಯ ಬೇಕು. ಜ್ಞಾನದಿಂದಲೇ ನಿಜವಾದ ಆತ್ಮವಿಕಾಸವುಂಟಾಗುವದು.

ಈ ಜಗತ್ತಿನ ವಸ್ತು ಸ್ಥಿತಿಯನ್ನೇ ಬದಲಾಯಿಸಿ ಲೋಕಕ್ಕೆ ಹೊಸ ಮಾರ್ಗವನ್ನು ತೋರಿಸಿಕೊಟ್ಟ ಮಹಾತ್ಮರುಗಳೆಲ್ಲ ಕೇವಲ ಕ್ರಿಯಾಜಾರಿಗಳೂ ಭಕ್ತಿವಂತರೂ ಇರದೆ ಮಹಾಜ್ಞಾನಿಗಳಾಗಿದ್ದರು. ಅವರಿಗೇ ನಾವು ಅವತಾರಿ ಪುರುಷರೆಂದೆನ್ನುತ್ತೇವೆ. ಅವರ ಅನುಕರಣವನ್ನೇ ನಾವು ಮಾಡುತ್ತೇವೆ. ಶ್ರೀ ಕೃಷ್ಣ, ಬುದ್ಧ, ಕ್ರೈಸ್ತ, ಬಸವ, ಮ. ಗಾಂಧಿ ಮೊದಲಾದ ವಿಭೂತಿಗಳು ಕ್ರಿಯೆಯಲ್ಲಿ ನಿರತರೂ ಭಕ್ತಿಯಲ್ಲಿ ಬಲ್ಲಿದರೂ ಜ್ಞಾನದಲ್ಲಿ ಅಧಿಕರೂ ಆಗಿದ್ದರಿಂದಲೇ ಜಗತ್ತು ಅವರಿಗೆ ಅಷ್ಟು ಪೂಜ್ಯತೆಯನ್ನು ತೋರಿಸುತ್ತದೆ.

ವೀರಶೈವರು ಇಷ್ಟಲಿಂಗದ ಮುಖಾಂತರವಾಗಿ ಕ್ರಿಯಾ ಭಕ್ತಿ ಜ್ಞಾನಗಳೆಂಬ ಮೂರು ಮೆಟ್ಟಿಲುಗಳಿಂದ ತಮ್ಮ ಆತ್ಮವಿಕಾಸವನ್ನು ಮಾಡಿಕೊಳ್ಳುವರು. ಉಳಿದವರು ತಮ್ಮ ಇಷ್ಟದೇವತೆಯಲ್ಲಿ ಈ ಪ್ರಕಾರದ ಮೂರು ತರಗತಿಗಳಿಂದ ಪರಿಪೂರ್ಣತೆಯನ್ನು ಹೊಂದುವರು. ಒಟ್ಟಿನ ಮೇಲೆ ಕ್ರಿಯಾ ಭಕ್ತಿ ಜ್ಞಾನಗಳು ಆತ್ಮವಿಕಾಸಕ್ಕೆ ಪ್ರಬಲವಾದ ಸಾಧನಗಳೆಂದು ಎಲ್ಲರೂ ಒಪ್ಪತಕ್ಕ ಮಾತಾಗಿದೆ.

ಶೂನ್ಯಸಂಪಾದನೆಯ ರಹಸ್ಯ.

ಲೇ:— ವಿ॥ ಕಲ್ಯಾಣಪ್ಪ ಬ್ಯಾಳಿ ಬಿ. ಎ. ಸಿದ್ಧೇಶ್ವರ ಹಾಯಸ್ಕೂಲ ವಿಜಾಪುರ.

ಲೇಖಾಂಕ ೨

ಗುರುಕರುಣ ಸಂಪಾದನ.

ಶ್ರೀಮನ್ನಿರಂಜನ ಪ್ರಭುದೇವರು ಆಯಾಯ ಪ್ರಸಂಗಗಳಲ್ಲಿ ಮಾಡಿದ ಮಹಾನುಭಾವ ಸದ್ಗೋಷ್ಠಿಯಲ್ಲಿ ೨೧ ಸಂಪಾದನೆಗಳು ವಿವರಿಸಲ್ಪಟ್ಟಿವೆ. ಅವು ಯಾವವೆಂದರೆ:—

೧ ಗುರುಕರುಣಸಂಪಾದನೆ, ೨ ಮುಕ್ತಾಯಕ್ಕಗಳ ಸಂಪಾದನೆ, ೩ ಸಿದ್ಧರಾಮಯ್ಯದೇವರ ಸಂಪಾದನೆ. ೪ ಬಸವನು ಚನ್ನಬಸವನಿಗೆ ಮಾಡಿದ ಉಪದೇಶಸಂಪಾದನೆ, ೫ ಪ್ರಭುದೇವರು ಕಲ್ಯಾಣಕ್ಕೆ ಬಂದ ಸಂಪಾದನೆ, ೬ ಮರುಳಶಂಕರದೇವರ ಸಂಪಾದನೆ, ೭ ಬಸವೇಶ್ವರನ ಸಂಪಾದನೆ, ೮ ಚನ್ನಬಸವದೇವರ ಸಂಪಾದನೆ, ೯ ಮಡಿವಾಳಯ್ಯಗಳ ಸಂಪಾದನೆ. ೧೦ ಸಿದ್ಧರಾಮಯ್ಯನ ಗುರುಕರುಣಸಂಪಾದನೆ, ೧೧ ಪ್ರಭುದೇವರ ಪೂಜಾಸ್ತುತಿ ಸಂಪಾದನೆ, ೧೨ ಆಯದಕ್ಕಿ ಮಾರಯ್ಯಗಳ ಸಂಪಾದನೆ, ೧೩ ಮೋಳಿಗೆಯ ಮಾರಯ್ಯಗಳ ಸಂಪಾದನೆ, ೧೪ ನುಲಿಯ ಚಂದಯ್ಯಗಳ ಸಂಪಾದನೆ, ೧೫ ಘಟ್ಟಿವಾಳಯ್ಯಗಳ ಸಂಪಾದನೆ, ೧೬ ಉಡುತಡಿ ಮಹಾದೇವಿಯಕ್ಕಗಳ ಸಂಪಾದನೆ, ೧೭ ಪ್ರಭುಪರ್ಯಟನ ಸಂಪಾದನೆ ೧೮ ಪ್ರಭುದೇವರ ಶೂನ್ಯಪೀಠ ಮೂರ್ತಸಂಪಾದನೆ, ೧೯ ಪ್ರಭುವಾರೋಗಣೆಯ ಸಂಪಾದನೆ, ೨೦ ಶರಣರವಸಾನ ಪರಾಮರಿಕೆ ಸಂಪಾದನೆ, ೨೧ ಎಲ್ಲ ಗಣಂಗಳ ನಿರ್ವಯಲ ಸಮಾಧಿ ಸಂಪಾದನೆ.

ಈ ಎಲ್ಲ ಸಂಪಾದನೆಗಳ ವಿಷಯವಾಗಿ ಅನುಕ್ರಮದಿಂದ ಪ್ರತಿಪಾದಿಸಲು ಪ್ರಯತ್ನವನ್ನು ಮಾಡಲಾಗುವದು.

೧ ಗುರುಕರುಣ ಸಂಪಾದನೆ.

ಮಾಯಾ ಸಂಸಾರಗಳಿಂದ ನಿರ್ಲಿಪ್ತವಾದ ಆತ್ಮನಿಗೆ ಗುರುಕರುಣವಿಲ್ಲದೆ ಮುಕ್ತಿಯಿಲ್ಲ ಎಂಬೀ ತತ್ವವನ್ನು ಶ್ರೀ ಪ್ರಭುದೇವರು ಗೊಗ್ಗಯ್ಯದೇವರಿಗೆ ಮಾಡಿದ ಉಪದೇಶವೇ ಗುರುಕರುಣಸಂಪಾದನೆಯೆಂದು ಕರೆಯಲ್ಪಡುತ್ತದೆ. ಗೊಗ್ಗಯ್ಯನೆಂಬ ಮಹಾ ಶರಣನೊಬ್ಬನು ಒಂದು ತೋಟದಲ್ಲಿ ಕೆಲಸವಮಾಡುತ್ತಿದ್ದುದನ್ನು ಶ್ರೀ ಪ್ರಭುದೇವರು ಕಂಡು ಅದನ್ನು ವಿಡಂಬಿಸಿ ಪಾರಮಾರ್ಥಸೂಚಕವಾದ ತೋಟವನ್ನು ಹೇಗೆ ಮಾಡಬೇಕೆಂಬವನ್ನು ಕೆಳಗಿನ ವಚನದಿಂದ ವಿಶದಪಡಿಸಿದರು.

"ತನುವ ತೋಟವ ಮಾಡಿ, ಮನವ ಗುದ್ದಲಿ ಮಾಡಿ, ಭ್ರಾಂತಿ ಬೇರನಗಿದು, ಸಂಸಾರದ ಹೆಂಟಿಯ ಬಗಿದು ಬಿತ್ತಿದೆನಯ್ಯಾ ಬ್ರಹ್ಮ ಬೀಜವ. ಅಖಂಡಮಂಡಲವೆಂಬ ಬಾವಿ, ಪವನವೆ ರಾಟಾಳ, ಸುಷುಮ್ನದಿಂದುದಕವ ತಿದ್ದಿ, ಬಸವಗಳೈವರು ಹಸಗೆಡಿಸಿಹವೆಂದು ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ ಆವಾಗಳು ಈ ತೋಂಟದಲ್ಲಿ ಜಾಗರವಿದ್ದು ಸಸಿಯ ಸಲುಹಿದೆನು ಕಾಣಾ ಗುಹೇಶ್ವರಾ."

ಅಂದರೆ ಈ ತನುವೆಂಬ ತೋಟದಲ್ಲಿ ಆತ್ಮವೆಂಬ ಸಸಿಯನ್ನು ಸಲುಹಬೇಕಾಡರೆ ಇಂದ್ರಿಯ ನಿಗ್ರಹ, ಸಮತೆ, ಸೈರಣೆಗಳಿಂದ ಕೂಡಿದ ಯೋಗಮಾರ್ಗವು ಅವಶ್ಯಕವಾದುದು ಎಂಬರ್ಥ. ಆಮೇಲೆ ಪ್ರಭುದೇವರು ಗೊಗ್ಗಯ್ಯನಿಗೆ ಗುರುವಿನ ನಿಲವನ್ನು ಅರುಹಿದರು. ಅದರ ಸಾರಾಂಶವೇನಂದರೆ ನಮ್ಮ ಮೂಲಜ್ಞಾನದಿಂದ ಹೃದಯ ಗುಹೆಯೊಳಗಿನ ಅರಿವು ಜಾಗ್ರತವಾಯಿತ್ತು. ಆ ಅರಿವು ಮೂರ್ತಿಮಂತ ಗುರುವಾಗಿ ಭಾವದಲ್ಲಿ ತೋರಿ ಕರುಣಿಸಿತ್ತು. ಆ ಗುರುವಿನ ಚೈತನ್ಯವೇ ಲಿಂಗರೂಪವಾಗಿ ಕರಸ್ಥಲದಲ್ಲಿ ಬಂದು ನೆಲಸಿತ್ತು. ಆ ಕರಸ್ಥಲದ ಲಿಂಗವನ್ನು ಷಡ್ವಿಧ ಭಕ್ತಿಯಿಂದ ಪೂಜೆಯ ಮಾಡಲು ಸುಜ್ಞಾನ ಜ್ಯೋತಿಯು ಬೆಳಗಿತ್ತು.

ನಾವು ಬಾಹ್ಯದಲ್ಲಿ ಮನ್ನಿಸುವ ಗುರುಲಿಂಗಜಂಗಮ ವಸ್ತುಗಳು ನಮ್ಮಂತರಂಗದಲ್ಲಿ ಬೆಳಗುವ ಅರಿವು, ಪ್ರಾಣ, ಸುಜ್ಞಾನಗಳ ಚಿಹ್ನಗಳಲ್ಲದೆ ಬೇರಲ್ಲ. ವೀರಶೈವರು ಸಾಮಾನ್ಯರಿಗೆ ಈ ತತ್ವಗಳನ್ನು ತಿಳಿಸಬೇಕೆಂದು ಬಾಹ್ಯರೂಪದಲ್ಲಿ ಮೂರ್ತಿಗಳನ್ನು ಕಲ್ಪಿಸಿರುವರೇ ಹೊರತು ಮಹಾಜ್ಞಾನಿಗಳಿಗೆ ಅಂತರೋಪಾಸನೆಯೇ ಮಹತ್ವವಾದುದು. ಅನಾದಿ ಕಾಲದಿಂದ ಆ ಪರವಸ್ತುವಿನಿಂದ ಉಭವಿಸಿದ ನಮ್ಮ ಅರಿವೇ ಗುರುವು; ಪ್ರಾಣವೇ ಲಿಂಗವು; ಸುಜ್ಞಾನವೇ ಜಂಗಮವು. ಗುರುಲಿಂಗ ಜಂಗಮಗಳೆಂದರೆ ಪರಸ್ಪರ ಭಿನ್ನವಸ್ತುಗಳಲ್ಲ. ದೇಹ ಜೀವಗಳು ಕೂಡಿದ್ದಾಗಳೇ ಒಂದು ವಸ್ತುವಿಗೆ ನಾವು ಜೀವಿಯೆಂದು ಕರೆಯುವಂತೆ ಗುರುಲಿಂಗಜಂಗಮಗಳು ಕೂಡಿದಾಗಳೇ ಆ ಪರವಸ್ತುವಾಗುವದು. ಈಪ್ರಕಾರ ಗುರುಲಿಂಗಜಂಗಮದ ಉತ್ಪತ್ತಿಯನ್ನು ತಿಳಿಸುವದೇ ಗುರುಕರುಣ ಸಂಪಾದನೆಯ ರಹಸ್ಯವಾಗಿದೆ.

ಶ್ರೀ ಪ್ರಭುದೇವರು ಮೊದಲು ತಮಗೆ ಗುರುಕರುಣೆಯು ಹೇಗುಂಟಾಯಿತೆಂಬದನ್ನು ಗೊಗ್ಗಯ್ಯನವರಿಗೆ ತಿಳಿಸಿದರು. ಅದರ ಮುಖ್ಯಾಂಶವೇನಂದರೆ:—

ಶ್ರೀ ಪ್ರಭುದೇವರು ಮೂಲಜ್ಞಾನದೃಷ್ಟಿಯಿಂದ ತಮ್ಮ ಹೃದಯವೆಂಬ ಗುಹೆಯಲ್ಲಿ ಮಿನಗುವ ಅರಿವೆಂಬ ಜ್ಯೋತಿಯನ್ನು ಕಂಡರು. ಆ ಅರುವಿಗೆ ಮೂರ್ತಸ್ವರೂಪವನ್ನು ಕೊಟ್ಟು ಗುರುವೆಂದು ಭಾವಿಸಿ ಅನಿಮಿಷದೇವರೆಂದು ಹೆಸರಿಟ್ಟರು. ಆ ಗುರುದರ್ಶನದಿಂದ ಆನಂದಪರವಶರಾಗಿ ಅವರನ್ನು ಮನವಾರೆ ಕೊಂಡಾಡಿ ಆ ಗುರುವಿನ ಚೈತನ್ಯವನ್ನು ತಮ್ಮ ಪ್ರಾಣದಲ್ಲಿ ಅಳವಡಿಸಿಕೊಂಡರು. ಆ ಮೇಲೆ ಅರಿವು ಪ್ರಾಣಗಳ ಸಂಕಲನದಿಂದುಂಟಾದ ಪ್ರಾಣಲಿಂಗಾನುಸಂಧಾನದಿಂದ ಆ ಪ್ರಾಣಕ್ಕೆ ಮೂರ್ತಸ್ವರೂಪಗೊಳಿಸಿ ಇಷ್ಟಲಿಂಗವೆಂದು ಹೆಸರಿಟ್ಟು ಕರಸ್ಥಲದಲ್ಲಿ ನೆಲಿಸಿಕೊಂಡರು. ಆ ಇಷ್ಟಲಿಂಗವನ್ನು ವಿಶ್ವಾಸ, ನಿಷ್ಠೆ, ಸಾವಧಾನ, ಸ್ವಾನುಭವ, ಸಮರಸ, ಆನಂದಗಳೆಂಬ ಷಡ್ವಿಧ ಭಕ್ತಿಯಿಂದ ಆರಾಧಿಸಿ ಮಹಾ ಜ್ಞಾನವೇ ತಾವಾಗಿ ನಿಂದರು. ಈ ಸ್ಥಿತಿಗೆ ಜಂಗಮಸ್ಥಲವೆಂದೆನ್ನುವರು. ಈ ಪ್ರಕಾರ ಮೂಲಜ್ಞಾನ, ಸುಜ್ಞಾನ, ಮಹಾಜ್ಞಾನಗಳಿಂದ ಇಷ್ಟ ಪ್ರಾಣ ಭಾವಲಿಂಗಗಳಲ್ಲಿ ಹೇಗೆ ಬೆರೆಯಬೇಕೆಂಬುವದನ್ನು ತಿಳಿಸುವದೇ ಗುರುಕರುಣಸಂಪಾದನೆಯೆನಿಸಿಕೊಳ್ಳುತ್ತದೆ. ನಮ್ಮ ಆತ್ಮವು ಅರಿವು (ಗುರು,) ಪ್ರಾಣ (ಲಿಂಗ) ಸುಜ್ಞಾನ (ಜಂಗಮ) ಗಳಿಂದ ಹೇಗೆ ಉಜ್ವಲಗೊಳ್ಳುವದೆಂಬದನ್ನು ಶ್ರೀ ಪ್ರಭುದೇವರ ದೃಷ್ಟಾಂತದಿಂದ ಇದರಡಿಯಲ್ಲಿ ವಿವರಿಸಲಾಗಿದೆ.

ಗುರು.

ಗುರುವೆಂದರಾರು? ನಮ್ಮಂತೆ ಸ್ಥೂಲಕಾಯದ ಮೂರ್ತಿಯಲ್ಲ. ಈ ವಿಷಯದಲ್ಲಿ ಪ್ರಭುದೇವರು ಅಪ್ಪಣೆಕೊಡಿಸಿದ್ದೇನಂದರೆಃ— "ಕಾಯವಲಾದ ಮೂರ್ತಿಯಲ್ಲ. ಜೀವದಲಾದ ಮೂರ್ತಿಯಲ್ಲ, ಪ್ರಾಣದಲಾದ ಮೂರ್ತಿಯಲ್ಲ" ಗುರುವೆಂದರೆ ಹೃದಯವೆಂಬ ಗುಹೆಯಲ್ಲಿ ನಿಜಸಮಾಧಿಯೋಗ ಮೂರ್ತಿಗೊಂಡಿಪ್ಪ ಅರಿವು. ಪ್ರಭುದೇವರು ತಮ್ಮಂತರಂಗದ ಮೋಹಾಮೂರ್ತಿಯನ್ನು ಗುರುವೆಂದು ನಿಶ್ಚಯಿಸಿದರು. "ಆದಿಯಿಂದತ್ತತ್ತ ನೀನು ನನಗೆ ಗುರುವಯ್ಯಾ. ಅನಾದಿಯಿಂದತ್ತತ್ತ ನೀನೆನಗೆ ಗುರುವಯ್ಯಾ" ಎಂದು ಪ್ರಭುದೇವರು ಸಂಬೋಧಿಸಿದ್ದರ ಹೊಲಿಂದ ಅನಾದಿಸಂಸಿದ್ಧವಾದ ಆ ಪರವಸ್ತುವಿನಿಂದುದ್ಭವಿಸಿದ ಅರಿವೇ ಗುರುವಲ್ಲದೆ ಬೇರೆಯಲ್ಲ. ಇಂಥ ಗುರುದರ್ಶನವನ್ನು ಪ್ರಭುದೇವರು ಭಾವದಲ್ಲಿ ಹೊಂದಿದರು. ಆ ಗುರುವಿಗೆ ಅನಿಮಿಷದೇವರೆಂದು ಕರೆದರು. ಆ ಅನಿಮಿಷದೇವರು ಪದ್ಮಾಸನದಲ್ಲಿ ಕುಳಿತುಕೊಂಡು, ಕರಸ್ಥಲದಲ್ಲಿ ಅವ್ಯಕ್ತಲಿಂಗವ ಹಿಡಿದು, ಆ ಲಿಂಗದೊಳು ಆಲಿಂಗನವಾಗಿ, ಕರಣಂಗಳೆಲ್ಲ ನಿಃಕರಣವ ಸೈದಿ, ದೃಷ್ಟಿ ನೈಷ್ಠಿಸಿ, ಎವೆ ಹಳಚದೆ, ಅರಿವು ಕರಿಗೊಂಡು, ತಾನೆಂಬದು ತರಹರವಾಗಿ, ನೀನೆಂಬದು ನಿಷ್ಪತ್ತಿಯಾಗಿ ಪರಮಕಾಷ್ಠೆಯೊಳು ಪರವಶವಾಗಿ ನಿಜಸಮಾಧಿಯೊಳು ಮೂರ್ತಿಗೊಂಡಿರುವುದನ್ನು ನೋಡಿ ಶ್ರೀ ಪ್ರಭುದೇವರು ಆನಂದಪರವಶರಾಗಿ ನುಡಿದುದೇನಂದರೆಃ—

> ಪುಣ್ಯವುಳ್ಳ ಕಾಲಕ್ಕೆ ಪಾಷಾಣ ಪರುಷವಪ್ಪುದು ತಪ್ಪದು ನೋಡಯ್ಯಾ! ಮಣ್ಣು ಹೊನ್ನಪ್ಪುದು. ಮುನ್ನ ಮುನ್ನಪೆ ಅಜ್ಜೊತ್ತಿದ ಭಾಗ್ಯವೆನ್ನ ಕಣ್ಣಮುಂದೆ ಕಾಣಬಂದಿತ್ತು ನೋಡಾ! ಮಣ್ಣ ಮರೆಯ ದೇಗುಲದೊಳಗೊಂದು ಮಾಣಿಕ್ಯವ ಕಂಡಬಳಿಕ ಇನ್ನು ಮುನ್ನಿನಂತಪ್ಪದೇ ಗುಹೇಶ್ವರಾ॥

ಈ ಪ್ರಕಾರ ಗುರುವನ್ನು ಕೊಂಡಾಡಿ ಅವರ ಚರಣಾರವಿಂದಗಳಿಗೆ ಸೊಡಮಟ್ಟು ಅವರನ್ನು ಅನೇಕ ಪ್ರಕಾರವಾಗಿ ಕೊಂಡಾಡಿದರು. ಪ್ರಥಮದಲ್ಲಿ ಗುರುದರ್ಶನವಾದ ಬಳಿಕ ಪ್ರಭುದೇವರು ತಾವು ಶಿಷ್ಯತ್ವವನ್ನು ವಹಿಸಿದರು. ತಾನು ಬೇರೆ ಗುರುವು ಬೇರೆಂಬ ದ್ವೈತಭಾವವು ಅವರಲ್ಲಿ ಮೊದಲು ಉತ್ಪನ್ನವಾಯಿತು. ಬರಬರುತ್ತ ಜ್ಞಾನವು ಜಾಗ್ರತವಾಗಲು ಗುರುವೂ ತಾನೂ ಒಂದೆಂಬ ಭಾವವು ಅವರಲ್ಲಿ ಪ್ರಾದುರ್ಭವಿಸಿತು ಜ್ಞಾನೋದಯವಾಗಲು ಗುರುವಿನ ಸ್ಥೂಲಮೂರ್ತಿಯು ನಿರ್ವಯಲಾಯಿತ್ತು ಆಗ ಗುರು ವಿರಹದಿಂದ ಅನುತಾಪಪಡುತ್ತಿದ್ದ ಪ್ರಭುದೇವರಿಗೆ ಆ ಗುರುವಿನ ಚೈತನ್ಯವು ಅವರ ಪ್ರಾಣದಲ್ಲಿ ಅಳವಟ್ಟು ಮುಂದೆ ಕರಸ್ಥಲದಲ್ಲಿ ನೆಲಿಸಿತು. ಪುನಃ ಕರಸ್ಥಲದ ಲಿಂಗವು ಪ್ರಾಣಸಂಬಂಧಿಯಾಗಿತ್ತು. ಪ್ರಾಣಲಿಂಗವು ಭಾವದಲ್ಲಿ ಬೆರೆದಿತ್ತು. ಆಗ 'ಕೀಟೋಪಿ ಭ್ರಮರಾಯತೇ' ಎಂಬ ತತ್ಪಕ್ಕನುಸರಿಸಿ ಪ್ರಭುದೇವರು ಸಾಕ್ಷಾತ್ ಗುರುವೇ ತಾವಾದರು. ಆಗ ಅವರ ದ್ವೈತಭಾವವಡಗಿ ಅದ್ವೈತವುಂಟಾಯಿತು.

ಮೊದಲು ನಿರಾಕಾರಜ್ಞಾನದಿಂದ ಸಾಕಾರ ಗುರುವನ್ನು ಮಾಡಿಕೊಂಡು ಗುರುಶಿಷ್ಯನೆಂಬ ದ್ವೈತಭಾವವನ್ನು ತಳೆದು ಪುನರ್ಜ್ಞಾನದಿಂದ ಸಾಕಾರ ಗುರುವನ್ನು ಕಣ್ಮರೆಮಾಡಿ ನಿರಾಕಾರರೂಪಿಯಾದ ಆತನ ಚೈತನ್ಯವನ್ನೇ ಸಾಕಾರಗೊಳಿಸಿ ಇಷ್ಟಲಿಂಗವನ್ನು ಮಾಡಿಕೊಂಡು ಮುಂದೆ ಅದನ್ನು ನಿರಾಕಾರವಾದ ಪ್ರಾಣಭಾವಲಿಂಗಗಳಲ್ಲಿ ಲಯಗೊಳಿಸಿ ಕೊನೆಗೆ ಸಾಕಾರಗುರುವೇ ತಾವಾಗಿ ಬಿಟ್ಟರು. ಈ ಮೇರೆಗೆ ಸಾಕಾರ ನಿರಾಕಾರಗಳು ಬೆಳಕು ಕತ್ತಲೆಗಳಂತೆ ಆಧ್ಯಾತ್ಮಿಕ ಜೀವನದಲ್ಲಿ ಒಂದನ್ನೊಂದು ಹೇಗೆ ಹಿಂಬಾಲಿಸುತ್ತಿರುವವೆಂಬದು ವ್ಯಕ್ತವಾಗುತ್ತದೆ.

ಲಿಂಗ.

ಶ್ರೀ ಗುರುವಿನ ಚೈತನ್ಯವೇ ಇಷ್ಟಲಿಂಗವಾಗಿ ತಮ್ಮ ಕರಸ್ಥಳದಲ್ಲಿ ಅಳವಡಲು ಪ್ರಭುದೇವರು ಆ ಲಿಂಗವನ್ನು ಷಡ್ವಿಧಭಕ್ತಿಯಿಂದ ಪೂಜಿಸಿದರು. ಅದೆಂತೆಂದೊಡೆಃ—

> ವಿಶ್ವಾಸದಿಂ ಭಕ್ತನಾಗಿ, ಆ ವಿಶ್ವಾಸದೊಳಗಣ ನಿಷ್ಠೆಯಿಂ ಮಹೇಶ್ವರನಾಗಿ ಆ ನಿಷ್ಠೆಯೊಳಗಣ ಸಾವಧಾನದಿಂ ಪ್ರಸಾದಿಯಾಗಿ, ಆ ಸಾವಧಾನದೊಳಗಣ ಸ್ವಾನುಭವದಿಂ ಪ್ರಾಣಲಿಂಗಿಯಾಗಿ, ಆ ಸ್ವಾನುಭವದೊಳಗಿನ ಅರುವಿನಿಂ ಶರಣನಾಗಿ ಆ ಅರಿವು ನಿಜದಲ್ಲಿ ಸಮರಸವನ್ಯೆದಲು ಐಕ್ಯಸ್ಥಲವಾದುದು ಗುಹೇಶ್ವರಾ॥

ಷಡ್ವಿಧ ಭಕ್ತಿಯ ಮುಖಾಂತರವಾಗಿ ಷಟ್ಸ್ಥಲಜ್ಞಾನವನ್ನು ಪ್ರಭುದೇವರು ನಿರೂಪಿಸಿದರು.

ಗುರುವೆಂಬ ಪ್ರಣತಿಯಲ್ಲಿ ಲಿಂಗವೆಂಬ ಬತ್ತಿಯನಿಟ್ಟು ಜ್ಞಾನವೆಂಬ ಜ್ಯೋತಿಯನ್ನು ಪ್ರಜ್ವಲಗೊಳಿಸಬೇಕಾದರೆ ಭಕ್ತಿಯೆಂಬ ತೈಲವು ಅತ್ಯಾವಶ್ಯಕವಾದುದು. ತಾನು ಜ್ಞಾನಿಯೆಂದು ಹೇಳಿಕೊಳ್ಳುವವನು ಭಕ್ತಿಯನ್ನಾಚರಿಸದಿದ್ದರೆ ಎಣ್ಣೆತೀರಿದ ದೀಪದಂತೆ ಆತನ ಜ್ಞಾನಜ್ಯೋತಿಯು ನೊಂದಿಹೋಗುವದು. ಅದು ಕಾರಣ ಷಟ್‌ಸ್ಥಲಗಳಲ್ಲಿ ಶ್ರೀ ಪ್ರಭುದೇವರು ಷಡ್ವಿಧಭಕ್ತಿಯನ್ನು ನಿರೂಪಿಸಿದ ವಿವರವನ್ನು ಕೆಳಗೆ ಕೊಡಲಾಗಿದೆ:—

೧ ಭಕ್ತಸ್ಥಲಃ—ಮುಂದುಜಾವದಲೆದ್ದು ಲಿಂಗದಂಘ್ರಿಯ ಮುಟ್ಟಿ, ಸುಪ್ರಭಾತದಲೆದ್ದು ಶಿವಭಕ್ತರ ಮುಖವ ನೋಡುವದು ಹುಟ್ಟಿದುದಕ್ಕೆ ಸಫಲ ನೋಡಾ. ಸತ್ಯವಚನವಿಂತೆಂದುದು. ಇದಿಲ್ಲದವರನೊಲ್ಲೆ ಗುಹೇಶ್ವರಾ॥

೨ ಮಹೇಶ್ವರ ಸ್ಥಲಃ— ಅಷ್ಟ ವಿಧಾರ್ಚನೆ ಷೋಡಶೋಪಚಾರಂಗಳ ಹಂಗುಹರಿಯಿಲ್ಲದೆ ಮಾಡುವೆ. ನಾ ಮಾಡುವ ಕ್ರಿಯೆಗಳಿಲ್ಲಾಯೆನೀನೆಯಾದ ಕಾರಣ ಗುಹೇಶ್ವರಾ ನಿಮ್ಮಲ್ಲಿ ತದ್ಗತವಾದೆನು॥

೩ ಪ್ರಸಾದಿಸ್ಥಲಃ— ಅರ್ಪಿತ ಅನರ್ಪಿತವನಾರು ಬಲ್ಲರಯ್ಯಾ. ಅರ್ಪಿಸಿಕೊಂಬುದು ಅನರ್ಪಿತ; ಅರ್ಪಿಸದೆ ಕೊಂಬುದು ಅರ್ಪಿತ. ಅರ್ಪಿಸಿ ಅರ್ಪಿಸದೆ ಕೊಳಬಲ್ಲರೆ ಗುಹೇಶ್ವರ ನಿಮ್ಮ ಪ್ರಸಾದಿ॥

೪ ಪ್ರಾಣಲಿಂಗಸ್ಥಳಃ— ನವದ್ವಾರ ಶಿವಾಲಯದ ಆದಿ ಮಧ್ಯ ಸ್ಥಾನದಲ್ಲಿ ಗುಹೇಶ್ವರನೆಂಬ ಲಿಂಗವು ನಿಂದಿತ್ತು. ಕಂಗಳ ಬೆಳಗ ಕಲ್ಪಿಸಬಾರದು. ಕರ್ಣದನಾದ ವರ್ಣಿಸಬಾರದು. ಜಿಹ್ವೆಯ ರುಚಿಗೆ ಪ್ರತಿಯಿಲ್ಲವೆಂದಿತ್ತು. ಮತಿಗೆ ಮಹಾ ಘನವಪ್ಪ ಸುಷುಮ್ನನಾಳದ ಸುಯಿಧಾನವ ಪ್ರಮಾಣಿಸಬಾರದು ಅಣುರೇಣುತೃಣಕಾಷ್ಠದೊಳಗೆ ಸೂಕ್ಷ್ಮನಯ ನಿಂದ ನಿರಾಳ ಗುಹೇಶ್ವರಾ॥

೫ ಶರಣಸ್ಥಲಃ—ನೆನಹು ಸತ್ತಿತ್ತು, ಭ್ರಾಂತಿ ಬೆಂದಿತ್ತು, ಅರಿವು ಮರೆಯಾಯಿತ್ತು. ಕುರುಹುಗೆಟ್ಟಿತ್ತು. ಅಲ್ಲಿ ಗತಿಯ ನರಸಲುಂಟೆ? ಮತಿಯ ನರಸಲುಂಟೆ? ಅಂಗವೆಲ್ಲ ನಷ್ಟವಾಗಿ, ಲಿಂಗದಲ್ಲಿ ಲೀಯ್ಯವಾಗಿ ಕಂಗಳ ಕಂಗಳ ಕಳೆಯ ಬೆಳಗಿನ ಭಂಗ ಹಿಂಗಿತ್ತು ಗುಹೇಶ್ವರಾ॥

೬ ಐಕ್ಯಸ್ಥಲಃ—ನಿಜಪನಂದ ನಿಶ್ಚಿಂತನೇ, ಮರಣವ ಗೆಲಿದ ಮಹಂತನೇ, ಅರಿವನೊಳಗೊಂಡ ಪರಿಣಾಮಿಯೇ, ಬಯಲಲ್ಲಾದ ಭರಿತನೇ, ಗುಹೇಶ್ವರಲಿಂಗ ನಿರಾಳವನೊಳಕೊಂಡ ಸಹಜನೇ॥

ಜಂಗಮ.

ಈ ಪ್ರಕಾರ ಷಟ್‌ಸ್ಥಲಗಳ ಮುಖಾಂತರವಾಗಿ ಷಡ್ವಿಧ ಭಕ್ತಿಯನ್ನಾಚರಿಸಿ ಸರ್ವಾಚಾರ ಸಂಪತ್ತು ನಿಷ್ಪತ್ತಿಯಾಗಿ ಮಹಾಜ್ಞಾನವೇ ತಾನಾಗಿ ಪ್ರಭುದೇವರು ಪರಿಶೋಭಿಸಿದರು. ಸುಜ್ಞಾನ ಪ್ರಭೆಯೊಳಗೆ ಹೊಳಿದಾಡುವ ಮಹಿಮನ ಮಹಾತ್ಮೆಯನ್ನು ಪ್ರಭುದೇವರು ಕೊಂಡಾಡಿದ ಸಾರಾಂಶವೇನೆಂದರೆ:— ಆ ಶಿವಜ್ಞಾನಿಗೆ ಸುಜ್ಞಾನವೆ ಶೃಂಗಾರ, ಮಹಾ ಬೆಳಗೆ ವಿಭೂತಿ, ಪಂಚಬ್ರಹ್ಮವೇ ದರುಶನ, ನಿಂದುದೇ ನಿವಾಸ, ತ್ರಿಭುವನವೆಂಬ ಗಿರಿಯನೇರಿ, ಕಾಯವೆಂಬ ಕದಳಿಯ ಹೊಕ್ಕು ಸುಳಿದಾಡುವ ಮಹಾಮಹಿಮಂಗೆ ಇಹಲೋಕವೇನು? ಪರಲೋಕವೇನು? ಗುಹೇಶ್ವರಾ ನಿಮ್ಮನರಿತ ಮಹಾಮಹಿಮಂಗೆ ನವೋ ನವೋ ಎಂಬೆನು.

ಇಂಥ ನಿರಂಜನ ಜಂಗಮವು ಕಂಡುದೆಲ್ಲ ಪಾವನ. ಕೇಳಿದ್ದೆಲ್ಲ ಪರಮ ಬೋಧೆ, ಮುಟ್ಟಿದೆಲ್ಲವೂ ಪರುಷದ ಸೋಂಕು. ಒಡನೆ ಕೂಡಿದವರೆಲ್ಲರು ಸದ್ಯೋನ್ಮುಕ್ತರು. ಸುಳಿದ ಸುಳುಹೆಲ್ಲ ಜಗತ್ಪಾವನ. ಮುಟ್ಟಿದ ಧರೆ ಎಲ್ಲವು ಅವಿಮುಕ್ತಿ ಕ್ಷೇತ್ರ. ಸೋಂಕಿದ ಜಲವೆಲ್ಲ ಪುಣ್ಯತೀರ್ಥಂಗಳು ಶರಣೆಂದು ಭಕ್ತಿಯ ಮಾಡಿದವರೆಲ್ಲರು ಸಾಯುಜ್ಯರು ಗುಹೇಶ್ವರ ನಿಮ್ಮ ಸುಳುಹಿನ ಸೊಗಸ ಉಪಮಿಸಬಾರದು.

ಈ ಪ್ರಕಾರ ಪ್ರಭುದೇವರು ಗುರುಕರುಣದಿಂದುಂಟಾದ ಸ್ವಾನುಭವ ಸಾರವನ್ನು ಗೊಗ್ಗಯ್ಯನಿಗೆ ಉಪದೇಶಿಸಿದರು. ಗುರುಕರುಣ ಸಂಪಾದನೆಯಲ್ಲಿ ಗುರು, ಲಿಂಗ, ಜಂಗಮಗಳು ಹೇಗೆ ಪರಸ್ಪರ ಸಂಬಂಧವುಳ್ಳವುಗಳಾಗಿರುವವೆಂಬದನ್ನು ತೋರಿಸಿಕೊಡುವದೇ ಮುಖ್ಯೋದ್ದೇಶವಾಗಿದೆ.

ಮಂತ್ರ.

ವಾ. ಪ ಮನದೊಳಗೆ ಜಪಿಸಲ್ಕೆ ಪೇಳಿದಂ ಗುರುಮೂರ್ತಿ
ಮನವರಿತು ನೆನೆದೊಡದು ದೂರುನದು ಮಾಯೆಯನು
ಇನಿತೊಂದರಿಂದಧಿಕವಾವ ಪಂಚಾಕ್ಷರದ ಮಂತ್ರಮಂ ಸಲೆ
ಪ್ರೇಮದಿಂ ॥
ಅನುದಿನಂ ಮನದೊಳಗೆ ಜಪಿಸುತಿಹ ಮಾನವಂ
ಘನವಾದ ಸಾಮರ್ಥ್ಯಮಂ ಪೊಂದಿ ಶಿವನಲ್ಲಿ ...
ಅನುರಾಗದಿಂ ಬೆರೆದು ಸುಖಿಸುವನು ಚಿರಕಾಲ ಸತ್ಯವೀನುಡಿ ಶರಣರಾ

ಮಂತ್ರವು ಅಷ್ಟಾವರಣಗಳಲ್ಲಿ ಎಂಟನೆಯದು. ಮಂತ್ರವೆಂದರೇನು:- "ಮನಃ ತ್ರಾಯತೇ ಇತಿ ಮಂತ್ರಃ" ಅಂದರೆ ಮನಸ್ಸನ್ನು ರಕ್ಷಣೆ ಮಾಡುತ್ರವಾದ್ದರಿಂದ ಅದಕ್ಕೆ ಮಂತ್ರವೆಂಬ ಹೆಸರು. ಮನಸ್ಸನ್ನು ರಕ್ಷಣೆ ಮಾಡುವ ವಸ್ತು ವಿರದಿದ್ದರೆ ಅದು ನಮ್ಮನ್ನು ಯಾವ ಸ್ಥಿತಿಗೆ ಒಯ್ಯುತ್ರವೆಂಬದರ ನಿಯಮವಿಲ್ಲ. "ಕಣ್ಣು ಮನ ನಾಲಿಗೆಯ ತನ್ನವೆಂದಿನಬೇಡ" ಅನ್ಯರು ಕೊಂದರೆನಬೇಡ ಇವು ಮೂರು ತನ್ನನೇ ಕೊಲ್ಲುವವು ಸರ್ವಜ್ಞ॥ ಎಂದು ಸರ್ವಜ್ಞ ಮೂರ್ತಿಯು ಹೇಳಿರುವನು 'ಮನವೆಂಬ ಮರ್ಕಟವ ತಡೆಯಲಾರೆನು ದೇವ। ಎನಿತಿದರ ಚಪಲ ಜೇಷ್ಟೆಗಳ ವರ್ಜಿಸಲಿ.' ಎಂದು ಸರ್ಪಭೂಷಣ ಶಿವಯೋಗಿಗಳು ಹಾಡಿಕೊಂಡಿರುವರು. 'ಕೊಂಬೆಯ ಮೇಲಣ ಮರ್ಕಟನಂತೆ ಲಂಘಿಸುವದೆನ್ನ ಮನವು, ಸಿಂದಲ್ಲಿ ನಿಲಲೀಯದೆನ್ನ ಮನವು, ಹೊಂದಿದಲ್ಲಿ ಹೊಂದಲೀಯದೆನ್ನ ಮನವು, ಮನವೆಂಬ ಮರ್ಕಟನ ನೆನವೆಂಬ ಪಾಶದಲ್ಲಿ ಕಟ್ಟಿ ಎನ್ನನುಳುಹಿಕೊಳ್ಳಾ ಕೂಡಲ ಸಂಗಮದೇವಾ ॥ ಎಂದು ಬಸವಣ್ಣನವರು ಹೇಳಿದ್ದಾರೆ. ಮನವೆಂಬ ಮರ್ಕಟನು ತಸುವೆಂಬ ವೃಕ್ಷವನೇರಿ ಇಂದ್ರಿಯಗಳೆಂಬ ಶಾಖೆ ಶಾಖೆಗೆ ಹಾರಿ ವಿಷಯಂಗಳೆಂಬ ಹಣ್ಣು ಫಲಗಳಂ ಗ್ರಹಿಸಿ, ಭವದತ್ತ ಮುಖವಾಗಿ ಹೋಗುತ್ತದೆ ನೋಡಾ. ಈ ಮನವೆಂಬ ಮರ್ಕಟನ ನಿಮ್ಮ ನೆನವೆಂಬ ಪಾಶದಲ್ಲಿ ಕಟ್ಟಿ, ಎನ್ನನುಳುಹಿಸಿಕೊಳ್ಳಯ್ಯಾ ಕಪಿಂಡೇಶ್ವರಾ" ಎಂದು ಷಣ್ಮುಖ ಸ್ವಾಮಿಗಳು ವಿವರಿಸಿದ್ದಾರೆ. ಅನೇಕ ಶಿವಶರಣರು ಮನದ ಚಾಂಚಲ್ಯದ ಬಗ್ಗೆ ತಮ್ಮ

ಅನುಭವಗಳನ್ನು ವ್ಯಕ್ತಪಡಿಸಿದ್ದಾರೆ. ಮನುಸ್ಮೃತಿಯಲ್ಲಿ 'ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ' ಮನಸ್ಸೇ ನಮ್ಮ ಬಂಧನಕ್ಕೂ ಬಿಡುಗಡೆಗೂ ಕಾರಣವಾಗಿದೆ ಎಂದು ಪ್ರತಿಪಾದಿಸಿದೆ. ಶ್ರೀ ಭಗವದ್ಗೀತೆಯಲ್ಲಿ "ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಂ । ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೆ ॥ ಮನಸ್ಸು ನಿಸ್ಸಂಶಯವಾಗಿಯೂ ಚಂಚಲವಾದುದೂ ನಿಗ್ರಹಿಸಲಿಕ್ಕೆ ಕಠಿಣವಾದುದೂ ಆಗಿರುತ್ತದೆ. ಅದನ್ನು ಸಾಧನೆಯಿಂದಲೂ ವೈರಾಗ್ಯದಿಂದಲೂ ವಶಮಾಡಿಕೊಳ್ಳಬೇಕು. ಮನಸ್ಸು ತಾರಾಯಂತ್ರ, ವಿಮಾನ, ಈಥರ ಮೊದಲಾದವುಗಳಿಗಿಂತಲೂ ತೀವ್ರಗತಿಯುಳ್ಳದ್ದಾಗಿದೆ. ನಿಮಿಷ ಮಾತ್ರದಲ್ಲಿಯೇ ಅದು ಲಕ್ಷಾಂತರ ಮೈಲುಗಳನ್ನು ಸಂಚರಿಸಬಲ್ಲದು. ಇಂಥ ಚಂಚಲವೂ ತೀವ್ರಗಾಮಿಯೂ ಆದ ಮನಸ್ಸನ್ನು ಬಿಗಿಹಿಡಿಯುವದೆ ಹೇಗೆ? ಅನೇಕರು ಅನೇಕ ವಿಧವಾಗಿ ಮನಸ್ಸನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಇಂದ್ರಿಯ ಪ್ರವೃತ್ತಿಗಳನ್ನು ತಡೆಯುವದರಿಂದ ಮನೋವೃತ್ತಿಯು ಕುಗ್ಗುವದೆಂದು ಕೆಲವರು ಉಪವಾಸ, ವನವಾಸ, ತಪಶ್ಚರ್ಯ ಪ್ರತಿಜ್ಞಾದಿ ವ್ರತಗಳನ್ನಾಚರಿಸಿ ದೇಹವನ್ನು ದಂಡಿಸುವರು. ಬೇರೆ ಕೆಲವರು ಇಂದ್ರಿಯಗಳ ಪ್ರವೃತ್ತಿಯು ಕೆಟ್ಟ ವಿಷಯಗಳ ಕಡೆಗೆ ಇದ್ದರೆ ಅದನ್ನು ಒಳ್ಳೆಯದರ ಕಡೆಗೆ ತಿರುಗಿಸಲಿಕ್ಕೆ ಪ್ರಯತ್ನಿಸುವದರಿಂದ ಮನಸ್ಸು ದುರ್ಮಾರ್ಗದಿಂದ ಹೋಗುವದಿಲ್ಲವೆಂದು ಭಾವಿಸುತ್ತಾರೆ. ಸದ್ವಿಷಯಗಳನ್ನು ನೋಡುವದು; ಸದ್ವಿಷಯಗಳನ್ನು ಕೇಳುವದು; ಸಾತ್ವಿಕ ಪದಾರ್ಥಗಳನ್ನು ಸೇವಿಸುವದು; ಪವಿತ್ರವಾದ ವಸ್ತುಗಳನ್ನು ಘ್ರಾಣಿಸುವದು ಮತ್ತು ಸ್ಪರ್ಶಿಸುವದು ಇವೇ ಮೊದಲಾದವುಗಳಿಂದ ಮನಸ್ಸಿದರೂ ಪುನೀತವಾಗುವದು ಸಹಜವು. ಬೇರೆ ಕೆಲವರು ಎಲ್ಲರೂ ತಮ್ಮ ತಮ್ಮ ವ್ಯವಸಾಯಗಳಲ್ಲಿ ನಿರತರಾದರೆ ಮನಸ್ಸಿನ ದುಷ್ಟ ಪ್ರವೃತ್ತಿಗೆ ಅವಕಾಶವಿಲ್ಲವೆನ್ನುವರು. ಉದಾಹರಣಾರ್ಥ ಒಕ್ಕಲಿಗರು ಒಕ್ಕಲತನದಲ್ಲಿ, ವ್ಯಾಪಾರಸ್ಥರು ವ್ಯಾಪಾರದಲ್ಲಿ, ನೇಕಾರರು ನೇಗೆಯ ಕೆಲಸದಲ್ಲಿ, ಶಿಕ್ಷಕರು ಕಲಿಸುವದರಲ್ಲಿ, ಗಣಿತಜ್ಞರು ಬೀಜಗಣಿತ ಹಾಗೂ ಭೂಮಿತಿಯೊಳಗಿನ ಸಮಸ್ಯೆಗಳನ್ನು ಬಿಡಿಸುವದರಲ್ಲಿ ಕಾಲ ಕಳೆದರೆ, ನಿಜವಾಗಿಯೂ ಅವರ ಮನಸ್ಸಿಗೆ ಬೇರೆ ಕಡೆಗೆ ಹೋಗಲಿಕ್ಕೆ ಅವಕಾಶವಾಗುವದಿಲ್ಲ. ಆದರೆ ಇಪ್ಪತ್ತೊಮ್ಮೆಗಳಲ್ಲಿ ತೊಡಗಿದ್ದರೂ ದುಷ್ಟ ಮನಸ್ಸು

ಒಂದಿಲ್ಲೊಂದು ಮುಷ್ಪ ಯೋಚನೆಯನ್ನು ಬೇಕಾದ ಹಾಗೆ ಮಾಡಬಲ್ಲುದು. ಆದರೆ ಮನಸ್ಸನ್ನು ವಶಪಡಿಸಿಕೊಳ್ಳಲಿಕ್ಕೆ ಧ್ಯಾನ, ಪ್ರಾರ್ಥನೆ, ಚಿಂತನೆ, ಮಂತ್ರಾದಿಗಳು ಬಹು ಶ್ರೇಷ್ಠವಾದವುಗಳು. ಆದರೆ ಮಂತ್ರವೆಂಬುದು ಪ್ರತಿನಿಮಿಷವೂ ತಪ್ಪದೆ ಉಚ್ಚರಿಸಲಿಕ್ಕೆ ಬರುತ್ತಿರುವದಾದ್ದರಿಂದ ಮನಸ್ಸನ್ನು ಏಕೀಕರಿಸಲಿಕ್ಕೆ ಅದು ಸರ್ವೋತ್ಕೃಷ್ಟವಾದ ಉಪಾಯವು.

ಮಂತ್ರದ ಮತ್ವವೇನು? ಮಂತ್ರಪಠಣದಿಂದ ಹರಿದಾಡುವ ಮನಸ್ಸು ಏಕಾಗ್ರವಾಗುತ್ತದೆ. ಏಕಾಗ್ರತೆಯಿಂದ ಮನಸ್ಸು ಪವಿತ್ರವಾಗುತ್ತದೆ. ಪವಿತ್ರತೆಯಿಂದ ವಿಚಿತ್ರವಾದ ಶಕ್ತಿಯುಂಟಾಗುತ್ತದೆ. ಆ ಶಕ್ತಿಯಿಂದ ಮನುಷ್ಯನು ಅಘಟಿತ ಘಟನಾ ಕಾರ್ಯವನ್ನು ಮಾಡಬಲ್ಲನು. ಅತನಿಗೆ ಪರಮಾತ್ಮನ ಸಂಬಂಧವು ತೀರ ಸಮೀಪವಾಗುತ್ತದೆ. ಮನಸ್ಸಿನ ಶಕ್ತಿಗಳೆಲ್ಲ ಅತ್ತಿತ್ತ ಚಲ್ಲರಿದು ಹಬ್ಬಿದಾಗ ಅವುಗಳಲ್ಲಿ ಅಂಥ ಶಕ್ತಿಯೇನೂ ಕಂಡು ಬರುವದಿಲ್ಲ. ಆದರೆ ಮಂತ್ರದ ಮೂಲಕ ಆ ಶಕ್ತಿಗಳನ್ನೆಲ್ಲ ಒತ್ತಟ್ಟಿಗೆ ಏಕೀಕರಿಸಿದರೆ ಒಂದು ವಿಚಿತ್ರತರವಾದ ಶಕ್ತಿಯುದ್ಭವಿಸುವದು. ನೂಲಿನ ಎಳೆಗಳು ಬೇರೆ ಬೇರೆಯಾದಾಗ ಅವುಗಳಲ್ಲಿ ಹೆಚ್ಚಿನ ಶಕ್ತಿಯೇನೂ ಕಂಡು ಬರುವದಿಲ್ಲ. ಆದರೆ ಅವುಗಳನ್ನೆಲ್ಲವನ್ನೂ ಕೂಡಿಸಿ ಹೊಸೆದು ಹಗ್ಗ ಮಾಡಿದರೆ ಅವಕ್ಕೆ ಬಹು ಬಲಾಢ್ಯವಾದ ಆನೆಯನ್ನು ಕಟ್ಟುವ ಸಾಮರ್ಥ್ಯ ಬರುತ್ತದೆ. ಕೆಲವರು ಜೇಳಿನ ಮಂತ್ರ, ಹಾವಿನ ಮಂತ್ರ, ವೇತಾಳ ಮಂತ್ರ, ವಶೀಕರಣ ಮಂತ್ರ ಮುಂತಾದವುಗಳನ್ನು ಸಾಧಿಸಿಕೊಳ್ಳಬೇಕಾದರೆ ಅವರು ಮೊದಲು ಆಯಾಯ ಮಂತ್ರಗಳಿಂದ ತಮ್ಮ ಮನಸ್ಸಿನ ಶಕ್ತಿಗಳನ್ನೆಲ್ಲ ಒತ್ತಟ್ಟಿಗೆ ಏಕೀಕರಿಸಿ ಆ ತರಹದ ಸಾಮರ್ಥ್ಯವನ್ನು ಪಡೆದುಕೊಂಡಿರಬಹುದಲ್ಲವೇ? ಆದುದರಿಂದ ಪರಮಾತ್ಮನನ್ನೊಲಿಸಿಕೊಳ್ಳಬೇಕಾದರೆ ಅತನ ನಾಮಸ್ಮರಣೆಯೇ ಆರ್ಥಾತ್ ಮಂತ್ರವೇ ಅತ್ಯವಶ್ಯಕವಾದುದು. ಅಂತೆಯೇ ಶ್ರೀ ಭಗವದ್ಗೀತೆಯಲ್ಲಿ 'ಅನನ್ಯಾಶ್ಚಿಂತಯಂತೋ ಮಾಂ ಯೇಜನಾಃ ಪರ್ಯುಪಾಸತೆ ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ" । ಅಂದರೆ ಯಾವಾಗಲೂ ನನ್ನ ಹೆಸರನ್ನೇ ಧ್ಯಾನಮಾಡುತ್ತಿರುವಂಥ ಜನರ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತೇನೆಂದು ಶ್ರೀ ಕೃಷ್ಣ ಪರಮಾತ್ಮನು ಆಶ್ವಾಸನ ಕೊಟ್ಟಿದ್ದಾನೆ. ಯಾರೇ ಆಗಲಿ ತಮ್ಮ ಇಷ್ಟದೇವತೆಯನ್ನು ಆದರ್ಶವಾಗಿಟ್ಟುಕೊಂಡು ನಿರಂತರವೂ ಅಪರವಸ್ತುವಿನ ಚಿಂತನೆ ಮಾಡಹತ್ತಿದರೆ ನಿಜವಾಗಿಯೂ ಅವರಲ್ಲಿ ಅಸಾಧಾರಣವಾದ ಶಕ್ತಿಯುಂಟಾಗು

ವದು. ' ಮತ್ತು ಆ ಇಷ್ಟದೇವತೆಯು ಅವರನ್ನು ನಿಶ್ಚಯವಾಗಿಯೂ ರಕ್ಷಿಸುವದು. ತಾನು ಯಾವ ದೇವರನ್ನು ಪ್ರಾರ್ಥಿಸುವನೋ ಅದೇ ದೇವರೇ ಸರ್ವೋತ್ತಮವೆಂದು ಭಾವಿಸಬೇಕು. ಅಂದರೆ ಸರ್ವಶಕ್ತಿಪಂತನಾದ ದೇವರೊಬ್ಬನೇ ಎಂಬ ಕಲ್ಪನೆಯು ಅವರಲ್ಲುಂಟಾಗುವದು. ಶೈವರು ಶಿವನೇ ಸರ್ವೋತ್ತಮನೆಂದೂ, ವೈಷ್ಣವರು ವಿಷ್ಣುವೇ ಸರ್ವೋತ್ತಮನೆಂದೂ ಗಾಣಪತ್ಯರು ಗಣಪತಿಯೇ ಸರ್ವೋತ್ತಮನೆಂದೂ ಭಾವಿಸಿ ಧ್ಯಾನ ಮಾಡಿದರೆ ಅವರಿಗೆ ಅಭಿವೃದ್ಧಿಯಾಗುವದರಲ್ಲಿ ಸಂದೇಹವಿಲ್ಲ. ತನ್ನ ದೇವರು ಶ್ರೇಷ್ಠವೆಂದು ಉಳಿದ ದೇವರುಗಳನ್ನು ತುಚ್ಛೀಕರಿಸಿಬಿಡುವದಾಗಲಿ ಅಪಹಾಸ್ಯ ಮಾಡುವದಾಗಲಿ ಮೂರ್ಖರ ಲಕ್ಷಣವು. ಅನ್ಯದೇವರುಗಳ ಬಗ್ಗೆಯೂ, ಅವುಗಳನ್ನು ಆರಾಧನೆ ಮಾಡುವವರ ಬಗ್ಗೆಯೂ ಸಹಾನುಭೂತಿಯನ್ನು ವ್ಯಕ್ತಗೊಳಿಸುವದು ಸಜ್ಜನರ ಲಕ್ಷಣವು. ಈ ತರಹದ ಸ್ವಭಾವವು ಪಾಶ್ಚಾತ್ಯರಲ್ಲಿ ಹೆಚ್ಚಾಗಿದ್ದಂತೆ ತೋರುತ್ತದೆ. ಯಾಕಂದರೆ ಒಂದು ಮನೆಯಲ್ಲಿ ಗಂಡನು ಒಂದು ದೇವರನ್ನಾರಾಧಿಸುತ್ತಿದ್ದರೆ ಹೆಂಡತಿಯು ಮತ್ತೊಂದು, ಮಗನು ಬೇರೊಂದು ದೇವರನ್ನು ಪ್ರಾರ್ಥಿಸುವರು. ಆದಾಗ್ಯೂ ಅವರು ಪರಸ್ಪರ ಬಹು ಪ್ರೇಮದಿಂದಲೂ ಒಕ್ಕಟ್ಟಿನಿಂದಲೂ ವರ್ತಿಸುವರು. ಆದರೆ ನಮ್ಮ ದೇಶದಲ್ಲಿ ಪರಸ್ಪರ ಧರ್ಮದವರನ್ನು ದೂಷಿಸುವದೊತ್ತಟ್ಟಿಗಿರಲಿ, ಅವರ ಪವಿತ್ರವಾದ ದೇವರುಗಳನ್ನು ನಿಂದಿಸುವರು. ಇದೆಂಥ ನಾಚಿಕೆಗೇಡಿತನವು? ಕೆಲವರು ಒಬ್ಬನೇ ದೇವರಿರುವನೆಂತಲೂ, ಅತನ ನಾಮರೂಪಗಳು ಇಂತಹದಿರುವವೆಂತಲೂ ಭಾವಿಸಿ ಧ್ಯಾನಿಸುವರು. ಬೇರೆ ಕೆಲವರು ಎಲ್ಲ ದೇವರುಗಳು ಪರಮಾತ್ಮನ ಸ್ವರೂಪಗಳೆಂದು ತಿಳಿದು ಕಂಡ ದೇವರಿಗೆ ಕೈಮುಗಿಯುತ್ತ ತಿರುಗುವರು. ಇವರಿಬ್ಬರಲ್ಲಿ ಮೊದಲನೆಯವರ ಏಕಾಗ್ರತೆಯು ಒತ್ತಟ್ಟಿಗೆ ನೆಲೆಗೊಳ್ಳುವದರಿಂದ ಅವರಿಗೆ ಅಪಾರವಾದ ಶಕ್ತಿಯುಂಟಾಗುತ್ತದೆ. ಎರಡನೆಯವರ ಏಕಾಗ್ರತೆಯು ಎಲ್ಲ ದೇವರುಗಳಲ್ಲಿ ಹರಿದು ಹಂಚಿಹೋಗುವದರಿಂದ ಅವರಲ್ಲಿ ಹೆಚ್ಚಿನ ಶಕ್ತಿಯು ಬರಲಾರದು. ಆದುದರಿಂದ ನಮಗೆ ಇಷ್ಟವಾದ ಒಂದೇ ಒಂದು ದೇವತೆಯ ಧ್ಯಾನಮಾಡುವದು ಮಿಗಿಲಾದದ್ದು.

ಮೊದಲು ತನ್ನ ಇಷ್ಟದೇವತೆಯನ್ನು ಧ್ಯಾನಮಾಡಬೇಕಾದರೆ ಸಾಕಾರವುಳ್ಳ ಒಂದು ಮೂರ್ತಿಯನ್ನು ಕಲ್ಪಿಸಿಕೊಂಡು ಅದರಲ್ಲಿಯೇ ಚಿತ್ತ

ಏಟ್ಟು ಧ್ಯಾನಿಸಬೇಕು. ಮೂರ್ತಿಯೊಂದಿರದಿದ್ದರೆ ನಮ್ಮ ಮನಸ್ಸನ್ನು ಯಾವುದರ ಮೇಲಿಟ್ಟು ಧ್ಯಾನಿಸಬೇಕೆಂಬುದರ ಬಗ್ಗೆ ಗೊಂದಲ ಬೀಳುತ್ತದೆ. (ಆ ಬಗ್ಗೆ ವೀರಶೈವರು ಲಿಂಗವನ್ನು ಕಲ್ಪಿಸಿದ್ದಾರೆ.) ಆದುದರಿಂದಲೇ ಶ್ರೀ ಭಗವದ್ಗೀತೆಯಲ್ಲಿ ಹೇಳಿರುವದೇನಂದರೆ—

"ಕ್ಲೇಶೋಽಧಿಕ ತರಸ್ತೇಷಾ ಮವ್ಯಕ್ತಾಸಕ್ತ ಚೇತಸಾಂ"।
ಅವ್ಯಕ್ತಾ ಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೆ॥

ನಿರಾಕಾರ ವಸ್ತುವಿನ ಉಪಾಸನೆಯು ದೇಹಧಾರಿಗಳಿಗೆ ಕಠಿಣವಾದುದು. ಹಾಗೆ ಮಾಡುವವರು ದುಃಖಕ್ಲೇಡಾಗುತ್ತಾರೆ. ಆದುದರಿಂದ ಭಗವಂತನು ದೇಹಧಾರಿಗಳಿಗೆ ಉಪದೇಶಿಸುವದೇನಂದರೆಃ— "ಮನ್ಮನಾ ಭವ ಮದ್ಭಕ್ತೋ ಮದ್ಯಾಜೀಮಾಂ ನಮಸ್ಕುರು। ಮಾಮೇವೈಷ್ಯಸಿ-ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ"॥ ಅಂದರೆ ಸಾಕಾರ ಮೂರ್ತಿಯಾದ ನನ್ನಲ್ಲಿ ಮನವನ್ನಿರಿಸು. ನನ್ನ ಭಕ್ತನಾಗು ಅಂದರೆ ನೀನು ನನ್ನ ಬಳಿಗೆಯೇ ಬರುವಿ. ಇದು ಸತ್ಯವೆಂದು ನಾನು ಪ್ರತಿಜ್ಞಾಪೂರ್ವಕವಾಗಿ ಹೇಳುವೆನು. ನೀನು ನನಗೆ ಪ್ರಿಯಕರನಿರುವಿ. ಇನ್ನು "ಸಾಕಾರವಿಡಿದೇ ನಿರಾಕಾರವುದಯಿಸಿತಲ್ಲದೆ ನಿರಾಕಾರವೆಂಬುದು ಬೇರೆಯಿಲ್ಲ ಕಾಣಿರೋ" ಎಂಬ ಶಿವಶರಣರ ವಚನಕ್ಕನುಸರಿಸಿ ಸಾಕಾರ ವಸ್ತುವಿನ ಸಾಕ್ಷಾತ್ಕಾರವಾದ ಬಳಿಕ ನಿರಾಕಾರವಾದ ಪರವಸ್ತುವಿನಲ್ಲಿ ಬೆರೆಯಬೇಕೆಂಬದೊಂದು ಹೆಚ್ಚಿನ ಅವಸ್ಥೆಯು ಮನುಷ್ಯನಿಗೆ ಪ್ರಾಪ್ತವಾಗುವದು. ಸಾಕಾರನಿರಾಕಾರೋಪಾಸನೆಗಳಿಗೆ ಮಂತ್ರವೇ ಮೂಲಾಧಾರವಾಗಿರುವದು.

ಪರಮಾತ್ಮನ ಪೂಜೆಯು ಬುಡದಿಂದ ತುದಿಯ ವರೆಗೂ ಮಂತ್ರದಿಂದ ಕೂಡಿಕೊಂಡಿರುವದು. ಸ್ನಾನ ಮಾಡುವಾಗ ಮಂತ್ರ, ಆಸನವಲ್ಲಿ ಕುಳಿತುಕೊಳ್ಳುವಾಗ ಮಂತ್ರ, ದಿಗ್ಬಂಧನಮಂತ್ರ, ಭಸ್ಮ, ಗಂಧ, ಪುಷ್ಪ, ಪತ್ರಿ, ಧೂಪ, ದೀಪ, ನೈವೇದ್ಯ ನಮಸ್ಕಾರಾದಿಗಳಿಗೆಲ್ಲ ಮಂತ್ರಗಳಿರುವವು. ಅಂದರೆ ಪ್ರತಿಯೊಂದು ಆ ಪವಿತ್ರವಸ್ತುಗಳಲ್ಲಿ ಮನಸ್ಸನ್ನಿರಿಸಿ ಆ ಸೂತ್ರವಿಡಿದೇ ಪರಮಾತ್ಮನೆಡೆಗೆ ನಮ್ಮ ನಮ್ಮ ಮನಸ್ಸನ್ನು ಕಳಿಸಬೇಕು. ಮಂತ್ರಗಳು ಕೆಲವು ವೈದಿಕವಾಗಿಯೂ, ಕೆಲವು ಪೌರಾಣಿಕವಾಗಿಯೂ ಇರುವವು. ಪುರಾಣ ಮಂತ್ರಗಳಿಗಿಂತಲೂ ವೇದಮಂತ್ರಗಳು ಶ್ರೇಷ್ಠವಾದವುಗಳೆಂದು ಶಾಸ್ತ್ರಿಗಳು ಹೇಳುವರು. ಆದರೆ ನಿಜವಾಗಿ ವಿಚಾರ ಮಾಡಿದರೆ ಮಂತ್ರಗಳಲ್ಲೇನೂ ತಾರತಮ್ಯಗಳಿರುವದಿಲ್ಲ.

ನಿಜವಾದ ತಾರತಮ್ಯವು ಭಾವನೆಯಲ್ಲಿರುತ್ತದೆ. ವೇದಗಳು ಪುರಾತನವೂ ಪೂಜ್ಯವಾದವುಗಳೂ ಎಂದು ನಮ್ಮ ಭಾವನೆಯು ರೂಢವಾಗಿರುವದರಿಂದ ಪುರಾಣಮಂತ್ರಗಳಿಗೆ ನಮ್ಮ ಮನಸ್ಸಿಲ್ಲೆಯದು. ಸಾಮಾನ್ಯನಿಗೆ ವೇದಮಂತ್ರಗಳೂ ಬರುವದಿಲ್ಲ. ಪುರಾಣಮಂತ್ರಗಳೂ ಬರುವದಿಲ್ಲ. ಆದರೆ ಅವರಲ್ಲಿ ಪವಿತ್ರವಾದ ಶ್ರದ್ಧೆಯೂ ಭಾವನೆಯೂ ಇರುವದರಿಂದ ಅವರು ಪರಮಾತ್ಮನನ್ನು ಹೇಗೆಯೇ ಕರೆದರೂ ಅದು ಪ್ರಣವಮಂತ್ರವೇ ಆಗುವದು. ಅಂತಃಕರಣದಿಂದ ಉಕ್ಕಿ ಬಂದ ಶಬ್ದವೇ ಮಂತ್ರವು. ಅದೇ ವೇದವಾಕ್ಯವು- ಎನ್ನಯ್ಯ ಎನ್ನವನೆಯೆಂಬದೇ ಶಿವಮಂತ್ರ। ಎನ್ನಯ್ಯ ಎನ್ನಯ್ಯ ನುಡಿದುದೇ ಶಿವಮಂತ್ರ॥ ಹರೀಶ್ವರ ರಗಳೆ. ಅದು ಹೀಗೆಯೇ ಇರಬೇಕೆಂದು ನಿರ್ಬಂಧಗೊಳಿಸುವದು ಕ್ರಮದ ದೃಷ್ಟಿಯಿಂದ ವಿಹಿತವಿದ್ದರೂ ಅಧ್ಯಾತ್ಮಿಕ ದೃಷ್ಟಿಯಿಂದ ಒಳಿತಲ್ಲ. 'ಮಂತ್ರವು ಹೀಗೇ ಇರಬೇಕು, ಇಷ್ಟೇ ಇರಬೇಕು, ಇದೇ ದಾಟಿಯಿಂದಲೇ ಅನ್ನಬೇಕೆಂಬ ನಿರ್ಬಂಧಗಳು ಸ್ವತಂತ್ರಾತ್ಮರಿಗಾಗಲಿ ಅಜ್ಞಾನಿಗಳಿಗಾಗಲಿ ಸರಿಬೀಳವು. ಯಾವ ಶಬ್ದವನ್ನು ತಾನು ಧ್ಯಾನಿಸುವದರಿಂದ ತನ್ನ ಹೃದಯವು ಪವಿತ್ರವಾಗಬಹುದೆಂದು ಮನುಷ್ಯನಿಗೆ ಅನಿಸುತ್ತದೆಯೋ ಅದೇ ಮಂತ್ರವು.

ಮಂತ್ರವನ್ನು ಗೌಪ್ಯವಾಗಿಡುವದರ ರಹಸ್ಯವೇನು? "ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು" ಎಂಬ ಗಾದೆಯುಂಟು. ಎಲ್ಲಿಯ ವರೆಗೆ ನಾವು ಯಾವದಾದರೊಂದು ಮಾತನ್ನು ಗುಪ್ತವಾಗಿಡುತ್ತೇವೆಯೋ ಅಲ್ಲಿಯ ವರೆಗೂ ಅದಕ್ಕೆ ಒಳ್ಳೆ ಮಹತ್ವ ಬರುತ್ತದೆ. ಆದರೆ ಅದನ್ನು ಬಿಚ್ಚಿಯಾಡಿದರೆ ಅದರಲ್ಲೇನೂ ಸಾರಸ್ಯವುಳಿಯುವದಿಲ್ಲ. ಗೌಪ್ಯವಾದ ಮಾತುಗಳಲ್ಲಿ ವಿಶಿಷ್ಟತರವಾದ ಶಕ್ತಿಯಿರುತ್ತದೆ. ಹಳೆಯ ಜನರು ತಮಗೆ ಗೊತ್ತಿದ್ದ ವಿದ್ಯೆಯನ್ನಾಗಲಿ ಮಂತ್ರವನ್ನಾಗಲಿ ಎಲ್ಲರಿಗೂ ಬಹಿರಂಗವಾಗಿ ಹೇಳಿಬಿಟ್ಟರೆ ಅದು ಹುಸಿ ಹೋಗುತ್ತದೆಂದು ತಿಳಿದು ತಮ್ಮ ವಿಶ್ವಾಸಿಕರಾದ ಒಬ್ಬಿಬ್ಬರಿಗಷ್ಟೇ ಅದನ್ನು ಹೇಳುತ್ತಿರುತ್ತಾರೆ. ಅದರಿಂದ ಅಂಥ ಅಲ್ಪಸಂಖ್ಯಾಕರೇ ಅಭಿಮಾನಿಗಳೂ ಗೌರವಶಾಲಿಗಳೂ ಆಗಿ ಇತರರಿಗಿಂತ ಹೆಚ್ಚು ಮನ್ನಣೆಯನ್ನು ಹೊಂದಿಬೆರೆಯುತ್ತಿದ್ದಾರೆ. ಯಾವದಾದರೊಂದು ವಸ್ತುವು ಬಹು ಪ್ರಸಾರವಾಗದೆ ಅಲ್ಲಲ್ಲಿಯೇ ಗೌಪ್ಯವಾಗಿದ್ದಾಗ ಅವಕ್ಕೆ ಹೆಚ್ಚು ಮಹತ್ವ ಬರು

ತ್ತದೆ. ವಸ್ತುವು ಗೌಪ್ಯವೂ ಅಪರೂಪವೂ ಆದಷ್ಟು ಅದರಲ್ಲಿ ಹೆಚ್ಚು ಶ್ರದ್ಧೆಯು ಕೂಡ್ರುತ್ತದೆ. ಆ ಶ್ರದ್ಧೆಯಿಂದಲೇ ಮಂತ್ರಾಲು ಪಾಲು ಲಾಭವಾಗುವದು. ಉದಾಹರಣಾರ್ಥವಾಗಿ ಒಬ್ಬ ವೈದ್ಯನು ರೋಗಿಗೆ ಗಿಡಮೂಲಿಕೆಯ ಹೆಸರನ್ನೇನೂ ಹೇಳದೆ ಗುಪ್ತವಾಗಿ ಬೇಕಾದಂಥ ರೋಗವಿದ್ದರೂ ಆ ಮೂಲಿಕೆಯು ಗುಣಮಾಡುತ್ತದೆಂದು ಹೇಳಿ ಆ ರೋಗಿಗೆ ಕೊಟ್ಟರೆ ರೋಗಿಯು ಅದರ ಮೇಲೆ ತುಂಬಾ ವಿಶ್ವಾಸವಿಡುವದರಿಂದ ಆ ಔಷಧಿಗಿಂತಲೂ ಆತನ ವಿಶ್ವಾಸವು ರೋಗ ವಾಸಿ ಮಾಡಲಿಕ್ಕೆ ಹೆಚ್ಚಿನ ಸಾಧನವಾಗುತ್ತದೆ. ಆದರೆ ಆ ಔಷಧದ ಹೆಸರು ಹೇಳಿ ಬಿಟ್ಟರೆ ಅದರಲ್ಲೇನಿದೆ ಮಣ್ಣು? ಎಂಬೀ ಭಾವನೆಯುಂಟಾಗಿ ಅಂಥ ಭಾವನೆಯ ಮೂಲಕ ಗಿಡಮೂಲಿಕೆಯಲ್ಲಿದ್ದಂಥ ಸತ್ವವು ಕೂಡ ನಾಶವಾಗಿ ಹೋಗುವದು. ಗುಪ್ತ ಮಾತಿನಲ್ಲಿಲ್ಲ ಮಹತ್ವವಿರುತ್ತದೆಂಬ ಬಗ್ಗೆ ಒಂದು ಚಿಕ್ಕ ದೃಷ್ಟಾಂತವಿದೆ. ಒಬ್ಬ ಹಾದಿಕಾರನು ಹೊಳೆಯನ್ನು ದಾಟಬೇಕಾಗಿದ್ದಿತು. ಆ ಹೊಳೆಯ ದಂಡೆಯ ಮೇಲೆ ಒಬ್ಬ ಸನ್ಯಾಸಿಯು ಕುಳಿತಿದ್ದನು. ಆ ಹಾದಿಕಾರನು ಸನ್ಯಾಸಿಗೆ ನಮಸ್ಕರಿಸಿ ಹೊಳೆ ದಾಟುವಂತೆ ಕೃಪೆ ಮಾಡಬೇಕೆಂದುದಾಗಿ ಬೇಡಿಕೊಂಡನು. ಆಗ ಸನ್ಯಾಸಿಯು 'ಜಯ ಶಂಕರ' ಎಂಬ ಶಬ್ದವನ್ನು ಒಂದು ಕಾಗದದ ಮೇಲೆ ಬರೆದು ಆ ಚೀಟಿಯನ್ನು ಅತನ ರಟ್ಟೆಗೆ ಕಟ್ಟಿ "ನೀನು ಬೇಕಾದ ಹಾಗೆ ಹೊಳೆಯನ್ನು ದಾಟಬಹುದು. ಈ ಚೀಟಿಯು ನಿನ್ನನ್ನು ರಕ್ಷಿಸುತ್ತದೆ. ಆದರೆ ಅದನ್ನು ನೀನು ಕಳೆಯದೆ ಜನ್ನಾಗಿ ಜೋಪಾನ ಮಾಡು, ಮತ್ತು ಅದನ್ನು ಬಿಚ್ಚಿ ಅದರಲ್ಲೇನಿದೆಯೆಂದು ಸರ್ವಥಾ ನೋಡಬೇಡ." ಎಂದು ಹೇಳಿದನು. ಅದೇ ಪ್ರಕಾರ ಆ ದಾರಿಕಾರನು ಆ ಚೀಟಿಯ ಮೇಲೆ ಅತ್ಯಂತ ವಿಶ್ವಾಸವನ್ನಿಟ್ಟು ಅರ್ಧಕ್ಕಿಂತ ಹೆಚ್ಚು ಹೊಳೆಯನ್ನು ದಾಟಿ ಹೋದನು. ಅದರೆ ಮುಂದೆ ಈ ಚೀಟಿಯಲ್ಲಿ ಅಂಥ ಶಕ್ತಿಯೇನಿರುವದೋ ನೋಡಬೇಕೆಂಬ ಕುತೂಹಲವು ಅವನಲ್ಲುತ್ಪನ್ನವಾಯಿತು. ಆಗ ಅವನು ಸನ್ಯಾಸಿಯು ಹೇಳಿದುದನ್ನು ಗಣನೆಗೆ ತಾರದೆ ಅದರೊಳಗಿದ್ದ 'ಜಯ ಶಂಕರ' ಎಂಬ ಶಬ್ದವನ್ನು ನೋಡಿದನು. 'ಅಹಹ! ಇಷ್ಟೇ ಅಲ್ಲವೇ? ಈ ಶಬ್ದದೊಳಗೇನು ಅಷ್ಟು ಮಹತ್ವವಿದೆ? ನಾನು ಹೊಳೆಯದ್ದು ಹ್ಯಾಗಾದರೂ ದಾಟಿಯೇ ದಾಟುತ್ತಿದ್ದೆನು! ಎಂದು ಅಂದುಕೊಂಡು ಅದರಲ್ಲಿದ್ದ ವಿಶ್ವಾಸವನ್ನು ಕಳೆದುಕೊಂಡು ಆ ಚೀಟಿಯನ್ನು ಬಿಸುಡಿಬಿಟ್ಟನು. ಆ ವಿಶ್ವಾಸವು ನಷ್ಟವಾದ ಕೂಡಲೆ ಆತನು ತಾನು ಮೊದಲು ಎಷ್ಟು ಜಾಗರೂಕತೆಯಿಂದ ಹೆಜ್ಜೆಯಿಡುತ್ತಿದ್ದನೋ ಅದನ್ನು ಬಿಟ್ಟು ವೈಸೊಕ್ಕಿನಿಂದ ಬಡಬಡ ನಡೆಯಲಾರಂಭಿಸಿದನು. ಆನಂತರ ಸ್ವಲ್ಪ ನಿಮಿಷಗಳಲ್ಲಿಯೇ ವೈಮರೆತು ಕಾಲು ಮೇಲಕ್ಕೆ ಹಾರಿ ಆತನು ನೆಳವಿಗೆ ಬಿದ್ದು ಹೊಳೆಯಲ್ಲಿ ಮುಳುಗಿ ಸತ್ತು ಹೋದನು. ಆ ಚೀಟಿಯಲ್ಲಿ ಮೊದಲಿನಂತೆಯೇ ವಿಶ್ವಾಸವಿದ್ದರೆ ಆತನು ಜಾಗರೂಕತೆಯಿಂದ ಹೊಳೆಯನ್ನು ದಾಟೇ ದಾಟುತ್ತಿದ್ದನು. ಎಲ್ಲಿಯ ವರೆಗೆ ಆತನಲ್ಲಿ ಆ ಗುಪ್ತ ಮಾತಿನಲ್ಲಿ ಶ್ರದ್ಧೆಯಿದ್ದು ಅದನ್ನು ಬಚ್ಚಿಟ್ಟಿದ್ದನೋ ಅಲ್ಲಿಯ ವರೆಗೂ ಆತನಲ್ಲಿ ಒಂದು ವಿಶಿಷ್ಟತರವಾದ ಶಕ್ತಿಯುಂಟಾಗಿದ್ದಿತು. ಆದರೆ ಆ ಗುಪ್ತ ಮಾತಿನಲ್ಲಿ ಆತನು ವಿಶ್ವಾಸವನ್ನು ಕಳೆದುಕೊಂಡಾಕ್ಷಣವೇ ಅವನ ವಿನಾಶ ಕಾಲವು ಸಮೀಪಿಸಿತು. ಅದರಂತೆಯೇ ಮಂತ್ರವನ್ನಾದರೂ ಗುಪ್ತವಿಟ್ಟಷ್ಟು ನೆಟ್ಟಗೆ. ಅಂತೆಯೇ ಗುರುವು ಕಿವಿಯಲ್ಲಿ ಮಂತ್ರೋಪದೇಶ ಮಾಡುವನು. ಮತ್ತು ಅದನ್ನು ಬಹಿರಂಗವಾಗಿ ಉಚ್ಚರಿಸಬಾರದೆಂದು ಸುರುವನು. ಯಾವ ಮಂತ್ರದಲ್ಲಿಯೇ ಯಾಕಾಗಲೊಲ್ಲದು, ದೃಢವಾದ ವಿಶ್ವಾಸವಿದ್ದರೇನೇ ಮನುಷ್ಯನಲ್ಲಿ ಅಸಾಧಾರಣವಾದ ಶಕ್ತಿಯುಂಟಾಗುವದೇ ವಿನಃ ಅರ್ಧಮರ್ಧ ಅಥೈರ್ಯದ ವಿಶ್ವಾಸವಿದ್ದರೆ ನಮ್ಮ ಕೆಲಸದಲ್ಲಿ ಜಯವು ಸಿಗಲಾರದು. ಒಬ್ಬ ಗುರುವು ತನ್ನ ಶಿಷ್ಯನಿಗೆ 'ಶಿವ ಶಿವಾ ಎಂದರೆ ಬೇಕಾದಂಥ ವಿಘ್ನಗಳು ಬಂದರೂ ನೀನು ದಾಟುವಿ' ಎಂದು ಉಪದೇಶಿಸಿದ್ದನು. ಆದರೆ ಆ ಶಿಷ್ಯನು ಅಥೈರ್ಯವುಳ್ಳವನಾದ್ದರಿಂದ ಆ ಮಾತಿನಲ್ಲಿ ಪೂರಾ ವಿಶ್ವಾಸವಿಡಲಿಲ್ಲ. ಆದರೆ ಆ ಭಕ್ತನು ಒಂದು ತುಂಬಿ ಹರಿಯುವ ನದಿಯನ್ನು ದಾಟ ಹೋಗಬೇಕಾಗಿದ್ದಿತು. ಕಲ್ಲಿ ಹರಗೋಲಿನವರಾಗಲಿ ಸಿಂಗಡಿಯವರಾಗಲಿ ಇದ್ದಿದ್ದಿಲ್ಲ. ಅತ್ತಿತ್ತ ನೋಡಲಾಗಲಿ ಒಬ್ಬ ಎಲ್ಲಮ್ಮನ ಜೋಗತಿಯು ತನ್ನ ಹಡಲಿಗೆಯನ್ನೇ ಹರಗೋಲು ಮಾಡಿ 'ಉದೋ ಉದೋ' ಎಂದು ಮಂತ್ರೋದ್ಧಾರವನ್ನು ಪಠಿಸುತ್ತ ಹೊಳೆಯನ್ನು ದಾಟಲುಪಕ್ರಮಿಸಿದಳು. ಅದನ್ನು ನೋಡಿ ಆ ಶಿಷ್ಯನು ತನ್ನ ಗೊಂಗಡಿಯನ್ನು ಹೊಳೆಯ ಮೇಲೆ ಹಾಸಿ ಅದರ ಮೇಲೆ ಕುಳಿತುಕೊಂಡು 'ಶಿವಶಿವಾ' ಎಂದು ಅವಳ ಬೆನ್ನ ಹಿಂದೆ ಸಾಗಿದನು. ಆದರೆ ಆ ಜೋಗತಿಯ ವಿಶ್ವಾಸವು ಆ ಶಿಷ್ಯನ ವಿಶ್ವಾಸಕ್ಕಿಂತಲೂ ಅಧಿಕವಾದುದರಿಂದ ಆಕೆಯು ಅವನಿಗಿಂತಲೂ ಭರದಿಂದ ಮುಂದಕ್ಕೆ ಸಾಗಿದಳು. ಆಗ ಶಿಷ್ಯನ ಎದೆಯು ಡವ ಡವ ಹಾರಹತ್ತಿತು. 'ಶಿವಶಿವಾ' ಎನ್ನುವದನ್ನು ಬಿಟ್ಟು ತಾನೂ ಉದೋ ಉದೋ

ಎಂದರೆ ಶೀಘ್ರವಾಗಿ ದಾಟಬಹುದು ಎಂದು ಭಾವಿಸಿ 'ಉದೋ ಉದೋ' ಎಂದು ಪಠಿಸಲಾರಂಭಿಸಿದನು. ಅವನ ಅಧೈರ್ಯವು ಹೆಚ್ಚಿ ವಿಶ್ವಾಸವು ಕಡಿಮೆಯಾಗುತ್ತ ಹೋದಂತೆ ಕಂಬಳಿಯು ಸಾವಕಾಶವಾಗಿ ಕೆಳಗೆ ಇಳಿಯುತ್ತ ಹೋಯಿತು. ಆಗ ಅವನು ಗಾಬರಿಗೊಂಡು ಒಮ್ಮೊಮ್ಮೆ 'ಶಿವಶಿವಾ' ಒಮ್ಮೊಮ್ಮೆ 'ಉದೋ ಉದೋ' ಎಂದು ಗಡ್ಗದ ಧ್ವನಿಯಿಂದ ಒದರಲಾರಂಭಿಸಿದನು. ಇಷ್ಟರಲ್ಲಿ ಏಕನಿಷ್ಠೆಯುಳ್ಳ ಜೋಗತಿಯು ಹೊಳೆದಾಟಿ ಹೋಗಿದ್ದಳು. ಆದರೆ ಶಿಷ್ಯನು ತಾನು ಸಾಯುವದು ನಿಶ್ಚಯವೆಂದು ತಿಳಿದು ಎದೆಯೊಡೆದು ಯಾವ ಮಂತ್ರವನ್ನೂ ಉಚ್ಚರಿಸದೆ ಸ್ತಬ್ಧನಾದನು. ಆ ಮೇಲೆ ಅತನು ತೀವ್ರವೇ 'ಜಲಸಮಾಧಿಯನ್ನು ಹೊಂದಿದನು. ಇದರ ಮೇಲಿಂದ ನೆಮಗೆ ಗೊತ್ತಾಗುವದೇನುದರೆ ಯಾವದೇ ಮಾತಿನಲ್ಲಿ ನಮಗೆ ದೃಢತರವಾದ ವಿಶ್ವಾಸವೊಂದಿದ್ದರೆ ಬೇಕಾವಂಥ ಗಂಡಾಂತರಗಳನ್ನು ಸಹ ನಾವು ದಾಟಿಹೋಗುವದು ಶಕ್ಯವು. ಆದರೆ ನಾವು ವಿಶ್ವಾಸಶೂನ್ಯರಾದರೆ ಮಾತ್ರ ಏನೂ ಘಡಕ್ಕೂ ಮುಟ್ಟಲಾರೆವು. ಆದುದರಿಂದಲೇ ಶ್ರೀ ಭಗವದ್ಗೀತೆಯಲ್ಲಿ "ಅಜ್ಞಶ್ಚಾಶ್ರದ್ದಧಾನಶ್ಚ ಸಂಶಯಾತ್ಮಾ ವಿನಶ್ಯತಿ" ಅಂದರೆ 'ಶ್ರದ್ಧೆಯಿಲ್ಲದ ಅಜ್ಞಾನಿಯು ಸಂಶಯ ಗ್ರಸ್ತನಾಗಿ ನಾಶಹೊಂದುತ್ತಾನೆ.' ಎಂದು ಹೇಳಿದೆ. "ಶ್ರದ್ಧಾವಾಂಲ್ಲಭತೇ ಜ್ಞಾನಂ" ಅಂದರೆ ಶ್ರದ್ಧೆಯುಳ್ಳಾತನೇ ಜ್ಞಾನವನ್ನು ಪಡೆಯುತ್ತಾನೆಂಬ ಗೀತಾವಚನವಿರುವದು.

ವೀರಶೈವರಲ್ಲಿ ಪಂಚಾಕ್ಷರಿ ಮತ್ತು ಷಡಕ್ಷರಿಗಳೆಂದು ಎರಡು ಪ್ರಕಾರದ ಮಂತ್ರಗಳಿರುತ್ತವೆ. ಪ್ರಣವವನ್ನು ಬಿಟ್ಟರೆ ಪಂಚಾಕ್ಷರಿಯಾಗುವದು, ಹಿಡಿದರೆ ಷಡಾಕ್ಷರಿಯಾಗುವದು. ಈ ಮಂತ್ರಗಳನ್ನು ಮನವಲ್ಲಿಯೇ ಪಠಿಸಬೇಕೆಂದು ಶ್ರೀ ಗುರುವು ಶಿಷ್ಯನ ಕಿವಿಯಲ್ಲಿ ಹೇಳುವನು. ಈ ಮಂತ್ರಗಳು ಗೌಪ್ಯವಾಗಿರಬೇಕೆಂತಲೂ ಕೇವಲ ಗುರುಗಳ ಮುಖದಿಂದಲೇ ಕೇಳಲ್ಪಡಬೇಕೆಂತಲೂ ಬಂಧುರವಾದ ನೇಮವು ಎಷ್ಟೋ ದಿವಸಗಳಿಂದ ನಡೆಯುತ್ತ ಬಂದಿದ್ದರೂ ಈಗಿನ ಮನ್ವಂತರದಲ್ಲಿ ಅವು ಯಾವ ಕಾರಣದಿಂದಲೋ ಬಹಿರಂಗವಾಗಿ ಉಚ್ಚರಿಸಲ್ಪಡುತ್ತ ಇರುವದರಿಂದ ಅವುಗಳ ಪಠಣ ಮಾಡಿದರೆ ಯಾವ ಲಾಭವೂ ಇಲ್ಲೆಂದು ಜನರಿಗೆ ಭಾಸವಾಗಿ ಬಿಟ್ಟಿದೆ. ಎಲ್ಲಿಯ ವರೆಗೆ ಜನರಲ್ಲಿ ಆ ಮಂತ್ರಗಳ ಬಗ್ಗೆ ಶ್ರದ್ಧೆಯೂ ಭಕ್ತಿಯೂ ನೆಲೆಗೊಂಡಿದ್ದವೋ ಅಲ್ಲಿಯ ವರೆಗೂ

ಜನರು ಉಜ್ವಲವಾದ ಶಕ್ತಿಯನ್ನು ಪಡೆಯುತ್ತಿದ್ದರು. ಆದರೆ ಆ ಪವಿತ್ರವಾದ ಮಂತ್ರಗಳು ಬೈಲಿಗೆ ಬಿದ್ದಂದಿನಿಂದ 'ಅವುಗಳಲ್ಲೇನಿದೆ?' ಎಂಬ ಖಿಲ ಕಲ್ಪನೆಯೇ ಜನರಲ್ಲುಂಟಾಗಿ ಅವುಗಳೊಳಗೆ ಏನೂ ಮಹತ್ವವಿಲ್ಲದಂತಾಗಿದೆ. ಮನುಷ್ಯನಿಗೆ ಭಜನೆ, ಸ್ತೋತ್ರ, ಪ್ರಾರ್ಥನೆ, ಧ್ಯಾನ, ಮಂತ್ರಗಳು ಉತ್ತರೋತ್ತರ ಶ್ರೇಯಸ್ಸನ್ನುಂಟುಮಾಡತಕ್ಕವುಗಳಾಗಿವೆ. ಮಂತ್ರವೆಂಬುದು ಇವೆಲ್ಲವುಗಳಿಗಿಂತಲೂ ಅಧಿಕವಾದುದು. ತಾಳತಪ್ಪಡಿ ತಂಬೂರಿಗಳಿಂದ ದೇವರ ವಿಷಯವಾಗಿ ಪದಗಳನ್ನು ಹಾಡುವದಕ್ಕೆ ಭಜನೆಯನ್ನುತ್ತಾರೆ. ಇದು ಮನುಷ್ಯನಲ್ಲಿ ಪವಿತ್ರ ಭಾವನೆಯನ್ನು ಬೆಳೆಯಿಸುವ ಮೊದಲನೆಯ ಮೆಟ್ಟಲು. ಸ್ತೋತ್ರ ಅಥವಾ ಸ್ತವನವೆಂದರೆ ಸ್ವತಃ ರಚಿಸಿದ ಇಲ್ಲವೆ ಮಹನೀಯರು ರಚಿಸಿದ ಶ್ಲೋಕಗಳಿಂದ ಪರಮಾತ್ಮನನ್ನು ಗಟ್ಟಿಯಾಗಿ ಹೊಗಳಿ ಆನಂದಪಡುವದು. ಇದು ಮನಸ್ಸನ್ನು ಪರಿಶುದ್ಧಗೊಳಿಸುವ ಎರಡನೆಯ ಮೆಟ್ಟಲು. ಪ್ರಾರ್ಥನೆಯಂದರೆ ಪ್ರಾತಃಕಾಲವಾದ ವೇಳೆಯ ವರೆಗೆ ಕಣ್ಣುಮುಚ್ಚಿ, ಮೊಳಕಾಲೂರಿ, ಮುಖ ಮೇಲಕ್ಕೆತ್ತಿ ಇಲ್ಲವೆ ಆಸನ ಹಾಕಿಕೊಂಡು ಕುಳಿತು ದೀನವಾಣಿಯಿಂದಾಗಲಿ ಮೌನದಿಂದಾಗಲಿ ಪರಮಾತ್ಮನೆದುರಿಗೆ ತನ್ನ ಪಾಪಗಳನ್ನೊಪ್ಪಿಕೊಂಡು ರಕ್ಷಿಸಬೇಕೆಂದು ಬೇಡಿಕೊಳ್ಳುವದೇ ಆತ್ಮಪಾವಿತ್ರ್ಯತೆಯ ಮೂರನೆಯ ಮೆಟ್ಟಲು. ಪರಮಾತ್ಮನ ನಾಮಸ್ಮರಣೆ ನಿರಂತರ ಬಹಿರಂಗದಲ್ಲಿಯೂ ಅಂತರಂಗದಲ್ಲಿಯೂ ಭಕ್ತಿಪೂರ್ವಕವಾಗಿ ಪಠಿಸುವದೇ ಧ್ಯಾನವು. ಇದರಿಂದ ಮನಸ್ಸು ಅಲ್ಲದ ವಿಷಯಗಳ ಕಡೆಗೆ ಹರಿಯದೆ ವಿಶೇಷತಃ ಪರಮಾತ್ಮನ ಕಡೆಗೆಯೇ ಎಳೆಯುತ್ತಿರುತ್ತದೆ. ಗುರುವು ಹೇಳಿದ ಗೌಪ್ಯ ಮಂತ್ರವನ್ನು ಭಯಭಕ್ತಿಯಿಂದ ಮನದಲ್ಲಿಯೇ ಯಾವಾಗಲೂ ಧ್ಯಾನಿಸುವದೇ ಮಂತ್ರವು. ಇದರಿಂದ ನವ್ಯ ಮನಸ್ಸು ಸದೈವ ಪರಮಾತ್ಮನಲ್ಲಿಯೇ ಒಳಪಡುವದಲ್ಲದೆ ಅದಕ್ಕೆ ಬೇರೆ ಕಡೆಗೆ ಹರಿದಾಡಲು ಸ್ವಲ್ಪಾವಕಾಶ ದೊರೆಯುವದಿಲ್ಲ. ಈಗ್ಯೂ ಸಹ ಕೆಲಕೆಲವು ಮಂತ್ರಗಳನ್ನು ಗೌಪ್ಯವಾಗಿಟ್ಟುಕೊಂಡು ಅದ್ಭುತ ಸಾಮರ್ಥ್ಯವನ್ನು ಪಡೆಯುತ್ತಿರುವಂಥ ಜನರಿಪ್ಪೋ ಇರುವರು. ಆದರೆ ನಾವು ನೆನಪಿನಲ್ಲಿಡತಕ್ಕ ಮುಖ್ಯ ಸಂಗತಿಯೇನಂದರೆ ಯಾವ ಮಂತ್ರದಲ್ಲಿಯೂ ನಿಜವಾಗಿ ಏನೂ ಅರ್ಥವಿಲ್ಲ. ಆದರೆ ನಾವು ಅದರಲ್ಲಿಟ್ಟಂಥ ಶ್ರದ್ಧೆ ಮತ್ತು ಭಾವನೆಗಳಿಂದಲೇ ನಮ್ಮಲ್ಲಿ ದಿವ್ಯವಾದ ಶಕ್ತಿಯು ಬರುತ್ತದೆ. ಎಲ್ಲರಿಗೂ ಬಹಿರಂಗವಾಗಿ ಗೊತ್ತಿದ್ದ ಯಾವದಾದರೊಂದು ಮಾತಿನ ಬಗ್ಗೆ ನಮ್ಮಲ್ಲಿ ಅಷ್ಟು ವಿಶ್ವಾಸವಾಗಲಿ,

ಪೂಜ್ಯಭಾವನೆಯೂಗಲಿ ಹುಟ್ಟುವದು ಅಸಂಭವವು. ಆದರೆ ಪರಮ ಪವಿತ್ರವಾದ ಪಂಚಾಕ್ಷರಿ ಷಡಾಕ್ಷರಿ ಮಂತ್ರಗಳು ಇಷ್ಟೇ ಬಹುತರ ಎಲ್ಲ ಮಂತ್ರಗಳೂ ಬಹಿರಂಗವಾಗಿವೆ. ಅಂದಮೇಲೆ ಭಾವನೆಯನ್ನು ಹೇಗೆ ಪವಿತ್ರಗೊಳಿಸಬೇಕು? ಆ ಮಂತ್ರಗಳನ್ನೇ ಸಪಡಿಸಬೇಕೋ? ಅಥವಾ ಬಹಿರಂಗವಾಗಿದ್ದರೂ ಅಗಿಲ್ಲವೆಂಬ ಭಾವನೆಯಿಂದ ಅವಕ್ಕೇನೋ ಅಂಟಿಕೊಳ್ಳಬೇಕೋ? ಒಟ್ಟಿನ ನಿಜವಾದ ಗುರುವು ಅಥವಾ ತನ್ನರಿವು ರಹಸ್ಯವಾಗಿ ಹೇಳಿಕೊಟ್ಟ ಮಂತ್ರವನುಸರಿಸಿ ನಡೆದುಕೊಳ್ಳುವದು ಕ್ಷೇಮಕರವು.

ಸರ್ವಜ್ಞ ಕವಿ.

(ಲೇಖಕ— ಚಿಚ್ಚಕೋರ)

(ಹಿಂದಿನ ಸಂಚಿಕೆಯಿಂದ ಮುಂದೆ ನಾಗಿದ್ದು)

ಹೀಗಿದ್ದ ಮೂಲಕ ಗುರುವಿನಲ್ಲಿ ಜಾತಿಯನ್ನು ಎಣಿಸಬಾರದು. ದೇವನೊಲಿದಾತನೇ ನಿಜವಾದ ಜಾತನು. ಮೇಲಾಗಿ ಜಾತಿಹೀನರ ಮನೆಯ ಜ್ಯೋತಿ ತಾ ಹೀನವೆ? 'ಊರಿಗೆ ದಾರಿಯನ್ನು ಯಾರು ತೋರದಡೇನು?' ಆದರೂ ಸದ್ಗುರುವಿನ ಲಕ್ಷಣವನ್ನು ಹೀಗೆ ಹೇಳಬಹುದು. ಪರಮಾತ್ಮನು ತನ್ನೊಳಗೆ ಎರವಿಲ್ಲದೆ ಇದ್ದರೂ ಯಾವನು ಪರದೇಶಿಯಂತಿರುವನೋ ಆತನೇ ಪರಮ ಗುರುವು. ಇಂಥ ಗುರುವಿನ ವಚನವೇ ಪರಮಾರ್ಥ. ಇಂಥವನನ್ನೇ ನಂಬುವುದು! ಎತ್ತಾಗಿ, ತೊತ್ತಾಗಿ, ಪಾದದ ಕೆಳಗಾಗಿ ಇಂಥ ಗುರುವಿನನ್ನು ಸೇವಿಸಬೇಕು. ಈ ಮೇರೆಗೆ ಸದ್ಗುರು ಸಚ್ಛಿಷ್ಯರು ಒತ್ತಟ್ಟಿಗೆ ಸೇರಲು ಅಧ್ಯಾತ್ಮಪ್ರಕಾಶವು ಹೊರಚಿಮ್ಮುವದು. ಕಟ್ಟಿಗೆಗಳೆರಡನ್ನು ಕಟ್ಟಿಡದೆ ಗಟ್ಟಾಗಿ ಮಥನಿಸಿದರೆ ದೊಡ್ಡ ಬೇಗೆಯು ಬೆಳಗುವಂತೆ ಗುರುಶಿಷ್ಯಸಂಗಮದ ಪರಿಣಾಮ ಪರುಷವು ಲೋಹವನ್ನು ಕೂಡಲೆ ಬಂಗಾರವನ್ನಾಗಿ ಮಾಡುವಂತೆ ಸದ್ಗುರುವಿನ ದರುಶನವೇ ಶಿಷ್ಯನನುದ್ಧರಿಸುತ್ತಿವೆ.

೫. ಸಾಧಕಸ್ಥಲ.

೧. ಹಿಂದಿನಿಂದ ಮುಂದೆ:—ಸದ್ಗುರುವಿಗೆ ಶರಣು ಹೋಗಿ ಅವರು ಹೇಳಿದ ಸಾಧನವನ್ನು ನಿಷ್ಠೆಯಿಂದ ಮಾಡುವ ಮುಮುಕ್ಷುವು ಸಾಧಕ

ನೆಂದೆನಿಸಿಕೊಳ್ಳುವನು. ಸತ್ಪುರುಷರ ಸಹವಾಸದಲ್ಲಿ ತಪಸ್ಸನ್ನು ಮಾಡಿದ ಮೂಲಕ ಅವನಲ್ಲಿ ಸದ್ವೃತ್ತಿಯು ಕೆಲಮಟ್ಟಿಗೆ ಬೆಳೆದಿರುತ್ತದೆ. ಮುಂದೆ ಗುರುಗಳು ಉಪದೇಶಿಸಿದ ಆತ್ಮಜ್ಞಾನವನ್ನು ದೃಢಮಾಡುವದಕ್ಕಾಗಿ ಅವನು ಸಾಧನವನ್ನು ಮಾಡುವನು. ದೇವರನ್ನು ಕಾಣುವದೇ ಸಾಧನವು ತನ್ನೆದುರಿಗಿಟ್ಟ ಹಿರಿಗುರಿಯು; ಅದನ್ನು ಸಾಧಿಸುವದಕ್ಕಾಗಿಯೇ ಅವನ ಅಖಂಡ ಯತ್ನ. ದೇವರ ದರ್ಶನಕ್ಕಾಗಿ ಅವನು ಎಲ್ಲ ಸೌಖ್ಯವನ್ನು ತೊರೆದು ಶ್ರವಣ, ಮನನ, ನಿಧಿಧ್ಯಾಸಮಂದನನು ದೇವರನ್ನು ಕಾಣಲು ಬಯಸುವನು.

ಶ್ರವಣಃ— ಕೇಳಿಕೆಯೇ ತಿಳುವಳಿಕೆಗೆ ಆಧಾರವೆಂಬುದು ಎಲ್ಲರಿಗೆ ಗೊತ್ತಿದ್ದ ವಿಷಯ. ಆದ್ದರಿಂದ ಎಲ್ಲ ಸಾಧನಗಳಲ್ಲಿ ಶ್ರವಣವೇ ಹಿರಿದಾದುದು. ಗುರುವಿನ ಅಡಿಯ ಬಳಿ ಕುಳಿತು ಸಾಧಕನು ದೇವರಾರು, ಅವನನ್ನ ಭಜಿಸುವದೇತಕ್ಕೆ, ಹೇಗೆ, ಇಂತು ಮುಂತಾದ ಸಂಗತಿಗಳನ್ನು ಚರಿತ್ರಕೊಳ್ಳುವನು. ಜೀವ ಜಗತ್ತು ಜಗದೀಶ್ವರರ ಪರೋಕ್ಷಜ್ಞಾನವು ಜನ್ಮಾಗಿ ಅದಮೇಲೆ ಅದರ ಅಪರೋಕ್ಷಾನುಭೂತಿಗಾಗಿ ಅವನು ಮುಂದಿನ ಸಾಧನವನ್ನು ಪ್ರಾರಂಭಿಸುವನು. ಇವುಗಳ ವಿಷಯವಾಗಿದ್ದ ಸರ್ವಜ್ಞನ ಸಂದೇಶವು ಮನನೀಯವಾದುದು. ಇರುತ್ತದೆ.

೨. ದೇವರಾರು:—ಮೊದಲು ಸರ್ವಜ್ಞನು ದೇವರ ವಿಷಯವಾಗಿ ಏನು ಹೇಳುತ್ತಾನೆ ಕೇಳುವ. ಸರ್ವಜ್ಞನಾದ ದೇವರು ಜಗಕೆ ಒಬ್ಬನಲ್ಲದೆ ಇಬ್ಬರುಂಟೇ ಎಂದು ಕೇಳಿ ಭುವನ ಪ್ರಾಣಿಗಳಿಗಾವ ನಿಜವಾದ ದೇವನು ಒಬ್ಬನೇ ಎಂದು ಸರ್ವಜ್ಞನು ಅಭಿಪ್ರಾಯಪಡುತ್ತಾನೆ. ಆಕಾಶದಂತೆ ಅಡಗಿರುವ ಪರಬೊಮ್ಮನು ಕಾಣುವದಿಲ್ಲ. ಅವನಿಗೆ ಯಾವ ತರಹದ ಆಕಾರವು ಇಲ್ಲ. ದೇವರಿಲ್ಲದ ಸ್ಥಳವಿಲ್ಲ. ನಾವಿರುವ ಈ ಜಗತ್ತು ಅತನಲ್ಲಿಯೇ ಅಡಗಿರುವುದು. ಮೇಲಾಗಿ ಪರಬೊಮ್ಮನಲ್ಲಿ ಯಾವ ಬಗೆಯ ಭೇದವಿಲ್ಲ. ತಾನೇ ತಾನಾಗಿ ಇರುತಿಪ್ಪ ಅತನ ಯಥಾರ್ಥವಾದ ಜ್ಞಾನವು ಹರಿಹರಬೊಮ್ಮರಿಂದ ಆಗುವದಿಲ್ಲ.

ಈ ಒಂದೇಒಂದಾದ ಪರಬೊಮ್ಮನಿಂದ ಜಗತ್ತು ಹುಟ್ಟಿದ ಕಾರಣ ಅವನ ಜ್ಞಾನವಾದೊಡನೆ ಜಗತ್ತು ಕಣ್ಣಮುಂದೆ ನಿಲ್ಲುವದು. ಸಮುದ್ರದಲ್ಲಿ ಅಲೆಗಳು ಮೈದಾಳುವಂತೆ ಚಿನುಮಯನಾದ ದೇವನಲ್ಲಿ ಮೂರೂ ಲೋಕಗಳು ಜನಿಸಿರುತ್ತವೆ. ಚಿತ್ರಕ್ಕೆ ಭೀತಿಯು ಹಿನ್ನೆಲವಿದ್ದಂತೆ ಜಗ

ತ್ಯಕ್ಕೆ ದೇವನೇ ಆಧಾರ. ಕಂಕಣವು ಕನಕದ ವಿಕಾರವಿರುವಂತೆ ನಾಮ ರೂಪಾತ್ಮಕ ಸೃಷ್ಟಿಯು ಪರಮಾತ್ಮನ ವಿಕಾರವು. ನವಿಲಿನೊಳು ಚಿತ್ರವನ್ನೂ ಎಲೆಯಲರಗಳಲ್ಲಿ ವಿವಿಧ ಬಣ್ಣಗಳನ್ನೂ ತೆಂಗಿನಲ್ಲಿ ಎಳೆನೀರನ್ನೂ ಕೋಗಿಲೆಯ ಕಂಠದಲ್ಲಿ ಇನಿದಾದ ಗಾಯನವನ್ನೂ ತುಂಬಿದವರು ದೇವರನ್ನಲ್ಲದೆ ಇನ್ನಾರು?

ಆನೆಯು ಕನ್ನಡಿಯಲ್ಲಿ ಅಡಗುವಂತೆ ಜಾಣರ ಎದೆಯಲ್ಲಿ ಹುಟ್ಟು ಸಾವುಗಳಿಲ್ಲದ ಪರಮಾತ್ಮನು ಅಡಗಿರುವನು. ಚಂದನದ ಮರದಲ್ಲಿ ಗಂಧವು ಇರುವಂತೆ ಶರಣರ ಹೃದಯದಲ್ಲಿ ಪರಶಿವನು ವಾಸಿಸಿರುವನು. ಹಾಲಿನಲ್ಲಿ ದೆಸ್ಸೆಯೂ ನೀರಿನಲ್ಲಿ ಬೆಂಕಿಯೂ ಗೂಢವಾಗಿರುವಂತೆ ದೇವರು ಎಲ್ಲರಲ್ಲಿ ಆರಿಗೂ ತೋರದೆ ಸಾರಿಹನು. ಜಗತ್ತಿನಲ್ಲಿ ಈ ಮೇರೆಗೆ ತುಂಬಿತುಳುಕುವನು ತಮ್ಮಲ್ಲಿ ಇರಲಾರನೇ? ಆದ್ದರಿಂದ ವಾರಾಣಸಿಗೆ ಹೋಗುವ ಕಾರಣವೇನು? ಕಾರಣ ಪುರುಷನು ತನ್ನೊಳು ಇರುತಿರಲು ಮುಕ್ತಿಗಾಗಿ ಎಲ್ಲಿಯೂ ಅಲೆದಾಡುವ ಕಾರಣವಿಲ್ಲ ಎಂದು ಸರ್ವಜ್ಞನು ಉಸುರುತ್ತಾನೆ.

೬. ಭಜಿಸುವದೇತಕ್ಕೆಃ— ಸಂಸಾರವೆಂಬುದು ನೀರ ಬೊಬ್ಬಳಿಯಂತೆ ಕ್ಷಣಭಂಗುರವಾದದ್ದು. ಅದೊಂದು ಜಾವಕ್ಕೆ ಹರಿದು ಹೋಗುವ ಹರಿದಾದ ಸಂತೆ. ಇಂಥ ಅಸ್ಥಿರವಾದ ಸಂಸಾರದಲ್ಲಿಯೂ ತನ್ನ ಬಳಿಯಲ್ಲಿ ಭೋಗಗಳಿದ್ದರೆ ಸತಿಸುತರು ನಗುತಿಹರು. ಅವು ಮಾಯವಾದ ಮರುದಿನವೇ ನಗೆ ಹೋಗಿ ಹೊಗೆಯಾಗುವದು. ನಮ್ಮ ಶರೀರವೂ ಕೂಡ ಒಂದು ಅರಗಳಿಗೆಯಲ್ಲಿ ಕರಗುವ ಒಡವೆ. ಅದರ ಸಾರವಸ್ಥರಿಯದೆ ಸುಖಪಡುವದು ಮರುಳತನವಲ್ಲವೆ? ಉರಗನ ಮುಖದಲ್ಲಿ ಸಿಲುಕಿದ ಕಪ್ಪೆಯು ತನ್ನ ಮರಣವನ್ನು ಲೆಕ್ಕಿಸದೆ ಹಾರುವ ನೊಣಕೆ ಎರಗುವಂತೆ ಸಂಸಾರ ಸುಖದ ಇರವು ಕಾಣಯ್ಯ ಎಂದು ಸರ್ವಜ್ಞನು ಹೇಳುತ್ತಾನೆ.

ಮೇಲಾಗಿ ಮರಣವು ಆವ ಮಾನವನಿಗೂ ಬಿಟ್ಟದ್ದಲ್ಲ. ಮನುಜನು ವಾರಾಣಸಿಯಲಿರಲಿ, ವಾರಿಧಿಯ ನಡುವಿರಲಿ, ವೀರಭದ್ರನ ನೆರೆಯಲಿರಲಿ, ಅಂತಕನು ಅವನನ್ನು ಕೊಲ್ಲದೆ ಎಂದೂ ಬಿಡುವದಿಲ್ಲ. ಕಡಲೇಳುಗಳ ಮಧ್ಯದಲ್ಲಿ ಲೋಹದ ಕೋಟೆಯಲ್ಲಿದ್ದ ಪರಿಕ್ಷಿತಿಯನ್ನು ವಿಧಿಯಹಿಡಿತದಿಂದ ಬಿಡಿಸಲು ಯಾರಾದರೂ ಸಮರ್ಥರಾದರೇ? ಮೃತ್ಯು

ದೇವತೆಯು ಜನರನ್ನು ಕೆಲಕಾಲ ಅಟ್ಟಿತ್ತಾಡಿಸಿ ಕೊನೆಗೆ ಎಲ್ಲರನ್ನೂ ತನ್ನ ಉದರದಲ್ಲಿ ಜೆಲ್ಲುತ್ತಾಳೆ.

ಆದುದರಿಂದ ದೇವರನ್ನು ನೆನೆದು ಆತನ ಕೃಪೆಯನ್ನು ಪಡೆಯದೆ ಜಗತ್ತಿನಲ್ಲಿ ನಿಲ್ಲುವದೇ ಕಷ್ಟ. ದೇವರನ್ನು ನೆನೆವಂಗೆ ಭಾವಿಸಿದುದು ದೊರಕುತ್ತದೆ. ಆತನನ್ನು ನೆನೆಯದಧಮಂಗೆ ಇಹಪರದಲ್ಲಿ ಯಾವದೂ ಸಿಗುವದಿಲ್ಲ. ತೆಪ್ಪವನ್ನು ನಂಬಿ ತಪ್ಪದೆ ತೀರಕ್ಕೆ ಮುಟ್ಟುವಂತೆ ಸರ್ವಭೂಷಣನನ್ನು ನಂಬಿದಡೆ ಭವ-ಭಯವು ತಪ್ಪಿ ಹೋಗುತಿದೆ. ಹಸುರನಲ್ಲಿದ್ದ ಕಂಬನಿಯು ಬಿಸಿಲಿಗೆ ಹಾರುವಂತೆ ಬಸವನೆಂದರೆ ಪಾಪವು ದೆಸೆಗೆಟ್ಟು ಓಡುವುದು. ಮಾರಸಂಹರನ ನೆನವು ಮೃತ್ಯು ದೇವತೆಯನ್ನು ದೂರ ಅಟ್ಟುವುದು. ಎಲ್ಲರೂ ಶಿವನ ನೆನೆದರೆ ಕೈಲಾಸವು ಇಲ್ಲಿಯೇ ಬರುವುದು ಆದುದರಿಂದ ಯೌವ್ವನದಲ್ಲಿ ಲೋಲನಾಗಬೇಡ. ಮಾಯಾ ಮೋಹವನೆಚ್ಚಿ ವ್ಯರ್ಥ ಆಯಾಸಗೊಳಬೇಡ. ದೇವರು ನಿನಗೆ ಕಣ್ಣು-ನಾಲಿಗೆ ಮನಸ್ಸುಗಳನ್ನೂ ದಯಪಾಲಿಸಿರುವನು. ಅದಕ್ಕಾಗಿ ಮನ್ಮಂದಿರವನ್ನು ಚನ್ನಾಗಿ ತೆರೆದಿಟ್ಟು ಆ ದೇವ ದೇವನನ್ನು ನೆನೆಯು. ನಾಳೆ ಸತ್ತು ಹೋದರೆ ನಿನಗೆ ಮುಕ್ತಿ ದೊರಕಲಿಕ್ಕಿಲ್ಲ. ಸಾಯುವ ಮುನ್ನವೇ ಆದರ ಗೊತ್ತುಗುರಿಗಳನ್ನು ತಿಳಿ ಎಂದು ಸರ್ವಜ್ಞನು ಮನಸ್ಸನ್ನು ಕರಗಿಸುವ ಮಾತಿನಲ್ಲಿ ಎಲ್ಲರನ್ನು ಬಿನ್ನವಿಸುತ್ತಾನೆ.

೫. ರಾಗ ವಿರಾಗಗಳು— ಈ ಮೇರೆಗೆ ಸಾಧಕನು ದೇವರಲ್ಲಿ ಭಕ್ತಿಯನ್ನಿಟ್ಟು ಅವನನ್ನು ಪಡೆಯುವ ಯುಕ್ತಿಯನ್ನೂ ಶಕ್ತಿಯನ್ನೂ ದೊರಕಿಸಬೇಕು. ನಿಜವಾದ ನಿಷ್ಠೆಯಿಂದ ಭಜಿಪನಿಗೆ ಶಿವನು ಒಲಿಯುವನು. ನಿಲ್ಲದೆ ಹರಿಸಿದರೆ ಕಲ್ಲು ಕೂಡ ಕರಗುತ್ತದೆ. ಭಕ್ತಿಯಿಂದ ಪೂಜಿಸಿದ ದೇವರು ಒಲಿಯುವದರಲ್ಲೇನಾಶ್ಚರ್ಯ? ಸಾಧಕನಲ್ಲಿ ಭಕ್ತಿಯಂತೆ ವಿರಕ್ತಿಯೂ ಬೇಕು. ವೈರಾಗ್ಯದ ಬಲದಿಂದ ಧೀರರನೇಕರು ಈ ಭವಸಾಗರವನ್ನು ದಾಟಿರುವರು. ಎಲ್ಲ ಆಶೆಯ ಬಿಟ್ಟರೆ ಇಲ್ಲಿಯೇ ಕೈಲಾಸ. ಆಶೆಯ ಬಲೆಯಲ್ಲಿ ಶಿಲುಕಿದರೆ ನರಕವು ಇಲ್ಲಿಯೇ ನೋಡಾ. ಆದುದರಿಂದ, ಲಿಂಗ ದಿಚ್ಛೆಗೆ ಹರಿದು ಭಗಗೊಳದಿರು. ವಿಷಯಕ್ಕೆ ಕುದಿಯದೆ ಶಿವನಡಿಯ ಬಿಡದಿರು. ದೇವನು ನಿನಗೆ ಕೂಡಲೇ ವಶವಾಗುವನು. ಅದಕ್ಕಾಗಿ ಆಶೆಯನ್ನು ಮೆಟ್ಟಿ ಇಂದ್ರಿಯಗಳನ್ನು ಕಟ್ಟಿ ಸಮತೆಯನ್ನು ತೊಟ್ಟು ಶಿವಪದವನ್ನು ಮುಟ್ಟಪ್ಪದಯ್ಯ ಎಂದು ಸರ್ವಜ್ಞನ ಹಾರೈಕೆ.

೬. ಸ್ಮರಣಃ— ಪರಮಾತ್ಮನ ನಾಮಸ್ಮರಣವು ಸಾಧನ ಮಾರ್ಗದಲ್ಲಿಯ ಒಂದು ಮೆಟ್ಟಲು. ಜಗತ್ತಿನಲ್ಲಿಯ ಯಾವತ್ತು ಸತ್ಪುರುಷರೆಲ್ಲರೂ ಅದನ್ನು ತಮ್ಮ ಅನುಯಾಯಿಗಳಿಗೆ ಹೇಳಿರುವರು. ನಾಮಸ್ಮರಣದ ಸಾಧನವಿಲ್ಲದೆ ಧರ್ಮವೇ ಪ್ರಪಂಚದಲ್ಲಿ ಇಲ್ಲವೆಂದರೂ ಸಲ್ಲುವುದು. ಈ ಭವಮಾಲೆಯನ್ನು ಪರಿಹರಿಸಬೇಕಾದರೆ ಶಿವನಾಮವನ್ನು ಸ್ಮರಿಸಲೇಬೇಕು. ಏಕಾಂತದಲ್ಲಿ ಧರ್ಬಾಸನದಲ್ಲಿ ಕುಳಿತು ದೃಷ್ಟಿಯನ್ನು ನಾಸಾಗ್ರದಲ್ಲಿಡಬೇಕು. ತರ್ಜನಿಯ ಗುರುಗಳಿಂದ ಸ್ವಾಧಿಷ್ಠಾನವಾಮನನ್ನು ಕರೆತಂದು ಅದರೊಡನೆ ನಾಮವನ್ನು ಜಪಿಸಿ ಸೂಸುವ ಮನವನ್ನು ಘನದಲ್ಲಿರಿಸಲು ಸಾಧಕರು ಯತ್ನಿಸತಕ್ಕದ್ದು. ಮುಕ್ತಿಗೆ ಶಿವ ಎಂಬ ಎರಡಕ್ಷರವೇ ಸಾಕು. ನಾಮಸ್ಮರಣೆಯನ್ನು ಯಾವಾಗಲೂ ಚಿತ್ತವಿಟ್ಟು ಮಾಡತಕ್ಕದ್ದು. ಬೆರಳು ಎಣಿಸುವಾಗ, ಜಿಹ್ವೆಯು ಗುಣಿಸುವಾಗ, ಮನವು ನಾಮವನ್ನುಳಿದು ಅನ್ಯವಸ್ತುವನ್ನು ನೆನೆಯಬಾರದು. ಮನಮುಟ್ಟಿ ಶಿವನ ನೆನೆವನು ಮನೆಯಲ್ಲಿದ್ದರೂ ಅಷ್ಟೇ, ಮಡುವಲ್ಲಿದ್ದರೂ ಅಷ್ಟೇ. ಇಂಥ ಸಾಧಕನು ಮನೆಮಾರುಗಳನ್ನು ತೊರೆದು ವನಕ್ಕೆ ತೆರಳುವ ಕಾರಣವಿಲ್ಲ. ನಾಮಸ್ಮರಣಕ್ಕೆ ಅಯೋಗ್ಯವಾದ ಕಾಲವು ಯಾವದೂ ಇಲ್ಲ. ಎಂಜಲು ಶೌಚವು ಸಂಜೆಯುಂದೆನ್ನದೆ ಕುಂಜರವು ವನವ ನೆನೆವಂತೆ ಸಾಧಕನು ನಿರಂಜನವನ್ನು ನೆನೆಯತಕ್ಕದ್ದು. ಆದರೂ ಕೋಳಿ ಕೂಗದ ಮುನ್ನ ಎದ್ದು ದಯಾಳು ದೇವನನ್ನು ಭಕ್ತಿಯಿಂದ ನೆನೆಯುವದು ಉತ್ತಮ ಅಂಥವರನ್ನುದ್ಧರಿಸಲು ದೇವರು ಸದೈವ ಸಿದ್ಧನಿರುತ್ತಾನೆ ಎಂದು ಸರ್ವಜ್ಞನ ಅಭಿಪ್ರಾಯ.

೭. ಅರ್ಚನಃ— ನಾಮ ಸ್ಮರಣೆಯುಂತೆಯೇ ಪರಮಾತ್ಮನ ಪೂಜೆಯನ್ನು ಚಿತ್ತವಿಟ್ಟು ಮಾಡಬೇಕು ಎತ್ತು ಗಾಣವನ್ನು ಹೊತ್ತಂತೆ ಚಿತ್ತವಿಲ್ಲದೆ ದೇಗುಲವ ಸುತ್ತಿ ಫಲ್ಲವಿಲ್ಲ. ನಿಷ್ಠೆ ನೆಲೆಗೊಳದೆ ಮಾಡಿದ ಅಷ್ಟವಿಧ ಅರ್ಚನೆಯು ನಷ್ಟವೆಂದು ತಿಳಿಯಬೇಕು. ಮನಸ್ಸಿನಲ್ಲಿ ಪಾಪವಾಸನೆಯನ್ನಿಟ್ಟು ಪೂಜ್ಯ ಸಾಹಿತ್ಯದ ಬಾಹ್ಯಾಡಂಬರವನ್ನುಳಿಸುವವನು ಹೊಲೆಯ ಕಾಣಯ್ಯ! ಕಲ್ಲ ಗುಂಡಿನ ಮೇಲೆ ಮಲ್ಲಿಗೆಯ ಅರಳುಗಳನ್ನಿಟ್ಟು ನಿಲ್ಲದೆ ಹಣೆಯನ್ನು ಬಡಿವ ಕಲ್ಲುಮನುಜನಿಗೆ ಬುಗುಟಿಯ ಹೂರಣ ಇನ್ನೇನೂ ಸಿಗಲಾರದು. ದೇವರು ಕಲ್ಲಿನಲ್ಲಿರದೆ ಅದರಲ್ಲಿ ಚೈತನ್ಯವನ್ನು ತುಂಬಿದ ಗುರುವಿನ ಮಂತ್ರದಲ್ಲಿರುವನು. ಇದನ್ನರಿಯದೆ ಕಲ್ಲಿನ ಪ್ರತಿಮೆಗಳಿಗೆರಗುವದು ಅನ್ಯಾಯ. ನಿಜವಾಗಿ ದೇಹವೇ ದೇವಾಲಯವು.

ಜೀವನೇ ಶಿವಲಿಂಗ. ಭಾವಪುಷ್ಪಗಳಿಂದದನ್ನು ಭಜಿಸುವವನಿಗೆ ಮುಕ್ತಿಯು ಸಂದೇಹವೇ ಬೇಡ. ಸಾಧಕನು ಆತ್ಮಲಿಂಗವ ಪೂಜೆಯನ್ನು ಒನ್ಮನಸ್ಸಿನಿಂದ ಮಾಡಬೇಕು. ಅದನ್ನು ಮಾಡುವಾಗ ಯಾವ ಬಗೆಯ ಕಾಮನೆಯನ್ನು ಇಡಕೂಡದು. ತಾನು ಭೋಗಿಸುವ ಒಡವೆಗಳನ್ನೆಲ್ಲ ಪರಮಾತ್ಮನಿಗರ್ಪಿಸಿ ಕಿಂಕರತೆಯನ್ನು ಕೈಕೊಂಡ ಸಾಧಕನು ಯಾವಾಗಲೂ ದೇವರ ಇಚ್ಛೆಯಿಂದ ವರ್ತಿಸಬೇಕು.

೮. ಧ್ಯಾನಃ— ಈ ರೀತಿ ಮಾನಸ ಪೂಜೆಯನ್ನು ಅನನ್ಯಭಾವದಿಂದ ಮಾಡುವ ಸಾಧಕನು ಮುಂದೆ ಪರಮಾತ್ಮನ ಧ್ಯಾನದಲ್ಲಿ ತಲ್ಲೀನನಾಗತಕ್ಕದ್ದು. ದೇವರ ಜ್ಞಾನವಾದರೂ ಅದರಲ್ಲಿ ಅವನ ಧ್ಯಾನವು ಕೂಡಿದರೆ ಸಾಕ್ಷಾತ್ಕಾರವು ಕೂಡಲೇ ಆಗದು. ಮೌನದ ತಿಳಿದುಪ್ಪಿನಲ್ಲಿ ಧ್ಯಾನದ ಹೊಸಬಲೆಯನ್ನು ಹಚ್ಚಿದರೆ ಸ್ವಾನುಭವದ ಬೆಳಕು ಬಿದ್ದು ಸಾಧಕನ ವರವು ಮಾಯವಾಗುವದು. ಪ್ರಾಣವನ್ನು ನೆತ್ತಿಯ ಕೊನೆಯ ವರೆಗೆತ್ತಿ ಚಿತ್ತದ ಮಮವನ್ನರಿಯಬೇಕು ಧ್ಯಾನದಲ್ಲಿ ಮನಸ್ಸು ದೇವರಲ್ಲಿ ಬೆರೆತರೆ ಪ್ರಚಂಚದಲ್ಲಿನ ಮಾತುಗಳೆಲ್ಲ ಸಾಧಕನಿಗೆ ತಿಳಿಯುತ್ತವೆ.

೯. ಸಾಕ್ಷಾತ್ಕಾರಃ— ಅನುಭಾವಿಗಳಾದ ಪ್ರೊ. ರಾನಡೆಯವರು ಸಾಕ್ಷಾತ್ಕಾರವನ್ನು ಈ ಬಗೆಯಾಗಿ ಬಣ್ಣಿಸಿರುತ್ತಾರೆ

Mysticism denotes that attitude of mind which involves a direct immediate first hand intuition apprehension of God!

ಸಾಕ್ಷಾತ್ಕಾರವು ಒಂದು ಮನಸ್ಸಿನ ಸ್ಥಿತಿ. ಆ ಸ್ಥಿತಿಯಲ್ಲಿ ನಮ್ಮ ಅಂತರದೃಷ್ಟಿಗೆ (*intuition*) ದೇವರ ಪ್ರತ್ಯಕ್ಷವಾದ ಅರಿವು ಉಂಟಾಗುತ್ತದೆ. ಇದಾಗಬೇಕಾದರೆ ಮೇಲ್ಕಾಣಿಸಿದ ಸಾಧನಗಳಿಂದ ಮನಸ್ಸು ತಿಳಿಯಾಗಬೇಕು ಈ ಆತ್ಮಶುದ್ಧಿಯನ್ನು ಪಡೆದ ಸಾಧಕನು ಮೊದಲು ಬೆಳಕಿನ ಬಿಂದುಗಳನ್ನು ಕಾಣುವನು. ದಿವ್ಯನಾದಗಳನ್ನು ಕೇಳುವನು. ತನ್ನ ನಾಭಿಯ ಕೆಳಗಿದ್ದ ಚಕ್ರದಲ್ಲಿ ವಹ್ನಿಮಂಡಲವನ್ನು ನೋಡುವನು. ಸುಷುಮ್ನಾ ನಾಡಿಯಲ್ಲಿ ಅವನ ಜಾಗ್ರತಳಾದ ಕುಂಡಲಿನಿಯು ಏಳೆದಾಡತೊಡಗುವಳು. ಹೃದಯದಲ್ಲಿದ್ದ ಅಷ್ಟದಲ ಕಮಲದಲ್ಲಿ ಹಂಸನು ಆಡಹತ್ತುವನು. ಉತ್ತುಂಗವಾದ ಮಾಣಿಕದ ಮಂಟಪದಲ್ಲಿ ಸಾಧಕನಿಗೆ ನಿತ್ಯ

ನಿರ್ಮಲವಾದ ನಿಜವು ತೋರುವದು. ಮುಂದೆ ಬಿಂದುನಾದಗಳನ್ನು ನುಂಗಿ ಇಂದು ರವಿಗಳನ್ನು ನುಂಗಿ ಸಾಧಕನು ಆತ್ಮದ ನೆಲೆಯನ್ನು ಚೈತನ್ಯಮಯವಾದ ಪರಬ್ರಹ್ಮನನ್ನು ಅರಿತುಕೊಳ್ಳುವನು ಯಾಕಂದರೆ ತನ್ನ ತಾನರಿಯದ ವಿನಃ ದೇವರನ್ನರಿಯಲು ಬರುವದಿಲ್ಲವಂತೆ. ತರುವಾಯ ದೇವರಲ್ಲಿ ನೋಟ ಕೂಟ ನುಡಿಯಾಗಿ ಸಾಧಕನಿಗೆ ಸರ್ವ ಸುಖಗಳ ಭೋಗವಾಗುವದು. ಬರಬರುತ್ತ ಮನವು ಘನದಲ್ಲಿ ಬೆರೆತು ಈ ಭವಮಾಲೆಯು ಹರಿಯಿತೆಂದು ಆತನಿಗೆ ಅನಿಸತೊಡಗುವದು. ಆತ್ಮಗಂಗೆಯಲ್ಲಿ ವಿ.ಂದ. ಜ್ಯೋತಿರ್ಲಿಂಗವನ್ನು ಕಂಡ ಸಾಧಕನ ಪಾಪಗಳೆಲ್ಲವೂ ತಿಳದು ಹೋಗುವವು. ಅಕಾಶಪಥವನ್ನು ವಿಚಾರಿ ಏಕವಸ್ತುವ ತಿಳಿದ ಯೋಗಿಯು ಅದರೊಡನೆ ಸಮರಸನಾಗುತ್ತಾನೆ. ನಾನಾ ಭ್ರಮೆಗಳನ್ನತಿಗಳೆದು ನಾನು ನೀನೆಂಬ ಭೇದವನ್ನು ಬಿಟ್ಟು ಸಾಧಕನು ಲಿಂಗೈಕ್ಯನಾಗುವನು. ಇದೇ ಸರ್ವಜ್ಞನು ತೋರಿದ ಅನುಭಾವದ ಸಾಕ್ಷಾತ್ಕಾರದ ಕೊನೆಯ ಮೆಟ್ಟಲು.

೬. ಸಿದ್ಧಸ್ಥಲ.

೧. ಹಿಂದಿನಿಂದ ಮುಂದೆ:— ಕಳೆದ ಅಧ್ಯಾಯಗಳಲ್ಲಿ ಕಾಣಿಸಿದ ಸೋಪಾನವನ್ನು ಹತ್ತಿ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆದ ಅನುಭಾವಿಗಳೇ ಸಿದ್ಧರು. ಇವರು ಜಗದಿ ಧ್ಯಾನದಲ್ಲಿ ಅರಳಿದ ಕಂಪಿನಲರುಗಳು. ಪ್ರತಿಯೊಂದು ಹೂವಿನ ಇಂಪು ಕಂಪುಗಳು ಬೇರೆ ಇರುವಂತೆ ಈ ಸಿದ್ಧಪುರುಷರ ಗುಣಕರ್ಮಗಳು ಭಿನ್ನವಾದವುಗಳು. ಹೂವುಗಳು ಅರಳುವದು ಕಂಪನ್ನು ಬೀರುವದಕ್ಕಾಗಿ, ಸುಖಗಳನ್ನು ಸುರಿಸುವದಕ್ಕಾಗಿ. ಅದರಂತೆಯೇ ಈ ಮಾನವ ಕುಸುಮಗಳು ದೇವರ ದಿವ್ಯಸ್ಪರ್ಶದಿಂದ ವಿಕಸಿತವಾಗಿ ತಮ್ಮ ಮಕರಂದ ಸೌಂಭಗಳಿಂದ ಜನರ ಮನಸ್ಸನ್ನು ತಣಿಸುತ್ತಿವೆ. ಅವುಗಳನ್ನು ಉನ್ನತ ಪದವಿಗೆ ಏರಿಸುತ್ತಿವೆ. ಆದರೆ ಲೋಕೋದ್ಧಾರವನ್ನು ಮಾಡುವ ಅವರ ಕಾರ್ಯಪದ್ಧತಿಯು ಮಾತ್ರ ಅವರವರ ಪ್ರಕೃತಿಯನ್ನವಲಂಬಿಸಿರುವ ಮೂಲಕ ಅದು ಬೇರೆಬೇರೆಯಾಗಿರುವದು ತೀರ ಸಹಜ. ಆದರೂ ಕೆಳಗೆ ಕಾಣಿಸಿದ ಗುಣಗಳು ಎಲ್ಲರಲ್ಲೂ ಸಮಾನವಾವುಗಳೆಂದು ತಿಳಿಯಲು ಅಡ್ಡಿ ಇಲ್ಲ.

೨. ಸಿದ್ಧರ ಗುಣಗಳು:— ಸದ್ಗುರುವಿನ ಮುಖದಿಂದ ತತ್ವಮಸಿಯನ್ನರಿತು ಅವರ ಅನುಭವವನ್ನು ಪಡೆದ ಜ್ಞಾನಿಗೆ ಪುನರ್ಜನ್ಮವಿಲ್ಲ

ಅತನಿಗೆ ಯಾವ ಬಗೆಯ ಸಂದೇಹವು ಸೋಂಕುವದಿಲ್ಲ. ಆತ್ಮನ ನಿಜವನರಿದಾತನಿಗೆ ಏತರ ಚಿಂತೆ? ಜ್ಞಾನವೆಂಬ ಅಂಜನವು ಇರುತ್ತಿರಲು ಅವನಿಗೂ ಯಾತರ ಭಯ? ಅನುಭಾವಿಗೆ ಜಾತಿಮಿತಗಳಿಲ್ಲ. ಮೂಲತತ್ವವನ್ನು ಒಳು ಲೀಲೆಯಿಂದ ಆಡುತ್ತಿರುವ ಶರಣನು ಸುಂದರವಾದ ಅಂಗನೆಯರನ್ನು ಎಲುವಿನ ಹಂದರವೆಂದು ಕಾಣುತ್ತಾನೆ. ಅನುಭಾವಿಯು ಸಂಸಾರದಲ್ಲಿ ಆಸಕ್ತನಾಗಿರುವದಿಲ್ಲ. ತರಣಿಗೆ ತಿಮಿರದ ಆವರಣವು ಅಂಟಿಕೊಳ್ಳುವದೇ? ನೀರೊಳು ಹುಟ್ಟಿದ ಮುತ್ತು ಮತ್ತೆ ನೀರನ್ನಪ್ಪುವುದೇ? ತಿಳಿಯಾಗಿ ಕಾಸಿದ ತುಪ್ಪ ಮರಳಿ ಹಾಲಾಗಬಹುದೇ? ಅದರಂತೆಯೇ ಕಳೆಬರನಂದ ಶಿವಯೋಗಿಯು ಮತ್ತೆ ಸಂಸಾರದಲ್ಲಿ ಸಿಲಕುವನೇ? ಇಲ್ಲ. ಘನ್ನತವಾದ ಜಗವನ್ನೇರಿರುವನನ್ನು ಕುನ್ನಿಯು ಕಚ್ಚಿದಂತೆ ತನ್ನ ತಾನರಿದಂಗೆ ಮಾಯೆಯು ಮುಸುಕಲರಿಯಳು. ಭಾನುವು ಮೋಡದಲ್ಲಿ ಹೊಳೆದಂತೆ ಜ್ಞಾನಿಯು ಸಂಸಾರದಲ್ಲಿ ಮೆರೆಯುವನು.

ಮೇಲಾಗಿ ಸತ್ಯವನ್ನರಿದ ಜ್ಞಾನಿಯು ಸತ್ತಹಾಗಿರುತ್ತಾನೆ. ಎಲ್ಲವನ್ನು ಬಲ್ಲರೂ ಆತನು ಬಲ್ಲೆನೆಂದೆನ್ನುವದಿಲ್ಲ. ಆತನು ಕನ್ನಡಿಯಂತಿರುವನು ಅನುಭಾವಿಗೆ ಲೋಕದ ಗುದ್ದಾಟವಿಲ್ಲ. ಯಾಕಂದರೆ ಅದ್ವೈತವಾದ ಮೇಲೆ ಯುದ್ಧವನ್ಯಾರೊಡನೆ ಮಾಡುವುದು? ತಾನಾಗಿ ತನ್ನನರಿದಿಪ್ಪ ಜ್ಞಾನಿಯು ದೊರಕಿಸಿದ್ದನ್ನು ಉಣ್ಣುವನು. ದೊರಕಿಸಿದ್ದನ್ನು ಉಡುವನು. ದೊರಕಿದಲ್ಲಿ ಶಯನಗೈಯ್ಯುವನು. ಜಗವೆಲ್ಲ ತಾನೇ ಆದ್ದರಿಂದ ಅವನು ತನ್ನಂತೆ ಪರರನ್ನು ಕಾಣುವನು ಯಾಕಂದರೆ ತನ್ನ ತಾನರಿದಂಗೆ ಭಿನ್ನ ಭಾವನೆಯಿಲ್ಲ. ತನ್ನವರಿಲ್ಲ, ಪರರಿಲ್ಲ. ತ್ರೈಭುವನವೇ ಆತನೊಳಗಿಹುದು. ಕರಗಿಸಿದ ಚಂದನವು ಪರಿಮಳವನ್ನೇ ಬಿಡುವಂತೆ ಇಂಥ ಮಹಾತ್ಮನು ನೊಂದರೂ ಪರೋಪಕಾರವನ್ನೇ ಮಾಡುತ್ತಾನೆ.

೩. ಸಿದ್ಧನ ಕರ್ಮಗಳು:— ಸಿದ್ಧನು ಮಾಡುವ ಕರ್ಮಗಳ ವಿಷಯವಾಗಿ ಸರ್ವಜ್ಞನು ವಿವರವಾಗಿ ಹೇಳಿಲ್ಲ ಆದರೂ ಸರ್ವಜ್ಞನ ಆಶಯವೆಯು ಅವನು ಈ ವಿಷಯವಾಗಿದ್ದ ಮತವನರಿತುಕೊಳ್ಳುವ ಬಲವಾದ ಸಾಧನವಿದೆ. ಸರ್ವಜ್ಞನು ಆಚರಿಸಿದುದು, ಕರ್ಮಯೋಗವನ್ನು ಮಾಡಿದುದು, ಜನರ ಉದ್ಧಾರಕ್ಕಾಗಿ ಆದ್ದರಿಂದ ಅನಾಸಕ್ತ ಬುದ್ಧಿಯಿಂದ ಸಿದ್ಧ ಪುರುಷರು ಜನ ಸೇವೆಯನ್ನು ಕೈಕೊಳ್ಳಬೇಕೆಂದು ಸರ್ವಜ್ಞನ ಅಭಿಪ್ರಾಯವಿರಬಹುದೆಂದು ಊಹಿಸಲು ಪ್ರತ್ಯವಾಯವಿಲ್ಲ.

೭. ಉಪಸಂಹಾರ.

೧. ಹಿಂದಿನಿಂದ ಮುಂದೆ:—ಈ ವೇರೆಗೆ ಸರ್ವಜ್ಞನ ದಿವ್ಯಸಂದೇಶವನ್ನು ಅವನ ಸಿಡಿಲಿನ ನೀರು ಬೆರಸಿಹ ಸರಸ ಮಾತುಗಳಲ್ಲಿಯೇ ಯಥಾಶಕ್ತಿ ಸಾರಿದ್ದಾಯಿತು. ನಾವು ಇನ್ನೂ ಭೇದಗಳನ್ನು ಬಿಟ್ಟಿಲ್ಲ. ಸಮ್ಮಿಲ್ಲಿಯ ಒಳಜಗಳು ನಮ್ಮ ಬಲವನ್ನು ಕುಗ್ಗಿಸುತ್ತಿದೆ. ಅಸ್ಪೃಶ್ಯತೆಯಿಂದ ಅನೇಕ ಸಮಸ್ಯಗಳು ದೆವ್ವಿನಂತೆ ನಮ್ಮೆದೆಯ ಮೇಲೆ ಕುಳಿತಿವೆ. ಇಂಥ ಸಮಯದಲ್ಲಿ ನಮ್ಮ ಸರ್ವಜ್ಞನ ಸ್ವಂದೇಶವು ಜನರಲ್ಲಿ ನವಚೈತನ್ಯವನ್ನು ಹುಟ್ಟಿಸಲೆಂದು ಇಲ್ಲಿದರ ವಿಮರ್ಶಾತ್ಮಕ ವಿವರವನ್ನು ಕೊಡುವ ಗೊಡವೆಗೆ ಹೋಗಿಲ್ಲ. ಆಧುನಿಕ ಅನುಭಾವ ವಾದದಲ್ಲಿ ಸರ್ವಜ್ಞನಿಗೂ ಅತನ ಉಪದೇಶಕ್ಕೂ ಇದ್ದ ಸ್ಥಾನವನ್ನು ಮುಂದೆ ಬರೆಯಲಿರುವ ಕನ್ನಡಿಗರ ಅನುಭಾವವೆಂಬ ಗ್ರಂಥದಲ್ಲಿ ಕಾಣಿಸಬಹುದು. ಅಲ್ಲಿಯವರೆಗೆ ನನ್ನ ತರುಣ ಬಂಧುಗಳು ಈ ಅಲ್ಪ ಸೇವೆಯನ್ನೇ ಸ್ವೀಕರಿಸುವಿರೆಂದು ನಂಬಿಗೆ. ಇನ್ನು ಅನುಭಾವದ ಮಹತ್ವವನ್ನು ಕುರಿತು ಸ್ವಲ್ಪ ವಿಚಾರಿಸಿ ಈ ಉಪಸಂಹಾರವನ್ನು ಮುಗಿಸುತ್ತೇನೆ.

೨. ದೇವರ ಬೆಂಬಲ:—ದೇವರೇ ಜಗತ್ತಿನ ಜೀವಾಳವಿದ್ದ ಕಾರಣ ಅತನ ಬೆಂಬಲವಿಲ್ಲದೆ ಯಾವ ಮಹತ್ಕಾರ್ಯವೂ ಕೈಗೂಡುವದು ಸಾಧ್ಯವಿಲ್ಲ. ಇದರ ಅರಿವು ಮರವು ಮುಸುಕಿದ ಮಾನವನಿಗೆ ಇನ್ನೂ ಸಾಕಷ್ಟು ಆಗಿಲ್ಲ. ತನ್ನ ಕ್ಷುದ್ರ ಸಾಮರ್ಥ್ಯದ ಬಗ್ಗೆ ಅವನ ಅಭಿಮಾನವು ಮೇರೆ ಮೀರಿದೆ. ಇತ್ತೀಚೆಗೆ ಮಾನವನು ತನ್ನ ಬುದ್ಧಿಬಲದಿಂದ ಹಲವು ಶೋಧನೆಗಳನ್ನು ಮಾಡಿ ಪ್ರಕೃತಿದೇವಿಯನ್ನು ಕೆಲಮಟ್ಟಿಗೆ ಆಧೀನದಲ್ಲಿಟ್ಟುಕೊಂಡಿರುವನು. ಆದರೆ ಅದಕ್ಕಾಗಿ ಅವನು ಕೊಚ್ಚ್ವ ಜಂಭವನ್ನು ಕಂಡರೆ ಅವನ ತಿಳಿಗೇಡಿತನಕ್ಕಾಗಿ ಕನಿಕರ ಹುಟ್ಟುತಿದೆ. ಪ್ರಕೃತಿ ಮಾತೆಯನ್ನು ಕೈವಶಮಾಡಿಕೊಂಡಿರುವುದು. ಅಕೆಯ ನಿಯಮಗಳನ್ನ ಪಾಲಿಸದಿದ್ದರೆ ಇಲ್ಲವೇ ಅಕೆಯ ಕಟ್ಟಳೆಗಳನ್ನು ಅಲ್ಲಗಳೆದರೆ ಮಾನವನ ಅವಸ್ಥೆ ಏನಾಗುವದು? ಅವನು ಕ್ಷಣಮಾತ್ರವಾದರೂ ಬಾಳಲರಿಯನೇ? ಹೀಗಿರಲು ಜಂಭಕ್ಕವಕಾಶವುಂಟೇ? ಮೇಲಾಗಿ ಈತನ ಶಕ್ತಿಯಾದ ಪ್ರಕೃತಿ ಮಾತೆಯ ಸಾಮರ್ಥ್ಯದ ನೆಲೆಯನ್ನು ಕಂಡವರಾರು? ಆದುದರಿಂದ ನಾವು ಯತ್ನಿಸುವುದು ಅಕೆಯ ನಿಯಮಗಳನ್ನರಿಯಲು ವಿನೀತನಾದ ಶಾಸ್ತ್ರಜ್ಞನು ಪ್ರಕೃತಿಯ ಒಡಲಲ್ಲಿ ಬೆರೆತು ಹೊಸಕಟ್ಟಳೆಗಳನ್ನು ಹುಡುಕಿ ಅವುಗ

ಳನ್ನು ಜನಹಿತಕ್ಕಾಗಿ ಉಪಯೋಗಿಸುವಂತೆ ಸಮಾಜ ಸೇವಕನು, ಅಹಂಕಾರವನ್ನು ತೊರೆದು ಈ ಆದಿಶಕ್ತಿಯ ಒಡೆಯನನ್ನೇ ಒಲಿಸಿಕೊಂಡು. ಅವನ ಬೆಂಬಲದಿಂದ ಜನರಿಗೇ ಆನಂದ ಮುಂದಿಂಕ್ಕೆ ಒಯ್ಯಲು ಹವಣಿಸಬೇಕಲ್ಲವೇ?

೪. ಪರಮಾತ್ಮರ ಕಾರ್ಯ:— ಪ್ರಪಂಚದಲ್ಲಿ ಈ ವರೆಗೆ ಅವತರಿಸಿದ ಮಹಾತ್ಮರೆಲ್ಲರು ಇದನ್ನೆಯೇ ಮಾಡಿದರು. ತಮ್ಮ ಉಜ್ವಲವಾದ ತಪಸ್ಸಿನಿಂದ ದೇವ ದೇವನ ಪ್ರಸಾದವನ್ನು ಪಡೆದು, ತರುವಾಯ ಅವರು ತಮ್ಮ ಜೀವನ ಕಾರ್ಯಕ್ಕೆ ಕೈಹಾಕಿದರು. ಆದ್ದರಿಂದಲೇ ಅವರು ಜನ ಸಾಮಾನ್ಯರಿಗೇ ಅದ್ಭುತವೆನಿಸುವ ಕೆಲಸಗಳನ್ನು ಸಹಜ ರೀತಿಯಿಂದ ಜರುಗಿಸಲು ಸಮರ್ಥರಾದರು. ಸಮಾಜದ ಉದ್ಧಾರವೆಂದರೆ ಅದೇನು ಸಾಮಾನ್ಯ ಕೆಲಸವಲ್ಲ. ಅದೊಂದು ಪ್ರಚಂಡವಾದ ಕಾರ್ಯ. ಜೊಳ್ಳು ಮನುಜರು ಮಾಡುವ ಪೊಳ್ಳು ಕಾರ್ಯವದಲ್ಲ. ಅದಕ್ಕೆ ಬೇಕಾದುದು ಅದ್ಭುತವಾದ ಶಕ್ತಿ. ಆ ಶಕ್ತಿಯ ನೆಲೆವೀಡಾದ ದೇವರನ್ನು ಕಾಣದೆ. ಅತನಿಂದ ಸಾಮರ್ಥ್ಯವನ್ನು ಪಡೆಯದೆ ಅದು ಹೇಗಾಗಬೇಕು? ಕೆಲಕಾಲ ಕೆಲಸ ಮಾಡಿ ಹತಾಶರಾದ ನಿರುತ್ಸಾಹಿಗಳಾದ ಈಗಿನ ಹಲವು ಸಮಾಜ ಸೇವಕರನ್ನು ಕಂಡರೆ ಈ ಮಾತಿನ ಸತ್ಯತೆಯ ಬಗ್ಗೆ ಸಂದೇಹ ಉಳಿಯಲಿಕ್ಕಿಲ್ಲ. ಆದಕ್ಕಾಗಿ ನಮಗೆ ಬೇಕಾದವರು ಸರ್ವಜ್ಞನಂಥ ಅನುಭಾವಿಗಳಾದ ಕರ್ಮಯೋಗಿಗಳು!

೪. ಕೊನೆಯ ಮಾತು:—ಇನ್ನು ಕೊನೆಗೆ ಶ್ರೀ ಅರವಿಂದರು. ಈ ವಿಷಯವಾಗಿ ಪಡುವ ಅಭಿಪ್ರಾಯವನ್ನು ಕೇಳಿ ವಿವರಿಸುವಾ. ಅವರು ತಮ್ಮ ದಿವ್ಯವಾಣಿಯಿಂದ ಹೇಳುವದೇನಂದರೇ—

Is it God that is born in you? Have you realized that you are thereby an instrument of God? That your bodies are not your own? If you have realized that, then you are true nationalist; then alone will you be able to restore this great nation; Darkness will have you runod; disappointments will cross your path; slander will pursue you from behind; but you are to depend on yourself and yourself alone.

ನಮ್ಮದೆಯಲ್ಲಿ ಪರಮಾತ್ಮನು ಅವತರಿಸಿರುವನು. ನಿಮ್ಮ ಶರೀರಗಳ ಒಡೆಯರು ನೀವಲ್ಲ. ಅವು ದೇವರ ಕೈಯಲ್ಲಿಯ ಆಯುಧಗಳು ಎಂಬ ದನ್ನು ನೀವು ಅರಿತಿರುವಿರಾ? ಹಾಗಾದರೇನೇ ನೀವು ನಿಜವಾದ ರಾಷ್ಟ್ರ ಪುರುಷರು. ನಿಮ್ಮಿಂದ ಈ ವಿಶಾಲವಾದ ರಾಷ್ಟ್ರದ ಉದ್ಧಾರವು ಆಗು ವುದು. ಕಗ್ಗತ್ತಲೆಯು ಎಲ್ಲಿಡೆಯಿಂದ ನಿಮ್ಮನ್ನು ಮುಸುಕಬಹುದು. ನಿರಾ ತೆಯು ದಾರಿಯಲ್ಲಿಯೇ ನಿಮ್ಮನ್ನಡ್ಡಗಟ್ಟಬಹುದು ನಿಂದೆಯು ನಿಮ್ಮನ್ನು ಹಿಂದಿನಿಂದ ಹಿಂಬಾಲಿಸಬಹುದು. ಆದರೆ ನೀವು ನಿಮ್ಮನ್ನುಳಿದ ಯಾರನ್ನೂ ಆಶ್ರಯಿಸಕೂಡದು!

ಪ್ರಸಾದ.

ವಾ. ಷ. ಅನ್ನವೆಮ್ಮಯ ಜನ್ಮದಾಶ್ರಯವು ನಿಜವೆಂದು
ನನ್ನಿಯಿಂ ಭಕ್ಷಿಸುವ ಲೋಗರ್ಗೆ ಸುಖಮುಂಟೆ
ಅನ್ನಮದು ಪರಸಾದ ವೆಂದರಿದು ಸೇವಿಸಿದೊಡಾ ಸೌಖ್ಯ ಕೆಣೆ
ಯಿರ್ಪುದೇ।
ಬನ್ನಬಡುವೀ ಜನ್ಮ ಸುಖಿಸಲ್ಕೆ ಶಿವಯೋಗಿ
ಸನ್ನುತ ಪ್ರಸನ್ನತೆಯ ನೆರೆ ನೀಡಿ ಸಂತತದೊ
ಳನ್ನಮಯ ಪ್ರಾಣವನ್ನಾತ್ಮಮಯ ಲಿಂಗಮುಂ ಮಾಳ್ಪಗೆನ್ನೀ
ಜನ್ಮದೋಳ್ ॥

ಪ್ರಸಾದವು ಅಷ್ಟಾವರಣಗಳಲ್ಲಿ ಐದನೆಯದು. ಪ್ರಸಾದವೆಂದ ರೇನು? ಪ್ರಸಾದವೆಂದರೆ ನಾವು ಪ್ರತಿನಿತ್ಯ ತೆಗೆದುಕೊಳ್ಳುವ ಪವಿತ್ರ ವಾದ ಸಾತ್ವಿಕಾಹಾರವು. ಅಂತರಂಗದಲ್ಲಿ ಪ್ರಸಾದವು ಪ್ರಸನ್ನ ಚಿತ್ತ ವೆನಿಸುತ್ತದೆ. ಹಸಿದವರ ಮುಖವು ಬಾಡಿದಂತಾಗಿರುತ್ತದೆ. ಆದರೆ ಉಂಡವರ ಮುಖಮುದ್ರೆಯು ಪ್ರಸನ್ನ ಕಳೆಯಿಂದ ತುಂಬಿರುತ್ತದೆ. ಅದುದ ರಿಂದ ಆಹಾರಕ್ಕೂ ಪ್ರಸನ್ನ ಮುಖಮುದ್ರೆಗೂ ನಿಕಟ ಸಂಬಂಧವಿರುತ್ತದೆಂ ದಂತಾಯಿತು. 'ಅನ್ನಮಯ ಪಾಣಂ' ಎಂದು ಹೇಳಿರುವದರಿಂದ ಆಹಾ ರವು ನಮ್ಮ ದೇಹದ ರಕ್ಷಣೆ, ಧಾರಣೆ, ಪೋಷಣೆಗಳಿಗೆ ಅವಶ್ಯಕವಾಗಿ ಬೇಕೆಂದು ಬೇರೆ ಹೇಳಬೇಕಾಗಿಲ್ಲ. ಆಹಾರದಿಂದಲೇ ರಕ್ತ; ಆಹಾರ

ದಿಂದಲೆ ವೀರ್ಯ; ಆಹಾರದಿಂದಲೇ ಮನಸ್ಸು; ಆಹಾರದಿಂದಲೇ ಸಪ್ತ ಧಾತುಗಳು ಸಮುದ್ಭವಿಸುವದರಿಂದ ಆಹಾರವು ಅತ್ಯಂತ ಮಹತ್ವವಾದ ಪದಾರ್ಥವಾಗಿದೆ. ವೀರಶೈವರು ಆಹಾರಕ್ಕೂ ಆಹಾರ ಸೇವಿಸುವ ಕ್ರಮಕ್ಕೂ ಕೊಟ್ಟಷ್ಟು ಪ್ರಾಮುಖ್ಯತೆಯನ್ನು ಬೇರೆ ಯಾವ ಧರ್ಮದವರೂ ಕೊಟ್ಟಿಲ್ಲವೆಂದರೂ ಅಡ್ಡಿಯಿಲ್ಲ. ವೀರಶೈವರು ಪರಸ್ಪರ ಪ್ರಶ್ನೆ ಮಾಡುವಾಗ 'ನಿಮ್ಮ ಊಟವಾಯಿತೇ? ನಿಮ್ಮ ಭೋಜನ ತೀರಿತೇ' ಎಂದು ಕೇಳಲಿಕ್ಕೆ ಸಹ ಹಿಂಜರಿಯುತ್ತಾರೆ. ನಿಮ್ಮ ಪ್ರಸಾದವು ಪೂರ್ತಿಯಾಯಿತೇ? ಎಂದು ಸವಿನಯ ಸಯುಕ್ತಿಕವಾದ ಪ್ರಶ್ನೆ ಮಾಡುವರು. ಅನ್ನ, ಕೂಳು, ಆಹಾರ ಈ ಶಬ್ದಗಳು ಗ್ರಾಮ್ಯ ಅಜ್ಞಜನರ ಬಾಯಿಯಿಂದ ಬರುವವೇ ಹೊರತು ನಿಜವಾದ ವೀರಶೈವರು ಪ್ರಸಾದವೆನ್ನದ ಹೊರತು ಮಾತಿಲ್ಲ. ನಮ್ಮ ಜೀವನ ಧಾರಣೆಗೆ ಪ್ರಸಾದವೇ ಮುಖ್ಯವಾಗಿರುವದರಿಂದ ನಾವು ಎಂಥ ಪ್ರಸಾದವನ್ನು ಸ್ವೀಕರಿಸಬೇಕು? ಹೇಗೆ ತೆಗೆದುಕೊಳ್ಳಬೇಕು? ಎಷ್ಟು ಪ್ರಮಾಣದಿಂದ ಸ್ವೀಕರಿಸಬೇಕು? ಯಾರ ಕಡೆಯಿಂದ ಅಡಿಗೆ ಮಾಡಿಸಿಕೊಳ್ಳಬೇಕು? ಯಾರ ಕಡೆಯಿಂದ ಎಡೆ ಮಾಡಿಸಿಕೊಳ್ಳಬೇಕು? ಈ ಪ್ರಶ್ನೆಗಳು ಅತ್ಯಂತ ಮಹತ್ವವಾದವುಗಳು. ವೀರಶೈವರು ಪ್ರಾರಂಭ ದಿಂದಲೂ ಶಾಕಾಹಾರಿಗಳೆಂಬದನ್ನು ಸರ್ವಥಾ ಮರೆಯಲಾಗದು. ಅವರು ನಾಲಿಗೆಯ ರುಚಿ ದುರಾಶೆಗಳಿಗಾಗಿ ಪ್ರಸಾದವನ್ನು ಸೇವಿಸುವದಿಲ್ಲ. ಏನೇ ದೊರೆಯಲಿ, ಎಷ್ಟೇ ದೊರೆಯಲಿ, ಅದು ಪರಶಿವನ ಮಹಾ ಪ್ರಸಾದವೆಂದರಿದು ಕೇವಲ ಕ್ಷುಧಾ ಶಾಂತಿಗಾಗಿ ಬಹು ಭಕ್ತಿಯಿಂದ ಅದನ್ನು ಸೇವಿಸುವರು. ಪ್ರಸಾದಿಗೆ ಒಣ ರೊಟ್ಟಿ ಚಟ್ಣಿಯು ಅಷ್ಟೇ; ಪಂಚ ಪಕ್ವಾನ್ನಗಳೂ ಅಷ್ಟೇ. ಇದು ರುಚಿ ಅದು ಅರುಚಿಯೆಂದು ಪ್ರಸಾದಿಯು ತಿಳಿಯಲಾಗದು. ನನಗೆ ಇದು ಬೇಕು, ಇನ್ನೊಂದು ಬೇಕು, ಮತ್ತೊಂದು ಬೇಕು, ಮಗದೊಂದು ಬೇಕೆಂದು ಆಶೆ ಮಾಡು ವವನು ಪ್ರಸಾದಿಯಲ್ಲ. ಇಂಥಾದ್ದೇ ಬೇಕೆಂದು ಜೋತುಕೊಂಡು ಕುಳಿತವರು ಆ ವಸ್ತುವು ಪ್ರಾಪ್ತವಾಗದಿದ್ದಾಗ ವಿಷಾದಪಡಬೇಕಾಗುತ್ತದೆ. ಆದರೆ ಯಾವ ಪದಾರ್ಥದ ಮೇಲೆಯೂ ಆಶೆಯಿಲ್ಲದವರು ಯಾವದೇ ಪದಾರ್ಥವು ಎಷ್ಟೇ ದೊರೆತರೂ ಅಷ್ಟರಿಂದಲೇ ತೃಪ್ತಿಪಡುತ್ತಾರೆ. ಒಬ್ಬ ಶಿವಶರಣರು ಒಂದು ಬಟ್ಟಲ ಹಣಜಿಯ ರಸವನ್ನು ಹಿಂಡಿ ಅದೇ ಮಹಾಪ್ರಸಾದವೆಂದು ಸ್ವೀಕರಿಸುತ್ತಿದ್ದರಂತೆ. ಈಗ್ಯೂ ಕೆಲವು ಮಹಾ ತ್ಮರು ಗುಹೆಗಳಲ್ಲಿ ವಾಸ ಮಾಡಿಕೊಂಡು ಕಾಡಸೊಪ್ಪನ್ನೇ ಬೇಯಿಸಿ

ಅದನ್ನೇ ಮಹಾಪ್ರಸಾದವೆಂದು ಸೇವಿಸುತ್ತ ಕಾಲಹರಣ ಮಾಡುತ್ತಿರುವರು. ಅದಾಗ್ಯೂ ಅವರಿಗೆ ಅಸಮಾಧಾನವೆಂಬದು ಕನಸು ಮನಸ್ಸಿನಲ್ಲಿ ಗೊತ್ತಿರುವದಿಲ್ಲ. ಇದರ ಮೇಲಿಂದ ಶಿರಿವಂತರಾದವರು ತಿಂದುಂಡು ಸುಖಿಸಬಾರದೆಂತಲ್ಲ. ಆದರೆ ಶ್ರೀಮಂತರಿಗೆ ಪ್ರಸಂಗವಶಾತ್ ಬಡತನ ಪ್ರಾಪ್ತವಾದಾಗ ಶಿರಿವಂತಿಗೆಯ ಊಟ ದೊರೆಯಲಿಲ್ಲೆಂದು ಅಸಮಾಧಾನಪಡದೆ ಬಡತನದ ರೊಟ್ಟಿ ಚಟ್ಣಿಯನ್ನೇ ಪಂಚಾಮೃತವೆಂದು ತಿಳಿದು ಸೇವಿಸಬೇಕು. ಅಂದರೇನೇ ಅವರು ನಿಜವಾದ ಪ್ರಸಾದಿಗಳು. ಮಡಿಹುಡಿ ಸ್ನಾನವಿಲ್ಲದೆ ಸಿದ್ಧಗೊಳಿಸಿದ ಆಹಾರವು ಪ್ರಸಾದವೆನಿಸಲಾರದು. ವೀರಶೈವರಲ್ಲದವರು ಶುದ್ಧ ಮಡಿಯಿಂದ ಮಾಡಿಕೊಟ್ಟ ಆಹಾರವೂ ಪ್ರಸಾದವಾಗಲರಿಯದು. ಭವಿಯು ಮುಟ್ಟಿದ ಅಪೇಕ್ಷೆ ನೋಡಿದಂಥ ಆಹಾರವು ಸಹ ಪ್ರಸಾದವೆಂದೆಣಿಸಲ್ಪಡುವದಿಲ್ಲ. ಅಪಥ್ಯಕರವಾದ, ನಿಷಿದ್ಧವಾದ, ತಂಗುಳವಾದ, ಮಲಿನವಾದ ಆಹಾರ ಪದಾರ್ಥಗಳು ಪ್ರಸಾದವೆನಿಸಲಾರವು. ಹೆಜ್ಜೆಚ್ಚಿಗೆ ಇಕ್ಕಿಸಿಕೊಂಡು ಹೊಟ್ಟೆಯೊಡೆಯುವಂತೆ ತಿಂದು ಕಕ್ಕಸಬಟ್ಟರೆ ಅಂಥ ಆಹಾರವೂ ಶುದ್ಧವಿದ್ದರೂ ಪ್ರಸಾದವೆನಿಸದು. ಹಾಗೆ ತಿನ್ನುವ ಕೂಳಬಕ್ಕನೂ ಪ್ರಸಾದಿಯಲ್ಲ. ದುರ್ಗುಣಿಯೂ ದುರಾಚಾರಿಯೂ ಆದ ಮನುಷ್ಯನು ನೋಡುವ ಮತ್ತು ನೀಡುವ ಆಹಾರವೂ ಪ್ರಸಾದವಲ್ಲ. "ಕುಕ್ಷೌ ತಿಷ್ಠತಿ ಯಸ್ಯಾನ್ನಂ ತಸ್ಯ ಭಾವೋಪಜಾಯತೇ" ಎಂಬ ಉಕ್ತಿಯಿರುವದರಿಂದ ದುಷ್ಟನ ಮನೆಯ ಆಹಾರವೂ ಪ್ರಸಾದವೆನಿಸುವದಿಲ್ಲ. ದುರ್ವಾಸ ಮಹರ್ಷಿಗಳು ದುರ್ಯೋಧನನ ಮನೆಯ ಆಹಾರವನ್ನು ಒಂದೇ ದಿವಸ ಭುಂಜಿಸಿದರೂ ಕೂಡ ನಿರಪರಾಧಿಗಳಾದ ಪಾಂಡವರ ವಿಷಯದಲ್ಲಿ ಅವರಿಗೆ ದುರ್ಬುದ್ಧಿ ಹುಟ್ಟಲಿಲ್ಲವೇ? ಆದಕಾರಣ ಸದಾಚಾರಿಗಳಾದ ವೀರಶೈವರೇ ಪರಿಶುದ್ಧ ಮಡಿಯಿಂದ ಸಿದ್ಧ ಗೊಳಿಸಿದ ನವೀನ ಆಹಾರವನ್ನು ಸದಾಚಾರಿಗಳೂ ಮಡಿವಂತರೂ ಆದವರಿಂದ ಎಡೆ ಮಾಡಿಸಿಕೊಂಡು ಬಹು ಪ್ರೀತಿಯಿಂದ ಶಿವಸ್ಮರಣೆ ಮಾಡುತ್ತ ಸೇವಿಸುವವರೇ ನಿಜವಾದ ಪ್ರಸಾದಿಗಳು.

ಹಸಿವೆಯಿಂದ ಬಳಲುವ ಮನುಷ್ಯನು ಆಹಾರ ಸೇವನೆಯಿಂದ ಸಂತೋಷ ಪಡುವಂತೆ ನಿಜವಾದ ಪ್ರಸಾದಿಯು ಬರೇ ಆಹಾರಕ್ಕಾಗಿ ಹಸಿಯದೆ ಮಹಾನುಭಾವರ ಪ್ರಸಾದ ವಾಣಿಗೆ ಹಸಿದು ಅವರ ವಚನ ಪ್ರಸಾದವನುಂಡು ತಡೆದು ಹರ್ಷಗೊಳ್ಳುವನು. ಈ ತರಹದ ಪ್ರಸಾದಿ

ಯಾಗಬೇಕೆಂದೇ ಮಿತಾಹಾರವನ್ನು ಪೂಜ್ಯಭಾವನೆಯಿಂದ ಸೇವಿಸಬೇಕಾಗುತ್ತದೆ. ನಾಲಿಗೆಗೆ ನಾವು ಬೇಕಾದ ಹಾಗೆ ಅವಕಾಶ ಕೊಟ್ಟರೆ ಇಂದ್ರಿಯಗಳ ಹಾವಳಿಗೆ ಪರಿವೆಯೇ ಇಲ್ಲದಂತಾಗಿ ಮಹಾನುಭಾವರ ಗೋಷ್ಠಿಯು ಅಮೃತ ತುಲ್ಯವಾಗದೆ ವಿಷಕಾರಕವಾಗಿ ಪರಿಣಮಿಸುವದು. ಇದರ ರಹಸ್ಯವನ್ನರಿಯದೆ ಎಷ್ಟೋ ಜನಗಳು ತಾಬಂಡಿಯಲ್ಲಿ ಸ್ವಲ್ಪೂ ಬಿಡದೆ ಸಂಪೂರ್ಣವಾಗಿ ನೆಕ್ಕಿಬಿಡುವವರೇ ಕೇವಲ ಪ್ರಸಾದಿಗಳೆಂದು ತಿಳಿದು ಕೊಂಡಿದ್ದಾರೆ. ಪ್ರಸಾದಕ್ಕೆ ಇಷ್ಟೇ ಸೀಮೆಯನ್ನು ಗೊತ್ತುಪಡಿಸಿದರೆ ಅದರಲ್ಲಿ ಅಷ್ಟು ಮಹತ್ವವು ಉಳಿಯುತ್ತಿರಲಿಲ್ಲ. ಹಾಗೆ ಮಾಡುವದು ಕೇವಲ ಗೌಣಪಕ್ಷವು. ಆದರೆ ಮಹಾನುಭಾವಿಗಳ ವಚನ ಪ್ರಸಾದವನ್ನು ಸೇವಿಸುವದೇ ನಿಜವಾದ ಪ್ರಸಾದಿಯ ಲಕ್ಷಣವು. ಇದೇ ಪ್ರಧಾನ ಪಕ್ಷವು. ಈ ಮಾತನ್ನೇ ಪ್ರಾಮುಖ್ಯವಾಗಿಟ್ಟುಕೊಂಡು ಪ್ರತಿಯೊಬ್ಬ ವೀರಶೈವನು ಆಚರಿಸಬೇಕಲ್ಲದೆ ಕೇವಲ ಗೌಣವಾದುದಕ್ಕೇ ಅಂಟಿಕೊಂಡು ತಮ್ಮ ಪ್ರತಿಷ್ಠೆಯನ್ನು ಬೆಳೆಯಿಸುವದು ಮೂರ್ಖತನವು.

ಹಿರಿಯರು ಗುರುಲಿಂಗಜಂಗಮದ ಪ್ರಸಾದವನ್ನು ಸ್ವೀಕರಿಸಬೇಕೆಂದು ನಮಗೆ ಉಪದೇಶಿಸುವರು. ಅಂದರೆ ಗುರುವಿನ ಮನೆಯಿಂದ ಪ್ರಸಾದವನ್ನು ತಂದು ಸೇವಿಸಬೇಕೆಂತಲ್ಲ. ಆದರೆ ಗುರುವನ್ನೇ ಮನೆಗೆ ಕರೆಯಿಸಿ ಯೋಗ್ಯತಾನುಸಾರ ಅವರಿಗೆ ಪ್ರಸಾದವನ್ನು ನೀಡಿ ಮಿಕ್ಕ ಪ್ರಸಾದವನ್ನು ತಾನು ಸೇವಿಸಬೇಕೆಂದರ್ಥ. ಗುರುವನ್ನು ಕರೆಯಿಸಿ ಬರೇ ಊಟಉಪಚಾರ ಮಾಡಿಸಿದರೆ ತೀರಲಿಲ್ಲ; ಗುರುವಿನ ಪ್ರಸಾದ ಮುಖದಿಂದ ಲಿಂಗಾರ್ಚನಾ ವಿಧಾನವನ್ನರಿತುಕೊಂಡು ಆನಂದಬಡುವದೇ ಗುರುಪ್ರಸಾದವೆನಿಸುತ್ತದೆ. ಪ್ರತಿನಿತ್ಯ ಊಟ ಮಾಡುವಾಗ ಎಡೆಯನ್ನು ಲಿಂಗಕ್ಕೆ ತೋರಿಸಿ ಲಿಂಗಾರ್ಪಿತವಾದ ಬಳಿಕ ವೀರಶೈವರು ತಾವು ಪ್ರಸಾದ ಸೇವನೆ ಮಾಡುವರು. ಅಥವಾ ಲಿಂಗ ನಿರೀಕ್ಷಣೆಯಿಂದುಂಟಾದ ನಿರ್ಮಳಾನಂದವೇ ಲಿಂಗಪ್ರಸಾದವೆನಿಸುವದು. ಜಂಗಮವನ್ನು ಭಕ್ತಿಪೂರ್ವಕವಾಗಿ ಮನೆಗೆ ಬರಮಾಡಿಕೊಂಡು ತಮ್ಮಲ್ಲಿದ್ದುದನ್ನು ನೀಡಿ ಮಿಕ್ಕ ಪ್ರಸಾದವನ್ನು ಕೊಂಬುವದೇ ಜಂಗಮ ಪ್ರಸಾದವು. ಇದರ ಜೊತೆಗೆ ಜಂಗಮದ ಪ್ರಸಾದ ವಾಣಿಯಿಂದ ಲಿಂಗಾಂಗ ಸಾಮರಸ್ಯಜ್ಞಾನವನ್ನರಿತುಕೊಳ್ಳುವದೂ ಜಂಗಮ ಪ್ರಸಾದವೇ.

ಪ್ರಸಾದದ ಮಹತ್ವವೇನು? "ಪ್ರಸಾದೇ ಸರ್ವ ದುಃಖಾನಾಂ ಹಾನಿರಸ್ಯೋಪಜಾಯತೆ" ಪ್ರಸನ್ನಚೇತಸೋ ಹ್ಯಾಶು ಬುದ್ಧಿ: ಪರ್ಯವ

ತಿಷ್ಠತೆ" ಎಂದು ಶ್ರೀ ಭಗವದ್ಗೀತೆಯಲ್ಲಿ ಹೇಳಿದೆ. ಪ್ರಸಾದ ಸೇವಿಸುವದರಿಂದ ಅರ್ಥಾತ್ ಪ್ರಸನ್ನಚಿತ್ತನಾಗಿರುವದರಿಂದ ಎಲ್ಲ ದುಃಖಗಳೂ ಹಿಂಗಿ ಹೋಗುವವು. ಮನುಷ್ಯನು ಪ್ರಸಾದವನ್ನು ಕೇವಲ ತನ್ನ ಹೊಟ್ಟೆಗಾಗಿಯೂ ತನ್ನ ಕುಟುಂಬದ ಸಲುವಾಗಿಯೂ ಸೇವನೆ ಮಾಡುವದು ಮಹಾಪಾಪವು. "ಕಾಗೆಯೊಂದಗಳು ಕಂಡರೆ ಕರೆಯದೆ ತನ್ನ ಬಳಗವನು, ಕೋಳಿಯೊಂದು ಗುಟುಕು ಕಂಡರೆ ಕೂಗಿ ಕರೆಯದೆ ತನ್ನ ಬಳಗವನೆಲ್ಲವನು ಶಿವಭಕ್ತನಾಗಿ ಗುರು ಲಿಂಗಜಂಗಮಕ್ಕೆ ನೀಡದೆ ತಾನೇ ತಿನ್ನುವವನು ಕಾಗೆ ಕೋಳಿಗಿಂತ ಕ್ಕರಕಷ್ಟ ಕಾಣಾ ಕೂಡಲ ಸಂಗಮದೇವಾ" ಎಂಬುದಾಗಿ ಶ್ರೀಬಸವಣ್ಣನವರು ಹೇಳಿದ್ದಾರೆ. ವೀರಶೈವನು ಪ್ರಸಾದಕ್ಕೆ ಕುಳಿತ ಸಮಯದಲ್ಲಿ ಮತ್ತೊಬ್ಬ ವೀರಶೈವನನ್ನು ಕಂಡರೆ ಅತನನ್ನು ಬಿಟ್ಟು ಎಂದಿಗೂ ಪ್ರಸಾದ ಸೇವಿಸಲಾಗದೆಂದು ಆದ್ಯರ ವಚನ. ಈಗ್ಯೂ ಸಹ ಅನೇಕ ವೀರಶೈವರಲ್ಲಿ ಊಟಕ್ಕೆ ಕುಳಿತ ಸಮಯದಲ್ಲಿ ಮನೆಗೆ ಯಾರಾದರೂ ಬಂದರೆ ಊಟ ಮಾಡೋಣ ಬನ್ನಿರಿ ಎಂದು ಕರೆಯುವ ಪರಿಪಾಟು ಬಿದ್ದಿದೆ. ಬಂದಂಥವರು ಬಹಳ ಮಂದಿಯಾಗಲಿ ತೆಗೆದು ಕೊಳ್ಳಿರಿ ಎಂದು ಹೇಳುವ ರೂಢಿಯೂ ಉಂಟು ಅಂದರೆ ಹಿಂದಿನ ಕಾಲಕ್ಕೆ ಮನೆಗೆ ಬಂದ ಅತಿಥಿಗಳನ್ನು ಮೊದಲು ಪ್ರಸಾದಕ್ಕೆ ಬನ್ನಿರೆಂದು ಕರೆಯದೆ ಎಂದಿಗೂ ಬಿಡುತ್ತಿದ್ದಿಲ್ಲ. ಅವರ ಅತಿಥಿ ಸತ್ಕಾರವು ವಿಗಿಲಾಗಿದ್ದಿತು. ತಾವು ಒಂದು ಹೇಳೆ ಉಪವಾಸವಾದರೂ ಬೀಳುತ್ತಿದ್ದರು. ಆದರೆ ಬಂದಂಥವರ ಆರೈಕೆ ಮಾಡುವದರಲ್ಲಿಯೇ ಹೆಚ್ಚು ಮನಮಗ್ನ ವಾಗುತ್ತಿದ್ದರು. ಪ್ರಸಂಗವಶಾತ್ ಏನಾದರೂ ಕೊರತೆಯಾದರೆ ಬಹು ನೊಂದು ಕೊಳ್ಳುತ್ತಿದ್ದರು ಮತ್ತು ಅತ್ಯಂತ ದೀನ ಮುಖಮುದ್ರೆಯಿಂದಲೂ, ದೀನ ವಾಣಿಯಿಂದಲೂ ತಮ್ಮ ಕುಂದು ಕೊರತೆಗಳ ಬಗ್ಗೆ ಅತಿಥಿಗಳೆದುರಿಗೆ ಕ್ಷಮಾಪಣೆ ಬೇಡಿಕೊಳ್ಳುತ್ತಿದ್ದರು. ಅತಿಥಿಗಳು ಸಂತೋಷ ಬಟ್ಟರೆ ತಾವು ಉಂಡದ್ದಕ್ಕಿಂತಲೂ ಹೆಚ್ಚೆಂದು ಭಾವಿಸುತ್ತಿದ್ದರು. ಬಂದಂಥ ಅತಿಥಿಗಳಾದರೋ ಉಂಡ ಮನೆಯ ಜಂತೆಯನ್ನೆಣಿಸುವ ಸ್ವಭಾವದವರಾಗಿರದೆ ಮುಂದೆ ಸುಮ್ಮನಿದು ಹಿಂದೆ ಬಯ್ಯುವ ಮಂಗಜೇಷ್ಟೆಯವರಾಗಿರದೆ ಎಲ್ಲ ಕುಂದು ಕೊರತೆಗಳು ತಮ್ಮವೇ ಎಂದು ತಿಳಿದು ನೀಡಿದಂಥ ಆಹಾರವನ್ನು ಶಿವಪ್ರಸಾದವೆಂದು ಪೂಜ್ಯಭಾವನೆಯಿಂದ ಸ್ವೀಕರಿಸುತ್ತಿದ್ದರು. ಒಂದು ವೇಳೆ ಇವರಿಗೆ ಹಸಿವೆಯಾಗಿರದಿದ್ದರೆ ತಾವು ಹೋದಂಥ ಮನೆಯ ಜನರಿಗೆ

ನಮ್ಮ ಮನೆಯಲ್ಲಿ ನಮ್ಮಂಥ ಅತಿಥಿಗಳು ಬಹಳ ಜನರು ಊಟ ಮಾಡಲಿ ಎಂಬ ಆಶೀರ್ವಾದಾತ್ಮಕವಾದ ಅಪ್ಪಣೆ ಕೊಡಿಸಿ ಅವರು ಪ್ರಸಾದವನ್ನು ಸಾಗಿಸುವಂತೆ ಮಾಡುತ್ತಿದ್ದರು. ಈಗ ಈ ಮಾದರಿಯ ಯಜಮಾನರಾಗಲಿ ಅತಿಥಿಗಳಾಗಲಿ ದೊರೆಯುವದು ದುರ್ಲಭ. ಹಳ್ಳಿ ಪಳ್ಳಿಗಳಲ್ಲಿ ತೀರ ವಯಸ್ಸಾದ ಮುದುಕರಲ್ಲಿ ಈ ತರಹದ ಆದರ ಸತ್ಕಾರದ ಸ್ವಭಾವವು ವ್ಯಕ್ತವಾಗುತ್ತದೆ. ಮುಪ್ಪಿನವರು ಮನೆಗೆ ಬಂದವರಿಗೆ ಊಟಕ್ಕೆ ಬನ್ನಿರೆಂದು ಆಗ್ರಹ ಮಾಡುವರು. ಮಧ್ಯಮ ವಯಸ್ಸಿನವರು ಶಿಷ್ಟಾಚಾರಕ್ಕಾಗಿ ಕರೆದು ಬಂದರೆ ನಿರ್ವಾಹವಿಲ್ಲದೆ ಮನಸ್ಸಿಲ್ಲದಿದ್ದರೂ ಅತಿಥಿಗಳಿಗೆ ಊಟ ಮಾಡಿಸಿ ಕಳಿಸುವರು; ಬಾರದಿದ್ದರೆ ನೆಟ್ಟಗಾಯಿತು ಪೀಡೆ ಹೋಯಿತು; ಕಾಟ ತಪ್ಪಿತೆಂದು ಹಿಗ್ಗುವರು ಆದರೆ ತರುಣರು ಮಾತ್ರ ತಾವು ಊಟಕ್ಕೆ ಕುಳಿತಾಗ ಯಾರಾದರೂ ಬಂದರೆ ನಾನು ಈಗ ಊಟಕ್ಕೆ ಕುಳಿತಿದ್ದೇನೆ ನೀವು ಸ್ವಲ್ಪ ತಡೆದು ಬನ್ನಿರಿ ಅಥವಾ ಖಾನಾವಳಿಯಲ್ಲಿ ನಿಮ್ಮ ಊಟವನ್ನು ತೀರಿಸಿಕೊಂಡು ಬಂದು ಬಿಟ್ಟರೆ ಮತ್ತಿಷ್ಟು ನೆಟ್ಟಗೆ" ಎಂದು ಸ್ಪಷ್ಟವಾಗಿ ಹೇಳಿಕಳಿಸುವರು. ಇವರ ಭಾವನೆಯು ಬಹಳೇ ಕೊಳೆತಿರುತ್ತದೆ ಇಂಥವರು ಅತಿಥಿಗಳನ್ನು ಪಚರಿಸುವದೊತ್ತಟ್ಟಿಗಿರಲಿ ತಮ್ಮ ಮಿತ್ರರನ್ನೂ ಗುರ್ತಿನವರನ್ನೂ ಬಂಧುಬಳಗವರನ್ನೂ ಸಹ ನಿರಾಕರಿಸಿಬಿಡಲಿಕ್ಕೆ ಹೇಸುವದಿಲ್ಲ. ಪೇಟೆಯ ಊರುಗಳಲಂತೂ ಖಾನಾವಳಿಗಳು ಹೆಚ್ಚಾಗಿರುವದರಿಂದ ಯಾರಾದರೂ ಪೇಟೆಯಲ್ಲಿ ತಮ್ಮ ಪರಿಚಿತರಮನೆಗೆ ಹೋದರೆ ಅವರು ಖಾನಾವಳಿಗಳ ಕಡೆಗೆ ಬೊಟ್ಟು ಮಾಡಿ ತೋರಿಸುತ್ತಾರೆ. ಹಾಗೆ ಹೇಳಲಿಕ್ಕೆ ಅವರಲ್ಲಿ ಯಾವ ಸಂಕೋಚವೂ ಉತ್ಪನ್ನವಾಗುವದಿಲ್ಲ ಹಾಗೆ ಹೇಳಿ ಹೇಳಿ ಅವರಿಗೆ ಅದೇ ರೂಢಿ ಬಿದ್ದಿರುತ್ತದೆ. ಅತಿಥಿ ಸತ್ಕಾರದ ಭಾವನೆಯಂತೂ ಅವರಲ್ಲಿ ಸಂಪೂರ್ಣ ನಾಶವಾಗಿ ಬಿಟ್ಟಿರುತ್ತದೆ ಹಿಂದಕ್ಕೆ ಆದರ ಸತ್ಕಾರಗಳೂ ದಾಸೋಹಗಳೂ ನಡೆಯುವಂಥ ಮಠಗಳು ಈಗ ಖಾನಾವಳಿಗಳಾಗಿ ಬಿಟ್ಟವೆ ದೇಶಕಾಲ ಪರಿಸ್ಥಿತಿಗನುಸರಿಸಿ ಖಾನಾವಳಿಗಳಿದ್ದದೇ ಕ್ಷೇಮಕರವೆಂದು ಅನೇಕರಿಗೆ ಭಾವನೆಯಾಗಿ ಬಿಟ್ಟಿದೆ" ಸುಮ್ಮನೆ ಸುಮ್ಮನೆ ಕಾಲ್ಲವ ಭಿಡೆಯನ್ನೆಲ್ಲ ನಾವು ಕೂಳಿಗಾಗಿ ವೆಚ್ಚ ಮಾಡೋಣ ನಾಲ್ಕು ಅನೆ ಕೊಟ್ಟನೇನೋ; ನಂಬರ ಮನೆಯಲ್ಲುಂಡನೇನೋ; ತನ್ನ ದಾರಿ ಹಿಡಿದು ಕೊಂಡು ನಡೆದನೇನೋ." ಎಂದು ಜನರು ಮಾತಾಡುವರು. ಇದು ವ್ಯಾಪಾರದ ಯುಗವಾಗಿರುವದರಿಂದ ಪ್ರತಿಯೊಬ್ಬರಲ್ಲಿಯೂ ಸ್ವಾರ್ಥ

ಪರವಾದ ಲಿಕ್ಕಾ ಹಾಕುವ ಗುಣವು ಬೆಳೆದು ಒಬ್ಬರನ್ನೊಬ್ಬರು ಊಟಕ್ಕೆ ಕರೆಯಬೇಕಾದರೆ ಹಿಂದುಮುಂದು ನೋಡುತ್ತಾರೆ. ಅದರೆ ಸ್ವಾರ್ಥ ಬುದ್ಧಿಯು ಅಡಗಿ ಪರೋಪಕಾರ ಬುದ್ಧಿಯು ಜನರಲ್ಲಿ ಹೆಚ್ಚಾದಾಗಲೇ ಪ್ರಾಣಾವಳಿಗಳಿಗೆ ಅಳಿಗಾಲವು ಪ್ರಾಪ್ತವಾಗಿ ಒಬ್ಬರಿಗೊಬ್ಬರು ಬಂಧು ಪ್ರೇಮದಿಂದ ಆದರ ಸತ್ಕಾರಾದಿಗಳನ್ನು ಮಾಡಹತ್ತುವರು. ವೀರಶೈವ ಸಮಾಜದಲ್ಲಿ ಪ್ರಾಣಾವಳಿಗಳಿರುವದು ಸಮಾಜಕ್ಕೆ ಬಹು ದೊಡ್ಡ ಅಪಮಾನವು; ಕಲಂಕವು. ಆದರ ಸತ್ಕಾರ ಮೊದಲಾದ ಉದಾತ್ತ ಧ್ಯೇಯಗಳನ್ನೊಳಕೊಂಡ ಪರಮ ಪವಿತ್ರವಾದ ವೀರಶೈವ ಧರ್ಮವೆತ್ತ? ಠೊಕ್ಕ ತೆಗೆದುಕೊಂಡು ಪ್ರಸಾದವನ್ನು ಮಾರುವ ನೀಚತನವೆತ್ತ? ಪ್ರಾಣಾವಳಿಗಳು ನಾಮಶೇಷವಾದಾಗಲೇ ವೀರಶೈವ ಮತದ ಶುಭೋದಯವಾಗುವದೆಂದು ತಿಳಿಯಬೇಕು. ಅತ್ಯಂತ ಪವಿತ್ರವಾದ ಪ್ರಸಾದವು ವ್ಯಾಪಾರವ ವಸ್ತುವಾಗಬಹುದೇ? ಪ್ರಾಣಾವಳಿಗಳನ್ನು ನಿರ್ಮೂಲ ಮಾಡಬೇಕೆಂಬುದು ಅವಿವೇಕಿತನದ ಆಲಾಪವೆಂದು ಅನೇಕರಿಗೆ ಅನಿಸುತ್ತಿರಬಹುದು. ಆದರೆ ಅವುಗಳು ಪವಿತ್ರವಾದ ವೀರಶೈವ ಧರ್ಮಕ್ಕೆಂಥ ಕಲಂಕವನ್ನುಂಟು ಮಾಡುತ್ತವೆಂಬದನ್ನು ವಿಚಾರಿಸುವವರು ವಿರಳ. ಒಂದುವೇಳೆ ವಿಚಾರಿಸಿದರೂ ಮಾಡುವದೇನು? ಜಗತ್ತಿನ ಓಘವೇ ಧೌತಿಕ ಪ್ರಗತಿಯಿಲ್ಲಿ ಓಡಾಡುತ್ತಿರುವಾಗ ಹಳೇ ಜನರ ತಿಳಿಮಾತುಗಳನ್ನು ಲಕ್ಷಗೊಟ್ಟು ಕೇಳುವವರಾನು? ಇಂಥ ಪ್ರಸಂಗದಲ್ಲಿ ಸಾಕ್ಷಾತ್ ಪರಮಾತ್ಮನೇ ಅವತರಿಸಿ ಧರ್ಮ ರಕ್ಷಣೆ ಮಾಡಬೇಕಲ್ಲದೆ ಮಾನವರ ಏಡೇನು? ನಾವೆಲ್ಲರೂ ಧರ್ಮದಲ್ಲಿ ಸುಧಾರಣೆಯಾಗಲೆಂದು ಬಯಸುವವರಷ್ಟೇ. ಏನು ಕಲಿಕಾಲದ ಮಹಿಮೆಯೋ ಏನೋ ಸದ್ಯಕ್ಕಂತೂ ವೀರಶೈವರಲ್ಲಿ ಅತಿಥಿ ಸತ್ಕಾರದ ಭಾವನೆಯು ಸಂಪೂರ್ಣ ಲೋಪವಾಗಿ ಬಿಟ್ಟಿದೆ. ಗುರುತಿನವರು ಕಂಡರೆ 'ಚಟಕ್ಕೆ ಶರಣಾರ್ಥಿ ಮಠಕ್ಕೆ ವಯ ಮಾಡಿಸಿರಿ' ಎಂಬುವವರೇ ಬಹಳ ಮಂದಿ. ಶ್ರೀ ಭಗವದ್ಗೀತೆಯಲ್ಲಿ ತಮಗಾಗಿಯೇ ಅಟ್ಟುಣ್ಣುವವರು ಪಾಪವನ್ನೇ ಭಕ್ಷಣ ಮಾಡುತ್ತಾರೆಂದು ಹೇಳಿದೆ. "(ಭುಂಜತೇ ತೇ ತ್ವಘಂ ಪಾಪಾಯೇ ಪಚಂತ್ಯಾತ್ಮಕಾರಣಾತ್)" ಪ್ರಸಾದವನ್ನು ತಾನು ಪೂಜ್ಯ ಭಾವನೆಯಿಂದ ಸೇವಿಸುವದಲ್ಲದೆ, ಮಹಾನುಭಾವರ ವಚನ ಪ್ರಸಾದವನುಂದು ತಣಿದು ಹಸಿದು ಮನೆಗೆ ಬಂದಂಥ ಅತಿಥಿಗಳಿಗೆ ಕುಲಗೋತ್ರವನ್ನೆಣಿಸದೆ ಪ್ರಸಾದವನ್ನಿಕ್ಕುವಾತನೇ ಮಹಾಪ್ರಸಾದಿಯು. ಹಸಿದು ಬಳಲುವ ಯಾವ

ಪ್ರಾಣಿಯನ್ನೂ ಕಣ್ಣೆನಿಂದ ನೋಡಬಾರದು ಅವರ ದೀನ ಸ್ವರವನ್ನು ಕಿವಿಯಿಂದ ಕೇಳಲಾಗದು. ತಾನುಣ್ಣುವದನ್ನು ಬಿಟ್ಟು ಮೊದಲು ಅವರನ್ನು ತೃಪ್ತಿಬಡಿಸಬೇಕೆಂಬುದೇ ವೀರಶೈವ ಧರ್ಮವು ಸಾರುತ್ತದೆ ಹಾಗೆ ಮಾಡುವಂಥ ಮಹನೀಯರೇ ಪ್ರಸಾದಿಗಳೆಂದು ಕರೆಯಲ್ಪಡಲಿಕ್ಕೆ ಯೋಗ್ಯರು. ಅಂತಹದೇ ಮಹಾಪ್ರಸಾದವಲ್ಲದೆ ಕೇವಲ ತನ್ನ ಹೊಟ್ಟೆ ಹರಿದುಕೊಳ್ಳಲಿಕ್ಕೆ ತಿನ್ನುವ ಆಹಾರವು ಪ್ರಸಾದವೆನಿಸದು. ಹಸಿದ ಪ್ರಾಣಿಗಳ ಬಳಲಿಕೆಯನ್ನು ಕಳೆಯುವಂಥ ಆಹಾರಕ್ಕೇನೇ ಪ್ರಸಾದವೆಂಬ ಹೆಸರು ಸಲ್ಲುವದು.

ಪ್ರಸಾದವೆಂದರೆ ಪ್ರಸನ್ನಚಿತ್ತವೆಂದು ಹಿಂದೆ ಹೇಳಿದೆಯಷ್ಟೇ. ಪ್ರಸನ್ನಚಿತ್ತವುಳ್ಳವರ ಬುದ್ಧಿಯು ಸುಸ್ಥಿರವಾಗಿರುತ್ತದೆಂದು ಭಗವದ್ಗೀತೆಯು ಸಾರುತ್ತದಲ್ಲವೇ? ಆದುದರಿಂದ ಯಾವಾಗಲೂ ಪ್ರಸನ್ನ ಮುಖವುದ್ರೆಯಿಂದಿರುವದು ಪ್ರಸಾದಿಯ ಲಕ್ಷಣವಾಗಿದೆ. ವೀರಶೈವರು ಉದಾಸೀನರೂ ಉರಿ ಮೋರೆಯವರೂ ಎಂದಿಗೂ ಇರಕೂಡದು. ಯಾವಾಗಲೂ ಉಲ್ಲಾಸವೃತ್ತಿಯಿಂದ ಕುಲುಕುಲು ನಗುತ್ತಿರಬೇಕು. ಆದರೆ ಆ ಉಲ್ಲಾಸವು ಔತ್ಸುಕ್ಯಮಯವಾಗಿರದೆ ಆಧ್ಯಾತ್ಮಿಕ ಪ್ರಕಾಶದಿಂದ ಹೊಳೆಯುತ್ತಿರಬೇಕು.

ನಾವು ಪ್ರಸಾದವನ್ನು ಬಾಯಿಯಿಂದ ಸೇವಿಸುತ್ತೇವೆ. ಅದೇ ಬಾಯಿಯಿಂದಲೇ ಮಾತುಗಳನ್ನಾಡುತ್ತೇವೆ. ಪ್ರಸಾದಕ್ಕೂ ವಾಕ್ಕಿಗೂ ಬಾಯಿಯೇ ಮುಖ್ಯಸ್ಥಾನವಾಗಿರುವದರಿಂದ ನಾವು ಅದನ್ನು ಎಷ್ಟು ಸ್ವಚ್ಛವಾಗಿಯೂ ಪವಿತ್ರವಾಗಿಯೂ ಇಟ್ಟುಕೊಳ್ಳಬೇಕೆಂಬದನ್ನು ನೀವೇ ವಿಚಾರಿಸಿರಿ. ಬಾಯಿಯನ್ನು ಸ್ವಚ್ಛವಾಗಿ ತೊಳೆದಿಟ್ಟುಕೊಂಡರೆ ಪ್ರಸಾದವು ರುಚಿಯಾಗಿಯೂ ಆರೋಗ್ಯಕರವಾಗಿಯೂ ಪರಿಣಮಿಸುವದು. ನಾವು ಬಾಯಿಯಿಂದ ಅವಾಚ್ಯ ಶಬ್ದಗಳನ್ನುಚ್ಚರಿಸದೆ ಮೃದು ಶಬ್ದಗಳನ್ನೇ ನುಡಿಯುವ ಅಭ್ಯಾಸವನ್ನಿಟ್ಟರೆ ಮುಂದೆ ಅದೇ ಪ್ರಸಾದವಾಣಿಯಾಗುವದು. ನಾವು ಯಾವ ಬಾಯಿಯಿಂದ ಪವಿತ್ರ ಪ್ರಸಾದವನ್ನು ಸೇವಿಸುತ್ತೇವೆಯೋ ಅದೇ ಬಾಯಿಯಿಂದ ಸುವಾಚ್ಯವಾದ ನುಡಿಯನ್ನು ನುಡಿಯುತ್ತಿರಬೇಕು. ಮಹಾನುಭಾವರ ಪ್ರಸಾದ ವಚನ ಶ್ರವಣ ಮಾಡುವದು ಪ್ರಸಾದಿಯ ಕರ್ತವ್ಯವಾದಂತೆ ಆ ಪ್ರಸಾದ ವಚನವನ್ನು ತಾನು ಸ್ವತಃ ನುಡಿಯುವದಾದರೂ ತನ್ನ ಕರ್ತವ್ಯವೆಂಬದನ್ನು ಪ್ರಸಾದಿಯು

ಸರ್ವಥಾ ಮರೆಯಲಾಗದು. ಶ್ರೀ ಬಸವಣ್ಣನವರು 'ಮೃದು ವಚನಂಗಳೇ ಸಕಲ ಜಪಂಗಳಯ್ಯಾ! ಮೃದು ವಚನಂಗಳೇ ತಪಂಗಳಯ್ಯಾ! ಎಂದು ಹೇಳಿಲ್ಲವೇ?

ಪ್ರಸಾದವನ್ನು ಎಡೆಯಲ್ಲಿ ಬಿಡಬಾರದೆಂಬುದೇನೋ ಒಳ್ಳೆಯ ನಿಯಮ. ಹೆಚ್ಚಿಗೆ ನೀಡಿಸಿಕೊಳ್ಳದೆ ಮಿತಾಹಾರಿಯಾಗಿರಬೇಕೆಂಬುದೂ ಅದರ ಉದ್ದೇಶ ಆದರೆ ಕೆಲವು ಪ್ರಸಾದಿಕರೆನಿಸಿಕೊಳ್ಳುವವರು ತುತ್ತು ಹೆಚ್ಚಾದರೆ ಕುತ್ತು ಬಪ್ಪುದೆಂಬ ನಾಣ್ನುಡಿಯನ್ನುಲ್ಲಂಘಿಸಿ ಸಾಕುಸಾಕಾಗಿದ್ದರೂ ಹೆಚ್ಚಿಗೆ ನೀಡಿಸಿಕೊಂಡು ಹೊಟ್ಟೆಯುಬ್ಬಿ ಕಕ್ಕಸ ಪಡುತ್ತಿದ್ದರೂ ಆ ಎಡೆಯನ್ನೆಂದಿಗೂ ಬಿಡುವದಿಲ್ಲ. ಇಂಥವರು ಪ್ರಸಾದಿಗಳಲ್ಲ. ನಾಲಿಗೆಯ ರುಚಿಗಾಗಿ ಯಥೇಚ್ಛವಾಗಿ ತಿನ್ನುವ ಕೂಳಬಕ್ಕರು ಆ ಆಹಾರವಾದರೂ ಅವರಿಗೆ ಪ್ರಸಾದವಾಗದೆ ಕೂಳಾಗುವದು. ಕೆಲವು ಮಹನೀಯರು ಕುತ್ತಿಗೆಮಟ ತಿಂದು ಎಲ್ಲಿಯೂ ಹೆಚ್ಚಿಗೆ ಸ್ಥಳ ದೊರೆಯದಂಥ ದುರ್ಧರ ಪ್ರಸಂಗ ಬಂದರೆ ಹೆಚ್ಚಾದ ಪ್ರಸಾದವನ್ನು ಸುಡಿಸುವರು ಇಲ್ಲವೆ ಹೂಳುವರು. ಇದೆಲ್ಲಿಯ ನ್ಯಾಯ? ತಕ್ಕಷ್ಟು ನೀಡಿಸಿಕೊಳ್ಳದಿರುವದೇ ಮೊದಲನೆಯ ತಪ್ಪು. ಪ್ರಸಾದಿಕರೆಂದಾದರೂ ಹದಗೇಡಿಗ ಳಾಗಬಹುದೇ? ಪ್ರಸಾದಿಕರಾದವರೊಡನೆ ನೀಡುವವರೆಂದಾದರೂ ಜೇಷ್ಠೆಗಾಗಿ ಹೆಚ್ಚಿಗೆ ನೀಡಬಹುದೇ? ಇಂಥ ಜೇಷ್ಠೆಖೋರರಿಂದ ಎಡೆ ಮಾಡಿಸಿಕೊಳ್ಳುವವರು ಪ್ರಸಾದಿಕರಲ್ಲ. ಪ್ರಸಾದಿಕರಿಗೆ ಪ್ರೇಮದಿಂದಾಗಲಿ, ಆಗ್ರಹದಿಂದಾಗಲಿ ಉದ್ದೇಶಪಟ್ಟಾಗಲಿ ಅವರ ಮನಸ್ಸಿಲ್ಲದಿದ್ದರೂ ಹೆಚ್ಚಿಗೆ ನೀಡುವವರು ಮಹಾಪಾಪಿಗಳು. ಆ ಹೆಚ್ಚಿನ ಅನ್ನದಿಂದ ಮತ್ತೊಂದು ಜೀವಿಯು ಬದುಕುತ್ತಿದ್ದರೆ ಅದನ್ನು ಹಾರಿಬಡೆದ ಪಾಪವು ಅವರಿಗೆ ತಟ್ಟುತ್ತದೆ. ಹೆಚ್ಚಾಗಿ ಊಟ ಮಾಡುವವರಿಗೂ ಆ ಪಾಪವು ತಟ್ಟದೆ ಹೋಗುವದಿಲ್ಲ. ಏನೋ ಪ್ರಸಂಗವಶಾತ್ ಎಡೆಯಲ್ಲಿ ಕ್ರಿಮಿಗಳಾಗಲಿ ಮಲಿನ ಪದಾರ್ಥಗಳಾಗಲಿ ಕಂಡರೆ ಕೆಲವು ಅರಣ್ಯಪಂಡಿತರು ಅವುಗಳನ್ನೂ ಸಹ ಪ್ರಸಾದವೆಂದೇ ಭಾವಿಸಿ ಕಡೆಗೆ ತೆಗೆದೊಗೆಯದಲೆ ಹಾಗೆಯೇ ಸೇವಿಸಿ ಬಿಡುವರು. ಈ ಮಹನೀಯರು ಪ್ರಸಂಗ ಬಂದರೆ ಉತ್ತೊತ್ತಿಯ ಬೀಜಗಳನ್ನೂ ಪಾವಿನ ಒಟ್ಟಪ್ಪಗಳನ್ನೂ ಪ್ರಸಾದವೆಂದು ನುಂಗಿದರೂ ನುಂಗಬಹುದು. ಇದು ಪ್ರಸಾದದ ಬಗ್ಗೆಯಿರುವ ಮೂರ್ಖ ಕಲ್ಪನೆಯ ಪರಮಾವಧಿಯು; ಅಜ್ಞಾನಾಂಧಕಾರದ ಮೊಟ್ಟೆಯು. ಇಂಥ

ವರು ನಿಜವಾದ ಪ್ರಸಾದಿಗಳಾಗಿರದೆ ತಿಳಿಗೇಡಿಗಳಾಗಿರುವರು. ಪ್ರಸಾದವು ಹೆಚ್ಚಾದರೇನು ಮಾಡಬೇಕು? ಅದನ್ನಾದರೂ ಭಕ್ತಿಯಿಂದ ಸೇವಿಸುವವರಿದ್ದರೆ ಅವರಿಗೆ ಕೊಡುವದುತ್ತಮ ಪಕ್ಷ ಅದರೆ ಅವರು ಮಾಡಿಕೊಂಡರಾಗಲಿ ತಮ್ಮ ಮನಸ್ಸು ಹಾಗೆ ಮಾಡಲೊಪ್ಪದಿದ್ದರಾಗಲಿ ಆ ಪ್ರಸಾದವನ್ನು ಅಕಳ ಅಥವಾ ಅಕಳ ಕರುವಿಗೆ ಕೊಡುವದು ಮಧ್ಯಮ ಪಕ್ಷ ಅದೂ ಸಾಧಿಸದಿದ್ದರೆ ಬೇರೆ ಪಶುಪಕ್ಷಿಗಳಿಗಾಗಲಿ ಬಿಕ್ಕೆ ಬೇಡುವವರಿಗಾಗಲಿ ಕೊಡುವದು ಕನಿಷ್ಠ ಪಕ್ಷ. ಆದರೆ ಅದನ್ನು ಸುಡುವದಾಗಲಿ ಹುಗಿಯುವದಾಗಲಿ ಸರ್ವಥಾ ಕೆಲಸದ್ದಲ್ಲ. ಪ್ರಸಾದವು ಜೀವಿಗಳ ತೃಪ್ತಿಗಾಗಿಯೇ ಇರುತ್ತದಲ್ಲದೆ ಸುಡಿಸಿಕೊಂಡಾಗಲಿ ಹೂಳಿಸಿಕೊಂಡಾಗಲಿ ಸಾಯುವದಕ್ಕಿರುವದಿಲ್ಲ. ಹೆಚ್ಚು ಮಾಡಿದ ಆಹಾರವು ಪ್ರಸಾದವೆಂದಿಗೂ ಎನಿಸಲಾರದು. ಅದು ಕೂಳೇ ಆಹುದು. ಸಾಮಾನ್ಯ ಜನರು ಕೂಳು ಹೆಚ್ಚಾದರೆ ಯಾವ ಪ್ರಕಾರ ವರ್ತಿಸುವರೋ ಅದರಂತೆಯೇ ಪ್ರಸಾದಿಕರೆನಿಸಿಕೊಳ್ಳುವವರೂ ಮಾಡಿದರೆ ಯಾವ ದೋಷವೂ ಇಲ್ಲ. ಹೆಚ್ಚಾಗಿ ತಿನ್ನುವದಾಗಲಿ ಹೆಚ್ಚು ಮಾಡುವದಾಗಲಿ ಪ್ರಸಾದಿಯ ಲಕ್ಷಣವೇ ಅಲ್ಲ. ಹೆಚ್ಚು ನೀಡಿಸಿಕೊಳ್ಳಬಾರದೆಂಬುದರ ಅರ್ಥವು ಮಿತಿಯಿಂದ ಪ್ರಸಾದಸೇವನೆ ಮಾಡಬೇಕೆಂಬುದಿಷ್ಟೇ ಇರುತ್ತದಲ್ಲದೆ ಸುಡಿಸಬೇಕು ಇಲ್ಲವೆ ಹುಗಿಯಬೇಕೆಂದು ಎಂದು ಹೇಳುವದಿಲ್ಲ.

ನಿತ್ಯ ಪ್ರಸಾದಿಗಳಿಗೆ ಉಪವಾಸಾದಿ ವ್ರತಗಳನ್ನು ಪಾಲಿಸಬೇಕೆಂಬ ನಿಯಮವಿಲ್ಲ. ದಿನಾಲು ಅಳತೆಗೆಟ್ಟುಣ್ಣವ ಜನಗಳು ಪಕ್ಷಕ್ಕೊಂದಾವರ್ತಿ ಉಪವಾಸ ಮಾಡಿದರೆ ಜೀರ್ಣ ಕ್ರಿಯೆಯು ಚನ್ನಾಗಿ ನಡೆದು ದೇಹವು ಆರೋಗ್ಯದಿಂದಿರುವದೆಂದು ಏಕಾದಶಿಯ ಉಪವಾಸವನ್ನಿಟ್ಟಿರುವರು. ಆದರೆ ಪ್ರಸಾದಿಯು ದಿನಾಲು ಮಿತಾಹಾರವನ್ನೇ ಸೇವಿಸುತ್ತಿರುವನಾದ್ದರಿಂದ ಅನಾರೋಗ್ಯಕ್ಕೆ ಆಸ್ಪದವೇ ಇಲ್ಲ. ಅಂದಬಳಿಕ ಪ್ರಸಾದಿಗೆ ಉಪವಾಸಾದಿ ವ್ರತಗಳೇಕೆ? ಪ್ರಸಾದಿಯು ಪ್ರತಿನಿತ್ಯ ಗುರು ಲಿಂಗ ಜಂಗಮ ತೃಪ್ತಿಗಾಗಿಯೂ ಹಸಿದು ಬಂದಂಥ ಅತಿಥಿ ಹಾಗೂ ಸಜೀವ ಪ್ರಾಣಿಗಳ ತೃಪ್ತಿಗಾಗಿಯೂ ವ್ರತವನ್ನು ಕೈಕೊಂಡಿರುವದರಿಂದ ಮಹತ್ವವಾದ ಪ್ರಸಾದ ವ್ರತವನ್ನು ಬಿಟ್ಟು ಬೇರೆ ವ್ರತವನ್ನೇಕೆ ಕೈಕೊಳ್ಳುವನು? ನಿಜವಾದ ಪ್ರಸಾದಿಗಳಿಗೆ ಪ್ರತಿನಿತ್ಯವೂ ಶಿವರಾತ್ರಿಯು. "ನಿಚ್ಚಲುಂ ಶಿವರಾತ್ರಿಯಂ ಅಚ್ಚಳಿಯದೆ ಮಾಳ್ಪೆನೆಂಬ ಭಾಷೆ" ಎಂಬು

ದಾಗಿ ಮಹಾನುಭಾವರಾದ ಬಸವಣ್ಣನವರು ಹಾಡಿಕೊಂಡಿರುವರು. 'ಉಂಡು ಉಪವಾಸಿಯಾಗಿರು' ಎಂಬ ಅನುಭಾವಿಗಳ ವಚನವಿರುವದು. ಉಂಡ ಮೇಲೆ ಉಪವಾಸವಿದ್ದಂತೆ ಹ್ಯಾಗಾಯಿತು? ಅದರ ಅರ್ಥವು ಹೀಗಲ್ಲ. ಮಹಾನುಭಾವರ ಪ್ರಸಾದ ವಚನವನ್ನುಂಡು ಅಂದರೆ ಶ್ರವಣ ಮಾಡಿ ಇನ್ನೂ ಕೇಳಬೇಕೆಂಬ ಹಸಿವು ಉಳ್ಳವರು ಅಂದರೆ ಹಂಬಲವುಳ್ಳವರು ಆಗಿರಬೇಕೆಂಬರ್ಥ. ಬಂದಂಥ ರೋಗವನ್ನು ಗುಣಪಡಿಸಿಕೊಳ್ಳುವದಕ್ಕಿಂತ ರೋಗವು ಬಾರದಂತೆ ಮಾಡುವದೇ ಶ್ರೇಯಸ್ಕರವಲ್ಲವೇ? ಅದರಂತೆ ಉಪವಾಸ ಮಾಡಿ ರೋಗವನ್ನು ಕಳೆದುಕೊಳ್ಳುವದಕ್ಕಿಂತಲೂ ಮಿತಾಹಾರದ ಪ್ರಸಾದಿಯಾಗಿ ರೋಗಾದಿಗಳಿಂದ ದೂರಾಗಿರುವದು ಲೇಸಲ್ಲವೇ?

ಒಂದು ನಾಲಿಗೆಯನ್ನು ಬಿಗಿ ಹಿಡಿಯುವದರಿಂದ ಜಗತ್ತಿನಲ್ಲಿ ಮಹತ್ತರವಾದ ಕೆಲಸಗಳು ಜರಗುತ್ತವೆ. ನಾಲಿಗೆಯನ್ನು ಹರಿಬಿಡುವದರಿಂದ ಹೇಳಲಸದಳವಾದ ಅನರ್ಥಗಳು ಸಂಭವಿಸುತ್ತವೆ. ನಾಲಿಗೆಯನ್ನು ಬಿಗಿ ಹಿಡಿಯುವದೆಂದರೆ ಅವಾಚ್ಯ ಶಬ್ದಗಳನ್ನಾಡದಿರುವದು; ಮತ್ತು ರುಚಿ ದುರಾಶೆಯಿಂದ ಕಂಡಕಂಡ ಪದಾರ್ಥಗಳನ್ನು ಸೇವಿಸದಿರುವದು. 'ಅಯ್ಯಾ ಎಂದೊಡೆ ಸ್ವರ್ಗ, ಎಲವೋ ಎಂದೊಡೆ ನರಕ' ಎಂದು ಶ್ರೀಬಸವಣ್ಣನವರು ಹೇಳಿದ್ದಾರೆ. 'ಮಾತಿಂಗೆ ಮಾತು ಮಥಿಸಲ್ಕೆ ವಿಧಿ ಬಂದು ಅತುಕೊಂಡಿಹುದು ಸರ್ವಜ್ಞ' ಎಂಬ ಸರ್ವಜ್ಞನ ವಚನವುಂಟು. ಕೆಲವರು ನಾಲಿಗೆಯನ್ನು ಬಿಗಿಹಿಡಿಯುವದೆಂದರೆ ಮೌನವ್ರತವನ್ನು ಧಾರಣ ಮಾಡುವದೆಂದು ಹೇಳುವರು. ಆದರೆ ಆ ಮೌನವ್ರತದ ಆಟವು ಪ್ರಪಂಚದಲ್ಲಿ ನಡೆಯುವದಿಲ್ಲ. ಮೌನಿಯಾಗಿರುವದಕ್ಕಿಂತಲೂ ಮೃದು ಭಾಷಿಯಾಗಿರುವದೇ ಮೇಲು. ಮೌನದಿಂದಾಗಲಿ, ಮೃದು ಭಾಷೆಯ ಸಾಧನದಿಂದಾಗಲಿ ನಮ್ಮ ವಾಣಿಯು ಪ್ರಸಾದವಾಣಿಯಾಗುವದು. 'ಬನ್ನಿರಿ ಬನ್ನಿರಿ ಹದುಳವಿದ್ದಿರಿ ಎಂದರೆ ನಿಮ್ಮ ಮೈಸಿರಿ ಹಾರಿಹೋಹುದೇ?' ಎಂದು ಶ್ರೀಬಸವಣ್ಣನವರು ಅಪ್ಪಣೆ ಕೊಡಿಸಿದ್ದಾರೆ. ಪ್ರಸಾದ ವಾಣಿಯನ್ನು ಪಡೆಯುವದು ಪ್ರಸಾದಿಯ ಲಕ್ಷಣವು. ನಾಲಿಗೆಯ ರುಚಿಗಾಗಿ ಕಂಡಕಂಡದ್ದನ್ನೆಲ್ಲ ಸೇವಿಸದೆ ಶಾಸ್ತ್ರದೃಷ್ಟಿಯಿಂದ ಪರಿಶುದ್ಧವೂ ಸಾತ್ವಿಕವೂ ಆದ ಪ್ರಸಾದವನ್ನೇ ಪ್ರಸಾದಿಯು ಮಿತಿಯಿಂದ ಸೇವಿಸಬೇಕು. ಉಳಿದ ಜಾತಿಯವರಲ್ಲಿ ಆಹಾರಕ್ಕೆ ಸ್ಪರ್ಶ ದೋಷವೊಂದೇ ಉಂಟು; ಆದರೆ ವೀರಶೈವರ ಪ್ರಸಾದವನ್ನು ಭವಿಗಳು ನೋಡಲಾಗದು; ಮುಟ್ಟುವದಂತೂ ದೂರೇ ಉಳಿಯಿತು. ಈ ಪ್ರಕಾರ ದೃಷ್ಟಿ ದೋಷ ಸ್ಪರ್ಶ ದೋಷಗಳಿಂದ ನಿರ್ಲಿಪ್ತವಾದ ನಿರ್ಮಲ ಪ್ರಸಾದವನ್ನು ಪಡೆದ ವೀರಶೈವನೇ ಪರಮ ಧನ್ಯನು.

ವಿಭೂತಿ.

ವಾ. ಪ. ಭಸಿತ ಭಸ್ಮ ವಿಭೂತಿ ಕ್ಷಾರ ರಕ್ಷೆಗಳೆಂಬ
ವಿಸುಪೈದು ಪೆಸರಿನಿಂ ಮೆರೆವುದಾ ಪರಭಸ್ಮ
ವಸುವತಿಯೊಳಾರ್ತರಂ ರಕ್ಷಿಪುದು ಸುಜ್ಞಾನ ಜ್ಯೋತಿಯಂ
ಸಲೆ ತೋರ್ಪುದು।
ಭಸಿತದಾ ಮಹಿಮೆಯಿಂ ನಶಿಸಲೆನ್ನಯ ಪಾಪ
ಪುಸಿಯಾದ ಸಂಸಾರ ಬಾಧೆ ತಪ್ಪಲಿಯೆನ್ನ
ವಿಸುಪ ಸರ್ವಾಂಗವನು ನೀಡುವೆನು ಮುದದಿಂದಲೆಸೆವ
ಚಿದ್ಘನ ಭಸ್ಮಕೆ॥

ವಿಭೂತಿಯು ಅಷ್ಟಾವರಣಗಳಲ್ಲಿ ಅರನೆಯದು. ವಿಭೂತಿಯೆಂದರೇನು? ವಿಭೂತಿಯೆಂದರೆ ಸಂಪತ್ತು ಮತ್ತು ಭಸ್ಮಗಳೆಂದು ಎರಡು ಅರ್ಥಗಳಾಗುತ್ತವೆ. ಸಂಪತ್ತೆಂದರೆ ಭೌತಿಕ ಸಂಪತ್ತಲ್ಲ; ಆಧ್ಯಾತ್ಮಿಕ ಸಂಪತ್ತು. ಭಸ್ಮವೆಂದರೆ ಒಲೆಯೊಳಗಿನ ಬೂದಿಯಲ್ಲ; ಔಷಧಕ್ಕಾಗಿ ತಯಾರಿಸಿದ ಭಸ್ಮವಲ್ಲ. ಆದರೆ ಪವಿತ್ರವಾದ ಗೋಮಯದಿಂದ ಶುದ್ಧವಾದ ಭಸ್ಮವನ್ನು ತಯಾರಿಸಿ ಪಾದೋದಕ ಮಂತ್ರಾದಿಗಳಿಂದ ಶುದ್ಧಿಗೊಳಿಸುವದೇ ವಿಭೂತಿಯು. ಜ್ಞಾನಾಗ್ನಿಯಿಂದ ಕಾಮಕ್ರೋಧಾದಿ ಗುಣಗಳನ್ನು ದಹಿಸುವದರಿಂದುಂಟಾದ ವೈಭವವೇ ವಿಭೂತಿಯು. ಪರಶಿವನು ಅಗ್ನಿ ನೇತ್ರದಿಂದ ಮನ್ಮಥನನ್ನು ಧ್ವಂಸ ಮಾಡಿ ಆ ಬೂದಿಯನ್ನು ಮೈಗಿ ಪೂಸಿಕೊಂಡಂತೆ ವೀರಶೈವರು ತಾವೂ ಕಾಮಕ್ರೋಧಾದಿ ಷಡ್ರಿಪುಗಳನ್ನು ಅಳಿದಿರುವೆವೆಂಬದನ್ನು ತೋರಿಸಲಿಕ್ಕೆ ಭಸ್ಮವನ್ನು ಧಾರಣ ಮಾಡುತ್ತಾರೆ. ವಿಭೂತಿ ಧಾರಣವೇ ಷಡ್ರಿಪುಗಳನ್ನಳಿದದ್ದರ ಗುರುತು. ಈ ಕಾಮಕ್ರೋಧಾದಿಗಳನ್ನಳಿಯುವ ಗುಣವೇ ಅಸಾಧಾರಣವಾದ ಆಧ್ಯಾತ್ಮಿಕ ಸಂಪತ್ತು. ಐಹಿಕ ಪ್ರಪಂಚವನ್ನು ಸಾಗಿಸಿಕೊಂಡು ಹೋಗ

ಲಿಕ್ಕೆ ಭೌತಿಕ ಸಂಪತ್ತು ಯಾವ ಪ್ರಕಾರ ಸಹಾಯಕಾರಿಯಾಗಿರುವದೋ ಅದೇ ಪ್ರಕಾರ ಪಾರಮಾರ್ಥ ಮಾರ್ಗವನ್ನು ಸೇರಿಸಲು ಈ ಆಧ್ಯಾತ್ಮಿಕ ಸಂಪತ್ತು ಪ್ರಬಲವಾದ ಸಾಧನವಾಗಿದೆ. ಈ ಆಧ್ಯಾತ್ಮಿಕ ಸಂಪತ್ತನ್ನು ಪಡೆದವರೇ ಜಗತ್ತಿನಲ್ಲಿ ಮಹಾವಿಭೂತಿಗಳಾಗುವರು. ಬರೀ ಧಾಳವಾಗಿ ಹಣೆಗೆ ಭಸ್ಮವನ್ನು ಪೂಸಿಕೊಂಡು ಕಾಮಕ್ರೋಧಾದಿ ದುರ್ಗುಣಗಳನ್ನಳಯದಿದ್ದರೆ ಅವರಿಗೆ ಯಾರೂ ಎಂದಿಗೂ ವಿಭೂತಿಗಳೆನ್ನಲಾರರು.

ಅಗ್ನಿಪೂಜೆಗೂ ಭಸ್ಮಪೂಜೆಗೂ ಮಹದಂತರವಿದೆ. ಅಗ್ನಿಪೂಜೆಯು ಪ್ರವೃತ್ತಿ ಮಾರ್ಗದ್ಯೋತಕವಾಗಿದೆ. ಭಸ್ಮಪೂಜೆಯು ನಿವೃತ್ತಿ ಮಾರ್ಗವನ್ನು ಸೂಚಿಸುತ್ತದೆ. ಅಗ್ನಿಯು ಭೋಗಕ್ಕೆ ಅನುಕೂಲವಾಗಿದೆ. ಭಸ್ಮವು ತ್ಯಾಗಕ್ಕೆ ಕಾರಣವಾಗಿದೆ. ಭೋಗವು ವಿಷ್ಣುವಿನದು; ತ್ಯಾಗವು ಶಿವನದು; ಅಂತೆಯೇ ವಿಷ್ಣು ಮೂರ್ತಿಯನ್ನು ನಾನಾವಿಧವಾದ ಅಲಂಕಾರಗಳಿಂದಲೂ ಬಹು ಬೆಲೆಯ ವಸ್ತ್ರಗಳಿಂದಲೂ ಮುತ್ತು ರತ್ನಾದಿಗಳಿಂದಲೂ ಅಲಂಕರಿಸುವರು. ಸಾಕ್ಷಾತ್ ಲಕ್ಷ್ಮೀ ದೇವಿಯನ್ನೇ ಅತನ ಮಡದಿಯನ್ನಾಗಿ ಮಾಡಿರುವರು. ಶಿವನು ಬೂದಿಯನ್ನು ಬಡೆದುಕೊಂಡು ಸ್ಮಶಾನದಲ್ಲಿ ಪಿಶಾಚಿಗಳೊಡನೆ ವಾಸಿಸುವನು. ಅಗ್ನಿ ಪೂಜಕರು ಅಗ್ನಿಕುಂಡದಲ್ಲಿ ಇಂದ್ರಾದಿ ದೇವತೆಗಳಿಗೆ ಆಹುತಿಗಳನ್ನು ನೀಡಿ ಮಳೆ ಬೆಳೆಗಳನ್ನು ಬೇಡಿಕೊಂಡು ಸಮೃದ್ಧವಾಗಿ ಜೀವಿಸುವರು. ಅಗ್ನಿಯಿಂದಲೇ ಪ್ರತಿದಿನದ ಪಾಕವು ಸಿದ್ಧವಾಗುತ್ತದೆ ಅಗ್ನಿಯಿಂದಲೇ ಹಡಗ, ಗಾಡಿ, ಮೋಟಾರ ಮೊದಲಾದ ಭೋಗ್ಯವಸ್ತುಗಳು ನಡೆಯುತ್ತವೆ. ಅಗ್ನಿಯು ಘೃತವನ್ನುನುಂಗಿ ಪ್ರಜ್ವಲಿಸುವಂತೆ ಅಗ್ನಿಪೂಜಕನು ಎಲ್ಲ ಭೋಗ್ಯವಸ್ತುಗಳನ್ನು ಅನುಭೋಗಿಸಿ ಹರ್ಷಿಸುವನು. ಅಗ್ನಿಯ ಸೊಕ್ಕು ಮುರಿದಾಗಲೇ ಭಸ್ಮವು ಉದ್ಭವಿಸುವದು. ಭೋಗವು ತಲೆಬೇಸರವಾದಾಗಲೇ ತ್ಯಾಗ ಬುದ್ಧಿಯು ಹುಟ್ಟುವದು. ಈಗ ಅಮೇರಿಕಾ, ಇಂಗ್ಲಂಡ, ಜರ್ಮನಿ, ಜಪಾನ ಮೊದಲಾದ ರಾಷ್ಟ್ರಗಳು ಭೌತಿಕೋನ್ನತಿಯ ಶಿಖರಕ್ಕೇರಿರುವದರಿಂ ಅವರಲ್ಲಿ ಅವಿಶ್ರಾಂತತೆಯು ಅಧಿಕವಾಗಿ ನಿಜವಾದ ಶಾಂತತೆಯು ಅವರ ಪಾಲಿಗೆ ಶೂನ್ಯವಾಗಿ ಬಿಟ್ಟಿದೆ. ಆದುದರಿಂದ ಅವರು ಶಾಂತತೆಯ ಉಗಮಸ್ಥಾನವಾದ ಆಧ್ಯಾತ್ಮಿಕವನ್ನವಲಂಬಿಸಲುಪಕ್ರಮಿಸಿದ್ದಾರೆ. ಭೋಗಬುದ್ಧಿಯು ಮೊದಲನೆಯ ಅವಸ್ಥೆಯು; ತ್ಯಾಗ ಬುದ್ಧಿಯು

ಎರಡನೆಯ ಅವಸ್ಥೆಯು. ಭೋಗಕ್ಕೆ ಆಸುರೀ ಸಂಪತ್ತೆನ್ನುವರು. ತ್ಯಾಗಕ್ಕೆ ದೈವೀ ಸಂಪತ್ತೆನ್ನುವರು. ಆಸುರೀ ಸಂಪತ್ತು ಸ್ವಾರ್ಥಕ್ಕಾಗಿ ವೆಚ್ಚವಾಗುತ್ತದೆ; ದೈವೀಸಂಪತ್ತು ಪರಾರ್ಥಕ್ಕೆ ಸಲ್ಲುತ್ತದೆ. ಅಂತೆಯೇ ಶ್ರೀ ಭಗವದ್ಗೀತೆಯಲ್ಲಿ "ದೈವೀ ಸಂಪದ್ವಿಮೋಕ್ಷಾಯ ನಿಬಂಧಾಯಾಸುರೀ ಮತಾ, ಎಂದು ಹೇಳಿದೆ. ಸಂಪತ್ತು ಸಮೃದ್ಧಿಸಿದಾಗ ಹುಟ್ಟಿದ ತ್ಯಾಗ ಬುದ್ಧಿಯೇ ನಿಜವಾದ ತ್ಯಾಗ ಬುದ್ಧಿಯು; ಏನೂ ಇಲ್ಲದ ದರಿದ್ರನು ತ್ಯಾಗ ಮಾಡುವನೆಂದು ಹೇಳಿದರೆ ಅದು ಕೇವಲ ನಗೆಗೇಡು. ಶ್ರೀರಾಮಚಂದ್ರನೂ ಗೌತಮಬುದ್ಧನೂ ನಿಜವಾದ ತ್ಯಾಗಬುದ್ಧಿಯುಳ್ಳವರು. ಈಗಿನ ಕಾಲದಲ್ಲಿ ಕೈ.ಇವಾ. ದೇಶಬಂಧು ದಾಸರೂ, ಮಹಾತ್ಮಾ ಗಾಂಧಿಯವರೂ ನಿಜವಾದ ತ್ಯಾಗವೀರರು. ನಮ್ಮ ಸಮಾಜದಲ್ಲಿ ಧರ್ಮವೀರ ಶಂಕರಣ್ಣನವರೂ ತ್ಯಾಗವೀರ ಶಿರಸಂಗಿ ಲಿಂಗರಾಜ ಪ್ರಭುಗಳೂ ತ್ಯಾಗ ಬುದ್ಧಿಯಿಂದ ಕೀರ್ತಿಶೇಷರಾಗಿ ಹೋಗಿದ್ದಾರೆ. ಲೌಕಿಕರು ಭೋಗದಲ್ಲಿ ಆನಂದಬಡುವಂತೆ ಮಹಾತ್ಮರು ತ್ಯಾಗದಲ್ಲಿ ಹರ್ಷಗೊಳ್ಳುವರು. 'ಸ್ವಾರ್ಥೋಯಸ್ಯ ಪರಾರ್ಥ ಏವ ಸ ಪುಮಾನ್ ಲೋಕೇ ಸತಾಮಗ್ರಣೀ' ಅಂದರೆ ಲೋಕದಲ್ಲಿ ಪರೋಪಕಾರವೇ ತನ್ನ ಸ್ವಾರ್ಥವೆಂದು ತಿಳಿದು ವರ್ತಿಸುವಾತನೇ ಸಜ್ಜನಶ್ರೇಷ್ಠನು 'ಅಸ್ಥಿರಂ ಜೀವಿತಂ ಲೋಕೇ ಧರ್ಮಕೀರ್ತಿದ್ವಯಂ ಸ್ಥಿರಂ' ಅಂದರೆ ನಮ್ಮ ಜೀವಿತವು ಅಸ್ಥಿರವಾದದ್ದು; ಧರ್ಮ ಮತ್ತು ಕೀರ್ತಿಯನ್ನು ನಾವು ಗಳಿಸಿದರೆ ಅದೇ ಸ್ಥಿರವಾಗಿ ಉಳಿಯುತ್ತದೆ. ಯಾರಾದರೂ ಪ್ರಪಂಚ ಪರಿತ್ಯಾಗಮಾಡಿ ವೈರಾಗಿ ಬೂದಿಯನ್ನು ಬಡೆದುಕೊಂಡು ಹೊರಟರೆ ಅವನಿಗೆ ವೈರಾಗಿ ಅಥವಾ ಸನ್ಯಾಸಿಯೆಂದೆನ್ನುವರು. ಭಸ್ಮವನ್ನು ಧರಿಸುವದು ತ್ಯಾಗಬುದ್ಧಿಯ ಚಿಹ್ನೆವು. ವೀರಶೈವರಾಗಿ ದಾನಧರ್ಮ ಪರೋಪಕಾರಾದಿಗಳನ್ನು ಮಾಡಿದರೇನೇ ಅವರು ವಿಭೂತಿಧಾರಣ ಮಾಡಿದ್ದು ಸಾರ್ಥಕವು. ಇದು ಗೃಹಸ್ಥರಿಗೆ ಸಂಬಂಧಿಸಿದ ಮಾತು. ಯಾವದರ ಮೇಲೆಯೂ ಸ್ವಲ್ಪಾ ಆಶೆಯಿಲ್ಲದೆ ಸರ್ವಸಂಗ ಪರಿತ್ಯಾಗಮಾಡುವದೇ ಸನ್ಯಾಸಿಯ ಲಕ್ಷಣವು. ಸನ್ಯಾಸಿಗಳು ವಿಭೂತಿಯನ್ನು ಧರಿಸುವದೆಂದರೆ ಅಂಥ ವೈರಾಗ್ಯಸಂಪನ್ನರಾಗಬೇಕೆಂಬರ್ಥ ಹಿಂದಿನಕಾಲದ ಶಿವಶರಣರು ಗೃಹಸ್ಥರಾಗಿದ್ದರೂ ವೈರಾಗ್ಯಶಾಲಿಗಳಾಗಿ ಕಾಲಹರಣಮಾಡಿದರು. ಅವರು ತಮ್ಮ ಸಲುವಾಗಿಯಾದರೂ ನಾಳಿಗೆ ಬಂದೀತೆಂದು ಯಾವ ವಸ್ತುವನ್ನೂ ಸಂಗ್ರಹಿಸಿಡುತ್ತಿದ್ದಿಲ್ಲ. ಇಂದಿ

ನದು ನಾಳಿಗೆ ತಂಗುಳವೆಂದು ಭಾವಿಸುತ್ತಿದ್ದರು. 'ಇಂದಿಗೆಂದು ನಾಳಿಗೆಂದು ಚಿಂತಿಸಲೇಕೆ? ತಂದಿಕ್ಕುವ ಶಿವಂಗೆ ಬಡತನವೇ ರಾಮನಾಥಾ' ಎಂಬುದಾಗಿ ದೇವರ ದಾಸಿಮಯ್ಯನವರು ಹಾಡಿಕೊಂಡಿದ್ದಾರೆ. ನಮ್ಮ ಪುರಾತನರು ಧರ್ಮಕೀರ್ತಿಸಾಧನೆಗಾಗಿ ತ್ಯಾಗವನ್ನಾಚರಿಸುತ್ತಿದ್ದರು; ಅರ್ಥಾತ್ ಪರಿಶುದ್ಧಕಾಯಕದಿಂದ ಬಂದ ಹಣದಲ್ಲಿ ಗುರು ಲಿಂಗ ಜಂಗಮ ದಾಸೋಹವನ್ನು ಮಾಡಿ ಮಿಕ್ಕ ಪ್ರಸಾದವನ್ನು ತಾವು ಸೇವಿಸುತ್ತಿದ್ದರು. ಈಗಿನ ಭಕ್ತರು ಶಿವಶರಣರಂತೆ ಆಚರಿಸುವದು ವಿಹಿತ. ವಿರಕ್ತರು ಶ್ರೀ ಮುಪ್ಪಿನ ಷಡಾಕ್ಷರಿ ಮಹಾಸ್ವಾಮಿಗಳು ಹಾಡಿರುವ 'ಧರೆಯಸುಖದ ಭೋಗವೆನಗೆ। ಹರಿದುಹೋಗಲಯ್ಯ ನಿಮ್ಮ। ಚರಣಕಮಲದಲ್ಲಿ ಮನವು ಮಗ್ನವಾಗಲೈ'॥ ಮತ್ತು 'ಎನಗೆ ಭೋಗ ಭಾಗ್ಯ ಬೇಡ ಎನಗೆ ಜಪವು ತಪವು ಬೇಡ। ಎನಗೆ ನಿಮ್ಮ ತೊತ್ತು ಸೇವೆ ನಿತ್ಯವಾಗಲೈ'। ಈ ಎರಡು ಪದಗಳನ್ನು ಮೇಲ್ಪಂಕ್ತಿಯಾಗಿಟ್ಟುಕೊಂಡರೆ ವಿಭೂತಿಧಾರಣವಾಡಿದುದಕ್ಕೆ ಸಾರ್ಥಕವು. ಭಕ್ತರಲ್ಲಿ ದಾನ ಧರ್ಮಗುಣವೂ ಸ್ವಾಮಿಗಳಲ್ಲಿ ನಿರಾಶೆಯೂ ಹೆಚ್ಚಾದರೆ ನಮ್ಮ ವೀರಶೈವ ಸಮಾಜದೇಳ್ಗೆಗೆ ಕೊರತೆಯೇ?

'ಯದ್ಯದ್ವಿಭೂತಿ ಮತ್ಸತ್ವಂ ಶ್ರೀಮದೂರ್ಜಿತಮೇವವಾ।
ತತ್ತದೇವಾವಗಚ್ಛತ್ವಂ ಮಮ ತೇಜೋಂಶಸಂಭವಂ॥" ಎಂಬ ಗೀತಾವಾಕ್ಯದಂತೆ ಯಾವ ಯಾವ ವಸ್ತುವು ಜಗತ್ತಿನಲ್ಲಿ ಘನತೆಯನ್ನೂ ಸೌಭಾಗ್ಯವನ್ನೂ ಕೀರ್ತಿಯನ್ನೂ ಹೊಂದಿರುವದೋ ಅದೆಲ್ಲ ಸಾಕ್ಷಾತ್ ಪರಮಾತ್ಮನ ಅಂಶವೆಂದೇ ತಿಳಿಯಬೇಕು. ಮಹಾತ್ಮರಿಗೆ ವಿಭೂತಿಗಳೆಂತಲೂ ಹೆಸರು. ವಿಭೂತಿಗಳು ಪರಮಾತ್ಮನ ಅಂಶದಿಂದ ಹುಟ್ಟಿದವರೆಂದು ನಾವು ತಿಳಿಯುತ್ತೇವೆ. ಆ ವಿಭೂತಿಗಳು ಬೇಕಾದ ದೇಶದಲ್ಲಿ ಹುಟ್ಟಬಹುದು; ಬೇಕಾದ ಜಾತಿಯಲ್ಲಿ ಜನಿಸಬಹುದು. ನಾವು ವಿಭೂತಿಯನ್ನು ಧರಿಸುವದೆಂದರೆ ಆಯಾಯ ಮಹಾ ವಿಭೂತಿಗಳಲ್ಲರುವ ಉತ್ಕೃಷ್ಟ ಗುಣಗಳನ್ನು ಗ್ರಹಣ ಮಾಡಬೇಕೆಂಬರ್ಥ. ಶ್ರೀ ರಾಮ, ಕೃಷ್ಣ, ಭೀಷ್ಮ, ಧ್ರುವ, ಪ್ರಲ್ಹಾದ, ಕ್ರಿಸ್ತ, ಬುದ್ಧ, ಮಹಮ್ಮದ ಪೈಗಂಬರ, ಟಾಲ್‌ಸ್ಟಾಯ್, ಶ್ರೀರಾಮಕೃಷ್ಣಪರಮಹಂಸ, ಸ್ವಾಮಿವಿವೇಕಾನಂದ ಗ್ಯಾರಿಬಾಲ್ಡಿ, ಮಹಾತ್ಮಾಗಾಂಧಿ ಮೊದಲಾದ ಮಹಾ ವಿಭೂತಿಗಳ ಸದ್ಗುಣಗಳನ್ನಂಗೀಕರಿಸಿ ಅದರಂತೆ ಆಚರಿಸಿದರೆ ವಿಭೂತಿ ಧಾರಣ ಮಾಡಿದ್ದರ

ಶ್ರೇಯಸ್ಸು ನಮಗುಂಟಾಗುವದು. ಮಹಾತ್ಮರ ಹೆಜ್ಜೆ ಹಿಡಿದು ನಾವು ನಡೆದರೆ ನಾವೂ ಮಹಾತ್ಮರಾಗಬಲ್ಲೆವು. ನಮ್ಮನ್ನು ನೋಡಿ ಅನ್ಯರೂ ಬುದ್ಧಿಗಲಿಯುವರು. ಈ ವಿಷಯದಲ್ಲಿ ಲಾಂಗಫೆಲೋ ಎಂಬ ಆಂಗ್ಲ ಕವಿಯು ಹೇಳಿರುವದೇನೆಂದರೆ.

Lives of great men all remind us
We can make our lives sublime
And departing leave behind us
Foot prints on the sands of time.

ಮಹಾತ್ಮರ ಚರಿತ್ರಗಳು ನಾವೂ ಅದರಂತೆ ಉದಾರರಾಗಬೇಕೆಂಬದನ್ನು ನೆನಪಿಗೆ ತಂದುಕೊಡುತ್ತವೆ. ಅವರಂತೆ ನಾವು ಆಚರಿಸಿದರೆ ನಾವು ಸತ್ತಬಳಿಕ ನಮ್ಮ ಮುಂದಿನ ಪೀಳಿಗೆಯು ನಮ್ಮನ್ನು ಅನುಕರಣ ಮಾಡುವದು.

ವಿಭೂತಿಯ ಮಹತ್ವವೇನು? ಶರೀರಕ್ಕೆ ಆಭರಣಗಳನ್ನು ಧರಿಸಿಕೊಂಡರೆ ಕಾಯವು ಶೋಭಾಯಮಾನವಾಗಿ ಕಾಣುವಂತೆ ಹಣೆಗೆ ತ್ರಿಪುಂಡ್ರ ಧಾರಣ ಮಾಡಿದರೆ ಮುಖವು ಸಲಕ್ಷಣವಾಗಿಯೂ ತೇಜಃಪುಂಜವಾಗಿಯೂ ಕಾಣುವದು. ಬರೇ ಹಣೆಯಿದ್ದರೆ ಅಮುಂಗಳದ ಮಟ್ಟಿಯು ಸುರಿಯುತ್ತಿರುತ್ತದೆ. ಬಾಹ್ಮಣರಿಗೆ ಅಕ್ಷತೆಯೂ ನಿಡಿನಾಮವೂ ಒಪ್ಪುವಂತೆ ವೀರಶೈವರಿಗೆ ತ್ರಿಪುಂಡ್ರ ಧಾರಣವು ಪರಿಶೋಭಿಸುತ್ತದೆ. ಕೇವಲ ಊಟಕ್ಕೆ ಕೂಡ್ರವಾಗ ಮಾತ್ರವೇ ಬಾಹ್ಮಣರು ಅಕ್ಷಂತಿ ನಾಮಗಳನ್ನು ಧರಿಸುವಂತೆ ವೀರಶೈವರು ಧರಿಸುವದಿಲ್ಲ. ಅವರ ಮುಖದ ಮೇಲೆ ವಿಭೂತಿಯು ಮುಂಜಾನೆ ಎದ್ದಂದಿನಿಂದ ಹಿಡಿದು ರಾತ್ರಿ ಮಲಗುವ ವರೆಗೂ ವಿರಾಜಿಸುತ್ತದೆ. ಹುಟ್ಟಿದಂದಿನಿಂದ ಸಾಯುವ ವರೆಗೂ ಶೋಭಿಸುತ್ತದೆ. ಬರೇ ಚಂದವಾಗಿ ಕಾಣುತ್ತದೆಂದು ತಿಳಿದು ಘಣಿಗೆ ಭಸ್ಮ ಧಾರಣ ಮಾಡಿದರೆ ನಮ್ಮ ಕರ್ತವ್ಯವು ಪೂರೈಸಿದಂತಾಗಲಿಲ್ಲ. ನಾವು ಯಾವ ಉದ್ದಿಶ್ಯವಾಗಿ ಭಸ್ಮವನ್ನು ಧರಿಸುತ್ತೇವೆಯೋ ಆ ಉದ್ದೇಶವು ನೆರವೇರಿದಾಗಳೇ ಭಸ್ಮ ಧಾರಣವು ಸಫಲವಾದಂತಾಗುವದು. ಭಸ್ಮವನ್ನು ತಳೆಯುವದೆಂದರೆ ಕಾಮಕ್ರೋಧಾದಿ ಗುಣಗಳನ್ನು ಸುಟ್ಟು ಬೂದಿ ಮಾಡುವದು. ಕಾಮವೆಂದರೆ ಹೊನ್ನು ಹೆಣ್ಣು ಮಣ್ಣುಗಳ ಮೇಲಿನ ಆಶೆಯು. ಹೊನ್ನು ಹೆಣ್ಣು ಮಣ್ಣಿನಾಶೆಗಾಗಿ ಹಿಂದಕ್ಕೆ ಎಷ್ಟೋ ಜನರು ಹೇಳಹೆ

ಸರಿಲ್ಲದೆ ಹಾಳಾಗಿ ಹೋಗಿರುವರು; ಈಗ್ಯಾ ಕಾಲಾಗುತ್ತಲಿದಾರೆ, ಇನ್ನು ಮುಂದಾವರೂ ಹಾಳಾಗುವರು. ಇವುಗಳಿಗಾಗಿ ಕೊಲೆಸುಲಿಗೆಗಳೂ, ಯುದ್ಧಗಳೂ, ಅವಿಶ್ರಾಂತಿಯೂ ಹೆಚ್ಚುತ್ತವೆ. ತನ್ನಿಂದ ಹುಟ್ಟಿದ ಕ್ರೋಧಾಗ್ನಿಯು ತನ್ನನ್ನೇ ಸುಡುವದಲ್ಲದೆ ಅನ್ಯರನ್ನು ನಾಶಗೊಳಿಸಲಾರದು. ಆಕೆಯೇ ದಾಸತ್ವ; ನಿರಾಕೆಯೇ ಪ್ರಭುತ್ವ. ಯಾವದಾದರೊಂದು ವಸ್ತುವಿನ ಮೇಲೆ ನಮಗೆ ಆಕೆಯುಂಟಾದರೆ ನಾವು ಆ ವಸ್ತುವಿನ ಸಂಪಾದನೆಗಾಗಿ ಅವರ ದಾಸಾನುದಾಸರಾಗಬೇಕಾಗುತ್ತದೆ. ಮೋಹವು ಅಜ್ಞಾನದ ಕುರುಹು. ಯಾವದಾದರೊಂದು ವಸ್ತುವಿನ ಮೇಲೆ ನಮಗೆ ಮೋಹವುಂಟಾದರೆ ಆ ವಸ್ತುವು ನಷ್ಟವಾದ ಬಳಿಕ ನಾವು ದುಃಖಾಂಧಕಾರದಲ್ಲಿ ಮುಳುಗುತ್ತೇವೆ. ಮನುಷ್ಯನಿಗೆ ತನ್ನ ಪೈಸೊಕ್ಕು ತನಗೇ ಮುಳುವಾಗುತ್ತದೆ. ಗುರುಹಿರಿಯರನ್ನೂ ಬಂಧುಬಳಗದವರನ್ನೂ ಲೆಕ್ಕಿಸದೆ ಸ್ವೇಚ್ಛೆಯಿಂದ ನಡೆಯುವವನು ಅಪತ್ತು ಬಂದಾಗ ತನಗೆ ಯಾರೂ ನೆರವಾಗದಿದ್ದರೆ ಆ ಮೇಲೆ ಅತನಿಗೆ ಪಶ್ಚಾತ್ತಾಪವಾಗುತ್ತದೆ. ಅನ್ಯರ ಏಳ್ಗೆಯನ್ನು ನೋಡಿ ಸಹಿಸದೆ ನಾವು ಹೊಟ್ಟಿಕಿಚ್ಚು ಪಡುವದರಿಂದ ನಮ್ಮಲ್ಲಿ ತಾಪವು ಹೆಚ್ಚಿ ನಮ್ಮನ್ನೇ ವ್ಯಥೆಪಡಿಸುವದು. ಈ ಪ್ರಕಾರ ಕಾಮ, ಕ್ರೋಧ, ಮದ, ಮೋಹ, ಲೋಭ, ಮತ್ಸರಗಳು ನಮಗೆ ಪ್ರಬಲವಾದ ವೈರಿಗಳಾಗಿ ಗಂಟು ಬಿದ್ದಿರುವವು. ಇವು ನೈಸರ್ಗಿಕ ಗುಣಗಳಾಗಿರುವದರಿಂದ ಇವುಗಳನ್ನು ನಾಶಮಾಡುವದು ಯಾರಿಂದಲೂ ಶಕ್ಯವಿಲ್ಲ. ಇವುಗಳನ್ನಳಿಯುವದೆಂದರೆ ಇವುಗಳ ದುಷ್ಪ್ರವೃತ್ತಿಯನ್ನು ತೆಗೆದು ಹಾಕಿ ಒಳ್ಳೆಯದರ ಕಡೆಗೆ ತಿರುಗಿಸುವದು. ಈ ವಿಷಯದಲ್ಲಿ ಶ್ರೀ ಚನ್ನಬಸವಣ್ಣನವರು ಅಪ್ಪಣೆ ಕೊಡಿಸಿರುವದೇನಂದರೆ "ಶಿವಭಕ್ತಿಯುಳ್ಳವಂಗೆ ಕಾಮ ಬೇಕು, ಕ್ರೋಧ ಬೇಕು, ಲೋಭ ಬೇಕು, ಮದ ಬೇಕು, ಮತ್ಸರ ಬೇಕು; ಶಿವಭಕ್ತಿಯುಳ್ಳವಂಗೆ ಕಾಮ ಬೇಡ ಕ್ರೋಧ ಬೇಡ, ಲೋಭ ಬೇಡ, ಮೋಹಬೇಡ, ಮದ ಬೇಡ, ಮತ್ಸರ ಬೇಡ. ಬೇಕೆಂಬುವದಕ್ಕಾವ ಗುಣ? ಬೇಡವೆಂಬುವದಕ್ಕಾವ ಗುಣ? ಕಾಮಬೇಕು ಅಂಗದಲ್ಲಿ; ಕ್ರೋಧಬೇಕು ಕರಣಂಗಳಲ್ಲಿ, ಲೋಭಬೇಕು ಪಾದೋದಕ ಪ್ರಸಾದದಲ್ಲಿ, ಮೋಹಬೇಕು ಗುರುಲಿಂಗ ಜಂಗಮದಲ್ಲಿ; ಮದಬೇಕು ಶಿವಾಚಾರದಿಂ ಘನವಿಲ್ಲವೆಂದು; ಮತ್ಸರ ಬೇಕು ಹೊನ್ನು ಹೆಣ್ಣು ಮಣ್ಣಿನಲ್ಲಿ; ಇಂತೀ ಪಡ್ಗುಣವಿರಬೇಕು. ಬೇಡವೆಂಬುವದಕ್ಕಾವ ಗುಣ? ಕಾಮ ಬೇಡ ಪರಸ್ತ್ರೀಯರಲ್ಲಿ; ಕ್ರೋಧ ಬೇಡ ಗುರುವಿನಲ್ಲಿ; ಲೋಭ ಬೇಡ ತನು

ಮನ ಧನದಲ್ಲಿ; ಮೋಹ ಬೇಡ ಸಂಸಾರದಲ್ಲಿ; ಮದ ಬೇಡ ಶಿವಭಕ್ತರಲ್ಲಿ; ಮತ್ಸರ ಬೇಡ ಸಕಲ ಪ್ರಾಣಿಗಳಲ್ಲಿ; ಇಂತೀ ಪಡ್ಗುಣವ ಪರಿದು ನಡೆಯ ಬಲ್ಲೊಡೆ ಅತನೇ ಸಹಜ ಭಕ್ತ ಕಾಣಾ ಕೂಡಲ ಚನ್ನಸಂಗಮ ದೇವಾ" ಬಸವಪ್ಪ ಶಾಸ್ತ್ರಿಯು ಬರೆದ ಕನ್ನಡ ಶಾಕುಂತಲ ನಾಟಕದಲ್ಲಿ ಆರಿ ಷಡ್ವರ್ಗಗಳ ಪ್ರವೃತ್ತಿಯನ್ನು ಲೌಕಿಕರು ಒಳ್ಳೆಯದರ ಕಡೆಗೆ ಹೇಗೆ ತಿರುಗಿಸಬೇಕೆಂಬ ವಿಷಯದಲ್ಲಿ ಹೇಳಿರುವದೇನಂದರೆ—

"ಕಾಮ ನಿಜ ದಾರದೊಳು। ಕ್ರೋಧ ಸ್ತ್ರೀಮ ದುರ್ಮಾರ್ಗದೊಳು।
ಲೋಭದ ಸೀಮೆ ಪುಣ್ಯಾಂಗಳೊಳು। ಮೋಹವು ಸಾಧು ಜನರೊಡನೆ।
ಆ ಮಹಾ ಮದ ಗರ್ವಿತರೊಳು."

ವೀರಶೈವತ್ವಕ್ಕೆ ಮಂಗಲಸ್ವರೂಪವೂ, ಅರಿಷಡ್ವರ್ಗದ ವಿನಾಶಕಾರಿಯೂ, ತ್ಯಾಗಬುದ್ಧಿಯ ತವರುಮನೆಯೂ, ವಿಭೂತಿಗಳ ಗುಣರತ್ನಪ್ರದಾಯಿನಿಯೂ, ಆತ್ಮಯಜ್ಞದ ದ್ಯೋತಕವೂ ಆದ ವಿಭೂತಿಯ ಮಹಿಮೆಯು ಸಾಮಾನ್ಯವೇ? ಊದಿನ ಕಡ್ಡಿಯು ತನ್ನನ್ನು ತಾನು ಸುಟ್ಟುಕೊಂಡು ಬೂದಿಯಾಗಿ ಪರರಿಗೆ ಸುಗಂಧವನ್ನು ಬೀರುವದು. ಬೂದಿಯಾಗುವದು ಆತ್ಮ ಯಜ್ಞದ ಕುರುಹು. ಆ ಪವಿತ್ರವಾದ ಭಸ್ಮವನ್ನು ಧರಿಸುವ ವೀರಶೈವರು ಸಕಲ ಚರಾಚರ ವಸ್ತುಗಳ ಹಿತಾರ್ಥವಾಗಿ ಆತ್ಮಯಜ್ಞವನ್ನು ಮಾಡುವದೇ ಪರಮ ಶ್ರೇಯಸ್ಕರವಾದ ಕರ್ತವ್ಯವೆಂಬದನ್ನು ಎಂದಿಗೂ ಮರೆಯಬಾರದು. ಇವೆಲ್ಲ ಕಾರ್ಯಗಳು ಆಚರಣೆಯಲ್ಲಿ ಬಂದಾಗಲೇ ಭಸ್ಮಧರಿಸಿದ್ದಕ್ಕೆ ಸಾರ್ಥಕವು. ಕೇವಲ ಆಡಂಬರಕ್ಕಾಗಲಿ ಶೋಭೆಗಾಗಲಿ, ಅಂಧಶ್ರದ್ಧೆಯಿಂದಾಗಲಿ, ಧಾಳವಾಗಿ ವಿಭೂತಿಪಟ್ಟವನ್ನು ಬಡಿದುಕೊಂಡರೆ ಅದರಲ್ಲೇನೂ ಮಹತ್ವ ಉಳಿಯುವದಿಲ್ಲ.

ವಿಭೂತಿಯನ್ನೆಲ್ಲಿ ಧರಿಸಬೇಕು? ಶಾಸ್ತ್ರರೀತಿಯಿಂದ ವಿಚಾರಿಸಲಾಗಿ ಅಂಗುಷ್ಠದಿಂದ ಮಸ್ತಕದ ವರೆಗೂ ಸರ್ವಾಂಗವನ್ನು ಭಸ್ಮದಿಂದ ಸ್ನಾನಮಾಡಿಸಬೇಕೆಂದು ಹೇಳುವರು. ಆದರೆ ಜನರು ಸಾಧಾರಣವಾಗಿ ಹಣೆಗೂ, ಕೊರಳಿಗೂ, ತೋಳುಗಳಿಗೂ ಭಸ್ಮವನ್ನು ತೊಡೆದುಕೊಂಡು ನಂತರ ಲಿಂಗಕ್ಕೆ ಧರಿಸುವ ಪರಿಪಾಠವುಂಟು. ಮೊದಲು ಲಿಂಗಕ್ಕೆ ವಿಭೂತಿಯನ್ನು ಧರಿಸಿ ನಂತರ ತನ್ನ ಅಂಗಕ್ಕೆ ವಿಭೂತಿಯನ್ನು ಪೂಸಿಕೊಳ್ಳಲಾಗದು. ಮೊದಲು ತಾನು ಪರಿಶುದ್ಧನಾಗಿ ದೇವರ ಪೂಜೆಮಾಡುವದು ನೆಟ್ಟಗಲ್ಲವೇ? ತಾನು ಮೊದಲು ಉಂಡು ಹಿಂದುಗಡೆ ದೇವರಿಗೆ ನೈವೇದ್ಯ ಹಿಡಿಯಬಹುದೇ? ಅಂತೆಯೇ ರುದ್ರನಾಗಿ ರುದ್ರನ ಪೂಜೆ

ಮಾಡಬೇಕೆನ್ನುವರು. ರುದ್ರನಾಗಬೇಕೆಂದರೆ ಮೊದಲು ಭಸ್ಮೋದ್ಧೂಲಿತ ವಿಗ್ರಹನಾಗಬೇಕು. ನಮ್ಮ ಪೂರ್ವಜರು ಮೈಗೆಲ್ಲ ಭಸ್ಮವನ್ನು ಲೇಪಿಸಿ ಕೊಳ್ಳುತ್ತಿದ್ದುದರ ರಹಸ್ಯವೇನು? ಈಗಿನವರಂತೆ ನಮ್ಮ ಹಿರಿಯರು ಮೈತುಂಬ ಬಟ್ಟೆಗಳನ್ನು ಧರಿಸಿಕೊಂಡು ಗಾದಿ ತಕ್ಕ ಪಲ್ಲಂಗ ಶಾಲು ಮೊದಲಾದವುಗಳನ್ನುಪಯೋಗಿಸುತ್ತಿದ್ದಿಲ್ಲವೆಂಬಂತೆ ತೋರುತ್ತದೆ. ಅವರು ಋಷಿಗಳಂತೆ ಪರ್ಣಕುಟೀರಗಳಲ್ಲಿ ವಾಸವಾಗಿದ್ದುಕೊಂಡು ಜಟಾವಲ್ಕಲ ಧಾರಿಗಳಾಗಿ ಸನ್ಯಾಸವೃತ್ತಿಯಿಂದ ಜೀವಿಸುತ್ತಿರಬಹುದು. ಅಂತೆಯೇ ಅವಯ ತಮಗೆ ಚಳಿಯ ಬಾಧೆ ತಟ್ಟಬಾರದೆಂದು ಮೈತುಂಬ ಭಸ್ಮವನ್ನೂ ತಳೆದುಕೊಳ್ಳುತ್ತಿರಬಹುದು. ಅದೇ ಭಸ್ಮದಲ್ಲಿಯೇ ಅವರು ಪವಿತ್ರವಾದ ಭಾವನೆಯನ್ನು ಕಲ್ಪಿಸಿ ಶುದ್ಧಿಮಾಡಿ ವಿಭೂತಿಯೆಂಬ ಹೆಸರಿನಿಂದ ಕರೆಯಹತ್ತಿರಬಹುದು. ಅವರು ಗೋವುಗಳನ್ನು ಹಚ್ಚಾಗಿ ಸಾಕುತ್ತಿದ್ದಂತೆ ತೋರುತ್ತದೆ. ಅಂತೆಯೇ ಗೋವುಯದ ಕುಳ್ಳುಗಳಿಂದ ಬೆಂಕಿಯನ್ನು ಮಾಡಿ ಅವರ ಭಸ್ಮವನ್ನೇ ಮೈಗೆ ಹಚ್ಚಿಕೊಂಡು ಚಳಿಯ ಬಾಧೆಯನ್ನು ತಪ್ಪಿಸಿಕೊಳ್ಳುತ್ತಿದರು. ಆದುದರಿಂದ ಈಗ್ಯೂ ಸಹ ಗೋವುಯದ ಬೂದಿಯನ್ನೇ ಭಸ್ಮಕ್ಕಾಗಿ ಉಪಯೋಗಿಸಬೇಕೆಂದು ಹೇಳುವರು. ಆದರೆ ವೀರಶೈವ ಧರ್ಮವು ಸಮಾಜಸ್ವರೂಪವನ್ನು ಹೊಂದಿದ ಬಳಿಕ ವೈಯ್ಯೊಳಗಿನ ಉಷ್ಣತೆಯನ್ನು ಕಾಯ್ದುಕೊಳ್ಳಲಿಕ್ಕೆ ಬೇಕಾದಷ್ಟು ಸೌಕರ್ಯಗಳುಂಟಾಗಿದ್ದರೂ ಪೂರ್ವಜರ ಪವಿತ್ರವಾದ ರೂಢಾಚಾರವು ಇನ್ನೂ ಬಳಕೆಯಲ್ಲಿದೆ. ತಣ್ಣೀರು ಸ್ನಾನ ಮಾಡುವದರಿಂದ ವೈಯ್ಯೆಲ್ಲ ತಂಪಾದಂತಾಗಿ ಉಷ್ಣತೆಯು ಕಡಿಮೆಯಾಗುವದು. ಆಗ್ಗೆ ಮೈತುಂಬ ಭಸ್ಮವನ್ನು ಲೇಪಿಸಿಕೊಂಡರೆ ಒಳಗಿನ ಉಷ್ಣತೆಯು ಹೊರಗೆ ಹೋಗುವದಿಲ್ಲ. ಆರೋಗ್ಯ ದೃಷ್ಟಿಯಿಂದ ಭಸ್ಮಧರಿಸುವದು ಹಿತಕರವಾದಂತೆ ಆಧ್ಯಾತ್ಮಿಕ ದೃಷ್ಟಿಯಿಂದಲೂ ಫಲಪ್ರದವು. ಪಾತ್ರೆಗೆ ಭಸ್ಮವನ್ನು ತಿಕ್ಕಿದರೆ ಅದು ಲಕಲಕ ಹೊಳೆದು ಸ್ವಚ್ಛವಾಗುವಂತೆ ತನುವಿಗೆ ಭಸ್ಮವನ್ನು ತೊಡೆಯಲು ಅದು ಪರಿಶುದ್ಧವಾಗಿ ಕಂಗೊಳಿಸುವದು. ತನು ಶುದ್ಧವಾದರೆ ಮನಭಾವಗಳು ಕ್ರಮೇಣ ಪವಿತ್ರವಾಗತೊಡಗುವವು. ಭಸ್ಮವನ್ನು ತಳೆದ ಮೇಲೆ ಕಾಮ ಕ್ರೋಧಾದಿಗಳಿಗೊಳಗಾಗಬಾರದೆಂಬ ಭಾವನೆಯಿಂದ ಮನಸ್ಸು ಪವಿತ್ರವಾಗುವದು. ವಿಭೂತಿಯನ್ನು ಧರಿಸಿ ತಾನು ವಿಭೂತಿಯಾಗಿ ಮಹಾ ವಿಭೂತಿಯಾದ ಪರಮಾತ್ಮನಾಗಬೇಕೆಂಬ ಉದ್ದೇಶದಿಂದ ಭಾವನೆಯು ಪರಿಶುದ್ಧವಾಗುವದು.

ಬೂದಿಯಲ್ಲಿ ಏನೋ ಒಂದು ವಿಚಿತ್ರವಾದ ಶಕ್ತಿಯಿದ್ದಂತೆ ತೋರುತ್ತದೆ. ಕೆಲವರು ಬೂದಿಯಿಂದ ಬೇತಾಳವನ್ನು ಬಿಡಿಸುವರು. ಬೂದಿಯನ್ನು ಮಂತ್ರಿಸಿಕೊಟ್ಟು ರೋಗಾದಿಗಳನ್ನೂ ಬೇನೆ ಬೇಸರಿಕೆಗಳನ್ನೂ ಕಳೆಯುವರು. ಮನೆಯೊಳಗೆ ಚಿಕ್ಕಮುಕ್ಕಳು ಹಟಮಾಡಿ ಅತ್ತರೆ ತಾಯಿ ತಂದೆಗಳು ಒಲೆಯೊಳಗಿನ ಬೂದಿಯನ್ನು ಹುಡುಗರ ಮೋರೆಯ ಮೇಲೆ ನಿವಾಳಿಸಿ ಹೊರಗೆ ಚೆಲ್ಲುವರು. ವೈದ್ಯರು ಧಾತುಗಳಿಂದಲೂ ವನಸ್ಪತಿಗಳಿಂದಲೂ ಭಸ್ಮವನ್ನೂ ಕ್ಷಾರವನ್ನೂ ಸಿದ್ಧಗೊಳಿಸಿ ಅದನ್ನು ರೋಗಾದಿಗಳ ನಿವಾರಣಾರ್ಥವಾಗಿ ಉಪಯೋಗಿಸುವರು. ಗುಡಿಗುಂಡಾರದೊಳಗೆ ಧೂಪಾರ್ತಿಯಿಲ್ಲದ್ದ ಬೂದಿಯನ್ನೇ ಅಂಗಾರವೆಂಬ ಪೂಜ್ಯ ಭಾವನೆಯಿಂದ ತೆಗೆದುಕೊಂಡುಹೋಗಿ ಮನಸ್ಸಿನಲ್ಲಿ ಒಂದು ತರದ ಪ್ರಸನ್ನತೆಯನ್ನುಂಟುಮಾಡಿಕೊಳ್ಳುವರು. ರೋಗಿಯ ಕೈಕಾಲುಗಳು ತಣ್ಣಗಾಗಿ ಮನೆಯವರೆಲ್ಲರೂ ಗಾಬರಿಗೊಳ್ಳಲು ಅಂಗಾಲಿಗೆ ಮತ್ತು ಅಂಗೈಗಳಿಗೆ ಬೂದಿಯನ್ನು ತಿಕ್ಕಲಾಗಿ ಉಷ್ಣತೆಯು ಹುಟ್ಟುವದು. ಬೂದಿಯು ಸಹಾಯದಿಂದ ಮಂತ್ರತಂತ್ರಗಾರರು ಮಾಟ ಮೊದಲಾದ ಆಟಗಳನ್ನು ಹೂಡುವರು. ಅದೇ ಬೂದಿಯನ್ನೇ ವೀರಶೈವರು ಭಸ್ಮವನ್ನಾಗಿ ಮಾಡಿಕೊಂಡು ತಮ್ಮ ಇಷ್ಟಾರ್ಥವನ್ನು ಪಡೆದುಕೊಳ್ಳುವರು. ಆದರೆ ನಿಜವಾಗಿ ವಿಚಾರಮಾಡಲಾಗಿ ವಿಭೂತಿಯು ಬೂದಿಯೇ ಅಹುದು. ಅದರಲ್ಲೇನೂ ಅಂಥ ಸಾಮರ್ಥ್ಯವು ಇಲ್ಲವೇ ಇಲ್ಲ. ಆದರೆ ಭಿನ್ನ ಭಿನ್ನ ಜನರು ಭಿನ್ನ ಭಿನ್ನ ಭಾವನೆಯಿಂದ ಅದರಲ್ಲಿ ಶ್ರದ್ಧೆಯನ್ನಿಟ್ಟು ತಮ್ಮ ಇಷ್ಟದಂತೆ ಉಪಯೋಗಿಸಿಕೊಳ್ಳುತ್ತಿರುವದರಿಂದ ಅವರಲ್ಲಿ ಅಂಥ ಶಕ್ತಿಯು ಬರುತ್ತದೆಂಬ ಮಾತು ಸತ್ಯವು. ಭಾವನೆಯಲ್ಲಿಯೇ ಸತ್ವವಿರುತ್ತದೆ. ಆದರೆ ಇದರ ನಿಜವನ್ನು ನಾವು ಅರಿಯದೆ ಅದನ್ನು ಆ ವಸ್ತುವಿನ ಮೇಲೆ ಆರೋಪಮಾಡಲಿಕ್ಕೆ ಹೋಗುತ್ತೇವೆ. ವಸ್ತುವಿನಲ್ಲಿ ಅಲ್ಪಸ್ವಲ್ಪ ಶಕ್ತಿಯಿದ್ದರೂ ಅದರ ಎಷ್ಟೋ ಪಟ್ಟು ಸಾಮರ್ಥ್ಯವು ಭಾವನೆಯಲ್ಲಿರುತ್ತದೆ. ಎಂಥ ಔಷಧದಿಂದಲೂ ಗುಣವಾಗದ ಕೆಲವು ರೋಗಗಳು ಕೇವಲ ಭಾವನೆಯಿಂದ ಗುಣವಾದ ಉದಾಹರಣೆಗಳಿಷ್ಟೋ ಉಂಟು.

ಭಸ್ಮವನ್ನು ಹೇಗೆ ಸಿದ್ಧಗೊಳಿಸುವರು ಮತ್ತು ಅದನ್ನು ಹೇಗೆ ಶುದ್ಧಮಾಡುವರು? ಕೆಲವರು ಕಟ್ಟಿಗೆಯ ಬೂದಿ ಸುಣ್ಣ ಕಟಿಗ ಮುಂತಾದ ದ್ರವ್ಯಗಳಿಗೆ ಹದಹಾಕಿ ಭಸ್ಮದ ಘಟ್ಟಿಗಳನ್ನು ಸಿದ್ಧಗೊಳಿಸುವರು. ಇದು ತಪ್ಪುರಿಯು. ಇಂಥ ವಸ್ತುಗಳೆಲ್ಲ ಮೊದಲಿಗೇನೇ ನಮ್ಮಲ್ಲಿ ಪೂಜ್ಯಭಾವ

ನೆಯಿರುವದಿಲ್ಲವಾದ್ದರಿಂದ ಇವುಗಳಿಂದ ಸಿದ್ಧವಾಗಿ ಪಟ್ಟಿಗಳಲ್ಲಿ ಭಾವನೆಯನ್ನು ಕಲ್ಪಿಸಿಕೊಳ್ಳುವದು ಕಷ್ಟಸಾಧ್ಯವು ಕಣ್ಣಾರಾಣದೆ ಯಾವದೇ ಯಾಕಾಗಲೊಲ್ಲದು. ಭಕ್ತಿಯಿಂದ ಧರಿಸುವದೇ ದೊಡ್ಡದು ಎಂದು ತಿಳಿದಾದರೆ ಅಜ್ಞಾನಮಿಶ್ರಿತವಾದ ಈ ಶ್ರದ್ಧೆಯು ಒಳಿತಲ್ಲ. ತಿಳಿಯದೆ ಮಾಡುವದಕ್ಕಿಂತಲೂ ತಿಳಿದು ಮಾಡುವದರಲ್ಲಿ ಹೆಚ್ಚು ಶ್ರೇಯಸ್ಸಿರುತ್ತದೆ. ಗೋವುಗಳೆಲ್ಲ ಭಾರತೀಯರಿಗೂ ಅತ್ಯಂತ ಪೂಜ್ಯವಾದವುಗಳಷ್ಟೇ. ಗೋಮೂತ್ರ ಗೋಮಯಗಳು ಸಹ ಪವಿತ್ರವಾದವುಗಳೆಂದೇ ಎಣಿಸಲ್ಪಡುವವು. ಗೋಮೂತ್ರವು ಅಭಿಷೇಕಕ್ಕೆ ಬರುತ್ತದೆ; ಗೋಮಯದಿಂದ ಸಾರಿಸಿದ ಭೂಮಿಯು ಪವಿತ್ರಮಯವಾಗಿರುತ್ತದೆ. ಇಂಥ ಪವಿತ್ರವಾದ ಗೋಮಯದಿಂದ ಕುಳ್ಳುಗಳನ್ನು ಸಿದ್ಧಗೊಳಿಸಿ ಅವುಗಳ ಬೂದಿಯನ್ನು ಹದಗೊಳಿಸಿ ಶುಭ್ರವಾದ ಗಟ್ಟಿಗಳನ್ನು ಮಾಡಬೇಕು. ಗೋವಿನಮೇಲಿರುವಷ್ಟೇ ಪೂಜ್ಯಬುದ್ಧಿಯು ಗೋಮಯದಿಂದ ಸಿದ್ಧವಾದ ವಿಭೂತಿಯ ಗಟ್ಟಿಗಳಲ್ಲಿಯೂ ಹುಟ್ಟುವದು. ಅದು ಕಾರಣ ಪ್ರತಿಯೊಬ್ಬ ವೀರಶೈವರು ಭಸ್ಮವನ್ನು ಸಂಗ್ರಹಿಸಿಟ್ಟುಕೊಂಡಿರುವಂತೆ ಭಸ್ಮಕ್ಕೆ ಮೂಲಾಧಾರವಾದ ಗೋವುಗಳನ್ನೂ ಸಾಕಬೇಕೆಂಬದನ್ನು ಬೇರೆ ಹೇಳಬೇಕಾಗಿಲ್ಲ. ಭಸ್ಮಧಾರಿಗಳಾದವರೆಲ್ಲರು ಗೋರಕ್ಷಕರಾಗಿರಲೇಬೇಕು ಆಹಾರವನ್ನೂ ಬಟ್ಟೆಯನ್ನೂ ಮನೆಯಲ್ಲಿಯೇ ಸಿದ್ಧಪಡಿಸಿಕೊಳ್ಳುವದು ಪ್ರಾಪಂಚಿಕ ದೃಷ್ಟಿಯಿಂದ ಎಷ್ಟು ಹಿತಕರವೋ ಅಷ್ಟೇ ಭಸ್ಮವನ್ನು ಮನೆಯಲ್ಲಿಯೇ ಮಾಡಿಟ್ಟುಕೊಳ್ಳುವದಕ್ಕೆ ಗೋವುಗಳನ್ನು ಸಾಕುವದು ಆಧ್ಯಾತ್ಮಿಕ ದೃಷ್ಟಿಯಿಂದ ಕ್ಷೇಮಕರವಾಗಿದೆ. ತಾನು ಮಾಡಿದ ಭಸ್ಮಕ್ಕಿಂತಲೂ ಕೊಂಡುತಂದ ಭಸ್ಮದಲ್ಲಿ ಹೆಚ್ಚಿಗೆ ಭಕ್ತಿಯು ಹುಟ್ಟಲಾರದು; ಮತ್ತು ಅದು ಅಷ್ಟು ಪವಿತ್ರವೂ ಆಗಲಾರದು. ಪವಿತ್ರವಾದ ವಸ್ತುಗಳನ್ನು ಕ್ರಯಕ್ಕೆ ಹಚ್ಚುವದು ಲಾಂಛನಾಸ್ಪದವು. ಅದನ್ನು ಆಶೀರ್ವಾದಮಾಡುವದರಲ್ಲಿ ಹೆಚ್ಚು ಶ್ರೇಯಸ್ಸಿರುತ್ತದೆ. ಆದರಿಂದ ಪೀಠಕ, ಶಿವದಾರ, ವಿಭೂತಿ ಮುಂತಾದ ಅಪರೌಲ್ಯ ವಸ್ತುಗಳಿಗೆ ಬೆಲೆ ಕಟ್ಟಲಿಕ್ಕೆ ಹೋಗಬಾರದು. ೧ ಬಿಲ್ಲಿಯ ವಿಭೂತಿಗಿಂತಲೂ ೧ ರೂಪಾಯಿಯ ವಿಭೂತಿಯು ನೆಟ್ಟಗೆಂದು ತಿಳಿದರೆ ವಿಭೂತಿಯಲ್ಲಿ ಭೇದವನ್ನೆಣಿಸಿದಂತಾಗುವದು; ವ್ಯಾಪಾರೀ ಭಕ್ತಿಯುಳ್ಳವರಲ್ಲಿ ಪವಿತ್ರ ಭಾವನೆ ಎಂದಿಗೂ ಉಳಿಯುವದಿಲ್ಲ. ವೀರಶೈವ ಧರ್ಮವು ಪವಿತ್ರವೆಂದು ನಂಬುವ ಪದಾರ್ಥಗಳೆಲ್ಲವೂ ಪೂಜ್ಯರಿಂದ ಆಶೀರ್ವಾದ ರೂಪವಾಗಿಯೇ ಸಲ್ಲಬೇಕು.

ಒಂದುಹಾಡು!

ತನುವು ಶರಪುಂಜದಲಿ,
ಮನವು ದಿವಕಂಜದಲಿ,
ಹರಿಯುತಿದೆ! ಹರಿಯುತಿವೆ!! ಬಿದ್ದು, ಎದ್ದು!
ಬುದ್ಧಿಯುರಿಸಂಜೆನಲಿ,
ಭಾವವಹ! ಮಂಜಿನಲಿ,
ಬೀಳುತಿದೆ! ಸೀಳುತಿದೆ!! ತೊಳಲಿ, ಬಳಲಿ!
ಧ್ವನಿಯು ಒಳ್ಮೂಲೆಯಲಿ,
ನಾಡಿಯು ಮುಳ್ಬೀಲೆಯಲಿ,
ಅಂಟುತಿದೆ! ಕುಂಟುತಿದೆ!! ತಡೆದು, ಕೆಡೆದು!
ಈ ಧ್ವಾಂತದೂರ್ಮಿಯಲಿ,
ಕರ್ಮೈಯ ಪೇರ್ಮೆಯಲಿ
ನಿಂತ ಜ್ಞಾನವು ಹಳಚದೊಂದೆಮೆಯನು!
ಆಸೆಗಳು ಹರಿಯುತಿವೆ!
ಅವತೆಗಳು ತರಿಯುತಿವೆ!
ಒಂದೊಂದಕೂ ತಾಳಮೇಳವಿಲ್ಲ!
ಬಸಿರು ನವಶಕ್ತಿಗಿದೊ,
ಬಗೆಯು ಹೊಂಗನಸಿಗದೊ,
ಬಾಯ್ಬಪ್ಪರಿಸುತಿಹವು! ವ್ಯರ್ಥ! ವ್ಯರ್ಥ!!
ಸಾನುಭೂತಿಯು ಬಂದು
ಸಹಾಯ ಪೂರ್ತಿಗೆ ಸಂದು
ಮೆರೆಯುದಲೆ ಬಾಯೊಳೀ ಗೊಣಗುತಿಹುದು!
ನುಗಿಲ ಚಂದಿರನೆಡೆಗೆ
ಕಲ್ಪನೆಯು ಎದ್ದಿಹುದು!
ಪಾತಾಳದಾಳದೆಡೆ
ಚೇತನವು ಬಿದ್ದಿಹುದು!
ಹಾ! ನಿರಾಶೆಯು ನಡುವೆ ನಿಂತಿರುವದು!
ನೃತ್ಯವೆಸಗುತ ಮೃತ್ಯು ಮುಂತಿರುವದು!!

ಕೋಮಲತೆ.

೧

ವಿಶ್ವದೆಳೆತನದೊಳಗೆ
ಮುಗುಳುನಗೆ ಮೊಗದೊಳಗೆ
ನಲಿವ ಕೋಮಲತೆ, ಈಗಿರುವದೆಲ್ಲಿ?
ನಿನ್ನ ಕೈಸೋಂಕಿನಲಿ
ಮುಳ್ಳುಗಳ ಕೊಂಕಿನಲಿ
ಸೊಬಗೊಂದು ಚಿಗಿದು ಬಗೆಸೆಳೆವುದಲ್ಲೀ?

೨

ಎಳೆತನವು ಮರೆಯಾಗಿ
ಬೆಳವಣಿಗೆ ಹೊರೆಯಾಗೆ,
ಮೆಲ್ಲನೇ ಕಾಲ್ದೆಗೆಯುತೆನ್ನ ತೊರೆದೆ!
ಎಳೆತನವಿ ನಿನ ಕಂಡ
ಬಗೆಯಿಂದು ಬಲು ಬೆಂಡು!
ಬಾಳುವೆಯ ಸೊಬಗೆಲ್ಲ ಬರಿದು! ಬರಿದು!!

೩

ನೀನಿಲ್ಲದಲೆ ತಾಯೆ,
ಬೆಳೆದ ಜಗವಿದೊಬಾಯ
ಬಿಡುತಲಿದೆ! ಮತ್ತದಕೆ ನಗೆಯೂಡಿಸು!
ನಿನ್ನ ರಸದೊಳಗದ್ದಿ
ಜಗದ ಬಗೆಗಳ, ತಿದ್ದಿ,
ಮರಳಿ ನಿಜಸುಖದ ಸೊಬಗನು ಮೂಡಿಸು

ಶಿವಾನುಭವ ಗ್ರಂಥಮಾಲಾ ನಂ॥ ೪೦

ಅಂಬಿಗರ ಚೌಡಯ್ಯನ

ವಚನಗಳು.

ಸಂಪಾದಕರು

ರಾ॥ ಸಾ॥ ಫ. ಗು. ಹಳಕಟ್ಟಿ

ಬಿ. ಏ. ಎಲ್. ಎಲ್. ಬಿ. ವಕೀಲ.

ವಿಜಾಪುರ.

ಬೆಲೆ ೧೪ ಆಣೆ.

ಪ್ರಸ್ತಾವನೆ.

ಅಂಬಿಗರ ಚೌಡಯ್ಯನ ಈ ವಚನಗ್ರಂಥವನ್ನು ನಾವು ಬೇರೆ ಬೇರೆ ವಚನ ಸಂಗ್ರಹಗಳಲ್ಲಿ ದೊರೆದ ವಚನಗಳನ್ನು ಒತ್ತಟ್ಟಿಗೆ ಸಂಗ್ರಹಿಸಿ ಪ್ರಸಿದ್ಧಿಸಿದ್ದೇವೆ. ಈತನ ಸಮಗ್ರ ವಚನಗಳು ಒತ್ತಟ್ಟಿಗೆ ಎಲ್ಲಿಯೂ ಸಿಗುವದಿಲ್ಲ. ಅಂಬಿಗರ ಚೌಡಯ್ಯನ ವಚನಗಳೆಂದು ಅಚ್ಚುಹಾಕಿದ ಒಂದು ಪ್ರತಿಯು ಈಗ ದೊರೆಯುತ್ತಿದೆ. ಆದರೆ ಅದರಲ್ಲಿ ಕೆಲವು ವಚನಗಳು ಮಾತ್ರ ಈತನವು ಇದ್ದು ಉಳಿದವುಗಳೆಲ್ಲ ಬೇರೆ ಬೇರೆ ವಚನಕಾರರ ವಚನಗಳಿವೆ.

ನಮಗೆ ದೊರೆದ ವಚನಗಳನ್ನು ನಾವು ಶಕ್ಯವಿದ್ದಷ್ಟರ ಮಟ್ಟಿಗೆ ವಿಷಯಾನುಸಾರ ಸಂಗ್ರಹಿಸಿ ಈ ಪ್ರತಿಯನ್ನು ಸಿದ್ಧಪಡಿಸಿರುತ್ತೇವೆ. ಇದರಲ್ಲಿ ಪ್ರತಿಪಾದಿತವಾದ ವಿಷಯಗಳು ಪ್ರೌಢವೂ ಗಹನವೂ ಇರುತ್ತವೆ. ಆವು ಗಹನವಿದ್ದರೂ ಅವುಗಳನ್ನು ವಚನಕಾರನು ಅತ್ಯಂತ ಸ್ಫುಟವಾದ ರೀತಿಯಿಂದ ವಿವರಿಸಿರುತ್ತಾನೆ. ಅಂಬಿಗರ ಚೌಡಯ್ಯನ ವಚನಗಳು ವಚನ ಗ್ರಂಥಗಳಲ್ಲಿ ಅತ್ಯಂತ ಶ್ರೇಷ್ಠಸ್ಥಾನವನ್ನು ಹೊಂದಿರುತ್ತವೆ.

ಈ ವಚನಗಳಿಗೆ ಭಾವವನ್ನು ಬರೆಯುವದು ಬಹಳ ಅವಶ್ಯ ತೋರಿದ್ದರಿಂದ ಆ ಪ್ರಕಾರ ನಾವು ಪ್ರತಿಯೊಂದು ವಚನದ ಕೆಳಗೆ ಆದಷ್ಟು ಸಂಕ್ಷಿಪ್ತವಾಗಿ ಅದನ್ನು ಬರೆಯಲು ಪ್ರಯತ್ನಿಸಿದ್ದೇವೆ. ಈ ಮಹತ್ವದ ವಚನ ಗ್ರಂಥವು ಎಲ್ಲರಿಗೂ ಪ್ರಿಯವಾಗುವದೆಂದು ಹಾರೈಸಿದ್ದೇವೆ.

ವಿಜಾಪುರ
ತಾ॥ ೧೭-೩-೧೯೩೪

ಫ. ಗು. ಹಳಕಟ್ಟಿ
ಸಂಪಾದಕ.

ವದು. ಉಭಯತರೂ ಸಮಾನರೆಂದು ಭಾವಿಸಬೇಕೆಂದು ವಚನ
ಕಾರನ ಮುಖ್ಯ ಅಭಿಪ್ರಾಯವಿದೆ. ಜನರು ಮೊಲೆ ಮುಡಿ ಬಂದರೆ
ಹೆಣ್ಣೆನ್ನುವರು. ಗಡ್ಡ ಮೀಸೆ ಬಂದರೆ ಗಂಡೆನ್ನುವರು. ಉಭಯತರ
ಪ್ರಾಣವೆಲ್ಲವೂ ಅಷ್ಟದಳ ಪದ್ಮದಲ್ಲಿಯೇ ಸಂಚರಿಸುತ್ತದೆ! ಆದರೆ ಲಿಂಗಾಂಗಿ
ಗಳಾದ ಸ್ತ್ರೀಪುರುಷರು ಹೆಣ್ಣೂ ಅಲ್ಲ, ಗಂಡೂ ಅಲ್ಲ. ಯಾಕಂದರೆ
ಅವರ ಪ್ರಾಣವು ಅಷ್ಟದಳ ಪದ್ಮದ ಮಧ್ಯಸ್ಥವಾಗಿ ಅಲ್ಲಿಯೇ ವಾಸಿಸು
ತ್ತದೆ. ಈ ಬಗೆಯಾಗಿ ಆಚರಿಸುವ ಸ್ತ್ರೀಪುರುಷರಲ್ಲಿ ಭೇದಭಾವವನ್ನು
ಎಣಿಸಬಾರದೆಂದು ವಚನಕಾರನ ಮುಖ್ಯ ಅಭಿಪ್ರಾಯ. ಇದರ ನಿಜ
ಸ್ಥಿತಿಯನ್ನು ತಿಳಿಯುವದು ಶ್ರುತಿಗಳಿಗೆ ಸಹ ಆಗದೆಂದು ಇಲ್ಲಿ
ಅಂದಿದ್ದಾನೆ.

ಲಿಂಗಾಂಗ ಸಾಮರಸ್ಯ

ವಿವರಣೆ— ಲಿಂಗಾಂಗ ಸಾಮರಸ್ಯವು ವೀರಶೈವನ ಧ್ಯೇಯವಾಗಿರುವದು. ಷಟ್‌ಸ್ಥಲದ ಪ್ರಕಾರ ನಡೆದದ್ದಾದರೆ, ಈ ಸಾಮರಸ್ಯವು ನಿಶ್ಚಯವಾಗಿ ಒದಗುವದೆಂದು ವಚನಕಾರನ ಮತವು. ವೀರಶೈವಾಚರಣೆಯಿಂದ ಮನುಷ್ಯನ ಉತ್ತರೋತ್ತರ ವಿಕಾಸವು ಉಂಟಾಗುತ್ತ ಹೋಗಿ ಕಡೆಗೆ ಈ ಪರಿಪಕ್ವ ಸ್ಥಿತಿಯು ಪ್ರಾಪ್ತವಾಗುತ್ತದೆ. ಈ ಸ್ಥಿತಿಯು ಒದಗಿದ ಕೂಡಲೆ ಹುಟ್ಟುಮರಣಗಳು ಮನುಷ್ಯನಿಗೆ ಉಳಿಯುವದಿಲ್ಲ. ಈ ಪರಿಪಾಕ ಕಾಲದಲ್ಲಿ ಇಂಥಿಂಥ ಸ್ಥಲಗಳಿವೆ ಎಂದು ಗುರುತಿಟ್ಟು ಹೇಳಲಿಕ್ಕೆ ಬರಲಾರದು. ಲಿಂಗದ ಚಲನೆಯು ಅಥವಾ ಚೈತನ್ಯವು ಭಕ್ತನಲ್ಲಿ ಕ್ರಮೇಣ ಒಳಕೊಳ್ಳುತ್ತಹೋಗುವದು. ಮತ್ತು ಕಡೆಗೆ ಮನುಷ್ಯನು ಲಿಂಗವೇ ತಾನಾಗಿ ಅದರಲ್ಲಿ ಸಂಪೂರ್ಣ ಬೆರೆದವನಾಗಿ ಇಹ ಲೋಕ ಯಾತ್ರೆಯನ್ನು ಮುಗಿಸುವನು. ಇವೇ ಮೋಕ್ಷಪದವು, ಲಿಂಗಾಂಗ ಸಾಮರಸ್ಯವು, ಎಂದು ಹೇಳಲ್ಪಡುತ್ತದೆ.

ವಚನಃ— ೧೪೭. ಸ್ಥಲಂಗಳ ನೋಡಿ ಕಂಡಿಹೆನೆಂದಡೆ ಅಡಕಿಲ ಮಡಿಕೆಯಲ್ಲ. ಆಚಾರದಲ್ಲಿ ನೋಡಿ ಕಂಡಿಹೆನೆಂದಡೆ ಸಂಕಲ್ಪ ದೇಹಿಯಲ್ಲ ಆಗಮುಂಗಳಲ್ಲಿ ನೋಡಿ ಕಂಡಿಹೆನೆಂದಡೆ ಮಾತಿನ ಮಾಲೆಯವನಲ್ಲ. ತನುವ ದಂಡಿಸಿ ಕಂಡಿಹೆನೆಂದಡೆ ಬಂಧನದವನಲ್ಲ. ಯಾತರಲ್ಲಿಯೂ ತೊಡಕಿಲ್ಲದೆ ಸರ್ವವನೇ ತಿಗಳಿಯರೆ ಅಜಾತನಾಗಿ ನಿಂದವಂಗೆ ಆತನೇತರಲ್ಲಿಯೂ ಸುಖಿ ಎಂದನಂಬಿಗಚೌಡಯ್ಯ.

ಭಾವಃ— ಅನೇಕರು ಲಿಂಗಾಂಗ ಸಾಮರಸ್ಯ ಭಾವವು ಆಯಾಯ ಪೆಟ್ಟಿಲುಗಳನ್ನು ಅಥವಾ ಪಾವಟಿಗೆಗಳನ್ನು ಏರಿದ ಹಾಗೆ ಅದು ತಾನಾಗಿಯೇ ಬರುವದೆಂದು ತಿಳಿಯುವರು ಇದು ತಪ್ಪು ತಿಳಿವಳಿಕೆಯು. ಯಾಕಂದರೆ ಸ್ಥಲಗಳೆಂದರೆ ಅಡಕಿಲ ಮಡಕೆಗಳಲ್ಲ. ಮನುಷ್ಯನ ವಿಕಾಸಭಾವದಲ್ಲಿ ಅವನ ಎಲ್ಲ ಶಕ್ತಿಗಳು, ಅವನಿಗೆ ತಿಳಿಯದಂತೆ ಶ್ರೇಷ್ಠತೆಯನ್ನು ಹೊಂದುತ್ತ ಹೋಗುತ್ತವೆ. ಇದರಲ್ಲಿ ಕಣ್ಣಿಗೆ ಕಾಣುವಂಥ ಹೆಜ್ಜೆಗಳಿಲ್ಲ ಅಥವಾ ಪಾವಟಿಗೆಗಳಿಲ್ಲ ಇನ್ನು ಅನೇಕರು

ಬಾಹ್ಯ ಆಚರಣೆಗಳನ್ನು ಆಚರಿಸುತ್ತ ಆ ಕಡೆಯ ಪದವನ್ನು ಹೊಂದುವೆವೆಂದೆನ್ನುವರು. ಇದೂ ತಪ್ಪು ತಿಳುವಳಿಕೆಯು. ಯಾಕಂದರೆ ಸಾಮ್ಯಭಾವವು ಸಂಕಲ್ಪಿಸಿದ್ದಲ್ಲ. ಆದರೆ ಆಚಾರಗಳು ಕೇವಲ ಸಂಕಲ್ಪವಾತ್ರವಾಗಿರುತ್ತವೆ. ಇಂಥವುಗಳನ್ನು ಬರೇ ಕಠಿಣ ರೀತಿಯಿಂದ ಆಚರಿಸಿದರೆ ಸಾಮ್ಯಶೈತ್ಯವು ಪ್ರಾಪ್ತವಾಗಲಾರದು. ಅದೇ ಮೇರೆಗೆ ಇನ್ನು ಅನೇಕರು ಆಗಮಗಳನ್ನು ಓದಿ ಕಾಣುವೆವೆಂದು ಭರವಸೆ ತಾಳಿರುವರು ಇದೂ ತಪ್ಪು. ಯಾಕಂದರೆ ಪರಮಾತ್ಮನು ಮಾತಿನ ಮಾಲೆಯವನಲ್ಲ. ಬೇರೆ ಕೆಲವರು ಉಗ್ರ ತಪಸ್ಸು ಮಾಡಿ ಶರೀರವನ್ನು ದಂಡಿಸಿ ಅವನನ್ನು ದೊರಕಿಸುವೆವೆಂದು ಭಾವಿಸಿರುವರು ಇದೂ ತಪ್ಪಾದದ್ದು. ಯಾಕಂದರೆ ಪರಮಾತ್ಮನು ಇಂಥ ಬಂಧನಗಳಿಗೆ ಒಳಪಟ್ಟವನಲ್ಲ. ಒಟ್ಟಿಗೆ ಪರಮಾತ್ಮನು ಬಾಹ್ಯ ಸೃಷ್ಟಿಗೆ ತೊಡಕಿಕೊಂಡವನಲ್ಲ. ಆದ್ದರಿಂದ ಅವನು ಹೀಗೆ ಸಿಗಲಾರನು. ಅವನು ಹೀಗೆ ಸೃಷ್ಟಿಯಲ್ಲಿ ತೊಡಕಿಕೊಳ್ಳದಿದ್ದರೂ ಅದನ್ನು ಬಿಟ್ಟೂ ಇದ್ದವನಲ್ಲ. ಈ ರೀತಿಯನ್ನು ಅರಿತು ಮನುಷ್ಯನು ಷಟ್‌ಸ್ಥಲವನ್ನು ಆಚರಿಸಿದ್ದಾದರೆ, ಅವನಿಗೆ ಹುಟ್ಟುಸಾವುಗಳು ಉಳಿಯುವದಿಲ್ಲ. ಅವನು ಎಂಥ ಸ್ಥಿತಿಯಲ್ಲಿದ್ದರೂ ಸುಖಪಟ್ಟು ಲಿಂಗಾಂಗ ಸಾಮರಸ್ಯವನ್ನು ಹೊಂದುವನು. ಲಿಂಗಾಂಗ ಸಾಮರಸ್ಯಪ್ರಾಪ್ತಿಗೆ ಇದೇ ಹಾದಿಯು ಎಂದು ವಚನಕಾರನು ಇಲ್ಲಿ ಹೇಳಿರುವನು.

ಶೂನ್ಯ.

ವಚನಃ— ೧೪೮. ಗುರುವೆಂದೆಂಬೆನೆ? ಹಲಬರ ಮಗ. ಲಿಂಗವೆಂದೆಂಬೆನೆ? ಕಲುಕುಟಿಗನ ಮಗ. ಪ್ರಸಾದವೆಂದೆಂಬೆನೆ? ಒಕ್ಕಲಿಗನ ಮಗ. ಪಾದತೀರ್ಥವೆಂದೆಂಬೆನೆ? ದೇವೇಂದ್ರನ ಮಗ. ಈಸುವನು ಹಿಡಿಯಲಿಲ್ಲ ಬಿಡಲಿಲ್ಲ. ತನ್ನೊಳಗೆ ನೋಡೆಂದಾತ ನಮ್ಮ ಅಂಬಿಗರ ಚೌಡಯ್ಯನು.

ಭಾವಃ— ಅನೇಕರು ಗುರುವಿನಿಂದ ಪರಮಾತ್ಮನನ್ನು ಕಾಣುವೆವೆಂದು ಭಾವಿಸಿರುವರು. ಇದು ತಪ್ಪು ತಿಳುವಳಿಕೆಯು. ಯಾಕಂದರೆ ಗುರುವು ಬೇರೆ ಜನರಂದ ಉತ್ಪನ್ನನಾಗಿರುವನು. ಅವನಿಗೆ ಮೂಲವಿದೆ. ಹೀಗೆ ಜಾತನಾದವನು ಅಜಾತನನ್ನು ತೋರಿಸುವ ಬಗೆ ಹೇಗೆ? ಹಾಗೆಯೇ ಅನೇಕರು ಲಿಂಗದಿಂದ ಪರಮಾತ್ಮನನ್ನು ಕಾಣುವೆವೆಂದು ಭಾವಿಸಿರುವರು. ಇದೂ ತಪ್ಪು. ಲಿಂಗವು ಕಲ್ಲುಕುಟಿಗನಿಂದ ಹುಟ್ಟಿದ್ದು. ಇಂಥದು ಅಜಾತನನ್ನು ತೋರಿಸುವದು ಅಶಕ್ಯವು. ಬೇರೆ ಅನೇಕರು ಪ್ರಸಾದವನ್ನು ಸೇವಿಸಿ ಪರಮಾತ್ಮನನ್ನು ಕಾಣುವೆವೆಂದು ಭಾವಿಸಿರುವರು. ಇದೂ ತಪ್ಪು. ಯಾಕಂದರೆ ಈ ಪ್ರಸಾದವು ಒಕ್ಕಲಿಗನು ಕಷ್ಟಪಟ್ಟು ದುಡಿದದ್ದರಿಂದ ಹುಟ್ಟಿದ್ದು. ಇಂಥದು ಪರಮಾತ್ಮನನ್ನು ತೋರಿಸಲಾರದು. ಬೇರೆ ಅನೇಕರು ಪಾದೋದಕವನ್ನು ಸ್ವೀಕರಿಸಿ ಪರಮಾತ್ಮನನ್ನ ಕಾಣುವೆವೆಂದು ಅನ್ನುವರು. ಇದೂ ತಪ್ಪು ತಿಳುವಳಿಕೆಯು. ಯಾಕಂದರೆ ಈ ಪಾದೋದಕವು ಇಂದ್ರನಿಂದ ಉತ್ಪನ್ನವಾದ ನೀರು ಇರುತ್ತದೆ. ಇದು ಪರಮಾತ್ಮನನ್ನು ತೋರಿಸಲಾರದು. ಆದರೆ ಈ ಬಗೆಯ ಪದಾರ್ಥಗಳನ್ನು ಮನುಷ್ಯನು ಹಿಡಿಯಲೂ ಬಾರದು, ಬಿಡಲೂ ಬಾರದು. ಈ ರೀತಿಯನ್ನು ಷಟ್‌ಸ್ಥಲದ ಮೂಲಕ ಅರಿದು ಮನುಷ್ಯನು ಆಚರಿಸಬೇಕು. ಆಚರಿಸಿದ್ದಾದರೆ ತನ್ನೊಳಗೆ ಅರಿವು ಉತ್ಪನ್ನವಾಗಿ ಪರಮಾತ್ಮನನ್ನು ತನ್ನಲ್ಲಿಯೇ ಕಾಣುವನೆಂದು ಅಂಬಿಗರ ಚೌಡಯ್ಯನು ಇಲ್ಲಿ ಹೇಳಿರುವನು.

ವಚನಃ— ೧೪೯. ಎಲ್ಲರೊಳಗೆ ಗೆಲ್ಲ ಸೋಲಕ್ಕೆ ಹೊರಬಂದನೆ? ಬೆಲ್ಲವ ಮೆದ್ದಡೆ ತಮ್ಮ ತಮ್ಮ ಬಾಯಲ್ಲಿಗೆ ಸಿಹಿ. ಬಲ್ಲವನಾದ ಮೇಲೆ ನಾಡೆಲ್ಲರೂ ಕೂಡಿ ಬಾಳದ ಹೆಣ್ಣಿಂಗೆ ನ್ಯಾಯವನಾಡುವಂತೆ ಅರಿದರಿವಿಂಗೆ ಮರೆದ ಮರವೆಗೆ ತನ್ನಲ್ಲಿದ್ದು ಕಂಗೊಂಡವನೇ ಸಾಕ್ಷಿ ಎಂದ ನಂಬಿಗಚೌಡಯ್ಯ.

ಭಾವಃ— ಲಿಂಗಾಂಗ ಸಾಮರಸ್ಯತ್ವವನ್ನು ಹೊಂದಿದವನು ಎಲ್ಲರಿಗೆ ಸಂಬಂಧಿಸಿದ ಗೆಲವು ಮತ್ತು ಸೋಲು ಇವುಗಳನ್ನು ಹೊಂದಿರುವದಿಲ್ಲ. ಅವುಗಳಿಗೆ ಅವನು ಮೀರಿರುತ್ತಾನೆ. ಮನುಷ್ಯನು ಒಂದು ಪದಾರ್ಥವನ್ನು ರುಚಿಸುವದೇನೋ ನಿಜವು. ಆದರೆ ಅದರ ರುಚಿಯು ಅವನಿಗೇ ಗೊತ್ತು. ಇತರರು ಅದನ್ನು ಅರಿಯಲಾರರು. ಜ್ಞಾನಿಯಾದವನು ಸ್ವತಂತ್ರನು. ಹ್ಯಾಗೆ ಬಾಳ್ವೆ ಮಾಡಲು ಒಪ್ಪದ ಹೆಣ್ಣು ಸ್ವತಂತ್ರಳೋ ಹಾಗೆಯೇ ಅವನು ಸ್ವತಂತ್ರನು. ಇಂಥ ಹೆಣ್ಣನ್ನು ಸಂಸಾರಕ್ಕೆ ಹಚ್ಚಬೇಕೆಂದು ನಾಡೆಲ್ಲ ಕೂಡಿ ಹೇಳಿದರೂ ಹ್ಯಾಗೆ ಅಶಕ್ಯವೋ ಹಾಗೆಯೇ ಜ್ಞಾನಿಯನ್ನು ಸಂಸಾರಕ್ಕೆ ಹಚ್ಚಬೇಕೆಂದು ಪ್ರಯತ್ನಿಸಿದರೆ ಅದು ಅಶಕ್ಯವು. ಲಿಂಗಾಂಗ ಸಾಮರಸ್ಯವನ್ನು ಹೊಂದಿದವನಿಗೆ ಅವನ ಅರಿವು ಮತ್ತು ಅವನ ಮರವು ಅವನಲ್ಲಿಯೇ ಲಯವಾಗುವವು. ಹೀಗೆ ಲಯವಾದದ್ದನ್ನು ತಿಳಿಯುವವನು ಅವನೇ ಹೊರ್ತು ಹೆರರು ಅಲ್ಲ ಎಂದು ವಚನಕಾರನು ಹೇಳಿರುವನು.

ವಚನಃ— ೧೫೦. ಗಿಳಿ ಇಲ್ಲದೆ ಹಂಜರ ಹಲವು ಮಾತನಾಡಬಲ್ಲುದೇ? ದೇವರಿಲ್ಲದ ದೇಗುಲಕ್ಕೆ ಮಂತ್ರಾಭಿಷೇಕ ಉಂಟೇ? ಅರುಹು ನಷ್ಟವಾಗಿ ಕುರುಹಿನ ಹಾವಜೆಯನರಿಯನೆಂದಾತ ನಮ್ಮ ಅಂಬಿಗರ ಚೌಡಯ್ಯನು.

ಭಾವಃ— ಸಾಮರಸ್ಯ ಭಾವವು ಒದಗಿದಲ್ಲಿ ಗಿಳಿ ಇಲ್ಲದ ಪಂಜರ ದಂತಾಗುವದು. ಆಗ ಇಂಪಾದ ಶಬ್ದವು ಹೊರಡದು. ದೇವರಿಲ್ಲದ ದೇಗುಲದಂತೆ ಆಗುವದು. ಆಗ ಮಂತ್ರಾಭಿಷೇಕವಿಲ್ಲ. ಅರುಹು ನಷ್ಟವಾಗುವದು, ಕುರುಹೂ ಹೋಗಿಬಿಡುವದು. ಇದೇ ಶೂನ್ಯ ಸ್ಥಿತಿಯು.

ಕಂಡುದೆಲ್ಲಂ ಶಿವನ ಚಂದನಕೆ ತೀರಲ್ಕೆ
ಇನ್ನಿದೇತರ ತಾಳಿ ನೇಮವರಿದಾಗುತಿರೆ
ಇನ್ನಿದೇತರ ಬಾಳ್ಕೆ ಚಂದನಂ ಸಲ್ಲದಿರೆ

ಎಂದು ಪಶುವಿನ ಕೊರಲ ಪಾಶವಂ ಪರಿವಂತೆ
ನಿಂದು ಸಂಸಾರ ವಿಸ್ತಾರವಂ ಪರಿವಂತೆ
ಹರಿದನಾಗಳೆ ತಾಳಿಯುಂ ಕುಲದ ಪಾಳಿಯುಂ
ಮರೆದನಾಗಳೆ ಲಜ್ಜೆಯುಂ ಐರದಾಳಿಯುಂ
ತಂದು ಮಾರಿದನ್ನೆದು ಹಣವಿಂಗೆ ಸಂತಸದಿ
ಚಂದನವನೆಯ್ದೆ ಕೊಂಡಂ ಮನೆಗೆ ಚಿಂತಿಸದೆ
ಉಪವಾಸದಿಂ ಬಂದು ಚಂದನಮನೀಯುತುಂ
ಕೃಪೆ ಮಾಡು ಶಿವ ಎನುತೆ ನೇಮವಂ ಸಲಿಸುತುಂ
ಪತ್ತೈದು ದಿನದ ನೇಮಂ ಸಂದುದಾತಂಗೆ
ಪತ್ತೈದು ದಿನದುಪಾಸಂ ಪತ್ತಿತಾತಂಗೆ

ಆಗ ಶಿವನಲ್ಲಿಗಯ್ತಂದು ಭಕ್ತಂ ನಿಂದು
ಏಗೈವೆನಭವ ಗಂಧಂ ತೀರಿತಿನ್ನೆಂದು
ನಾಳಿಂಗೆ ನೇಮಕ್ಕೆ ಗಂಧವಿನಿತಿಲ್ಲಯ್ಯ
ಶೂಲಿ ನಿನ್ನಯ ಚಿತ್ತವಿರ್ದಂತೆ ಮಾಡಯ್ಯ
ಎಂದೆನುತ್ತುಂ ಮನೆಗೆ ಬಂದಿರುಳ್ಪಟ್ಟರಲ್
ಚಂದನದ ನೇಮದೊಳ್ನಿರೆಮನಂ ಮುಟ್ಟಿರಲ್
ಕನಸಿನೊಳ್ಪಂದೀಶ್ವರಂ ನುಡಿದನಾತಂಗೆ
ಮನಸಿನೊಳ್ಕತ್ತೊಂದನರಿಯದ ಮಹೇಶಂಗೆ
ಚಂದನಕ್ಕುಮ್ಮಳಿಸಲೇಕೆ ನೀನೆಲೆ ಮಗನೆ
ಚಂದನಂ ನಿನ್ನ ಮೊಳಕೆಯ್ಯಲಾಗದೆ ಮಗನೆ

ಎನಲೆಳ್ದು ಬೆಳಗಾಗೆ ನೆನೆದು ನೋಡಿದನಂದು
ಕನಸಿನೊಳಗೀಶ್ವರಂ ಬೆಸಸಿದನಿದೇನೆಂದು
ಮೊಳಕೆಯ್ಯನಲ್ಲಿ ಮೆಲ್ಲನೆ ಮುಟ್ಟಿ ನೋಡುತಂ
ತಿಳಿಯದಿದು ಗಂಧವಿಲ್ಲಿಲ್ಲಿನುತೆ ಬಾಡುತಂ

ನೋಡುವೇಂ ತೇವೆನಿಂತಿದು ಗಂಧವಾಗದೊಡೆ
ಮಾಡುವೇಂ ಹೊಸ ಪರಿಯನೊಳ್ಗಂಪಿದಾಗದೊಡೆ

ಎನುತೆ ಬಂದಂ ಬಂದನಂದು ಶಿವನಿಳಯಕ್ಕೆ
ಮನಸಿಜ ಹರಂ ನೋಡುತಿರೆ ಶಿವನಿವಾಸಕ್ಕೆ
ಬಂದಿದೇನೆನ್ನ ಮೊಳಕೆಯ್ಯಮಂ ತೇಯ್ಯೆಂದೆ
ಚಂದನವಿದಪ್ಪುದೇ ಹೇಳಯ್ಯ ಎಲೆ ತಂದೆ
ಅದಕೇನೆನುತ್ತೆ ಮಜ್ಜನಕೆರೆದನಂತರಂ
ಮುದದಿಂದೆ ತೊಳೆದನಾ ಸಾಣೆಕಲ್ಲಂ ಕರಂ
ದೇವನಂ ನೋಡುತುಂ ಪೊಳಕೆಯ್ಯ ತೊಳೆವುತುಂ
ಭಾವದೊಳ್ವೀರರಸದಗ್ಗಳಿಕೆ ಏರುತುಂ
ದೇವಾ ಇದೇನೆಂದೆ ಚರ್ಮವಲ್ಲಾ ತಂದೆ
ದೇವಾ ಇದೇನೆಂದೆ ನೆತ್ತರಲ್ಲಾ ತಂದೆ
ನೋಡುವೇಂ ತೇದು ನೋಡುವೆನಿದರ್ಕೇಂ ಎನುತೆ
ನೋಡಿಕೊಳ್ವೆಂ ಕೊಳ್ವೆನಿಲ್ಲಿ ಬಳಿಕೇನೆನುತೆ
ಹರಭಕ್ತಿಗೊಲ್ದೆಳಸಿ ಕೆಯ್ಯಿಕ್ಕುವಂದದಿಂ
ಪರ ಮುಕ್ತಿಗೊಮ್ಮಳಂ ಮಿಗಿಲಿದೆಂಬಂದದಿಂ
ಕುಸಿದು ಮೊಳಕಾಲಿಕ್ಕಿ ಬಲದ ಮೊಳಕೆಯ್ಯೂರಿ
ಎಸೆವ ಮಣಿಕಟ್ಟನೆಡಗೆಯ್ಯಿಂ ಪಿಡಿದು ಮೀರಿ
ಕೊಂಕಿರ್ದ ಚಿತ್ತಮುಂ ವೃತ್ತಮುಂ ಮಾಳ್ಪಂತೆ
ಶಂಕರನನರ್ಚಿಸಲ್ಕೈಗೆ ಬೆಸನೀವಂತೆ
ಕೆಯ್ಯ ಮೇಲೇ ಗಂಧವಂ ಪಡೆಯಲೋಸುಗಂ
ಕೆಯ್ಯ ಮೇಲೇ ಭಕ್ತಿಯಂ ಪಡೆಯಲೋಸುಗಂ
ತೇದನೊಲವಿಂದೆ ಮೊಳಕೆಯ್ಯನಾನಂದದಿಂ
ಸಾದರಂ ಮಿಗೆ ಶಿವನನರ್ಚಿಪುದ್ಯೋಗದಿಂ
ತೇಯೆ ಕೆಯ್ತೀದು ಪಲ್ಲವಿಸಿತ್ತು ಪರಿಮಳಂ

ತೇಯೆ ಬಾವನ್ನಮಂ ಮೀರಿತ್ತು ಪರಿಮಳಂ
ಹರಿವುತಿರ್ಪುದು ಕರಂ ನೆರೆವುತಿರ್ಪುದು ಗಂಧ
ಒರೆವುತಿರ್ಪುದು ಶಿವನ ಭಕ್ತಿ ಪರಿಮಳ ಗಂಧ

ಇಂತಿರಲ್ಕಾಣುತೊಲಘಾಂಡಮೂರ್ತಿಗಳಂದು
ಇಂತು ಕೆಟ್ಟಿನೆ ಇನಿತು ಕಾಲವರಿಯದೆ ಬೆಂದು
ಮುನ್ನವೇ ಹೇಳದಿಂತಿರ್ಪರೇ ಶಂಕರಾ
ಇನ್ನೆವರವಿನಿತು ಸವೆದೇಂ ವೃಥಾ ಶಶಿಧರಾ
ಹೊರಗೆ ಗಂಧವನೆಳಸಿ ಯಾನಿಂತು ಕೆಟ್ಟೆನೇ
ನೆರೆ ತೇದುಕೊಂಡು ನಾ ನಿನಗಾಗಿ ಸವೆದೆನೇ
ಬಲ್ಲೆನರಿದೆಂ ದೇಹವುಳ್ಳನ್ನೆಗಂ ತೇಪೆ
ಒಲ್ಲೆನೊಲ್ಲೆಂ ಬೇರೆ ಗಂಧಮುಮನಾನೀಪೆ
ಎನುತೆ ಕೆಯ್ಯಂ ಸಪುರ ಸೀರೆಯಿಂ ಮುದ್ರಿಸಲ್
ಮನಸಿಜಹರಂ ದಯಾಮುದ್ರೆಯಂ ಪಡಿಲಿಸಲ್

ತೋರಿತ್ತು ಶಿವಲಿಂಗದೊಳಗೆ ಶರ್ವನ ರೂಪು
ಮೀರುತಿರ್ದುದು ಸದಾಶಿವನಂಗದೊಳ್ರೂಪು
ದಶಭುಜಂ ಪಂಚವಕ್ತ್ರಂ ತ್ರಿನೇತ್ರಂಗಳಂ
ಶಶಿಕಲೆ ಜಟಾಭರಂ ನಾಗಾಜಿನಂಗಳಂ
ಬೆಳಗುತಿರೆ ರವಿಕೋಟಿ ತೇಜಮುಂ ಮುಸುಳಿಸುತೆ
ತೊಳಗುತಿರೆ ಶಶಿಕೋಟಿ ತೇಜಮುಮನೇಳಿಸುತೆ
ಅಲ್ಲಿ ಶಿವನೊಲಘಾಂಡಮೂರ್ತಿಯಂ ತೆಗೆದಪ್ಪಿ
ಸಲ್ಲೀಲೆಯಿಂದೆ ಕೊಂಡಾಡುತ್ತೆ ಯಮರ್ದಪ್ಪಿ
ನೋಡಯ್ಯ ನಂದೀಶ ಎನ್ನ ಸದ್ಭಕ್ತನಂ
ನೋಡ ಮೊಳಕೆಯ್ಯ ಗಂಧವನಿತ್ತ ಭಕ್ತನಂ
ಹರವರಿಯ ಭಕ್ತಿಯಂ ಸವಿಗಂಡ ಭಕ್ತನಂ
ಉರವಣಿಪ ನಿಷ್ಠೆಯಂ ಕೆಯ್ಕೊಂಡ ಭಕ್ತನಂ
ತನ್ನ ವಧುವಿನ ತಾಳಿಯಂ ಹರಿದರಿಂತುಂಟಿ
ಎನ್ನ ನೇಮಕ್ಕೆ ತನ್ನಂ ಸವಿಸಿದವರುಂಟೆ

ಎಂದೆನುತೆ ನವ ವಿಮಾನದೊಳಾತನಂ ಪುಗಿಸಿ
ತಂದು ದಿವ್ಯಾಭರಣ ಜಾಲದಿಂ ಸಿಂಗರಿಸಿ
ಪೂಮಳೆಗಳೆರಗಿ ದುಂದುಭಿನಾದಮುಣ್ಮುತಿರೆ

ವ್ಯೋಮಕ್ಕೆ ನೆಗೆದನೀ ಧರಣಿ ಬೆರಗಾಗುತಿರೆ
ಬಂದು ಕೈಲಾಸನುಂ ಹರುಷದಿಂದಂ ಪೊಕ್ಕು
ಮುಂದಣರಮನೆಯ ಪುಗುತುಂ ವಿಗೆ ಮನಂ ವಿಕ್ಕು
ಮಡಿಖಚಿತ ಸಿಂಹಾಸನಾರೂಢನಾಗಿರ್ದು
ಗಣ ಸಮೂಹದ ನಡುವೆ ನಲವಿಂದೆ ಕುಳ್ಳಿರ್ದು
ಒಲಘಾಂಡ ಮೂರ್ತಿಗಂ ಗಣಪದವಿಯಂ ಕೊಟ್ಟ
ಲಲನೆ ಗಿರಿಜೆಗೆ ಪೇಳ್ದ ಹರುಷದಿಂ ಮುಂದಿಟ್ಟ
ಮೊಳಕೆಯ್ಯ ಮುದ್ರೆಯುಂ ಬಿಡಿಸಿ ತಲೆದೂಗುತಂ
ತಳೆದ ಪುಳಕಂಗಳಿಂ ದಳವೇರಿ ಬೀಗುತುಂ
ಪಂಚಶರ ಮತ್ತಗಜ ಪಂಚಮುಖನೊಪ್ಪಿದಂ
ಪಂಚಾಕ್ಷರೀ ಗೇಹನೆನಿಪ ಶಿವನೊಪ್ಪಿದಂ
ಅತಿ ಬಲ ಜಲಂಧರಾಸುರವಿಜಯನೊಪ್ಪಿದಂ
ಶ್ರುತಿಗತಕರ್ಯ್ಯಂ ಶರಣಸನ್ನಿಹಿತನೊಪ್ಪಿದಂ
ಅಪ್ರತಿಮನತುಳಬಳನತ್ಯುಗ್ರನೊಪ್ಪಿದಂ
ಅಪ್ರತಿಹತ ಪ್ರಬಳ ಪುಣ್ಯನಿಧಿಯೊಪ್ಪಿದಂ
ಶರಣಜನಕಮಳವಿಮಳಾರ್ಕನೊಪ್ಪಿದಂ
ಶರಣಕುಲಕುಮುದವನ ಪೂರ್ಣೇಂದು ಒಪ್ಪಿದಂ
ಶ್ರೀ ಮಹಾಮಹಿಮನಾದ್ಯಂತಹರನೊಪ್ಪಿದಂ
ಕಾಮಾರಿ ಹಂಪೆಯ ವಿರೂಪಾಕ್ಷನೊಪ್ಪಿದಂ

ಕಂದ॥ ಮೊಳಕೆಯ್ಯಗಂಧಮುಂ ತಾ
ನಳವಳಿಯದೆ ತೇದು ನೇಮಮುಂ ಸಲಿಸಿದ ನಿ
ರ್ಮಳನೊಲಘಾಂಡ ಶಿಶುವೆಂ
ದಿಳೆಯೊಳ್ಕರುಣಿಸುಗೆ ಹಂಪೆಯ ವಿರೂಪಾಕ್ಷಂ ॥

ಮುರುಘರ ಮಹಾತ್ಮೆ.

ಕಂದ॥ ಶಿವನಪ್ರತಿಮುಂಭರ್ಗಂ
ಭವನನುಪಮದಾನಿಶಶಿಕಳಾಧರನಗಜಾ
ಧವನೊಲ್ದುಂಮೆರೆದುನಮಃ
ಶಿವಾಯಮುರುಘರನೆ ಹಂಪೆಯ ವಿರೂಪಾಕ್ಷಂ ॥

ರಗಳೆ.

ಜೋಳದೇಶದೊಳಗೆ ತಿರಿಪಗಲ್ಪುರಂ ನಮಃಶಿವಾಯ
ಕೇಳು ಮೆರೆವುತಿಪುದಲ್ಲಿ ಪುಟ್ಟಿದಂ ನಮಃಶಿವಾಯ
ಮುರಘನೆಂಬ ನಾಮದಿಂದೆ ಯೊಪ್ಪುತಿರ್ಪನಾ ಪುರಕ್ಕೆ
ಹರನ ಭಕ್ತಿಭಾವ ನಿರತನೆನಿಸಿ ಮೆರೆದನಾ ಪುರಕ್ಕೆ
ಸತ್ಯನುತ್ತಮ ಪ್ರಭಾವ ಭರಿತ ಚರಿತನೆನಿಸಿ ಮೆರೆದು
ನಿತ್ಯ ಭಕ್ತಿ ಯುಕ್ತ ಸತ್ಯ ಮನದ ಧನದ ನೆನಿಸಿ ಮೆರೆದು
ಶಿವನ ಪೂಜೆಗೆಂದು ಸಕಲ ಪುಷ್ಪವಾಟಿಯೊಳಗೆ ಪೊಕ್ಕು
ನವನವಪ್ರಸೂನ ಕುಲವನೆಯ್ದೆ ಕೊಯ್ದು ಭಕ್ತಿ ಮಿಕ್ಕು
ಕೊಂಡು ನಡೆದು ಶಿವ ನಿವಾಸ ರಂಗಮಂಟಪಕ್ಕೆ ಬಂದು
ತಂಡದಿಂದೆ ಪುಳಕ ತಿಕ್ಕಿಗೊಂಡು ಬೆಳೆದು ಮೆರೆಯೆ ನಿಂದು
ಇಂದು ಶೇಖರಂಗೆ ಮಜ್ಜನಕ್ಕೆ ಕೊಟ್ಟು ನಿಷ್ಠೆವಡೆದು
ತಂದೆತಾಯಿ ಬಂಧು ನೀನೆ ಎಂದು ನೇಹದಿಂದೆ ನುಡಿದು
ಪೂಜೆ ಮಾಡಿ ನೋಡಿ ನಲಿದು ಸೋಜಿಗಕ್ಕೆ ಸೊಗಸನಿತ್ತು
ಓಜೆಗೆಟ್ಟು ಮುಂದುಗೆಟ್ಟು ಮುದ್ದುಗೈದು ಮುನಿಸನಿತ್ತು
ಧೂಸವಿಕ್ಕಿ ಜೆಳಗನೆತ್ತಿ ಸವಿಯನೂಡಿ ನಲಿದು ನಚ್ಚಿ
ರೂಪುಗರೆದು ರುಚಿಯನಿತ್ತು ರಾಗದಿಂದೆ ಹಿಗ್ಗಿ ಹೆಚ್ಚಿ
ನನೆದು ತೊನೆದು ಒಲಿದು ನಲಿದು ಕೆಲೆದು ಮೀರಿ ಮುಲಿತು ನೋಡಿ
ಕುಸಿದು ಕೂಗಿ ಕುಸಿದು ಮುಸುಕಿ ಕೊರಗಿ ತಿರುಗಿ ಆಡಿ ಪಾಡಿ
ಒಸೆದು ಕಣ್ಗಳಿಂದೆ ಸುಖದ ರಸದ ಹೊನಲ್ವರಿದುಃ ಹೆಚ್ಚಿ
ಎಸೆಯೆ ಬೆಮರ ಬಿಂದು ಬಂದು ತನುವನೆಯ್ದೆ ಮುಸುಗಿ ಮುಚ್ಚಿ

ಪುಳಕದೊಳಗೆ ಪುಳಕವೇಳುತಂಗರುಚಿಯೊಳೊಂದಿ ಬೆಳಗೆ
ಹೊಳಿವ ಗದುಗದ ಸ್ವರಂ ನಮಃಶಿವಾಯದೊಳಗೆ ತೊಳಗೆ
ಕಂಪನಂ ಕೊನರ್ತು ತಳಿತು ಕಂಪನೆಯ್ದೆ ಮೆರೆದು ಪೊಗಳಿ
ಸೊಂಪು ಸೊಗಸಿ ಲೀಲೆಯುಕ್ಕಿ ಮನವನೊಕ್ಕು ವಿಕ್ಕು ನೆಗಳಿ
ಭವನ ಭಾವವೆಯ್ದೆ ಹೃದಯ ಕಮಳದೊಳಗೆ ತೊಳಗಿ ಬಳೆದು
ಶಿವನೆ ಶಿವನೆ ಶಿವನೆ ಎನುತೆ ಬೀಗಿ ಕೂಗಿ ಬಿಕ್ಕಿ ಬಿರಿದು
ನೋಡಿ ನಿಲ್ಲದೆಯ್ದಿ ಬಂದು ಬಿಂಕದಿಂದ ಭೋಂಕನಪ್ಪಿ
ಕೂಡಿ ತಣಿವುತೊರಗಿ ವೀರಿ ಮರೆದು ಮೂರ್ಛೆಯಾಗುತಪ್ಪಿ
ಮನವನಂಬಿಕಾವರಂಗೆ ಪಾರುಗೊಟ್ಟು ಸೂರೆಗೊಟ್ಟು
ತನುವನೀಶ್ವರಂಗೆ ಹಿಂಗದರ್ಪಿಸುತ್ತ ತೊತ್ತುಗೊಟ್ಟು
ಇರೆ ಪುರಾರಿ ಕರುಣದಿಂದೆ ಎಚ್ಚರಿತ್ತು ನಲಿದು ನೋಡಿ
ಮುರಿದು ಮೆಲ್ಲನೇಳ್ದು ಹರ ನಮಃಶಿವಾಯ ಎಂದು ಪಾಡಿ
ಶಿವನ ರೂಪು ಮನದೊಳಿರಗಿ ಯೊಳಗೆ ಹೊರಗೆ ತೀವಿ ತೋರೆ
ಭವನೆ ಭರ್ಗ ಭೀಮ ಭಾಳನಯನನೆಂದು ಕರೆದು ಸಾರೆ
ಇಂತು ಶಿವನನೊಕ್ಕು ನಿಳ್ಕೆ ಪೂಜೆಗೆಯ್ದು ಪುಳುಕಿಸುತ್ತೆ
ಮುಂತೆ ಶಿವನೆ ಶಿವನೆ ಎನುತೆ ಬೀಗಿ ಕೂಗಿ ಬೆಮರಿಡುತ್ತೆ
ಎಳ್ದು ಶಿವನ ಮುಂದೆ ನಿಂತು ಭಕ್ತಿ ಭಾವ ಭರಿತನಾಗಿ
ಬಿಳ್ದು ಪದತಳಕ್ಕೆ ಹರುಷವೇರಿ ವೀರಿ ತಣಿದು ಕೂಗಿ

ದೇವ ಹರಿವಿರಿಂಚಿಗಳ್ಗಗಮ್ಯನೆನಿಪ ನಾಮಲಿಂಗ
ದೇವ ಸಕಲ ಭಕ್ತಜನ ಕಣ್ಣ ಮೊದಲೊಳಿರ್ಪ ಲಿಂಗ
ದೇವ ಸರ್ವ ನಿಗಮ ನಿಕರ ದುರ್ಲಭ ಪ್ರಭಾವ ಮೂರ್ತಿ
ದೇವ ಶರಣ ನಿಚಯ ಚಿತ್ತವಲ್ಲಭ ಪ್ರಸಿದ್ಧ ಮೂರ್ತಿ
ದೇವ ದನುಜ ಮನುಜ ಖಚರ ಪೂಜಿತ ಪ್ರಮೋದ ಚರಣ
ದೇವ ತರುಣ ತರಣಿ ಕೋಟಿಗುನ್ನತ ಪ್ರತಾಪ ಕಿರಣ
ದೇವ ಕೋಟಿ ಶಶಿಕುಲಕ್ಕೆ ಶರ್ಮನೆನಿಪ ಶಾಂತ ರೂಪ
ದೇವ ನಿರುಪಮಪ್ರಕಾಶ ನಿತ್ಯ ನಿರ್ಗುಣಸ್ವರೂಪ
ಎಂದು ತುತಿಯ ನುತಿಸುತಿರ್ಪ ನಿತ್ಯ ನೇಮದಿಂದೆ ಬರ್ಪ
ಬಂದು ಇದುವೆ ನೇಮವಾಗಿ ಕುಂದದಚ್ಚ ಸುಖದೊಳಿರ್ಪ

ಅರಿವುದುಂ ನಮಃಶಿವಾಯ ಮರೆವುದುಂ ನಮಃಶಿವಾಯ
ಉರಿವುದುಂ ನಮಃಶಿವಾಯ ಮಹಿಮೆಯುಂ ನಮಃಶಿವಾಯ
ಮನದೊಳುಂ ನಮಃಶಿವಾಯ ಬುದ್ಧಿಯೊಳು ನಮಃಶಿವಾಯ
ನೆನಹಿನೊಳುಂ ನಮಃಶಿವಾಯ ಚಿಂತೆಯೊಳು ನಮಃಶಿವಾಯ
ನುಡಿವುದುಂ ನಮಃಶಿವಾಯ ನಡೆವುದುಂ ನಮಃಶಿವಾಯ
ಉಡುವುದುಂ ನಮಃಶಿವಾಯ ಉಣ್ಬುದುಂ ನಮಃಶಿವಾಯ
ಕರೆವುದುಂ ನಮಃಶಿವಾಯ ಕಾಣ್ಬುದುಂ ನಮಃಶಿವಾಯ
ಪೊರೆವುದುಂ ನಮಃಶಿವಾಯ ನೆರೆವುದುಂ ನಮಃಶಿವಾಯ
ಬರ್ಪುದುಂ ನಮಃಶಿವಾಯ ಬಾಳ್ವುದುಂ ನಮಃಶಿವಾಯ
ಇರ್ಪುದುಂ ನಮಃಶಿವಾಯ ಪೋಪುದುಂ ನಮಃಶಿವಾಯ
ಅಂದವುಂ ನಮಃಶಿವಾಯ ಚಂದವುಂ ನಮಃಶಿವಾಯ
ಹಿಂದೆಯುಂ ನಮಃಶಿವಾಯ ಮುಂದೆಯುಂ ನಮಃಶಿವಾಯ
ಕೆಲದೊಳುಂ ನಮಃಶಿವಾಯ ಬಲದೊಳುಂ ನಮಃಶಿವಾಯ
ನೆಲದೊಳುಂ ನಮಃಶಿವಾಯ ನಭದೊಳುಂ ನಮಃಶಿವಾಯ
ಆಯಮುಂ ನಮಃಶಿವಾಯ ದಾಯಮುಂ ನಮಃಶಿವಾಯ
ಕಾಯಮುಂ ನಮಃಶಿವಾಯ ನಿತ್ಯಮುಂ ನಮಃಶಿವಾಯ
ಸತ್ಯಮುಂ ನಮಃಶಿವಾಯ ಶಬ್ದಮುಂ ನಮಃಶಿವಾಯ
ನಿತ್ಯಮುಂ ನಮಃಶಿವಾಯ ನಿರ್ಮಳಂ ನಮಃಶಿವಾಯ
ಚಿತ್ತಮುಂ ಚರಿತ್ರಮುಂ ವಿಚಿತ್ರಮುಂ ನಮಃಶಿವಾಯ
ವೃತ್ತಿಯುಂ ವಿಳಾಸಮುಂ ವಿಚಾರಮುಂ ನಮಃಶಿವಾಯ
ಸಂಜೆಯುಂ ಸಮಾಧಿಯುಂ ಸ್ವರೂಪುಮುಂ ನಮಃಶಿವಾಯ
ರಂಜಿಸಿರ್ಪ ಮಂಗಳಂ ಮನೋರಥಂ ನಮಃಶಿವಾಯ
ಕಾಮವುಂ ನಮಃಶಿವಾಯ ಕೋಪಮುಂ ನಮಃಶಿವಾಯ
ನೇಮಮುಂ ನಮಃಶಿವಾಯ ನಿತ್ಯಮುಂ ನಮಃಶಿವಾಯ
ಉಗ್ರಮುಂ ನಮಃಶಿವಾಯ ಶಾಂತಮುಂ ನಮಃಶಿವಾಯ
ಸ್ವರ್ಗಮುಂ ನಮಃಶಿವಾಯ ಮೋಕ್ಷಮುಂ ನಮಃಶಿವಾಯ

ಇಂತು ಪಂಚವರ್ಣಮುಂ ಶರೀರವಾಗಿ ಬೀಗಿ ಬಳೆದು
ಸಂತತಂ ನಮಃಶಿವಾಯವಿಡಿದು ತೀವಿ ತುಳ್ಕಿ ತಳೆದು
ಮರೆದು ಸೋಂಕೆ ಭವಿಗಳೆಲ್ಲ ಭಕ್ತರಾಗುತಿರ್ಪರಲ್ಲಿ

ಅರಿದು ಸೋಂಕೆ ಭಕ್ತರಿಲ್ಲ ಭವನೊಳೊಂದುತಿರ್ಪರಲ್ಲಿ
ಲೋಗರೇನನೆಂದೊಡಂ ನಮಃಶಿವಾಯವಾಗಿ ತನಗೆ
ಅಗಳೇನನೆಂದೊಡಂ ನಮಃಶಿವಾಯವಾಗೆ ತನಗೆ
ಉಲಿವ ಹಕ್ಕಿಯುಲಿವು ಪಂಚವರ್ಣದಂತೆ ತಾಗೆ ಕಿವಿಗೆ
ಕೆಲೆವ ವೃಷಭನಾದಮುಂ ನಮಃಶಿವಾಯವಾಗೆ ತನಗೆ
ಕಣ್ಣೊಳಂ ನಮಃಶಿವಾಯವೆಂಬ ಲಿಖಿತವಿರ್ದ ತೆರದೆ
ಕಣ್ಣ ವೊದಲ ರೂಪು ಪಂಚವರ್ಣವಾಗಿ ತೋರಲುರದೆ
ಪಲವು ಕೆಲವು ದಿವಸವಿಂತು ಹರನನರ್ಚಿಸುತಿರಲ್ಕೆ

ನಲಿದು ಶಂಭು ತನ್ನ ಪದಕೆ ಭಕ್ತಿಯುಕ್ತನಂ ತರಲ್ಕೆ
ನೆನೆದು ಬಯಸಿ ಬಂದು ಭಕ್ತನನುವನರಿದು ಮುಂದೆ ನಿಂದು
ಕನಸಿನೊಳಗೆ ಮಗನೆ ಬರ್ಪುದೆಂದು ಬೆಸಸೆ ಪೋಗಲಂದು
ಎಳ್ದು ನೆನೆದು ಪುಳುಕಿಸುತ್ತೆ ಹರ್ಷರಸದ ಶರಧಿಯೊಳಗೆ
ಬಿಳ್ದು ಬಯಸಿ ಕೊರ್ವಿ ಯುರ್ವಿ ಆಡಿ ಪಾಡಿ ಭಕ್ತಿ ಬೆಳಗೆ
ಭಸಿತಮುಂ ಶರೀರದೊಪ್ಪುವಂಗದೊಳಗೆ ತೊಳಗೆ ತೀವಿ
ಎಸೆವ ರುದ್ರನೇತ್ರಮುಂ ತನು ಸ್ಥಳಂಗಳಲ್ಲಿ ಓವಿ
ನಡೆದು ಬಂದು ಪೂವನೆಳಸಿ ಕೊಯ್ವುತುಂ ನಮಃಶಿವಾಯ
ತಡೆಯದಗ್ಗವಣಿಯನಾಂತು ನಡೆವುತುಂ ನಮಃಶಿವಾಯ
ಬರುತೆ ರಂಗಮಂಟಪ ಪ್ರದೇಶದೊಳ್ ನಮಃಶಿವಾಯ
ಹರುಷದಿಂದಲಗ್ಗವಣಿಯನಿಳಿಪುತುಂ ನಮಃಶಿವಾಯ
ಬಂದು ಮಜ್ಜನಕ್ಕೆ ಮಾಣದೆರೆವುತುಂ ನಮಃಶಿವಾಯ
ನಿಂದು ಪೂಜೆ ಮಾಡಿ ನೋಡಿ ನಲಿವುತುಂ ನಮಃಶಿವಾಯ
ಎಂದು ಹೊರಗೆ ಸಾರ್ದು ಕುಣಿದು ಕೂಗಿ ಕರುಣಿಸೆಂದೆನುತ್ತೆ
ಇಂದುಪೌಳಿ ನೀನೆ ಬೆಸಸಿದಂತೆ ಮಾಡು ಮಾಡೆನುತ್ತೆ
ಸವಿಯೆ ಕಣ್ಣೆ ಗತಿಯೆ ಮತಿಯೆ ಸುಖವೆ ಕರುಣಿಸೆಂದೆನುತ್ತೆ
ತವರೆ ತಾಯಿ ತಂದೆ ಬಂಧು ಕುಲವೆ ಕರುಣಿಸೆಂದೆನುತ್ತೆ
ಗುರುವೆ ಕಲ್ಪತರುವೆ ದಯದಿರವೆ ಕರುಣಿಸೆಂದೆನುತ್ತೆ
ಪರವೆ ಪರಕೆ ಪರವೆ ಶಾಂತದಿರವೆ ಕರುಣಿಸೆಂದೆನುತ್ತೆ
ಪುಳಕವಡರೆ ನೋಟವಮರೆ ನುಡಿ ಹೊರಳ್ದುತೊದಳನೆಳಸಿ
ತಿಳಿವುತೀವೆ ಮಾಯೆ ಮಸುಳೆ ಬೆಳಗು ಒಳಗೆ ತೊಳಗಿ ಮಸಗೆ

ಲಯಗೆ ಬೆಳೆಯೆ ತವಕನೇಳೆ ಮನದ ಲಲ್ಲಿ ಮುಂದುವರಿಯೆ
ಜಯತು ಜಗುಳಿ ಜಾಣ್ಮೆಯುಗುಳಿ ಎಚ್ಚರಿಚ್ಚಿಗಕ್ಕೆ ಸರಿಯೆ
ಮುತ್ತಿ ಚಂದ್ರಕಾಂತಮುಂ ಜಿಗುಲ್ತು ಜೊನ್ನವಪ್ಪುವಂತೆ
ಹತ್ತಿ ಸಾರ್ದು ಸೊಗಸು ಸಿಳೆಯೆ ಭಕ್ತಿ ಮುಕ್ತಿಯಪ್ಪುವಂತೆ
ನಮಃ ನಮಃಶಿವಾಯ ಎನುತೆ ಗದ್ಗದಕ್ಕೆ ಕಂಠ ಸಾರ್ದು
ನೆನಸು ಕನಸು ಕನಸು ನೆನಸೆನಿಪ್ಪ ಭಾವವಳಿದು ಸಾರ್ದು
ಶಿವನನಪ್ಪಿದಂ ನಮಃಶಿವಾಯ ಮುರುಳೆನೊಲ್ಮೆಯಿಂದೆ
ಭವನನಪ್ಪಿದಂ ನಮಃಶಿವಾಯ ನೇಹದುರ್ಕಿನಿಂದೆ
ಮನಸಿನಪ್ಪು ಚಿತ್ತವಪ್ಪೆ ತನುವಿನಪ್ಪಿನೊಳಗೆ ಬೆರಸಿ
ನೆನಹು ನಿಲ್ಕೆ ಕಳೆಯು ಕೂಡಿ ಲಿಂಗದೊಳಗೆ ಲಿಂಗವೆನಿಸಿ
ಘನಿಸಿದ ಮತ್ಸರಕ್ಕೆ ತನು ನಮಃಶಿವಾಯವಾಗಿ ಕರಗೆ
ತನುವ ಮಜ್ಜನಕ್ಕೆ ಮಾಡಿ ಯಗ್ಗವಣಿಯನೆನಿಸಿ ಕರಗೆ
ಎರಡುವಲ್ಲದೊಂದುವೆನಿಸಿದಂತು ಹರನೊಳೊಂದುಗೂಡಿ
ಕರಗಿ ಕಳೆದು ಭಾವವಳಿದು ಲಿಂಗದೊಳಗೆ ಬೆರಸಿ ಕೂಡಿ
ಜೀವನು ನಮಃಶಿವಾಯ ಪರಮನುಂ ನಮಃಶಿವಾಯ
ಆವನೇನನೆಂಬನೆಂಬುದೆಲ್ಲವುಂ ನಮಃಶಿವಾಯ
ವಾಗಿ ಕೂಡಿ ಕರಗಿದಂ ನಮಃ ಶಿವಾಯ ಮುರುಳೆನಾಹ

ಆಗಳೊಗೆದವಲ್ಲಿ ದುಂದುಭಿ ಸ್ವನಂಗಳಿಲ್ಲಿವಾಹ
ಹರನ ಕರುಣ ವೃಷ್ಟಿಯೊಡನೆ ಪುಷ್ಪವೃಷ್ಟಿ ಸುರಿದವಲ್ಲಿ
ಹರನ ಪೊಗಳ್ವ ನಾದದೊಳಗೆ ಶಂಖನಾದ ಒಗೆದುದಲ್ಲಿ
ಮೇಲೆ ತೋರಿದಂ ಶಿವಂ ನಿಜಸ್ವರೂಪ ಕಳೆಯನಲ್ಲಿ
ನೀಲಗಳದ ಹತ್ತು ಭುಜದ ಪಂಚಮುಖದ ಮುಖಮನಲ್ಲಿ
ತೋರುತುಂ ನಮಃಶಿವಾಯ ನಂದಿನಾಥ ನೋಡೆನುತ್ತೆ
ಬೀರಿದಂ ಮಹೇಶನಿರವಿದರಿದು ಧರಣಿಗರಿದೆನುತ್ತೆ
ನೇಮವಳಿದು ಪೂಜೆ ಪಂಚವರ್ಣವಾದರೀಗಳುಂಟೆ
ನೀಮೆಗೆಟ್ಟು ಚಿತ್ತವಿಟ್ಟು ನಾಮವಾಗಿ ನಿಂದರುಂಟೆ
ನಾಮರಸದೊಳೆಂತು ನೆನೆದು ಬಿರಿದು ಕರಗಿ ಹರಿದರುಂಟೆ
ಪ್ರೇಮರಸದ ಮಳೆಯನೆನ್ನ ನೇಲೆ ಕವಿದು ಕರೆದರುಂಟೆ

ಛಾಪುರೇ ನಮಃಶಿವಾಯ ಮುರುಳ ಛಾಪು ಛಾಪೆನುತ್ತೆ
ಛಾಪು ಮಧುರೆ ಪೂತುಂಾವುದೇವು ಮುರುಳ ಲೇಸೆನುತ್ತೆ

ಬಂದ ನವ ವಿಮಾನದೊಳಗೆ ಮೋಹದಿಂದಲಿರಿಸಿ ನೋಡಿ
ಮುಂದೆ ಕುಣಿವ ಗಣಸಮೂಹದಿಂ ಸುಖಾಶ್ರುವೇರೆ ನೋಡಿ
ನಡೆದು ಬಂದು ರಜತ ಗಿರಿಯನೆಯ್ದೆ ಮೋಹದಿಂದೆ ಪೊಕ್ಕು
ನುಡಿಯಲೆಯ್ದೆ ಸೊಗಯಿಸುತ್ತೆ ಗಿರಿಜೆಗರುಪಿ ಲೀಲೆ ವಿಕ್ಕು
ಗಣಪದಂಗಳೊಳ್ನಮಃಶಿವಾಯ ಮುರುಳರೊಪ್ಪವಿರಿಸಿ
ತ್ರಿಣಯನುಂ ನಮಃಶಿವಾಯ ಮುರುಳರಂ ನಿಜಕ್ಕೆ ಸಲಿಸಿ
ಮೇರುಗಿರಿ ನಿವಾಸದೊಳಗೆ ಮಾರಮಥನನೆಸೆದನಲ್ಲಿ
ಚಾರುತರ ಗಣಂಗಳೊಳ್ಪರಾರಿ ಯೊಪ್ಪುತಿರ್ದನಲ್ಲಿ
ಸಕಲ ಭಕ್ತ ಭಾವ ಭರಿತ ಚರಿತನೊಪ್ಪುತಿರ್ದನಲ್ಲಿ
ಸಕಲ ದೇವ ಮಕುಟ ಮಣಿ ವಿಳಾಸ ಚರಣನೆಸೆದನಲ್ಲಿ
ನಿತ್ಯ ನಿರುಪಮ ಪ್ರಕಾಶ ಭೂಷನೊಪ್ಪುತಿರ್ದನಲ್ಲಿ
ಸತ್ಯ ಶರಣ ಕರುಣೆ ಹಂಪೆಯರಸನೊಪ್ಪುತಿರ್ದನಲ್ಲಿ

ಕಂದ॥ ಭುವನಂ ನೆರೆ ಮೆಚ್ಚೆ ನಮ ।
ಶಿವಾಯ ಮುರುಳ ನೆರೆ ಮೆರೆದ ಶಂಕರನೊಲವಿಂ ॥
ದವೆ ಭಕ್ತಿ ಸುಖಮನೆಸಗೀ ।
ಗವಿರಳ ಕರುಣಾಬ್ಧಿ ಹಂಪೆಯ ವಿರೂಪಾಕ್ಷಂ ॥

ಅಯ್ಯಡಿಯರ ಮಹಾತ್ಮೆ.

ಕಂದ॥ ಚರಿತದಿ ಅಯ್ಯಡಿಯರ್ಗಂ ।
ಪರಮಸುಖೋದಯಮನಿತ್ತು ಮೆರೆದ ಮಹೇಶಂ
ಕರುಣದಿನೆಮಗತಿ ಭಕ್ತಿಯ ॥
ನಿರದೆ ವಿರೂಪಾಕ್ಷದೇವನೀಗನವರತಂ ॥

ರಗಳೆ.

ಶ್ರೀಪಲ್ಲವಕ್ಷಿತಿಯ ನಡುವೆಯೊಪ್ಪಂ ಮಿಗಲ್
ಭೂಪ ಕುಲತಿಲಕನಾಗುತ್ತ ತೇಜಂ ಮಿಗಲ್
ಮೆರೆವ ನೃಪವಂಶಮೆಂಬಧಿಕ ದುಗ್ಧಾಬ್ಧಿಯೊಳ್
ನೆರೆ ಪೂರ್ಣ ಚಂದ್ರನಂತುದಯಿಸಿದ ಕಾಂತಿಯೊಳ್
ಮೆರೆವನಯ್ಯಡಿ ಎಂಬ ಪೆಸರಿಂ ದಯಾಪರಂ
ಕರಿಕಂಠ ಭಕ್ತ್ಯಾಂಗನಾ ಸುಖಪ್ರದ ವರಂ
ಆತನುರು ಧರ್ಮಪ್ರತಾಪಂಗಳಿಂತಲ್ಲಿ
ಖ್ಯಾತ ಕಲಿಕಾಲ ರಿಪುಗಳ ನೊಂಕಿ ತಾನಲ್ಲಿ
ವೈವಸಿದ್ಧಾಂತ ಸಾಮ್ರಾಜ್ಯ ಮಣಿಪೀಠದೊಳ್
ಭಾವದಿಂ ಶಿವಧರ್ಮದಂತಿರ್ಮ ತೇಜದೊಳ್
ಸರ್ವೋರ್ವಿಯಂ ಪಾಲಿಸುತ್ತಿರಲ್ ವಿಭವದೊಳ್
ಪೂರ್ವ ಮನುಧರ್ಮಮಂ ಬಿಡದಾತನಾತ್ಮನೊಳ್
ಕುಲ ಪರಂಪರೆಯಿಂದಲೈತಂದ ಕೀರ್ತಿಯಂ
ಕುಲಗಿರಿ ತಟಂಗಳೊಳಗಿರಿಸಿ ಸತ್ಕೀರ್ತಿಯಂ
ಇಂತು ಭುಜಬಲದಿಂದ ರಾಜ್ಯವಂ ಪಾಲಿಪಂ
ಸಂತತಂ ಸರ್ವ ಜನರಂ ನೋಡಿ ರಕ್ಷಿಪಂ
ಸರ್ವ ವೇದಂಗಳಗೆ ಸಾರಮಾಗಿರುತಿರ್ಪ
ಸರ್ವ ಸಜ್ಜನರ ಸಂತೋಷದಿಂದಿರುತಿರ್ಪ
ಎಲ್ಲೆಡೆಯೊಳುಂ ವೈದಿಕಾಚಾರ ವಿಪ್ರರುಂ

ಎಲ್ಲೆಡೆಯೊಳುಂ ಯೋಗ ಸತ್ಕ್ರಿಯಾ ಯುಕ್ತರುಂ
ಎಲ್ಲೆಡೆಯೊಳುಂ ಸರ್ವ ವೇದ ಘೋಷಂಗಳುಂ
ಎಲ್ಲೆಡೆಯೊಳುಂ ಶೈವಶಾಸ್ತ್ರ ರವಂಗಳುಂ
ಇಂತಿರಲ್ಮಾತನಧಿಕೋರ್ವಿಯಂ ಪಾಲಿಸುತೆ

ಕಂತುಹರನಾಜ್ಞೆಯಿಂ ವೈರಾಗ್ಯದೊಲ್ಸಲುತೆ
ಜನನಿ ಜನಕನು ಪುತ್ರ ಮಿತ್ರ ಸತಿ ಎಂಬವರು
ಕನಸಿನ ಸಿರಿಯು ಮಂಜು ಮೇಘದೊಡ್ಡಣೆ ಇವರು
ಸ್ಥಿರವೆಂದು ಶಿವಭಕ್ತಿಯುಳ್ಳವರು ನಂಬುವರೆ
ಎರವಿನ ಸಿರಿಯನಿಂತು ಹಿರಿದಾಗಿ ನಂಬುವರೆ
ಸತಿ ಸುತರು ಇರ್ದಂತೆ ಬಯಲಾದುದಂ ಕಂಡೆ
ಗತಿಮತಿಯು ಶಿವನಲ್ಲದಿಲ್ಲೆಂದು ನಿಜಗಂಡೆ
ಇನ್ನು ಮಾಯದ ಮೋಹದೊಳು ನಿಲುವುದಲ್ಲೆಂದು
ಜನ್ನಾಗಿ ನಿಶ್ಚೈಸಿ ಮನಮುಮಂ ತಾಂ ಬಲಿದು

ಕುಲಧುರ್ಯನಪ್ಪ ನಿಜ ಪುತ್ರನಂ ರಾಜ್ಯದೊಳ್
ಲಲಿತಮತಿ ಪಟ್ಟಮಂ ಕಟ್ಟಿ ಶಿವದಾಸ್ಯದೊಳ್
ಬಂದು ಭೂಮಿಯೊಳುಳ್ಳ ಶಿವನ ತಾಣಂಗಳೊಳ್
ಬಂದು ವಂದಿಸಿ ಪೊಗಳ್ದು ಪಾಡಿ ಹರ್ಷಂಗಳೊಳ್
ಸ್ತುತಿಮಾಲೆಗಳನರ್ಚಿಸಲ್ನೆನೆದು ಬೇಗದಿಂ
ನುತಮಪ್ಪ ಪೊನ್ನಾಂಬಲಕೆಯ್ದಿ ರಾಗದಿಂ
ಅಲ್ಲಿ ರುದ್ರಸ್ತೋತ್ರದಿಂ ಶಿವನನರ್ಚಿಸುತೆ
ಸಲ್ಲೀಲೆಯಿಂದಿಂತು ಹರನನುರೆ ಪೂಜಿಸುತೆ
ಪಲಕೆಲವು ಕಾಲನಲ್ಲಿಯೆ ಸುಖದಿನಿರುತಿರಲ್
ಪಲವು ಶಿವತೀರ್ಥಂಗಳಲ್ಲಿ ಶೋಭಿಸುತಿರಲ್
ಬಲ್ಲಿಂದದಿಂ ಭರ್ಗನಂ ಪೊಗಳ್ದು ಬಣ್ಣಿಸುತೆ
ಎಲ್ಲಿಂದದಿಂ ಶಿವನ ಸೇವೆಯಂ ಭಾವಿಸುತೆ
ಇಂತು ಬಹು ವಿಧದ ಶಿವ ಕಾರ್ಯರತ ತಾನಾಗಿ
ಕಂತುಹರ ಸಂಭೃತ್ಯ ಭಾವ ಸಂಯುತನಾಗಿ

ಇರುತಿರಲ್ ಶಿವನೊಲ್ದು ಕೈಲಾಸ ಗಿರಿಯಲ್ಲಿ
ಪರಿಪರಿಯ ಭಕ್ತಿಯಂ ಗಾನಮಂ ಪೇಳ್ದಲ್ಲಿ
ನೆನೆದು ನಂದಿ ಪ್ರಮುಖ ರುದ್ರಗಣಮಂ ನೋಡಿ
ಘನ ಶಿವಂ ಬೆಸಸಿದನವರ್ಗೆ ಕರುಣಂ ಗೂಡಿ
ಎನ್ನ ಸದ್ಭಕ್ತನಂ ತಪ್ಪರ್ದತಿ ವೇಗದಿಂ
ಮುನ್ನಣೆಯ ಮದ್ಭಾವ ಯುಕ್ತನಂ ರಾಗದಿಂ
ಎಂದೆನಲ್ಶಿವನಾಜ್ಞೆಯಿಂದವರ್ನಡೆತಂದು
ಸಂದಿಲ್ಲದಿರ್ದರಯ್ಯಡಿಯರ್ಗಳೊಳ್ನಿಂದು
ಇಂದುಶೇಖರನಾಜ್ಞೆಯಂ ತಿಳುಪಿ ಪೇಳುತುಂ
ತಂದ ಪುಷ್ಪಕದೊಳಗೆ ಕುಳ್ಳಿರಿಸಿ ಪೊಗಳುತುಂ
ತಳರಲೊಡನದು ರಜತಗಿರಿಯ ಸಭೆಯೊಳ್ನಿಲಲ್
ಘಳಿಲನೇ ಪುಷ್ಪಕದೊಳಿಳಿದು ನಿಂದಿರಲ್
ಶಿವನಧಿಕ ಕರುಣದಿಂ ನೋಡಿ ಕೊಂಡಾಡುತುಂ
ಭವನಾತನಂ ಗಿರಿಜೆಗರುಪಿ ಕೊಂಡಾಡುತಂ
ಎನ್ನ ಮೇಗಣ ಮೋಹದಿಂದ ರಾಜ್ಯವ ಬಿಟ್ಟು
ಮುನ್ನಣೆಯ ಭಕ್ತನಿವನೆಂದು ಹರುಷಂಬಟ್ಟು
ಗಣಪದವಿಯೊಲಿದಿತ್ತ ಅತ್ಯಧಿಕ ಭೋಗದಿಂ
ಫಣಿಕಂಕಣಂ ರಜತಗಿರಿಯೊಳನುರಾಗದಿಂ
ಕಾಲಹರ ದುರಿತಭಂಜನ ಭರ್ಗನೊಪ್ಪಿದಂ
ಶೂಲಧರ ಭವಭಯ ಧ್ವಾಂತ ರವಿಯೊಪ್ಪಿದಂ
ಇಂತೆಮ್ಮ ಪಂಪಾಪುರಾಧೀಶನೊಪ್ಪಿದಂ
ಸಂತತಂ ಹಂಪೆಯ ವಿರೂಪಾಕ್ಷನೊಪ್ಪಿದಂ

ಕಂದ॥ ಅಯ್ಯಡಿಯರ ಭಕ್ತಿಗೊಲವಿಂ।
ಮೆಯ್ಯಾನುತೆ ರುದ್ರಪದವನಿತ್ತುರಿ ಮೆರೆದಂ॥
ಅಯ್ಯನೆನಗೀಗೆ ಭಕ್ತಿಯ।
ನಯ್ಯಡಿಯರ ಭೃತ್ಯನೆಂದು ಹಂಪೆಯದೇವಂ॥

ಮಾನಕಂಜರ ಮಹಾತ್ಮೆ.

ಕಂದ॥ ಐದೆ ಧರೆ ಪೊಗಳೆ ಭಕ್ತಿಯೊ ।
ಳಯ್ದುಂ ಪೊಗದೀಶ್ವರಂಗೆ ತನಯಳ ಮುಡಿಯುಂ ॥
ಕೊಯ್ದಿತ್ತ ಮಾನಕಂಜರ ।
ನೊಯ್ದಂ ಕೈಲಾಸಪುರಕೆ ಹಂಪೆಯ ರಾಯಂ ॥

ರಗಳೆ.

ಎಂತೆನಲ್ಪೋಳದೇಶದೊಳೊಂದು ಪುರಮುಂಟು
ಸಂತತಂ ಕುಂಜಾರನಿಪ್ಪ ನಾಮಮದುಂಟು
ತನಗಾಗಿ ಮೆರೆವದು ಪುರದೊಳಿರ್ಪಂ ನೋಡ
ವಿನುತ ನಾಮಂ ಮಾನಕಂಜರೆಂಬುದು ನೋಡ
ಸತ್ಯನೇ ತಾಯಿ ಶಿವಜ್ಞಾನವೇ ಪಿತ ತನಗೆ
ನಿತ್ಯಸಖಿ ದಯೆ ಧರ್ಮ ಒಡಹುಟ್ಟಿದಂ ತನಗೆ
ಬೇರೆ ಬಂಧುಗಳಿಲ್ಲ ಬಂಧು ಶಿವಭಕ್ತರುಂ
ಬೇರಾಪ್ತ ಜನರಿಲ್ಲ ಆಪ್ತರೇ ಶರಣರುಂ
ತನ್ನ ಸಂಪದವಭವ ಭಕ್ತರ್ಗೆ ಸಂಪದಂ
ತನ್ನ ಧನವೀಶಭಕ್ತರ್ಗಂ ದಯಾಸ್ಪದಂ
ಇಲ್ಲಿನೆ ಕುಬೇರಂನೆ ಕಡನನೀವಂ ನೋಡ
ಬಲ್ಲಿದಂ ವ್ಯವಹಾರಿ ಎನಿಸಿ ಮೆರೆವಂ ನೋಡ
ಹೊನ್ನುವುಂ ತನ್ನವುಂ ಕೊಟ್ಟ ಸದ್ಭಕ್ತಿಯಂ
ತನ್ನತ್ತ ತೆಗೆದುಕೊಳ್ವಂ ಶಿವನ ಭಕ್ತಿಯಂ
ಸಮಯಾಸಮಯವಿಲ್ಲ ಭವನ ಭಕ್ತರ್ಬರಲ್
ಸಮಯಂಗಳಿಲ್ಲ ಜೋಳಾದಿ ಭೂಪರ್ಬರಲ್
ಧನವನೀವಂ ತನ್ನನೀವನಾ ಭಕ್ತರ್ಗೆ
ತನುವನೀವಂ ಮನವನೀವನಾ ಭಕ್ತರ್ಗೆ
ಭಕ್ತರಿಲ್ಲದ ದಿನದ ತೃಪ್ತಿಯುಪವಾಸವದು
ಭಕ್ತರೊಡಗೂಡಿದುಪವಾಸವೇ ತೃಪ್ತಿಯದು

ಇಂತಿರುತೆ ನಿತ್ಯ ಲಿಂಗಾರ್ಚನೆಗೆ ನಡೆತಂದು
ಸಂತತಂ ಕುಂಜಾರ ದೇವರಲ್ಲಿಗೆ ಬಂದು
ಸಂದ ಕಸ್ತೂರಿ ಚಂದನ ಗಂಧ ವೃಂದದಿಂ
ಒಂದುಗೂಡಿರ್ದ ನವ ಕುಸುಮ ಸಂದೋಹದಿಂ
ಪೂಜೆಯಂ ಮಾಡುತುಂ ನಲವಿಂದೆ ನೋಡುತುಂ
ಓಜೆಯಂ ಮೀರುತುಂ ತೆಗೆದು ತಳ್ಕೈಸುತುಂ
ಕೆಲಬಲದೊಳೆಸೆವ ಮಾಣಿಕ ದಿಂಡೆಯಂ ಕಟ್ಟಿ
ನಲಿನಲಿದು ಹೊಸ ಮುತ್ತಿನಿಂಡೆಯಂ ಸಮಕಟ್ಟಿ
ಅಲ್ಲಿ ಭಕ್ತರು ಬರಲ್ಬಯಸಿದುದನೀವುತುಂ
ಸಲ್ಲೀಲೆಯಿಂದೆ ಶಿವಭಕ್ತಿಯುಮನೀವುತುಂ
ಪಾದೋದಕ ಪ್ರಸಾದಂಗಳಂ ತಣಿವುತುಂ
ಸಾದರಂ ಮಿಗೆ ಭಕ್ತಿಗೋಷ್ಠಿಯಿಂ ಪೇರ್ಚುತುಂ
ತನ್ನರಮನೆಗೆ ಬಂದು ಸಕಲ ಸುಖದಿಂದಿರಲ್
ತನ್ನರಸಿಯುಂ ತಾನುಮಳ್ತಿಯಿಂದಿರುತಿರಲ್

ವನಿತೆ ಇಂತೆಂದಳೊಂದುಂ ಕೊರತೆ ಎಮಗಿಲ್ಲ
ತನಯನೋರ್ವಂ ನೋಳ್ಪುದಲ್ಲದೊಪ್ಪದಿದೆಲ್ಲ
ದೇವರಂ ಬೇಡಿರೇ ನೀವೋರ್ವ ಪುತ್ರನಂ
ಭೂವಳಯಮುಮನಾಳ್ವ ಮಂಗಳ ಚರಿತ್ರನಂ
ಎನೆ ಕಿವಿಗಳಂ ಮುಚ್ಚಿ ಶಿವಶಿವಿಂತೆಂಬರೇ
ಮನದೊಳಂ ದೇವರಂ ಬೇಳ್ಪುದಂ ಕಲಿವರೇ
ಬೇಡಲಾಗದು ಶೂಲಿಯೊಲಿವುದಂ ಬಲ್ಲವಂ
ಮಾಡಿತಂ ನೋಡುತಿರ್ಪುದು ಶಂಭುವೆಲ್ಲವಂ
ಶಿವನಿಚ್ಛೆಯಲ್ತೆ ಬೇರೊಂದಿಚ್ಛೆ ಎಮಗುಂಟೆ
ಶಿವನಿರಿಸಿದಂತಲ್ಲದೆಂತು ಬೇರಿರವುಂಟೆ
ಎಂದೆನಲ್ಕಾಣದಾ ವನಿತೆ ಪೇಳುತ್ತಿರಲ್
ಕುಂದದಂದಂದಿಂಗೆ ಬಿಡದೆ ಈಯುತ್ತಿರಲ್

ಒಂದು ಮನವಲ್ಲದೆ ಮನದೊಳೊಂದು ದಿವಸದೊಳ್
ಇಂದುಮುಖಿ ಇಚ್ಛೆಯಂ ಸಲಿಸುವ ನಿಹಾರದೊಳ್
ಶಿವನಿಳಯಮಂ ಪೊಕ್ಕು ನಿತ್ಯ ನೇಮಂ ಮಾಡಿ

ಶಿವನನಾಗಳಿ ಬೇಡಲೆಂದು ಮನವಂ ಮಾಡಿ
ಬೇಡುವವೆ ಕಷ್ಟವಯ್ಯೋ ಭಕ್ತಿ ಇಂತಾಯ್ತೆ
ಬೇಡಲಾಸೊಲ್ಲೆನೆನ್ನವಳ ಮನ ಎಂತಾಯ್ತೆ
ಎಂದು ಬೇಡಲ್ಕೆ ಬೇಡದಿರಲ್ಕೆಯಂಜುತ್ತೆ
ಬಂದು ಭಯದಿಂ ಕುಗ್ಗಿ ತಡಬಡಂಬೋಗುತ್ತೆ
ಪುತ್ರಿಯಂ ಕೊಡು ದೇವ ಎಂದು ಕೈಮುಗಿದಿರ್ದು
ಪುತ್ರನಂ ಕೇಳ್ವುದಂ ಮರೆದು ಭೀತಿಯೊಳಿರ್ದು
ಪೊಡವಮಟ್ಟು ತೀರ್ಥಜಲಮಂ ಕೊಳ್ವ ಸಮಯದೊಳ್
ಮೃತನಿರಿಸಿದಂ ಪ್ರಸಾದತ್ವಮಂ ಹರುಷದೊಳ್
ಶಿವನಿರಿಸೆ ಲಲನಾ ಜನನ ಬೀಜ ಬಿಂದುವಂ
ಅವುಗೂಡಿ ಸಾದೋದಕ ಪ್ರಸಾದತ್ವವಂ
ಕೈಕೊಂಡು ಬಂದನುಮ್ಮಳಿಸುತುಂ ನಿಳಯಕ್ಕೆ
ಏಕೆ ಬೇಡಿದೆನೀಶನೇನೆಂಬೆನಿತಕ್ಕೆ
ಎಂದೆನುತೆ ಬಂದು ವನಿತೆಗೆ ಪೇಳೆ ನಲವಿಂದೆ
ಇಂದುಮುಖಿ ಸಂತಸಂಬಡುತೆ ಮನದೊಲವಿಂದೆ

ಇರೆ ಶಿವನ ಕಾರುಣ್ಯ ಸಂದ ಸುಖಫಲದಿಂದೆ
ಸರಸಿಜಾನನೆಗೆ ಗರ್ಭಂದೋರೆ ಚಲ್ವಿಂದೆ
ಬರಬರಲ್ ನಳನಳಿಸಿ ನವಮಾಸವಾಗುತಿರೆ
ತರುಣಿಯಂ ಪಡೆದಳ್ ಜನೋತ್ಸಾಹಮುಣ್ಮುತಿರೆ
ಹರುಷದಿಂದಾಡುತುಂ ಜಾತಕರ್ಮಂ ಮಾಡಿ
ತಿರುಮುಡಿಯೊಡೆಯಳೆಂದು ನಾಮಕರಣಂ ಮಾಡಿ
ಶಿವನ ಸದ್ಭಕ್ತರ್ಗೆ ಹೊನ್ನಮಳೆಯಂ ಗರೆದು
ಭವನ ಭಕ್ತರ್ಗೆ ಬೇಡಿದನಿತ್ತು ನೆರೆ ಮೆರೆದು
ತಂದೆ ತಾಯ್ಗಳು ನೋಡಿ ಹರ್ಷದಿಂ ಹಿಗ್ಗುತಿರೆ
ಬಂದ ಭಕ್ತರ ಪಾದಜಲದಿಂದ ಸಲಹುತಿರೆ
ಶಿವನ ಪ್ರಸಾದದಿಂ ಪೊಲಿಪಾಲನೀಂಟುತುಂ
ನವನವ ಪ್ರೇಮದಿಂ ಬಾಲ್ಯಮುಂ ದಾಂಟುತುಂ
ಬೆಳೆವುತಿರ್ದಳ್ ಚಂದ್ರಕಳೆಯಂತೆ ತಳತಳಿಸಿ
ಬೆಳೆವುತಿರ್ದಳ್ ಕಲ್ಪಲತೆಯಂತೆ ನಳನಳಿಸಿ

ಉರಿಲಿಂಗ ಪೆದ್ದಿಗಳ ವಚನಗಳು.

ದೇವರ ಸ್ವರೂಪು.

ವಿವರಣೆ:— ಈ ವಿಷಯವನ್ನು ವಿವರಿಸುವ ಮುಂದಿನ ವಚನಗಳು ಅತ್ಯಂತ ಮಹತ್ವದವವೆ. ಇವುಗಳಲ್ಲಿ ಪರಮಾತ್ಮನೆಂದರೇನು, ಪರಮಾತ್ಮನಿಗೂ ಜಗತ್ತಿಗೂ ಏನು ಸಂಬಂಧವಿದೆ, ಅಂಗ, ಲಿಂಗಗಳೆಂದರೇನು, ಪರಮಾತ್ಮನು ಜಗತ್ತಿನಲ್ಲಿ ಹ್ಯಾಗೆ ವ್ಯವಹರಿಸುತ್ತಾನೆ, ಪರಮಾತ್ಮನಿಗೆ ಜೀವಾತ್ಮನಿಗೂ ಏನು ಸಂಬಂಧವಿದೆ ಈ ಮಹತ್ವದ ವಿಷಯಗಳು ವಿವರಿಸಲ್ಪಟ್ಟಿವೆ. ಹಾಗೂ ಮೋಕ್ಷವೆಂದರೇನು, ಅದನ್ನು ಹ್ಯಾಗೆ ಪಡೆಯಬೇಕು ಎಂಬುದೂ ಕೂಡ ನಿರ್ದೇಶಿಸಲ್ಪಟ್ಟಿದೆ.

ವಚನ:— ೧. ಒಂದೇ ವಸ್ತು ತನ್ನ ಲೀಲೆಯಿಂದ ಪರಮಾತ್ಮ ಜೀವಾತ್ಮನಾಯಿತ್ತು. ಪರಮಾತ್ಮನೇ ಲಿಂಗ, ಜೀವಾತ್ಮನೇ ಅಂಗ, ಸಂಗವೇ ಏಕಾತ್ಮ. ತತ್‌ಪದವೆ ಪರಮಾತ್ಮ, ತ್ವಂ ಪದವೇ ಜೀವಾತ್ಮ, ಅಸಿಪದವೇ ತಾದಾತ್ಮ್ಯವಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವ:— ಪರಮಾತ್ಮನೊಬ್ಬನೇ ಇದ್ದಾನೆ, ಅನೇಕ ದೇವತೆಗಳಿಲ್ಲೆಂದು ವಚನಕಾರರು ಯಾವಾಗಲೂ ಅಭಿಪ್ರಾಯಪಡುವದುಂಟು. ಆದ್ದರಿಂದ ಜಗತ್ತನ್ನು ನಿರ್ಮಾಣಮಾಡಿದವನು ಒಬ್ಬನೇ ದೇವನು ಎಂದು ಅವರು ನಂಬಿದ್ದಾರೆ. ಈತನನ್ನು ಅವರು ಪರಶಿವ, ಲಿಂಗ, ಪರಮಾತ್ಮ, ಶೂನ್ಯ, ಬಯಲು, ನಿರವಯ, ಶಿವ, ಪರಬ್ರಹ್ಮ ಎಂದು ಮೊದಲಾದ ಹೆಸರುಗಳಿಂದ ಕರೆದಿದ್ದಾರೆ.

ಈ ಪರಬ್ರಹ್ಮ ವಸ್ತುವಿನ ಒಂದು ಲೀಲೆಯ ಮೂಲಕ ಅದೇ ಎರಡು ತೆರನಾಗುತ್ತದೆ. ಒಂದನ್ನು ಪರಮಾತ್ಮನೆಂತಲೂ ಎರಡನೆಯದನ್ನು ಜೀವಾತ್ಮನೆಂತಲೂ ಇಲ್ಲಿ ಉರಿಲಿಂಗ ಪೆದ್ದಿಗಳು ಕರೆದಿದ್ದಾರೆ. ಈ ಎರಡು ಶಬ್ದಗಳಿಗೆ ಷಟ್‌ಸ್ಥಲದಲ್ಲಿ ಅನುಕ್ರಮವಾಗಿ ಲಿಂಗ ಮತ್ತು ಅಂಗ ಎಂಬ ಹೆಸರುಗಳೂ ಇವೆ.

ಈ ಅಂಗಲಿಂಗಗಳು ಒಂದನ್ನೊಂದು ಬಿಟ್ಟು ಜಗತ್ತಿನಲ್ಲಿ ವ್ಯವಹರಿಸಲಾರವು. ಜಗತ್ತಿನಲ್ಲಿ ನಡೆದಿರುವ ಕಾರ್ಯಗಳೆಲ್ಲ ಇವೆರಡೂ ಕೂಡಿ ನಡೆದವುಗಳ ಮೂಲಕವಾಗಿಯೇ ಉಂಟಾಗುತ್ತವೆ.

ಹೀಗೆ ವ್ಯವಹರಿಸುವಲ್ಲಿ ಅಂಗವು ತಾನೆಲ್ಲಿಂದ ಬಂದಿದೆಂಬದನ್ನು ಲಕ್ಷಿಸದೆ ವರ್ತಿಸಿದ್ದಾದರೆ ಅದು ಅನೇಕ ಯಾತನೆಗಳನ್ನು ಅನುಭವಿಸುತ್ತ ಜನ್ಮಾಂತರಗಳನ್ನು ಹೊಂದುತ್ತ ಹೋಗುವದು. ಆದರೆ ಅದು ತಾನಾರೆಂಬದನ್ನು ತಿಳಿದುಕೊಂಡು ಲಿಂಗಾಭಿಮುಖವಾಗಿದ್ದುಕೊಂಡು ಕಾರ್ಯಗಳನ್ನು ಮಾಡುತ್ತ ಹೋದರೆ, ಲಿಂಗದ ಗುಣಗಳು ಅದರಲ್ಲಿ ಬಂದು ಕಡೆಗೆ ಅದು ಲಿಂಗವೇ ಆಗುವದು.

ಈ ವಿಷಯವನ್ನು ವಚನಕಾರನು ವಚನದ ಅಂತ್ಯಭಾಗದಲ್ಲಿ ತತ್ತ್ವಮಸಿ ಎಂಬ ವಾಕ್ಯದ ಮೂಲಕ ಸೂಚಿಸಿರುವನು. ತತ್ ಎಂದರೆ ಪರಮಾತ್ಮ ಅಥವಾ ಲಿಂಗ, ತ್ವಂ ಎಂದರೆ ಜೀವಾತ್ಮ ಅಥವಾ ಅಂಗ, ಅಸಿ ಎಂದರೆ ಈ ಉಭಯ ವಸ್ತುಗಳ ಸಾಮ್ಯಶೃತ್ವವನ್ನು ಸೂಚಿಸುವ ಶಬ್ದ ಎಂದು ಹೇಳಿರುವನು.

ವಚನಕಾರನು ಈ ವಚನದಲ್ಲಿ ಪರಮಾತ್ಮನು ಒಬ್ಬನೇ ಇದ್ದು ಅವನಿಂದಲೇ ಸೃಷ್ಟಿಯು ಆಯಿತು. ಮತ್ತು ಮನುಷ್ಯನಿಗೆ ಅಂತಿಮ ಧ್ಯೇಯವು ಲಿಂಗಾಂಗ ಸಾಮ್ಯಶೃವೆಂಬುದಿರಬೇಕೆಂತಲೂ ಇದರಲ್ಲಿ ಸೂಚಿಸಿರುವನು.

ವಚನ:— ೨. ಜಲದೊಳಗಣ ಸೂರ್ಯನಂತೆ ಇರ್ಪನಯ್ಯಾ ಶಿವನು. ಲೋಕಾದಿಲೋಕಂಗಳೊಳಗಿರ್ದೊಡೇನು? ಜಗದ ಪುಣ್ಯ ಪಾಪ ಸ್ವರ್ಗ ನರಕ ಬಂಧ ಮೋಕ್ಷಕ್ಕೆ ಒಳಗಾದಾತನೇ? ಅಲ್ಲ. ಅದೆಂತೆಂದೊಡೆ, ಜಲದೊಳಗಣ ಪ್ರಕೃತಿ ವಿಕೃತಿಗಳು ಜಲಕ್ಕಲ್ಲದೆ ಸೂರ್ಯಂಗಿಲ್ಲವಾಗಿ. ಲೋಕದ ಸ್ಥಿತಿಗತಿ ಲೋಕಕ್ಕಲ್ಲದೆ, ಶಿವಂಗಿಲ್ಲವಾಗಿ. ಅನಂತ ಕೋಟಿ ಬ್ರಹ್ಮಾಂಡಗಳು ತನ್ನ ಒಡಲೊಳಗಿರ್ಪವೆಂದೊಡೆ, ತಾ ಹೊರಗಾಗಿ, ಅಡಗಲೆಡೆಯುಂಟೇ? ಇದು ಕಾರಣ ನಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು ವಿಶ್ವದೊಳಗೆ ಹೊದ್ದಿಯೂ ಹೊದ್ದದಿರಬಲ್ಲ. ವಿಶ್ವಾಧಿಪತಿಯೊಗಲೂ ಬಲ್ಲ.

ಭಾವ:— ಹಿಂದಿನ ವಚನದಲ್ಲಿ ಅಂಗಲಿಂಗಗಳು ಹ್ಯಾಗೆ ಉದ್ಭವಿಸಿದವೆಂಬದನ್ನು ವಚನಕಾರನು ಹೇಳಿರುವನು. ಈ ವಚನದಲ್ಲಿ ಅಂಗಲಿಂಗ

ಗಳು ಜಗತ್ತಿನಲ್ಲಿ ಯಾವ ಬಗೆಯ ಸಂಬಂಧವುಳ್ಳವೆಂಬದನ್ನು ಹೇಳಿರುವನು. ಇವುಗಳಲ್ಲಿ ಅಂಗವು ಅನೇಕ ನ್ಯೂನತೆಗಳುಳ್ಳದ್ದಿರುತ್ತದೆ. ಅದ್ದರಿಂದ ಲಿಂಗಕ್ಕೂ ಕೂಡ ಇದೇ ಸ್ಥಿತಿಯೋ ಹ್ಯಾಗೆ, ಮತ್ತು ಅವೆರಡೂ ಪರಸ್ಪರ ಕೂಡಿಕೊಂಡು ವ್ಯವಹರಿಸುವದು ಹ್ಯಾಗೆ ಶಕ್ಯವು ಎಂಬ ಸಂಶಯವು ಉತ್ಪನ್ನವಾಗುತ್ತದೆ. ಈ ಸಂಶಯದ ಪರಿಹಾರವನ್ನು ವಚನಕಾರನು ಈ ವಚನದಲ್ಲಿ ಮಾಡಿರುವನು. ಅವನು ಈ ವಿಷಯದಲ್ಲಿ ಅನ್ನುವದೇನೆಂದರೆ, ಜಲದಲ್ಲಿ ಹ್ಯಾಗೆ ಸೂರ್ಯನು ಪ್ರತಿಬಿಂಬಿಸಿ ಅದರಲ್ಲಿ ಕಾಣುತ್ತಾನೋ, ಹಾಗೆಯೇ ಲಿಂಗವೂ ಕೂಡ ಅಂಗದಲ್ಲಿ ಪ್ರತಿಬಿಂಬಿಸಿ ಹೊಳೆಯುತ್ತದೆ. ಜಲದಲ್ಲಿ ಹ್ಯಾಗೆ ಸೂರ್ಯನ ಸ್ವರೂಪನ್ನು ಕಾಣಬಹುದೋ ಹಾಗೆಯೇ ಅಂಗದಲ್ಲಿ ಲಿಂಗದ ಸ್ವರೂಪನ್ನು ಕಾಣಬಹುದು. ಯಾವ ಬಗೆಯ ಸಂಬಂಧವು ಜಲ ಮತ್ತು ಸೂರ್ಯ ಇವುಗಳ ಮಧ್ಯದಲ್ಲಿ ಇರುತ್ತದೋ ಅದೇ ಬಗೆಯ ಸಂಬಂಧವು ಅಂಗ ಲಿಂಗದಲ್ಲಿ ಅಥವಾ ಜಗತ್ತು ಮತ್ತು ಪರಮಾತ್ಮ ಇವುಗಳಲ್ಲಿ ಇರುತ್ತದೆಂದು ಹೇಳಿರುವನು.

ಈ ಸಂಬಂಧವನ್ನು ಕುರಿತು ಅವನು ಅನ್ನುವದೇನೆಂದರೆ, ಶಿವನು ಮೇಲ್ಕಂಡ ರೀತಿಯಿಂದ ಅನಂತ ಲೋಕಗಳಲ್ಲಿ ಇದ್ದರೂ, ಆ ಲೋಕಗಳಿಗೆ ಇರುವ ಬಂಧಮೋಕ್ಷಗಳೂ ಅವುಗಳಲ್ಲಿಯ ಪಾಪಪುಣ್ಯಗಳೂ ಸ್ವರ್ಗ ನರಕಗಳೂ ಪರಶಿವನಿಗೆ ಉಂಟಾಗುವದಿಲ್ಲ. ನೀರಿನ ಪ್ರಾಕೃತಿಕ ಗುಣಗಳು ಹ್ಯಾಗೆ ಸೂರ್ಯನಿಗೆ ಸಂಬಂಧಪಡುವದಿಲ್ಲವೋ ಅದೇ ಮೇರೆಗೆ ಲೋಕದಲ್ಲಿಯ ಕುಂದುಕೊರತೆಗಳು ಲೋಕಕ್ಕೆ ಮಾತ್ರ ಸಂಬಂಧಪಡುತ್ತವೇ ಹೊರ್ತು ಪರಮಾತ್ಮನಿಗೆ ಸಂಬಂಧಪಡುವದಿಲ್ಲ. ಲೋಕದ ಸ್ಥಿತಿಗತಿಗಳು ಲೋಕಕ್ಕಲ್ಲದೆ ಶಿವಂಗೆ ಇರಲಾರವು.

ಬ್ರಹ್ಮಾಂಡಗಳು ಅನಂತಕೋಟಿ ಇದ್ದು ಅವು ಎಷ್ಟು ವಿಸ್ತೀರ್ಣವಾಗಿದ್ದರೂ ಅವೆಲ್ಲವೂ ಪರಮಾತ್ಮನ ಕುಕ್ಷಿಯೊಳಗೆ ಮಾತ್ರ ಇರುತ್ತವೆ. ಪರಮಾತ್ಮನು ಬಾಹ್ಯ ಸೃಷ್ಟಿಗೆ ಅತೀತನಾಗಿರುತ್ತಾನೆ. ಆದ್ದರಿಂದ ಇಂಥವನು ಈ ಸೃಷ್ಟಿಯೊಳಗೆ ಒಂದು ವಿಶಿಷ್ಟ ಸ್ಥಾನದಲ್ಲಿ ಇರುತ್ತಾನೆಂತಲೂ ಅನ್ನಲಿಕ್ಕೆ ಬರಲಾರದು. ಹೀಗೆ ತಿಳಿಯುವದು ತಪ್ಪು ಇರುತ್ತದೆ. ಯಾಕಂದರೆ, ಬಹು ವಿಸ್ತೀರ್ಣವಾದ ಪರಮಾತ್ಮನು ಕಿಂಚಿತ್ತಾದ ಸೃಷ್ಟಿಯಲ್ಲಿ ಇರಲಿಕ್ಕೆ ಇದರಲ್ಲಿ ಸ್ಥಳವೆಲ್ಲಿದೆ?

ಆದ್ದರಿಂದ ಪರಮಾತ್ಮನು ಜಗತ್ತಿನಲ್ಲಿ ಕೇವಲ ಪ್ರತಿಬಿಂಬರೂಪನಾಗಿ ವಾಸಿಸುತ್ತಾನೆ. ಅವನು ಜಗತ್ತಿನ ಬಂಧಮೋಕ್ಷಗಳಿಗೆ ಹೊರಗಾಗಿರು

ತ್ತಾನೆ. ಮತ್ತು ಅವನು ಜಗತ್ತಿಗೆ ಮೀರಿದವನಾಗಿರುತ್ತಾನೆ. ಮೀರಿದವನಾದರೂ ಜಗತ್ತನ್ನು ಬಿಟ್ಟಿಲ್ಲ. ಅದರಲ್ಲಿಯೇ ಇದ್ದಾನೆ. ಅದರಲ್ಲಿ ಇದ್ದರೂ ಅದರಲ್ಲಿ ಬೆರಿಸದೆ ಇದ್ದಾನೆ. ಬೆರಿಸದೆ ಇದ್ದರೂ ಜಗತ್ತನ್ನು ತನ್ನ ಅಂಕಿತದಲ್ಲಿಟ್ಟುಕೊಂಡಿರುತ್ತಾನೆ. ಜಗತ್ತಿನ ವ್ಯಾಪಾರಗಳೆಲ್ಲವೂ ಪರಮಾತ್ಮನ ಅಧೀನತೆಯಲ್ಲಿಯೇ ಸಾಗಿರುತ್ತವೆ ಎಂದು ವಚನಕಾರನು ಹೇಳಿರುವನು.

ವಚನಃ— ೩. ಶಿವ ತನ್ನ ವಿನೋದಕ್ಕೆ ರಚಿಸಿದನು ಅನಂತ ವಿಶ್ವವನು. ರಚಿಸಿದವನು ವಿಶ್ವಕ್ಕೆ ಹೊರಗಾಗಿರ್ದನೇ? ಇಲ್ಲ. ವಿಶ್ವಮಯ ತಾನಾದನು. ವಿಶ್ವವೆಲ್ಲವೂ ತಾನಾದೊಡೆ ವಿಶ್ವದುತ್ಪತ್ತಿ ಸ್ಥಿತಿ ಲಯಕ್ಕೊಳಗಾದನೇ? ಇಲ್ಲ. ಅದೇನುಕಾರಣವೆಂದೊಡೆ, ಅಜಾತನಾಗಿ ಉತ್ಪತ್ತಿ ಇಲ್ಲ. ಕರ್ಮರಹಿತನಾಗಿ ಸ್ಥಿತಿಗೊಳಗಲ್ಲ ಮರಣರಹಿತನಾಗಿ ಲಯಕ್ಕೊಳಗಲ್ಲ. ಇಂತೀ ಗುಣತಯಂಗಳ ಹೊದ್ದಲರಿಯ ತಾನಲ್ಲದೆ ವಿಶ್ವಕ್ಕಾಧಾರವಿಲ್ಲಾಗಿ ದೂರಸ್ಥನಲ್ಲ. ತನ್ನಲ್ಲಿ ತಾನಲ್ಲದೆ ಅನ್ಯವು ತೋರಲರಿಯದಾಗಿ ಇದಿರಿಲ್ಲ. ಇದಿರಿಲ್ಲಾಗಿ ವಿಶ್ವಮಯ ತಾನಾದುದೇ ಸತ್ಯ. ಅರಸು ಕಾಲಾಳಾಗಬಲ್ಲ ತನ್ನ ವಿನೋದಕ್ಕೆ ಮರಳಿ ಅರಸಾಗಬಲ್ಲ. ನಿಮ್ಮ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನು ಜಗವಾಗಲೂ ಬಲ್ಲ, ಜಗವಾಗದಿರಲೂ ಬಲ್ಲನಯ್ಯ.

ಭಾವಃ— ವಚನಕಾರನು ಹಿಂದಿನ ವಚನದ ಭಾವವನ್ನು ಹೆಚ್ಚಿಗೆ ಸ್ಪಷ್ಟವಾಗಿ ಇಲ್ಲಿ ಉಲ್ಲೇಖಿಸಿರುವನು. ಪರಮಾತ್ಮನು ತನ್ನ ವಿನೋದಕ್ಕೆ ಈ ಅನಂತವಾದ ವಿಶ್ವವನ್ನು ರಚಿಸಿದ್ದಾನೆ. ಹೀಗೆ ರಚಿಸಿದ ಪರಮಾತ್ಮನು ವಿಶ್ವಕ್ಕೆ ಹೊರಗಾಗಿಲ್ಲ. ಅವನು ವಿಶ್ವಮಯನಾಗಿ ಇದ್ದಾನೆ. ಅಂದರೆ ವಿಶ್ವದಲ್ಲೆಲ್ಲ ತುಂಬಿಕೊಂಡಿರುವನು. ಹೀಗೆ ಅವನು ವಿಶ್ವದಲ್ಲೆಲ್ಲ ತುಂಬಿಕೊಂಡರೂ ವಿಶ್ವದ ಉತ್ಪತ್ತಿ ಸ್ಥಿತಿ ಲಯಕ್ಕೆ ಒಳಗಾಗಿರುವದಿಲ್ಲ. ಅದು ಹ್ಯಾಗೆಂದರೆ ಪರಮಾತ್ಮನಿಗೆ ತಂದೆ ತಾಯಿಗಳಿಲ್ಲಾದ್ದರಿಂದ ಅವನಿಗೆ ಉತ್ಪತ್ತಿ ಇಲ್ಲ. ಹಾಗೆಯೇ ಅವನು ಕರ್ಮರಹಿತನಾಗಿರುವನು. ಆದ್ದರಿಂದ ಅವನಿಗೆ ಸ್ಥಿತಿಯು ಇಲ್ಲ. ಅವನಿಗೆ ಮರಣವೂ ಇಲ್ಲ. ಆದ್ದರಿಂದ ಲಯವೂ ಇಲ್ಲ.

ಅದೇ ಪ್ರಕಾರ ಪರಮಾತ್ಮನು ವಿಶ್ವದಿಂದ ದೂರನಿಲ್ಲ. ಅದಕ್ಕೆ ಅವನ ಸಂಬಂಧವದೆ. ಈ ಸಂಬಂಧವು ಇಲ್ಲದೆ ಹೋದದ್ದಾದರೆ ವಿಶ್ವವು ನಡೆಯಲಾರದು. ಅದು ನಿಂತುಹೋಗುವದು. ಯಾಕಂದರೆ ವಿಶ್ವದಲ್ಲಿ ಸ್ವತಂತ್ರತ್ವವು ಇಲ್ಲ.

ಅದರಂತೆಯೇ ಪರಮಾತ್ಮನಿಗೆ ಇದಿರಿಲ್ಲ. ಅಂದರೆ ಅವನನ್ನು ಸರಿಗಟ್ಟಿ ಅವನು ಮಾಡುವ ಕಾರ್ಯಗಳನ್ನು ಮಾಡಿ ಜಗತ್ತಿನಲ್ಲಿ ವ್ಯವಹರಿಸುವ ಬೇರೊಂದು ವಸ್ತುವಿಲ್ಲ ಪರಮಾತ್ಮನಲ್ಲಿ ತೋರತಕ್ಕ ವಸ್ತುವು ಪರಮಾತ್ಮನ ಹೊರ್ತು ಬೇರೆ ಯಾವದಿರಬಹುದು? ಅವನಲ್ಲಿ ಅವನ ಹೊರ್ತು ಬೇರೆ ಯಾವ ವಸ್ತುವೂ ಇರಲಾರದು.

ಹೀಗೆ ಪರಮಾತ್ಮನಿಗೆ ಇದಿರೆಂಬುದು ಇಲ್ಲದ್ದರಿಂದ ಪರಮಾತ್ಮನು ವಿಶ್ವಮಯನಾಗಿರುವನೆಂದು ತಾನಾಗಿಯೇ ಸಿದ್ಧವಾಗುತ್ತದೆಂದು ವಚನಕಾರನು ಹೇಳುತ್ತಾನೆ.

ಈ ಪ್ರಕಾರ ವಚನಕಾರನು ತನ್ನ ಅಭಿಪ್ರಾಯವನ್ನು ಹೇಳಿ ಅದನ್ನು ಸ್ಪಷ್ಟಪಡಿಸಲಿಕ್ಕೆ ಒಂದು ಉದಾಹರಣೆಯನ್ನು ಕೊಟ್ಟಿರುವನು. ಅರಸಾದವನು ಅರಸನಂತೆ ವ್ಯವಹರಿಸುವದಲ್ಲದೆ. ಕಾಲಾಳಿನಂತೆಯೂ ವ್ಯವಹರಿಸಬಲ್ಲನು. ಅವನು ಹೀಗೆ ತನ್ನ ವಿನೋದಕ್ಕಾಗಿ ವ್ಯವಹರಿಸಬಹುದು. ಆದರೆ ಹೀಗೆ ವ್ಯವಹರಿಸಿದಾಕ್ಷಣಕ್ಕೆ ಅರಸನೆಂಬವನ ಮಹತ್ವಕ್ಕೆ ಚ್ಯುತಿಯು ಬರಲಾರದು. ಯಾಕಂದರೆ ಅವನು ತನ್ನ ಮನಸ್ಸಿಗೆ ಬಂದಾಗ ಕಾಲಾಳಿನ ಸ್ಥಿತಿಯನ್ನು ಬಿಟ್ಟು ಅರಸನ ಸ್ಥಿತಿಯನ್ನು ಕೂಡಲೆ ತಾಳಬಹುದು. ಇದೇ ಪ್ರಕಾರ ಲಿಂಗಕ್ಕೂ ಅಂಗಕ್ಕೂ ಪರಮಾತ್ಮನಿಗೂ ಜಗತ್ತಿಗೂ ಸಂಬಂಧವಿದೆ ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ

ವಚನಃ— ೪. ಲಿಂಗದ ಮರ್ಮವನರಿವುದರಿದು. ಲಿಂಗದ ಸಂಜ್ಞೆಯರಿವುದರಿದು. ಲಿಂಗವಂತಹದಿಂತಹದೆಂದರಿವುದರಿದು ನೋಡಾ! ಲಿಂಗದಲ್ಲಿಯೇ ಅಗಮುವಯ್ಯ. ಭೂಮಿಯೇ ಪೀಠಿಕೆ, ಆಕಾಶವೇ ಲಿಂಗವೆಂದರಿದಾತನು ಲಿಂಗವನರಿದವನಲ್ಲ. ಲಿಂಗದಲ್ಲಿಯೇ ಅಗಮುವಯ್ಯ. ಲಿಂಗದಾದಿ ಬ್ರಹ್ಮ, ಮಧ್ಯ ವಿಷ್ಣು, ಅಂತ್ಯ ರುದ್ರ. ಇಂತು ತ್ರೈಲಿಂಗವೆಂದರಿದಾತನು ಲಿಂಗವನರಿವನಲ್ಲ. ಲಿಂಗದಲ್ಲಿಯೇ ಅಗಮುವಯ್ಯ. ಲಿಂಗ ಮಧ್ಯೇ ಜಗತ್ಸರ್ವಂ ಎಂಬ ಭಾವರಹಿತ ಲಿಂಗ. ಬ್ರಹ್ಮಾ ವಿಷ್ಣು ಸ್ಸರ್ವೇ ದೇವೈರಪ್ಯಗೋಚರಂ ಎಂದು, ಮಹೇಶ್ವರ ಜ್ಯೋತಿರಾಪಾತಾಳೆ ವ್ಯವಸ್ಥಿತಾ। ಅತೀತಂ ಸತ್ಯ ಲೋಕಾದಿರನಂತ ದಿವ್ಯಮೀಶ್ವರಂ। ಇಂತಾದನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನೆಂದರಿದ ಶರಣಂಗೆ ಸುಲಭ. ಮಿಕ್ಕಿನವರ್ಗೆ ಅಸುಲಭ.

ಭಾವಃ— ಈ ವರೆಗೆ ವಚನಕಾರನು ಅನೇಕ ಬಗೆಯ ಸಾದೃಶ್ಯಗಳನ್ನು ಹೇಳಿ ದೇವರ ಸ್ವರೂಪನ್ನು ತಿಳಿಸಲಿಕ್ಕೆ ಪ್ರಯತ್ನಿಸಿದನು. ಆದರೆ ಹೀಗೆ ಹೇಳಿದರಿಂದ ತಿಳಿಸುವದು ಕಷ್ಟವು ಮತ್ತು ಹೀಗೆ ತಾನು ಜ್ಞಾನಮಾಡಿಕೊಳ್ಳುವದೂ ಕಷ್ಟವೆಂದು ಈ ವಚನದಲ್ಲಿ ಹೇಳಿರುವನು. ಅವನು ಇಲ್ಲಿ ಅನ್ನುವದೇನೆಂದರೆ, ಲಿಂಗದ ಮರ್ಮವನರಿಯುವದು ಕಠಿಣವು. ಲಿಂಗದ ಗುರ್ತುಗಳನ್ನು ಕಂಡುಹಿಡಿಯುವದು ಅಸಾಧ್ಯವು. ಮತ್ತು ಲಿಂಗವು ಅಂತಹದು ಇಂತಹದು ಎಂದು ಗೊತ್ತುಮಾಡಿಕೊಳ್ಳುವದೂ ಆಗದ ಮಾತು. ಅನೇಕರು ಆಗಮ ಗ್ರಂಥಗಳಿವೆ, ಅವುಗಳಿಂದ ದೇವರನ್ನು ತಿಳಿಯಬಹುದು ಎಂದು ತಿಳಿಯುತ್ತಾರೆ. ಆದರೆ ನಿಜವಾದ ಆಗಮಗಳು ಲಿಂಗದಲ್ಲಿಯೇ ಇವೆ. ಅಂದರೆ ಪರಮಾತ್ಮನ ಜ್ಞಾನವು ಪುಸ್ತಕದಲ್ಲಿ ಇಲ್ಲ. ಲಿಂಗದಲ್ಲಿಯೇ ತಿಳಿಯಬೇಕೆಂದು ವಚನಕಾರನ ಅಭಿಪ್ರಾಯವು. ಬೇರೆ ಕೆಲವರು ಪರಮಾತ್ಮನ ಸ್ವರೂಪನ್ನು ಹೇಳುವಲ್ಲಿ ಅವನಿಗೆ ಭೂಮಿಯೇ ಪೀಠ, ಆಕಾಶವೇ ಲಿಂಗ ಎಂದು ಹೇಳುತ್ತಾರೆ. ಬೇರೆ ಕೆಲವರು ಲಿಂಗದ ಆದಿ ಬ್ರಹ್ಮ, ಲಿಂಗದ ಮಧ್ಯ ವಿಷ್ಣು ಎಂದು ಮೊದಲಾಗಿ ಹೇಳುವದುಂಟು. ಮತ್ತು ಈ ವಿಧಾನಗಳಿಗೆ ಆಗಮದ ಆಧಾರಗಳನ್ನೂ ಕೊಡುವದುಂಟು. ಆದರೆ ಇದು ಲಿಂಗದ ತಿಳುವಳಿಕೆಯಲ್ಲ. ಲಿಂಗದ ಒಳಗೆ ಹೀಗೆ ಇದೆ ಹೊರಗೆ ಹೀಗೆ ಇದೆ, ಅದರಲ್ಲಿ ಜಗತ್ತು ಇದೆ ಎಂದು ವಿವರಿಸಲಿಕ್ಕೆ ಬರಲಾರದು. ಯಾಕಂದರೆ ಇಂಥ ವಿಚಾರಗಳಿಗೆ ಲಿಂಗವು ಅತೀತವಾಗಿರುವದು. ನಿಜವಾಗಿ ಲಿಂಗವು ಬ್ರಹ್ಮ ವಿಷ್ಣು ಮತ್ತು ಇತರ ದೇವತೆಗಳಿಗೆ ಅಗೋಚರವಾಗಿರುವದು. ಅದು ಲೋಕಾದಿ ಲೋಕಗಳನ್ನು ಮೀರಿರುವದು. ಅದು ಅನಂತವಾಗಿರುವದು. ಅದು ಪರಾ ವಸ್ತುವು. ಈ ರೀತಿ ಅದರ ಸ್ವರೂಪವು. ಇದನ್ನು ತಿಳಿದುಕೊಂಡು ವರ್ತಿಸುವವನೇ ಶರಣನು. ಇಂಥವನಿಗೆ ಮಾತ್ರ ಲಿಂಗವು ಸುಲಭವಾಗುವದು, ಉಳಿದವರಿಗೆ ಕಠಿಣವಾಗುವದೆಂದು ಹೇಳಿರುವನು.

ವಚನಃ—೫. ತನ್ನ ತಾನರಿದಿಹವೆ ಪರಮಾತ್ಮಯೋಗ. ತನ್ನ ತಾ ಮರೆದಿಹವೆ ಮಾಯಾಸಂಬಂಧ.ಅಂತರಂಗ ಬಹಿರಂಗ ಪರಮಾಕಾಶ ಮಧ್ಯದಲ್ಲಿ ಪರಮಾತ್ಮನು ಪರಬ್ರಹ್ಮ ಸ್ವರೂಪನು ನಿತ್ಯನಿರಂಜನವು ಉಪಮಾತೀತ ನಿಃಪತಿ ಕೇವಲ ನಿಷ್ಕಲ ಸ್ವರೂಪನು. ಭ್ರೂಮಧ್ಯದಲ್ಲಿ ಪರಮಾತ್ಮನೆ ಅಂತರಾತ್ಮನಾಗಿ ಸಕಲ ನಿಷ್ಕಲನಾಗಿಪ್ಪನು. ಹೃದಯಸ್ಥಾನದಲ್ಲಿ ಆ ಪರಮಾತ್ಮನೆ ಜೀವಾತ್ಮನಾಗಿ ಕೇವಲ ಸಕಲನಾಗಿಪ್ಪನು. ಬ್ರಹ್ಮರಂಧ್ರಸ್ಥಾನದಲ್ಲಿ ನಿಷ್ಕಲ ಗುರುಮೂರ್ತಿಲಿಂಗ, ಭ್ರೂಮಧ್ಯಸ್ಥಾನದಲ್ಲಿ ಸಕಲ ಪರಂಜ್ಯೋತಿರ್ಲಿಂಗ, ಹೃದಯಸ್ಥಾನದಲ್ಲಿ ಕೇವಲ ಸಕಲ ಜಂಗಮಲಿಂಗ. ಇಂತು ಪರಮಾತ್ಮನೆ ಅಂತರಾತ್ಮ, ಪರಮಾತ್ಮನೆ ಜೀವಾತ್ಮ ಪರಮಾತ್ಮನೆ ಗುರುಲಿಂಗ, ಪರಮಾತ್ಮನೆ ಶಿವಲಿಂಗ, ಪರಮಾತ್ಮನೆ ಜಂಗಮಲಿಂಗ, ಇಂತು ಪರಬ್ರಹ್ಮನೆ ಪರಮಾತ್ಮ, ಪರಮಾತನೆ ಸರ್ವಾತ್ಮ ಪರಮಾತ್ಮನೆ ಸರ್ವಗತ, ಪರಮಾತ್ಮನೆ ಆತ್ಮಗತ. ಇದು ಕಾರಣ ಪರಮಾತ್ಮನೆ ಅಂತರಂಗ ಬಹಿರಂಗ ಭೀತ ಪ್ರಾಣಲಿಂಗ. ಇಂತು ಅರಿದುದೆ ಪರಮಾತ್ಮಯೋಗ, ಮರೆವೆಯೇ ಮಾಯಾಸಂಬಂಧವಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಇದರಲ್ಲಿ ವಚನಕಾರನು ತನ್ನನ್ನು ತಾನು ಅರಿಯುವದು ಹೇಗೆ? ಹೀಗೆ ಅರಿಯುತಕ್ಕ ಪರಮಾತ್ಮನ ಸ್ವರೂಪು ತನ್ನಲ್ಲಿ ಆವುದು ಎಂಬವನ್ನು ಹೇಳಿರುವನು.

ಮನುಷ್ಯನಲ್ಲಿ ಮುಖ್ಯ ಸ್ಥಾನಗಳು ಮೂರು ಇವೆ. ಅವು ಹೃದಯ, ಭ್ರೂಮಧ್ಯ, ಮತ್ತು ಬ್ರಹ್ಮರಂಧ್ರ ಹೀಗೆ ಇವೆ. ಇವು ಮನುಷ್ಯನ ಮುಖ್ಯ ಕೇಂದ್ರಸ್ಥಾನಗಳೆಂದು ತಿಳಿಯಬಹುದು. ಪರಮಾತ್ಮನು ಈ ಮೂರೂ ಸ್ಥಾನಗಳಲ್ಲಿ ಇರುತ್ತಾನೆ. ಇವುಗಳಲ್ಲಿ ಅವನನ್ನು ಕಾಣುವದೇ ತನ್ನನ್ನು ತಾನು ತಿಳಿಯುವದು. ಇದೇ ಪರಮಾತ್ಮಯೋಗವೆನಿಸುವದು. ತಿಳಿಯದೆ ಹೋದರೆ ಮಾಯಾಸಂಬಂಧವೆಂದು ವಚನಕಾರನು ಹೇಳುತ್ತಾನೆ.

ಬ್ರಹ್ಮರಂಧ್ರಕ್ಕೆ ವಚನಕಾರನು ಇಲ್ಲಿ ಪರಮಾಕಾಶವೆಂಬ ಹೆಸರನ್ನು ಕೊಟ್ಟಿರುವನು. ಇದರ ಮಧ್ಯದಲ್ಲಿ ಪರಮಾತ್ಮನು ವಾಸಿಸುತ್ತಿದ್ದು ಅಲ್ಲಿ ಅವನು ಪರಬ್ರಹ್ಮಸ್ವರೂಪನು, ನಿತ್ಯನು, ನಿರಂಜನನು ಎಂದರೆ ಅತ್ಯಂತ ಶುದ್ಧನು, ಹಾಗೂ ಉಪಮಾತೀತನು, ನಿಃಪತಿಯು ಎಂದರೆ ಜೋಡಿಲ್ಲದವನು, ಮತ್ತು ಕೇವಲ ನಿಷ್ಕಲ ಸ್ವರೂಪನು ಆಗಿರುತ್ತಾನೆ. ಎಂದರೆ ಪರಮಾತ್ಮನು ಜಗತ್ತಿನ ಆರಂಭಸ್ಥಿತಿಯಲ್ಲಿ ಯಾವ ಬಗೆಯಾಗಿ ಕಲಾರಹಿತನಾಗಿ ಇರುತ್ತಾನೋ ಆದೇ ಬಗೆಯಾಗಿ ಅವನು ಈ ಬ್ರಹ್ಮರಂಧ್ರದಲ್ಲಿ ವಾಸಿಸುತ್ತಾನೆ. ಅವನು ಭ್ರೂಮಧ್ಯದಲ್ಲಿಯೂ ಇದ್ದು ಅಲ್ಲಿ ಸಕಲನಿಷ್ಕಲ ಸ್ವರೂಪನಾಗಿರುತ್ತಾನೆ. ಎಂದರೆ ಇಲ್ಲಿ ಅವನು ಕೇವಲ ನಿಷ್ಕಲನೂ ಅಲ್ಲ ಕೇವಲ ಸಕಲನೂ ಅಲ್ಲ, ಉಭಯ ಸ್ಥಿತಿಗಳನ್ನು ಕೂಡಿಕೊಂಡು ಇರುತ್ತಾನೆ. ಅಲ್ಲಿ ಅವನಿಗೆ ಅಂತರಾತ್ಮನೆಂಬ ಹೆಸರು. ಹೃದಯಸ್ಥಾನದಲ್ಲಿ ಪರಮಾತ್ಮನು ಕೇವಲ ಸಕಲ ರೂಪನಾಗಿ

ಇರುತ್ತಾನೆ. ಅಲ್ಲಿ ಅವನಿಗೆ ಜೀವಾತ್ಮನೆಂಬ ಹೆಸರು. ಈ ಜೀವಾತ್ಮನು ಅಲ್ಲಿ ಜಗತ್ತಿಗೆ ಸಂಬಂಧಪಟ್ಟವನಾಗಿ ವ್ಯವಹರಿಸುತ್ತಾನೆ.

ಈ ಮೂರು ಸ್ಥಳಗಳಲ್ಲಿ ಲಿಂಗದ ಸ್ವರೂಪು ಯಾವ ಬಗೆಯಾಗಿ ಇರುತ್ತದೆಂಬದನ್ನು ಅವನು ಈ ವಚನದಲ್ಲಿ ವಿವರಿಸಿದ್ದು ಹ್ಯಾಗೆಂದರೆ, ಅವನು ಬ್ರಹ್ಮರಂಧ್ರದಲ್ಲಿ ನಿಷ್ಕಲ ಗುರುಮೂರ್ತಿ ಲಿಂಗವಾಗಿರುವನು. ಎಂದರೆ ಬೋಧಾಶಕ್ತಿಯುಳ್ಳವನಾಗಿ ಉಚ್ಚತಮ ಸ್ಥಿತಿಯಲ್ಲಿ ಕೇವಲ ನಿಷ್ಕಲಸ್ವರೂಪನಾಗಿ ಇರುತ್ತಾನೆ. ಭ್ರೂಮಧ್ಯದಲ್ಲಿ ಜ್ಯೋತಿರ್ಲಿಂಗ ರೂಪದಿಂದ ಇರುತ್ತಾನೆ. ಇದು ಅತ್ಯಂತ ಪ್ರಕಾಶಮಾನವಾದ ಸ್ಥಿತಿಯು. ಅದು ಅಲ್ಲಿ ಓಂಕಾರರೂಪವು. ಅದಕ್ಕೆ ಮಹಾಲಿಂಗವೆಂತಲೂ ಹೆಸರುಂಟು. ಹೃದಯಸ್ಥಾನದಲ್ಲಿ ಪರಮಾತ್ಮನು ಜಂಗಮಲಿಂಗವೆಂಬ ಹೆಸರನ್ನು ಪಡೆದಿದ್ದಾನೆ. ಈ ಲಿಂಗವು ಚೈತನ್ಯಾತ್ಮಕವಾದದ್ದು. ಇದು ಶರೀರದ ಬಹಿರಂಗದ ವ್ಯಾಪಾರಗಳಿಗೆ ಸಂಬಂಧಪಟ್ಟದ್ದಿರುತ್ತದೆ.

ಈ ಪ್ರಕಾರ ಈ ಸ್ಥಾನಗಳಲ್ಲಿ ಪರಮಾತ್ಮನು ಎರಡು ಬಗೆಯ ಸ್ಥಿತಿಗಳಲ್ಲಿ ಕೂಡಿಕೊಂಡಿರುತ್ತಾನೆ. ಮನುಷ್ಯನು ತನ್ನನ್ನು ಸಂಬಂಧಿಸಿ ಮಾಡುವ ಕಾರ್ಯಗಳು ಹಾಗೂ ಜಗತ್ತನ್ನು ಸಂಬಂಧಿಸಿ ಮಾಡುವ ಕಾರ್ಯಗಳು ಹೀಗೆ ಎರಡು ವಿಧವಾಗಿವೆ. ಇವೆರಡೂ ಪರಸ್ಪರ ಸಂಬಂಧವುಳ್ಳವು. ಹ್ಯಾಗೆಂದರೆ, ಜೀವಾತ್ಮನು ಜಂಗಮಲಿಂಗ ಸ್ವರೂಪನಾಗಿ, ಅಂತರಾತ್ಮನು ಮಹಾಲಿಂಗಸ್ವರೂಪನಾಗಿ, ಪರಮಾತ್ಮನು ಕೇವಲ ನಿಷ್ಕಲ ಲಿಂಗಸ್ವರೂಪನಾಗಿ ಇರುತ್ತಾನೆ. ಈ ಮರ್ಮವನ್ನು ತಿಳಿದು ವರ್ತಿಸಿದಾಗಲೇ ಪರಮಾತ್ಮಯೋಗವೆಂದು ವಚನಕಾರನು ಅಂದಿದ್ದಾನೆ.

ಈ ಪ್ರಕಾರ ವಚನಕಾರನು ಹೇಳಿ ಈ ಬಗೆಯ ವಿಚಾರಗಳಿಂದ ಪರಮಾತ್ಮನಲ್ಲಿ ಭಿನ್ನತೆಯನ್ನು ಕಲ್ಪಿಸಿದಂತಾಗಲಿಲ್ಲ ಎಂದು ಅಂದಿದ್ದಾನೆ. ಎಂದರೆ ಪರಮಾತ್ಮನೇ ಅಂತರಾತ್ಮನು ಮತ್ತು ಜೀವಾತ್ಮನು. ಪರಮಾತ್ಮನೇ ಗುರು ಲಿಂಗ ಶಿವಲಿಂಗ ಜಂಗಮಲಿಂಗರೂಪಾದಾತನು. ಪರಬ್ರಹ್ಮನು ಮನುಷ್ಯನಲ್ಲಿ ಪರಮಾತ್ಮಸ್ವರೂಪನಾಗಿ ವಾಸಿಸುತ್ತಾನೆ. ಮತ್ತು ಜಗತ್ತಿನಲ್ಲೆಲ್ಲ ಸರ್ವಾತ್ಮನಾಗಿ ಸರ್ವಗತನಾಗಿ ಆತ್ಮಗತನಾಗಿ ಇರುತ್ತಾನೆ. ಜಗತ್ತಿನ ಒಳಗೂ ಹೊರಗೂ ಅವನು ಪ್ರಾಣಲಿಂಗನಾಗಿ ಇದ್ದಾನೆ ಎಂದು ಇಲ್ಲಿ ಹೇಳಿರುವನು.

ಬಸವೇಶ್ವರ

ಷಟ್‌ಸ್ಥಲ ವಚನದ ಕಥಾಸಾರ.

೨ ನೆಯ ವಚನದ ಕಥೆ. (೧-೧) *

ಕಂಕಾಳ.

ಕಂಕಾಳೇ ಷೋಡಶಂ ಭವೇತ್ ಸ್ಕಂದಪುರಾಣದಲ್ಲಿಯ ಕಾಳಿಕಾಖಂಡದಲ್ಲಿ ಸೂತಮುನಿ ನೈಮಿಷಾರಣ್ಯವಾಸಿಗಳಿಗೆ ಬಲಿಯು ಭಾಗೀರಥಿಯ ತೀರದಲ್ಲಿ ಒಂದು ಕಡಿವೆ ನೂರು ಯಜ್ಞವ ಮಾಡಿ ಮತ್ತೊಂದಂ ಮಾಡಬೇಕೆಂಬಾಗ ಇಂದ್ರನು ವಿಷ್ಣುವಿನ ಕೂಡೆ ನನ್ನ ಪದವ ಕೊಡಿಸು ಎನಲು, ಆಗ ಹರಿಯು ಗದೆ, ಚಕ್ರ, ಬಿಲ್ಲು ಇವ ಕೂಡೆ ಬಲಿಯ ವಧಿಸು ಎನಲು ಅದು ನನ್ನ ಕಯ್ಯಲಾಗದೆನಲು ಆಗ ತಾನೆ ಅದಿತಿಯಲ್ಲಿ ವಾಮನನಾಗಿ ಹುಟ್ಟಿ ವೇದವನೋದುತ್ತ ಬಲಿಯ ಯಜ್ಞದ ಸವೀಪಕ್ಕೆ ಬರಲು ಅವರಾರೆಂದು ಚಂಡ, ಅರ್ಕರೆಂಬ ದೂತರ ಕಳುಹಲು ಅವರು ನೋಡಿ ಒಬ್ಬ ಗಿಡ್ಡ ಹಾರುವನೆಂದು ಹೇಳಲು ತಾ ಬಂದು ಕರೆದುಕೊಂಡು ಹೋಗಿ ಏನು ಬಂದಿರೆಂದು ಕೇಳಲು ತೊಳಚಿಯಬಿತ್ತುವುದಕ್ಕೆ ಮೂರಡಿ ಭೂಮಿ ಬೇಕೆನಲು, ಆಗ ಬಲಿ ಮೂರಡಿ ಹೆಜ್ಜೆಯಕೋ ಎನಲು ಒಂದು ಹೆಜ್ಜೆಯಾಗುವಂತೆ ಭೂಮಿಯ ಪೆಟ್ಟೆ ಒಂದು ಹೆಜ್ಜೆಯ ಆಕಾಶಕ್ಕೆ ಇರಿಸಿ ಇನ್ನೊಂದು ಹೆಜ್ಜೆಯು ಭೂಮಿಯ ತಾ ಅಂದು ತಲೆಯ ಮೇಲೆ ಮತ್ತೊಂದು ಹೆಜ್ಜೆಯನಿಡಲು ಬಲಿ ಪಾತಳಕ್ಕಿಳಿದನು. ಅತ್ತ ಆಕಾಶಕ್ಕೆ ನೀಡಿದ ಹೆಜ್ಜೆ ಬ್ರಹ್ಮನ ಬಳಗೆ ಹೋಗಲು ಇದು ಶಿವನ ಪಾದವಾದರೆ ಅಭಿಷ್ಟವಾಗಲಿ ಮತ್ತೊಬ್ಬರದಾದೊಡೆ ಕೆಡಲಿ ಎಂದು ಕಮಂಡಲದುದಕವ ತಳಿಯಲು ಕತ್ತರಿಸಿ ಬಿತ್ತು. ಆ ಪೋಟಗಾಲಿಂದ ಬ್ರಹ್ಮಾಂಡ ತನ್ನ ಕಾಲು ಬೆಳೆದು ಲೋಕವ ಬಾಧಿಸುವಾಗ ಭೈರವ

* ಆಜ್ಞುಹಾಕಿದ "ಬಸವೇಶ್ವರನ ವಚನಗಳು" ೨ ನೇ ಆವೃತ್ತಿ ಇದರ ಪುಟ ಮತ್ತು ಪುಟದಲ್ಲಿಯ ವಚನ ಸಂಖ್ಯೆ ಇವುಗಳು ಕಂಸಿನಲ್ಲಿ ತೋರಿಸಲ್ಪಟ್ಟಿವೆ.

ಗಣೇಶ್ವರ ಬಂದು ಎದೆ ಮೇಲೆ ಹಾಯ್ದು ಕೆಡಹಿ ಬೆನ್ನೆಲುವನು ಚರ್ಮವನು ತೆಗೆದು ಶಿವನ ಮುಂದೆ ಮಡುಗಲು ಅಸ್ಥಿಯ ಕಂಕಾಳವ ಮಾಡಿ ಹಿಡಿದು ಚರ್ಮವನುಟ್ಟುಕೊಂಡು ಶಿವನೊಪ್ಪಿದನು.

ತ್ರಿಪುರ

ನವಮಂ ತ್ರಿಪುರಾರಿಶ್ಚ ಲೈಂಗ್ಯಪುರಾಣದೊಳಂ ಸೂತಮುನಿಗಳಿಗೆ ದೇವತೆಗಳಿಗೆ ನಿರೂಪ ವೀರ ವಿದ್ಯುನ್ಮಾಲಿ ತಾರಕರು ತಪವ ಮಾಡುವಾಗ ಬ್ರಹ್ಮ ಬಂದು ಏನು ಬೇಕೆಂದು ಕೇಳಲು ನಿತ್ಯತ್ವವ ಕೊಡು ಎನಲು ನಮಗೆ ನಿತ್ಯತ್ವವಿಲ್ಲ ನಿಮಗೆ ಹೇಗೆ ಕೊಟ್ಟಿನೆನಲು, ಹಾಗಾದರೆ ಮೂರು ಪುರಗಳ ಮಾಡಿ ಕೊಡು ಎನಲು ರಕ್ಕಸರ ಬಡಗೆಯಾದ ಮಯನಿಗೆ ಹೇಳಿ ಬ್ರಹ್ಮ ಹೋಗಲು ಇತ್ತ ಮಯನು ಭೂಮಿಗಂತರದಲ್ಲಿ ಕಬ್ಬಿಣದ ಪುರ, ಆಕಾಶದಲ್ಲಿ ಬೆಳ್ಳಿಯ ಪುರ, ಸ್ವರ್ಗದಲ್ಲಿ ಚಿನ್ನದ ಪುರಂಗಳ ಮಾಡಿಕೊಡಲು ಆ ಮೂರು ಪುರದಲ್ಲಿ ಮೂವರು ಇರುತ್ತಿರಲು ಮಯ ಏನೆಂದನು, ನೀವು ಬ್ರಹ್ಮನ ನಿತ್ಯತ್ವ ಬೇಡುತ್ತಿದ್ದಿರಿ ಲಿಂಗವ ಧರಿಸಿದರೆ ನಿತ್ಯತ್ವವಲ್ಲವೇ ಎನಲು, ಹಾಗಾದರೆ ನಮಗೆ ಲಿಂಗವ ಧರಿಸಿ ಎನಲು ಮಯನು ಅವರಿಗೆ ಲಿಂಗಧಾರಣವ ಮಾಡಿ ಹೋಗಲು, ಇತ್ತ ಈ ಮೂವರು ಶಿವನ ಕೆಯ್ಯಲ್ಲಿ ಕಾಮಧೇನು ಕಲ್ಪವೃಕ್ಷವ ಪಡೆದು ಸುಖದಲ್ಲಿರುವಾಗ್ಗೆ, ಬ್ರಹ್ಮವಿಷ್ಣ್ವಾದಿಗಳು ಹೇಳಿದ ಜಾಕರಿಯ ಮಾಡದಿದ್ದರೆ ತಮ್ಮ ಪುರ ಸಹವಾಗಿ ಹೋಗಿ ಅವರಿಗೆ ಪೆಟ್ಟು ಹಾಕಿ ಬರುವರು. ಹೀಗೆ ದಿವ್ಯ ಸಾವಿರ ವರುಷವಿರುತಿರಲು ಆಗ ಬ್ರಹ್ಮ ವಿಷ್ಣುಗಳು ತ್ರಿಪುರದ ರಕ್ಕಸರ ಬಾಧೆ ಬಹಳವೆಂದು ಶಿವನಿಗೆ ದೂರು ಹೇಳಲು ಲಿಂಗಭಸಿತ ರುದ್ರಾಕ್ಷಿಗಳ ಧರಿಸಿದವರ ಮೇಲೆ ಹೇಗೆ ಕೈ ಮಾಡಲಿ, ನೀವೆ ಕಾದಿ ಕೊಲ್ಲಿ ಎನಲು, ಆಗಲಾ ಬ್ರಹ್ಮವಿಷ್ಣುಗಳು ಮಾರಣ ಯಜ್ಞವ ಮಾಡಿ ಭೂತಗಳ ಹುಟ್ಟಿಸಿ ತ್ರಿಪುರದವರ ಮೇಲೆ ಕಳುಹಲು ಅವು ಹೋಗಿ ರಕ್ಕಸರ ಅಂಗದ ಮೇಲೆ ಲಿಂಗವ ಕಂಡು ಹೆದರಿ ಬಂದು ನಮ್ಮ ಕೈಲಾಗದೆಂದು ವಿಷ್ಣುವಿಗೆ ಹೇಳಲು ಬಳಿಕ ಹರಿಯು ನಾರದರ ಕರಕೊಂಡು ತ್ರಿಪುರದಲ್ಲಿ ಕುಳಿತುಕೊಂಡು ಮಣ್ಣನ್ನೇ ಚಿನ್ನವ ಮಾಡಿ ತೋರುತ ನಾರದ ಹಳೆಯರುವಿಯನೆ ಚಿನಿಚೀನಾಂಬರವ ಮಾಡಿ ತೋರುತ ಕಪಟದಿಂದ ಲಿಂಗಧಾರಣಂಗಳ ಬಿಡಿಸಿ ಅಲ್ಲಿ ಬುದ್ಧಿವೋಹಿ ಎಂಬ ತನ್ನ ಬೌದ್ಧನ ಮಡಗಿ ತಾವಿಬ್ಬರು ಹೋಗಿ

ಮಾನಸ ಸರೋವರದಲ್ಲಿ ಕೊರಳುದ್ದುದ್ದ ಉದಕದೊಳಗೆ ನಿಂತು ಮೊರೆ ಇಡಲು ಶಿವನು ಕೇಳಿ ನಂದೀಶ್ವರನ ಕಳುಹಲು ಬಂದು ಯಾಕೆ ಕೂಗಿದಿರೆಂದು ಕೇಳಲು ರಕ್ಕಸರು ಲಿಂಗಗಳ ಬಿಟ್ಟರು, ಇನ್ನಾದರೂ ಅವರ ಕೊಲ್ಲಬಾರದೇ ಎನಲು ನಂದೀಶ್ವರ ಹಾಗೆ ಬಂದು ಶಿವಂಗೆ ಹೇಳಲು ಆ ಮಾತಿಗೆ ಶಿವನು ರಥವ ಮುಸ್ಪೈದಿ ಮಾಡಿ ಎನಲು ಬಳಿಕ ಬ್ರಹ್ಮ ವಿಷ್ಣುಗಳು ವಿಶ್ವಕರ್ಮನ ಕರಸಿ ಭೂಮಿಯೇ ರಥ, ಚಂದ್ರಸೂರ್ಯರು ಗಾಲಿಗಳು, ವಿಂಧ್ಯಗಿರಿ ಅಚ್ಚು, ಕೈಲಾಸಗಿರಿ ಈಸು, ಕ್ಷಣಮುಹೂರ್ತಂಗಳು ಕೀಲಗಳು, ವೇದಗಳೇ ಕುದುರೆಗಳು, ಬ್ರಹ್ಮ ಸಾರಥಿ, ಓಂಕಾರವೇ ಚಬುಕ, ಇಂತು ರಥ ಮುಸ್ಪೈದಿಯಾಗಿ ಇರಲು ಅಂತಹ ಶಿವನು ಮೇರುವೆ ಬಿಲ್ಲು, ಶೇಷನೇ ಹೆದೆ, ಚಂದ್ರ ಅಂಬಿನ ಗಣೆ, ವಾಯು ಹಿಳಿಕು, ವಿಷ್ಣುವೇ ಅಲಗು, ಅದರ ತುದಿಯೇ ಅಗ್ನಿ, ಇಂತಹ ಬಿಲ್ಲಂಬ ಹಿಡಿದುಕೊಂಡು ಶಿವನು ರಥವನೇರಲು ಆ ರಥ ಭೂಮಿಯಲ್ಲಿಳಿಯಲು ವಿಷ್ಣು ವೃಷಭರೂಪಿನಿಂದೆತ್ತುವಾಗ ಶಿವನು ಸಾಮರ್ಥ್ಯವ ಕೊಡಲು ಮೇಲಕ್ಕೆ ತಂದನು. ಬಳಿಕಾ ರಥವ ನಡಿಸಿ ತ್ರಿಪುರದ ಹೆತ್ತಿರಲ್ಲಿ ನಿಲಿಸಿ ಆಗ ಶಿವನು ಬಿಲ್ಲಕೊಪ್ಪಿಗೆ ಹೊರಗೆ ಕೊಂಡು ಮುಗುಳ್ನಗೆಯಿಂದ ತ್ರಿಪುರವ ನೋಡಲು ನೊಸಲಕಣ್ಣ ಕಿಡಿ ಹೋಗಿ ತ್ರಿಪುರವ ಸುಡಲು ಆಗ ವಿಷ್ಣು ಅಂಬಾಗಿ ವ್ಯರ್ಥವಾದೆನೆಲ್ಲಾ ಎನಲು ಆಗ ಬಿಲ್ಲನೇರಿಸಿ ಎಸೆಯಲು ತಿಗುರಿಯಂತೆ ತಿರುಗುವ ಮುಪ್ಪುರಗಳ ಕೀಲು ಕಳಚಿ ಉರಿದು ಬಿದ್ದವು. ಮೂರು ಪುರದಲ್ಲಿದ್ದ ಪರಮ ಯೋಗಿ ಏಕಶಿಲ ವಿರಕ್ತ ಇವರು ವಿಷ್ಣುವಿನ ಮಾಯೆಗೆ ಒಳಗಾಗದ ಕಾರಣ ಉಳಿದು ಬಂದು ಶಿವನಿಗೆ ನಮಸ್ಕರಿಸಲು ಏನು ಬೇಕೆನಲು ನಿಮ್ಮ ಕೈಲಾಸದ ಅಂತಃಪುರದ ಬಾಗಿಲಲ್ಲಿ ಇದ್ದಿವೆನಲು ಹಾಗಾಗಲೆಂದು ಮಡಗಿಕೊಂಡರು. ತ್ರಿಪುರವ ಸುಟ್ಟ ಮೇಲೆ ದೇವತೆಗಳೆಲ್ಲ ಸುಖದಲ್ಲಿದ್ದರು.

ಹರಿವಿರಿಂಚಿಗಳು.

ಲಿಂಗೋತ್ಭವ ಸ್ವರೂಪಂ ತು ಪಂಚವಿಂಶತ್ ಪ್ರಕೀರ್ತಿತಂ ಶೈವ ಪುರಾಣ ಧರ್ಮಸಂಹಿತೆಯಲ್ಲಿ ನಂದೀಶ್ವರನು ಸನತ್ಕುಮಾರಂಗೆ ನಿರೂಪ ಒಂದು ವೇಳೆ ಬ್ರಹ್ಮ ವಿಷ್ಣುಗಳು ನಾ ಫನ ತಾ ಫನವೆಂದು ವಾದಿಸುವಾಗ ಆಕಾಶವಾಣಿ ನುಡಿದುದು. ಇಲ್ಲಿ ಒಂದು ಲಿಂಗ ಮೂಡಿತು. ಆದರಡಿ ಮುಡಿಯ ಕಂಡು ಬಂದರೆ ನೀವೆ ದೊಡ್ಡವರೆನಲು ಆಗ ಉರಿ

ಲಿಂಗ ಮೂಡಲು ವಿಷ್ಣು ಸೂಕರನಾಗಿ ಸಪ್ತ ಪಾತಾಳಕ್ಕೆ ಹೋಗಿ ಪಾದವ ಕಾಣದೆ ತಿರುಗಿದನು. ಬ್ರಹ್ಮ ಹದ್ದಾಗಿ ಬ್ರಹ್ಮಾಂಡ ತನಕ ಹೋಗು ತ್ತಿರಲು, ಆಗ ಕೇದಗೆ ರಾಜನು ಕಾಮಧೇನುವು ಕಂಡು ಪಕ್ಷಿಯೇ ಎಲ್ಲಿಗೆ ಹೋದೆ ಎನಲು ಶಿವನ ಮುಕುಟವ ಕಾಂಬುವುದಕ್ಕೆ. ನಲುಗಿ ಕಾಣಲಾರೆ ತಿರುಗಿ ಎನಲು, ವಿಷ್ಣುವಿನ ಕೂಡೆ ವಾದಿಸಿ ಬಂದೆನೆನಲು ಕಂಡೆವೆಂದು ನುಡಿ ಎನಲು ತಿರುಗಿ ಬರಲು ದೇವತೆಗಳೆಂದರು, ಬ್ರಹ್ಮ ಮುಕುಟವ ಕಂಡೆಯಾ ಎನಲು ಕಂಡೆನೆಂದನು. ಅವರು ಸತ್ಯವೇ ಎನಲು, ಆಗ ಕೇದಗೆರಾಜನು ಕಾಮಧೇನುಗಳಿಬ್ಬರೂ ಕಂಡನಹುದು ಎನಲು, ಆಗ ಆಕಾಶವಾಣಿ ಕೇಳಿ ಮೂವರ ವಾಕ್ಯವು ಸಟೆ ಎನಲು ಆಗ ದೇವತೆಗಳು ಕೇದಗೆಯೇ ಪೂಜೆಗೆ ಸಲ್ಲಬೇಡ, ಬ್ರಹ್ಮ ನೀನು ಗುಡಿ ಯಲ್ಲಿ ಪೂಜೆಗೊಳಬೇಡ, ವಿಷ್ಣುವೇ ನೀನು ಸತ್ಯವನಾಡಿದೆ, ನಿನಗೆ ಪೂಜೆಯಾಗಲಿ.

ಬಳಿಕ ಇತ್ತ ಕಲ್ಯಾಣದಲ್ಲಿ ಬಿಜ್ಜಳನೆ ಕೇದಿಗೆ ಪುಷ್ಪಗಳು ಕಾಣಿಕೆ ಬರಲು ಒಂದೆಸಳ ಬಸವೇಶ್ವರಗೆ ಕೊಡಲು ಅದರೊ ಕೊಂದೆಸಳ ತಮ್ಮ ಲಿಂಗಕ್ಕೆ ಧರಿಸಲು ಆಗ ಬಿಟ್ಟಿಸಳ ಸಲ್ಲದುದ ಹೇಗೆ ಧರಿಸಿದಿರೆನಲು ಭಕ್ತ ತಂದರ್ಪಿಸಿದ ವಸ್ತುವ ಶಿವ ಕೈಕೊಂಬುತಾನೆ ಎನಲು ಅದ ತೋರಿ ಎನಲು, ಆಗ ಬಿಜ್ಜಳ ಸಹವಾಗಿ ಲಿಂಗಗಳ ನೋಡಲು, ಎಲ್ಲಾ ಲಿಂಗಗಳ ಮೇಲೆ ಒಂದೊಂದೆಸಳರಲು ಬಿಜ್ಜಳ ತಲೆ ದೂಗಿದನು.

ಉಮೆಯ ಕಲ್ಯಾಣ.

ವೈವಾಹಂ ಪಂಚಮಂ ವಿಂದ್ಯ ಶಿವನು ನಂದೀಶ್ವರಂಗೆ ನಿರೂಪಿ ಸಿದರು, ನಂದಿಕೇಶ್ವರನು ಸನತ್ಕುಂಮಾರಂಗೆ ನಿರೂಪಿಸಿದರು, ಸನತ್ಕು ಮಾರ ವೇದವ್ಯಾಸಂಗೆ, ವ್ಯಾಸ ಸೂತಂಗೆ ನಿರೂಪಿಸಿದರು. ಅತ್ತ ಓಷಧೀಪ್ರಸ್ಥಪುರದಲ್ಲಿ ಗಿರಿರಾಜ ಮೇನಕಾ ದೇವಿಯರು ತಮಗೆ ಮಗಳಾಗಬೇಕೆಂದು ತಪವ ಮಾಡುತ್ತಿರಲು ದೇವಿಯರ ತಪಕ್ಕೆ ಮೆಚ್ಚಿ ಪಾನಸ ಸರೋವರದಲ್ಲಿದ್ದ ನೈದಿಲೆ ಪುಷ್ಪದೊಳಗೆ ಶಿಶು ರೂಪಾಗಿ ಕಾಣಿಸಿಕೊಂಡು ಬಳಿಕ ಚತುರ್ಮುಖ ಅಷ್ಟಭುಜವ ತೋರಲು ಅದ ಕಂಡು ಹೆದರಲು ಮತ್ತೆ ಶಿಶುವಾದಳು. ಆಗ ಎತ್ತಿಕೊಂಡು ಹೋಗಿ ಮೇನಕಾದೇವಿಯು ಕೈಯ್ಯಲ್ಲಿ ಕೊಡಲು ಅಕೆ ಸಲಹಿದಳು. ಬಳಿಕ

ಜವ್ವನವಾಗಲು ಕಶ್ಯಪ, ಅತ್ರಿ, ಭಾರದ್ವಾಜ, ವಿಶ್ವಾಮಿತ್ರ, ಗೌತುಮ, ಜಮುದಗ್ನಿ, ವಸಿಷ್ಠರೆಂಬ ಈ ಸಪ್ತಋಷಿಗಳ ಕನ್ಯಕೇಳಿಸಿ ಶಿವನು ಪಾರ್ವತಿಯ ಮದುವೆಯಾಗಿ ಕೈಲಾಸದಲ್ಲಿದ್ದರು.

---

೪ ನೆಯ ವಚನದ ಕಥೆ. (೧-೩)

ಬಸವ.

ಬಸವೇಶ್ವರನು ಜನನಿಯ ಮೊಲೆಹಾಲು ಹಾಲು ಬೆಣ್ಣೆಗೆ ಬಾಯ್ದೆ ರೆಯದೆ ಲಿಂಗ ಪ್ರಸಾದದ ಸಂತೋಷದಲ್ಲಿ ಸುಮ್ಮನಿರ್ದರು.

ನಂದೀಶ್ವರ.

ನಂದೀಶ್ವರನ ಉತ್ಪತ್ತಿ-ಬ್ರಹ್ಮಂಗೆ ನಾಲ್ಕು ಯುಗವು ನಾಲ್ಕು ಸಾವಿರ ಬಾರೆ ತಿರುಗಲು ಒಂದು ದಿನ. ಅಂತಹ ದಿನ ಮುನ್ನೂರರು ವತ್ತಾದರೆ ಒಂದು ವರುಷ. ಅಂತಹ ವರುಷ ನೂರಾದರೆ ಬ್ರಹ್ಮಂಗೆ ಮರಣ. ಅವನ ನೂರು ವರುಷ ವಿಷ್ಣುವಿಂಗೆ ಒಂದು ದಿನ. ಅಂತಹ ದಿನ ಮುನ್ನೂರುವತ್ತಾದರೆ ಒಂದು ವರುಷ. ಆ ವರುಷ ನೂರಾದರೆ ವಿಷ್ಣುವಿಂಗೆ ಮರಣವೆಂದರಿವುದು. ಎನುತಂ ಆ ಶಿವನಂತರಂಗದಲ್ಲಿರ್ದ ಧರ್ಮವು ಶಿವನಪ್ಪಣೆಯಿಂದ ಬ್ರಹ್ಮಾಂಡದಲ್ಲಿ ಸಂಚರಿಸುತ್ತಿರ್ದ ಬ್ರಹ್ಮ ವಿಷ್ಣುಗಳ ಪ್ರಳಯಮಂ ಕಂಡಂಜಿ ಶಿವನ ಸವಿೂಪಕ್ಕೆ ಬಂದು ಮೊದ ಲಂತೆ ನಿನ್ನ ಕುಕ್ಷಿಯೊಳಗಿರ್ದೆನೆಂದು ಪೇಳಲು ಆಗ ಶಿವನು ಮಹಾ ಪರಾಕ್ರಮವ ತೊಟ್ಟ ವೃಷಭ ರೂಪಿನಿಂದೆ ಸಮ್ಮವಾಹನ ವಾಗು, ನಂದೀಶ್ವರ ನೆಂಬ ನಾಮದಿಂದೆ ಗಣಾಗ್ರಣಿಯಾಗಿರು ಎಂದರು. ಬಳಿಕ ನಂದೀಶ್ವ ರನುತ್ಪತ್ತಿ ಎಂತೆಂದೊಡೆ— ಶಾಲಂಕಾಯನ ಋಷಿಯ ಕುಮಾರನಾದ ಶಿಲಾದ ಮುನಿಯು ಪುತ್ರನಾಗಬೇಕೆಂದು ತಪವ ಮಾಡುವಾಗ ಮಂಜಿನ ಹನಿ ಗಡ್ಡೆ ಬೇರು ಪರ್ಣ ಹಣ್ಣು ನೀರು ಗಾಳಿ ಸೂರ್ಯಕಿರಣ ಚಂದ್ರಕಿರಣ ಮೊದಲಾದವ ಸೇವಿಸಿ ಮೂರು ಕೋಟಿ ವರುಷ ತಪ ದಲ್ಲಿರ್ದು ತೋರ ಶಿಲೆಯ ಸೇವಿಸಿಕೊಂಡು ನೂರು ಕೋಟಿ ವರುಷ ವಿದ್ದರು. ಆಗ ಶಿವ ಮೆಚ್ಚಿ ಬೇಡು ಎನಲು ಅದಕ್ಕೆ ಶಿಲಾದ ಮುನಿಯು ಭಕ್ತಿಯುಳ್ಳ ಅಯೋನಿಜನಾದ ಪುತ್ರನಾಗಬೇಕೆನಲು ಅಂತಹವನೆ ಆಗುವ

ನೆಂದು ಶಿವ ನಿರೂಪಿಸಲು ಬಳಿಕ ಶಿಲಾದ ಮುನಿ ತನ್ನಾಶ್ರಮಕ್ಕೆ ಬಂದು ಹಬ್ಬವ ಮಾಡಬೇಕೆಂದು ಭೂಮಿಯ ಶುದ್ಧವ ಮಾಡಲು ಅದಕ್ಕೆ ಚಿನ್ನದ ನೇಗಿಲ ಹೂಡುವಾಗ ತ್ರಿಲೋಚನ ಕೆಂಜೆಡೆಗಳಿಂ ಶಿಶು ರೂಪಾಗಿ ನಂದೀಶ್ವರನು ಕಾಣಿಸಿಕೊಳ್ಳಲು ಶಿಲಾದ ಮುನಿ ಸಂತೋಷ ಪಟ್ಟನು. ಆಗ ಶಿವ ಬಂದು ಆ ಶಿಶುವಿಂಗೆ ರತ್ನ ಕಿರೀಟನ ಧರಿಸಿ ಜಟಾ ಮುಕುಟ ಗಂಗೆಯಿಂದಭಿಷೇಕವ ಮಾಡುವಾಗ ಕಿರೀಟದಿಂದ ಬಿಂದುದಕವು ಸುವರ್ಣದ ನದಿ ಜಾಂಬುನದಿಗಳಾಗಿ ಹರಿದವು. ಜಟೆಯಿಂದಿಳಿದ ಗಂಗೆ ಜಟಾನದಿ ಎನಿಸಿತ್ತು. ಆ ವೃಷಭೇಶ್ವರ ಡುರುಕೆಯ ಹಾಕಲು ವೃಷಭಧ್ವನಿ ಎಂಬ ನದಿಯಾಯಿತ್ತು. ದೇವಿಯರ ಮೊಲೆ ತೊರೆದು ಸುರಿಯೆ ಕುಚಕ್ಷಿಕೆ ಪ್ರಾತಸ್ವನಿಗಳೆಂಬ ನದಿಗಳಾಗಿ ಹರಿದವು. ಆಮೇಲೆ ಶಿಲಾದಮುನಿಯು ಶಿಶುವನೆತ್ತಿಕೊಂಡು ತನ್ನಾಶ್ರಮಕ್ಕೆ ಹೋಗಿ ನಂದೀಶ್ವರನೆಂಬ ಹೆಸರಿಟ್ಟು ಸುಖದಲ್ಲಿದ್ದರು.

ಸ್ಕಂದ.

ತ್ರೇತಾ ಯುಗದಲ್ಲಿ ಪರಶಿವನು ತ್ರಿಪುರದಹನವ ಮಾಡುವಲ್ಲಿ ಸ್ಕಂದನೆಂಬ ಗಣೇಶ್ವರನಾಗಿರ್ದನು ಬಸವಣ್ಣನು.

ನೀಲಲೋಹಿತ.

ಪರಶಿವನು ಅಂಧಕಾಸುರನ ಕೊಲ್ಲುವಲ್ಲಿ ನೀಲಲೋಹಿತನೆಂಬ ಗಣೇಶ್ವರನಾಗಿರ್ದನು ಬಸವಣ್ಣನು.

ಮನೋಹರ.

ಘಂಟಾಕರ್ಣನು ನಿರ್ಮಾಲ್ಯ ಪುಷ್ಪವ ಸೂರ್ಯನ ಆಕರ್ಷಿಸಿದನೆನೆ ಕುಷ್ಠ ರೋಗಿಯಾಗೆಂದು ಶಾಪಿಸಿ ಮನೋಹರ ಗಣೇಶ್ವರನ ಪಾದಾಂಬುವಿಂದ ಸೂರ್ಯನು ತನ್ನ ತೇಜಸ್ಸವ ಪಡೆದನು.

ಕಾಲಲೋಚನ.

ಪರಶಿವನು ಉಮೆಯ ಕಲ್ಯಾಣದಲ್ಲಿ ಕಾಲಲೋಚನನೆಂಬ ಗಣೇಶ್ವರನಾಗಿರ್ದ ಬಸವಣ್ಣನು.

ವೃಷಭ.

ತೃತೀಯಂ ವೃಷಭಾರೂಢಂ ಸ್ಕಂದ ಪುರಾಣದಲ್ಲಿಯ ಕಾಳಿಕಾ ಖಂಡದಲ್ಲಿ ಷಣ್ಮುಖನು ಅಗಸ್ತ್ಯರಿಗೆ ನಿರೂಪ. ಸಕಲ ತತ್ವಲಯ

ಕಾಲದಲ್ಲಿ ಹೇಳಿದ ಸದ್ಧರ್ಮರೂಪ ವೃಷಭನನೆ ವಾಹನವಾಗಿ ಧರಿಸಿದನು.

ಬಸವ.

ಶ್ರೀಮತ್ಪರಮೇಶ್ವರನ ಒಡ್ಡೋಲಗದಲ್ಲಿ ಸಮಸ್ತರು ಒಡ್ಡೋಲಗಂಗೊಟ್ಟರಲು ನಾರದನ ದರುಶನ ಲೋಕಂಗಳಲ್ಲಿ ಶಿವಾಚಾರ ಮಸುಳಿಸಿದ್ದಿಶ್ತ. ನೀವು ಚಿತ್ತೈಸಬೇಕೆಂದು ಬಿನ್ನವಿಸೆ, ನಾನೆಂದಡೂ ನಂದೀಶ್ವರನೆಂದಡೂ ಒಂದೇ ಎಂದು ನಂದಿಕೇಶ್ವರಂಗೆ ಆಜ್ಞಾಪಿಸಲು, ಇಂಗುಳೇಶ್ವರ, ಬಾಗವಾಡಿಯ ಮಂಡಿಗೆಯ ಮಾದಿರಾಜನ ಭಾರ್ಯೆ ಮಾದಲಾಂಬಿಕೆ ವೃಷಭನ ನೋಂತು ಸುತನ ಕೊಡೆಂದು ವಂದಿಸಿ ಅವರಿಗೆ ಆ ವೃಷಭೇಶ್ವರನ ಬಸವನಾಮದಲ್ಲಿ ಅಯೋನಿಜವಾಗಿ ಸಂಗಮೇಶ್ವರನೆ ಗುರುವಾಗಿ ಉಪದೇಶವನೀಯಲು ಬಾಲಲೀಲೆಯಲ್ಲಿ ಅನಂತ ಪವಾಡವಂ ಮೆರೆವುತ್ತ ಪೂರ್ವ ಶ್ರೀಯವಂ ತೊರೆದು ವೀರಶೈವಾಚಾರದಿಂದಿರೆ ಬಲದೇವ ಮಂತ್ರಿಯು ತನ್ನ ತನುಜೆ ಗಂಗಾಂಬಿಕೆಯ ವಿವಾಹಂ ಮಾಡಿ ಅವರಿಂಕಳುಹಿಸಿಕೊಂಡು ಬಸವೇಶ್ವರನು ಸಂಗಮೇಶ್ವರಕ್ಕೆ ಬರೆ ಬಲದೇವ ಮಂತ್ರಿ ಶಿವಲೋಕಕ್ಕೈದೆ. ಬಿಜ್ಜಳನು ಆಳೋಚಿಸಿ ಬಸವೇಶ್ವರನಂ ಕಲ್ಯಾಣಕ್ಕೆ ಕರಿಸಿ ಇದಿರ್ಗೊಂಡು ಬಂದು ಓಲಗಸಾಲೆಯಲ್ಲಿ ಸುಖಗೋಷ್ಠಿಯಲ್ಲಿರೆ ಶಿವನಿರ್ಮಿತದ ಲಿಪಿಯ ಶಾಸನದ ಓಲೆ ಬರೆ ಬಿಜ್ಜಳ ತರಿಸಿ ಓದಿ ನೋಡಿ ಆರಿಗೂ ತಿಳಿಯದಿರಲು ಬಸವಣ್ಣನ ಕೈಯ್ಯಲು ಕೊಡೆ, ಶಿವಶರಣೆಂದು ಓದಿ ನೋಡಿ ಮೆಟ್ಟಿ ತೆಗಿಸಿದ ಐವತ್ತಾರು ಕೋಟಿ ವಸ್ತುವನೆಂದು ದಂಡೇಶಗೆ ಪಟ್ಟವಂ ಕಟ್ಟಿ, ಬಳಿಕ ಬಿಜ್ಜಳ ತಮ್ಮ ತಂದೆತಾಯೆ ಸಾವಲ್ಲಿ ನಮ್ಮ ತಮ್ಮ ಕರ್ಣದೇವನ ಸಿದ್ಧ ದಣ್ಣಾಯಕರ ಸ್ತ್ರೀ ಪದ್ಮಗಂಧಿಯು ಸಾಕಿದಳು. ಆಕೆಯ ಸುತೆಯು ನೀಲಲೋಚನೆಯವ್ವನು ನಮ್ಮ ತಂಗಿ ಎಂದು ಬಸವೇಶ್ವರಂಗೆ ವಿವಾಹವ ಮಾಡಿ ಸಾಮ್ರಾಜ್ಯಂ ಗೆಯ್ಯುತ್ತಿರಲು ಇತ್ತ ಬಸವೇಶ್ವರನು ಪಂಚಪರುಷಮೂರ್ತಿಯಾಗಿ ಶಿವಭಕ್ತ ಮಾಹೇಶ್ವರರಿಗೆ ನಿರ್ವಂಚಕತ್ವದಿಂ ದಾಸೋಹವ ಮಾಡುವ ಪರಿಕ್ರಮವೆಂತೆಂದೊಡೆ, ಬೆಳಗುಗಳ ಹಡೆದೆನೆಂದು ದುರುಳತನದಲ್ಲಿದ್ದಡೆ ಹರ ತಾ ಕಳುಹಿಸೆ, ಬಸವಣ್ಣನ ನೋಡಲೆಂದು ಮುತ್ತಿನ ರಂಗವಳಿಯ ನೇಮ ಉಂಟೆಂದಡೆ ಮನೃಷ್ಟಿ ಹಸ್ತ ಪರುಷವಾಗಿ ನೋಡಿದರೆ ಜೋಳ ತೊಗರೆ ಅವರೆ ಮುತ್ತು ಮಾಣಿಕವಾಗಲೆ, ಬಂದಿ ಹಿಡಿಯ ಬಂದಲ್ಲಿ ಬದನೆ ಲಿಂಗ

ವಾಗದೆ, ಭಕ್ತನೆ ಕುಲಜನೆಂದಡೆ ರುಧಿರ ಹಾಲಾಗದೆ, ವಿಷಧರಂಗೆ ವಿಷವವ್ಯತವಾಗದೆ, ಪರಮಾರ್ಥವ ನೋಡಿಹೆನೆಂದಲಗ ಕಳುಹಿದಡೆ ಭಕ್ತಿ ಮುಂತಾಗಿ ಬಾರನೆ ಪ್ರಭುದೇವರು ಇದು ಕಾರಣ ಕೂಡಲ ಚನ್ನ ಸಂಗಾ ನಿಮ್ಮಿದಾಗಿ ತನುವ ಬಸವಣ್ಣಗಿತ್ತೆ.

ದಾಮೋದರನೆಂಬ ವಿಪ್ರನ ಮಗ ಭೀಮರಥಿಯಲ್ಲಿ ಮುಳುಗಿ ಸಾಯಲು ಬಸವಣ್ಣ ನೂಕಿದನೆಂದು ಪೇಳಲು ಆಗ ವಿಪ್ರರು ಹೊಡಿ ಬಡಿಯೆಂದು ಬೆನ್ನಟ್ಟಿ ಬರಲು ಮುಂದೆ ಕೃಷ್ಣವೇಣಿ ಎಂಬ ನದಿ ಬಸವಣ್ಣಂಗೆ ದಾರಿಯ ಕೊಡಲು ವಿಪ್ರರು ಹಿಂಗೋಲಿನಿಂದ ಬರಲು ಅವರಿಗೆ ಜನಾರ್ದನನ ಮಗು ಕೃಷ್ಣ ನೂಕಿದನೆಂದು ಸಂಗಮೇಶ್ವರನ ಕೆಯ್ಯ ಸಾಕ್ಷಿಯ ನುಡಿಸಲು ಆಗ ವಿಪ್ರರು ಬಸವಣ್ಣಂಗೆ ನಮಸ್ಕರಿಸಿ ಹೋದರು.

ಕನ್ನದ ಚಾಮಯ್ಯನು ಬಿಜ್ಜಳನ ಮನೆಯ ಕನ್ನವಿಕ್ಕಿ ಬಸವೇಶ್ವರನು ಕನ್ನದ ಮೆಣ್ಣ ಚಿನ್ನವ ಮಾಡಿ ಕೊಟ್ಟನು.

ಬಿಜ್ಜಳನು ಪೆಟ್ಟಿಗೆಯ ಧನವ ಬಂಗಾರವ ಮಾಡೆಂದು ಚಿನ್ನಗಾಯಕದ ಬೊಮ್ಮಣ್ಣಂಗೆ ಕೊಡೆ ಜಂಗಮಕ್ಕೀಯಲು ಬಿಜ್ಜಳ ಕೋಪಿಸೆ ಬಸವೇಶ್ವರನಿಂದ ವಾಕ್ಪರುಷವ ಪಡೆದು ಮುನ್ನಿನಂತೆ ಕೊಟ್ಟರು.

ಶ್ರವದೊಡನೆ ಕಿಚ್ಚ ಹಾಯ್ವಳು ಬಸವೇಶ್ವರಂಗೆ ವಂದಿಸಿ ಮುತ್ತೈದೆಯಾಗೆನೆ ಪ್ರಾಣವ ಕೊಟ್ಟರು.

ಒಬ್ಬ ಜಂಗಮ ಕಂಡುಗ ಮುತ್ತಿನ ರಂಗ ಓಲೆಯ ನೇಮವನೆ ಜೋಳದ ರಾಶಿಯ ನೋಡಿ ಬಸವೇಶ್ವರನು ಮುತ್ತ ಮಾಡಿಕೊಟ್ಟರು.

ಒಬ್ಬ ಜಂಗಮಕ್ಕೆ ಬಿತ್ತಿಯ ಪಲಸಿನ ಫಲವ ಮಾಡಿ ಬಸವೇಶ್ವರನು ಕೊಟ್ಟರು.

ಬಸವೇಶ್ವರನು ಶಿವನಾಗಮಯ್ಯನ ಜೆರಳಲಿ ಅವ್ಯತವ ಕರೆದರು.

ಬಸವಣ್ಣನ ಬಳಿಗೆ ಬಂದು ಸರ್ವೇಶನು ಹಾಲನೇಮ ನಮಗೆನೆ ಗೊಡ್ಡ ಹಸುವ ಕರೆದು ಕೊಟ್ಟರು.

ಕಲ್ಯಾಣದಲ್ಲಿ ಕಪಿಲ ಮುನಿಯು ಕಪಿಲೇಶ್ವರ ಲಿಂಗಕ್ಕೆ ಸಾವಿರ ದಾರು ನೂರು ಖಂಡುಗ ಹಾಲಿನಲ್ಲಿ ಅಭಿಷೇಕವ ಮಾಡಲು ಹರಿದು ಬೀದಿಯಲ್ಲಿ ಕೆಸರಾಗಿರಲು ಆಗ ಕಾರಿಕೆ ಎಂಬ ಗೊಲ್ಲಿತಿ ಮಜ್ಜಿಗೆಯ ಕೊಡನ ಹೊತ್ತುಕೊಂಡು ಹೋಗುತ್ತ ಆ ಕೆಸರಲ್ಲಿ ಜಾರಿ ಬೀಳುವಾಗ

ಬಸವಣ್ಣಾ ಎನಲು ಇತ್ತ ಬಿಜ್ಜಳನ ಸಭೆಯಲ್ಲಿ ಬಸವೇಶ್ವರನು ಕೆಯ್ಯ ನೀಡಲು ಆಗ ಬಿಜ್ಜಳ ನಗುತ ಬಸವಣ್ಣಾ ಕೆಯ್ಯ ನೀಡಿ ಏನು ಹಿಡಿದೆ ಎನೆಲು ಗೊಲ್ಲಿತಿಯ ಹಿಡಿದೆವೆನಲು ಅದಕ್ಕೆ ಬಿಜ್ಜಳ ಈ ವೈಪ್ಲವ ನೋಡಬೇಕೆಂದು ಸಾವಿರ ನೀರ ಹೆಣ್ಣುಮಕ್ಕಳ ಮೇಲೆ ಹೊರಿಸಿ ನೀವು ಬಸವಣ್ಣಾ ಎಂದು ಕೊಡಗಳ ಬಿಸಾಡಿ ಎನಲು ಹಾಗೆ ಅವರು ಬಸವಣ್ಣಾ ಎಂದು ಕೊಡಗಳ ಬಿಸುಟರು. ಅಷ್ಟು ಕೊಡಗಳನು ಅಂತರದಲ್ಲಿ ನಿಲಿಸಲು ಆ ಮಹಿಮೆಯ ಕಂಡು ಪಾವಗಾಣಿಕೆಯ ವಾಡಿ ಶರಣೆಂದನು.

ಬಸವಣ್ಣನು ಜೇವಿನ ಕುಸುಮವ ಭಾವಲಿಂಗಕ್ಕರ್ಪಿಸಿದೆವೆನ್ನೆ, ಶಲ್ಲೆ ಎಂದು ಅರಸು ನುಡಿಯೆ, ಎಲ್ಲ ಲಿಂಗದಲ್ಲಿಯೂ ತೋರಿದರು.

ಬಿಜ್ಜಳನು ಬಸವೇಶ್ವರಂಗೆ ಕೇತಕೀ ಪುಷ್ಪವ ಕೊಡೆ ಲಿಂಗಕ್ಕೆ ಅರ್ಪಿಸಿ ಹಾಸ್ಯವ ಮಾಡೆ, ಎಲ್ಲ ಲಿಂಗದ ಮಸ್ತಕದ ಮೇಲೆ ತೋರಿದರು.

ಏನೆಯ ವಚನದ ಕಥೆ. (೨-೪)

ಕಕ್ಕಯ್ಯ.

ಕಕ್ಕಯ್ಯಗಳ ಪುಣ್ಯ ಸ್ತ್ರೀಯಳು ಹೊರಬಾಗಿಲಲ್ಲಿ ನಿಂದಿರಲು ಅಕ್ಕರಿಂದೆ ಮಿಗೆ ಮೀರಿ ಬಸವೇಶ್ವರನ ಕಾಣುತ್ತ ಇಕ್ಕಿದಳು ಮುಡಿಯ ಶರಣಾರ್ಥಿ ಎಂದು ಎರಡು ಕರಂಗಳಂ ಮುಗಿದು ಕಿಂಕುರ್ವಾಣ ಭಯಭಕ್ತಿಯಿಂದ ಮಕ್ಕಳಲ್ಲಿ ಪ್ರಸಾದವನು ಕೈಕೊಳ್ಳಿ ಬನ್ನಿ ಎಂದು ಬಿನ್ನೈಸಿದಳು ಬಸವೇಶ್ವರ ದೇವರಿಗೆ. ಆ ಬಸವೇಶ್ವರ ದೇವರು ಲೆಕ್ಕಿಸದೆ ಅಡಿ ಇಟ್ಟು ಮುಂದಕ್ಕೆ ಒಲ್ಲದೆ ಹೋದರೆಂದು ತಮ್ಮ ಮನವು ಲಿಂಗದಲ್ಲಿ ಕಂದಿ ಕುಂದಿ ಕುದಿದು ಕೋಟಲೆಗೊಂಡು, ಪ್ರಸಾದ ವಾಕ್ಯವು ಬೇಸರವಾಯಿತ್ತೆಂದು ಕಕ್ಕಯ್ಯಗಳಿಗೆ ನಿರೂಪಿಸಿದಳು. ಪಾವನ ಸ್ವರೂಪಿಯ ಆ ಪ್ರಸಾದ ವಾಕ್ಯಮಂ ಕೇಳಿ ವಿಸ್ಮಯಂ ಬಟ್ಟು ಹರ ಹರಾ ಶಿವಶಿವಾ ನಾವು ಬಸವರಾಜದೇವರ ಪಾದ ಚರಣಕ್ಕೆ ಸರಿಯಪ್ಪೆವೆ ಎಂದು ಕೋಪಿಸಿ, ಝಂಕಿಸಿ ನುಡಿದರು ತಮ್ಮ ಸ್ತ್ರೀಯಳಿಗೆ. ಆ ಬಿಜ್ಜಳನ ಓಲಗದಿಂದ ಬಸವೇಶ್ವರದೇವರು ತಮ್ಮ ಮಂದಿರಕ್ಕೆ ಬಂದು ತಮ್ಮ ಮನೋಮೂರ್ತಿ ಲಿಂಗದಲ್ಲಿ ತಿಳಿದು ನೋಡಿ ಮರ

ಹೆಂಬ ಮರುಳು ಮಾಯೆಯ ಕಡೆಗೆ ನೂಂಕಿಸಿ ಅರುಹು ಹೀನ ಕುರು
ಹಿನ ತ್ರಿವಿಧ ಸುಧಾಕರನ ಶೇಖರನ ಬೆಳಗಿನೊಳು ಕಂಡನು ಪ್ರಸಾದದ
ಘನ ಮಹಾತ್ಮೆಯ. ಆ ಕಕ್ಕಯ್ಯಗಳ ತೊತ್ತಿನ ತೊತ್ತಿನ ಪಡಿದೊತ್ತಿನ
ಮಗ ನಾನೆಂದು ಹನ್ನೆರಡು ವರುಷ ಬಾಗಿಲ ಕಾಯ್ದ ಕಕ್ಕಯ್ಯಗಳಲ್ಲಿ
ಆ ಬಸವೇಶ್ವರ ದೇವರು ತಮ್ಮ ಕುಲವೆಂದು ಪಿಪೀಲಿಕವ ಮಾಡಿ ಆ
ಕಕ್ಕಯ್ಯಗಳ ಮನೆಯಲ್ಲಿ ಬೀಸರವಾದ ಪ್ರಸಾದವನು ಕಚ್ಚಿಕೊಂಡು
ಬರಲಿಕ್ಕೆ ಸಕ್ಕರೆಯ ನೀಡಿಕೊಂಡು ಬಂದು ತಮ್ಮ ಬಸವೇ
ಶ್ವರ ದೇವರು ಆ ಪ್ರಸಾದವನು ವಿಕ್ಕಿ ವೀರಿ ಅಕ್ಕ ನಾಗಮ್ಮ ಸಲಿಸಿ
ಚಿಕ್ಕದಣ್ಣಾಯಕರ ಪಡೆದಳು. ವಿಕ್ಕಿನ ಚುಕ್ಕಿನ ಹುಳು ಮಾನವರ
ಕುಲವೆತ್ತ, ಪ್ರಸಾದದ ಕಲೆ ಎತ್ತ? ಇದ ನೀವೆ ಬಲ್ಲಿರಿ ನಿಮ್ಮಾಣೆ
ನಿಮ್ಮ ಪ್ರಮಥರಾಣೆ ಬಸವ ಪ್ರಿಯ ಕೂಡಲ ಚನ್ನಸಂಗವ ದೇವಾ.

೨೫ನೆಯ ವಚನದ ಕಥೆ. (೫-೧೯)

ಚಂದ್ರ

ದಕ್ಷನು ತನ್ನ ೨೭ ಹೆಣ್ಣುಮಕ್ಕಳ ಚಂದ್ರನಿಗೆ ಮದುವೆಯ
ಮಾಡಿ ಚಂದ್ರನು ಎಲ್ಲರನು ಬಿಟ್ಟು ರೋಹಿಣಿಯಲ್ಲಿಯೇ ನೇಹ ಬಲಿದಿರೆ
ಎಲ್ಲ ಸ್ತ್ರೀಯರು ದುಃಖವ ಮಾಡಿ ದಕ್ಷನು ಕೇಳಿ ಕಲಾಹೀನನಾಗೆಂದು
ಶಪಿಸಿ ಶಿವನ ಸ್ತುತಿಸೆ ಕಲೆಗಳು ಪೆರ್ಚಿದವು. ಆ ಕಲೆಯನೊಂದ
ಶಿವನು ಧರಿಸಿದನು. ಚಂದ್ರಂಗೆ ವರವಿತ್ತನು. ಕಲೆಯ ಧರಿಸಿದ ದಿನ
ಅಮಾವಾಸ್ಯೆ ತಿಥಿಯಾಯಿತ್ತು. ಆ ಚಂದ್ರನು ಸಮುದ್ರಕ್ಕೆ ಮಗನಾದ
ಕಾರಣ ಆ ಚಂದ್ರನ ಕಲೆ ಕೃಷ್ಣಪಕ್ಷಗಳಲ್ಲಿ ಹೆಚ್ಚಿದೊಡೆ ಹೆಚ್ಚುವುದು,
ಕುಂದಿದೊಡೆ ಕುಂದುವುದು.

ರಾಹು ಕೇತು.

ಪೌಲಸ್ತ್ಯ ಬ್ರಹ್ಮನ ಸತಿಯರುಂ ದಿತಿ ಅದಿತಿ ಅವರಿಗೆ ಹುಟ್ಟಿದ
ದೇವ ದಾನವರಿಗೆ ನಾರದ ದಾಯಾದಿ ವಿಷಯವ ಹುಟ್ಟಿಸಲು ಆ ಕದನದಿಂ
ಇತ್ತಂಡಕ್ಕು ಮಥನವಾಗಲು, ಆ ಸಮಯದಲ್ಲಿ ನಾರಾಯಣನು ಈರ್ವ
ರಿಗು ಮಧ್ಯಸ್ತನಾಗಿ ಐವತ್ತು ಕೋಟಿ ಯೋಜನದೊಂದು ನಡುಪೆ ಹೊರೆ
ಯುಳ್ಳ ಜಾಗಗಿಂಡಿಯ ನಿರ್ಮಿಸಿ ಒಂದು ಭಾಗದಲ್ಲಿ ಅಮೃತವ ತುಂಬಿ

ಒಂದು ಭಾಗದಲ್ಲಿ ಸುರೆಯ ತುಂಬಿ ಒಂದು ಭಾಗದಿ ದೇವತೆಗಳ ತಂಡ
ಮತ್ತೊಂದು ಭಾಗದಿ ರಕ್ಕಸರ ತಂಡವ ಕುಳ್ಳಿರಿಸಿ ಒಂದೇ ಗಿಂಡಿಯಿಂದಿ
ತ್ತ್ತಂಡಕ್ಕೂ ಆಹಾರವ ಕೊಡುವ ಸಮಯದಲ್ಲಿ ಓರ್ವ ಸರ್ಪಾಕಾರವ
ಮುರಸೆಂಬ ರಕ್ಕಸನು ಕಳಂಕಿಸಿಂದೆ ದೇವತೆಗಳ ಮಧ್ಯದಲ್ಲಿ ಕುಳಿತು
ಅಮೃತವ ಸೇವಿಸಲು ಆ ಸಮಯದಲ್ಲಿ ದೇವತೆಗಳ ಸಂಬಂಧವಾದ ಚಂದ್ರ
ಸೂರ್ಯರು ವಿಷ್ಣುವಿಗೆ ದೂರಲು ಆ ವಿಷ್ಣು ಚಕ್ರದಿಂದಡಲು ಶಿರವರಿಯೆ
ಆ ಅಮೃತದ ಸಾಮರ್ಥ್ಯದಿಂದ ಅವರು ನಿತ್ಯತ್ವವ ತಾಳಿ ತಮ್ಮ ಆಹಾರ
ಗಂಟಕರಾದ ಚಂದ್ರಸೂರ್ಯಗಳನೆ ಆಹಾರವ ಕಾಂಬೆವೆಂದು ಈಶ್ವರ
ನಿಂದೆ ವರವಂ ಪಡೆಯಲು ಸರ್ವೇಶ್ವರನು ಅವರಿಗೆ ವರುಷಕ್ಕೆ ಒಂದು
ವೇಳೆ ನಿಮ್ಮ ಹಗೆಯ ತೀರಿಸಿಕೊಳ್ಳೆಂದು ಆಜ್ಞಾಪಿಸಿಲು ಅದೇ ಮರೆ
ಯಾದಿಯಲ್ಲಿ ಸೂರ್ಯಂಗೆ ಶರೀರ ಸಂಬಂಧವಾದ ಕೇತು ಚಂದ್ರಂಗೆ
ಶರೀರ ಸಂಬಂಧವಾದ ರಾಹು ಗ್ರಹಿಸುವದು. ಆದು ಕಾರಣದಿಂ
"ಚಂದ್ರಂಗೆ ರಾಹು ಅಡ್ಡ ಬಂದರೆ ಅಂಬುಧಿ ಬೊಬ್ಬಿಟ್ಟತ್ತೆ".

ಅಗಸ್ತ್ಯ.

ಅಗಸ್ತ್ಯನ ಶಿಷ್ಯರು ಕಮಂಡಲವ ತೊಳೆಯುತ್ತಿರೆ ನದಿ ನುಂಗಲು
ಒಕ್ಕುಡಿತೆ ಮಾಡೆ ಸುರರು ನುತಿಸೆ ಉಗುಳಿದನು. ಭಸ್ಮದ ಮಹಾ
ತ್ಮೆಯಿಂ ಶರಧಿಯ ನಿರ್ಮಿಸಿದನು. ಅಗಸ್ತ್ಯನ ಶಿಷ್ಯರು ನಿಂಪಡೆ ಸೇತು
ವಾಯಿತ್ತು. ಸಗರನ ಮಗ ಅಜಗರ ಅವನಿಂದ ಅಂಶುಮಾನ್.
ಅವನಿಂ ಕಲ್ಪಧರನು ಅವನಿಂದಿಳಿಂಪ ಅವನಿಂ ಭಗೀರಥ ಅವರ ವಂಶ
ದವರ ಕಪಿಲಮುನಿ ಸುಟ್ಟ. ಚಿತ್ರವರ್ಮ ಕುದುರೆಯ ತಂದು ಭಗೀರಥ
ದೇವರ ಕುರಿತು ತಪಸ್ಸು ಮಾಡಿ ಗಂಗೆಯ ತರಲು ಜಾಹ್ನು ಮುನಿಯಿಂ
ಹಾಗೆ ಅವರಿಂದ ಪಡೆದ.

೫೭ನೇಯ ವಚನದ ಕಥೆ. (೯-೫೧)

ಗುಪ್ತ ಮಂಚಣ್ಣ

ಸಮುದ್ರದೊಳಗಣ ಸಿಂಪಿನಂತೆಂಬ ವಚನ. ನೀ ಹುಟ್ಟಿಸಿದಲ್ಲಿ ಹುಟ್ಟಿ
ಎಂಬ ವಚನ ೫೭ನೆಯ ವಚನಕ್ಕೆ ಗುಪ್ತ ಮಂಚಣ್ಣಗಳ ಕಥೆ. ಗುಪ್ತ
ಮಂಚಣ್ಣನೆಂಬ ಶರಣನು ಮಣ್ಣೆಸಲ್ಲಿ ಬಿಸ್ಸು, ಕಾಷ್ಠದಲ್ಲಿ ಅಗ್ನಿ ಹುಟ್ಟು

ವಂತೆ ದಾಮೋದರನೆಂಬ ವೈಷ್ಣವಂಗೆ ಹುಟ್ಟಿ ಅರಗಿನ ಮುದ್ರೆಯನೊತ್ತು
ವಂತೆ ಹಣೆಯಲ್ಲಿ ವೈಷ್ಣವ ಮುದ್ರೆಯನೊತ್ತಿಕೊಂಡು ಆ ಕುಲದ ಹೆಣ್ಣ ಮದು
ವೆಯಾಗಿ ಬಳಿಕ ಬಿಜ್ಜಳನ ಮಂತ್ರಿಯಾಗಿ ಸತಿ ಪತಿಗಳು ವೀರಶೈವ
ರಾಗಿ ಗುಪ್ತದಲ್ಲಿ ಜಂಗಮನ ಪೂಜಿಸುತ್ತ ಸಭೆಗೆ ಬರುವಾಗ ಲಿಂಗವ
ಮರೆಯೋಕ್ಕೆವ ಮಾಡಿ ಮುಟ್ಟಿಯನಿಟ್ಟುಕೊಂಡು ಕಿವಿಯಲ್ಲಿ ತೊಳಚಿ
ಕೊಂಳಲ್ಲಿ ತಾವರೆಯ ಮಣಿಗಳ ಧರಿಸಿ ಕೊಂಡೆಯವ ಹೇಳುತೆ ಇರುತೆ
ಐದು ದಿನ ಲಿಂಗಪೂಜೆಯ ಮಾಡುವಾಗ ಕುಮಂಜನ ಹಾಲು
ಮುಡ್ಡಿಗುಗ್ಗುಳ ಮಹಿಸಾಕ್ಷಿ ಮೊದಲಾದ ದಶಾಂಗ ಧೂಪವ ಲಿಂಗಕ್ಕೆ
ಅರ್ಪಿಸಲು ಧೂಪದ ಪರಿಮಳ ಬರಲು ಆ ನೆರಮನೆಯ ವಿಪ್ರ ಗವಾಕ್ಷಿಯ
ಲಿ ಕಂಡು ಬಸವಣ್ಣ ಈ ಮಂಡಣ್ಣ ವೈಷ್ಣವನಲ್ಲ, ಶಿವಭಕ್ತನೆನಲು,
ಇದ ಕೇಳಿ ಬಸವಣ್ಣ ಚನ್ನಬಸವಣ್ಣ ಸೊಡ್ಡಳ ಬಾಚರಸಯ್ಯ ಮೊದ
ಲಾದವರು ಮನೆಗೆ ಬಂದು ಶರಣಾರ್ಥಿ ಮಂಚಣ್ಣಾ ಎಂದು ಕದವ
ತೆಗೆಯಿಸಿಕೊಂಡು ಒಳಯಿಂಕೆ ಹೋಗಲು ಅವರ ಬಂಧುಗಳು ಕಂಡು ಬಸ
ವಣ್ಣನು ಮಂಚಣ್ಣನ ಕೊಲ್ಲುವದಕ್ಕೆ ಬಂದರೆಂದ ಬಿಜ್ಜಳಗೆ ಹೇಳಲು
ಆ ವೈಷ್ಣವರ ಮಗನ ಗೊಡವೆ ನಿಮಗೇನೆನಲು ಬಸವಣ್ಣನೆಂದನು, ಕೆಸ
ರಲ್ಲಿ ತಾವರೆ ಹುಟ್ಟಿದರೆ ಅದರ ಮಗನೆ? ಮುತ್ತು ಚಿಪ್ಪಿನಲ್ಲಿ ಹುಟ್ಟಿದರೆ ಅದರ
ಮಗನೆ? ಇವರು ವೈಷ್ಣವರಲ್ಲ, ನಮ್ಮ ಶಿವಭಕ್ತರೆಂದು ಬಂದೆವೆಂದು
ಸುಡಿಯಲು ಆಗ ತಮ್ಮ ವೇಷ ಪ್ರಕಟವಾಯಿತ್ತೆಂದು ಸತಿಪತಿಗಳೈಕ್ಯ
ವಾಗಲು ಬಿಜ್ಜಳನೆಂದನು, ನೋಡಿದಿರೆ ಬಸವಣ್ಣನು ಮಂಚಣ್ಣನ ಕೊಂದ,
ಹೇಳಿಯಾಳೆಂದು ಸತಿಯನು ಕೊಂದರು, ಲಿಂಗವ ಕಟ್ಟಲೊಲ್ಲೆನೆಂದರೆ
ಕೊಲ್ಲಬಹುದೆ? ಅವರ ಕೆಯ್ಯ ಹೆಣನ ಹೊರಿಸಿ ಅವರುನುಂ ಕೊಲ್ಲೆನಲು
ಆಗ ಬಸವಣ್ಣನು ಇಬ್ಬರ ಪ್ರಾಣವ ಪಡೆಯಲು ಬಿಜ್ಜಳ ಆ ಮಹಿಮೆಯ
ಕಂಡು ಕೈಮುಗಿದನು

೬ಜಿನೆಯ ವಚನದ ಕಥೆ. (೧೦-೫೯)

ಅರ್ಜುನ.

ಪಂಡಾದೇಶ ಕಿರಾತಸ್ಯ ಪದ್ಮಪುರಾಣದಲ್ಲಿ ವಿಷ್ಣು ಅರ್ಜುನಂಗೆ
ಹೇಳಿದ. ಇಂದ್ರಕೀಲ ಪರ್ವತದಲ್ಲಿ ಅರ್ಜುನನು ಶಿವಧ್ಯಾನದಲ್ಲಿ ತಪವ
ಮಾಡುವಾಗ ಮೂರು ದಿನಕೊಮ್ಮೆ ಫಲಾಹಾರವ ಕೊಂಡು ತಿಂಗಳಿದ್ದನು.

ಆರು ದಿನಕೊಮ್ಮೆ ಫಲಾಹಾರವ ಕೊಂಡು ಎರಡು ತಿಂಗಳಿದ್ದನು. ತಿಂಗ
ಳಿಗೆ ಎರಡು ವೇಳೆ ಕಂದಮೂಲಾಹಾರವ ಕೊಂಡು ಮೂರು ತಿಂಗಳಿ
ದ್ದನು. ತರಗೆಲೆಯ ಮೆದ್ದು ನಾಲ್ಕು ತಿಂಗಳಿದ್ದಬಳಿಕ ಗಾಳಿಯ ಹಾರ
ದಲ್ಲಿ ತಪವ ಮಾಡುವಾಗ ತಪಜ್ವಾಲೆಗೆ ಮುನಿಗಳ ಜಡೆಗಳು ಕೆದರಿ
ಕೆಯ್ಯ ಜಪಸರ ಸಡಿಲಿ ಕಮಂಡಲವದಿರಿ ಆಂಗದ ವಿಭೂತಿ ಕದಡಿ
ಹೆದರಿ ಮುನಿಗಳೆಲ್ಲ ಕೈಲಾಸಕ್ಕೆ ಹೋಗಿ ಶಿವನ ಕಂಡು ನಮಸ್ಕರಿಸಲು
ನೀವು ಬಂದ ಕಾರ್ಯವ ಹೇಳಿಎನಲು ಆ ಮಾತಿಗೆ ಮುನಿಗಳು ಒಬ್ಬನ
ತಪದಿಂದ ನಮ್ಮ ವನದ ಭೂಮಿ ಕಾದುದು ತರು ಗುಲ್ಮ ಒಣಗಿ
ದವು. ನಮ್ಮ ತಪ ಕೆಟ್ಟವು. ಆತ ರಾಯನೋ ರಾವುತನೋ? ಅಂಬಿನ
ಬತ್ತಳಿಕೆ ಬಿಲ್ಲ ಆಯುಧ ಜೊರಳುದ್ದದ ಜಡೆ ಈ ಪ್ರಕಾರದ ತಪಸಿ
ಯ್ಯೈದಾನೆ. ಅವನ ಎಬ್ಬಿಸಿ ನಮ್ಮಾಶ್ರಮವ ಕೊಡಿಸಿ ಎನಲು, ಒಳ್ಳೆ
ತೆಂದು ಮುನಿಗಳ ಕಳುಹಿ ಆ ಮೇಲೆ ಶಿವನು ಹಸರಂಗಿಯ ತೊಟ್ಟು
ಹಸುರ ಚೆಲ್ಲಣವನುಟ್ಟು ಟೊಂಕಕೆ ನವಿಲುಗರಿಯ ಕಟ್ಟಿ ತಲೆಗೆ ತಳಿರ
ಟೊಪ್ಪಿಗೆಯ ಧರಿಸಿ ಬಿಲ್ಲು ಬಾಣಂಗಳ ತೆಗೆದುಕೊಂಡು ನಡೆವಾಗ ಗುಹ
ಗಣಪ, ನಂದೀಶ, ವೀರಭದ್ರ ಮೊದಲಾದ ಗಣಂಗಳು ಕಿರಾತ
ವೇಷವ ಧರಿಸಿದರು. ಬಳಿಕ ಗಿರಿಜಾದೇವಿಯರ ಕೂಡೆ ಶಾಕಿನಿ ಡಾಕಿನಿ
ಮೊದಲಾದವರು ಕಿರಾತೆಯರಾದರು. ಆ ಮೇಲೆ ಬೇಂಟೆಯ ಮುಸ್ತೈದೆ
ಬಿಲ್ಲು ಬಡಿಕೋಲು ಸಂಕೊಲೆ ಇಕ್ಕಿದ ವೇಧ ಶ್ವಾನಗಳು ಕೋಲು
ಬಲೆ ದಡಿಬಲೆ ಸಿಡಿಬಲೆ ಕೋಲು ಕಣ್ಣಿಯ ಹೆಬ್ಬಲೆ ಹಕ್ಕಿಯ
ಹಿಡಿವ ಅಂಟಿನ ಗಣಿಗಳು ಮೊದಲಾದವ ತಕೊಂಡು ಶಬರರು ಶಿವ
ನೊಡನೆ ಬೇಂಟೆಯನಾಡುವಾಗ ಆನೆಗಳು ಕಾಡ ಹಂದಿಗಳು ಮೊದಲಾ
ದವು ಬಲೆಯಲ್ಲಿ ಬೀಳಲು, ಅಲ್ಲಿಂದ ಇಂದ್ರಕೀಲ ಪರ್ವತಕ್ಕೆ ಬರಲು
ಅಲ್ಲಿ ಮೂಕದಾನವ ಸೂಕರ ರೂಪ ಧರಿಸಿಕೊಂಡು ಬೇಂಟಿಗಾರರ
ಪಡೆಯು ಹೋಗಲು ಆಗ ಹಿಡಿ ಕೊಲ್ಲು ಎಂಬ ಧ್ವನಿಯಾಗಲು
ಇದೇ ಸಮಯವೆಂದು ಶಿವನು ಬಿಲ್ಲು ಹೂಡಿ ಸೂಕರನಾಗಿರ್ದ ಮೂಕ
ದಾನವನ ಎಸೆಯಲು ನಟ್ಟ ಬಾಣದಿಂದ ಸಹಿತವಾಗಿ ಓಡಿ ಹೋಗಿ ಮುನಿ
ಗಳ ನಡುವೆ ಗರ್ಜಿಸಲು ಆ ಮುನಿಗಳು ಶಿವಶಿವಾ ಎನಲು ಆ ಧ್ವನಿ
ಗೇಳಿ ಅರ್ಜುನ ಎದ್ದೆಸೆಯಲು, ಆ ಹಂದಿ ಸತ್ತು ಬೀಳಲು, ಆಗ ಶಿವನು
ಬಂದು ನಮ್ಮ ಬೇಂಟೆಯ ಹಂದಿ ನಮಗೆ ಕೊಡು ಎನಲು, ಆಗ ಅರ್ಜುನ

ವಂತೆ ಪಾವೋದರನೆಂಬ ವೈಷ್ಣವಂಗೆ ಹುಟ್ಟಿ ಅರಗಿನ ಮುದ್ರೆಯನೊತ್ತು ವಂತೆ ಹಣೆಯಲ್ಲಿ ವೈಷ್ಣವ ಮುದ್ರೆಯನೊತ್ತಿಕೊಂಡು ಆ ಕುಲದ ಹೆಣ್ಣ ಮದು ವೆಯಾಗಿ ಬಳಿಕ ಬಿಜ್ಜಳನ ಮಂತ್ರಿಯಾಗಿ ಸತಿ ಪತಿಗಳು ವೀರಶೈವ ರಾಗಿ ಗುಪ್ತದಲ್ಲಿ ಜಂಗಮವ ಪೂಜಿಸುತ್ತ ಸಭೆಗೆ ಬರುವಾಗ ಲಿಂಗವ ಅಮಳೋಕ್ಯವ ಮಾಡಿ ಮುಟ್ಟಿಯನಿಟ್ಟುಕೊಂಡು ಕಿವಿಯಲ್ಲಿ ತೊಳಚಿ ಕೊರಳಲ್ಲಿ ತಾವರೆಯ ಮಣಿಗಳ ಧರಿಸಿ ಕೊಂಡೆಯವ ಹೇಳುತೆ ಇರುತೆ ಒಂದು ದಿನ ಲಿಂಗಪೂಜೆಯ ಮಾಡುವಾಗ ಕುಮಂಜನ ಹಾಲು ಮಡ್ಡಿಗುಗ್ಗುಳ ಮಹಿಸಾಕ್ಷಿ ಮೊದಲಾದ ದಶಾಂಗ ಧೂಪವ ಲಿಂಗಕ್ಕೆ ಅರ್ಪಿಸಲು ಧೂಪದ ಪರಿಮಳ ಬರಲು ಆ ನೆರಮನೆಯ ವಿಪ್ರ ಗವಾಕ್ಷಿಯಲಿ ಕಂಡು ಬಸವಣ್ಣ ಈ ಮಂಚಣ್ಣ ವೈಷ್ಣವನಲ್ಲ, ಶಿವಭಕ್ತನೆನಲು, ಅದ ಕೇಳಿ ಬಸವಣ್ಣ ಚನ್ನಬಸವಣ್ಣ ಸೊಡ್ಡಳ ಬಾಚರಸಯ್ಯ ಮೊದಲಾದವರು ಮನೆಗೆ ಬಂದು ಶರಣಾರ್ಥಿ ಮಂಚಣ್ಣಾ ಎಂದು ಕದವ ತೆಗೆಯಿಸಿಕೊಂಡು ಒಳಯಿಂಕೆ ಹೋಗಲು ಅವರ ಬಂಧುಗಳು ಕಂಡು ಬಸವಣ್ಣನು ಮಂಚಣ್ಣನ ಕೊಲ್ಲುವದಕ್ಕೆ ಬಂದರೆಂದ ಬಿಜ್ಜಳಗೆ ಹೇಳಲು ಆ ವೈಷ್ಣವರ ಮಗನ ಗೊಡವೆ ನಿಮಗೇನೆನಲು ಬಸವಣ್ಣನೆಂದನು, ಕೆಸರಲ್ಲಿ ತಾವರೆ ಹುಟ್ಟಿದರೆ ಅದರ ಮಗನೆ? ಮುತ್ತು ಚಿಪ್ಪಿನಲ್ಲಿ ಹುಟ್ಟಿದರೆ ಅದರ ಮಗನೆ? ಇವರು ವೈಷ್ಣವರಲ್ಲ, ನಮ್ಮ ಶಿವಭಕ್ತರೆಂದು ಬಂದೆವೆಂದು ನುಡಿಯಲು ಆಗ ತಮ್ಮ ವೇಷ ಪ್ರಕಟವಾಯಿತ್ತೆಂದು ಸತಿಪತಿಗಳೈಕ್ಯವಾಗಲು ಬಿಜ್ಜಳನೆಂದನು, ನೋಡಿದಿರೆ ಬಸವಣ್ಣನು ಮಂಚಣ್ಣನ ಕೊಂದ, ಹೇಳಿಯಾಳೆಂದು ಸತಿಯನು ಕೊಂದರು, ಲಿಂಗವ ಕಟ್ಟಲೊಲ್ಲೆನೆಂದರೆ ಕೊಲ್ಲಬಹುದೆ? ಅವರ ಕೆಯ್ಯ ಹೆಣನ ಹೊರಿಸಿ ಅವರುನುಂ ಕೊಲ್ಲೆನಲು ಆಗ ಬಸವಣ್ಣನು ಇಬ್ಬರ ಪ್ರಾಣವ ಪಡೆಯಲು ಬಿಜ್ಜಳ ಆ ಮಹಿಮೆಯ ಕಂಡು ಕೈಮುಗಿದನು

ಟಿಜನೆಯ ವಚನದ ಕಥೆ. (೧೦-೫೯)

ಅರ್ಜುನ.

ಪಂಚಾದಶ ಕಿರಾತಸ್ಯ ಪದ್ಮಪುರಾಣದಲ್ಲಿ ವಿಷ್ಣು ಅರ್ಜುನಂಗೆ ಹೇಳಿದ. ಇಂದ್ರಕೀಲ ಪರ್ವತದಲ್ಲಿ ಅರ್ಜುನನು ಶಿವಧ್ಯಾನದಲ್ಲಿ ತಪವ ಮಾಡುವಾಗ ಮೂರು ದಿನಕೊಮ್ಮೆ ಫಲಾಹಾರವ ಕೊಂಡು ತಿಂಗಳಿದ್ದನು.

ಆರು ದಿನಕೊಮ್ಮೆ ಫಲಾಹಾರವ ಕೊಂಡು ಎರಡು ತಿಂಗಳಿದ್ದನು. ತಿಂಗಳಿಗೆ ಎರಡು ಪೇಳೆ ಕಂದಮೂಲಾಹಾರವ ಕೊಂಡು ಮೂರು ತಿಂಗಳಿದ್ದನು. ತರಗೆಲೆಯ ಮೆದ್ದು ನಾಲ್ಕು ತಿಂಗಳಿದ್ದಬಳಿಕ ಗಾಳಿಯ ಹಾರದಲ್ಲಿ ತಪವ ಮಾಡುವಾಗ ತಪಜ್ವಾಲೆಗೆ ಮುನಿಗಳ ಜಡೆಗಳು ಕೆದರಿ ಕೆಯ್ಯ ಜಪಸರ ಸಡಿಲಿ ಕಮಂಡಲವದಿಂ ಅಂಗದ ವಿಭೂತಿ ಕದಡಿ ಹೆದರಿ ಮುನಿಗಳೆಲ್ಲ ಕೈಲಾಸಕ್ಕೆ ಹೋಗಿ ಶಿವನ ಕಂಡು ನಮಸ್ಕರಿಸಲು ನೀವು ಬಂದ ಕಾರ್ಯವ ಹೇಳಿಎನಲು ಆ ಮಾತಿಗೆ ಮುನಿಗಳು ಒಬ್ಬನ ತಪ್ಪದಿಂದ ನಮ್ಮ ವನದ ಭೂಮಿ ಕಾಮುದು ತರು ಗುಲ್ಮ ಒಣಗಿದವು. ನಮ್ಮ ತಪ ಕೆಟ್ಟವು. ಆತ ರಾಯನೋ ರಾವುತನೋ? ಅಂಬಿನ ಬತ್ತಳಿಕೆ ಬಿಲ್ಲ ಆಯುಧ ಬೆರಳುದ್ದದ ಜಡೆ ಈ ಪ್ರಕಾರದ ತಪಸಿಯೈ್ಯದಾನೆ. ಅವನ ಎಬ್ಬಿಸಿ ನಮ್ಮಾಶ್ರಮವ ಕೊಡಿಸಿ ಎನಲು, ಒಳ್ಳಿತೆಂದು ಮುನಿಗಳ ಕಳುಹಿ ಆ ಮೇಲೆ ಶಿವನು ಹಸರಂಗಿಯ ತೊಟ್ಟು ಹಸುರ ಚಲ್ಲಣವನುಟ್ಟು ಟೊಂಕಕೆ ನವಿಲುಗರಿಯ ಕಟ್ಟಿ ತಲೆಗೆ ತಳಿರ ಟೊಪ್ಪಿಗೆಯ ಧರಿಸಿ ಬಿಲ್ಲು ಬಾಣಂಗಳ ತೆಗೆದುಕೊಂಡು ನಡೆವಾಗ ಗುಹ ಗಣಪ, ನಂದೀಶ, ವೀರಭದ್ರ ಮೊದಲಾದ ಗಣಂಗಳು ಕಿರಾತ ವೇಷವ ಧರಿಸಿದರು. ಬಳಿಕ ಗಿರಿಜಾದೇವಿಯರ ಕೂಡೆ ಶಾಕಿನಿ ಡಾಕಿನಿ ಮೊದಲಾದವರು ಕಿರಾತೆಯರಾದರು. ಆ ಮೇಲೆ ಬೇಂಟೆಯ ಮುಸ್ತೈದೆ ಬಿಲ್ಲು ಬಡಿಕೋಲು ಸಂಕೊಲೆ ಇಕ್ಕಿದ ವೇಧ ಶ್ವಾನಗಳು ಕೋಲು ಬಲೆ ದಡಿಬಲೆ ಸಿಡಿಬಲೆ ಕೋಲು ಕಣ್ಣಿಯ ಹೆಬ್ಬಲೆ ಹಕ್ಕಿಯ ಹಿಡಿವ ಅಂಟಿನ ಗಣೆಗಳು ಮೊದಲಾದವ ತಕೊಂಡು ಶಬರರು ಶಿವ ನೊಡನೆ ಬೇಂಟೆಯನಾಡುವಾಗ ಆನೆಗಳು ಕಾಡ ಹಂದಿಗಳು ಮೊದಲಾದವು ಬಲೆಯಲ್ಲಿ ಬೀಳಲು, ಅಲ್ಲಿಂದ ಇಂದ್ರಕೀಲ ಪರ್ವತಕ್ಕೆ ಬರಲು ಅಲ್ಲಿ ಮೂಕದಾನವ ಸೂಕರ ರೂಪ ಧರಿಸಿಕೊಂಡು ಬೇಂಟಿಗಾರರ ಪಡೆಯು ಹೋಗಲು ಆಗ ಹಿಡಿ ಕೊಲ್ಲು ಎಂಬ ಧ್ವನಿಯಾಗಲು ಇದೇ ಸಮಯವೆಂದು ಶಿವನು ಬಿಲ್ಲು ಹೂಡಿ ಸೂಕರನಾಗಿದ್ದ ಮೂಕದಾನವನ ಎಸೆಯಲು ನಟ್ಟ ಬಾಣದಿಂದ ಸಹಿತವಾಗಿ ಓಡಿ ಹೋಗಿ ಮುನಿಗಳ ನಡುವೆ ಗರ್ಜಿಸಲು ಆ ಮುನಿಗಳು ಶಿವಶಿವಾ ಎನಲು ಆ ಧ್ವನಿಗೇಳಿ ಅರ್ಜುನ ಎದ್ದೆಸೆಯಲು, ಆ ಹಂದಿ ಸತ್ತು ಬೀಳಲು, ಆಗ ಶಿವನು ಬಂದು ನಮ್ಮ ಬೇಂಟೆಯ ಹಂದಿ ನಮಗೆ ಕೊಡು ಎನಲು, ಆಗ ಅರ್ಜುನ

ನಮ್ಮ ಬಾಣದಿಂದ ಬಿದ್ದುದ ಕೊಡೆನೆನಲು, ಆಗ ಶಿವನು ನೀ ತಪಸಿ ನಿನಗೆ ಬಿಲ್ಲು ಬಾಣ ಖಡ್ಗವೇತಕೆನಲು, ಆ ಮಾತಿಗೆ ಬಿಲ್ಲು ಬಾಣ ಖಡ್ಗದಿಂದ ಶಿವನು ತಪವ ಮಾಡಲಿಲ್ಲವೆ ಅಂತಾತನ ಶಿಷ್ಯ ನಾನು ಇದಕೇನು, ತಪ್ಪು? ಶಿವನೇ ಅಡ್ಡ ಬಂದರೂ ನನ್ನ ಪಂಥವ ಬಿಡೆನೆಂದು ಎಸೆಯಲು ಆ ಬಾಣ ಗಳು ಶಿವನ ಬೆನ್ನ ಹಿಂದೆ ಬೀಳಲು ಮತ್ತೆ ಎಸೆಯಲು ವಂಜು ಮುಸು ಕಿದರೆ ಪರ್ವತವಂಜುವದೆ, ಕಾಳಕೂಟವ ನೊಣ ಸೇವಿಸುವದೆ, ವಡ ಬಾಗ್ನಿ ಮಂಜಿಗೆ ನೊಂದುವುದೇ, ತಾವರೆಯ ನೂಲಿಗೆ ಆನೆ ನಿಂತೀತೆ, ಹಾಗೆ ಅರ್ಜುನನ ಬಾಣಕೆ ಶಿವ ತೊಲಗಿಯಾನೆ ಎಂದು ಎಲ್ಲರು ಅಚ್ಚರಿ ವಡಲು ಬಳಿಕ ಶಿವನೆಚ್ಚ ಬಾಣಗಳ ಅರ್ಜುನ ತನ್ನ ಬಾಣಂಗಳಿಂದ ಕತ್ತರಿಸಲು ಆ ಮೇಲೆ ಬಾಣ ತೀರಲು ಬಿಲ್ಲಿನಲ್ಲಿ ಖಡ್ಗದಲ್ಲಿ ಹೊಯ್ದನು. ಆಗ ಸೆಳೆದುಕೊಳಲು ಮರಳಿಂದ ಕಲ್ಲುಗಳಂದಿಟ್ಟನು. ಆ ಶಿವನು ಅಂಬಿನಿಂದ ಕತ್ತರಿಸಿ ಮರಳು ತಪ್ಪಿಸಿ ಆಯುಧವಿದ್ದರೆ ತಕ್ಕೋ ಎನಲು ಅರ್ಜುನ ಮುಷ್ಟಿಯಿಂದ ಹೊಯ್ದಾಡಲು ಬಳಿಕ ಶಿವನು ಅರ್ಜುನನ ಪಾದದಲ್ಲಿ ಮೆಟ್ಟಲು ಮೂಗಿನಲ್ಲಿ ರಕ್ತ ಸುರಿಯಲು ಆಗ ಇವ ಬೇಡನಾ ದರೆ ನನಗಶಕ್ಯನಾದಾನೆ ಎಂದು ಮಳಲ ಲಿಂಗವ ಮಾಡಿ ಕಾಡಮಲ್ಲಿಗೆ ಯಿಂದರ್ಚಿಸಿ ತ್ರ್ಯಂಬಿಕ ಗಿರಿಜಾರಮಣ ಭಕ್ತಕುಟುಂಬಿ ಎಂದು ನುತಿಸಿ ಈ ಶಬರನ ಗೆಲುವುದಕ್ಕೆ ಶಕ್ತಿಯ ಕೊಡು ಎಂದು ಲಿಂಗವ ನೋಡಲು ಇಲ್ಲಿ ಪೂಜಿಸಿದ ಪುಷ್ಪ ಆ ಕಿರಾತನ ಮಂಡೆಯಲ್ಲಿರಲು ಕಂಡು ಶಿವ ನೆಂದಡ್ಡ ಬೀಳಲು ಶಿವನು ರೂಪು ದೋರೆ, ಮೆಚ್ಚಿದೆ ಬೇಡು ಎನಲು, ಎಲ್ಲರ ಜಯಿಸುವಂತಹ ಬಾಣವ ದಯಪಾಲಿಸು ಎನಲು ಪಾಶುಪತಾಸ್ತ್ರವ ಕೊಡಲು ಅವ ಅರ್ಜುನನು ತೆಗೆದುಕೊಂಡು ಕೌರವರ ಜಯಿಸಿದನು.

ಕಾಮ.

ಪಂಪಾ ಕ್ಷೇತ್ರದಲ್ಲಿ ಶಿವನು ಯೋಗದಲ್ಲಿರುವಾಗ ದೇವತೆಗಳು ತಾರಕನ ಭಯಕ್ಕೆ ಅಂಜಿ ಮೇರುವಿನ ತಪ್ಪಲಲ್ಲಿದ್ದು ಶಿವನ ಯೋಗವ ಕೆಡಿಸಿ ದೇವಿಯರ ಮದುವೆಯಾಗುವಂತೆ ಮಾಡಿ ಬಾರೆಂದು ಕಾಮನ ಕಳುಹಿಲು ಆಗ ಹೋಗಿ ಪಂಚ ಬಾಣದಿಂದ ಎಸೆಯಲು ನೊಸಲಕಣ್ಣಿ ನಿಂದುರುಹಿ ಆ ಬೂದಿಯ ಮೇಲೆ ತಾಂಡವನಾಡಿದನು.

ಶಿವರಾತ್ರಿಯ ಸಂಕಣ್ಣ.

ವೀರಕೊಂಕಣದ ಭದ್ರಾಪುರದಲ್ಲಿ ಶಂಕರನೆಂಬ ಕಿರಾತನಿಪ್ಪನು. ಅವ ಬೇಂಟೆಯನಾಡಿಕೊಂಡು ಬದುಕುತಿರಲು ಒಂದು ದಿನ ಸಂಜೆಯಲ್ಲಿ ಬೇಂಟೆಗೆ ಹೋಗುವಾಗ ಇದಿರಾಗಿ ಹುಲಿ ಬರಲು ಕಂಡು ಮರನ ಏರಿ ದನು. ಇಳಿದರೆ ಹಿಡಿದುಕೊಂದೀತೆಂದು ಮರನ ಮುಂಡದಲ್ಲಿ ಕುಳಿತಿ ರಲು ಆಗ ಹುಲಿ ಹೋಯಿತೋ ಇಲ್ಲವೋ ಎಂದು ನೋಡುವುದಕ್ಕೆ ಕಣ್ಣಿಗೆ ಮರೆಯಾದ ಸೊಪ್ಪ ಮುರಿದು ಹಾಕುತಿರಲು ಬೆಳಗಾಯಿತ್ತು. ಹುಲಿ ಹೋಯಿತ್ತು ತಾನು ಬಿಲುಪತ್ರೆಯ ಮರದಿಂದಿಳಿದು ಮನೆಗೆ ಹೋಗುವೆನೆಂಬಷ್ಟರೊಳಗೆ ಅಲ್ಲಿದ್ದ ಲಿಂಗದೊಳಗಿಂದ ಶಿವನು ಬಂದು ಕೈಲಾಸಕ್ಕೆ ನಡೆ ಎನಲ ನಾ ಮಾಡಿದ ಪುಣ್ಯವೇನೆನಲು ಎಲೆ ಭಕ್ತ ನಿನ್ನ ಕಂಕಳೊಳಗಣ ತಿತ್ತಿಯ ನೀರು ಎನಗೆ ರುದ್ರಾಭಿಷೇಕವಾಯಿತ್ತು. ನೀನು ಹಾಕಿದ ಸೊಪ್ಪು ಎನಗೆ ಪತ್ರೆಯ ಪೂಜೆಯಾಯಿತ್ತು. ನೀನು ಅಂಜಿ ನಿದ್ರೆಯ ಮಾಡಿದುದೆ ಜಾಗ್ರವಾಯಿತ್ತು. ನಿನಗೆ ಊಟವಿಲ್ಲದುದೆ ಉಪವಾಸವಾಯಿತ್ತು. ಈ ರೀತಿಯಲ್ಲಿ ನಿನಗೆ ಶಿವರಾತ್ರಿಯ ಫಲ ಘಟಿಸಿ ತೆಂದು ಶಿವರಾತ್ರಿಯ ಸಂಕಣ್ಣಗಳೆಂಬ ಪೆಸರ ಕೊಟ್ಟು ಪುಷ್ಪಕದಲ್ಲಿ ಕುಳ್ಳಿ ರಿಸಿ ಕೈಲಾಸಕ್ಕೆ ಒಯ್ದರು.

೬೬ನೆಯ ವಚನದ ಕಥೆ. (೧೦-೬೦)

ಪೊರಟದ ಬಂಕಿದೇವ.

ಪೊರಟದ ಬಂಕಿದೇವಗಳು ಶಿವಭಕ್ತಿಯಲ್ಲಿರುತಿರೆ ಒಂದು ದಿನ ಶಿವನು ಜಂಗಮರೂಪಿನಲ್ಲಿ ಅವರ ಮನವ ನೋಡುವುದಕ್ಕೆ ಅರ್ಧ ರಾತ್ರೆ ಯಲ್ಲಿ ಅವರ ಮನೆಯ ಮುಂದೆ ನಿಂದಿರಲು ಆಗ ಭಕ್ತಯ್ಯ ನಮಸ್ಕರಿಸಿ ಏನು ಕಾರಣ ಗಮನಿಸಿದಿರಿ ಎನಲು ಎಲೆ ಭಕ್ತಯ್ಯ ನಮಗೆ ಬರಡಾಕಳ ಹಾಲು ಕೊರಡಿನಲ್ಲಿ ಚಿಗುವ ಪತ್ರೆಯ ನೇಮವೆನಲು, ಹಾಗೆ ಆಗಲಿ, ಎಂದು ಗೊಡ್ಡಾಕಳ ತಂದು ಹಾಲ ಕರೆದು ಆ ಗೂಟದಲ್ಲಿ ಬಿಲ್ವಪತ್ರೆಯ ಚಿಗುರಿಸಿ ಕೊಯ್ತಂದು ಆ ಚರಮೂರ್ತಿಗೆ ಕೊಡಲು ಶಿವಪೂಜೆಯ ನೇಮವ ಮಾಡಿ ಆಗ ಮೆಚ್ಚಿದೆವು ಬೇಡು ಎನಲು, ಇನ್ನು ಶಿವಭಕ್ತಿಯ ನಾಚರಿಸಿ ಆ ಮೇಲೆ ಕೈಲಾಸಕ್ಕೆ ಬಂದೆವೆಂದು ಹೇಳಿದರು.

ಕಬ್ಬಿಲರು.

ಕಬ್ಬಿಲರು ಶಿವಪ್ರಸಾದವು ನಮಗೆ ಸಲ್ಲದೆ ಎಂದು ಬಸವೇಶ್ವರನ ಕೇಳಿ ಶಿವಪ್ರಸಾದದ ವಿಷವ ಕೊಡಲು ಕೊಳ್ಳದಿರಲು ವಿಷವ ತ್ರಿಪುರಾಂತಕಲಿಂಗಕ್ಕರ್ಪಿಸಿ ಅಮೃತವ ಮಾಡಿ ಶಿವಭಕ್ತರೆಲ್ಲ ಅರ್ಪಿಸಿದರು.

ಸಿದ್ಧಿಸೆಟ್ಟಿ.

ಸಂಗಯ್ಯನಿಂದ ಸರ್ಪನ ತರಿಸಿ ಕಂಕಣವಾಗೆ ಸಿದ್ಧಿಸೆಟ್ಟಿಗೆ ಕೊಟ್ಟ ಹೊನ್ನ ತಂದು ದಾಸೋಹವ ಮಾಡುತ್ತಿರೆ ಬಿಜ್ಜಳನು ಬಸವಣ್ಣನ ಕರಿಸಿ ಕಂಕಣವ ತರಿಸೆ ಮುದ್ರೆದೆಗೆಯೆ ಸರ್ಪ ಬರೆ ಹೆದರಿ ನುತಿಸೆ ಕಂಕಣವ ಮಾಡಿ ಸಿದ್ಧಿಸೆಟ್ಟಿಗೆ ಕೊಟ್ಟರು.

೭೩ನೆಯ ವಚನದ ಕಥೆ. (೧೨-೧)

ಚಂಡಗಣೇಶ್ವರ.

ದ್ರಾವಿಡ ದೇಶದಲ್ಲಿ ಒಬ್ಬ ವಿಪ್ರನು ದುರಾಚಾರದಲ್ಲಿರುತ್ತ ಒಂದು ದಿನ ವಿಪ್ರರ ಅಗ್ರಹಾರಕ್ಕೆ ಹೋಗಿ ಒಂದು ಮನೆಯಲ್ಲಿ ಕಳವಿಗೆ ಹೋಗಲು ಮನೆಯವರು ಕಂಡು ಗುದಿಗೆಯಲ್ಲಿ ಬಡಿಯಲು ಸತ್ತನು. ಅವನ ಕಾಲಿಗೆ ಬಳಕಟ್ಟಿ ಎಳಿಸಿ ಹಾಕಲು ಆಗ ಒಂದು ಶ್ವಾನ ಬೂದಿಯಲ್ಲಿ ಮಲಗಿದ್ದು ಬಂದು ಅವನ ಹಣೆಯಲ್ಲಿ ಒಂದು ಎದೆಯಲ್ಲಿ ಒಂದು ಕಾಲಿರಿಸಿ ಕಡಿವುತ್ತಿರಲು ಆಗ ಶಿವದೂತರು ಬಂದು ಪುಷ್ಪಕದಲ್ಲಿ ಕೂಳ್ಳಿರಿಸಿ ಕೈಲಾಸಕ್ಕೆ ಒಯ್ಯಲು ಶಿವನು ಎದ್ದು ಕುಳ್ಳಿರಿಸಿಕೊಂಡು ಚಂಡಗಣೇಶ್ವರನೆಂದು ಹೆಸರು ಕರೆಯಲು ಸುಖದಲ್ಲಿದ್ದನು.

೭೪ನೆಯ ವಚನದ ಕಥೆ. (೧೨-೧)

ಕಲಾವತಿ

ಕಾಶೀರಾಜನ ಮಗಳು ಕಲಾವತಿಯ ಮದುರೆಯ ದಾಸಾರ್ಹರಾಯ ಮದುವೆಯಾಗಿ ಕರಕೊಂಡು ಹೋಗಿ ಏಕಾಂತದಲ್ಲಿರಲು ಆಕೆ ಪರಿಮಳ ಮೊದಲಾದುಪಚಾರವ ಮಾಡಿ ಗಂಡನ ಬಿಟ್ಟು ಬೇರೆ ಮಲಗಲು ಆಗ

ಮಹಾನುಭವ ಪ್ರಕಾಶಿಕೆ.

ಹಾಗಲವಾಡಿ ಸಿದ್ಧರಾಮಪ್ಪ ನಾಯಕರು

ರಚಿಸಿದ್ದು.

ಸಂಗ್ರಾಹಕ

ಎಚ್. ಆರ್. ಮಹಾಂತಯ್ಯ ಬಿ. ಎ. (ಆನರ್ಸ್)

ಹೊನ್ನುಡಿಕೆ ಜಿ॥ ತುಮಕೂರು.

ನುನ್ನುಡಿ.

ಈ ಗ್ರಂಥವು ಮಹತ್ವದ್ದಿದ್ದು ಅದರ ಕರ್ತೃವಿನ ವಿಚಾರವನ್ನು ವಿವೇಚಿಸುವುದು ಅವಶ್ಯಕವಾಗಿದೆ. ಗ್ರಂಥದ ಆದಿಯಲ್ಲಿ "ಹಾಗಲವಾಡಿ ಸಿದ್ಧರಾಮಪ್ಪ ನಾಯಕರು ನಿರೂಪಿಸಿದ ಮಹಾನುಭವ ಪ್ರಕಾಶಿಕೆ ಬರೆವುದಕ್ಕೆ ಶುಭಮಸ್ತು" ಎಂದಿದೆ. ಗ್ರಂಥಾಂತ್ಯದಲ್ಲಾದರೂ, "ಇದನ್ನು ಅನಾದಿಭಕ್ತನಾದ ಸರ್ವಾಚಾರಸಂಪನ್ನನಾದ ಶತೇಕೋತ್ತರ ಸ್ಥಲಾನುಭವ ಗರ್ಭೀಕೃತ ಷಟ್ಸ್ಥಲ ಜ್ಞಾನಾರೂಢನಾದ, ಶಿವಾಗಮೋಕ್ತ ಶ್ರೀವೀರಶೈವಾಚಾರವೇ ಶೀಲವಾಗುಳ್ಳ, ಶೀಲವಂತ ಮುರಿಗೆಪ್ಪನೆಂಬ ಶಿವಶರಣಂಗೆ, ಅತ್ಯಂತ ಕೃಪಾಕಟಾಕ್ಷದಿಂ ಶಿವಸಮಯ ವಾಂಛಲ್ಯದಿಂದಾ ಸದ್ಭಕ್ತನ ಮೇಲೆ ಅತ್ಯಂತ ಕೃಪೆಯಿಟ್ಟು, ನಿಃಕಳೆ, ನಿರ್ಮಲ, ನಿರ್ಭೇದ್ಯ, ನಿರುಪಮ, ನಿರ್ನಿಂದ್ಯ, ನಿರ್ಗಣಿತ, ನಿರಂಜನಲಿಂಗವೆನಿಸುವ ಸಿದ್ಧಲಿಂಗೇಶನು ನಿರೂಪಿಸಿದ ಮಹಾನುಭವ ಪ್ರಕಾಶಿಕೆಯಂ; ತತ್ಪ್ರಸಾದ ಬಲದಿಂದರಿದು, ಅವಧರಿಸಿ, ಅವಿರಳಾನಂದದಿಂ ಶಿವಗಣ ಚಕ್ರಕ್ಕೆ ಬಿನ್ನವಿಸಿ ಕೃತಕೃತ್ಯನಾದ, ಶಿವಭಕ್ತರ ದಾಸನಾದ, 'ನಿಜಲೀಲಾ ವಿನೋದದಿಂ ಸಿದ್ಧಿಯಾದ ಅನ್ವರ್ಥ ನಾಮವನುಳ್ಳ ಸಿದ್ಧರಾಮೇಶ್ವರ' ನೆಂಬ ಪ್ರಾಣಲಿಂಗ ಪ್ರಸಾದಿಯಾದ ಸಿದ್ಧರಾಮನಯ್ಯ ನಾನು, ಶ್ರೀಗುರುಸಿದ್ಧಲಿಂಗೇಶ್ವರ ಪ್ರಭುವೇ" ಎಂದಿದೆ ಗ್ರಂಥದ ಆದಿ ಮತ್ತು ಅಂತ್ಯವನ್ನು ಪರಿಶೀಲಿಸಿದಲ್ಲಿ ಹಾಗಲವಾಡಿಯ ವೀರಶೈವ ರಾಜಮನೆತನಕ್ಕೆ ಸೇರಿದ ಸಿದ್ಧರಾಮಪ್ಪ ನಾಯಕನೆಂಬುವರಿಂದ ಈ ಗ್ರಂಥವು ರಚಿಸಲ್ಪಟ್ಟಿದೆಯೆಂದು ವ್ಯಕ್ತವಾಗುತ್ತದೆ.

ಹಾಗಲವಾಡಿ ವೀರಶೈವರಾಜಮನೆತನದ ವಂಶಾವಳಿಯ ಮೂಲವು ಇನ್ನೂ ಸಿಕ್ಕಿಲ್ಲ. ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ ಶಿವಾನುಭವದ ಸಂ. ೭ ಸಂಚಿಕೆಳ ಪುಟಗಳು ೨೫೦—೨೬೨ ರಲ್ಲಿ "ಹಾಗಲವಾಡಿ ಅರಸುಗಳ ವೃತ್ತಾಂತ" ವನ್ನು ಪ್ರಕಟಿಸಿದ್ದಾರೆ. ಆ ವೃತ್ತಾಂತದಲ್ಲಿ ಸಿದ್ಧರಾಮಪ್ಪನಾಯಕನೆಂಬ ಹೆಸರು ಕಾಣಬರುವುದಿಲ್ಲ. ಆದರೆ ೧೭೨೫ ರಿಂದ ೧೭೪೬ ರ ವರೆಗೆ ಆಳಿದ ಮುದಿಯಪ್ಪನಾಯಕನ ಚರಿತ್ರೆ

ಯನ್ನು ಓದುವುದರಿಂದ ಇತ್ತ ಸ್ವಲ್ಪ ಬೆಳಕು ಬೀಳುತ್ತದೆ. ರಾ॥ ಸಾ॥ ಹಳಕಟ್ಟಿಯವರ ಲೇಖನದಿಂದ ಈ ಭಾಗವನ್ನು ಉದ್ಧರಿಸಿ ಬರೆದಿದೆ.

ಮುದಿಯಪ್ಪನಾಯಕ (೧೭೨೫—೧೭೪೬):— ಚನ್ನಬಸವಪ್ಪನಾಯಕ (೧೭೦೪-೧೭೨೫) ನ ತರುವಾಯ ಅವನ ಮಗ ಮುದಿಯಪ್ಪನಾಯಕನು ಪಟ್ಟವನ್ನೇರಿ ರಾಜ್ಯವಾಳತೊಡಗಿದನು. ಈ ಮುದಿಯಪ್ಪನಾಯಕನು ಅತ್ಯಂತ ಧರ್ಮಿಷ್ಠನಾಗಿದ್ದನು. ಇವನು ಬಹಳ ಜಮೀನು ಧರ್ಮಾರ್ಥದಾನಕೊಟ್ಟನು. ಬನಾರಸದಲ್ಲಿ ಒಂದು ಧರ್ಮಛತ್ರವನ್ನು ಕಟ್ಟಿಸಿದನು. ಆತನು ಮುದ್ದುವೀರಸ್ವಾಮಿಗಳೆಂಬವರ ಕಡೆಯಿಂದ ಉಪದೇಶವನ್ನು ಹೊಂದಿ, ಯಾವಾಗಲೂ ಧರ್ಮಕಾರ್ಯಗಳಲ್ಲಿ ಆಸಕ್ತನಾಗಿದ್ದನು. 'ಅವನು ಅತ್ಯಂತ ವಿದ್ವಾಂಸನಾಗಿದ್ದು ಒಂದು ಗ್ರಂಥವನ್ನು ಬರೆದಿರುವನು.' ಅವನು ೨೧ ವರ್ಷ ೫ ತಿಂಗಳು ರಾಜ್ಯವಾಳಿ ವಿಭವ ಸಂವತ್ಸರದಲ್ಲಿ ತನ್ನ ಹಿರಿಯಮಗನಿಗೆ ಪಟ್ಟಕಟ್ಟಿ ರಾಜ್ಯತ್ಯಾಗವನ್ನು ಮಾಡಿದನು; ಮತ್ತು ಸಾಯುವ ವರೆಗೆ ಧರ್ಮಕಾರ್ಯಗಳಲ್ಲಿ ನಿರತನಾಗಿದ್ದನು."

ಮತ್ತು ತಮ್ಮ ಲೇಖನದ ಉಪಸಂಹಾರದಲ್ಲಿ ಶ್ರೀಮಾನ್ ಹಳಕಟ್ಟಿಯವರು ಹೀಗೆ ಅಂದಿರುವರು. "೧೮ ನೇ ಶತಮಾನದ ಆರಂಭದಲ್ಲಿ ಆಳಿದ ಮುದಿಯಪ್ಪನಾಯಕನು ಗ್ರಂಥಕಾರನಾಗಿಹೋಗಿರುವನು; ಅವನು ಯಾವ ಗ್ರಂಥವನ್ನು ಬರೆದನೋ ಎಂಬುದು ನಮಗೆ ತಿಳಿಯದು. ಈ ಅರಸನು ಕಡೆಗೆ ಉಪದೇಶವನ್ನು ಹೊಂದಿ, ರಾಜ್ಯಪರಿತ್ಯಾಗಮಾಡಿ ಧರ್ಮಕಾರ್ಯಗಳಲ್ಲಿ ಆಸಕ್ತನಾಗಿ ಕಡೆವರೆಗೆ ಉಳಿದನು" ಇಲ್ಲಿ ಉಕ್ತವಾಗಿರುವ ಅಜ್ಞಾತ ಗ್ರಂಥವು ಈ "ಮಹಾನುಭವ ಪ್ರಕಾಶಿಕೆ" ಯೇ ಆಗಿರಬಹುದೆಂದು ಊಹಿಸಲು ಅವಕಾಶವಿದೆ. ಯಾಕೆಂದರೆ, ಇದು ಪಟ್ಸ್ಥಲಾತ್ಮಕ ಶಿವಾನುಭವಗ್ರಂಥ; ಗ್ರಂಥಕರ್ತೃವು ಶ್ರೀ ಮುದ್ದುವೀರಸ್ವಾಮಿಗಳೆಂಬುವರಿಂದ ಉಪದಿಷ್ಟರೂ ಬಹಳ ವಿದ್ವಾಂಸರೂ ಆಗಿದ್ದರೆಂಬುದು ಇದನ್ನು ಬಲಪಡಿಸುತ್ತದೆ.

ಆದರೆ ಗ್ರಂಥಕರ್ತೃವಿನ ನಿಜವಾದ ಹೆಸರಿನ ಬಗ್ಗೆ ಸಂಶಯ ನಿರಸನವಾದಂತಾಗಲಿಲ್ಲ. ಗ್ರಂಥದಲ್ಲಿ ಸಿದ್ಧರಾಮಪ್ಪ ನಾಯಕನೆಂದು ಇದೆ; ವಂಶಾವಳಿಯಲ್ಲಿ ಮುದಿಯಪ್ಪ ನಾಯಕನೆಂದಿದೆ. ಈ ಇಬ್ಬರೂ ಒಬ್ಬನೇ ಆಗಿರಬೇಕೆಂದು ನನ್ನ ಅಭಿಮತ. ಹೇಗೆಂದರೆ:—

ಹಾಗಲವಾಡಿ ಅರಸುಗಳ ಮೂಲ ಪುರುಷನು ಯರಿಮಾದಿ ನಾಯಕನು (೧೪೭೮—೧೫೦೮). ಈತನ ಮಗ ನೆಲ್ಲೂರು ನಾಯಕ (೧೫೦೮ ೧೫೪೪) ನ ಮಗ ಭೈರವ ನಾಯಕ (೧೫೪೪—೧೫೭೮) ನ ವೃತ್ತಾಂತ ಈ ರೀತಿ ಇದೆ:— ಈತನ ಆಳಿಕೆಯಲ್ಲಿ ಒಬ್ಬ ವ್ಯಾಪಾರಿ-ಪ್ರವಾಸಿಯು ಭಕ್ತಿಯಿಂದ ರಾಮೇಶ್ವರ ಮೂರ್ತಿಗೆ ದೇವಾಲಯವೊಂದನ್ನು ಈತನ ರಾಜ್ಯದಲ್ಲಿ ಕಟ್ಟಿಸಿದನು. ಆ ರಾಮೇಶ್ವರ ಮೂರ್ತಿಯ ಮಹಾತ್ಮ್ಯವನ್ನು ರಾಜನು ಕೇಳಿ, ಮಕ್ಕಳಿಲ್ಲದ ತನಗೆ ಆ ದೇವರು ಮಕ್ಕಳನ್ನು ದಯಪಾಲಿಸಿದರೆ ತಾನು ಭಕ್ತಿಯಿಂದ ನಡೆದುಕೊಳ್ಳುವೆನೆಂದು ಅರಿಕೆ ಮಾಡಿಕೊಂಡನು. ಆ ಕಾಲಕ್ಕೆ ರಾಮೇಶ್ವರನು ಸಿದ್ಧೇಶ್ವರ ಸ್ವಾಮಿಗಳೆಂಬ ಓರ್ವ ಜಂಗಮ ರೂಪವನ್ನು ಧರಿಸಿ ಬಂದು, ಒಬ್ಬ ಗೊಲ್ಲನ ಕೈಗೆ ತನ್ನ ಬಾಯಲ್ಲಿಯ ತಾಂಬೂಲವನ್ನು ಕೊಟ್ಟು ಅದನ್ನು ಅರಸಿಯು ಭಕ್ತಿಯಿಂದ ಸೇವಿಸಿದರೆ ತೀವ್ರವಾಗಿ ಪುತ್ರವತಿಯಾಗುವಳೆಂದು ತಿಳಿಸಿದನು ಅದೇ ಪ್ರಕಾರ ನಡೆದು ರಾಣಿಯು ಗರ್ಭಿಣಿಯಾದಳು. ರಾಜನು ಎಷ್ಟು ಹುಡುಕಿದರೂ ಸ್ವಾಮಿಗಳು ಸಿಕ್ಕಲಿಲ್ಲವಾಗಿ, ರಾಮೇಶ್ವರನೇ ತನ್ನನ್ನುದ್ಧರಿಸಲು ಸಿದ್ಧೇಶ್ವರ ರೂಪದಿಂದ ಬಂದಿದ್ದನೆಂದು ಭಾವಿಸಿ, ಹುಟ್ಟಿದ ತನ್ನ ಮಗನಿಗೆ ಲಿಂಗಧಾರಣೆಯಂ ಮಾಡಿಸಿ ವೃದ್ಧ ಸ್ವಾಮಿಗಳ ಜ್ಞಾಪಕಾರ್ಥವಾಗಿ "ಮುದಿಯಪ್ಪ" ನಾಯಕನೆಂದು ಹೆಸರಿಟ್ಟನು. ಈ ಹೆಸರಾದರೂ ತನ್ನ ಇಷ್ಟ ದೈವನಾದ ಸಿದ್ಧರಾಮೇಶ್ವರ (ಸಿದ್ಧೇಶ್ವರ ರಾಮೇಶ್ವರ) ನ ಸಂಜ್ಞಾ ನಾಮವಿರುತ್ತದೆ. ಆದುದರಿಂದ ಈ ಎರಡೂ ಪರ್ಯಾಯ ನಾಮಗಳಾಗಿ ಉಪಯೋಗಿಸಲ್ಪಟ್ಟವೆಯೆಂದು ಗ್ರಹಿಸಬಹುದು.

ಆದರೆ ಹಾಗಲವಾಡಿ ಚರಿತ್ರೆಯಲ್ಲಿ ಮುದಿಯಪ್ಪ ನಾಯಕನೆಂಬ ಹೆಸರಿನಿಂದ ಇಬ್ಬರು ದೊರೆತನ ಮಾಡಿದ್ದಾರೆ. ಮೇಲೆ ಉದಾಹರಿಸಿದ ಮುದಿಯಪ್ಪನಾಯಕನೊಬ್ಬ; ಈ ಮುದಿಯಪ್ಪ ನಾಯಕನ ಮಗ ಇಮ್ಮಡಿ ಭೈರಪ್ಪ ನಾಯಕ ಅವನ ಮಗ ಚನ್ನಬಸಪ್ಪ, ಅವನ ಮಗ ರಾಮಪ್ಪ ನಾಯಕ, ಅವನ ಮಗ ಚನ್ನಬಸಪ್ಪನಾಯಕ; ಆತನ ಮಗ ಎರಡನೇ ಮುದಿಯಪ್ಪ ನಾಯಕ. ಈ ಎರಡನೇ ಮುದಿಯಪ್ಪ ನಾಯಕನೇ (ಮೊದಲನೆ ಮುದಿಯಪ್ಪ ನಾಯಕನಲ್ಲ) ನಮ್ಮ ಗ್ರಂಥ ಕರ್ತೃವೆಂದು ನಿರ್ಧರಿಸಲು ಆಧಾರವಿದೆ. ಮೊದಲನೇ ಮುದಿಯಪ್ಪ ನಾಯಕನು ಲಿಂಗ

ಧಾರಿಯಾಗಿದ್ದರೂ ಕೂಡ, ಗುರುಪುತ್ರನೂ ಶಿವಾನುಭವಿಯೂ ಆಗಿದ್ದಂತೆ ಕಂಡುಬರುವುದಿಲ್ಲ; ಲೌಕಿಕವಲ್ಲಿ ಜಾಣನಿದ್ದು ರಾಜ್ಯವನ್ನೇನೋ ವಿಸ್ತರಿಸಿದನು. ಎರಡನೇ ಮುದಿಯಪ್ಪ ನಾಯಕನೇ ಉಪದಿಷ್ಟನೂ ಶಿವಾನುಭವಿಯೂ ವಿದ್ವಾಂಸನೂ ಗ್ರಂಥಕಾರನೂ ಆಗಿದ್ದನು. ಆದುದರಿಂದ ೧೬೫೫ ರಿಂದ ೧೬೬೬ ರವರೆಗೆ ರಾಜ್ಯವಾಳಿದಂತೆ ವಂಶಾವಳಿಯಲ್ಲಿ ಕಂಡು ಬರುವ ಎರಡನೆಯ ಮುದಿಯಪ್ಪ ನಾಯಕನೇ ಗ್ರಂಥದಲ್ಲಿ ಕಂಡು ಬರುವ ಸಿದ್ಧರಾಮಪ್ಪ ನಾಯಕನೆಂದು ಸಿದ್ಧಾಂತ ಮಾಡಬಹುದಾಗಿದೆ.

ಈ ಪುಸ್ತಕವನ್ನು ನನ್ನ ತೀರ್ಥರೂಪರಲ್ಲಿದ್ದ ಸ್ಫುಟಾಕ್ಷರದ ಓಲೆಗರಿ ವಹಿಯೊಂದರಿಂದ ಪ್ರತಿ ಮಾಡಿ, ಹಸ್ತಸ್ಖಲಿತ್ಯಾದಿ ದೋಷಗಳನ್ನು ಯಥಾಮತಿ ತಿದ್ದಿದ್ದೇನೆ. ಈ ಗ್ರಂಥದಲ್ಲಿ ಕಂಡು ಬರುವ ವಿಷಯವೇನೂ ಅಪೂರ್ವವಲ್ಲದಿದ್ದರೂ, ವೀರಶೈವ ರಾಜಮನೆತನವೊಂದನ್ನಲಂಕರಿಸಿದ ಈ ಗ್ರಂಥಕರ್ತೃವು ತಿಳಿಗನ್ನಡದಲ್ಲಿ ವಚನ ರೂಪದಲ್ಲಿ ನಿರೂಪಿಸಿದ್ದಾನೆ. ಶಿವಾನುಭವಿಗಳಿಗೆ ಇದರಿಂದ ಲೇಶ ಮಾತ್ರವಾದರೂ ಪ್ರಯೋಜನವಾದರೆ ಪ್ರಕಾಶಕನು ಧನ್ಯನಾದನೆಂದು ತಿಳಿಯುತ್ತಾನೆ.

ಇದನ್ನು "ಶಿವಾನುಭವ" ದಲ್ಲಿ ಪ್ರಕಟಿಸಲು ಅವಕಾಶ ಕೊಟ್ಟದ್ದಕ್ಕಾಗಿ, ಸಂಪಾದಕರಾದ ರಾವಸಾಹೇಬ ಫ. ಗು. ಹಳಕಟ್ಟಿಯವರನ್ನು ವಂದಿಸುತ್ತೇನೆ.

ಭಾವ ಸಂ. ಜ್ಯೈತ್ರ ಶು. ೧. | ಇತಿ ಶಿವಾನುಭವಿಗಳ ಪಾದಸೇಕ,

ಹೊಸ್ಮಡಿಕೆ. | **ಎಚ್. ಆಂ. ಮಹಾಂತಯ್ಯ.**

ಮಹಾನುಭವ ಪ್ರಕಾಶಿಕೆ.

ಶ್ರೀಗುರುಬಸವಲಿಂಗಾಯನಮಃ

॥ ಓಂ॥

ಹಾಗಲವಾಡಿ ಸಿದ್ಧರಾಮಪ್ಪನಾಯಕರು ನಿರೂಪಿಸಿದ ಮಹಾನುಭವ ಪ್ರಕಾಶಿಕೆಗೆ ಶುಭಮಸ್ತು.

ವಚನಃ— ಶ್ರೀಮತ್ಸಚ್ಚಿದಾನಂದ ನಿತ್ಯಪರಿಪೂರ್ಣ ಲಕ್ಷಣಲಕ್ಷಿತ ಅವಿರಳಪರಂಜ್ಯೋತಿ ಸ್ವರೂಪನಾದ, ಶ್ರೀಗುರುದೇವನ ಕೃಪಾಪ್ರಸಾದಮಂ ಪಡೆದು, ದೀಕ್ಷಾತ್ರಯಯುಕ್ತನಾಗಿ, ಆಣವಾದಿ ಮಲತ್ರಯಂಗಳಂ ಕಳೆದು, ತ್ರಿವಿಧ ಲಿಂಗಂಗಳ ಅರ್ಚನೆ ಅನುಸಂಧಾನ ಅಖಂಡಿತದೈಕ್ಯತ್ವವನುಳ್ಳ ಅಷ್ಟಾವರಣವೇ ಅಂಗವಾಗಿ, ಪಂಚಾಚಾರವೇ ಪ್ರಾಣವಾಗಿ, ಷಟ್ಸ್ಥಲ ಜ್ಞಾನೈಶ್ವರ್ಯ ಸಂಪನ್ನರಾಗಿ ಲೋಕಪಾವನಾರ್ಥದಿಂ ಪರಶಿವ ಲೀಲಾ ವಿಗ್ರಹಗಳಾಗಿ ಸಂಚರಿಪ ಸದ್ಭಕ್ತ ಮಹೇಶ್ವರರ ಶ್ರೀಪಾದಪದ್ಮದ ರೇಣುವಂ ಶಿರದೋಳ್ ಪೊತ್ತು, ಪೂರ್ವ ಪುರಾತನರಿಂದುಕ್ತಮಾದ ನವಚಕ್ರ ವಚನಂಗಳ ಅಭಿಪ್ರಾಯಮಂ ತಾತ್ಪರ್ಯಮಾತ್ರದಿಂ ವಿಸ್ತರಿಸುತಿರ್ಪೆನದೆಂತೆಂದೊಡೆ?

ಮೊದಲು ತಮ್ಮ ತಮ್ಮ ತೊಂಭತ್ತಾರು ಅಂಗುಲದ ಪ್ರಮಾಣದ ದೇಹಕ್ಕೆ ಗುದದಿಂದೆರಡಂಗುಲದಮೇಲೆ, ಲಿಂಗಸ್ಥಾನದಿಂದ ಎರಡಂಗುಲದ ಕೆಳಗೆ ಒಂದು ಅಂಗುಲ ಪ್ರಮಾಣಕ್ಕೆ ತತ್ತಿಯೋಪಾದಿಯಲ್ಲಿ ಕರಗಿದ ಕುಂದಣದ ಕಾಂತಿಯನುಳ್ಳ ಸ್ಥಲವೇ ದೇಹಮಧ್ಯವೆನಿಸುವುದು. ಆ ದೇಹಮಧ್ಯವೇ ಆಧಾರಚಕ್ರವೆನಿಸುವುದು. ಆ ಚಕ್ರವ ಪೃಥ್ವಿಯೆಂಬ ಮಹಾಭೂತವಾಶ್ರಯಿಸಿರ್ಪುದು. ಆ ಚಕ್ರವು ಜೌಮೂಲೆಯಾಗಿ ನಾಲ್ಕು ದಳವನುಳ್ಳದು. ಆ ನಾಲ್ಕು ದಳಗಳಲ್ಲಿ ವ, ಶ, ಷ, ಸ, ಎಂಬ ನಾಲ್ಕು ಅಕ್ಷರವಿರ್ಪುವು. ಆ ಚಕ್ರದ ಕರ್ಣಿಕಾಮಧ್ಯದಲ್ಲಿರ್ಪ ನ ಕಾರವೆಂಬ ಬೀಜಾಕ್ಷರವೇ ಸದ್ಯೋಜಾತ ಸಂಜ್ಞಿತಮಾದ ಆಚಾರಲಿಂಗವೆನಿಸುವುದು. ಆ ಲಿಂಗದ ನಿಜಾಂಗರೂಪಾದಾತನೇ ಭಕ್ತನು. ಆ ಭಕ್ತನು ಸುಚಿತ್ತ

ವೆಂಬ ಹಸ್ತದಿಂದ, ಘ್ರಾಣಮುಖದಿಂದೊದಗಿದ ಗಂಧವೆಂಬ ಪದಾರ್ಥವನ್ನು ಶ್ರದ್ಧಾ ಭಕ್ತಿಯಿಂದ ಸಮರ್ಪಿಸಿ ಆ ಲಿಂಗದಿಂದ ಸದ್ಭಾಸನ ಪ್ರಸಾದವನ್ನು ಪಡೆದು ಆ ಲಿಂಗಸಹವಾಗಿ ಭೋಗಿಸಿ ಮಹಾಲಿಂಗಸ್ವರೂಪವಾದ ಪ್ರಣವದ ತಾರಕಾಕೃತಿಯೆಂಬ ಆಚಾರಲಿಂಗದಲ್ಲಿ ಕ್ರಿಯಾಶಕ್ತಿ ಸಹವಾಗಿ ತಾನಡಗಿರ್ಪನೆಂಬುದೇ ಆಧಾರಚಕ್ರ ತಾತ್ಪರ್ಯಮಕ್ಕುಂ.

ಮತ್ತಮಾ ಆಧಾರಚಕ್ರದಮೇಲೆ ನಾಲ್ಕಂಗುಲದ ಪ್ರಮಾಣದ ಸ್ಥಳವೇ ಲಿಂಗಸ್ಥಲವೆಂದೂ, ಗುಹ್ಯಸ್ಥಲವೆಂದೂ ಪರ್ಯಾಯನಾಮುಂಗಳುಳ್ಳದು. ಈ ಸ್ಥಲವು ಕಾರ್ಮುಕಾಕಾರವಾಗಿರ್ಪುದು. ಅದೇ ಸ್ವಾಧಿಷ್ಠಾನಚಕ್ರವೆನಿಸುವುದು. ಅದನ್ನು ಅಪ್ಪು ಎಂಬ ಮಹಾಭೂತವಾಶ್ರಯಿಸಿರ್ಪುದು. ಆ ಚಕ್ರವು ಶುಭ್ರವರ್ಣವನುಳ್ಳದು; ಆರುದಳಂಗಳನುಳ್ಳದು; ಆ ದಳಂಗಳಲ್ಲಿ ಬ, ಭ, ಮ, ಯ, ರ, ಲ, ಎಂಬಾರು ಪ್ರಣಮುಂಗಳಿರ್ಪುವು. ಆ ಚಕ್ರದ ಕರ್ಣಿಕಾಮಧ್ಯದಲ್ಲಿರ್ಪ ವಾಮದೇವ ಸಂಜ್ಞಿತವಾದ ಮ ಕಾರವೆಂಬ ಬೀಜಾಕ್ಷರವೇ ಗುರುಲಿಂಗವೆನಿಸುವುದು. ಆ ಲಿಂಗದ ನಿಜಾಂಗ ರೂಪವಾದವನೆ ಮಹೇಶ್ವರನು. ಆತನು ನಿಷ್ಠೆಯೆಂಬ ಭಕ್ತಿವಿಡಿದು, ಸುಬುದ್ಧಿಯೆಂಬ ಹಸ್ತದಿಂದ, ಜಿಹ್ವೆಯೆಂಬ ಮುಖದಿಂದುದಿಸಿದ ರಸವೆಂಬ ಪದಾರ್ಥವನ್ನು ಆ ಲಿಂಗಕ್ಕೆ ಸಮರ್ಪಿಸಿ ಚಿದಮೃತವೆಂಬ ಪ್ರಸಾದಮುಂ ಪಡೆದು ಆ ಲಿಂಗ ಸಹವಾಗಿ ಭೋಗಿಸಿ, ಆ ಮಹಾಲಿಂಗ ಸ್ವರೂಪವಾದ ಪ್ರಣವದ ದಂಡಕಾಕೃತಿ ಎಂಬ ಗುರುಲಿಂಗದಲ್ಲಿ ಜ್ಞಾನ ಶಕ್ತಿ ಸಹಿತವಾಗಿ ತಾನಡಗಿರ್ಪನೆಂಬುದೇ ಸ್ವಾಧಿಷ್ಠಾನ ಚಕ್ರ ತಾತ್ಪರ್ಯಮಕ್ಕುಂ ॥೨॥

ಮೊದಲು ಹೇಳಿದ ಆಧಾರ ಚಕ್ರದಿಂ ಮೇಲೆ ಒಂಭತ್ತು ಅಂಗುಲದಲ್ಲಿ ನಾಲ್ಕು ಅಂಗುಲದ ವಿಶಾಲವಾಗಿ ನಾಡಿಕಂದವಿಹುದು. ಆ ನಾಡಿಕಂದದ ಎರಡಂಗುಲದ ಕೆಳಗೆ ಕುಂಡಲಿಸ್ಥಾನವಿಹುದು. ಅಲ್ಲಿಹ ಜೀವನೆಂಬ ಕುಂಡಲಿ ಸರ್ಪನು ಅಷ್ಟಪ್ರಕೃತಿರೂಪದಿಂ ಸಪ್ತಕುಟಿಲಾಕೃತಿಯಾಗಿ, ಆ ನಾಡಿಕಂದದ ಸುಷುಮ್ನೆಯೆಂಬ ನಾಡಿದ್ವಾರಮುಂ ಮುಚ್ಚಿ ಮರಸಿ ಅಜ್ಞಾನ ವಾರ್ಜಿತ (?) ವಾಗಿರ್ಪುದು. ಅದು ಅಧೋಕುಂಡಲಿಯೆನಿಸುವುದು. ಮತ್ತಮಾ ನಾಡಿಕಂದದಿಂ ಎಪ್ಪತ್ತೆರಡು ಸಾವಿರ ನಾಡಿಗಳು ಪಾದಪಾಣಿ ಬಲೆಯ ನೇಣಿನಂತೆ, ಮೇಲು, ಕೆಳಗು, ಎಡ, ಬಲ, ಮುಂತಾದ ಸಮಸ್ತ ದಿಕ್ಕುಗಳಿಗೂ ಐದಿ ಮನಃ ಪ್ರಾಣಾದಿ ದಶ

ಕನ್ನಡ ಪದ್ಯರೂಪ.

ಶ್ರೀ ಶಿವ ಮಹಿಮ್ನ ಸ್ತೋತ್ರಂ.

(ಬ. ಚ. ಪಟ್ಟೇದ.)

ಕನ್ನಡ ಷಟ್ಪದಿ ಶ್ರೇಣಿ.

ಕ್ರಮಾಂಕ.	ಷಟ್ಪದಿಗಳ ಹೆಸರುಗಳು.	ಮಾತ್ರೆಗಳು.		ಗಣಗಳು.		ವಿಶೇಷ.
		ಕಿರಿಯಡಿಗೆ.	ಪಿರಿಯಡಿಗೆ.	ಕಿರಿಯಡಿಗೆ.	ಪಿರಿಯಡಿಗೆ.	
೧	ಶರ.	೯	೧೪	೪।೪	ಕಿರಿಯಡಿಯ ಒಂದುನಪಿಯುಷ್ಟು ಗಣಗಳೂ ಮೇಲೊಂದು ಗುರುವೂ ಇರಬೇಕು.	ಮಾತ್ರಾಶ್ರುತಿಯನ್ನವಲಂಬಿಸಿ, ಪದ್ಯದ ಗತಿಯನ್ನು ಸಡಿಲಿಸಬಹುದು, ಒಂದು ಷಟ್ಪದಿಯ ಬೇಕಾದಷ್ಟು ಪದ್ಯಗಳನ್ನು ಬರೆಯಬಹುದು.
೨	ಕುಸುಮ.	೧೦	೧೬	೫।೫		
೩	ಭೋಗ.	೧೨	೨೦	೫।೫।೫।೫		
೪	ಭಾಮಿನಿ.	೧೪	೨೩	೫।೪।೫।೪		
೫	ಪರಿವರ್ಧಿನಿ.	೧೬	೨೬	೪।೪।೪।೪		
೬	ಪ್ರೌಢ.	೧೮	೨೯	೪।೫।೪।೫		
೭	ವಾರ್ಧಿಕ.	೨೦	೩೨	೫।೫।೫।೫		

೨೧೮.

(ಪ್ರ. ಸಂ.)

ಶ್ರೀ ವಿಜಯವಿಠ್ಠಲ ಪಾದಪದ್ಮ ಭೃಂಗನವಯಂ ಪೊಗಳಲು ।
ಶಾರದ್ಯಂ ಪ್ರಸಿದ್ಧಂ ಗಂಧರ್ವ ।
ಶ್ರೀವಾಸುಗ್ರಹಾಧಿಪ ಸದ್ಗಿರಾಧಾಸಪೀಠಿಕಾಸನಪಟು ॥
ಪೃಥ್ವೀಶ್ವಾ ಪಾಂಡವಾಧಿಪ ವಿಜಯೊಡ್ಡಿ ।
ಧರಾಕಾಯವಾಂತು ಪೋಣ್ ಕವರ್ಪಿಕಮಂಧ್ರು ।
ರಾತಿಯ ಶಿತಶೈಸಾಗಂ ಪೈಧಿಮೋಧದಿ ಪುಡಿದಂ ಪಸವಾಪ್ಯರು ॥೧॥
ಪಂಬರ್ಧಿಕ್ಕೆ ವಾರ್ಧಿಕಂಗಳ್ ।
ಪುಂಗವಂ ಪೊಸ ÷ ಪೈಧಿಪಟ್ಟಿದ ಪಾಲಿಪಯೊ- ।
ಕ್ಕೊಂದಿದ ಕ್ರಮಂ ಪಿಡಿದು ಪೇಳ್ದ ಪೊಡಿಪಿಂ ಪಾಪ್ಯರ್ಕ್ಕಳು ಕಂಡಿಯು ಗಣಗಳಂ ॥
ಲಂಸಲ್ ಪ್ರಿಗಣದ ಪ್ರಥಮ ಪೊಡಿಪಿಂ ಪೋಲ್ವ ಪೊಡಿಪಿಂ ಪೋಲ್ವ ।
ಧರಾದ ತಿರದೊಳ್ ಪೆಱ್ಪು ಪದ್ಯಪಪಾದಂಗ ।
ಪರಪ್ರೌಂದುಗಾದೀಪದೆಂದಿಯ ತಾಪಪೇಳ್ದ ಪೊಡಿಪ್ಪಿಗುರುವಂ ॥೨॥
ನಾಳೆಯ ದಾಗದೊಳ್ ಪಾಡಪಪಡಿದು ಪಿತ್ತೆ ।
ಪೀಠಾಧಪಠದಂ ತಪ್ಪೊಲ್ಲಿಪಪಸಂ ।
ಪೊಗಳ್ಕಾಧಪಠಪಡೆಯುಂ ಪೆನ್ನಗಿರುತಿಪಡು ಕಪ್ಪಡ ಪಾಡೊಳಪಡೆ ॥
ನಾಳೆಯ ಪಾಗದೊಳ್ ಪಾಡಪಪಡಿದು ಪಿತ್ತೆ ।
ಪೀಠಾಧಪಠದಂ ತಪ್ಪೊಲ್ಲಿಪಪಸಂ ।
ಪೊಗಳ್ಕಾಧಪಠಪಡೆಯುಂ ಪೆನ್ನಗಿರುತಿಪಡು ಕಪ್ಪಡ ಪಾಡೊಳಪಡೆ ॥
ನಾಳೆಯ ದಾಗದೊಳ್ ಪಾಡಪಪಡಿದು ಪಿತ್ತೆ ।
ಪೀಠಾಧಪಠದಂ ತಪ್ಪೊಲ್ಲಿಪಪಸಂ ।
ಪೊಗಳ್ಕಾಧಪಠಪಡೆಯುಂ ಪೆನ್ನಗಿರುತಿಪಡು ಕಪ್ಪಡ ಪಾಡೊಳಪಡೆ ॥

---

† ಸಂಸ್ಕೃತ ಸಂಯುಕ್ತಾಕ್ಷರದ ಬಂದಾಗ ಕನ್ನಡ ಲಿಪ್ಯಂತರ ಎಲ್ಲೆಡೆಗೂ ಸರಿ.

ಪ್ರ ಪ್ರ. ಸಂಖ್ಯೆ ಸಹಿತ ಸಂಯುಕ್ತಾಕ್ಷರದ ಸಂಖ್ಯೆಯನ್ನು ಸೂಚಿಸುತ್ತದೆ.

ಶ್ರೀ ಶಿವ ಮಹಿಮ್ನದ ಮೇಲ್ಮೆ.

(ಪ್ರೌಢಷಟ್ಪದಿ.)

ಪರದೈವತವಿಲ್ಲ ಪರಶಿವಗಿಂತಲುಂ ।
ಪರಮ ಸ್ತೋತ್ರವಿಲ್ಲ ಮಹಿಮ್ನಕ್ಕಿಂತ ।
ಪರ ಮಂತ್ರಮಘೋರಕಿಂತಂ ಪರತತ್ವವಿಲ್ಲಂ ಗುರುವಿಗಿಂತಂ ॥

ವರದೀಕ್ಷಾ ದಾನ-ತೀರ್ಥ-ತಪಂಗಳುಂ ।
ಪೆರೆಯುವ ಜ್ಞಾನಯೋಗಾದಿ ಕ್ರಿಯೆಗಳುಂ ।
ಸರಿಬಾರವು ಮಹಿಮ್ನ ಸ್ತವ ಪಾಠ ಷೋಡಶ ಭಾಗಕ್ಕೆಂದಿಗಂ ॥೧॥

ಕುಸುಮ ದಶನನೆಂಬ ಗಂಧರ್ವರ ರಾಜ ।
ನೆಸೆದಿರ್ದಂ ದೇವ ದೇವನ ಸೇವಕಂ ।
ಶಶಿಧರ ನೈರ್ಮಾಲ್ಯದುಳಿಯಲದೃಶ್ಯತ್ವಗೆಟ್ಟಂ ಶಿವರೋಷವಿಂ ॥

ತುಸು ಯೋಚಿಸಿ ತಳೆದು ಪಶ್ಚಾತ್ತಾಪಮಂ ।
ವಿಷಕಂಠಂಗಿಟ್ಟು ಪೊರೆಯಂ ವಿರಚಿಸಲ್ ।
ಪೊಸತಾದೀ ಸ್ತೋತ್ರಮಂ ಪೋದುದು ದೋಷಮೇಂ ದಿವ್ಯಮೊಮ
ಹಿಮ್ನಂ ॥೨॥

ವರಮೋಕ್ಷಕೆ ಸ್ವರ್ಗ ಲಾಭಕೆ ಸಾಧನಂ ।
ಸುರರಿಂ ಮುನಿವರ್ಗದಿಂ ಸಂಪೂಜಿತಂ ।
ಪರತರಮೀ ಸ್ತುತಿಯು ದುರಿತ ನಿವಾರಗಂ ಶಿವಗತ್ಯಂತ ಪ್ರಿಯಂ

ಬೆರೆದು ಸುಭಕ್ತಿಯೊಳ್ ನಿತ್ಯದೆ ಪಠಿಪರ್ಗೆ ।
ನೆರೆ ಗೃಹದೊಳು ಪೂಜೆ ಮಾಳ್ಪರ್ಗೆ ಮುಖಪಾಠಿ ।
ನರರ್ಗೀವುದು ಪ್ರಪಂಚದೊಳುರೆ ಧನಧಾನ್ಯ ಸತಿ ಪುತ್ರಾಯುಷಗಳಂ ॥೩॥

ಶ್ರೀ ಶಿವಮಹಿಮ್ನ ಸ್ತೋತ್ರಂ.

(ಪ್ರೌಢ ಷಟ್ಪದಿ)

ಹರ! ನಿನ್ನುರು ಮಹಿಮೆಯುಂತವನರಿಯದಂ ।
ಸರಿಯಲ್ಲಂ ಸೊಗಳ್ವದದನೆಂದುಂ ಬ್ರಹ್ಮ ।
ಹರಿಯಂತ ಹರವಾಣಿಗಳಾರವು ನಿನ್ನನುರೆ ನುತಿಸಲ್ಪಾದೊಡಂ ॥

ನರರೆಲ್ಲರ್ ತಮ್ಮೊಳಿಹ ಬುದ್ಧಿಯ ತೆರದಿ ।
ನಿರದೆ ಸ್ತವಿಸಿದುದೇಂ ದೋಷಾಸ್ಪದಮಾಗ ।
ದಿರಲಾನುಂ ವಾಳ್ವ ಸ್ತೋತ್ರಂ ಭುವನದೊಳ್ ಕೊರತೆಯ ನಾನದಲ್ತೆ ॥೧॥

ಪರತರ! ತವ ಮಹಿಮೆಯಂ ಬಣ್ಣಿಪ ಮಾರ್ಗ ।
ವಿರೆತಿಹುದಕಟ ವಾಙ್ಮನಗಳ್ಗೆ ವೀರಿದುದು! ।
ವರ ವೇದಂಗಳುಂ ಸುಚಕಿತವಾದುವಿನ್ನೊಂದಂ ಕಾಣದೆತ್ತಂ ॥

ಪೆರರೊರೆವುದದೆಂತೆನಿತೊ ಗುಣ ವಿವಿಧಗಳು ।
ದೊರೆವ ವಿಷಯ ಮಲ್ಲವಾರ್ಗಮದಾದೊಡಂ ।
ಸುರವಿಪುದಚ್ಚರಿಯೆ ನಿನ್ನ ಸಗುಣ ಮೂರ್ತಿಯೊಳ್ ಮನನಾಲಿಗೆಗಳು ॥೨॥

ಪರಶಿವ! ವೇದಶಾಸ್ತ್ರಂಗಳನುರೆ ಪೇಳ್ದ ।
ಪರಮಾಮೃತ ನುಡಿಯಂ ಖನಿ ನೀಂ! ತ್ರಿದಿವೇಶ ।
ಗುರುವಿನ ವಿಸ್ಮಯಂಬಡಿಪುರು ಭಾಷೆಯುಂ ನಿನಗಿನಿತಂ ಸೇರದು ॥

ಕರಮಾಂ ಪಾಮರಂ ನಿನ್ನ ಸುಗುಣಗಳಂ ।
ನೆರೆ ಕೊಂಡಾಡೆನ್ನ ನುಡಿಯೊಳ್ ಪಾವಿತ್ರ್ಯ ।
ಮುರೆ ತಲೆದೋರಲೆಂಬಾ ಕಾಂಕ್ಷೆಯಿನೆಸಗುವೆಂ ಗಡ! ನಿನ್ನ ಸ್ತುತಿಯಂ ॥೩॥

ವರದಾಯಕ ಶಂಭು! ನೀನೆ ತ್ರಿಗುಣಗಳಿಂ ।
ಮೆರೆವ ತ್ರಿಮೂರ್ತಿ ರೂಪದಿ ನೆಗಳ್ವಯ್ ಜಗದ ।
ಬರವಿರವುಂವೆಂದು ಸಾರ್ವುವು ವೇದಂಗಳಿದೆ ನಿನ್ನೀಶ್ವರತ್ವಂ ॥

ಅರಿಯದರೆನಿಬರೀ ಮರ್ಮವ ಜಡಬುದ್ಧಿ ।
ನರರಂ ಸಪ್ಪೋಹಿಪರು ನಿಮ್ಮಾಧಿಕ್ಯ ।
ದಿರವವರಂಗೆ ಸಹನವಿಲ್ಲಂ ವ್ಯರ್ಥಮಾದಾಕ್ಷೇಪಣ ಜಾಲದಿಂ ॥೪॥

ಪರಮೇಶ್ವರನಾವ ಕಾಂಕ್ಷೆಯಿನಾವ ವಪು ।
ಧರಿಸಿಯದಾವ ಕ್ರಿಯೆವಿಡಿದಾವಲ್ಲಿರ್ಮ ।
ನೆರೆ ಮೂಲೋಕವೆಸಗಿದನಾವುಪಕರಣದಿಂ ತಾರ್ಕಿಕರೆನ್ಪರು ॥
ಉರು ಸಂಕಲ್ಪ ಮಾತ್ರದಿ ನೀನಿಷ್ಟಮಂ ।
ನೆರೆವೇರ್ಪಿಪನೆಂಬುದರಿಯರ್ ಹತಮತಿಗ- ।
ಳುರೆ ಕೆಡುವರ್ ತಾವುಮಿದರಿಂ ನಿರ್ಬುದ್ಧ ಜನಮುಮನಿರದಳಿಪರು ॥೫॥

ಕಣ್ಣಿಗೆ ಕಾಂಬೊಡವೆ ಜನ್ಮಂದೊಟ್ಟುದುದು ।
ನುಣ್ಣವಯವಮಿರ್ಪ ಭುವನಗಳುದಿಸಿಹವು ।
ಬಣ್ಣದ ಧಾಷೆಯಿಂ ಪುಟ್ಟಿಸಿಹನ ನಿರಾಕರಿಸಲಿವೆಂತಾದುವು ॥
ಸಣ್ಣಿಸಿ ನೋಡಲೀಶನೆ ನಿಜ ಕರ್ತೃವೈ ।
ಕುಸ್ಸಿಗಳುಪಕರಣ ವಿಜ್ಞಾನಾಭಾವ- ।
ದಿಂ ನೆರವೇರ್ಚರೆಂದುಂ ಶಿವ ಮಂದರೀ ಸಂಶಯಿತರೆ ನಿನ್ನೊಳು ॥೬॥

ವರ ವೇದತ್ರಯಿಯು ಪಾತಂಜಲ ಸಾಂಖ್ಯ ।
ಪರತರ ಪಾಶುಪತ ವೈಷ್ಣವವೆಂಬ ತರ ।
ತರದ ಮತಂಗಳೊಳ್ ಪಿರಿದು ಕಿರಿದು ಹಿತಪ್ರದವೆನುತೆ ತವ್ಮೊಳು ॥
ಇರುತಿಹ ರುಚಿಯಂತೆ ಸರಳ ಕುಟಿಲ ವಿವಿಧ- ।
ತರದಧ್ವದೆ ನಡೆದು ಪೊಳೆಗಳ್ ಶರಧಿಯೊಳ್ ।
ಬೆರೆವಂದದಿ ಮನುಜರೆಲ್ಲರ್ ಶರ್ವ! ನಿನ್ನಡಿಯನೆ ಸೇರುತಿಹರು ॥೭॥

ವರದೆ ಮಹಾದೇವ! ನಿನ್ನೊಳ್ ದೊಡ್ಡೆತ್ತು ।
ಪರಶು ತೊವಲ್ ಭಸ್ಮ ಖಟ್ವಾಂಗ ವ್ಯಾಲ ।
ಪರಮೇಷ್ಠಿಕಪಾಲಗಳೆ ಸಾಮಗ್ರಿಗಳ್ ತೋರ್ಪುವು ನೋಡುವವರ್ಗೆ ॥
ಪೆರತಾವುದುಮಿಲ್ಲದಿರಲುಂ ತ್ರಿದಶರ್ಗೆ ।
ನೆರೆಯಿತ್ತಪೆ ಬೇಡಿದುದಭೂಸಂಜ್ಞೆಯೊಳೆ
ವಿರಮಿಪಗಾತ್ಮ ಸುಖದೊಳ್ ವಿಷಯಾಶಾವೃಗಜಲಂ ಭ್ರಮಿಸದಲ್ತೆ !॥೮॥

ಪುರಹರ! ಸುವ್ಯವಸ್ಥಿತ ಜಗಮಿದನನೇ ।
ಕರು ನಿತ್ಯಂ ಕೆಲರನಿತ್ಯಂ ಬೇರೆ ಕೆಲ ।
ಒರು ನಿತ್ಯಾನಿತ್ಯ ಮೆಂಬರು ತಂತಮ್ಮೊಳಿಹ ಬುದ್ಧಿಯ ತೆರದೊಲು ॥

ಕರವಿಹೆನಿನೆಸೆವುವನಂಗಳ ನಿಜ ಕರ್ತೃ ।
ನೆರೆಯುತ್ಪತ್ತಿರಕ್ಷಣಲಯ ಮಾಳ್ಪನೆಂ ।
ದಿರದೆಸ್ತುತಿಪೆನವರ್ ಹಾಸ್ಯಂಗೆಯ್ದೊಡಂ ನಾಚ್ಪೆನದಕ್ಕೆಂದಿಗಂ ॥೯॥

ಗಿರಿಶ! ಜ್ಯೋತಿರ್ಮಯಂ ಲಿಂಗಾಕಾರ ।
ವಿರುತಿಹ ನಿನ್ನ ದೇಹದ ಕೊನೆಗಾಣ್ವುದಕೆ ।
ಸರಸಿಜಜಂ ನಭಕೆ ಹರಿ ಪಾತಾಳಕ್ಕೆ ಸಾರ್ದೊಡಮುರೆ ಯತ್ನದಿಂ ॥
ಪರಿಣಾಮಂಗಾಣದೀರ್ವರು ವ್ಯೆತಂದು ।
ನೆರೆ ಭಕ್ತಿಯನಾಳ್ದು ಪೊಗಳಲ್ ನೀನವರ್ಗೆ ।
ಕರುಣದಿ ತೋರ್ದೆ ನಿಜರೂಪವ ನಂಬಿದರ್ ನಿಷ್ಫಲರಹರೆ! ನಿನ್ನಂ ॥೧೦॥

ಪುರಹರ! ದಶಮುಖಂ ತನ್ನಗು ಶಿರಗಳಂ ।
ಪರಿದುರೆ ನಿನ್ನಂಘ್ರಿಗರ್ಪಿಸಿ ಪೂಜಿಸಲ್ ।
ದೊರೆಯಾದಂ ತ್ರಿಲೋಕಕೆ ಸಹಜಂ ಶತ್ರುವಿರಹದಿ ತೋಳ್ದೀಂಟೆಯಂ ॥
ತರಹಡಿಸದೆ ಚಿಂತಿಸಿದನಿದು ರಾವಣಾ ।
ಸುರನತ್ಯಂತ ಭಕ್ತಿಯ ಫಲಮಹುದಲ್ತೆ ।
ಸ್ಥಿರ ನಿಷ್ಠೆಯ ನಿನ್ನೊಳುರೆ ತಾಳ್ವರ್ಗೆ ಮೂಲೋಕಂ ಸಾಧಾರಣಂ ॥೧೧॥

ಈ ರಾವಣನೆ ನಿನ್ನುರು ಸೇವಾಬಲದಿ ।
ನಾರೊಳ್ ಕಾಣದಿಹ ಘನಬಲಮಂ ಪಡೆದು ।
ವೀರಾವೇಶದಿಂ ಕೈಗಳನೊಡ್ಡಿ ಕೈಲಾಸವ ಕೀಳ್ತೊಡಗಲು ॥
ಮಾರಾರಿಯೆ! ಪಾದದಂಗುಷ್ಠವನಾಗ ।
ಳೂರಲ್ತಿನಿತು ನೀಂ ಪಾತಾಳವ ಸೇರ್ದ ।
ನೋರಂತುನ್ನತಿವಡೆಯೆ ನೀಡರ್ ನೋಡರಾವುದನಿದು ನಿಶ್ಚಯಂ ॥೧೨॥

ವರದ ಮಹೇಶ್ವರನೆ! ನಿನ್ನ ಸುಸೇವೆಯಿಂ ।
ಕರಮುನ್ನತಿ ಮೊಂದಿದಂ ಬಾಣಾಸುರಂ ।
ಮೆರೆವೀ ಮೂಲೋಕಮಂ ಗೆಲ್ದದರಿಂದ ಮುರೆಯೋಲೈಸಿಕೊಂಡಂ ॥
ಸುರಪತಿಯೈಶ್ವರ್ಯಮಂ ಮಿಗೆ ನಾಚ್ಚಿಸಿದ ।
ನಿರದೆ ತವಾಂಘ್ರಿಸೇವಕರ್ಗೀನಿದು ಪಿರಿದೆ ! ।
ನೆರೆ ಸದ್ಭಕ್ತಿಯಿಂ ನಿನ್ನಂ ಸುತಿಪರ್ಗೆ ಸಕಲೈಶ್ವರ್ಯಮಕ್ಕುಂ ॥೧೩॥

ಮುಕ್ಕಣ್ಣನೆ! ಅಕಾಲದೆ ಬ್ರಹ್ಮಾಂಡಗಳ ।
ನೊಕ್ಕಿರ್ದೀ ಘೋರ ವಿಷಮುರಿಪುದೆನುತಂ ।
ರಕ್ಕಸರಮರರೆಲ್ಲರ್ ಕಡು ಭೀತಿಯಿಂ ನಿನ್ನಂ ಮೊರೆಯಿಡಲೊಡಂ॥
ಕಕ್ಕುಲತೆಯ ಪಿಡಿದು ನೀಂ ತತ್ಕ್ಷಣಮೀಂಟಿ ।
ಸಿಕ್ಕಿಸೆ ಕಂಠದೊಳ್ ಭೂಷಣಮಾಯ್ತು ನಿನ-।
ಗಕ್ಕಟ! ಸೋಜಿಗಮೆ! ಭುವನ ಭಯಂಗಳವರಿಗೆ ಶೋಭಿಪುದು
ವಿಕೃತಿ !! ॥೧೪॥

ಈಕನೆ! ಜಯಶಾಲಿ ಮನ್ಮಥನೀ ಜಗದೊ ।
ಳಾಕೆಯಿನುರೆ ತೊಟ್ಟ ಶರಗಳ್ ಗುರಿಯುಂ ವಿ ।
ನಾಶಿಸದೇಂದುಂ ತಿರುಗವೆಂದರಿತಿರ್ದನಮರಾಸುರ ನರರ್ಗಳಿಂ ॥
ಆ ಸೆಡಪಿಂ ನಿನ್ನನುಂ ಸಾಮಾನ್ಯರೊಲ್ ।
ಗಾಸಿಪೆನೆಂದೆಸೆದುರಿದು ಪೋದಂ ನಿಮಿಷ ।
ಲೇಶದೊಳವಮಾನಿಸಲ್ ವಿಜಿತೇಂದ್ರಿಯರನೆಂತವರ್ಗಹುದುಲೇಸಂ ॥೧೫॥

ತಾಂಡವಮಂ ಭರ್ಗ! ಲೋಕಹಿತಕ್ಕೆ ನೀಂ ।
ಕೊಂಡಿರ್ಪಾಗ ನಿನ್ನಡಿ ಬಡಿತದಿ ಪೃಥ್ವಿ ।
ತುಂಡರಿಪುದೆಸೆ ಸಂದೆಗಮುಕ್ಕುಂ ತೋಳ್ದೆರುವ ಪೊಡೆತದಿ ಗಗನದ ॥
ಮಂಡಲಮೇನಹುದೊ ಪಾರ್ವ ಜಡೆಯ ಜಡಿತ ।
ದಂಡಲೆ ಗುರು ಸಗ್ಗ ಮಾವಗತಿಯನಣಂ ।
ಕಂಡಪುದೋ ತಿಳಿಯದಕಟ! ಪ್ರಭುತ್ವಮೆಂದಿಗವಿರುತಿಹುದು ವಕ್ರಂ ॥೧೬॥

ಒಡೆಯನೆ! ಅಗಸವ ತುಂಬಿಹ ಚಿಕ್ಕೆಗಳ ।
ಕಡು ಬಳಗದಿ ನಳಂಬಡೆದೊಳ್ಪರುಗಿನಿಂ ;
ಸಡಗರವಾಂತ ಗಂಗಾಘಂ ನಿನ್ನ ಶಿರದೊಳ್ ಬಿಂದುವೆನಲಿಹುದು ॥
ಪಡೆದಾ ಪೋಘವನೆ ತುಂಬಿ ಸಮುದ್ರತಾಂ ।
ಪೊಡವಿಯನುರೆ ಸುತ್ತಿ ದ್ವೀಪವನೆಸಗಿಹುದು ।
ಗಡ! ನಿನ್ನಪಿಲ ದಿವ್ಯ ಶರೀರಮದೆನಿತೊ! ತಿಳಿವೊಡೆಗವ್ಯಮಲ್ತು! ॥೧೭॥

ಪಣೆಗಣ್ಣನೆ! ರಥಂಧರೆ ಸಾರಥಿ ವಿಧಿಯು ।
ಧನುಕನಕಾಚಲಂ ರಥದುರು ಚಕ್ರಗಳ್ ।
ಬಿನದಿಸ ಸೂರ್ಯಚಂದ್ರರ್ ಬಾಣಂ ವಿಷ್ಣುವಿಂತುರು ಸನ್ನಾಹದ ॥

The Vijay College
LIBRARY,
VIJAY COLLEGE,
BIJAPUR.